ಮಾನವಿಕ ಕರ್ಣಾಟಕ

ವಸಂತ ಕುಮಾರ್

ಸಂಪುಟ ೧ ಸಂಚಿಕೆ ೧

೧

ನವೆಂಬರ್ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೦

ಲೇಖಕರಿಗೆ ಸೂಚನೆಗಳು

೧. ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨. ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩. ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪. ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫. ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭. ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸ ಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮. ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧ ಸಂಚಿಕೆ ೧

೧

ನವೆಂಬರ್ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೦

MANAVIKA KARNATAKA Kannada quarterly of the University of Mysore. Volume 1, Number 1, November 1970. Edited by H. S. Krishnaswamy Iyengar and Dr. A. V. Narasimha Murthy.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೆಪ್ಯೂಟಿ ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ಆಮುಖ

ಸುಮಾರು ಮೂರೂವರೆ ವರ್ಷಗಳ ಕೆಳಗೆ, 'ಪ್ರಬುದ್ಧ ಕರ್ಣಾಟಕ'ದ ಚಿನ್ನದ ಹಬ್ಬದ ಕಾರ್ಯಕ್ರಮಗಳನ್ನು ಸಂಪಾದಕಮಂಡಲಿ ಚರ್ಚಿಸುತ್ತಿದ್ದಾಗ, ಸಮಾರಂಭದ ನೆನಪಿಗಾಗಿ ವಿಜ್ಞಾನ ಬರವಣಿಗೆಗಾಗಿಯೆ ಮೀಸಲಾದ 'ವಿಜ್ಞಾನ ಕರ್ಣಾಟಕ'ವೆಂಬ ನಿಯತಕಾಲಿಕವೊಂದನ್ನು ಆರಂಭಿಸಿ ಬಹುಕಾಲದ ಅಗತ್ಯ ವನ್ನು ಪೂರೈಸಬೇಕೆಂದು ತೀರ್ಮಾನಿಸಲಾಯಿತು. ಆ ಚರ್ಚೆಗಳ ಸಂದರ್ಭದಲ್ಲಿ ಸಮಾಜ ವಿಜ್ಞಾನಗಳಿಗಾಗಿಯೆ ಪ್ರತ್ಯೇಕ ನಿಯತಕಾಲಿಕವೊಂದಿರಬೇಕೆಂಬ ಸೂಚನೆಯೂ ಬಂತು. 'ಪ್ರಬುದ್ಧ ಕರ್ಣಾಟಕ'ದ ಚಿನ್ನದ ಹಬ್ಬದ ಹೊತ್ತಿಗೆ 'ವಿಜ್ಞಾನ ಕರ್ಣಾಟಕ'ದ ಮೊದಲ ಸಂಚಿಕೆ ಪ್ರಕಟವಾಯಿತು. ಅದರಲ್ಲಿ ಬರೆಯುತ್ತಾ, ಅಂದು ಪ್ರಧಾನ ಸಂಪಾದಕರಾಗಿದ್ದ ಪ್ರೊಫೆಸರ್ ಜವರೇಗೌಡರು "ಇದರಂತೆಯೇ ಸಮಾಜಶಾಸ್ತ್ರಗಳಿಗೆ ಮುಡಿಪಾದ ಮತ್ತೊಂದು ತ್ರೈಮಾಸಿಕೆ 'ಮಾನವಿಕ ಕರ್ಣಾಟಕ'ವೆಂಬ ಹೆಸರಿನಲ್ಲಿ ಬೇಗನೆ ರೂಹುಗೊಳ್ಳಲೆಂದು" ಕನ್ನಡ ಕುಲದೈವಕ್ಕೆ ವಿಶ್ವವಿದ್ಯಾನಿಲಯದ ಭಗವತಿಗೆ ಪ್ರಾರ್ಥನೆ ಸಲ್ಲಿಸಿ ಸಂಪಾದಕಮಂಡ ಲಿಯ ಸಭೆಯಲ್ಲಿ ಕಾಣಿಸಿಕೊಂಡ ಸೂಚನೆಯನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸಿದರು.

'ವಿಜ್ಞಾನ ಕರ್ಣಾಟಕ'ಕ್ಕೆ ಕನ್ನಡಿಗರಿಂದ ಉತ್ಸಾಹಪೂರ್ಣವಾದ ಸ್ವಾಗತ ದೊರೆಯಿತು. ಅದರಿಂದಲೆ 'ಮಾನವಿಕ ಕರ್ಣಾಟಕ' ಬಹು ಬೇಗನೆ ರೂಹು ಗೊಳ್ಳುವುದು ಸಾಧ್ಯವಾಯಿತು. ಸಂಪಾದಕಮಂಡಳಿಯ ಕಳೆದ ಸಭೆಯಲ್ಲಿ 'ಮಾನವಿಕ ಕರ್ಣಾಟಕ'ದ ಮೊದಲ ಸಂಚಿಕೆ ೧೯೭೦ರ ರಾಜ್ಯೋತ್ಸವ ದಂದು (ನವಂಬರ್, ೧) ಪ್ರಕಟವಾಗಬೇಕೆಂದು ನಿರ್ಧರಿಸಲಾಯಿತು. ಅದಕ್ಕೆ ವಿಶ್ವವಿದ್ಯಾನಿಲಯದ ಅನುಮತಿಯೂ ದೊರೆಯಿತು. ಈ ಹೊಸ ನಿಯತಕಾಲಿಕ ವನ್ನು ಕನ್ನಡಿಗರ ಕೈಯಲ್ಲಿಡಲು ನಮಗೆ ತುಂಬ ಸಂತೋಷವಾಗುತ್ತದೆ. ಕನ್ನಡ ಭಾಷೆಯ ಬೆಳವಣಿಗೆಯ ಹಾದಿಯಲ್ಲಿ ಇದೊಂದು ಮಹತ್ವಪೂರ್ಣವಾದ ಹೆಜ್ಜೆ.

ಕನ್ನಡ ಭಾಷೆ ಸಾಹಿತ್ಯಗಳಿಗೆ 'ಪ್ರಬುದ್ಧ ಕರ್ಣಾಟಕ'ದಿಂದ ಸಂದ ಕೊಡುಗೆಯ ಮಹತ್ವವನ್ನು ಈಗ ಯಾರಿಗೂ ಹೊಸದಾಗಿ ಪರಿಚಯಿಸಬೇಕಾದ ಅಗತ್ಯವಿಲ್ಲ. ಮೂಲತಃ ಸಾಹಿತ್ಯಿಕ ಪತ್ರಿಕೆಯಾದರೂ, ಅದರ ಸ್ಥಾಪಕರ ದೂರ ದರ್ಶಿತ್ವದ ಫಲವಾಗಿ ಕನ್ನಡದಲ್ಲಿ ಶಾಸ್ತ್ರಸಾಹಿತ್ಯದ ಬೆಳವಣಿಗೆಗೆ ಅದೊಂದು ಪರಿಣಾಮಕಾರಿಯಾದ ವೇದಿಕೆಯಾಯಿತು. ಎಲ್ಲ ಬಗೆಯ ಶಾಸ್ತ್ರ ವಿಜ್ಞಾನಗಳನ್ನು ಕುರಿತ ಲೇಖನಗಳಿಗೂ ಅಲ್ಲಿ ಅವಕಾಶ ದೊರೆಯಿತು. ಅದರಲ್ಲಿ ಪ್ರಕಟವಾದ ಎಷ್ಟೋ ಲೇಖನಗಳೆ ಪುಸ್ತಕರೂಪದಲ್ಲಿಯೂ ಪ್ರಕಟವಾಗಿ ವಿಜ್ಞಾನದ ಕೆಲವು ಶಾಖೆ ಗಳಲ್ಲಿ ಇಂದಿಗೂ ನಮ್ಮಲ್ಲಿನ ಅತ್ಯುತ್ತಮ ಪ್ರಕಟಣೆಗಳಾಗಿ ನಿಂತಿವೆ. ಹತ್ತಿರ ಹತ್ತಿರ ಐವತ್ತು ವರ್ಷಗಳ ಕೆಳಗೇ ಅದರಲ್ಲಿ 'ಇಂಡಸ್ಟ್ರಿಯಲ್ ಬ್ಯಾಂಕುಗಳು', 'ಭರತಖಂಡದ ಬಡತನ ಮತ್ತು ಅದರ ನಿವಾರಣೆ', 'ಹತ್ತಿಯ ವ್ಯಾಪಾರ ಮತ್ತು

ಕೈಗಾರಿಕೆ' ಎಂಬ ಅರ್ಥಶಾಸ್ತ್ರವನ್ನು ಕುರಿತ ಲೇಖನಗಳು ಪ್ರಕಟವಾಗಿದ್ದವು (ಸಂಪುಟ ೫). ಇವೇ 'ಪ್ರಬುದ್ಧ ಕರ್ಣಾಟಕ' ಪ್ರಕಟಿಸಿದ ಸಮಾಜ ವಿಜ್ಞಾನ ಸಂಬಂಧವಾದ ಮೊದಲ ಲೇಖನಗಳು. ಮುಂದಿನ ಸಂಪುಟಗಳಲ್ಲಿ ಬೇರೆ ಬೇರೆ ವಿಷಯುಗಳನ್ನು ಕುರಿತ ನೂರಾರು ಲೇಖನಗಳು ಪ್ರಕಟವಾದವು. ಜಿ. ಹನುಮಂತ ರಾವ್, ಡಾ. ಎಸ್. ಶ್ರೀಕಂಠಶಾಸ್ತ್ರಿ, ಎಂ. ಯಾಮುನಾಚಾರ್ಯ, ಡಾ. ಎಂ. ಎಚ್. ಕೃಷ್ಣ, ವಿ. ಸೀತಾರಾಮಯ್ಯ, ಎನ್. ಎಸ್. ನಾರಾಯಣಶಾಸ್ತ್ರಿ, ಡಾ. ಬಿ. ಕುಪ್ಪುಸ್ವಾಮಿ, ನಾ. ಕಸ್ತೂರಿ, ಎಚ್. ಕೃಷ್ಣರಾವ್ ಮೊದಲಾದ ಅನೇಕ ಸಮಾಜ ವಿಜ್ಞಾನಿಗಳು 'ಪ್ರಬುದ್ಧ ಕರ್ಣಾಟಕ'ದ ಪುಟಗಳ ಮೂಲಕ ಕನ್ನಡದ ಸಮಾಜವಿಜ್ಞಾನ ಪರಿಭಾಷೆಯನ್ನು ಬೆಳಸಿದರು. ಹೊಸ ಪೀಳಿಗೆಯ ಎಷ್ಟೋ ಬರಹಗಾರರು ಈ ಹಿರಿಯರ ಆದರ್ಶವನ್ನು ಅನುಸರಿಸಿದರು. ಇಂದಿನ ಬದಲಾದ ಪರಿಸರದಲ್ಲಿ ಸಮಾಜ ವಿಜ್ಞಾನಗಳಿಗೇ ಪ್ರತ್ಯೇಕವಾದ ವೇದಿಕೆಯೊಂದು ಅತ್ಯಗತ್ಯ ವಾಗಿದೆ ಎಂಬುದರಲ್ಲಿ ಚರ್ಚೆಗೆ ಆಸ್ಪದವಿಲ್ಲ.

ನಾಡಿನ ಶಿಕ್ಷಣ ಆಡಳಿತಗಳಲ್ಲಿ ಕನ್ನಡಕ್ಕೆ ಸಹಜವಾಗಿಯೆ ದೊರೆಯಬೇಕಾದ ಸ್ಥಾನಮಾನಗಳ ಬಗೆಗೆ ಹಿಂದೆಂದೂ ಕಾಣದ ಆಸೆ ಉತ್ಸಾಹಗಳು ಹೆಚ್ಚಾಗಿ ತೋರಿಬರುತ್ತಿರುವ ಈ ದಿನಗಳಲ್ಲಿ, ಕನ್ನಡವನ್ನು ಆ ಉದ್ದೇಶಗಳಿಗೆ ಸಜ್ಜುಗೊಳಿಸ ಬೇಕಾದುದು ಅದನ್ನು ಆಡುವವರ ಮೇಲಿನ ಹೊಣೆ; ವಿದ್ಯಾವಂತ ಕನ್ನಡಿಗರ ಹೆಚ್ಚಿನ ಜವಾಬ್ದಾರಿ. ಜನಜೀವನದ ಸರ್ವಮುಖಗಳ ಅಭಿವೃದ್ಧಿಗೂ ಜನತೆಯ ಭಾಷೆಗೂ ನಿಕಟತಮವಾದ ಸಂಬಂಧವಿದೆಯೆಂಬುದನ್ನು ಎಲ್ಲಿಯವರೆಗೆ ನಾವು ಅರಿತುಕೊಳ್ಳುವುದಿಲ್ಲವೊ, ಅರಿತುಕೊಂಡರೂ ಅದನ್ನು ನಿಷ್ಠೆಯಿಂದ ಪ್ರಯೋಗಕ್ಕೆ ತರುವುದಿಲ್ಲವೊ ಅಲ್ಲಿಯವರೆಗೆ ನಮ್ಮ ಸಾಧನೆಗಳೆಲ್ಲ ಬೆಟ್ಟ ಅಗೆದು ಇಲಿ ಹಿಡಿದ ಹಾಗೆಯೇ ಸರಿ. ನಾಡಿನ ಸಂಪತ್ತಿನ ಪೋಷಣೆ ಅಭಿವೃದ್ಧಿಗಳು ಕೇವಲ ಕಾರ್ಖಾನೆ ಅಣೆಕಟ್ಟುಗಳನ್ನು ಅವಲಂಬಿಸಿವೆಯೆಂದು ಭ್ರಮಿಸಿರುವುದೆ ನಮ್ಮ ರಾಷ್ಟ್ರದ ಕುಂಠಿತ ಪ್ರಗತಿಗೆ ಕಾರಣವಾಗಿದೆ. ಶಿಕ್ಷಣದಲ್ಲಿ ಸಹಜವಾದ ಅಭಿವ್ಯಕ್ತಿಗೆ, ಗ್ರಹಿಕೆಗೆ ಆಸ್ಪದಕೊಡದೆ ಕ್ರಿಯಾತ್ಮಕ ಶಕ್ತಿಯನ್ನು ಅಪವ್ಯಯಗೊಳಿಸಿ ಶಿಕ್ಷಣದ ಮೂಲ ಉದ್ದೇಶವನ್ನೇ ಕಡೆಗಣಿಸಲಾಗಿದೆ. ನಮ್ಮ ಭಾಷೆಗಳು ನಮ್ಮ ಬದುಕನ್ನು ಸಂಪೂರ್ಣವಾಗಿ ಆವರಿಸಿಕೊಂಡಾಗಲೆ ನಮ್ಮ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥ ಲಭಿಸುವುದು; ನಮ್ಮ ಪ್ರಗತಿಗೆ ಲಾಭದಾಯಕವಾದ ಕೀಲಿಕೈ ದೊರೆಯುವುದು. ನಮ್ಮ ಭಾಷೆಗಳ ಬಳಕೆಯ ಅಗತ್ಯ ಈಗ ಚರ್ಚೆಯ ವಿಷಯವಾಗಿ ಉಳಿದಿಲ್ಲ. ಆದರೆ ಅವನ್ನು ಸಮರ್ಪಕವಾಗಿ ಬಳಸುವ ಗತಿ ರೀತಿಗಳನ್ನು ಕುರಿತು ಮಾತ್ರ ಅನಾವಶ್ಯಕವಾದ ಚರ್ಚೆ ನಡೆಯುತ್ತಿದೆ. ಇದು ಈ ಭಾಷೆಗಳನ್ನು ಸಹಿಸದ ಅಲ್ಪಸಂಖ್ಯಾತರಿಗೆ ತೊಡರುಗಾಲಿಡಲು ಒಂದು ಅವಕಾಶವಾಗಿದೆ, ಅಷ್ಟೆ. ಈ ಚರ್ಚೆಯನ್ನು ನಿಲ್ಲಿಸಿ ಕಾರ್ಯೋನ್ಮುಖವಾಗುವಲ್ಲಿ 'ಮಾನವಿಕ ಕರ್ಣಾಟಕ'ದ ಪ್ರಕಟನೆಯಂಥ ಸಂದರ್ಭಗಳು ಮಹತ್ವದವಾಗಿವೆ.

'ಮಾನವಿಕ ಕರ್ಣಾಟಕ'ದ ಪ್ರಕಟಣೆಯೊಂದಿಗೆ 'ಪ್ರಬುದ್ಧ ಕರ್ಣಾಟಕ' ತನ್ನ ಮೂಲ ಉದ್ದೇಶದಂತೆ ಕೇವಲ ಸಾಹಿತ್ಯದ ಪತ್ರಿಕೆಯಾಗಿ ಉಳಿಯುತ್ತದೆ. ಅದರ ವಿಜ್ಞಾನದ ಭಾಗ ಈಗಾಗಲೇ 'ವಿಜ್ಞಾನ ಕರ್ಣಾಟಕ'ದಲ್ಲಿ ಸೇರ್ಪಡೆಯಾಗಿ ಹೋಗಿದೆ. ಸಮಾಜ ವಿಜ್ಞಾನಗಳು ಹಾಗೂ ಸಾಹಿತ್ಯವನ್ನುಳಿದ ಮಾನವಿಕ ವಿಷಯುಗಳು 'ಮಾನವಿಕ ಕರ್ಣಾಟಕ'ದ ವ್ಯಾಪ್ತಿಯಲ್ಲಿ ಬರುತ್ತವೆ.

ಅತಿವ್ಯಾಪ್ತಿ ಅವ್ಯಾಪ್ತಿಯ ದೋಷವಿಲ್ಲದೆ ಅಧ್ಯಯನ ವಿಷಯುಗಳನ್ನು ವರ್ಗೀಕರಿಸಲು ಬರುವುದಿಲ್ಲ. ನಮ್ಮ ಸಾಮಾನ್ಯ ಪರಿಭಾಷೆಯಲ್ಲಿ ಎಲ್ಲ ಅಧ್ಯಯನ ವಿಷಯುಗಳನ್ನೂ ಭೌತಿಕ ವಿಜ್ಞಾನಗಳು (Physical Sciences), ಸಮಾಜ ವಿಜ್ಞಾನಗಳು (Social Sciences) ಹಾಗೂ ಮಾನವಿಕಗಳು (Humanities) ಎಂದು ಗುಂಪುಗೊಳಿಸಲಾಗುತ್ತಿದೆ. ಇವುಗಳಲ್ಲಿಯೇ ಒಳಭೇದಗಳು ಅನೇಕವಾಗಿದ್ದರೂ, ಇಷ್ಟು ಸ್ಥೂಲವಾದ ಗುಂಪುಗಳ ಸ್ವರೂಪವನ್ನಾದರೂ ಖಚಿತವಾಗಿ ಹೇಳುವುದು ಕಷ್ಟ. ಮಾನವನೂ ಕೂಡಿದಂತೆ ಮಾನವನಿರ್ಮಿತವಲ್ಲದ ಎಲ್ಲವನ್ನೂ ಭೌತಿಕ ವಿಜ್ಞಾನಗಳು ಒಳಗೊಳ್ಳುತ್ತವೆ; ಮಾನವ ಮಾನವನೊಡನೆ ವರ್ತಿಸುವ ವಿಧಾನ ಸಮಾಜ ವಿಜ್ಞಾನಗಳ ವ್ಯಾಪ್ತಿ; ಮಾನವನ ಕ್ರಿಯಾತ್ಮಕ ಮುಖವನ್ನು ಕುರಿತವು ಮಾನವಿಕಗಳು. ಇದರ ಪ್ರಕಾರ ಭೌತವಿಜ್ಞಾನ, ರಸಾಯನ ವಿಜ್ಞಾನ ಮೊದಲಾದವು ಮೊದಲ ಗುಂಪಿಗೂ ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮೊದಲಾದವು ಎರಡನೆ ಗುಂಪಿಗೂ ಸಾಹಿತ್ಯ ಕಲೆಗಳು ಮೂರನೆಯದಕ್ಕೂ ಸೇರುತ್ತವೆ. ಆದರೆ ಮಾನವಶಾಸ್ತ್ರದಂಥ ಒಂದು ವಿಷಯನ್ನು ಪರಿಶೀಲಿಸಿದರೆ, ಅದರಲ್ಲಿ ಈ ಮೂರೂ ಗುಂಪಿನ ಸ್ವರೂಪವನ್ನು ಗಮನಿಸಬಹುದು. ಈಗ ಅದು ಭೌತಿಕ ಹಾಗೂ ಸಾಂಸ್ಕೃತಿಕ ಎಂದು ಎರಡು ಪ್ರತ್ಯೇಕ ವಿಷಯುಗಳೇ ಆಗಿದೆ. ಶಿಕ್ಷಣ, ಮನಶ್ಶಾಸ್ತ್ರ, ತತ್ವಶಾಸ್ತ್ರ ಮೊದಲಾದವನ್ನು ಅರೆಸಮಾಜ ವಿಜ್ಞಾನಗಳು ಎಂದು ಕೆಲವರು ಹೇಳಿದರೆ, ತತ್ವಶಾಸ್ತ್ರವನ್ನು ಪೂರ್ಣವಾಗಿ ಮಾನವಿಕಗಳಲ್ಲಿ ಸೇರಿಸುವವರೂ ಇದ್ದಾರೆ. ಇತಿಹಾಸ ಸಮಾಜ ವಿಜ್ಞಾನವೆ, ಮಾನವಿಕವೆ ಎಂಬುದು ತೀವ್ರ ಚರ್ಚೆಯ ವಿಷಯ. ಇನ್ನೂ ಅನೇಕ ವಿಷಯುಗಳು ಗೋಡೆಯ ಆ ಕಡೆಗೊ ಈ ಕಡೆಗೊ ಎಂಬುದು ಖಚಿತವಾಗಿ ನಿರ್ಧಾರವಾಗಿಲ್ಲ. ಇದು ಖಚಿತವಾಗಿ ನಿರ್ಧಾರವಾಗುವುದೂ ಸಾಧ್ಯವಿಲ್ಲ. ಏಕೆಂದರೆ ಪ್ರತಿಯೊಂದು ವಿಷಯದ ಸ್ವರೂಪ ವ್ಯಾಪ್ತಿಗಳೂ ತಲೆಮಾರಿನಿಂದ ತಲೆಮಾರಿಗೆ ಬದಲಾಗುತ್ತಾ ಹೋಗುತ್ತವೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, 'ಮಾನವಿಕ ಕರ್ಣಾಟಕ' ಸ್ಥೂಲವಾಗಿ ಪ್ರಚಲಿತವಾದ ಸೋಷಿಯಲ್ ಸೈನ್ಸಸ್ ಹಾಗೂ ಸಾಹಿತ್ಯೇತರ ಹ್ಯುಮಾನಿಟೀಸ್ ವಿಭಾಗಗಳನ್ನು ತನ್ನ ವ್ಯಾಪ್ತಿಯಲ್ಲಿ ಸೇರಿಸಿಕೊಂಡಿದೆ. 'ಮಾನವಿಕ' ಪದ ನೇರವಾಗಿ 'ಹ್ಯುಮಾನಿಟೀಸ್'ಗೆ ಸಂವಾದಿಯಾದದ್ದಾದರೂ, ಸಮಾಜ ವಿಜ್ಞಾನಗಳನ್ನು ಉದ್ದೇಶಿಸಿಯೂ ಅದು ಈಗಾಗಲೆ ವ್ಯಾಪಕವಾಗಿ ಬಳಸಲ್ಪಟ್ಟಿದೆ. ನಮ್ಮ ಪ್ರಕೃತ ಉದ್ದೇಶಗಳ ಈ ಪ್ರಕಟಣೆಗೆ ಅಡಕವಾದ ಹೆಸರೆಂದು ಅದನ್ನು ನಾವು

ಸ್ವೀಕರಿಸಿದ್ದೇವೆ. ಮೇಲಾಗಿ ಸಮಾಜ ವಿಜ್ಞಾನ ಮಾನವಿಕಗಳ ಸಂಬಂಧವಾದರೂ ತೆಕ್ಕೆಗೊಂಡದ್ದೆಂಬುದನ್ನು ಮರೆಯಲಾಗುವುದಿಲ್ಲ. 'ಮಾನವಿಕ ಕರ್ಣಾಟಕ' ಆ ಸಂಕೇತವೂ ಹೌದು.

ಈ ನಿಯತಕಾಲಿಕದ ಸಾಮಯಿಕತೆ ಅಗತ್ಯತೆಗಳನ್ನು ಸಮರ್ಥಿಸಿಕೊಳ್ಳ ಬೇಕಾಗಿಲ್ಲ. ಕನ್ನಡ ಭಾಷೆ, ಸಾಹಿತ್ಯಗಳ ಬೆಳವಣಿಗೆಯನ್ನು ತನ್ನ ಮೂಲ ಉದ್ದೇಶಗಳಲ್ಲಿ ಒಂದೆಂದು ಆರಂಭದಲ್ಲಿಯೆ ಘೋಷಿಸಿದ ಮೈಸೂರು ವಿಶ್ವವಿದ್ಯಾ ನಿಲಯ ಇದರ ಪ್ರಕಟನೆಯಿಂದ ಹೊಸ ದಿಗಂತವನ್ನು ತೆರೆದಿದೆ. ಕುಲಪತಿಗಳೂ ಸಿಂಡಿಕೇಟ್ ಸದಸ್ಯರೂ ಇತರ ಅಧಿಕಾರ ವರ್ಗದವರೂ ಇಂಥದೊಂದು ಪ್ರಕಟಣೆಯ ಮಹತ್ವವನ್ನು ಸಮರ್ಪಕವಾಗಿ ಗಮನಿಸಿ ಕನ್ನಡಿಗರಿಗೆ ಮಹದುಪ ಕಾರ ಮಾಡಿದ್ದಾರೆ. ಅವರೆಲ್ಲರಿಗೂ ನಮ್ಮ ಕೃತಜ್ಞತೆಗಳು ಸಲ್ಲಬೇಕು.

'ಮಾನವಿಕ ಕರ್ಣಾಟಕ'ದ ಸಂಪಾದಕದ್ವಯರನ್ನು ನಮ್ಮ ಜನರಿಗೆ ಹೊಸದಾಗಿ ಪರಿಚಯ ಮಾಡಿಕೊಡಬೇಕಾಗಿಲ್ಲ. 'ಎಚ್ಚೆಸ್ಕೆ' ಎಂಬ ಸಂಕ್ಷಿಪ್ತ ನಾಮದಿಂದ ನಾಡಿನಲ್ಲೆಲ್ಲ ಖ್ಯಾತರಾಗಿರುವ ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ಯರು ಶಾಸ್ತ್ರ-ಸಾಹಿತ್ಯಗಳನ್ನು ಏಕಪ್ರಕಾರವಾಗಿ ಬಲ್ಲ ನಮ್ಮ ವಿರಳರಲ್ಲಿ ಒಬ್ಬರಾಗಿದ್ದಾರೆ. ಡಾ. ನರಸಿಂಹಮೂರ್ತಿಗಳು ತಮ್ಮ ಸಂಶೋಧನೆ, ಅಧ್ಯಯನ, ಅಧ್ಯಾಪನ, ಪ್ರಕಟಣೆಗಳಿಂದ ಸಣ್ಣ ವಯಸ್ಸಿನಲ್ಲಿಯೇ ದೊಡ್ಡ ಶಕ್ತಿಯನ್ನು ತೋರಿದ್ದಾರೆ. ಶಕ್ತರೂ ಸಮರ್ಥರೂ ನಿಷ್ಠಾವಂತರೂ ಕಾರ್ಯೋತ್ಸಾಹಿಗಳೂ ಆದ ಇಂಥವರ ಸಂಪಾದಕತ್ವದಲ್ಲಿ 'ಮಾನವಿಕ ಕರ್ಣಾಟಕ' ಬಹು ಬೇಗನೆ ನಾಡಿನ ಉದ್ದಗಲಗಳಲ್ಲಿ ಮಾತ್ರವಲ್ಲದೆ ಹೊರಗೂ ತನ್ನ ಕೀರ್ತಿಯನ್ನು ಹರಡುವು ದೆಂದೂ ತನ್ನ ಶಿಷ್ಟತೆಯನ್ನು ಕಾಪಾಡಿಕೊಳ್ಳುವುದರಲ್ಲಿ ಅದು ಯಾವುದೇ ಪಂಡಿತ ಪತ್ರಿಕೆಗೂ ಹಿಂದಾಗುವುದಿಲ್ಲವೆಂದೂ ಆಶಿಸಿದ್ದೇನೆ.

'ಮಾನವಿಕ ಕರ್ಣಾಟಕ'ದ ಪ್ರಕಟಣೆ ನಿಶ್ಚಯಕ್ಕೂ ಒಂದು ಮಹತ್ವದ ಘಟನೆ. ರಾಷ್ಟ್ರದ ಯಾವುದೇ ವಿಶ್ವವಿದ್ಯಾನಿಲಯವಾದರೂ ಭಾರತೀಯ ಭಾಷೆ ಯೊಂದರಲ್ಲಿ ಇಂಥ ಮೂರು ನಿಯತಕಾಲಿಕಗಳನ್ನು ಪ್ರಕಟಿಸುತ್ತಿರುವ ಉದಾಹರಣೆ ಯಿಲ್ಲ. ಇದು ಹೆಮ್ಮೆಯ ಹಾಗೂ ಅಭಿಮಾನದ ಮಾತು. ಈ ಪತ್ರಿಕೆಯ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವಂತೆ ನಾಡವರಲ್ಲಿ ಪ್ರಾರ್ಥಿಸುತ್ತೇನೆ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರತಿಯೊಂದು ಅಧ್ಯಯನ ವಿಷಯಕ್ಕೂ ಇಂಥ ದೊಂದು ಪ್ರತ್ಯೇಕವಾದ ನಿಯತಕಾಲಿಕವನ್ನು ಪ್ರಕಟಿಸುವ ದಿನ ಬಹು ಬೇಗನೆ ಬರಲಿ ಎಂದು ನಾನು ಈ ಸಂದರ್ಭದಲ್ಲಿ ಹಾರೈಸುತ್ತೇನೆ.

ಕನ್ನಡ ಅಧ್ಯಯನ ಸಂಸ್ಥೆ
ನವೆಂಬರ್ ೧, ೧೯೭೦

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

ವಿಷಯಸೂಚಿ

ಈ ಸಂಚಿಕೆಯ ಲೇಖಕರು

೧. ಪ್ರಧಾನ್ ಗುರುದತ್ತ .... ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರು.

೨. ಡಾ. ಅಬ್ದುಲ್ ಅಜೀಜ್ .... ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ವಿಭಾಗದಲ್ಲಿ ಅರ್ಥ ಶಾಸ್ತ್ರ ಅಧ್ಯಾಪಕರು.

೩. ಡಾ. ಬಿ. ಷೇಕ್‌ಅಲಿ .... ಮಾನಸಗಂಗೋತ್ರಿಯ ಇತಿಹಾಸ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು.

೪. ಡಾ. ಬಿ. ಕೆ. ಗುರುರಾಜರಾವ್.... ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಅಧ್ಯಾಪಕರು.

೫. ಎಸ್. ನಾಗರಾಜು .... ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗ ದಲ್ಲಿ ಅಧ್ಯಾಪಕರು.

೬. ಎ. ಎಸ್. ಧರಣೇಂದ್ರಯ್ಯ .... ಧಾರವಾಡದ ಕರ್ಣಾಟಕ ಕಾಲೇಜಿನಲ್ಲಿ ಮನಶ್ಶಾಸ್ತ್ರದ ಅಧ್ಯಾಪಕರು.

೭. ಕೆ. ಎಸ್. ಶಿವಣ್ಣ .... ಮಾನಸಗಂಗೋತ್ರಿಯ ಇತಿಹಾಸ ವಿಭಾಗದಲ್ಲಿ ಅಧ್ಯಾಪಕರು.

೮. ಡಾ. ಕೆ. ಪುಟ್ಟಸ್ವಾಮಯ್ಯ .... ಡೆಪ್ಯೂಟಿ ಡೈರೆಕ್ಟರ್ ಆಫ್ ಇವಾಲ್ಯುಯೇಷನ್ ಮೈಸೂರು ಸರ್ಕಾರ.

೯. ಕೆ. ಆರ್. ರಂಗಾಚಾರ್ .... ಮೈಸೂರಿನ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಉಪಾಧ್ಯಾಯರು.

೧೦. ಎಂ. ಎಸ್. ರಾಮರಾವ್ .... ಮೈಸೂರಿನ ಶಾರದಾವಿಲಾಸ ಲಾ ಕಾಲೇಜಿನಲ್ಲಿ ಅಧ್ಯಾಪಕರು.

೧೧. ಡಾ. ಜಿ. ಎಸ್. ಗಾಯಿ .... ಮೈಸೂರಿನಲ್ಲಿರುವ ಭಾರತ ಸರ್ಕಾರದ ಶಾಸನ ಶಾಖೆಯ ಮುಖ್ಯಾಧಿಕಾರಿಗಳು.

೧೨. ಸಿ. ಕೆ. ರೇಣುಕಾರ್ಯ .... ಮೈಸೂರು ಮಹಾರಾಜ ಕಾಲೇಜಿನಲ್ಲಿ ಅರ್ಥ ಶಾಸ್ತ್ರ ಅಧ್ಯಾಪಕರು.

೧೩. ಡಾ. ಎಚ್. ಎಂ. ಸದಾಶಿವಯ್ಯ.... ಮಾನಸಗಂಗೋತ್ರಿಯ ಸಮಾಜಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು.

೧೪. ಕೆ. ಎಸ್. ನಂಜುಂಡಪ್ಪ .... ಮಾನಸಗಂಗೋತ್ರಿಯ ಇತಿಹಾಸ ವಿಭಾಗದಲ್ಲಿ ಅಧ್ಯಾಪಕರು.

೧೫. ಡಾ. ಎಂ. ಮಾದಯ್ಯ .... ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ರೀಡರ್.

೧೬. 'ಕೈಂತಜೆ' .... ಕೆ. ಟಿ. ಗೋವಿಂದಭಟ್ಟ, ಮಂಗಳೂರಿನ ವಕೀಲರು.

೧೭. ಪಿ. ಕೆ. ಪಾಟೀಲ್ .... ಮಾನಸಗಂಗೋತ್ರಿಯ ಗ್ರಂಥಾಲಯ ವಿಜ್ಞಾನ ವಿಭಾಗದ ಮುಖ್ಯಸ್ಥರು ಮತ್ತು ಗ್ರಂಥಪಾಲಕರು.

೧೮. ಡಾ. ಜೆ. ಕೆ. ಇರಾನಿ .... ಮಾನಸಗಂಗೋತ್ರಿಯ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು.

೧೯. ಡಾ. ಅ. ಸುಂದರ .... ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಅಧ್ಯಾಪಕರು.

೨೦. ಎಂ. ನಂಜಮ್ಮಣ್ಣಿ .... ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಸಮಾಜಶಾಸ್ತ್ರ ಅಧ್ಯಾಪಕಿ.

೨೧. ಕೆ. ಜಿ. ರಾಮಕೃಷ್ಣ .... ಮೈಸೂರು ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಅಧ್ಯಾಪಕರು.

ಪ್ರಧಾನ್ ಗುರುದತ್ತ

‘ಜಿನೀವದ ಪ್ರಜೆ’ ಜ್ಹೋನ್ ಜಾಕ್ ರೂಸೋ

‘ಜಿನೀವದ ಪ್ರಜೆ’ ಎಂದು ಅಭಿಮಾನದಿಂದ ತನ್ನನ್ನು ವರ್ಣಿಸಿಕೊಂಡಿರುವ ಜ್ಹೋನ್ ಜಾಕ್ ರೂಸೋ ಹದಿನೆಂಟನೆಯ ಶತಮಾನ ವಿಶ್ವಕ್ಕೆ ನೀಡಿದ ಅಮೋಘ ಕಾಣಿಕೆ. ರಾಜಕಾರಣ ಇವನ ವೃತ್ತಿಯಾಗಿರಲಿಲ್ಲ; ವಿದ್ವತ್ತಿನ ಗಳಿಕೆ ಇವನ ಗುರಿಯಾಗಿರಲಿಲ್ಲ; ದಾರ್ಶನಿಕತೆ ಇವನ ಪ್ರವೃತ್ತಿಯಾಗಿರಲಿಲ್ಲ. ಆದರೆ ವಸ್ತುಸ್ಥಿತಿಯ ಚಿಂತನೆ ಮತ್ತು ಸಮರ್ಥ ವಿಶ್ಲೇಷಣೆಯಿಂದ ರಾಜ್ಯಶಾಸ್ತ್ರವೇತ್ತರಿಗೆ ಗುರುವಾದ; ವಿದ್ವಾಂಸರಿಗೆ ತಾನೇ ವಸ್ತುವಾದ; ತನ್ನ ದರ್ಶನದ ಮಹಿಮೆಯಿಂದ ದಾರ್ಶನಿಕರನ್ನು ದಂಗುಬಡಿಸಿದ. “ಮಾನವ ಹುಟ್ಟನಿಂದ ಸ್ವತಂತ್ರ. ಆದರೆ ಎಲ್ಲೆಡೆಗಳಲ್ಲಿಯೂ ಅವನು ಶೃಂಖಲಾಬದ್ಧ”—ಎಂದು ಶತಮಾನಗಳ ಹಿಂದೆ ಅವನು ಘೋಷಿಸಿದ ಸತ್ಯ, ಕಾಲದ ಉಪಹತಿಯನ್ನು ಮೀರಿ ನಿಂತು ಮತ್ತೆ ಮತ್ತೆ ಮಾರ್ದೊಳಗುತ್ತಿದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ—ಕ್ರಾಂತಿಯ ಈ ಬೀಜಮಂತ್ರ ಯುಗಯುಗಗಳ ವರೆಗೆ ಜೀವಂತ ಜನತೆಯ ‘ಗಾಯತ್ರಿ’ಯಾಗಿ, ತಾರಕಶಕ್ತಿಯಾಗಿ ಉಳಿದುಬರುತ್ತದೆ. ಯಾವುದೇ ಎಚ್ಚೆತ್ತ ರಾಷ್ಟ್ರದ ಸಂವಿಧಾನವನ್ನು ತೆಗೆದುಕೊಂಡರೂ ಅದರ ರಚನೆಯಲ್ಲಿ ರೂಸೋನ ಪ್ರಭಾವ ಅಡಗಿರುವುದನ್ನು ಗುರುತಿಸಬಹುದು. ಸಮಕಾಲೀನ ಸಮಾಜದ ಮೇಲೆ ಅಚ್ಚಳಿಯದ ಪ್ರಭಾವ ಬೀರಿರುವ ಅನೇಕ ವ್ಯಕ್ತಿಗಳು ವಿಶ್ವದ ಇತಿಹಾಸದಲ್ಲಿ ಆಗಿಹೋಗಿದ್ದಾರೆ. ಆದರೆ ಅನೇಕ ಶತಮಾನಗಳ ವರೆಗೆ, ಅಷ್ಟೇ ಅಲ್ಲ, ವಿಶ್ವದ ಭವಿಷ್ಯೇತಿಹಾಸದ ಮೇಲೂ ಪ್ರಭಾವ ಬೀರಿರುವ ವ್ಯಕ್ತಿಗಳು ವಿರಳ. ಅಂಥ ವಿರಳವ್ಯಕ್ತಿಗಳಲ್ಲಿ ರೂಸೋ ಒಬ್ಬ. ಬಡತನದ ತೋಳ್ತೆಕ್ಕೆಯಲ್ಲಿ ರೂಪುಗೊಂಡ ಈ ಕ್ರಾಂತಿದರ್ಶಿ ಜನತೆಯ ಉದ್ಧಾರದ ಬಗ್ಗೆ ಕಂಡ ಕನಸು ಮಾನವಜನಾಂಗದ ಶಾಶ್ವತ ಉಣಿಸು ಆಗಿದೆ. ರಾಜ್ಯಶಾಸ್ತ್ರದ ಇತಿಹಾಸದಲ್ಲಿಯೇ ಮೊಟ್ಟಮೊದಲಿಗೆ ‘ಜನತೆಯ ರಾಜ್ಯಶಾಸ್ತ್ರವೇತ್ತ’ ಎಂಬ ಹೆಸರು ಯಾರಿಗಾದರೂ ಅನ್ವಯವಾಗುವುದಾದರೆ ಆ ವ್ಯಕ್ತಿ ರೂಸೋ ಅಲ್ಲದೆ ಬೇರೆ ಯಾರೂ ಆಗಿರಲು ಸಾಧ್ಯವಿಲ್ಲ. ಆ ಶತಮಾನದ ಅತ್ಯಂತ ಪ್ರಮುಖ ಘಟನೆ ಫ್ರಾನ್ಸಿನ ಮಹಾಕ್ರಾಂತಿ. ಆ ಕ್ರಾಂತಿ ಆರಂಭವಾಗುವುದಕ್ಕೆ ಹನ್ನೊಂದು

ವರ್ಷಗಳ ಮುಂಚೆ ರೂಸೋ ವಿಧಿವಶನಾದ. ಆದರೆ ಆ ಮಹಾಕ್ರಾಂತಿ ಆರಂಭವಾಗುವುದಕ್ಕೆ ಈ ವ್ಯಕ್ತಿಯೇ ಕಾರಣನಾದ. ತನ್ನ ವೈಯಕ್ತಿಕ ಜೀವನ ಏರು–ಪೇರು ಮತ್ತು ಕಷ್ಟಕಾರ್ಪಣ್ಯಗಳಿಂದ ಕೂಡಿದ್ದು ದುರಂತದಲ್ಲಿ ಪರ್ಯವಸಾನಗೊಂಡರೂ ತನ್ನ ರಾಷ್ಟ್ರಕ್ಕೆ, ಅಂತೆಯೇ ಸಮಗ್ರ ವಿಶ್ವಕ್ಕೆ, ಬಿಡುಗಡೆಯ ಬೀಜಮಂತ್ರವನ್ನು ನೀಡಿದ ಮಹಾನ್ ಚಿಂತಕ ಈತ.

ಜೀವನದ 'ವ್ಯರ್ಥಕಾಲ'

ರೂಸೋ ಜೂನ್ ೨೮, ೧೭೧೨ರಂದು ಜಿನೀವದಲ್ಲಿ ಹುಟ್ಟಿದ. ತಂದೆ ಗಡಿಯಾರ ರಿಪೇರಿ ಮಾಡುವವನು. ಈ ವೃತ್ತಿಯಿಂದ ಸಂಸಾರದ ವೆಚ್ಚವನ್ನು ಸರಿದೂಗಿಸಲು ಸಾಧ್ಯವಾಗದೆ ಹೋಗುತ್ತಿದ್ದುದರಿಂದ ಬಿಡುವಿನ ವೇಳೆಯಲ್ಲಿ ನೃತ್ಯಶಿಕ್ಷಣವನ್ನೂ ನೀಡುತ್ತಿದ್ದ. ಇಂಥ ಬಡಕುಟುಂಬದಲ್ಲಿ ರೂಸೋ ತನ್ನ ತಂದೆತಾಯಿಯರ ಎರಡನೆಯ ಮಗನಾಗಿ ಹುಟ್ಟಿದ. ಹುಟ್ಟಿದಂದಿನಿಂದಲೇ ದುರ್ದೈವ ಬೆನ್ನು ಕಾಡತೊಡಗಿತು. ಮಗು ಹುಟ್ಟಿದ ಎರಡು ವಾರಗಳಲ್ಲಿಯೇ ತಾಯಿ ವಿಧಿವಶಳಾದಳು. ಪ್ರೀತಿಯಿಂದ ಈ ಮಗುವನ್ನು ನೋಡಿಕೊಂಡ ದಾದಿ ಮತ್ತು ಈ ಮಗುವಿನ ಚಿಕ್ಕಮ್ಮ ತಾಯಿಯ ಒಲವಿನ ಕೊರತೆಯನ್ನು ಬಹುಮಟ್ಟಿಗೆ ದೂರಮಾಡಿದರು. ಚಿಕ್ಕಂದಿನಲ್ಲಿ ತಂದೆಯೇ ಮಗನಿಗೆ ವಿದ್ಯಾಭ್ಯಾಸ ಮಾಡಿಸಿ, ಕೊಂಚಮಟ್ಟಿಗೆ ಸಾಹಿತ್ಯಾಭ್ಯಾಸವನ್ನೂ ಮಾಡಿಸಿದ. ಹೀಗೆ ಈತನಿಗೆ ಹಲವಾರು ಉತ್ಕೃಷ್ಟ ಕೃತಿಗಳ ಪರಿಚಯ ಉಂಟಾಯಿತು. ಆದರೆ ೧೭೨೨ರಲ್ಲಿ, ಅಂದರೆ ರೂಸೋಗೆ ಹತ್ತು ವರ್ಷವಾಗಿದ್ದಾಗ, ಈತನ ತಂದೆ ಯಾವುದೋ ಒಂದು ವಿವಾದಕ್ಕೆ ಸಿಕ್ಕಿಕೊಂಡ ಪರಿಣಾಮವಾಗಿ ಸೆರೆಮನೆಯ ಶಿಕ್ಷೆ ಅಥವಾ ದೇಶೋಚ್ಚಾಟನೆ ಇವುಗಳಲ್ಲಿ ಯಾವುದಾದರೂ ಒಂದನ್ನು ಆಯ್ದುಕೊಳ್ಳಬೇಕಾಯಿತು. ತಂದೆ ದೇಶೋಚ್ಚಾಟನೆಯನ್ನೇ ಆಯ್ದುಕೊಂಡು ಲಿಯೋನ್‌ಗೆ ಹೊರಟುಹೋದ. ಇದರ ಫಲವಾಗಿ ರೂಸೋ ತನ್ನ ಚಿಕ್ಕಪ್ಪನಾದ ಬೆರ್ನಾರನ ಮನೆಯಲ್ಲಿ ಉಳಿದುಕೊಳ್ಳಬೇಕಾಯಿತು. ಬೆರ್ನಾರನಿಗೂ ಸುಮಾರು ಅದೇ ವಯಸ್ಸಿನ ಒಬ್ಬ ಮಗನಿದ್ದ. ಹತ್ತಿರದಲ್ಲಿಯೇ ಇದ್ದ ಬ್ವಾಯಿಸ್ಸಿ ಎಂಬ ಊರಿನಲ್ಲಿ ಲ್ಯಾಂಬರ್‌ಸಿಯೇ ಎಂಬ ಅಧ್ಯಾಪಕನೊಬ್ಬನಿದ್ದ. ಅವನ ಬಳಿಗೆ ಈ ಇಬ್ಬರು ಮಕ್ಕಳನ್ನೂ ವಿದ್ಯಾಭ್ಯಾಸಕ್ಕೆ ಕಳುಹಿಸಲಾಯಿತು. ಆ ಗುರುವಿನ ಜೊತೆಯಲ್ಲಿ ಅವನ ತಂಗಿಯೂ ವಾಸವಾಗಿದ್ದಳು. ಆಗ ಆಕೆಯ ವಯಸ್ಸು ಸುಮಾರು ಮುವ್ವತ್ತು ವರ್ಷ. ರೂಸೋ ಆಕೆಯನ್ನು ಪ್ರೇಮಿಸತೊಡಗಿದ. ಅಜ್ಞಾತ ವಿಷಯದ ಬಗ್ಗೆ ಉಂಟಾದ ಈ ಬಾಲಿಶ ಭಾವೋದ್ರೇಕ ಇವನ ಸ್ವಭಾವದ ಮೇಲೆ ತೀವ್ರ ಪ್ರಭಾವ ಬೀರಿತು, ಜೀವನಪರ್ಯಂತ ಇವನನ್ನು ಕಾಡಿತು. ಮುಂದೆ ಚಿಕ್ಕಪ್ಪನ ಬಳಿಗೆ ಹಿಂದಿರುಗಿದಾಗ ಆತ ರೂಸೋನನ್ನು ಮೊದಲು ಒಬ್ಬ ಕರಣಿಕನ ಬಳಿಯೂ ಅನಂತರ ಒಬ್ಬ

ನಕಾಸೆಗಾರನ ಬಳಿಯೂ ತರಬೇತಿಗಾಗಿ ಕಳುಹಿಸಿದ. ಇಲ್ಲಿ ರೂಸೋ ಮೂರು ವರ್ಷಗಳ ವರೆಗೆ ತರಬೇತಿ ಪಡೆದನಾದರೂ ಆ ಕೆಲಸ ಇವನ ಪ್ರವೃತ್ತಿಗೆ ಹೊಂದಲಿಲ್ಲ. ಆದರೆ ಈ ಅವಧಿಯಲ್ಲಿ ಚಿತ್ರಲೇಖನ ಕಲೆಯನ್ನು ಉತ್ತಮಪಡಿಸಿಕೊಂಡ. ಇಷ್ಟಾದರೂ ಕದಿಯುವ ಮತ್ತು ಸುಳ್ಳುಹೇಳುವ ಚಟ ಅಂಟಿಕೊಂಡದ್ದರಿಂದ ಪ್ರಾಮಾಣಿಕನಾಗಿದ್ದ ಒಡೆಯನ ಬಳಿ ಬಹುಕಾಲ ನಿಲ್ಲದಾದ. ಒಂದು ದಿನ ಹೇಳದೆ ಕೇಳದೆ ಅಲ್ಲಿಂದ ಓಡಿಹೋದ.

ಸಾಮಾನ್ಯ ಆಚಾರವಿಚಾರಗಳು, ನಡೆವಳಿಕೆಗಳು ಮತ್ತು ಶಿಷ್ಟಸಂಪ್ರದಾಯಗಳ ಬಗ್ಗೆ ರೊಚ್ಚಿಗೆದ್ದ ಕ್ರಾಂತಿಕಾರಿಯೆಂದು ವಿಶ್ವವೇ ತನ್ನನ್ನು ಸಮಾದರಿಸಬಹುದು, ಸ್ವಾಗತಿಸಬಹುದು ಎಂಬ ಕನಸಿನ ಲೋಕದಲ್ಲಿ ರೂಸೋ ಓಲಾಡತೊಡಗಿದ್ದ. ಆದರೆ ವಿಶ್ವ ಈತನನ್ನು ಕಡೆಗಣಿಸಿದಾಗ ಆ ಕನಸು ನುಚ್ಚುನೂರಾಯಿತು. ಬೇರಾವ ದಾರಿಯೂ ಕಾಣದಿದ್ದಾಗ ಕಾಡಿ, ಬೇಡಿ, ಭಿಕ್ಷಾಟನೆಮಾಡಿ ಜಿನೀವಕ್ಕೆ ಸಮೀಪವಾಗಿದ್ದ ಕೋನ್‌ಫಿನ್‌ನ್ಯೋ ಎಂಬಲ್ಲಿಗೆ ಬಂದು ಸೇರಿದ. ಅಲ್ಲಿ ಕ್ಯಾಥೊಲಿಕ್ ಧರ್ಮಾಧಿಕಾರಿಯೊಬ್ಬನನ್ನು ಕಂಡು ತನ್ನೆಲ್ಲ ಕಥೆಯನ್ನೂ ಹೇಳಿಕೊಂಡ. ತಲೆಯ ತುಂಬ ಅವ್ಯಕ್ತಭಾವನೆಗಳನ್ನು ತುಂಬಿಕೊಂಡಿದ್ದ ಈ ವ್ಯಕ್ತಿಗೆ ಆತ ಸಮಾಧಾನ ನೀಡಿದ. ಆತನ ಸಹವಾಸದಲ್ಲಿ ರೂಸೋನ ಗೊಂದಲಮಯ, ಆಕಾರಹೀನ ಭಾವನೆಗಳೆಲ್ಲ ಸ್ಪಷ್ಟವೂ ಸಾಕಾರವೂ ಆಗಿ ಕಾಣಿಸಿಕೊಳ್ಳತೊಡಗಿದುವು.

ಆನ್ಸಿಯಲ್ಲಿದ್ದ ಶ್ರೀಮಂತ ವಿಧವೆ ಮದಾಂ ದ ವಾರೆನ್ಸ್ ಎಂಬವಳ ಬಳಿಗೆ ಹೋದರೆ ಆಕೆ ಆಶ್ರಯ ನೀಡಿ, ಧಾರ್ಮಿಕ ಶಿಕ್ಷಣವನ್ನು ಪೂರೈಸಿಕೊಳ್ಳಲು ಅಗತ್ಯವಾದ ನೆರವು ನೀಡುವಳೆಂದು ಸೂಚಿಸಲಾಯಿತು. ಆಕೆ ಆಗ್ಗೆ ಸ್ವಲ್ಪಕಾಲ ಮುಂಚೆ ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದಿದ್ದಳು. ಒಂದಲ್ಲ ಒಂದು ವಿಧದಲ್ಲಿ ಒಬ್ಬರಲ್ಲ ಒಬ್ಬರಿಗೆ ನೆರವಾಗದಿದ್ದರೆ ಆಕೆಗೆ ನಿದ್ದೆಯೇ ಬರುತ್ತಿರಲಿಲ್ಲ. ಅಂಥ ಅಪೂರ್ವ ಮಹಿಳೆ ಆಕೆ. ರೂಸೋ ಆಕೆಯ ಬಳಿಗೆ ಆಶ್ರಯ ಬೇಡಿ ಬಂದಾಗ ಆಕೆಯ ವಯಸ್ಸು ೨೮ ವರ್ಷ. ರೂಸೋ ಇನ್ನೂ ೧೬ರ ತರುಣ. ಹೊಳೆಯುವ ಕಣ್ಣುಗಳು, ಕಪ್ಪು ಕೂದಲಿನ, ಗೌರವರ್ಣದ, ತಿದ್ದಿದಂತಿದ್ದ ನೀಳವಾದ ಕಾಲು ಮತ್ತು ಪಾದ ಹೊಂದಿದ್ದ, ದೃಢಕಾಯನಾಗಿದ್ದ ಈ ಪ್ರತಿಭಾವಂತ ತರುಣನ ವ್ಯಕ್ತಿತ್ವ ಆಕೆಗೆ ಹಿಡಿಸಿತು. ತನ್ನನ್ನು ಗೌರವಿಸುವ ತರುಣನೊಬ್ಬ ದೊರೆತಾಗ ಆಕೆ ಸ್ವಾಭಾವಿಕವಾಗಿಯೇ ಆಸಕ್ತಿ ತೋರಿದಳು. ರೂಸೋ ಆಕೆಯ ಆಪ್ತ ಕಾರ್ಯದರ್ಶಿಯಾಗಿ, ಜೆಂಗಾಪಲವನಾಗಿ ಕೆಲಸಮಾಡತೊಡಗಿದ.

ಮುಂದೆ ಮದಾಂ ಮತ್ತು ಮಸ್ಯ ಸಬ್ರಾನ್ ಅವರೊಂದಿಗೆ ತೂರಿನ್ ಎಂಬಲ್ಲಿಗೆ ಹೋಗಬೇಕೆಂದೂ ಅಲ್ಲಿ ಅವರಿಗೆ ಅಗತ್ಯವಾದ ಭೌತಿಕ ಮತ್ತು ಆಧ್ಯಾತ್ಮಿಕ ಆಹಾರ ದೊರೆಯುತ್ತದೆಂದೂ ಹೇಳಲಾಯಿತು. ಈ ಮೂವರೂ ಅಲ್ಲಿಗೆ ಕಾಲ್ನಡಿಗೆ

ಯಲ್ಲಿಯೇ ಹೊರಟರು. ರೂಸೋ ತನ್ನ 'ಕನ್‌ಫೆಷನ್ಸ್'ನಲ್ಲಿ ಈ ವಿಚಾರವನ್ನು ದೀರ್ಘವಾಗಿಯೇ ಪ್ರಸ್ತಾವಿಸಿದ್ದಾನೆ. ಆದರೆ ಇವನ ಈ 'ಸ್ವಸ್ವೀಕಾರ' ಸಂಪೂರ್ಣವಾಗಿ ವಿಶ್ವಸನೀಯವಾಗಿಲ್ಲದಿರುವುದರಿಂದ ಮಡಾಂ ಸಬ್ರಾನ್ ಈತನಲ್ಲಿ ಅನುರಕ್ತಳಾಗಿದ್ದಳೇ ಇಲ್ಲವೇ ಎಂಬುದನ್ನು ನಿಖರವಾಗಿ ಹೇಳಲಾಗುವುದಿಲ್ಲ. ಮಡಾಂ ವಾರೆನ್ಸ್ ತನಗೆ ಉಡುಗೊರೆಯಾಗಿ ನೀಡಿದ್ದ ವಸ್ತುವೊಂದು ಕಾಣೆಯಾಗಿತ್ತೆಂದೂ ಮಡಾಂ ಸಬ್ರಾನಳೇ ಅದನ್ನು ಕದ್ದಿದ್ದಳೆಂದೂ ರೂಸೋ ಹೇಳಿಕೊಂಡಿದ್ದಾನೆ. ಆದರೆ ರೂಸೋನ ಆಗಿನ ಸ್ವಭಾವವನ್ನು ಸೂಚಿಸುವ ಮತ್ತೊಂದು ಘಟನೆ ಇದೇ ಅವಧಿಯಲ್ಲಿ ನಡೆಯಿತು. ಆಗ ರೂಸೋ ವರ್ಸಿಲಿಸ್ ಎಂಬವನ ಮನೆಯಲ್ಲಿ ಕೆಲಸಕ್ಕೆ ಸೇರಿದ್ದ. ಅವರ ಮನೆಯಿಂದಲೂ ಅದೇ ಮಾದರಿಯ ಬೆಳ್ಳಿಯ ರಿಬನ್ ಕಾಣೆಯಾಗಿತ್ತು. ವಾಸ್ತವವಾಗಿ ರೂಸೋ ತಾನೇ ಅದನ್ನು ಕದ್ದಿದ್ದ. ಸಿಕ್ಕಿಬಿದ್ದಾಗ ಮನೆಗೆಲಸದ ಹೆಂಗಸಿನ ಮೇಲೆ ದೋಷಾರೋಪಣೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ. ಇಬ್ಬರೂ ಆಣೆ ಪ್ರಮಾಣಮಾಡಿ ತಾವು ನಿರ್ದೋಷಿಗಳೆಂದು ಸಿದ್ಧಪಡಿಸಲು ಪ್ರಯತ್ನಿಸಿದರು. ಮನೆಯ ಮಾಲೀಕ ಈ ತೊಂದರೆಯನ್ನು ಶಾಶ್ವತವಾಗಿ ತೊಡೆದುಹಾಕುವಂತೆ ಅವರಿಬ್ಬರನ್ನೂ ಕೆಲಸದಿಂದ ತೆಗೆದುಹಾಕಿದ.

ಮುಂದೆ, ಕಾಂಪ್ಟ್ ದ ಗುವೋನ್ ಎಂಬವರ ಬಳಿ ಸೇರಿದಾಗ ಆತ ರೂಸೋನನ್ನು ಚೆನ್ನಾಗಿಯೇ ನಡೆಸಿಕೊಂಡ. ಆದರೆ ಇದ್ದಕ್ಕಿದ್ದಂತೆಯೇ ಮಡಾಂ ವಾರೆನ್ಸಳನ್ನು ನೋಡಬೇಕೆಂಬ ಬಯಕೆಯುಂಟಾದಾಗ ಬೇಕೆಂದೇ ರೂಸೋ ಅನುಚಿತ ರೀತಿಯಲ್ಲಿ ವರ್ತಿಸಿ, ಒಡೆಯನನ್ನು ರೊಚ್ಚಿಗೆಬ್ಬಿಸಿ ಕೆಲಸದಿಂದ ವಜಾ ಮಾಡಿಸಿಕೊಂಡು ಮಡಾಂ ವಾರೆನ್ಸಳನ್ನು ಅರಸಿಕೊಂಡು ಬಂದ. ಇವನು ಆನ್ಸಿಗೆ ಹಿಂದಿರುಗಿದಾಗ, ಇವನ ಹಿತೈಷಿಣಿಯಾಗಿದ್ದ ಮಡಾಂ ವಾರೆನ್ಸ್ ಇವನನ್ನು ಸಂತೋಷದಿಂದ ಸ್ವಾಗತಿಸಿದಳು. ಒಟ್ಟಿನಲ್ಲಿ ಇವರ ಸಂಬಂಧವೇ ವಿಚಿತ್ರರೀತಿಯದಾಗಿತ್ತು. ಬಹುಬೇಗ ಧಾರ್ಮಿಕ ಶಿಕ್ಷಣವನ್ನು ಪೂರೈಸಿಕೊಳ್ಳಬೇಕೆಂದು ಸೂಚಿಸಿ ಈತನನ್ನು ಸಂತ ಲಾಜೇರಿಯ ಧಾರ್ಮಿಕ ಶಾಲೆಗೆ ಕಳುಹಿಸಿದಳು. ಸೇವಕರಿಗೆ ನೀಡುವಂತೆ ಈತನಿಗೂ ಅಲ್ಪಭತ್ಯ ನೀಡಲಾಗಿತ್ತು. ಆಕೆ ಇವನ ಶಿಕ್ಷಣ ವೆಚ್ಚವನ್ನೆಲ್ಲ ವಹಿಸಿದಳು. ಇವನಿಗೆ ಸಂಗೀತವನ್ನೂ ಕಲಿಸಿದಳು. ರೂಸೋ ಆಗಿಂದಾಗ್ಗೆ ಅವಳನ್ನು ಬಿಟ್ಟುಹೋಗುತ್ತಿದ್ದ. ಅಲ್ಲಿ ಇಲ್ಲಿ ಅಲೆದಾಡಿ ಮತ್ತೆ ಆಕೆಯ ಬಳಿಗೇ ಹಿಂದಿರುಗುತ್ತಿದ್ದ. ಒಮ್ಮೆ ಆಕೆಯನ್ನು ಕಾಣಲು ಶಾಲೆಯ ಗೆಳೆಯನೊಬ್ಬನನ್ನು ಜೊತೆಯಲ್ಲಿ ಕರೆದುಕೊಂಡು ಹೊರಟಿದ್ದ. ಅವನು ದಾರಿಯಲ್ಲಿ ಮೂರ್ಛೆಹೋದ. ಅವನನ್ನು ದಾರಿಯಲ್ಲೇ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿಟ್ಟು, ಮಡಾಂ ವಾರೆನ್ಸಳನ್ನು ನೋಡಿಕೊಂಡು ಬರಬೇಕೆಂದು ಆನ್ಸಿಗೆ ಬಂದ. ಆದರೆ ಆಗ ಆಕೆ ಅಲ್ಲಿರಲಿಲ್ಲ. ಮುಂದೆ ಕೊಂಚ ಕಾಲ ನುಶಾತೆಲ್ ಮತ್ತು ಲಾಸೆನ್ ನಗರಗಳಲ್ಲಿ ಸಂಗೀತಪಾಠ

ಗಳನ್ನು ಹೇಳಿಕೊಡುತ್ತಾ ಜೀವನಯಾಪನೆ ಮಾಡುತ್ತಿದ್ದ. ಅಲ್ಲಿ ಇಲ್ಲಿ ಅಲೆದಾಡಿ ಆರ್ಶಿಮಾಂಧ್ರಿತ್ ಎಂಬವರ ಬಳಿ ಆಪ್ತ ಕಾರ್ಯದರ್ಶಿಯಾಗಿ ಕೊಂಚಕಾಲ ದುಡಿದ. ಈ ಮಧ್ಯೆ ಲೇರ್‌ನಲ್ಲಿದ್ದ ಫ್ರೆಂಚ್ ರಾಯಭಾರಿಯ ಪರಿಚಯ ವಾಯಿತು. ಆತ ನೀಡಿದ ಪರಿಚಯಪತ್ರದೊಡನೆ ರೂಸೋ ಪ್ಯಾರಿಸಿಗೆ ಪ್ರಯಾಣ ಬೆಳೆಸಿದ. ಅಲ್ಲಿ ಸಮಾಜದ ಉತ್ತಮ ವರ್ಗಗಳೊಡನೆ ಬೆರೆಯುವ ಅವಕಾಶ ಇವನಿಗೆ ಲಭ್ಯವಾಯಿತು. ಈ ಸಂದರ್ಭದಲ್ಲಿ ಈತ ತನ್ನ ನಡೆನುಡಿಗಳನ್ನು ತಿದ್ದಿ ಕೊಂಡ; ತನ್ನ ಸ್ವಭಾವದ ಓರೆಕೋರೆಗಳನ್ನು ಸರಿಪಡಿಸಿಕೊಂಡ. ಈ ಹೊತ್ತಿಗೆ ರೂಸೋಗೆ ೨೦ ವರ್ಷ ವಯಸ್ಸಾಗಿತ್ತು. ಈ ಮಧ್ಯೆ ಮದಾಂ ವಾರೆನ್ಸ್ ಶಾಂಬೆರಿ ಯಲ್ಲಿರುವಳೆಂದು ಇವನಿಗೆ ತಿಳಿಯಬಂತು. ದೀರ್ಘ ಪ್ರಯಾಣಮಾಡಿ ಅಲ್ಲಿಗೆ ಹೋಗಿ ಆಕೆಯನ್ನು ಭೇಟಿಮಾಡಿದ.

ಈ ಭೇಟಿ ಅತ್ಯಂತ ಸೌಹಾರ್ದಯುತವಾಗಿತ್ತು. ರೂಸೋ ಮತ್ತೊಮ್ಮೆ ಆಕೆಯ ಪ್ರೇಮಿಯಾದ. ಗ್ರಾಮಾಂತರ ಪ್ರದೇಶಗಳಲ್ಲಿ ಕುಟೀರಗಳನ್ನು ನಿರ್ಮಿಸಿ ಕೊಂಡು ರಸಾಯನಶಾಸ್ತ್ರ, ಸಂಗೀತ ಮತ್ತು ಕಲೆಗಳ ಬಗ್ಗೆ ಅಭ್ಯಾಸ ನಡೆಸುವುದು ಬಹುಮಟ್ಟಿಗೆ ಅಂದಿನ ಫ್ಯಾಶನ್ ಆಗಿತ್ತು. ಆಕೆ ಈ ಹವ್ಯಾಸಕ್ಕೇನೂ ಹೊರತಾ ಗಿರಲಿಲ್ಲ. ರೂಸೋನೊಡನೆ ಆಕೆ ಇಂಥ ಗ್ರಾಮಾಂತರ ಕುಟೀರದಲ್ಲಿ ನೆಲೆ ಸಿದ್ದಳು. ೧೭೩೮ರಲ್ಲಿ ರೂಸೋ ರೋಗಗ್ರಸ್ತನಾಗಿದ್ದ. ಆಗ ಹವಾ ಬದಲಾವಣೆ ಯಿಂದ ಈತ ಚೇತರಿಸಿಕೊಳ್ಳಬಹುದೆಂದು ಆಕೆ ಶಾಂಬೆರಿಯ ಬಳಿ ಇದ್ದ ' ಲೆ ಶಾರ್ಮೆಟ್ಸ್ 'ನಲ್ಲಿ ರೂಸೋ ತಂಗಲು ಅಗತ್ಯವಾದ ಏರ್ಪಾಡು ಮಾಡಿದಳು. ಆದರೆ ರೂಸೋ ' ಮೋ ಪೆಲ್ಯೇ ' ಎಂಬಲ್ಲಿಗೇ ಹೋಗಬೇಕೆಂದು ಹಠಮಾಡಿದ. ಈತ ಚೇತರಿಸಿಕೊಳ್ಳಲು ಆ ಸ್ಥಳದ ಉತ್ತಮ ಹವಕ್ಕಿಂತ ಬೇರೆಯ ಕಾರಣವಿದೆ ಯೆಂದೂ ಮದಾಂ ಲರ್ನಾಜ್ ಎಂಬಾಕೆಯೇ ಆ ಆಕರ್ಷಣೆಯ ಬಿಂದು ಎಂದೂ ಮದಾಂ ವಾರೆನ್ಸಳಿಗೆ ಗೊತ್ತಾದಾಗ ಅವರ ಸಂಬಂಧ ಶಾಶ್ವತವಾಗಿ ಕೊನೆಗಂಡಿತು. ಎಂದಿನಂತೆ ಅಲ್ಲಿ ಇಲ್ಲಿ ಅಲೆದಾಡಿ ಮತ್ತೆ ' ಲೆ ಶಾರ್ಮೆಟ್ಸ್ 'ಗೆ ಮರಳಿ ಬಂದಾಗ ಬೇರೊಬ್ಬ ಪ್ರೇಮಿ ತನ್ನ ಸ್ಥಾನವನ್ನು ಆಕ್ರಮಿಸಿದ್ದುದನ್ನು ಕಂಡ. ಆದರೆ ಇದರಿಂದ ಧೃತಿಗೆಡದೆ ಅಧ್ಯಾಪಕ ವೃತ್ತಿ ಕೈಗೊಂಡ. ೧೭೪೧ರಲ್ಲಿ ಇವನು ರಾಜಧಾನಿಗೆ ಹಿಂದಿರುಗಿದ. ಇಲ್ಲಿಗೆ ರೂಸೋನ ಜೀವನದ ' ವ್ಯರ್ಥಕಾಲ ' ಕೊನೆಗೊಂಡಿತು. ಮುಂದೆ ಇವನ ಪ್ರತಿಭೆ ಗರಿಗೆದರತೊಡಗಿತು.

ಸಾರ್ಥಕ ಬದುಕು

೧೭೪೧ ರೂಸೋನ ಜೀವನಕ್ಕೆ ಹೊಸ ತಿರುವನ್ನು ನೀಡಿತು. ಆ ವರ್ಷ ರೂಸೋಗೆ ವಿಶ್ವಕೋಶದ ಸಹಸಂಪಾದಕನಾಗಿದ್ದ ದೀದ್ರೋ ಮತ್ತು ಅವನ ಸ್ನೇಹಿತ ದ್ಯೂಪ್ಯಾನ್ ಅವರ ಪರಿಚಯವಾಯಿತು. ಇವರಿಬ್ಬರೂ ರೂಸೋನ ಮೇಲೆ

ಪ್ರಭಾವ ಬೀರಿದರು. ದ್ಯೂಪ್ಯಾಸನ ನೆರವಿನಿಂದ ವೆನಿಸಿನಲ್ಲಿದ್ದ ಫ್ರೆಂಚ್ ರಾಯಭಾರಿಯ ಕಾರ್ಯದರ್ಶಿಯಾಗಿ ನೇಮಕಗೊಂಡ. ಆದರೆ ಸಂಬಳ ಸರಿಯಾಗಿ ದೊರೆಯದೆ ಹೋದದ್ದರಿಂದ ೧೭೪೫ರಲ್ಲಿ ರೂಸೋ ಪ್ಯಾರಿಸಿಗೆ ಹಿಂದಿರುಗಿದ. ರೂಸೋ ಈ ಅವಧಿಯಲ್ಲಿ ಸಂಗೀತದ ಅಂಕಿತಸೂಚಿಯೊಂದನ್ನು ತಯಾರಿಸಿದ. ಆದರೆ ಸಂಗೀತ ಅಕಾದಮಿ ಅದರ ಬಗ್ಗೆ ಅಷ್ಟೇನೂ ಉತ್ಸಾಹ ತೋರಿರಲಿಲ್ಲ. ಈ ಮಧ್ಯೆ ಈತ ಬರೆದಿದ್ದ 'ಲೆ ಮ್ಯೂಸಸ್ ಗೆಲಾಂತ್' ಎಂಬ ಆಪೆರ ಅಭಿನೀತವಾಯ್ತು. ದೀದ್ರೋ ಕೂಡ ಈತನಿಗೆ ಲೇಖನಕಾರ್ಯಗಳನ್ನು ವಹಿಸಿಕೊಟ್ಟ.

೧೭೪೩ರಲ್ಲಿ ರೂಸೋ ಪ್ಯಾರಿಸಿನ ಒಂದು ಹೋಟೆಲಿನಲ್ಲಿ ಇಳಿದುಕೊಂಡಿದ್ದ. ಆಗ ಈತನಿಗೆ ಆ ಹೋಟೆಲಿನಲ್ಲಿ ಕೆಲಸಕ್ಕಿದ್ದ ಥೆರೆಸ್ ಲೆವಾಸ್ಯೋ ಎಂಬಾಕೆಯ ಪರಿಚಯ ಆಯಿತು. ೧೭೪೫ರಲ್ಲಿ ಪ್ಯಾರಿಸಿಗೆ ಬಂದಾಗ, ತನ್ನ ವ್ಯಕ್ತಿತ್ವದ ಪ್ರಭಾವದಿಂದಾಗಿ ಶ್ರೀಮಂತಕೂಟಗಳಲ್ಲಿ ಭಾಗವಹಿಸುವ ಅವಕಾಶ ಪಡೆದುಕೊಂಡಿದ್ದ. ಈ ಕೂಟಗಳಲ್ಲಿ ಪ್ರಸಿದ್ಧ ವಿಶ್ವಕೋಶಕಾರರ ಮತ್ತು ಅನೇಕ ಪ್ರಭಾವಶಾಲೀ ಮಹಿಳೆಯರ ಸ್ನೇಹ ಸಂಬಂಧಗಳನ್ನು ಸಂಪಾದಿಸಿದ್ದ. ಸಮಾಜದ ಈ ಪ್ರತಿಷ್ಠಿತ ಮಹಿಳೆಯರೊಂದಿಗೆ ರೂಸೋ ಪ್ರೇಮ ಸಂಬಂಧಗಳನ್ನೂ ಇಟ್ಟುಕೊಂಡಿದ್ದ. ಸ್ತ್ರೀಯರನ್ನು ತನ್ನತ್ತ ಆಕರ್ಷಿಸುವುದು ಮತ್ತು ಅವರ ಆಕರ್ಷಣೆಗೆ ಒಳಗಾಗುವುದು ಈತನ ಜೀವನದಲ್ಲಿ ಅವ್ಯಾಹತವಾಗಿ ನಡೆದಿತ್ತು. ಅವರೆಲ್ಲ ತನ್ನನ್ನು ತುಂಬ ಚೆನ್ನಾಗಿ ನೋಡಿಕೊಂಡರೆಂದೂ ಪುರುಷರು ತನ್ನ ಯೋಗ್ಯತೆಯನ್ನು ಅರಿಯುವುದಕ್ಕಿಂತ ಮೊದಲೇ ಮಹಿಳೆಯರು ತನ್ನ ಪ್ರತಿಭೆಯನ್ನು ಗುರುತಿಸಿ ಉಪಕರಿಸಿದರೆಂದೂ ಇವನು ಅವರನ್ನು ಸ್ಮರಿಸಿದ್ದಾನೆ. ಇಷ್ಟಾದರೂ ಇವನ ಈ ಪ್ರೇಮಪ್ರಕರಣಗಳಲ್ಲಿ ದೀರ್ಘಕಾಲ ಉಳಿದುಬಂದದ್ದು ಲೆವಾಸ್ಯೋಳದು ಮಾತ್ರ. ತನ್ನ 'ಸ್ವಸ್ವೀಕಾರ'ದಲ್ಲಿ ಈ ರೀತಿ ಹೇಳಿಕೊಂಡಿದ್ದಾನೆ: "ಮೊದಲಿಗೆ ಸಂತೋಷಪನ್ನರಸುವುದು ಮಾತ್ರ ನನ್ನ ಉದ್ದೇಶವಾಗಿತ್ತು. ಆದರೆ ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಂಗಾತಿಯೊಬ್ಬಳನ್ನು ಆರಿಸಿಕೊಂಡಿದ್ದೆನೆಂಬುದು ಅನಂತರ ನನಗೆ ಅರಿವಾಯಿತು." ಮುಂದೆ ಆಕೆಯನ್ನು ಮದುವೆಯಾದ. ವಿಚಿತ್ರವೇನೆಂದರೆ, ಆಕೆ ಅಸದೃಶ ರೂಪವತಿಯೇನೂ ಆಗಿರಲಿಲ್ಲ. 'ಸ್ವಸ್ವೀಕಾರ'ದಲ್ಲಿ ಹೇಳಿಕೊಂಡಿರುವಂತೆ ಆಕೆ "ಕುರೂಪಿಯೂ ಅಜ್ಞಾನಿಯೂ ಮೂರ್ಖಳೂ ಅಸಹ್ಯ ಹುಟ್ಟಿಸುವಂಥ ತಾಯಿಯೂ" ಆಗಿದ್ದಳು. ಇವರಿಗೆ ಒಟ್ಟು ಐದು ಮಕ್ಕಳಾದುವು. ರೂಸೋನ ಆದಾಯ ಅಷ್ಟೇನೂ ಹೆಚ್ಚಾಗಿಲ್ಲದಿದ್ದುದರಿಂದ, ಆ ಮಕ್ಕಳನ್ನು ಶಿಶು ಚಿಕಿತ್ಸಾಲಯದ ಬಾಗಿಲ ಬಳಿ ಬಿಟ್ಟುಬರುತ್ತಿದ್ದರು. ಖರ್ಚನ್ನು ತಪ್ಪಿಸಿಕೊಳ್ಳಲು ಇವರು ಹುಡುಕಿಕೊಂಡಿದ್ದ ಮಾರ್ಗ ಇದು. ಇಂಥ 'ನಿಷ್ಕರುಣಿ' ಮುಂದೆ ಮಕ್ಕಳ ಕ್ಷೇಮಾಭ್ಯುದಯ ಮತ್ತು ಶೈಕ್ಷಣಿಕ ಸುಧಾರಣೆಯ ಬಗ್ಗೆ ಅತ್ಯುತ್ಕೃಷ್ಟ ಪ್ರಬಂಧವನ್ನು ಬರೆದದ್ದು ನಿಜಕ್ಕೂ ಒಂದು ಸವಾಡ.

೧೭೪೯ ರೂಸೋನ ಬದುಕಿಗೇ ಹೊಸ ಅರ್ಥವನ್ನು ನೀಡಿದ, ಹೊಸ ದಿಗಂತಗಳನ್ನು ಇವನ ಕಣ್ಣಮುಂದೆ ತೆರೆದ ವರ್ಷ. 'Has the progress of sciences and arts contributed to corrupt or purify morality?' (ವಿಜ್ಞಾನ ಮತ್ತು ಕಲೆಗಳ ಮುನ್ನಡೆ ನೈತಿಕ ಉದ್ಧಾರಕ್ಕೆ ಕಾರಣವಾಗಿದೆಯೋ ಅಥವಾ ಅಧಃಪತನಕ್ಕೆ ಕಾರಣವಾಗಿದೆಯೆ?) ಎಂಬ ವಿಷಯದ ಬಗ್ಗೆ ಬರೆಯಲಾದ ಅತ್ಯುತ್ಕೃಷ್ಟ ಪ್ರಬಂಧಕ್ಕೆ ಬಹುಮಾನ ನೀಡುವುದಾಗಿ ದಿಜೋನ್ ಅಕಾದಮಿ ಪ್ರಕಟಿಸಿತು. ತತ್‌ಕ್ಷಣದ ತನ್ನ ಪ್ರತಿಕ್ರಿಯೆ ಏನೆಂಬುದನ್ನು ರೂಸೋ 'ಸ್ವಸ್ವೀಕಾರ'ದಲ್ಲಿ ಹೀಗೆ ಹೇಳಿಕೊಂಡಿದ್ದಾನೆ: "ಆ ಕ್ಷಣವೇ ನಾನು ಬೇರೊಂದು ವಿಶ್ವವನ್ನು ಕಂಡೆ, ನಾನು ಬೇರೊಬ್ಬ ವ್ಯಕ್ತಿಯಾಗಿ ಪರಿಣಮಿಸಿದೆ." ರೂಸೋ ಈ ಅವಧಿಯಲ್ಲಿ ಬಿಡುವಿಲ್ಲದಂತೆ ದುಡಿದು ತನ್ನ ಪ್ರಬಂಧವನ್ನು ಬರೆದು ಮುಗಿಸಿದ. ೧೭೫೦ರಲ್ಲಿ ಅದು ಅಕಾದಮಿಯ ಬಹುಮಾನವನ್ನೂ ಗಳಿಸಿತು. ಇದುವರೆಗೆ ಬಹುಮಟ್ಟಿಗೆ ಅಖ್ಯಾತನಾಗಿದ್ದ, ಅಥವಾ ಹೆಚ್ಚೆಂದರೆ ಅಲ್ಪಖ್ಯಾತನಾಗಿದ್ದ, ವ್ಯಕ್ತಿ ಒಮ್ಮೆಲೇ ಜಗದ್ವಿಖ್ಯಾತನಾದ.

ರೂಸೋ ತನ್ನ ಪ್ರಬಂಧದಲ್ಲಿ ಮಂಡಿಸಿದ್ದ ಸಿದ್ಧಾಂತ ಸಾಂಪ್ರದಾಯಿಕವಾಗಿ ಸರಿಯೆಂದು ಭಾವಿಸಲಾಗಿದ್ದ ಹಾಗೂ ಅಂದು ಪ್ರಚಲಿತವಾಗಿದ್ದ ಧೋರಣೆಗಳಿಗೆ ತೀರ ವಿರುದ್ಧವಾಗಿತ್ತು. ನಾಗರಿಕನೆಂದು ಹೇಳಲಾಗಿರುವ ಇಂದಿನ ಪ್ರಜೆಗಿಂತಲೂ ಸಹಜಸ್ಥಿತಿಯಲ್ಲಿದ್ದ ಹಿಂದಿನ ಮಾನವನೇ ಶ್ರೇಷ್ಠನೆಂದು ಸಾರುವ ಕೆಚ್ಚು ಈತನಲ್ಲಿತ್ತು. ಏಕೆಂದರೆ ಈತನ ಅಭಿಪ್ರಾಯಕ್ಕನುಸಾರವಾಗಿ "ಕಲೆ ಮತ್ತು ವಿಜ್ಞಾನಗಳು ಅಭಿವೃದ್ಧಿ ಹೊಂದಿದಂತೆಲ್ಲಾ ನಮ್ಮ ಬುದ್ಧಿ ತಪ್ಪುಹಾದಿ ಹಿಡಿಯುತ್ತ ಬಂತು." ಸಭ್ಯತೆ ಮತ್ತು ಆಧುನಿಕತೆಯ ಸೋಗಿನ ಹಿಂದೆ "ದ್ವೇಷ, ಸಂದೇಹ, ಭಯ, ಸಂಕೋಚ, ಹೊಟ್ಟೆಕಿಚ್ಚು, ಮೋಸ" ಮೊದಲಾದ ಭಾವಗಳು ಅಡಗಿ ಕುಳಿತಿವೆ. ತನ್ನ ಈ ಸಿದ್ಧಾಂತಕ್ಕೆ ಇತಿಹಾಸದ ಪುರಾವೆಗಳನ್ನೂ, ಪ್ರಮಾಣಗಳನ್ನೂ ರೂಸೋ ಒದಗಿಸಿದ. ಈ ದೃಷ್ಟಿಯಿಂದ ಸ್ಪಾರ್ಟ ಮತ್ತು ಅಥೆನ್ಸ್‌ಗಳ ಇತಿಹಾಸವನ್ನು ಹೋಲಿಸಿ ನೋಡಿದಾಗ ಈ ತೀರ್ಮಾನ ಇನ್ನೂ ಪ್ರಬಲವಾಯಿತು. ನಾಗರಿಕತೆಯ ಬಳಿಗೆ ಬೀಳದಿದ್ದ ಸ್ಪಾರ್ಟ "ದೇವಮಾನವರ ಗಣರಾಜ್ಯವಾಗಿತ್ತು." ಅದೇ ಭವ್ಯತೆ, ಸಮೃದ್ಧಿ, ಸುಖವೈಭವ, ಐಶ್ವರ್ಯ, ಕಲೆ ಮತ್ತು ವಿಜ್ಞಾನಗಳ ಬೀಡಾಗಿದ್ದ ಅಥೆನ್ಸ್ ದುರ್ಗುಣಗಳ ಕೇಂದ್ರವಾಗಿದ್ದು, ಅದರ ಪತನ ಶತಸ್ಸಿದ್ಧವಾಗಿತ್ತು. ರೂಸೋನ ಅಭಿಪ್ರಾಯದಲ್ಲಿ ವೈಭವ, ಸುಖಸಮೃದ್ಧಿ, ಕಲೆ ಮತ್ತು ವಿಜ್ಞಾನಗಳ ಅಭಿವೃದ್ಧಿ—ಇವು ಸದ್ಗುಣಗಳ ನಾಶಕ್ಕೆ ಕಾರಣವಾಗುತ್ತವೆ; ಆ ರಾಷ್ಟ್ರ ಹೇಡಿಯಾಗಿ ಪರಿಣಮಿಸುತ್ತದೆ. ರೋಮಿನ ಇತಿಹಾಸವೇ ಇದಕ್ಕೆ ಸಾಕ್ಷಿ. ಏಕೆಂದರೆ ರೋಮ್ ಸರಳ ಹಾಗೂ ಬಡ ರಾಷ್ಟ್ರವಾಗಿದ್ದಾಗ ಸಾಮ್ರಾಜ್ಯವನ್ನು ಜಯಿಸುವ ಶಕ್ತಿ ಪಡೆದಿದ್ದು ಗೌರವಕ್ಕೆ ಪಾತ್ರವಾಗಿತ್ತು. ಆದರೆ ಅದರ ವೈಭವ ಹೆಚ್ಚುತ್ತ

ಬಂದಂತೆ, ವಿಶ್ವದ ಐಶ್ವರ್ಯ ಅಲ್ಲಿ ಕೇಂದ್ರೀಕೃತವಾಗುತ್ತ ಬಂದಂತೆ ರೋಮ್ ಶಕ್ತಿಗುಂದುತ್ತ ಹೋಯಿತು. "ಐಶ್ವರ್ಯವೆಂದರೇನೆಂಬುದನ್ನೇ ತಿಳಿಯದಂಥ ವ್ಯಕ್ತಿಗಳ ಪಾಲಾಯಿತು." ಹೀಗೆ, ಐತಿಹಾಸಿಕ ಆಧಾರಗಳ ಮೇಲೆ ಕಲೆ ಮತ್ತು ವಿಜ್ಞಾನಗಳು ಎಂಥ ಪ್ರಭಾವ ಬೀರುತ್ತವೆಂಬುದನ್ನು ಮೋಹಕ ಶೈಲಿಯಲ್ಲಿ, ಅತ್ಯಂತ ಪ್ರಭಾವಶಾಲಿ ರೀತಿಯಲ್ಲಿ ಸ್ಪಷ್ಟಪಡಿಸಿದ್ದು ಈ ಪ್ರಬಂಧದ ವೈಶಿಷ್ಟ್ಯವಾಗಿತ್ತು. ಸಮಾಜದ ಸ್ಥಿತಿಗತಿಗಳ ಮತ್ತು ಶೈಕ್ಷಣಿಕ ಕ್ಷೇತ್ರದ ಅಪಾಯಕಾರೀ ಪ್ರವೃತ್ತಿಗಳ ವಿಶ್ಲೇಷಣೆಯನ್ನೂ ಈ ಪ್ರಬಂಧ ಆನುಷಂಗಿಕವಾಗಿ ಒಳಗೊಂಡಿತ್ತು. ಆಯ್ದುಕೊಂಡ ವಿಷಯವನ್ನು ಸಾಧಾರವಾಗಿ ನಿರೂಪಿಸಿ, ಒಳಿತು-ಕೆಡುಕುಗಳನ್ನು ಪರಿಣಾಮಕಾರಿಯಾಗಿ ವಿವೇಚಿಸಿ ರೂಸೋ ತನ್ನ ಪ್ರತಿಭೆಯೆಷ್ಟೆಂಬುದನ್ನು ಸಮರ್ಥರೀತಿಯಲ್ಲಿ ಮನದಟ್ಟುಮಾಡಿಕೊಟ್ಟಿದ್ದಾನೆ.

ರೂಸೋ ತನ್ನ ಸಾಹಿತ್ಯಕಾರ್ಯವನ್ನು ಮುಂದುವರಿಸಿದ. 'ಲ ದೆವಿನ್ ದ್ಯು ವಿಲಾಜ್' ಎಂಬ ಕಿರು ಆಪೆರ ಅಭಿನೀತವಾದಾಗ ಈತನಿಗೆ ರಾಜಾಸ್ಥಾನದ ಸ್ಥಾನಮಾನಗಳನ್ನು ನೀಡಲಾಯಿತು. ಆದರೆ ವಿಶ್ವವಿಯನ್ಮಂಡಲದ ಬೃಹದ್ಯಾನಕ್ಕೆ ಸಿದ್ಧವಾಗಿದ್ದ ರೂಸೋನ ಆತ್ಮಪಕ್ಷಿ ರಾಜಾಸ್ಥಾನದ ಸ್ವರ್ಣಶೃಂಖಲೆಗೆ ಬದ್ಧವಾಗಲು ಇಚ್ಛಿಸಲಿಲ್ಲ. ತನ್ನೆಲ್ಲ ಆರ್ಥಿಕ ಸಂಕಟಗಳನ್ನೂ ಶಾಶ್ವತವಾಗಿ ದೂರವಾಗಿಸಬಹುದಾಗಿದ್ದ ಆಸ್ಥಾನದ ಗೌರವವನ್ನು ಒಪ್ಪಿಕೊಳ್ಳಲಿಲ್ಲ. ತನ್ನ ವೈಯಕ್ತಿಕ ಸಿದ್ಧಾಂತಗಳಿಗನುಗುಣವಾಗಿ ಬಾಳಿದ.

೧೭೫೩ರಲ್ಲಿ ರೂಸೋ ಮತ್ತೆ ದಿಜೋನ್ ಅಕಾದಮಿ ಪ್ರಶಸ್ತಿಗಾಗಿ ತನ್ನ ಪ್ರಬಂಧವನ್ನು ಕಳುಹಿಸಿದ. "What is the origin of inequality among men, and is it authorised by natural law?"(ಮಾನವರ ಅಸಮಾನತೆಯ ಮೂಲವೇನು, ಅದಕ್ಕೆ ನೈಸರ್ಗಿಕ ನಿಯಮದ ಆಧಾರವಿದೆಯೆ?) ಎಂಬುದು ಸ್ಪರ್ಧೆಯ ವಿಷಯವಾಗಿತ್ತು. ಈ ಬಾರಿ ಮತ್ತಷ್ಟು ಸುವ್ಯವಸ್ಥಿತವಾದ, ಸುಸಂಗತವಾದ ಸಮರ್ಥ ಪ್ರಬಂಧವೊಂದನ್ನು ರಚಿಸಿದ. ಈ ಪ್ರಬಂಧ ಬಹುಮಾನವನ್ನು ಗಳಿಸಲಿಲ್ಲವಾದರೂ ಪ್ರಜಾತಂತ್ರ ಮತ್ತು ಸಮಾಜವಾದಗಳ ಚಿಂತನೆಯ ಇತಿಹಾಸದಲ್ಲಿಯೇ ಅತ್ಯಂತ ಪ್ರಭಾವಶಾಲಿ ಕೃತಿಯಾಗಿ ಪರಿಣಮಿಸಿತು. ರೂಸೋನ ರಾಜನೈತಿಕ ಚಿಂತನೆಯ ವಿಕಾಸದ ದೃಷ್ಟಿಯಿಂದ ಇದು ಮೊದಲ ಪ್ರಬಂಧಕ್ಕಿಂತ ಮುಖ್ಯವಾದುದು ಎಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ.*

ರೂಸೋ ಈ ಪ್ರಬಂಧದಲ್ಲಿ ಎರಡು ಬಗೆಯ ಅಸಮಾನತೆಗಳ ವಿಚಾರವನ್ನು ವಿಶ್ಲೇಷಿಸಿದ್ದಾನೆ. ಮೊದಲನೆಯದು ನೈಸರ್ಗಿಕವಾದುದು. ಅಂದರೆ ವಯೋಮಾನ,

* ವಾಲ್ಟೇರನಿಗೆ ರೂಸೋ ಈ ಪ್ರಬಂಧದ ಪ್ರತಿಯೊಂದನ್ನು ಕಳುಹಿಸಿದ್ದ. ವಾಲ್ಟೇರ್ ರೂಸೋನ ವಿಚಾರಗಳನ್ನು ಆಮೂಲಾಗ್ರವಾಗಿ ಖಂಡಿಸಿದ. ಆಗ ಉಂಟಾದ ತೀವ್ರ ಭಿನ್ನಾಭಿಪ್ರಾಯಗಳಿಂದಾಗಿ ವಿರಸಮೂಡಿ, ಇವರ ಸ್ನೇಹಸಂಬಂಧಗಳು ಶಾಶ್ವತವಾಗಿ ಕೊನೆಗೊಂಡುವು.

ಆರೋಗ್ಯ, ಶಾರೀರಿಕ ಸಾಮರ್ಥ್ಯ, ಬುದ್ಧಿಶಕ್ತಿ, ಆತ್ಮಗುಣ ಇವುಗಳನ್ನು ಅವಲಂಬಿಸಿರುವಂತಹುದು. ಎರಡನೆಯದು ನೈತಿಕ ಅಥವಾ ರಾಜನೈತಿಕ ಅಸಮಾನತೆ. ಇದಕ್ಕೆ ಸಾಮಾಜಿಕ ಸಂಸ್ಥೆಗಳು, ಐಶ್ವರ್ಯ, ಅಧಿಕಾರ ಮತ್ತು ಅಂತಸ್ತು ಇವು ಕಾರಣವಾಗುತ್ತವೆ. ಮನುಷ್ಯ ಸರಳಜೀವನವನ್ನು ನಡೆಸಿ, ತನ್ನ ಮೂಲಭೂತ ಅಗತ್ಯಗಳನ್ನು (ಆಹಾರ, ನಿದ್ರೆ ಮತ್ತು ಮೈಥುನ) ಪೂರೈಸಿಕೊಳ್ಳಬೇಕೆಂಬುದು ಪ್ರಕೃತಿಯ ನಿಯಮ. ಆದರೆ ನಾಗರಿಕ ಮಾನವ ನಿದ್ರಾಹಾರಗಳಲ್ಲಿ ಸ್ವೇಚ್ಛೆಯಿಂದ ವರ್ತಿಸುತ್ತಾನೆ. ನಾಗರಿಕ ಜೀವನದ ಚಿಂತೆ, ಸಂಕಟ, ಆತಂಕ, ನೋವು ಇವುಗಳಿಂದ ಅವನು ದೈಹಿಕವಾಗಿ ಬಳಲಿಹೋಗುತ್ತಾನೆ. ಹೀಗಾಗಿ ನಾಗರಿಕತೆ ಎಂಬುದು ತಾನೇ ಉಂಟುಮಾಡಿದ ದೋಷಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ನಡೆಸುವ ಅಸಹ್ಯ ಸ್ಪರ್ಧೆಯಾಗಿದೆ. ಸಮಾಜ ಜೀವನದಲ್ಲಿ ಐಶ್ವರ್ಯ ಸಂಗ್ರಹ ಮತ್ತು ಅಧಿಕಾರ ಕೇಂದ್ರೀಕರಣದಿಂದ ಸಮಾಜ ಎಂತೆಂಥ ಅನಾಚಾರ, ಅತ್ಯಾಚಾರ, ಅಸಮಾನತೆಗಳ ಬೀಡಾಗಿ ಪರಿಣಮಿಸುತ್ತದೆಂಬುದನ್ನು ರೂಸೋ ಹೃದಯಸ್ಪರ್ಶಿಯಾಗಿ ವಿವರಿಸಿದ್ದಾನೆ. ಜನಸಾಮಾನ್ಯರ ತೀವ್ರ ಪ್ರತಿರೋಧ ನಿರಂಕುಶಾಧಿಕಾರಿಯನ್ನು ಗದ್ದುಗೆಯಿಂದಿಳಿಸುತ್ತದೆ, ಇಲ್ಲವೇ ಅವನನ್ನು ಕೊಂದು ಹಾಕುತ್ತದೆ ಎಂಬ ಇವನ ಭವಿಷ್ಯ ನಿಜವಾಗಲು ಬಹುಕಾಲ ಬೇಕಾಗಲಿಲ್ಲ. ಕಾಲ್ಪನಿಕ ಸ್ಥಿತಿಗತಿಗಳನ್ನು ಅಥವಾ ರಾಷ್ಟ್ರಗಳನ್ನು ರೂಸೋ ಮುಂದಿರಿಸಿಕೊಂಡಿರಲಿಲ್ಲ; ಫ್ರಾನ್ಸಿನ ಅಂದಿನ ದುಃಸ್ಥಿತಿಯ ಚಿತ್ರಣವೇ ಅದಾಗಿತ್ತು ಎಂಬುದಕ್ಕೆ ಈ ವಾಕ್ಯವೇ ಸಾಕ್ಷಿಯಾಗಿದೆ: "ಹಿರಿಯರು ಮಕ್ಕಳ ಆಜ್ಞಾನುವರ್ತಿಗಳಾಗಬೇಕು; ಬುದ್ಧಿವಂತರು ಮೂರ್ಖರು ಹೇಳಿದಂತೆ ನಡೆಯಬೇಕು; ಮೂಲಭೂತ ಅಗತ್ಯಗಳ ಪೂರೈಕೆಯೂ ಆಗದೆ ಲಕ್ಷೋಪಲಕ್ಷ ಜನ ಹಸಿವಿನಿಂದ ಸಾಯುತ್ತಿರುವಾಗ ಪ್ರತಿಷ್ಠಿತ ವರ್ಗದ ಕೇವಲ ಕೆಲವು ವ್ಯಕ್ತಿಗಳು ಸುಖದ ಸುಪ್ಪತ್ತಿಗೆಯಲ್ಲಿ ಓಲಾಡಬೇಕು ಎಂಬುದು ನೈಸರ್ಗಿಕ ನಿಯಮಗಳಿಗೆ ವಿರುದ್ಧವಾದುದೆಂಬುದು ಸ್ಪಷ್ಟ."

ಈ ಕ್ರಾಂತಿಕಾರಕ ವಿಚಾರಗಳನ್ನು ಮುಂದಿರಿಸಿದಾಗ ರೂಸೋ ತೀರ ಬಡತನದ ಸ್ಥಿತಿಯಲ್ಲಿಯೇ ಇದ್ದ. ಮನೆ ಬಾಡಿಗೆ ಕೊಡಲೂ ಈತನಲ್ಲಿ ಹಣವಿರಲಿಲ್ಲ. ಸ್ವಂತ ಮನೆಯ ಕಲ್ಪನೆ ಬಹುಶಃ ಇವನಿಗೆ ಕನಸಿನಲ್ಲೂ ಹೊಳೆದಿರಲಿಲ್ಲ. ತನ್ನ ಮತ್ತು ತನ್ನ ಹೆಂಡತಿಯ ಜೀವನದ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲೂ ಇವನು ಅಸಮರ್ಥನಾಗಿದ್ದ. ಇವನ ಜೀವಮಾನವೆಲ್ಲ ಸ್ನೇಹಿತರು ಉದಾರವಾಗಿ ಬಿಟ್ಟುಕೊಟ್ಟಿದ್ದ ಕುಟೀರಗಳಲ್ಲಿಯೇ ಕಳೆಯಿತು. ಇವನ ಹೆಂಡತಿ ಗಂಡನಿಗೆ ತಿಳಿದಂತೆ, ತಿಳಿಯದಂತೆ, ಸ್ನೇಹಿತರಿಂದ ನೆರವನ್ನು ಪಡೆದುಕೊಳ್ಳುತ್ತಿದ್ದಳು. ರೂಸೋ 'ಹಸಿವಿನಿಂದ ಸಾಯುವ ಮಂದಿ'ಯಲ್ಲಿ ಸೇರಿರಲಿಲ್ಲವಾದರೂ ಈತನಿಗೆ ಅವರ ಕಷ್ಟಾನಿಷ್ಟಗಳ ಹತ್ತಿರದ ಪರಿಚಯವಿತ್ತು. 1754ರಲ್ಲಿ ಪ್ಯಾರಿಸಿಗೆ ಹಿಂದಿರುಗಿದಾಗಲೂ ಮದಾಂ ದ ಎಪಿನೇ ಎಂಬಾಕೆಯ ನೆರವನ್ನು ಪಡೆದು

‘ದಿ ಹರ್ಮಿಟೇಜ್’ ಎಂಬ ಸಣ್ಣ ಕುಟೀರದಲ್ಲಿ ಈತ ಇಳಿದುಕೊಂಡ. ಇಲ್ಲಿಯೇ ಇವನು ‘ಜೂಲಿ, ಓ ಲಾ ನೊವೆಲ್ಲ್ ಎಲೇಯೀಸ್’ ಎಂಬ ಗ್ರಂಥವನ್ನು ರಚಿಸಿದ್ದು. ಇದು 1760ರಲ್ಲಿ ಪ್ರಕಟವಾಯಿತು. ಈ ಕೃತಿ ಅದ್ಭುತ ಯಶಸ್ಸನ್ನು ತಂದಿತ್ತಿತು. ಇದರಲ್ಲಿಯೂ ಪ್ರಧಾನವಾಗಿ ಬಡವರ ಹಕ್ಕು ಮತ್ತು ಶ್ರೀಮಂತರ ಕರ್ತವ್ಯಗಳ ಉಲ್ಲೇಖವಿದ್ದುದರಿಂದ ಕೆಲವೆಡೆಗಳಿಂದ ಸಹಜವಾಗಿಯೇ ಟೀಕೆಯನ್ನು ಎದುರಿಸಬೇಕಾಗಿ ಬಂತು. ಧಾರ್ಮಿಕ ವಲಯವೂ ರೂಸೋನ ವಿಚಾರಗಳನ್ನು ಖಂಡಿಸಲು ಮುಂದಾಯಿತು.

ಈ ಗ್ರಂಥ ಹೊರಬರುವ ಮೊದಲು ಮದಾಂ ಎಪಿನೇ ಮತ್ತು ರೂಸೋ ಅವರ ಸಂಬಂಧದ ಬಗ್ಗೆ ಕುಪ್ರಥೆಯುಂಟಾಗಿ ವಿರಸ ಹುಟ್ಟಿತು. ಹೀಗಾಗಿ ರೂಸೋ ಮಾಂಟ್ ಲೂಯಿ ಎಂಬಲ್ಲಿಗೆ ಬಂದು ಲಕ್ಸೆಂಬರ್ಗಿನ ಡ್ಯೂಕ್ ಮತ್ತು ಡಚೆಸರ ನೆರವನ್ನು ಪಡೆದುಕೊಂಡ. ತನ್ನ ಉತ್ತಮ ಕೃತಿಗಳನ್ನೆಲ್ಲ ಈತ ರಚಿಸಿದ್ದು ಇಲ್ಲಿಯೇ. ಹೀಗೆ ಈ ಅಗಲಿಕೆ ಒಟ್ಟಿನಲ್ಲಿ ಉತ್ತಮ ಫಲವನ್ನೇ ನೀಡಿತು.

೧೭೬೨ರಲ್ಲಿ ‘ಲ ಕಾಂಟ್ರಾಕ್ಟ್ ಸೋಷಿಯಲ್’ ಬೆಳಕಿಗೆ ಬಂದಿತು. “ಮಾನವ ಹುಟ್ಟಿನಿಂದ ಸ್ವತಂತ್ರ; ಆದರೆ ಎಲ್ಲೆಡೆಗಳಲ್ಲಿಯೂ ಅವನು ಶೃಂಖಲಾಬದ್ಧ” ಎಂಬ ಮಹಾ ವಾಕ್ಯದಿಂದಲೇ ಈ ಕೃತಿ ಆರಂಭವಾಗುತ್ತದೆ. ಇದು ರೂಸೋನ ಹೆಸರನ್ನು ಅಮರವಾಗಿಸಿದ ಕೃತಿ. ವಾಸ್ತವವಾಗಿ ರೂಸೋ ತನ್ನ ರಾಜನೈತಿಕ ಸಿದ್ಧಾಂತಗಳನ್ನೆಲ್ಲ ಕ್ರಮಬದ್ಧವಾಗಿ, ಸುವ್ಯವಸ್ಥಿತವಾಗಿ ನಿರೂಪಿಸಬೇಕೆಂದು ಪ್ರಯತ್ನಿಸಿದ. ‘ಸಾಮಾಜಿಕ ಒಪ್ಪಂದ’ ಇವನ ಆ ಮಹಾ ಯೋಜನೆಯ ಒಂದು ತುಣುಕು ಮಾತ್ರ. ಕೃತಿ ರೂಪತಳೆದದ್ದು ಇಷ್ಟು ಮಾತ್ರವೆ. ರೂಸೋ ಈ ಗ್ರಂಥದಲ್ಲಿ ಮತ್ತು ತನ್ನ ಪ್ರಸಿದ್ಧ ಪ್ರಬಂಧಗಳಲ್ಲಿ ಮಂಡಿಸಿದ ವಿಚಾರಗಳು, ಆದರ್ಶಗಳು ಮತ್ತು ಪ್ರತಿಪಾದಿಸಿದ ಸಾಮಾಜಿಕ ಮತ್ತು ರಾಜನೈತಿಕ ಸಿದ್ಧಾಂತಗಳು ಸಂಪೂರ್ಣವಾಗಿ ಇವನವೇ ಅಲ್ಲ. ಗ್ರೋಷಿಯಸ್ ಮತ್ತು ಹಾಬ್ಸ್ ಅವರ ಅಧ್ಯಯನದಿಂದ ಪ್ರೇರಿತನಾಗಿರುವುದನ್ನು ಹಾಗೂ ಪ್ಯೂಫೆಂಡಾರ್ಫ್, ಲಾಕ್ ಮತ್ತು ಮಾಂಟೆಸ್ಕ್ಯೂ ಅವರ ಸಿದ್ಧಾಂತಗಳಿಂದ ಪ್ರಭಾವಿತನಾಗಿರುವುದನ್ನು ರೂಸೋ ಒಪ್ಪಿಕೊಂಡಿದ್ದಾನೆ. ಅಂದರೆ, ತನ್ನ ಕೃತಿಯಲ್ಲಿ ಇವನು ನಿರೂಪಿಸಿರುವ ಸಿದ್ಧಾಂತಗಳನ್ನು ಇವನೇ ಮೊದಲ ಬಾರಿಗೆ ಸೃಷ್ಟಿಸಲಿಲ್ಲ. ಪ್ರಸಿದ್ಧ ಪ್ರಾಚೀನ ಸಿದ್ಧಾಂತಗಳನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ, ಜನಪ್ರಿಯ ಧಾಟಿಯಲ್ಲಿ, ತರ್ಕಸಮ್ಮತವಾಗಿ ಹೇಳಿದ್ದು ಈತನ ವೈಶಿಷ್ಟ್ಯ. ಒಂದೆಡೆ ಫ್ರಾನ್ಸಿನ ದುಃಸ್ಥಿತಿಯ ಪ್ರತ್ಯಕ್ಷ ಪರಿಚಯ ಇವನಿಗಿತ್ತು. ಇತ್ತ ಜಿನೀವ ನಗರ-ರಾಜ್ಯ ಆದರ್ಶರಾಜ್ಯದ ರೂಪರೇಷೆಗಳನ್ನು ಅವನ ಕಣ್ಣಮುಂದೆ ನಿಲ್ಲಿಸಿದ್ದಿತು. ಹೀಗಾಗಿ ಜನತಾ ಸರ್ಕಾರದ ಸಿಚ್ಛೀ ಕಲ್ಪನೆ ಅನಾಯಾಸವಾಗಿ ಇವನ ಮನಸ್ಸಿನಲ್ಲಿ ಮೂಡಿತು. ಇವನ ಹೇಳಿಕೆಗಳು ನಿರ್ಧಾರಕವಾಗಿರದಿದ್ದರೂ ಬಹು ಸೂಚ್ಯವಾಗಿದ್ದುವು. ತಮ್ಮ

ಈ ವೈಶಿಷ್ಟ್ಯದಿಂದಾಗಿಯೇ ಅವು ಇತಿಹಾಸದ ಜೀವನಾಡಿಗಳಾಗಿ ಪರಿಣಮಿಸಿವೆ. ಅನೇಕ ಚಿಂತಕರ ಚಿಂತನದ ಫಲವಾಗಿ ವಿಚಾರಧಾರೆಗಳು ರೂಪುಗೊಳ್ಳುವುದು ಆಶ್ಚರ್ಯವೇನೂ ಅಲ್ಲ. ಆದರೆ ಅತ್ಯಂತ ಪ್ರಭಾವಶಾಲಿಯಾದ ರಾಜ್ಯಶಾಸ್ತ್ರ ಸಿದ್ಧಾಂತವೊಂದರ ಮೂಲವನ್ನು ಇಷ್ಟೊಂದು ನಿಷ್ಕೃಷ್ಟವಾಗಿ ವ್ಯಕ್ತಿಯೊಬ್ಬನಿಗೆ ಆರೋಪಿಸಿರುವುದು ರಾಜ್ಯಶಾಸ್ತ್ರದ ಇತಿಹಾಸದಲ್ಲಿಯೇ ಅತ್ಯಪೂರ್ವವಾದ ಘಟನೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ರೂಸೋನ ಈ ಚಿಂತನೆಗಳ ಪ್ರಭಾವ ಅಂದು ಎಷ್ಟರಮಟ್ಟಿಗಿದ್ದಿತು ಎಂಬುದನ್ನು ಸ್ಪಷ್ಟಪಡಿಸುವ ಎರಡು ಪ್ರಸಂಗಗಳಿವೆ. ಕಾರ್ಸಿಕ ಮತ್ತು ಪೋಲೆಂಡ್ ದೇಶಗಳಲ್ಲಿ ರಾಜಕೀಯಗೊಂದಲ ತಲೆದೋರಿ, ವಿಷಮಸ್ಥಿತಿ ಏರ್ಪಟ್ಟಿದ್ದಾಗ ಅವು ರೂಸೋನ ಸಲಹೆಯನ್ನು ಬೇಡಿದುವು. ರೂಸೋ ಸುತ್ತಿ ಬಳಸಿ ಗಣತಂತ್ರ ಪಕ್ಷಪಾತಿ ಸಿದ್ಧಾಂತಕ್ಕೆ ಅನುಗುಣವಾದ ಸಲಹೆಯನ್ನೇ ನೀಡಿದ್ದರಿಂದ ಇವನ ಸಲಹೆಗಳನ್ನು ಅವು ಜಾರಿಗೆ ತರಲಾರದೆ ಹೋದುವು. ಆದರೆ ರಾಜನೈತಿಕ ವಿಚಾರಗಳಲ್ಲಿ ಅಧಿಕಾರಿಕವಾಗಿ ಅಭಿಪ್ರಾಯ ನೀಡಬಲ್ಲ ವ್ಯಕ್ತಿ ಎಂಬ ದೃಷ್ಟಿಯಿಂದ ರಾಷ್ಟ್ರಗಳು ಇವನತ್ತ ನೋಡುತ್ತಿದ್ದುವೆಂಬುದು ಇವನ ಮಹತ್ವಕ್ಕೆ ಕುರುಹಾಗಿದೆ. ಧಾರ್ಮಿಕವಲಯ ಇವನ ಎರಡನೆಯ ಪ್ರಬಂಧವನ್ನು ಖಂಡಿಸಿದಂತೆ ಪಟ್ಟಭದ್ರ ಹಿತಗಳೂ ಈ ಕೃತಿಯನ್ನು ಖಂಡಿಸಿದುವು.

ರೂಸೋ ಸಾಮಾಜಿಕ ಒಪ್ಪಂದದಲ್ಲಿ ಹೇಳಿರುವ ಕೆಲವು ವಿಚಾರಗಳು ತುಂಬ ಗಮನಾರ್ಹವಾಗಿವೆ. ಎಲ್ಲ ಸರ್ಕಾರಗಳೂ ಆಳುವವರ ಪ್ರತ್ಯಕ್ಷ ಅಥವಾ ಪರೋಕ್ಷ ಒಪ್ಪಿಗೆಯನ್ನು ಪಡೆದಿರಲೇಬೇಕೆಂಬ ತತ್ತ್ವವನ್ನು ರೂಸೋ ಇದರಲ್ಲಿ ಸಾರಿ ಹೇಳಿದ. ವೈಯಕ್ತಿಕ ಸಂಕಲ್ಪವನ್ನು ಸಾರ್ವಜನಿಕ ಸಂಕಲ್ಪಕ್ಕೆ ಅಧೀನವಾಗಿಸುವುದು ಸಮಾಜದಿಂದ ತನಗೆ ರಕ್ಷಣೆ ದೊರೆಯುತ್ತದೆ ಎಂಬ ಹಾಗೂ ಎಲ್ಲರ ಹಿತದಲ್ಲಿ ತನ್ನ ಹಿತವೂ ಅಡಗಿದೆ ಎಂಬ ನಂಬಿಕೆಯ ಮೇಲೆ. ಆದ್ದರಿಂದ, ಸಾರ್ವಜನಿಕ ಮತದಾನದ ಆಧಾರದ ಮೇಲೆಯೇ ಸರ್ಕಾರದ ಸ್ಥಾಪನೆಯಾಗಬೇಕು ಎಂಬ ಗಣತಂತ್ರ ಸಿದ್ಧಾಂತವನ್ನು ಉದ್ಘೋಷಿಸಿದ ಹಿರಿಮೆ ಈತನದು. ಯಾವುದೇ ಸ್ವತಂತ್ರ, ಎಚ್ಚೆತ್ತ ರಾಷ್ಟ್ರದ ಸಂವಿಧಾನವನ್ನು ತೆಗೆದುಕೊಂಡರೂ 'ಈ ರಾಷ್ಟ್ರದ ಪ್ರಜೆಗಳಾದ ನಾವು' ಎಂಬ ಪದಸಮುದಾಯ ರೂಸೋನ ಪ್ರಭಾವ ಅದರಲ್ಲಿ ಅಡಕವಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ತತ್ತ್ವಗಳನ್ನು ಮಂತ್ರರೂಪದಲ್ಲಿ ಜನತೆಗೆ ನೀಡಿದ ಕೀರ್ತಿ ಈತನದು. ಫ್ರಾನ್ಸಿನ ಮಹಾಕ್ರಾಂತಿಯ ಮೂಲಪುರುಷ ಈತನೇ. ಅಂದು ಫ್ರಾನ್ಸಿನ ಮುಕ್ತಿಯ ಘೋಷವಾಕ್ಯವಾದ ಇವನ ನುಡಿಗಳು ಇಂದು ಸಮಸ್ತ ವಿಶ್ವದ ಸ್ವಾತಂತ್ರ್ಯಪ್ರಿಯ ಜನತೆಯ ದಿವ್ಯಸೂತ್ರಗಳಾಗಿವೆ.

೧೭೬೨ರಲ್ಲಿಯೇ ರೂಸೋ "ಎಮಿಲಿ, ಉ ದ್ ಲೆಜುಕ್ಯಾಸ್ಯೋ" ಎಂಬ

ಕಾದಂಬರಿಯನ್ನೂ ಪ್ರಕಟಿಸಿದ. ಮಕ್ಕಳ ಶಿಕ್ಷಣ ಮನೆಯಲ್ಲಿಯೇ ಎಂಬ ಅಂಶವನ್ನು ಪ್ರತಿಪಾದಿಸಿದ್ದು, ಚರ್ಚಿನಲ್ಲಿ ಹೇಳಿಕೊಡುವ ಧರ್ಮಕ್ಕೆ ಬದಲಾಗಿ ಸ್ವಾಭಾವಿಕವಾದ ಜೀವಂತಧರ್ಮ ಅಥವಾ ಆತ್ಮಸಾಕ್ಷಿಯ ಧರ್ಮವನ್ನು ಅನುಸರಿಸಬೇಕೆಂಬ ಕರೆ ನೀಡಿದ್ದು, ಆಹಾರಪದಾರ್ಥಗಳ ಹಾಗೂ ಆರೋಗ್ಯ, ನೈರ್ಮಲ್ಯಗಳ ಬಗ್ಗೆ ನಾವು ಎಚ್ಚರ ವಹಿಸಬೇಕೆಂಬ ಅರಿವನ್ನು ಮೂಡಿಸಿದ್ದು—ಇವು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಅತ್ಯಂತ ಹೃದ್ಯವಾಗಿ ಮನಃಸ್ಪರ್ಶಿಯಾಗಿ ನಿರೂಪಿತವಾಗಿದ್ದವು. ಮಕ್ಕಳ ಶಿಕ್ಷಣದ ಬಗ್ಗೆ ಈತ ತೋರಿದ ಕಾಳಜಿ ಅಸದೃಶವಾಗಿದೆ. ಪಂಡಿತನಿಷ್ಠ ಮಾರ್ಗವನ್ನು ಬಿಟ್ಟು ಮಕ್ಕಳ ಮಾನಸಿಕ, ದೈಹಿಕ, ಬೌದ್ಧಿಕ ಮತ್ತು ನೈತಿಕ ವಿಕಾಸವನ್ನು ದೃಷ್ಟಿಯಲ್ಲಿಟ್ಟುಕೊಂಡು ಔಚಿತ್ಯವರಿತು ಶಿಕ್ಷಣ ನೀಡಬೇಕೆಂಬ ತತ್ತ್ವವನ್ನು ಸಮರ್ಥವಾಗಿ ಪ್ರತಿಪಾದಿಸಿದ ಕೀರ್ತಿ ಈತನದು. ವಾಸ್ತವವಾಗಿ ತನ್ನ ಮೊದಲ ಪ್ರಬಂಧದಲ್ಲಿಯೇ ಈ ಅಂಶಗಳನ್ನು ಈತ ಸ್ಥೂಲವಾಗಿ ಚರ್ಚಿಸಿದ್ದ. ಸಾಂಪ್ರದಾಯಿಕ ಶಿಕ್ಷಣವು ವೃತ್ತಿಗೆ ಮತ್ತು ವಿಶೇಷ ಅಧ್ಯಯನಕ್ಕೆ ಅತಿಯಾದ ಪ್ರಾಧಾನ್ಯ ನೀಡುತ್ತಿರುವುದರ ಫಲವಾಗಿ, ವಿಶ್ವದಲ್ಲಿ ಎಲ್ಲಿಯೂ ಮಾತನಾಡದಿರುವ ಭಾಷೆಗಳನ್ನೆಲ್ಲ ಕಲಿಯುತ್ತಿದ್ದರೂ ತಮ್ಮ ಮಾತೃಭಾಷೆಯ ಬಗ್ಗೆ ಮಕ್ಕಳಲ್ಲಿ ಅಜ್ಞಾನ ತುಂಬಿ ತುಳುಕುವಂತಾಗಿದೆ: ಮ್ಯಾಗ್ನಾನಿಮಿಟಿ, ಎಕ್ವಿಟಿ, ಟೆಂಪರೆನ್ಸ್, ಹ್ಯುಮ್ಯಾನಿಟಿ, ಕರೇಜ್ ಮೊದಲಾದ ಶಬ್ದಗಳನ್ನು ಅವರು ಬಳಸುತ್ತಿದ್ದರೂ ಅವುಗಳ ಅರ್ಥವೇ ಅವರಿಗೆ ತಿಳಿದಿರುವುದಿಲ್ಲ; ನಮ್ಮಲ್ಲಿ ಇಂದು ಬೇಕಾದಷ್ಟು ಮಂದಿ ಭೌತಶಾಸ್ತ್ರಜ್ಞರಿದ್ದಾರೆ, ರೇಖಾಗಣಿತಶಾಸ್ತ್ರಜ್ಞರಿದ್ದಾರೆ, ರಸಾಯನಶಾಸ್ತ್ರಜ್ಞರಿದ್ದಾರೆ, ಖಗೋಳಶಾಸ್ತ್ರಜ್ಞರಿದ್ದಾರೆ, ಕವಿಗಳಿದ್ದಾರೆ, ಸಂಗೀತಗಾರರಿದ್ದಾರೆ, ವರ್ಣಚಿತ್ರಕಾರರಿದ್ದಾರೆ: ಆದರೆ ನಮ್ಮಲ್ಲಿ ಒಬ್ಬನೇ ಒಬ್ಬ ಪ್ರಜೆಯೂ ಇಲ್ಲ. ಈ ಎಲ್ಲ ಅಭಿಪ್ರಾಯಗಳನ್ನೂ ಹಿಂದೆಯೇ ತನ್ನ ಮೊದಲ ಪ್ರಬಂಧದಲ್ಲಿ ಹೇಳಿದ್ದರೂ ಕಾದಂಬರಿಯ ರೂಪದಲ್ಲಿ ಮನಮುಟ್ಟುವಂತೆ ಹೇಳಿದ್ದು ಈ ಕೃತಿಯ ವೈಶಿಷ್ಟ್ಯ. ಮುಂದೆ, ಫ್ರೊಯೆಬೆಲ್ ಮತ್ತು ಪೆಸ್ಟಲೋಜಿಯಗಳಂಥ ಶಿಕ್ಷಣ ತತ್ತ್ವವೇತ್ತರೂ ಈತನ ಪ್ರಭಾವಕ್ಕೊಳಗಾದರೆಂಬುದು ಈತನ ಪ್ರತಿಭೆಗೆ ಪ್ರಮಾಣ ಸ್ವರೂಪವಾಗಿದೆ. ಇವನು ಅಂದು ಹೇಳಿದ ಮಾತುಗಳು ಇಂದೂ ಅನೇಕ ರಾಷ್ಟ್ರಗಳಿಗೆ ಅನ್ವಯಿಸುತ್ತದೆ.

ಈ ಕೃತಿ ಎಷ್ಟು ಪರಿಣಾಮ ಉಂಟುಮಾಡಿತೆಂದರೆ ಸರ್ಕಾರ ಈತನನ್ನು ಬಂಧಿಸಬೇಕೆಂದು ಆಲೋಚಿಸಿತು. ಈ ಸುಳಿವು ತಿಳಿದ ಕೂಡಲೆ ರೂಸೋ ಲೂಡಾರ್ನಿಗೂ ಮತ್ತೆ ಅಲ್ಲಿಂದ ಮೋತಿಯರ್ಸ್‌ಗೂ ಓಡಿಹೋಗಬೇಕಾಯಿತು. ಇಲ್ಲಿ ಕಲೆಯ ಪ್ರೀಮಿಯರಾಗಿದ್ದ ಫ್ರೆಡ್ರಿಕ್ ಮಹಾಶಯನ ರಕ್ಷೆ ದೊರೆತಿತ್ತು. ೧೭೬೪ರಲ್ಲಿ ಪ್ರಕಟಿಸಿದ 'ಲೆಟರ್ಸ್ ಡಿ ಲಾ ಮಾಂಟೇನ್' ಎಂಬುದರಲ್ಲಿ ಇವನು ತನ್ನ ಟೀಕಾಕಾರರನ್ನು ಖಂಡಿಸಿದ. ಇದರ ಫಲವಾಗಿ ಸ್ವಿಟ್ಸರ್ಲೆಂಡಿನಲ್ಲಿರುವುದು ಅತ್ಯಂತ

ಅಪಾಯಕಾರಿ ಎಂದು ಕಂಡುಬಂದದ್ದರಿಂದ ಇಂಗ್ಲೆಂಡಿಗೆ ಓಡಿಹೋಗಬೇಕಾಯಿತು. ಈ ಎಲ್ಲ ಸಾಹಸಗಳ ಕಷ್ಟಮಯಕಾಲದಲ್ಲಿಯೂ ಥೆರೆಸ್ ಇವನ ನೆರಳಾಗಿಯೇ ಹಿಂಬಾಲಿಸುತ್ತಿದ್ದಳು. ಜೇಮ್ಸ್ ಬಾಸ್‌ವೆಲ್ ಈಕೆಯನ್ನು ಲಂಡನ್ನಿಗೆ ತನ್ನ ಜೊತೆಯಲ್ಲಿ ಸುರಕ್ಷಿತವಾಗಿ ಕೊಂಡೊಯ್ದ. ಪ್ರಸಂಗ ಎಷ್ಟು ಗಂಭೀರವಾಗಿತ್ತು, ಪರಿಸ್ಥಿತಿ ಎಷ್ಟು ಭಯಂಕರವಾಗಿತ್ತೆಂಬುದು ಇದರಿಂದ ಗೊತ್ತಾಗುತ್ತದೆ. ಲಂಡನ್ನಿನಲ್ಲಿ ರಾಜಾಜ್ಞೆಯಂತೆ ಈತನ ಗೌರವಾರ್ಥ ಒಂದು ಸಮಾರಂಭವನ್ನು ನಡೆಸಲಾಯಿತು. ಈ ಹೊಸ ಅತಿಥಿಯ ವಿಚಿತ್ರ ವರ್ತನೆಗಳ ಬಗ್ಗೆ ಲಂಡನ್ನಿನ ಉಪಾಹಾರಗೃಹಗಳಲ್ಲಿ, ಅತಿಥಿ ಕೋಣೆಗಳಲ್ಲಿ ಪಿಸುಮಾತುಗಳು ಕೇಳಿಬರುವಂತಾಗಿದ್ದುದು ಈತ ಎಂಥ ಅಪಾಯವನ್ನು ದಾಟಿಬಂದಿದ್ದನೆಂಬುದಕ್ಕೆ ಉದಾಹರಣೆಯಾಗಿದೆ. ಲಂಡನ್ ರೂಸೋಗೆ ಸಿಂಹಹೃದಯವನ್ನಿತ್ತಿತ್ತು.

ಡೇವಿಡ್ ಹ್ಯೂಮನ ಸಹವಾಸ ದೊರೆತಿದ್ದರೂ ರೂಸೋ ಇಂಗ್ಲೆಂಡಿನ ತನ್ನ ಭೇಟಿಯನ್ನು ಫಲಕಾರಿಯಾಗಿಸಿಕೊಳ್ಳದೆ ಹೋದ. ಜೀವನದಲ್ಲಿ ಎದುರಿಸಿದ ಪರಿಸ್ಥಿತಿಗಳ ಫಲವಾಗಿ ಅನೇಕ ಬಗೆಯ ಭ್ರಮೆಗಳಿಗೊಳಗಾಗಿದ್ದ. ಹಿಂಸೆ ಮತ್ತು ಅಪನಂಬಿಕೆಯ ಭಾವಗಳು ಮನಸ್ಸಿನಲ್ಲಿ ಮನೆಮಾಡಿಕೊಂಡಿದ್ದುವು. ತನ್ನ ಸ್ನೇಹಿತರ ಜೊತೆಯಲ್ಲಿ ಬೆರೆಯುವಾಗಲೂ ಇದೇ ಪ್ರವೃತ್ತಿಯನ್ನು ತೋರತೊಡಗಿದ್ದ. ಆಗ ಹ್ಯೂಮ್ ಈತನನ್ನು ವೊಟ್ಟನ್‌ಗೆ ಕರೆದೊಯ್ದ. ಅಲ್ಲಿಯೇ ಇವನು ಸ್ವಸ್ವೀಕಾರ ಅಥವಾ ' ಕನ್‌ಫೆಷನ್ಸ್ ' ಗ್ರಂಥವನ್ನು ಬರೆಯಲು ಪ್ರಾರಂಭಿಸಿದ್ದು. ಆದರೆ, ಹ್ಯೂಮನೊಂದಿಗೂ ಜಗಳವಾಡಿ ವಿರಸಮಾಡಿಕೊಂಡು ೧೭೬೭ರಲ್ಲಿ ಮತ್ತೆ ಫ್ರಾನ್ಸಿಗೆ ಹಿಂದಿರುಗಿದ. ಪೋಷಕನಿಂದ ಪೋಷಕನ ಬಳಿಗೆ ರೋಣುಗಲ್ಲಿನಂತೆ ಉರುಳುತ್ತಾ ಹೋದ. ೧೭೭೦ರ ಹೊತ್ತಿಗೆ ಮತ್ತೆ ಪ್ಯಾರಿಸಿಗೆ ಹಿಂದಿರುಗಿದ. ಅಲ್ಲಿ ' ಕನ್‌ಫೆಷನ್ಸ್ ', ' ಡೈಯಲಾಗ್ ' ಗ್ರಂಥಗಳನ್ನು ಮುಗಿಸಿ, ' ಪ್ರೊಮೆನ್ನಾಡ್ ದ ಸೊಲಿತೇರ್ ' ಗ್ರಂಥರಚನೆಯನ್ನು ಕೈಗೊಂಡ. ಸಾಹಿತ್ಯ ದೃಷ್ಟಿಯಿಂದ ಇದು ರೂಸೋನ ಅತ್ಯುತ್ಕೃಷ್ಟ ರಚನೆ.

ಈ ಕೆಲವು ವರ್ಷಗಳಲ್ಲಿ ಚಿತ್ತಶಾಂತಿಯೂ ಲಭಿಸಿತ್ತು. ೧೭೭೮ರಲ್ಲಿ ಮತ್ತೊಬ್ಬ ಶ್ರೀಮಂತ ಎರ್‌ಮೆನೋನಿಲ್‌ನಲ್ಲಿದ್ದ ತನ್ನ ಒಂದು ಮನೆಯನ್ನು ಬಿಟ್ಟುಕೊಟ್ಟ. ಅಲ್ಲಿ ಬಹುಶಃ ತನ್ನ ಜೀವನದ ಕೊನೆಯ ದಿನಗಳನ್ನು ಶಾಂತಿಯಿಂದ ಕಳೆಯಬಹುದಾಗಿತ್ತು. ಆದರೆ ವಿಧಿ ಇವನನ್ನು ಕೊನೆಯಲ್ಲಿ ಕಾಡಿದ ಪರಿ ಅತ್ಯಂತ ದಾರುಣರೀತಿಯದಾಗಿತ್ತು. ಅದುವರೆಗೆ ವಿಧೇಯಳಾಗಿದ್ದ ಪತ್ನಿ ಥೆರೆಸ್ ಬಹಿರಂಗವಾಗಿ ಕುದುರೆ ಲಾಯದ ಹುಡುಗನೊಂದಿಗೆ ಪ್ರಣಯವ್ಯವಹಾರ ನಡೆಸಿ ಇವನ ಮನಸ್ಸಿಗೆ ಅಸಹ್ಯ ಆಘಾತವನ್ನುಂಟುಮಾಡಿದಳು. ಥೆರೆಸ್ ಹೀಗೆ ದ್ರೋಹ ಬಗೆದಾದ ಜಗತ್ತೇ ತನ್ನ ವಿರುದ್ಧವಾಗಿ ಬಂಡಾಯವೆದ್ದಿದೆ ಎನ್ನುವ ಭಾವ ಮನಸ್ಸಿನಲ್ಲಿ ಬೇರೂರಿ ಇವನು ಹುಚ್ಚನಂತಾದ. ಜುಲೈ ೨, ೧೭೭೮ರಂದು ಇವನ

ಹೆಣ ದೊರೆತಾಗ, ಅದರ ಮುಖ ನೀಲಿಗಟ್ಟಿಹೋಗಿತ್ತು, ಊದಿಕೊಂಡಿತ್ತು. ಆತ್ಮಹತ್ಯೆ ಮಾಡಿಕೊಂಡಿದ್ದನೋ ಅಥವಾ ಮೂರ್ಛೆಹೋದಾಗ ಆದ ಪೆಟ್ಟಿನಿಂದ ಸತ್ತಿದ್ದನೋ ಎಂಬ ಅಂಶವನ್ನು ವೈದ್ಯರು ನಿರ್ಣಾಯಕವಾಗಿ ಹೇಳಲಾರದೆ ಹೋದರು.

ವಿಶ್ವದ ಸುಧಾರಕರಲ್ಲಿಯೇ ಅಪೂರ್ವ ವ್ಯಕ್ತಿಯಾಗಿದ್ದ ರೂಸೋನ ಅಂತ್ಯ ಈ ರೀತಿ ಆಯಿತು. ತನ್ನ ಕಾಲದಲ್ಲಿ ಅಧಿಕಾರಾರೂಢವಾಗಿದ್ದ ಸರ್ಕಾರ, 'ಬಹುಜನ ಹಿತಾಯ' ಕಾರ್ಯನಿರತವಾಗಿಲ್ಲ ಎಂದು ಘೋಷಿಸಲು ಇವನಂಥ ವ್ಯಕ್ತಿಯೇ ಬೇಕಾಗಿತ್ತು. ಲಾರ್ಡ್ ಮಾರ್ಲಿ ಹೇಳಿರುವಂತೆ "ಬೇರಾರಿಗಿಂತಲೂ ಹೆಚ್ಚಾಗಿ ರೂಸೋ ಫ್ರಾನ್ಸನ್ನು ರವಸ್ಥಿತಿಯಿಂದ ಉದ್ಧರಿಸಲು ಕಾರಣನಾದ."

ರೂಸೋ ಆಧುನಿಕ ಸಾಹಿತ್ಯದ ವಸ್ತು ಮತ್ತು ಶೈಲಿಯ ಮೇಲೆ ಪ್ರಭಾವ ಬೀರಿದ್ದಾನೆ: ಆಧುನಿಕ ಅಸ್ತಿತ್ವವಾದವನ್ನಲ್ಲದಿದ್ದರೂ ರೊಮ್ಯಾಂಟಿಕ್ ಕಾಲದ ಮೂಲವನ್ನು ರೂಸೋನಲ್ಲಿ ಗುರುತಿಸಬಹುದು ಎಂಬುದು ವಿಮರ್ಶಕರ ಅಭಿಪ್ರಾಯ.

ವೈಜ್ಞಾನಿಕ ವಿಧಾನವನ್ನು ಅತಿಯಾಗಿ ಹಿಂಜಿದ್ದು ಈತನ ಚಿಂತನೆಗಳಲ್ಲಿ ದೋಷಕ್ಕೆಡೆಗೊಟ್ಟಿತು. ಮಾನವಸಮುಕ್ಯಗಳ ಕೆಲವು ಮುಖಗಳನ್ನಾದರೂ ವೈಜ್ಞಾನಿಕ ವಿಧಾನದ ತನ್ನುಯುಕ್ತೆ ಹೊರತಾಗಿಸಬೇಕಾಗಿತ್ತು. ಮಾನವನ ಸಹಜ ಸ್ವಾತಂತ್ರ್ಯವನ್ನು ತನ್ನ ರಾಜನೈತಿಕ ಸಿದ್ಧಾಂತದ ಬೆನ್ನೆಲುಬಾಗಿಸಿಕೊಂಡಿದ್ದರಿಂದ ರೂಸೋ ಲಕ್ಷ್ಯಗಳನ್ನು ನಿರ್ಧರಿಸುವ ವಿಚಾರಕ್ಕೆ ಹೆಚ್ಚಿನ ಮಹತ್ವವನ್ನು ಕೊಡಬೇಕಾಯಿತು. ಮಾನವ ಸಹಜಸ್ಥಿತಿಗೆ ಹೋಲಿಕೆ ನೀಡುವುದರ ಹೊರತು, ಈತ ಬೇರಾವ ರೀತಿಯಿಂದಲೂ ರಾಜನೈತಿಕ ಹಕ್ಕಿನ ದೃಷ್ಟಿಯಲ್ಲಿ ಆ ಲಕ್ಷ್ಯಗಳನ್ನು ವಿವರಿಸಲಾರದೆ ಹೋದ. ಈ ಕೆಲವು ಈತನ ಚಿಂತನವಿಧಾನದ ದೋಷಗಳು ಎಂದು ಹೇಳಲಾಗಿದೆ. ಆಂತರಿಕವಾದ ಈ ದೋಷಗಳು ಇದ್ದಾಗ್ಯೂ ಈತನ ಕೃತಿಗಳು ತಮ್ಮ ಗುಣಾಧಿಕ್ಯದಿಂದ ರಾಜ್ಯಶಾಸ್ತ್ರ ಇತಿಹಾಸದಲ್ಲಿ, ಸಾಹಿತ್ಯೇತಿಹಾಸದಲ್ಲಿ ಮತ್ತು ವಿಶ್ವ ಇತಿಹಾಸದಲ್ಲಿ ಚಿರಕಾಲ ಬಾಳುವಂಥ ಕೃತಿಗಳಾಗಿವೆ. ರೂಸೋ ತನ್ನ ಕೃತಿಗಳನ್ನು ಒಮ್ಮೆ ಈ ರೀತಿ ವಿವರಿಸಿದ್ದ: "ಅವು ವ್ಯಕ್ತಿಯ ಏಕಾಂತ ಚಿಂತನದ ಫಲ. ಅವುಗಳನ್ನು ದೀರ್ಘಕಾಲ ಅಧ್ಯಯನ ಮಾಡಬೇಕು..... ಅವುಗಳಲ್ಲಿ ಅಡಕವಾಗಿರುವ ಚಿಂತನೆಗಳ ಧಾಟಿಯನ್ನು ಅನುಸರಿಸಬೇಕಾದರೆ ಪ್ರಯತ್ನಪೂರ್ವಕವಾಗಿ ಮತ್ತೆ ಮತ್ತೆ ಅವುಗಳನ್ನು ಅಧ್ಯಯನ ಮಾಡಬೇಕು." ವ್ಯಕ್ತಿಗಳು ಮಾತ್ರವಲ್ಲದೆ, ರಾಷ್ಟ್ರಗಳೂ ಪ್ರತಿಯೊಂದು ತಲೆಮಾರಿನಲ್ಲಿಯೂ ಮತ್ತೆ ಮತ್ತೆ ರೂಸೋನ ಕೃತಿಗಳ ಅಧ್ಯಯನ ನಡೆಸುವಂತಾಗಿರುವುದು ಆ ಕೃತಿಗಳ ಜೀವಾಳಕ್ಕೂ ಕರ್ತೃವಿನ ಜ್ವಲಂತ ಪ್ರತಿಭೆಗೂ ನಿದರ್ಶನವಾಗಿದೆ.

ಡಾ. ಅಬ್ದುಲ್ ಅಜೀಜ್

ಭಾರತದ ವ್ಯವಸ್ಥಿತ ಕೈಗಾರಿಕಾ ಕ್ಷೇತ್ರದಲ್ಲಿ ಸರ್ಕಾರಿ ವೇತನ ನಿರ್ಣಯ

ದೇಶದಲ್ಲಿ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸುವುದರಿಂದ ಸರ್ಕಾರವೂ ಈಚೆಗೆ ಒಂದು ದೊಡ್ಡ ಉದ್ಯಮಿಯಾಗಿ ಪರಿಣಮಿಸಿದೆ. ವೇತನವೂ ಕೈಗಾರಿಕೆಯ ವೆಚ್ಚದ ಒಂದು ಅಂಶವಾದ ಕಾರಣ ಉದ್ಯಮಿಯಾದವನು ಅದನ್ನು ಕಡಿಮೆ ಪ್ರಮಾಣದಲ್ಲಿಡಲು ಪ್ರಯತ್ನಮಾಡುವುದುಂಟು. ಸರ್ಕಾರವೂ ಉದ್ಯಮಿಯಾದ ಕಾರಣ ಅದೂ ವೇತನದ ವಿಷಯದಲ್ಲಿ ಈ ಭಾವನೆಯನ್ನಿಡುವುದು ಸಹಜವೆ. ಆದರೆ ಖಾಸಗಿ ಉದ್ಯಮಿಗಳಂತೆ ಸರ್ಕಾರ ನಡೆದುಕೊಳ್ಳುವಂತಿಲ್ಲ. ಏಕೆಂದರೆ ಅದರ ಬಾಧ್ಯತೆಗಳು ಬೇರೆ. ಸುಖೀ ರಾಜ್ಯದಲ್ಲಿ ಕಾರ್ಮಿಕರ ಮತ್ತು ಇತರ ಪಂಗಡಗಳ ಕ್ಷೇಮ ಸಾಧಿಸುವುದು ಸರ್ಕಾರದ ಕರ್ತವ್ಯವಾದ್ದರಿಂದ ವೇತನ ಅತಿ ಕಡಿಮೆ ಪ್ರಮಾಣದಲ್ಲಿರದಂತೆ ಅದು ನೋಡಿಕೊಳ್ಳುವುದು ಅವಶ್ಯ. ಆದರೆ ಅದು ಅತಿ ಹೆಚ್ಚು ಪ್ರಮಾಣದ್ದಾಗಿರದಂತೆ ನೋಡಿಕೊಳ್ಳುವುದೂ ಸರ್ಕಾರದ ಕರ್ತವ್ಯವೇ. ಏಕೆಂದರೆ, ವೇತನದಿಂದ ಉತ್ಪಾದನ ವೆಚ್ಚ ಅಧಿಕವಾಗಿ ಬೆಲೆಗಳ ಏರಿಕೆ ಸಂಭವಿಸಬಹುದು. ಸರ್ಕಾರ ಆರ್ಥಿಕ ಅಭ್ಯುದಯವನ್ನು ಯೋಜನೆಗಳ ಮೂಲಕ ವೃದ್ಧಿಗೊಳಿಸುತ್ತಿರುವ ಕಾರಣ ವೇತನಧೋರಣೆಯನ್ನು ಯೋಜನೆಯ ಧ್ಯೇಯಗಳಿಗೆ ಹೊಂದಿಕೊಳ್ಳುವಂತೆ ರೂಪಿಸಬೇಕಾಗುತ್ತದೆ. ನಮ್ಮ ಪಂಚವಾರ್ಷಿಕ ಯೋಜನೆಗಳ ಮುಖ್ಯಧ್ಯೇಯ ಆರ್ಥಿಕ ಬೆಳವಣಿಗೆ ಹಾಗೂ ಬೆಲೆಗಳ ನಿಯಂತ್ರಣ. ಈ ಎರಡೂ ಧ್ಯೇಯಗಳನ್ನು ಸಾಧಿಸಬೇಕಾದರೆ ಮೊದಲು ಒಂದು ವರಮಾನ ನೀತಿಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಭಾರತದ ರಿಸರ್ವ್ ಬ್ಯಾಂಕಿನ ಆಯೋಗವೊಂದು ವರಮಾನ ಧೋರಣೆಯ ಕೆಲವು ಅಂಶಗಳನ್ನು ವಿವೇಚಿಸಿ ಈಚೆಗೆ ಒಂದು ವರದಿ ಒಪ್ಪಿಸಿತು.[1] ಸರ್ಕಾರ ಈ ಬಗ್ಗೆ ಯಾವ ರೀತಿಯ

---

[1] *Cf. Report on a Framework for Incomes and Prices Policy*, Bombay ; Reserve Bank of India, 1967.

ತೀರ್ಮಾನಕ್ಕೆ ಬರದಿರುವ ಕಾರಣ ಸರ್ಕಾರೀ ದೃಷ್ಟಿಯು ವರಮಾನ ನೀತಿ ಏನೆಂಬುದು ತಿಳಿದುಬಂದಿಲ್ಲ.

ಆದರೂ ಮೊದಲನೆಯ ಪಂಚವಾರ್ಷಿಕ ಯೋಜನೆಯ ಕಾಲದಿಂದಲೂ ಸರ್ಕಾರ ವೇತನ ಧೋರಣೆಯನ್ನು ಸ್ಪಷ್ಟಪಡಿಸಿರುವುದರಿಂದ ವೇತನ ನಿರ್ಣಯದಲ್ಲಿ ಸರ್ಕಾರದ ಧ್ಯೇಯವೇನೆಂಬುದು ಸ್ಥೂಲವಾಗಿ ತಿಳಿದುಬರುತ್ತದೆ. ಪಂಚವಾರ್ಷಿಕ ಯೋಜನೆಗಳ ವರದಿಗಳಲ್ಲಿ ಸ್ಪಷ್ಟಪಡಿಸಿರುವಂತೆ ಸರ್ಕಾರದ ವೇತನ ಧೋರಣೆಯ ಧ್ಯೇಯಗಳು ಮೂರು :

(೧) ಪ್ರತಿ ಕಾರ್ಮಿಕನಿಗೂ ಯುಕ್ತವಾದ ಕನಿಷ್ಠವೇತನ ಕೊಡತಕ್ಕದ್ದು.

(೨) ಕಾರ್ಮಿಕರ ವೇತನವನ್ನು ಬೆಲೆ ಮತ್ತು ಉತ್ಪತ್ತಿ ಸಾಮರ್ಥ್ಯ ಮಟ್ಟಗಳ ಏರುಪೇರುಗಳಿಗನುಗುಣವಾಗಿ ಕ್ರಮಪಡಿಸತಕ್ಕದ್ದು.

(೩) ಪ್ರತಿ ಕಾರ್ಮಿಕನ ವೇತನವನ್ನೂ ಅವನ ಕೆಲಸದ ಅಗತ್ಯಗಳಾದ ಕೌಶಲ, ಅನುಭವ ಇತ್ಯಾದಿಗಳಿಗೆ ಅನುಗುಣವಾಗಿ ನಿರ್ಣಯಿಸತಕ್ಕದ್ದು.[1]

ವೇತನ ನಿರ್ಣಯ ಕಾರ್ಯಕರ್ತೃಗಳು

ಈ ಧ್ಯೇಯಗಳನ್ನು ಸಾಧಿಸುವ ದೃಷ್ಟಿಯಿಂದ ಸರ್ಕಾರ ವೇತನ ನಿರ್ಣಯದ ಕಾರ್ಯಕರ್ತೃಗಳನ್ನು ನಿಯಮಿಸಿದೆ. ಕೈಗಾರಿಕಾ ಕ್ಷೇತ್ರವನ್ನು ವ್ಯವಸ್ಥಿತ ಮತ್ತು ಅವ್ಯವಸ್ಥಿತ ಕ್ಷೇತ್ರಗಳೆಂಬುದಾಗಿ ವಿಭಾಗಿಸಿ ಪ್ರತಿ ಕ್ಷೇತ್ರಕ್ಕೂ ಹೊಂದಿಕೊಳ್ಳುವಂಥ ವೇತನ ನಿರ್ಣಯದ ಕಾರ್ಯಕರ್ತೃಗಳನ್ನು ನಿಯಮಿಸಲಾಗಿದೆ. ಅವ್ಯವಸ್ಥಿತ ಕ್ಷೇತ್ರದಲ್ಲಿನ ಕಾರ್ಮಿಕರಲ್ಲಿ ವ್ಯವಸ್ಥೆಯಿಲ್ಲ. ವೇತನ ಮತ್ತಿತರ ಉದ್ಯೋಗದ ಕರಾರುಗಳು ತೃಪ್ತಿಕರವಾಗಿಲ್ಲ. ಆದಕಾರಣ ಭಾರತ ಸರ್ಕಾರ ೧೯೪೮ರಲ್ಲಿ ಕನಿಷ್ಠ ವೇತನ ಕಾಯಿದೆಯನ್ನು ಮಂಜೂರುಮಾಡಿತು. ಈ ಕಾಯಿದೆಯ ಪ್ರಕಾರ ಕಾರ್ಮಿಕರ ವಿಷಯದಲ್ಲಿ ಕನಿಷ್ಠವೇತನ ನಿರ್ಣಯಮಾಡಬೇಕೆಂದು ಪ್ರತಿ ರಾಜ್ಯ ಸರ್ಕಾರಕ್ಕೂ ಆದೇಶ ಕೊಡಲಾಯಿತು. ಅದರಂತೆ ರಾಜ್ಯ ಸರ್ಕಾರಗಳೂ ಕನಿಷ್ಠ ವೇತನ ಕಾಯಿದೆಗಳನ್ನು ತಮ್ಮ ತಮ್ಮ ರಾಜ್ಯಗಳಲ್ಲಿ ಮಂಜೂರುಮಾಡಿ, ಸ್ವೇದನದವೆಂದು(ಸ್ವೆಟಿಂಗ್) ಪ್ರಕಟಿಸಲಾದ ಉದ್ಯಮಗಳಲ್ಲಿ ಕನಿಷ್ಠವೇತನವನ್ನು ನಿರ್ಣಯಿಸುವ ಕಾರ್ಯಕ್ರಮ ಕೈಗೊಂಡಿವೆ. ವ್ಯವಸ್ಥಿತ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಸ್ಥಾಪಿತವಾದ ವೇತನ ನಿರ್ಣಯ ಕಾರ್ಯಕರ್ತೃಗಳು ಎರಡು : (೧) ೧೯೪೭ರ ಕೈಗಾರಿಕಾ ವಿವಾದ ಕಾಯಿದೆಯ ಪ್ರಕಾರ ಕೈಗಾರಿಕಾ ಟ್ರೈಬ್ಯೂನಲ್‌ಗಳನ್ನು ನಿಯಮಿಸಲಾಯಿತು. ಈ ಟ್ರೈಬ್ಯೂನಲ್‌ಗಳು ವೇತನ ಮತ್ತಿತರ

[1] Planning Commission: *The First Five Year Plan*, New Delhi: Govt. of India, 1951, pp. 583–4.

ವಿಷಯುಗಳಿಗೆ ಸಂಬಂಧಪಟ್ಟ ವಿವಾದಗಳನ್ನು ತೀರ್ಮಾನಿಸುವ ಕಾರ್ಯಕರ್ತೃಗಳೇ ಹೊರತು ವೇತನ ನಿರ್ಣಯದ ಕಾರ್ಯಕರ್ತೃಗಳಲ್ಲ. ಆದರೂ ಇವು ವೇತನದ ತಗಾದೆ ವಿಷಯದಲ್ಲಿ ತೀರ್ಮಾನ ಕೊಡುವ ಸಂದರ್ಭದಲ್ಲಿ ವೇತನದ ನಿರ್ಧಾರಯಕ ಗಳನ್ನು ತಮ್ಮ ತೀರ್ಮಾನಕ್ಕೆ ಆಧಾರವಾಗಿಟ್ಟುಕೊಳ್ಳುವ ಕಾರಣ ಇಲ್ಲಿ ವೇತನ ನಿರ್ಣಯದ ಪರಿಚಯು ನಮಗಾಗುತ್ತದೆ. (೨) ಮೊದಲನೆಯ ಪಂಚವಾರ್ಷಿಕ ಯೋಜನೆಯ ವರದಿಯ ಮೇರೆಗೆ ೧೯೫೭ರಿಂದೀಚೆಗೆ ಸರ್ಕಾರ ೨೨ ವೇತನ ಮಂಡಳಿಗಳನ್ನು ನಿಯಮಿಸಿ ವ್ಯವಸ್ಥಿತ ಕೈಗಾರಿಕಾ ಕ್ಷೇತ್ರದಲ್ಲಿ ವೇತನ ನಿರ್ಣಯಕ್ಕೆ ಅವಕಾಶಮಾಡಿಕೊಟ್ಟಿದೆ. ವೇತನನಿರ್ಣಯದಲ್ಲಿ ಇವುಗಳ ಪಾತ್ರ ಇತ್ತೀಚೆಗೆ ವೃದ್ಧಿಗೊಳ್ಳುತ್ತಿದೆ.

ನಮ್ಮ ಅಧ್ಯಯನ ವ್ಯವಸ್ಥಿತ ಕೈಗಾರಿಕೆಗಳಲ್ಲಿ ವೇತನ ನಿರ್ಣಯಕ್ಕೆ ಸಂಬಂಧ ಪಟ್ಟದ್ದರಿಂದ ಈ ಲೇಖನದಲ್ಲಿ ವೇತನ ಕಾರ್ಯಕರ್ತೃಗಳಾದ ಕೈಗಾರಿಕಾ ಟ್ರಿಬ್ಯೂ ನಲ್ ಮತ್ತು ವೇತನ ಮಂಡಳಿಗಳ ಪಾತ್ರವನ್ನು ವಿವೇಚಿಸಲಾಗಿದೆ. ಈ ಕಾರ್ಯ ಕರ್ತೃಗಳು ವೇತನದ ನಿರ್ಣಯದಲ್ಲಿ ಅನುಸರಿಸುವ ತತ್ತ್ವಗಳು ಮತ್ತು ಈ ತತ್ತ್ವ ಗಳ ಆಧಾರದ ಮೇಲೆ ವೇತನ ನಿರ್ಣಯದಿಂದ ವೇತನರಚನೆಯ ಮೇಲಾಗುವ ಪರಿಣಾಮ—ಈ ವಿಷಯುಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಕನಿಷ್ಠವೇತನ ನಿರ್ಣಯ

ಕಾರ್ಮಿಕರಲ್ಲೂ ಉದ್ಯಮಿಗಳಲ್ಲೂ ಪರಸ್ಪರ ಸಂಧಾನವನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸರ್ಕಾರ ವ್ಯವಸ್ಥಿತ ಕೈಗಾರಿಕೆಗಳಿಗೆ ಸಂಬಂಧಪಟ್ಟ ಕನಿಷ್ಠ ವೇತನದ ವಿಷಯದಲ್ಲಿ ಕಾಯಿದೆ ಹೊರಡಿಸಲಿಲ್ಲ. ಆದಕಾರಣ ಕನಿಷ್ಠವೇತನ ನಿರ್ಣಯದಲ್ಲಿ ಸರ್ಕಾರದ ನಿರ್ಧಾರಯಕಗಳಿಲ್ಲ. ಕನಿಷ್ಠವೇತನ ಕಾಯಿದೆ ಸ್ವೇದನ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಕನಿಷ್ಠವೇತನ ನಿರ್ಣಯಕ್ಕೆ ಅನುಕೂಲ ಮಾಡಿ ಕೊಟ್ಟಿದ್ದರೂ ಇಲ್ಲಿ ಅನುಸರಿಸಬೇಕಾದ ವೇತನ ನಿರ್ಧಾರಯಕಗಳನ್ನು ಕೊಟ್ಟಿಲ್ಲ. ಆದ್ದರಿಂದ ವೇತನ ನಿರ್ಧಾರಯಕಗಳನ್ನು ವೇತನ ನಿರ್ಣಯಿಸುವ ಕಾರ್ಯ ಕರ್ತೃಗಳೇ ಯೋಜಿಸಬೇಕಾಗಿ ಬಂತು. ಆದರೆ ಇವು ಸಾಮಾನ್ಯವಾಗಿ ನ್ಯಾಯ ಸಮ್ಮತ ವೇತನಮಂಡಳಿ ಯೋಜಿಸಿದ[1] ವೇತನ ನಿರ್ಧಾರಯಕಗಳನ್ನು ಅನುಸರಿಸಿ ಅವುಗಳ ಆಧಾರದ ಮೇಲೆ ವೇತನ ನಿರ್ಣಯ ಕಾರ್ಯಕ್ರಮವನ್ನು ಕೈಗೊಂಡಿವೆ.

ಕೈಗಾರಿಕಾ ಟ್ರಿಬ್ಯೂನಲ್‌ಗಳು ಎರಡು ಬಗೆಯ ಕನಿಷ್ಠವೇತನಗಳನ್ನು ನಿರ್ಣಯಿಸಿವೆ. (೧) ಮೂಲ ಕನಿಷ್ಠವೇತನ ಮತ್ತು (೨) ನ್ಯಾಯಸಮ್ಮತ ಕನಿಷ್ಠವೇತನ. ಮೂಲ-ಕನಿಷ್ಠವೇತನವನ್ನು ನ್ಯಾಯಸಮ್ಮತ ವೇತನಮಂಡಲಿಯ

[1] *Cf. Report of The Committee on Fair Wages*, New Delhi : Government of India, 1958

ಕನಿಷ್ಠವೇತನದ ನಿರೂಪಣೆಯ ಆಧಾರದ ಮೇಲೆ ನಿರ್ಣಯಿಸಲಾಗಿದೆ. ಈ ಮಂಡಳಿ ಕನಿಷ್ಠವೇತನವನ್ನು ಹೀಗೆ ನಿರೂಪಿಸಿದೆ: ಕನಿಷ್ಠವೇತನ ಜೀವನ ನಿರ್ವಹಣೆಗೆ ಸಾಕಷ್ಟು ಒದಗಿಸುವುದಲ್ಲದೆ ವಿದ್ಯಾಭ್ಯಾಸ, ಆರೋಗ್ಯ ಮೊದಲಾದ ಸೌಲಭ್ಯಗಳನ್ನೂ ಒದಗಿಸುವಂಥದಾಗಿರಬೇಕು.[1] ಈ ಕನಿಷ್ಠವೇತನವನ್ನು ಪಾವತಿ ಮಾಡುವ ಸಾಮರ್ಥ್ಯ ಉದ್ಯಮಕ್ಕೆ ಇರಲಿ ಇಲ್ಲದಿರಲಿ, ಕೊಟ್ಟೇತೀರಬೇಕೆಂದು ಮದರಾಸಿನ ಬಕಿಂಗ್ಹ್ಯಾಮ್ ಮತ್ತು ಕರ್ನಾಟಿಕ್ ಮಿಲ್ಲಿಗೆ ಸಂಬಂಧಪಟ್ಟ ವಿವಾದವೊಂದರಲ್ಲಿ ಕಾರ್ಮಿಕರ ಅಪೀಲಿನ ಟ್ರಿಬ್ಯೂನಲ್ ಪುಷ್ಟೀಕರಿಸಿತು.[2] ಈ ತೀರ್ಪು ಇತರ ಟ್ರಿಬ್ಯೂನಲ್‌ಗಳ ಮೇಲೆ ಹೆಚ್ಚು ಪರಿಣಾಮ ಬೀರಿತು. ಆದ್ದರಿಂದ ಈಗ ಮೂಲವೇತನದ ನಿರ್ಣಯಮಾಡುವಾಗ ಕೈಗಾರಿಕೆ ಅಥವಾ ಸಂಸ್ಥೆಯ ಪಾವತಿಯ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳುವುದು ಅನವಶ್ಯವೆಂಬುದಾಗಿ ಎಲ್ಲರೂ ಒಪ್ಪಿಕೊಂಡಾಗಿದೆ.[3] ನ್ಯಾಯಸಮ್ಮತ ಕನಿಷ್ಠವೇತನದ ನಿರ್ಣಯದಲ್ಲೂ ಟ್ರಿಬ್ಯೂನಲ್‌ಗಳು ನ್ಯಾಯಸಮ್ಮತ ವೇತನಮಂಡಳಿಯ ನಿರೂಪಣೆಯನ್ನು ಅನುಸರಿಸಿಕೊಂಡಿವೆ. ಈ ಮಂಡಳಿ ನ್ಯಾಯಸಮ್ಮತ ವೇತನವನ್ನು ಎರಡು ಮಿತಿಗಳ ರೂಪದಲ್ಲಿ ನಿರೂಪಿಸಿದೆ. ನ್ಯಾಯಸಮ್ಮತ ವೇತನದ ಕನಿಷ್ಠಮಿತಿ ಮೇಲೆ ಹೇಳಿದ ಕನಿಷ್ಠವೇತನವಾಗಿರಬೇಕೆಂದೂ ಕೈಗಾರಿಕೆಯ ಪಾವತಿ ಸಾಮರ್ಥ್ಯವೇ ಇದರ ಗರಿಷ್ಠಮಿತಿಯನ್ನು ನಿರ್ಣಯಿಸಬೇಕೆಂದೂ ಅಭಿಪ್ರಾಯಪಡಲಾಯಿತು. ನ್ಯಾಯಸಮ್ಮತ ವೇತನವನ್ನು ಈ ಎರಡು ಮಿತಿಗಳೊಳಗೆ—ಕಾರ್ಮಿಕರ ಉತ್ಪಾದನ ಸಾಮರ್ಥ್ಯ, ಅದೇ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ವೇತನ, ಮೊದಲಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು—ನಿರ್ಣಯಿಸಬೇಕೆಂದೂ ಸಲಹೆಕೊಡಲಾಯಿತು.[4] ಅದರಂತೆ ಟ್ರಿಬ್ಯೂನಲ್‌ಗಳು ನ್ಯಾಯಸಮ್ಮತ ಕನಿಷ್ಠವೇತನದ ನಿರ್ಣಯದಲ್ಲಿ ಈ ನಿರ್ಣಾಯಕಗಳನ್ನು ಗಮನದಲ್ಲಿಟ್ಟುಕೊಂಡಿವೆ.

ಕನಿಷ್ಠವೇತನ ೧೯೫೭ರಲ್ಲಿ ನಡೆದ ೧೫ನೆಯ ಕಾರ್ಮಿಕರ ಸಮ್ಮೇಳನದಲ್ಲಿ ಸಲಹೆಮಾಡಿದ ಹಾಗೆ ಅಗತ್ಯ-ಆಧಾರಿತ ವೇತನ[5]ವಾಗಿರಬೇಕೆಂಬುದನ್ನು ವೇತನ ಮಂಡಳಿಗಳು ತಾತ್ತ್ವಿಕವಾಗಿ ಒಪ್ಪಿಕೊಂಡರೂ ಇದನ್ನು ಕಾರ್ಯರೂಪಕ್ಕೆ ತರುವುದು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟವು.

---

[1] *Ibid., P. 8*

[2] *Labour Law Journal*, 1951, Vol. II, P. 314

[3] Labour Bureau, *Industrial Awards in India,* New Delhi: Government of India, 1959, P. 29

[4] *Report of the Committee on Fair Wages,* Op. Cit., P. 10

[5] *Cf. Report of the 15th Session on The Indian Labour Conference,* New Delhi; Govt. of India, 1957

ಅಗತ್ಯ—ಆಧಾರಿತ ಕನಿಷ್ಠ ವೇತನ ಕೈಗಾರಿಗಳ ಪಾವತಿ ಸಾಮರ್ಥ್ಯಕ್ಕಿಂತ ಮಿಗಾರುವು ದಲ್ಲದೆ ಇದರಿಂದ ಬಳಕೆದಾರನ ಮೇಲೆ ಹೆಚ್ಚು ಭಾರ ಬೀಳುವುದು ಖಂಡಿತ,[1] ಎಂಬುದು ಅವುಗಳ ಅಭಿಪ್ರಾಯ. ಆದ್ದರಿಂದ ವೇತನಮಂಡಳಿಗಳು ನ್ಯಾಯ ಸಮ್ಮತ ಕನಿಷ್ಠ ವೇತನ ನಿರ್ಣಯಿಸುವುದರಲ್ಲಿ ಮುಗ್ನವಾದುವು. ಇಲ್ಲಿ ನ್ಯಾಯ ಸಮ್ಮತ ವೇತನಮಂಡಳಿಯ ಸಲಹೆಯಂತೆ ಕೈಗಾರಿಕೆಯ ಪಾವತಿ ಸಾಮರ್ಥ್ಯ ಮತ್ತು ಚಾಲ್ತಿಯಲ್ಲಿರುವ ವೇತನದರಗಳಂಥ ನಿರ್ಣಾಯಕಗಳನ್ನು ಗಣನೆಗೆ ತೆಗೆದುಕೊಳ್ಳಲಾಯಿತು. ಆದರೆ ಇತರ ನಿರ್ಣಾಯಕಗಳಾದ ಕಾರ್ಮಿಕರ ಉತ್ಪಾದನ ಸಾಮರ್ಥ್ಯ, ಕೈಗಾರಿಕೆಯ ಆವಶ್ಯಕತೆ ಇತ್ಯಾದಿಗಳನ್ನು ಸಾಮಾನ್ಯ ರೀತಿಯಲ್ಲಿ ಪರಿಗಣಿಸಲಾಯಿತು.[2]

ವೇತನಗಳ ಅಂತರದ ನಿರ್ಣಯ

ಕೆಳದರ್ಜೆ ಕಾರ್ಮಿಕನ ವೇತನ ನಿರ್ಣಯವಾದ ಅನಂತರ ಮೇಲ್ದರ್ಜೆ ಕಾರ್ಮಿಕರ ವೇತನ ನಿರ್ಣಯದ ಪ್ರಶ್ನೆ ಸ್ವಾಭಾವಿಕವಾಗಿಯೇ ಏಳುತ್ತದೆ. ಇಲ್ಲಿ ವಿವಿಧ ದರ್ಜೆಗಳ ಕಾರ್ಮಿಕರ ವೇತನದ ಅಂತರ ಎಷ್ಟಿರಬೇಕೆಂಬುದು ಒಂದು ಮುಖ್ಯ ವಾದ ಪ್ರಶ್ನೆ. ಏಕೆಂದರೆ ಕಾರ್ಮಿಕರಲ್ಲಿ ಕೌಶಲ ಸಂಪಾದನೆಗೆ ಪ್ರೇರೇಪಣೆ ಈ ಅಂತರವನ್ನೂ ಅವಲಂಬಿಸಿದೆ. ಅಲ್ಲದೆ ವೇತನವನ್ನು ಕಾರ್ಮಿಕರ ಉತ್ಪಾದನ ಸಾಮರ್ಥ್ಯಕ್ಕನುಗುಣವಾಗಿ ನಿರ್ಣಯಿಸಬೇಕಾದರೆ ಬಹುಳ ಮಟ್ಟಿಗೆ ವೇತನಗಳ ಅಂತರವನ್ನು ಕ್ರಮಪಡಿಸುವುದರಿಂದಲೇ ಸಾಧ್ಯ. ಕೆಲಸದ ಆವಶ್ಯಕಗಳಾದ ಕೌಶಲ, ತರಬೇತು, ಅನುಭವ, ಜವಾಬ್ದಾರಿ ಇತ್ಯಾದಿಗಳನ್ನೆ ವೇತನಗಳ ಅಂತರ ಅವಲಂಬಿಸಬೇಕೆಂದು ನ್ಯಾಯಸಮ್ಮತ ವೇತನಮಂಡಳಿ ಸಲಹೆಕೊಟ್ಟಿದೆ.[3] ಮೊದಲನೆಯ ಪಂಚವಾರ್ಷಿಕ ಯೋಜನೆಯ ವರದಿಯೂ ಈ ಅಭಿಪ್ರಾಯವನ್ನು ಅನುಮೋದಿಸಿತು.[4] ವೇತನ ನಿರ್ಣಯದ ಕಾರ್ಯಕರ್ತೃಗಳು ಈ ಅಭಿಪ್ರಾಯ ವನ್ನು ಒಪ್ಪಿಕೊಂಡಿದ್ದಾರೆ.

ಕೈಗಾರಿಕಾ ಟ್ರೈಬ್ಯೂನಲ್‌ಗಳು ಮೇಲಿನ ನಿರ್ಣಾಯಕಗಳನ್ನು ಒಪ್ಪಿ ಕೊಂಡರೂ ವೇತನಗಳ ಅಂತರವನ್ನು ನಿರ್ಣಯಿಸುವುದರಲ್ಲಿ ಎರಡು ವಿಧಾನ

---

[1] National Commission on Labour, *Report of the Functioning of the System of Wage Baards,* New Delhi ; Govt. of India, 1968, pp. 25–26

[2] *Ibid., P. 28*

[3] *Report of the Committee on Fair Wages,* Op. Cit., pp. 19–20

[4] *The First Five–Year Plan,* Op. Cit., P. 584

ಗಳನ್ನು ಅನುಸರಿಸಿವೆ. ಒಂದನೆಯದಾಗಿ, ಕೆಲವು ಟ್ರೈಬ್ಯೂನಲ್‌ಗಳು ಕೆಳದರ್ಜೆ ಕಾರ್ಮಿಕರ ವೇತನವನ್ನು ನಿರ್ಣಯಿಸಿ ಉಳಿದ ಕಾರ್ಮಿಕರ ವೇತನವನ್ನು ಕಾರ್ಮಿಕರು ಮತ್ತು ಉದ್ಯಮಿಗಳಿಗೇ ಬಿಟ್ಟುಕೊಟ್ಟಿವೆ. ಈ ಸಮಸ್ಯೆ ತಾಂತ್ರಿಕ ವಾದದ್ದು. ಆದ್ದರಿಂದ ಇದನ್ನು ತಾಂತ್ರಿಕ ನಿಪುಣರಿಗೆ ವಹಿಸತಕ್ಕದ್ದು ಎಂಬುದು ಅವುಗಳ ಅಭಿಪ್ರಾಯ. ಎರಡನೆಯದಾಗಿ, ಉಳಿದ ಟ್ರೈಬ್ಯೂನಲ್‌ಗಳು ಕಾರ್ಮಿಕ ರನ್ನು ಕುಶಲ, ಅರೆಕುಶಲ ಮತ್ತು ಅಕುಶಲ ಕಾರ್ಮಿಕರೆಂದು ವಿಂಗಡಿಸಿ ಈ ಪಂಗಡಗಳಿಗೆ ಬೇರೆ ಬೇರೆ ವೇತನ ದರಗಳನ್ನು ನಿರ್ಣಯಿಸಿವೆ.[1]

ವೇತನ ಮಂಡಳಿಗಳು ಈ ಸಮಸ್ಯೆಯನ್ನು ಕೂಲಂಕಷವಾಗಿಯೇ ಅಧ್ಯಯನ ಮಾಡಿವೆ. ಆದರೆ ವೇತನಗಳ ಅಂತರ ನಿರ್ಣಯದಲ್ಲಿ ಅವು ಏಕರೀತಿಯ ವಿಧಾನ ಅನುಸರಿಸಿಲ್ಲ. ಒಂದು ಕಡೆ ಹತ್ತಿಗಿರಣಿ ಕೈಗಾರಿಕೆಯ ವೇತನಮಂಡಳಿ ಕೆಳದರ್ಜೆ ಕಾರ್ಮಿಕರ ವೇತನವನ್ನು ನಿರ್ಣಯಿಸಿ ಉಳಿದವರ ವೇತನವನ್ನು ಉದ್ಯಮಿಗಳೇ ನಿರ್ಣಯಿಸಲೆಂದು ಬಿಟ್ಟುಕೊಟ್ಟಿದೆ. ಇನ್ನೊಂದು ಕಡೆ ಸಕ್ಕರೆ ಕೈಗಾರಿಕೆಯ ವೇತನಮಂಡಳಿ ಕೆಲಸದ ಆವಶ್ಯಕಗಳ ಮೌಲ್ಯ ಕಟ್ಟುವಿಕೆಯ ವಿಧಾನದ ಮೂಲಕ ನ್ಯಾಯಸಮ್ಮತವಾದ ವೇತನ ರಚನೆಯನ್ನು ಸೃಷ್ಟಿಸಿ ವಿವಿಧ ಕಾರ್ಮಿಕ ಪಂಗಡಗಳಿಗೆ ವೇತನಶ್ರೇಣಿಗಳನ್ನು ಸಲಹೆಮಾಡಿದೆ. ಉಳಿದ ಮಂಡಳಿ ಗಳು ಪ್ರಚಲಿತ ವೇತನಗಳ ಅಂತರಗಳನ್ನು ಆಧಾರವಾಗಿಟ್ಟುಕೊಂಡು ವೇತನಗಳ ಅಂತರವನ್ನು ನಿರ್ಣಯಿಸಿವೆ.[2]

ವೇತನ ಕ್ರಮಪಡಿಸುವಿಕೆ

ಕಾರ್ಮಿಕನ ಅಗತ್ಯಗಳು, ಕೈಗಾರಿಕೆಯ ಪಾವತಿಸಾಮರ್ಥ್ಯ ಮತ್ತಿತರ ನಿರ್ಧಾರಯಕಗಳ ಆಧಾರದ ಮೇಲೆ ನಿರ್ಣಯಿಸಲಾದ ವೇತನವನ್ನು ಬೆಲೆಗಳ ಮತ್ತು ಉತ್ಪಾದನ ಸಾಮರ್ಥ್ಯಗಳ ಬದಲಾವಣೆಗಳಿಗನುಗುಣವಾಗಿ ಕ್ರಮಪಡಿಸ ಬೇಕಾಗುತ್ತದೆ. ಬೆಲೆಗಳ ಮಟ್ಟವನ್ನು ನಿಯಂತ್ರಿಸಬೇಕಾದರೆ ಇತರ ಸೂಕ್ತ ಕಾರ್ಯಕ್ರಮಗಳ ಜೊತೆಗೆ ವೇತನವನ್ನು ಉತ್ಪಾದನ ಸಾಮರ್ಥ್ಯಕ್ಕನುಗುಣವಾಗಿ ಕ್ರಮಪಡಿಸಬೇಕೆಂಬ ಅಭಿಪ್ರಾಯ ಬೆಳೆದುಬಂದಿದೆ. ಆದರೆ ಇದಕ್ಕಾಗಿ ಯಾವುದೇ ಸಾಧನವನ್ನೂ ಸೃಷ್ಟಿಸಿಲ್ಲವಾದ್ದರಿಂದ ಭಾರತದಲ್ಲಿ ವೇತನ ಕ್ರಮಪಡಿಸುವಿಕೆ ಯೆಂದರೆ ಬೆಲೆಗಳ ಬದಲಾವಣೆಗನುಗುಣವಾಗಿ ವೇತನವನ್ನು ಕ್ರಮಪಡಿಸುವುದು ಮಾತ್ರ ಎಂದಾಗಿದೆ. ಅಲ್ಲದೆ ಬೇರೆ ದೇಶಗಳಲ್ಲಿನ ಹಾಗೆ ಬೆಲೆಗಳು ಬದಲಾಯಿಸಿದಂತೆ

---

[1] *Industrial Awards in India*, Op. Cit., P. 36

[2] *Vide Report on the Functioniug of the System of Wage Boards*, Op. Cit.

ಭಾರತದಲ್ಲಿ ಪೂರ್ಣ ವೇತನ ಮೊತ್ತವೂ ಬದಲಾವಣೆ ಹೊಂದುವುದಿಲ್ಲ. ಅದಕ್ಕೆ ಬದಲಾಗಿ ಬೆಲೆಗಳು ಏರಿದಂತೆ ಅದಕ್ಕೆ ತಕ್ಕ ಪರಿಹಾರ ಕೊಡುವ ದೃಷ್ಟಿಯಿಂದ ತುಟ್ಟಿಭತ್ಯವೆಂಬ ಒಂದು ವೇತನ ವಿಭಾಗವನ್ನು ಸೃಷ್ಟಿಸಲಾಗಿದೆ. ಬೆಲೆಗಳು ಬದಲಾವಣೆ ಹೊಂದದಂತೆ ತುಟ್ಟಿಭತ್ಯವನ್ನು ಕ್ರಮಪಡಿಸಲಾಗುತ್ತದೆ.

ಆದರೆ ಇದಕ್ಕೂ ಯಾವರೀತಿಯ ನಿರ್ಣಾಯಕಗಳೂ ಇಲ್ಲ. ಕನಿಷ್ಠವೇತನ ಕಾಯಿದೆ ಇದನ್ನು ಬೆಲೆಗಳಿಗನುಗುಣವಾಗಿ ಕ್ರಮಪಡಿಸಬೇಕೆಂದು ಹೇಳಿದೆಯೇ ಹೊರತು ಇಲ್ಲಿ ಅನುಸರಿಸಬೇಕಾದ ತತ್ತ್ವಗಳಾವುವು ಎಂಬದನ್ನು ಹೇಳಿಲ್ಲ. ನ್ಯಾಯಸಮ್ಮತ ವೇತನಮಂಡಳಿ ಬೆಲೆಗಳ ಏರಿಕೆಯಿಂದಾಗುವ ನಷ್ಟಕ್ಕೆ ಕೆಳದರ್ಜೆಯ ಕಾರ್ಮಿಕನಿಗೆ ಪೂರ್ಣ ಪರಿಹಾರವನ್ನೂ ಉಳಿದವರಿಗೆ ಕಡಮೆ ಪರಿಹಾರವನ್ನೂ ಕೊಡಬೇಕೆಂದು ಮಾತ್ರ ಹೇಳಿದೆ. ಇದರಲ್ಲಿ ನಿರ್ಣಾಯಕಗಳ ವಿಷಯವೇ ಇಲ್ಲ. ಆದಕಾರಣ ವೇತನ ಕ್ರಮಪಡಿಸುವಿಕೆಯನ್ನು ಕಾರ್ಮಿಕ ಮತ್ತು ಉದ್ಯಮಿಗಳಿಗೂ, ವೇತನನಿರ್ಣಯ ಕಾರ್ಯಕರ್ತೃಗಳಿಗೂ ಬಿಟ್ಟು ಕೊಟ್ಟಂತಾಯಿತು.

ಕೈಗಾರಿಕಾ ಟ್ರೈಬ್ಯೂನಲ್‌ಗಳ ತೀರ್ಪುಗಳ ಅಧ್ಯಯನದಿಂದ ಎರಡು ಬಗೆಯ ಪರಿಹಾರ ಪದ್ಧತಿಗಳು ಗಮನಕ್ಕೆ ಬರುತ್ತವೆ : (೧) ಜೀವನ ವೆಚ್ಚದ ಸೂಚ್ಯಂಕಕ್ಕೆ ಅನುಗುಣವಾಗಿ ತುಟ್ಟಿಭತ್ಯದ ರೂಪದಲ್ಲಿ ಪರಿಹಾರ ನೀಡುವುದು. (೨) ತುಟ್ಟಿ ಭತ್ಯ ಈ ಸೂಚ್ಯಂಕಕ್ಕೆ ಸಂಬಂಧಕವಾಗದೆ ಇರುವುದು.[1] ಮೊದಲನೆಯ ಪದ್ಧತಿಯಲ್ಲಿ ಎಲ್ಲ ವರ್ಗಗಳ ಕೆಲಸಗಾರರೂ ಒಂದೇ ದರದಲ್ಲಿ ತುಟ್ಟಿಭತ್ಯ ಪಡೆಯುತ್ತಾರೆ. ಎರಡನೆಯ ಪದ್ಧತಿ ಜಾರಿಯಲ್ಲಿರುವ ಕಡೆ ತಾರತಮ್ಯಾನುಗುಣವಾದ ಶ್ರೇಣಿಯಲ್ಲಿ ಮೂಲವೇತನದ ಆಧಾರದ ಮೇಲೆ ತುಟ್ಟಿಭತ್ಯವನ್ನು ಕೊಡಲಾಗುತ್ತದೆ.

ಎಲ್ಲ ವೇತನಮಂಡಳಿಗಳೂ ತುಟ್ಟಿಭತ್ಯಕ್ಕೂ ಜೀವನವೆಚ್ಚದ ಸೂಚ್ಯಂಕಕ್ಕೂ ಸಂಬಂಧ ಕಲ್ಪಿಸಿವೆ. ಆದರೆ ಈ ಸಂಬಂಧಕ ವಿಧಾನ ಒಂದೇ ರೀತಿಯಾಗಿಲ್ಲ. ಉದಾಹರಣೆಗೆ ಹತ್ತಿಗಿರಣಿ ವೇತನಮಂಡಳಿ ಸೂಚ್ಯಂಕದ ಪ್ರತಿಬಿಂದುವಿಗೂ ತುಟ್ಟಿಭತ್ಯವನ್ನು ಕ್ರಮಪಡಿಸಬೇಕೆಂದರೆ, ಉಳಿದ ಮಂಡಳಿಗಳು ಸೂಚ್ಯಂಕದ ಶ್ರೇಣಿಗಳನ್ನು ಗೊತ್ತುಪಡಿಸಿ, ಸೂಚ್ಯಂಕ ಈ ಶ್ರೇಣಿಯಿಂದ ಮುಂದೆ ಹೋಗದಿದ್ದ ಪಕ್ಷದಲ್ಲಿ ತುಟ್ಟಿಭತ್ಯವನ್ನು ಕ್ರಮಪಡಿಸುವ ಆವಶ್ಯಕತೆಯಿಲ್ಲವೆಂಬುದಾಗಿ ಅಭಿಪ್ರಾಯಪಟ್ಟಿವೆ.[2]

ವೇತನ ನಿರ್ಣಯದ ವಿಮರ್ಶಾತ್ಮಕ ಅವಲೋಕನ

ಮೇಲಿನ ವಿವೇಚನೆಯಲ್ಲಿ ಟ್ರೈಬ್ಯೂನಲ್‌ಗಳು ಮತ್ತು ವೇತನ ಮಂಡಳಿಗಳು

---

[1] *Industrial Awards In India*, Op. Cit., P. 29

[2] *Report on the Functioning of the System of Wage Boards*, Op. Cit., pp. 32–33

ಕನಿಷ್ಠ ವೇತನ, ವೇತನದ ಅಂತರ ಮತ್ತು ವೇತನ ಹೊಂದಾಣಿಕೆಗಳ ವಿಚಾರದಲ್ಲಿ ಅನುಸರಿಸಲಾದ ನಿರ್ಣಾಯಕಗಳನ್ನು ಕುರಿತು ಹೇಳಿದ್ದಾಗಿದೆ: ಈ ನಿರ್ಣಾಯಕಗಳನ್ನು ವೇತನ ರಚನೆಯಲ್ಲಿ ಕೇಂದ್ರಾಭಿಗಾಮಿ ಮತ್ತು ಕೇಂದ್ರಾಪಗಾಮಿ ಪ್ರೇರಣೆಗಳನ್ನು ಆಚರಣೆಗೆ ತರುವಂಥವೆಂದು ವಿಭಾಗಿಸಬಹುದು. ಕೇಂದ್ರಾಪಗಾಮಿ ಪ್ರೇರಣೆಯನ್ನು ತರುವಂಥ ನಿರ್ಣಾಯಕಗಳನ್ನು ಮಾತ್ರ ವೇತನ ನಿರ್ಣಯದಲ್ಲಿ ಅನುಸರಿಸಿಕೊಂಡಿದ್ದ ಪಕ್ಷದಲ್ಲಿ ಕಾರ್ಮಿಕ ಮಾರುಕಟ್ಟೆಯಲ್ಲಿನ ಸಂಬಂಧಿತ ವೇತನ ದರಗಳು ಒಂದರಿಂದ ಒಂದು ದೂರ ಸರಿದುಹೋಗುತ್ತವೆ. ಆದರೆ ಈ ನಿರ್ಣಾಯಕಗಳು ಕೇಂದ್ರಾಭಿಗಾಮಿ ಪ್ರೇರಣೆಯನ್ನು ಉತ್ತೇಜಿಸುವಂಥವಿದ್ದ ಪಕ್ಷದಲ್ಲಿ ಸಂಬಂಧಿತ ವೇತನ ದರಗಳು ಒಂದರಿಂದ ಒಂದು ಹತ್ತಿರಕ್ಕೆ ಸರಿದು ವೇತನದ ಏಕರೂಪತೆಯನ್ನು ಸ್ಥಾಪಿಸುವುವು. ಎರಡೂ ರೀತಿಯ ನಿರ್ಣಾಯಕಗಳನ್ನು ವೇತನ ನಿರ್ಣಯದಲ್ಲಿ ಅನುಸರಿಸಿಕೊಂಡ ಪಕ್ಷದಲ್ಲಿ ವೇತನರಚನೆಯ ಸ್ವರೂಪ ಯಾವ ಬಗೆಯ ನಿರ್ಣಾಯಕಗಳು ಬಲವಾಗಿ ಕಾರ್ಯರೂಪಕ್ಕೆ ಬರುತ್ತವೆಯೆಂಬುದನ್ನೆ ಅವಲಂಬಿಸಿದೆ.

ವೇತನ ನಿರ್ಣಯದ ಕಾರ್ಯಕರ್ತೃಗಳು ಕನಿಷ್ಠ ವೇತನದ ಎರಡು ಭಾವನೆಗಳಾದ ಮೂಲಕನಿಷ್ಠ ವೇತನ ಮತ್ತು ನ್ಯಾಯಸಮ್ಮತ ಕನಿಷ್ಠ ವೇತನಗಳನ್ನು ಅನುಸರಿಸಿರುವುದರಿಂದ ಕನಿಷ್ಠ ವೇತನದ ನಿರ್ಣಯದಲ್ಲಿ ವಿವಿಧ ನಿರ್ಣಾಯಕಗಳನ್ನು ಅನುಸರಿಸಬೇಕಾಯಿತು. ಹೀಗಾಗಿ, ಮೂಲಕನಿಷ್ಠ ವೇತನದಲ್ಲಿ ಕಾರ್ಮಿಕನ ಆವಶ್ಯಕತೆಗಳೇ ಮೂಲಭೂತವಾದ ನಿರ್ಣಾಯಕವಾದರೆ ಕನಿಷ್ಠ ವೇತನದಲ್ಲಿ ಕಾರ್ಮಿಕನ ಆವಶ್ಯಕತೆಗಳು ಅದರ ಕೆಳಮಟ್ಟವೂ ಪಾವತಿ ಸಾಮರ್ಥ್ಯವೇ ಮುಂತಾದ ನಿರ್ಣಾಯಕಗಳು ಅದರ ಮೇಲ್ಮಟ್ಟವೂ ಆಗಿದ್ದು, ಈ ವ್ಯಾಪ್ತಿಯಲ್ಲಿ ಅದನ್ನು ನಿರ್ಣಯಿಸಲಾಗುವುದು. ಈ ಕಾರಣದಿಂದ ವೇತನರಚನೆಯಲ್ಲಿ ಕೇಂದ್ರಾಪಗಾಮಿ ಪ್ರೇರಣೆಯನ್ನು ಉತ್ತೇಜಿಸಿದಂತಾಗುತ್ತದೆ. ಹೇಗೆಂದರೆ, ಒಂದು ಪ್ರದೇಶದಲ್ಲಿ ನ್ಯಾಯಸಮ್ಮತ ಕನಿಷ್ಠ ವೇತನವನ್ನು ನಿರ್ಣಯಿಸಬೇಕೆಂದಿಟ್ಟುಕೊಳ್ಳೋಣ. ಈ ಪ್ರದೇಶದಲ್ಲಿ ಒಂದು ಕೈಗಾರಿಕೆಯ ಕೆಲವು ಸಂಸ್ಥೆಗಳ ಪಾವತಿ ಸಾಮರ್ಥ್ಯ ಅಧಿಕ ಕನಿಷ್ಠ ವೇತನ ಕೊಡಲು ಅನುಕೂಲವಾಗಿದೆಯೆಂದಿಟ್ಟುಕೊಳ್ಳೋಣ. ಆಗ ಆ ಪ್ರದೇಶದಲ್ಲಿನ ಒಂದೇ ಕೈಗಾರಿಕೆಯಲ್ಲಿ ಎರಡು ಬಗೆಯ ಸಂಸ್ಥೆಗಳಿದ್ದಹಾಗಾಯಿತು: (೧) ಕಾರ್ಮಿಕನ ಆವಶ್ಯಕತೆಗಳ ಆಧಾರದ ಮೇಲೆ ನಿರ್ಣಯವಾಗುವ ಕನಿಷ್ಠ ವೇತನ ಕೊಡುವಂಥವು ಮತ್ತು (೨) ಅಧಿಕ ಪಾವತಿ ಸಾಮರ್ಥ್ಯವಿದ್ದು ಮೊದಲ ಪಂಗಡದ ಸಂಸ್ಥೆಗಳಿಗಿಂತ ಅಧಿಕ ಕನಿಷ್ಠ ವೇತನ ಕೊಡುವಂಥವು. ಪಾವತಿ ಸಾಮರ್ಥ್ಯ ಸಂಸ್ಥೆಯಿಂದ ಸಂಸ್ಥೆಗೆ ಬೇರೆಯಾಗಿರುವ ಕಾರಣ ನ್ಯಾಯಸಮ್ಮತ ವೇತನ ನಿರ್ಣಯಮಾಡಿದ ಸಂಸ್ಥೆಗಳಲ್ಲಿ ವೇತನದ ಅಂತರ ಕಂಡುಬರುವುದು ಸಹಜವೆ. ಕೇವಲ ಕಾರ್ಮಿಕನ ಆವಶ್ಯಕತೆಗಳ ಆಧಾರದ ಮೇಲೆ ಕನಿಷ್ಠ

ವೇತನವನ್ನೇ ಎಲ್ಲಾ ಸಂಸ್ಥೆಗಳಲ್ಲೂ ನಿರ್ಣಯಿಸಿದ ಪಕ್ಷದಲ್ಲಿ ಕನಿಷ್ಠ ವೇತನ ಇಲ್ಲಿ ಏಕರೂಪವಾಗಿರುವ ಸಂಭವವುಂಟು. ಆದರೆ ಕಾರ್ಮಿಕನ ಆವಶ್ಯಕತೆಗಳನ್ನು ಗೊತ್ತುಪಡಿಸುವಾಗ ವೇತನ ಕಾರ್ಯಕರ್ತೃಗಳು ವಿವಿಧ ಮಾದರಿಗಳನ್ನು ಅನುಸರಿಸಿದ ಕಾರಣ ಇಲ್ಲೂ ಕನಿಷ್ಠವೇತನ ಏಕರೂಪದ್ದಾಗಿರುವ ಸಂಭವ ಕಡಿಮೆ. ಒಟ್ಟಿನಲ್ಲಿ ಕನಿಷ್ಠವೇತನ ನಿರ್ಣಯದ ಅಧ್ಯಯನದಿಂದ ನಮಗೆ ತಿಳಿದುಬರುವ ಅಂಶವೇನೆಂದರೆ: ಎಲ್ಲ ಸಂಸ್ಥೆಗಳಲ್ಲೂ ಒಂದೇ ಕನಿಷ್ಠವೇತನ ನಿರ್ಣಯವಾಗುವ ಸಂಭವಕ್ಕೆ ಬದಲಾಗಿ ಒಂದೊಂದು ಸಂಸ್ಥೆಗೂ ಒಂದೊಂದು ಕನಿಷ್ಠವೇತನ ನಿರ್ಣಯವಾಗುವ ಸಂಭವ ಹೆಚ್ಚಾಯಿತು—ಎಂಬುದು.

ಕೈಗಾರಿಕಾ ಟ್ರೈಬ್ಯೂನಲ್‌ಗಳು ವೇತನದ ಅಂತರದ ನಿರ್ಣಯದಲ್ಲಿ ಹೆಚ್ಚಿನ ಆಸಕ್ತಿ ವಹಿಸದ ಕಾರಣ ವೇತನಮಂಡಳಿಗಳ ಮೇಲೆ ಈ ಜವಾಬ್ದಾರಿ ಅಧಿಕವಾಗಿ ಬೀಳುವಂತಾಯಿತು. ವೇತನ ಮಂಡಳಿಗಳೇನೊ ಈ ಸಮಸ್ಯೆಯ ವಿಷಯದಲ್ಲಿ ಆಸಕ್ತಿ ವಹಿಸಿವೆ. ಆದರೆ ಸಕ್ಕರೆ ಕೈಗಾರಿಕೆಯ ವೇತನ ಮಂಡಳಿಯನ್ನುಳಿದು ಎಲ್ಲ ಮಂಡಳಿಗಳೂ ಪ್ರಚಲಿತ ವೇತನ ಅಂತರವನ್ನು ಒಪ್ಪಿಕೊಂಡಿವೆ. ಪ್ರಚಲಿತ ವೇತನ ಅಂತರ ಶಾಸ್ತ್ರೀಯವಾಗಿ ನಿರ್ಣಯವಾಗದಿರುವುದರಿಂದ ವೇತನ ಮಂಡಳಿಗಳು ಈ ಸಮಸ್ಯೆಯ ವಿಷಯದಲ್ಲಿ ನ್ಯಾಯಸಮ್ಮತ ವೇತನಮಂಡಳಿ ಹಾಕಿಕೊಟ್ಟ ನಿರ್ಣಾಯಕಗಳನ್ನು ಕಡೆಗಣಿಸುವಂತಾಯಿತು. ಅಲ್ಲದೆ ಟ್ರೈಬ್ಯೂನಲ್‌ಗಳು ಮತ್ತು ವೇತನ ಮಂಡಳಿಗಳು ಉಪಯೋಗಿಸಿರುವ ವೇತನ ಹೊಂದಾಣಿಕೆ ಪದ್ಧತಿಯಿಂದಾಗಿ ವೇತನಗಳ ಅಂತರ ಮತ್ತೂ ವಿರೂಪಗೊಳ್ಳುವ ಸಂಭವವಿದೆ. ಈ ಕಾರ್ಯಕರ್ತೃಗಳು ವೇತನ ಕ್ರಮಪಡಿಸುವ ಎರಡು ಬಗೆಯ ಪದ್ಧತಿಗಳನ್ನು ಉಪಯೋಗಿಸಿವೆ: (೧) ವಿವಿಧ ಪಂಗಡಗಳ ಕಾರ್ಮಿಕರಿಗೆ ತಾರತಮ್ಯಾನುಸಾರ ಶ್ರೇಣಿಯ ತುಟ್ಟಿಭತ್ಯವನ್ನು ನಿರ್ಣಯಿಸಿರುವುದು ಅಥವಾ (೨) ಎಲ್ಲ ಪಂಗಡಗಳ ಕಾರ್ಮಿಕರಿಗೂ ಏಕರೀತಿಯ ತುಟ್ಟಿಭತ್ಯ ಕೊಟ್ಟಿರುವುದು. ಮೊದಲನೆಯ ಪದ್ಧತಿಯಲ್ಲಿ ಮೂಲವೇತನಕ್ಕನುಗುಣವಾಗಿ ತುಟ್ಟಿಭತ್ಯವನ್ನು ನಿಗದಿಪಡಿಸಿದ್ದ ಪಕ್ಷದಲ್ಲಿ ಪ್ರಚಲಿತ ವೇತನ ಅಂತರವನ್ನು ಉಳಿಸಿಕೊಂಡು ಬಂದ ಹಾಗಾಗುತ್ತದೆ. ಆದರೆ ಮೇಲ್ದರ್ಜೆಯ ಕಾರ್ಮಿಕರಿಗೆ ಕಡಿಮೆ ಪರಿಹಾರ ಕೊಡುವುದು ಈ ಕಾರ್ಯಕರ್ತೃಗಳ ಧೋರಣೆಯಾಗಿದ್ದ ಕಾರಣ ವೇತನದ ಅಂತರ ಕಡಿಮೆ ಆಗುವ ಸಂಭವವಿದೆ. ವೇತನಗಳ ಅಂತರ ಕಡಿಮೆಗೊಳ್ಳುವ ಈ ಕಾರ್ಯಗತಿ ಮತ್ತೂ ತ್ವರೆಪಡುವ ಸಂಭವ ಎರಡನೆ ಪದ್ಧತಿಯ ಪರಿಹಾರಕ್ರಮವನ್ನು ಅನುಸರಿಸುವುದರಲ್ಲಿದೆ. ಏಕೆಂದರೆ ಇಲ್ಲಿ ಎಲ್ಲ ದರ್ಜೆಯ ಕಾರ್ಮಿಕರಿಗೂ ಒಂದೇ ತರದ ತುಟ್ಟಿಭತ್ಯ ಕೊಟ್ಟರೂ ಮೇಲ್ದರ್ಜೆಯ ಕಾರ್ಮಿಕರಿಗೆ ಮೂಲವೇತನಕ್ಕನುಗುಣವಾದ ತುಟ್ಟಿಭತ್ಯ ಕೊಟ್ಟಂತಾಗುವುದಿಲ್ಲ. ಅವರ ಮೂಲವೇತನಕ್ಕೆ ಹೋಲಿಸಿದರೆ ತುಟ್ಟಿಭತ್ಯ ಕಡಿಮೆಯೆನಿಸುತ್ತದೆ. ಎಂದಮೇಲೆ ಈ ಕಾರ್ಯಕರ್ತೃಗಳ ವೇತನ ಹೊಂದಾಣಿಕೆಯ

ಧೋರಣೆ ವೇತನಗಳ ಅಂತರವನ್ನು ಕಡಿಮೆಗೊಳಿಸುವಂಥದೆಂದಾಯಿತು. ಈ ಪ್ರವೃತ್ತಿಯನ್ನು ಯೋಗ್ಯವಾದ ಅಂತರವನ್ನು ಸ್ಥಾಪಿಸುವ ದೃಷ್ಟಿಯಿಂದ ಉಪಕ್ರಮಿಸಿದ್ದೇ ಆದರೆ ಇದು ಸ್ವಾಗತಾರ್ಹವಾದದ್ದು. ಆದರೆ ಟ್ರೈಬ್ಯೂನಲ್‌ಗಳಾಗಲಿ ವೇತನಮಂಡಳಿಗಳಾಗಲಿ ಎಲ್ಲಿಯೂ ಈ ವಿಷಯವನ್ನು ಒತ್ತಿ ಹೇಳದೆ ಇರುವ ಕಾರಣ ವೇತನಗಳ ಅಂತರ ಕಡಿಮೆಗೊಳ್ಳುತ್ತಿರುವುದು ಒಳ್ಳೆಯ ದೃಷ್ಟಿಯಿಂದಲೇ ಎಂಬ ವಾದವನ್ನು ಒಪ್ಪುವುದು ಕಷ್ಟವಾಗುತ್ತದೆ.

ವೇತನದ ಹೊಂದಾಣಿಕೆಯ ಸಂಬಂಧದಲ್ಲಿ ವೇತನ ಕಾರ್ಯಕರ್ತೃಗಳು ವೇತನವು ಕಾರ್ಮಿಕರ ಉತ್ಪಾದನ ಸಾಮರ್ಥ್ಯಕ್ಕೆ ಸಂಬಂಧಕವಾಗಿರುವಂತೆ ಮಾಡುವುದರಲ್ಲಿ ಅಸಮರ್ಥವಾಗಿವೆ. ಒಂದು ಸೂಕ್ತವಾದ ಉತ್ಪಾದನಾನುಗುಣ ವೇತನಪದ್ಧತಿಯನ್ನು ಯಾವ ರೀತಿ ಎಲ್ಲ ಬಗೆಯ ಕಾರ್ಖಾನೆಗಳಿಗೂ ಅನ್ವಯಿಸಬಹುದೆಂಬುದನ್ನು ತಿಳಿಸುವಂತೆ ವೇತನಮಂಡಳಿಗಳನ್ನು ಕೋರಲಾಗಿತ್ತು. ಆದರೆ ವೇತನಮಂಡಳಿಗಳು ಇದನ್ನು ಗಮನಕ್ಕೆ ತಂದುಕೊಂಡ ಹಾಗೆ ತೋರುತ್ತಿಲ್ಲ. ವೇತನವನ್ನು ಉತ್ಪಾದನ ಸಾಮರ್ಥ್ಯಕ್ಕೆ ಸಂಬಂಧಪಡೆದಿರುವಂತೆ ಮಾಡಲು ಯಾವಾಗ ಸಾಧ್ಯವಿಲ್ಲವಾಯಿತೊ ಆಗ ವರ್ಧಿಷ್ಣುವಾದ ಯಥಾವತ್ತು ವೇತನವನ್ನು ಕಾರ್ಮಿಕರಿಗೆ ಕೊಡುವಂಥ ಒಂದು ಸಂಯೋಜನೆಯನ್ನು ಕಳೆದುಕೊಂಡಂತಾಯಿತು. ಅಲ್ಲದೆ ಬೆಲೆಗಳ ಏರಿಕೆಗಾಗಿ ಕೊಡುವ ಪರಿಹಾರವೂ ಪೂರ್ಣವಲ್ಲ. ಆದಕಾರಣ ಬೆಲೆಗಳು ಏರಿದಂತೆ ಪ್ರಚಲಿತ ನಿಜವೇತನವೂ ವಾಸ್ತವವಾಗಿ ಕಡಿಮೆಯಾಗುವುದೇ ಹೊರತು ಏರುವ ಸಂಭವವಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ, ಕೈಗಾರಿಕಾ ಟ್ರೈಬ್ಯೂನಲ್‌ಗಳೂ ವೇತನಮಂಡಳಿಗಳೂ ಅನುಸರಿಸಿರುವ ನಿರ್ಣಾಯಕಗಳು ವೇತನವನ್ನು ಬೆಲೆಗಳ ಹಾಗೂ ಕಾರ್ಮಿಕರ ಉತ್ಪಾದನ ಸಾಮರ್ಥ್ಯದ ಬದಲಾವಣೆಗಳಿಗನುಗುಣವಾಗಿ ಕೊಡುವಂಥ ಸಂಯೋಜನೆಯನ್ನು ರಚಿಸುವಂಥವಾಗಿಲ್ಲ. ವೇತನ ನಿರ್ಣಯದ ಕಾರ್ಯಕರ್ತೃಗಳು ನ್ಯಾಯಸಮ್ಮತವಾದ ನಿರ್ಣಾಯಕಗಳ ಆಧಾರದ ಮೇಲೆ ಯುಕ್ತವಾದ ಕನಿಷ್ಠವೇತನವನ್ನು ನಿರ್ಣಯಿಸುವ ಪ್ರಯತ್ನವನ್ನೇನೊ ಮಾಡಿವೆ. ಆದರೆ ವೇತನರಚನೆಯಲ್ಲಿ ಕೇಂದ್ರಾಪಗಾಮಿ ಪ್ರೇರಣೆಯನ್ನು ಉತ್ತೇಜಿಸಿಸುವಂಥ ನಿರ್ಣಾಯಕಗಳನ್ನು ಅನುಸರಿಸಿರುವ ಕಾರಣ ಒಂದು ಪ್ರದೇಶದಲ್ಲಿ ಒಂದು ಕನಿಷ್ಠ ವೇತನವನ್ನು ನಿರ್ಣಯಿಸುವುದಕ್ಕಿಂತ ಅನೇಕ ಕನಿಷ್ಠ ವೇತನಗಳನ್ನು ನಿರ್ಣಯಿಸುವ ಪರಿಸ್ಥಿತಿ ಉದ್ಭವಿಸಿದೆ. ವೇತನಗಳ ಅಂತರದ ನಿರ್ಣಯವೂ ಅಷ್ಟು ಗಣನೆ ಪಡೆದಿಲ್ಲ. ವೇತನಗಳ ಅಂತರದ ನಿರ್ಣಯ ಕೈಗೊಂಡ ಕಡೆಯಲ್ಲೆಲ್ಲ ಪ್ರಚಲಿತ ಅಂತರವನ್ನುಳಿಸಿಕೊಳ್ಳುವ ಪ್ರೇರಣೆ ಕಂಡುಬಂದಿದೆ. ಆದಕಾರಣ ಇದು ಶಾಸ್ತ್ರೀಯವಾಗಿ ಒಪ್ಪಿಕೊಂಡ ನಿರ್ಣಾಯಕಗಳ ಆಧಾರದ ಮೇಲೆ ಆಗಿಲ್ಲ.

ಡಾ. ಬಿ. ಷೇಕ್ ಅಲಿ

ಆಧುನಿಕ ಭಾರತೀಯ ಇತಿಹಾಸ ಲೇಖನದ ರೂಪರೇಖೆಗಳು

ಬ್ರಿಟಿಷರು ತಮ್ಮ ಅಧಿಕಾರವನ್ನು ಸುಭದ್ರವಾಗಿ ಭಾರತದಲ್ಲಿ ಸ್ಥಾಪಿಸಿದ ಕಾಲದಿಂದೀಚಿನ ನಮ್ಮ ಇತಿಹಾಸ ಒಂದು ಬಗೆಯಲ್ಲಿ ಹೆಚ್ಚು ಪ್ರಾಮುಖ್ಯ ಪಡೆಯಿತು. ಏಕೆಂದರೆ ಬ್ರಿಟಿಷರು ನಮ್ಮ ಜೀವನದ ಎಲ್ಲ ರಂಗಗಳಲ್ಲೂ ಕ್ಷೇತ್ರಗಳಲ್ಲೂ ಅಳಿಸಲಾರದ ಮುದ್ರೆ ಒತ್ತಿದ್ದಾರೆ. ೧೯ನೆಯ ಶತಮಾನ ದಲ್ಲುಂಟಾದ ಸಾಮಾಜಿಕ ಹಾಗೂ ಮತೀಯ ಬೆಳವಣಿಗೆಗಳು, ಹೊಸರೀತಿಯ ಆಧುನಿಕ ಜ್ಞಾನ ಮತ್ತು ವಿಮರ್ಶನ ಬುದ್ಧಿ, ಬೃಹತ್ ಪ್ರಮಾಣದ ವಾಣಿಜ್ಯ ಮತ್ತು ಕೈಗಾರಿಕೆಗಳ ಸ್ಥಾಪನೆ, ವಿಜ್ಞಾನ ಮತ್ತು ಕಲೆಗಳಿಗೆ ದೊರೆತ ಉತ್ತೇಜನ, ನಮ್ಮ ಶೈಕ್ಷಣಿಕ, ರಾಜಕೀಯ, ಆಡಳಿತ ಹಾಗೂ ಕಾನೂನಿನ ಕ್ಷೇತ್ರಗಳಲ್ಲಿ ಆದ ಬದಲಾವಣೆಗಳು, ಇನ್ನೂ ಅನೇಕ ರೀತಿಯ ಪರಿವರ್ತನಗಳು—ಇವೆಲ್ಲ ಪಾಶ್ಚಾತ್ಯರ ಭಾವನೆಗಳಿಂದಲೂ ರೀತಿನೀತಿಗಳ ಪ್ರಭಾವದಿಂದಲೂ ಉಂಟಾದುವು. ಈ ಕಾಲದ ಬೆಳವಣಿಗೆಗಳ ಬಗ್ಗೆ ಖಚಿತವಾದ ನಿರ್ಣಯವಾಗಲಿ ವೈಜ್ಞಾನಿಕ ವಿಮರ್ಶೆಯಿಂದ ಕೂಡಿದ ಅಭ್ಯಾಸವಾಗಲಿ ಬಹು ಕಠಿಣವೇ ಸರಿ. ಇದಕ್ಕೆ ಈ ಕಾಲದ ಇತಿಹಾಸದ ಅಧ್ಯಯನ ನಡೆಸುವಾಗ ಸಾಮಾನ್ಯವಾಗಿ ತಲೆದೋರುವ ಮಿತಿಯಿಲ್ಲದ ವಾದ-ವಿವಾದಗಳೇ ಕಾರಣ. ಯಾವ ಇಬ್ಬರು ಪಂಡಿತರೂ ಈ ಕಾಲದ ಮೂಲಭೂತ ಸಮಸ್ಯೆಗಳ ಮೇಲೆ, ತೀರ್ಮಾನಗಳ ಮೇಲೆ ಒಂದೇ ರೀತಿಯ ಪೂರಕವಾದ ಅಭಿಪ್ರಾಯಗಳನ್ನು ಒಪ್ಪಿಕೊಳ್ಳುವುದಿಲ್ಲ. ಬ್ರಿಟಿಷ್ ಚರಿತ್ರಕಾರರೂ ಈ ಬಗ್ಗೆ ಒಮ್ಮತ ಹೊಂದಿಲ್ಲ. ಇಂಥ ಒಂದು ಮತದ ಪ್ರತಿಸಿಧಿ ಜೇಮ್ಸ್ ಮಿಲ್. ಈತ ಉಪಯುಕ್ತತೆಯ ತತ್ವಗಳನ್ನು ಭಾರತದ ಸ್ಥಿತಿಗತಿಗಳಿಗೆ ಹೊಂದಿಸಿದ್ದಲ್ಲದೆ, ಕಾನೂನಿನ ಹಾಗೂ ಆಡಳಿತಗಳ ಬದಲಾವಣೆ ಗಳಿಗೆ ಹೆಚ್ಚು ಗಮನ ಕೊಡುವಂತೆ ಮಾಡಿದ. ಜಾತೀಯತೆ, ಕೆಲವೇ ಜನರಿಗಿರುವ ವಿಶೇಷ ಅಧಿಕಾರ ಸೌಲಭ್ಯ, ಬಗೆಬಗೆಯ ಪಕ್ಷಪಾತ—ಇವು ಭಾರತೀಯ ಸಮಾಜದಲ್ಲಿ ತುಂಬಿರುವುದರಿಂದ, ಒಟ್ಟು ಸಮಾಜದ ಬೆಳವಣಿಗೆಯಲ್ಲಿ

ನಂಬಿಕೆಯುಳ್ಳ ದಬ್ಬಾಳಿಕೆಯಿಂದ ಮಾತ್ರ ಭಾರತದ ಸ್ಥಿತಿಗತಿಗಳನ್ನು ಉತ್ತಮ ಪಡಿಸಬಹುದು, ಎಂಬುದು ಆತನ ಮತ. ಎರಡನೆಯ ಮತದ ಮುಖ್ಯ ಪ್ರತಿಪಾದಕರೆಂದರೆ ಸರ್ ವಿಲಿಯಂ ಜೋನ್ಸ್, ಕನ್ನಿಂಗ್‌ಹ್ಯಾಮ್, ವಿಲ್ಕಿನ್ಸ್, ಮನ್ರೋ, ಮಾಲ್‌ಕಾಂ, ಮತ್ತು ಎಲಿಫೆನ್‌ಸ್ಟನ್. ಇವರು ಸ್ವಲ್ಪ ಉದಾರ ದೃಷ್ಟಿಯಿಂದ ಭಾರತೀಯ ಸಮಾಜವನ್ನು ನೋಡಿದರು. ಇವರು ಭಾರತೀಯರ ಮೌಲ್ಯಗಳ ಬಗ್ಗೆ ಮತ್ತು ಅವರ ಸಂಸ್ಥೆಗಳ ಬಗ್ಗೆ ಸಹಾನುಭೂತಿಯುತವಾದ ಅರಿವುಳ್ಳವರಾಗಿದ್ದರು. ಕ್ರೈಸ್ತ ಬೋಧಕರ ಮೂರನೆಯ (Evangelicals). ಗುಂಪಿನ ಪ್ರಮುಖರು ಷೋರ್ ಮತ್ತು ಗ್ರ್ಯಾಂಟ್. ಇವರಿಗೆ ಕ್ರೈಸ್ತ ಪಾದ್ರಿಗಳ ಬೆಂಬಲವೂ, ಆಶೀರ್ವಾದವೂ ಇದ್ದವು. ಇವರ ಅಭಿಪ್ರಾಯದಲ್ಲಿ ಬ್ರಿಟಿಷರು ಭಾರತಕ್ಕೆ ಬಂದು ತಮ್ಮ ಅಧಿಕಾರ ಸ್ಥಾಪಿಸಿದ್ದು ಒಂದು ದೈವಿಕ ಸುಯೋಗ. ಈ ರೀತಿಯ ಆಡಳಿತದ ಸ್ಥಾಪನೆಯಾಗಬೇಕೆಂದು ದೇವರೇ ಪೂರ್ವಭಾವಿಯಾಗಿ ಸಂಕಲ್ಪಿಸಿದ್ದ. ಭಾರತೀಯರನ್ನು ಅಂಧಕಾರದಿಂದಲೂ, ಅಧಃಪತನದಿಂದಲೂ ಮೇಲಕ್ಕೆತ್ತಬೇಕೆಂಬ ದೈವಸಂಕಲ್ಪ ನೆರವೇರಲು ಬ್ರಿಟಿಷರು ನಿಮಿತ್ತ ಎಂಬುದು ಈ ಪಕ್ಷದ ಖಚಿತ ನಂಬಿಕೆಯಾಗಿತ್ತು. ಕ್ರೈಸ್ತಮತ ಪ್ರಚಾರ ಹಾಗೂ ಶಿಕ್ಷಣ ಸಂಸ್ಥೆಗಳ ವಿದ್ಯಾಪ್ರಸಾರದಿಂದ ಭಾರತವನ್ನು ಪರಿವರ್ತಿಸಲು ಇವರು ಪ್ರಯತ್ನಿಸಿದರು. ಪೌರಸ್ತ್ಯ ಹಾಗೂ ಪಾಶ್ಚಾತ್ಯಗಳ ಪರಸ್ಪರ ಮಿಲನವೇ ಬ್ರಿಟಿಷರ ಅಧಿಕಾರ ಫಲವೆಂಬುದು ಆಲ್ಫ್ರೆಡ್ ಲಯಾಲ್, ಹೆನ್ರಿ ಮೇನ್, ವಿಲಿಯಂ ಹಂಟರ್ ಮುಂತಾದ ಪಂಡಿತರ ಅಭಿಪ್ರಾಯ. ಇವರದು ನಾಲ್ಕನೆಯ ಗುಂಪು. ಈ ಪಂಡಿತರು ಭಾರತೀಯ ಸಮಾಜದ ವಿವಿಧ ಸಂಸ್ಥೆಗಳನ್ನು ಆಸಕ್ತಿಯಿಂದ ಅಭ್ಯಾಸ ನಡೆಸಿದರು. ಐದನೆಯದಾಗಿ, ಪಿ. ಇ. ರಾಬರ್ಟ್ಸ್, ಡಾ. ಟಿ. ಜಿ ಪಿ. ಸ್ಪಿಯರ್, ಪ್ರೊ. ಸಿ. ಎಚ್. ಫಿಲಿಪ್ಸ್, ಪ್ರೊ. ಹೋರ್ಲ್ಡ್ ಫರ್‌ಬರ್, ಪ್ರೊ. ಬಲ್ಹಾಚೆಟ್ ಮತ್ತು ಇತರ ಅನೇಕ ಇತ್ತೀಚಿನ ಪಾಶ್ಚಾತ್ಯ ಪಂಡಿತರು ಆಧುನಿಕ ಭಾರತದ ಇತಿಹಾಸವನ್ನು ಸಮಗ್ರವಾಗಿ, ಆಧುನಿಕ ವಿಮರ್ಶೆಯ ದೃಷ್ಟಿಯಿಂದ, ಅಭ್ಯಾಸ ಮಾಡುವ ಪ್ರಯತ್ನದಲ್ಲಿದ್ದಾರೆ.

ಈ ವಿವಿಧ ದೃಷ್ಟಿಕೋನಗಳ ಫಲವಾಗಿ ಆಧುನಿಕ ಭಾರತದ ಇತಿಹಾಸಕಾರರಿಗೆ ಒಂದು ಪ್ರಬಲ ಸಮಸ್ಯೆಯೇ ಉದ್ಭವಿಸಿದೆ. ಏಕೆಂದರೆ ಇವರಿಗೆ ಮೊದಲಲ್ಲಿ ತಮ್ಮದೇ ಆದ ಯಾವ ಐತಿಹಾಸಿಕ ಸಂಪ್ರದಾಯವೂ ಇರಲಿಲ್ಲ. ಇವರು ಬ್ರಿಟಿಷರು ಹಾಕಿಕೊಟ್ಟ ಮಾರ್ಗದಲ್ಲೇ ನಡೆಯಬೇಕಾಗಿತ್ತು. ಅವರಿಗೆ ಬ್ರಿಟಿಷ್ ಯುಗವೂ ಈಸ್ಟ್ ಇಂಡಿಯಾ ಕಂಪೆನಿಯ ಮತ್ತು ಅದರ ಉತ್ತರಾಧಿಕಾರಿಗಳಾದ ಬ್ರಿಟಿಷ್ ಚಕ್ರವರ್ತಿಗಳ ಕಾರ್ಯಚಟುವಟಿಕೆಗಳೂ ಇತಿಹಾಸವೇ ಆಗಿರದೆ, ತಮ್ಮವರೇ ಆದ ಭಾರತೀಯ ಜನಾಂಗದವರ ಕಾರ್ಯ ಚಟುವಟಿಕೆಗಳ ಚರಿತ್ರೆಯೂ ಆಗಿದೆ ಎಂಬ ತಿಳುವಳಿಕೆ ಉಂಟಾಯಿತು.

ಭಾರತೀಯರು ಕಾಲಕ್ಕೆ ತಕ್ಕಂತೆ ಹೇಗೆ ಬದಲಾವಣೆ ಮಾಡಿಕೊಂಡರು, ಹೇಗೆ ಒಗ್ಗಟ್ಟಿನಿಂದ ಕೂಡಿ ಆಧುನಿಕ ಸಮಾಜ ಸ್ಥಾಪಿಸಿದರು, ಹೇಗೆ ತಮಗೂ ಸಮನಾದ ಹಕ್ಕನ್ನು ಕೊಡಬೇಕೆಂದು ಚಳವಳಿ ನಡೆಸಿದರು, ಹೇಗೆ ಸಾವಿರಾರು ವರ್ಷಗಳಿಂದ ತಮ್ಮ ಸಮಾಜದಲ್ಲಿದ್ದ ಹೇಯ ಅಂಶಗಳನ್ನು ತೊಡೆದುಹಾಕಿದರು, ಹೇಗೆ ಹೊಸ ಹೊಸ ಭಾವನೆಗಳನ್ನು ಅಡವಳಿಸಿಕೊಂಡು ಬ್ರಿಟಿಷ್ ಸಾಮ್ರಾಜ್ಯದ ಉನ್ನತಿಯ ಕಾಲದಲ್ಲಿ ಬ್ರಿಟಿಷರಿಂದ ಅಧಿಕಾರ ಕಿತ್ತುಕೊಂಡರು—ಮೊದಲಾದ ಅಂಶಗಳನ್ನು ಪ್ರಾಮಾಣಿಕವಾದ ಬ್ರಿಟಿಷ್‌ಯುಗದ ಭಾರತದ ಇತಿಹಾಸವನ್ನು ಬರೆಯುವಾಗ ಚೆನ್ನಾಗಿ ಮನದಟ್ಟುಮಾಡಿಕೊಳ್ಳಬೇಕೆಂಬ ವಿಷಯ ಆಧುನಿಕ ಭಾರತೀಯ ಚರಿತ್ರಕಾರರಿಗೆ ಗೋಚರವಾಯಿತು. ಭಾರತೀಯರ ಕಾರ್ಯಚಟುವಟಿಕೆಗಳಿಂದಲೇ ಭಾರತೀಯ ಸಮಾಜದಲ್ಲಿ ಬದಲಾವಣೆಗಳುಂಟಾದುವು ಎಂಬ ಅಂಶವೇ ನಮ್ಮ ಆಧುನಿಕ ಇತಿಹಾಸದಲ್ಲಿ ಮುಖ್ಯವಾದದ್ದು. ಈ ರಾಷ್ಟ್ರೀಯ ದೃಷ್ಟಿಕೋನವನ್ನು ಆಧುನಿಕ ಭಾರತೀಯ ಇತಿಹಾಸದಲ್ಲಿ ಪ್ರತಿಬಿಂಬಿಸಿದವರಲ್ಲಿ ಅಗ್ರಗಣ್ಯರಾದವರು ಕೆ. ಎಂ. ಪಣಿಕ್ಕರ್. ಮೊದಮೊದಲು ಭಾರತೀಯ ಚರಿತ್ರಕಾರರು ಈ ಸಮಸ್ಯೆಗೆ ವಿವಿಧ ರೀತಿಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ರಾಜನಾರಾಯಣ್ ಬೋಸ್, ಚಂದ್ರನಾಥ ಬಸು, ಬಂಕಿಂಚಂದ್ರ ಚಟರ್ಜಿ, ಎ. ಸಿ. ದಾಸ್, ಕೆ. ಪಿ. ಜಯಸ್ವಾಲ್, ಬಿ. ಜಿ. ತಿಲಕ್, ವಿ. ಡಿ. ಸಾವರ್‌ಕರ್ ಮೊದಲಾದ ತೀವ್ರ ಪಂಥೀಯರು ಹಿಂದೂ ಸಂಸ್ಕೃತಿಯ ಘನತೆಯನ್ನು ಎತ್ತಿಹಿಡಿದು, ಹಿಂದೂ ಸಂಸ್ಕೃತಿ ಪಾಶ್ಚಾತ್ಯ ಸಂಸ್ಕೃತಿಗಿಂತ ಹಿರಿದಾದದ್ದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಎರಡನೆಯದಾಗಿ, ರಾಜೇಂದ್ರಲಾಲ್ ಮಿತ್ರ, ಆರ್. ಸಿ. ದತ್, ಆರ್. ಜಿ. ಭಂಡಾರ್‌ಕರ್ ಮೊದಲಾದವರು ತೀವ್ರ ರಾಷ್ಟ್ರೀಯತಾ ಭಾವನೆಗಳಿಂದ ಪ್ರಭಾವಿತರಾಗದೆ, ಭಾರತದ ಇತಿಹಾಸವನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿ, ಐರೋಪ್ಯ ಪಂಡಿತರಿಂದ ಉಂಟಾಗಿದ್ದ ಹಲಕೆಲವು ದೋಷಗಳನ್ನು ತಿದ್ದುವುದರಲ್ಲಿ ಹೆಚ್ಚು ಪ್ರಯತ್ನ ನಡೆಸಿದರು. ಮೂರನೆಯದಾಗಿ, ಮೇಜರ್ ಡಿ. ಬಸು, ಎ. ಸಿ. ಮಜುಂದಾರ್, ಸಿ. ವೈ. ಚಿಂತಾಮಣಿ ಮತ್ತು ಸುರೇಂದ್ರನಾಥ ಬ್ಯಾನರ್ಜಿ ಇವರು ಬ್ರಿಟಿಷರು ನಡೆಸಿದ ಆರ್ಥಿಕ ದಬ್ಬಾಳಿಕೆಯನ್ನು ತಮ್ಮ ಗ್ರಂಥಗಳಲ್ಲಿ ಪ್ರಮುಖವಾಗಿ ತೋರಿಸಿಕೊಟ್ಟು, ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಾರರಿಗೆ ತಮ್ಮ ಕೈಲಾದ ಸಹಾಯ ಮಾಡಿದರು. ಹಿರೇನ್‌ಮುಖರ್ಜಿ, ಆರ್. ಪಾಮೆದತ್, ಕೋಸಾಂಬಿ ಮತ್ತು ಇತರರಿಂದ ಸ್ಥಾಪಿತವಾದ ನಾಲ್ಕನೆಯ ಪಂಥದ ಇತಿಹಾಸಕಾರರು ಮಾರ್ಕ್ಸ್‌ನ ಅಭಿಪ್ರಾಯಗಳಿಂದ ಪ್ರಭಾವಿತರಾಗಿ, ಭಾರತೀಯ ಇತಿಹಾಸವನ್ನು ಆ ದೃಷ್ಟಿಕೋನದಿಂದ ಪರಿಷ್ಕರಿಸಲು ಪ್ರಯತ್ನಿಸಿದರು. ಜಾದುನಾಥ ಸರ್ಕಾರ್, ಎಸ್. ಎನ್. ಸೇನ್, ಷಫತ್ ಅಹಮದ್ ಖಾನ್, ಡಾ. ಕೃಷ್ಣಸ್ವಾಮಯ್ಯಂಗಾರ್, ಶ್ರೀನಿವಾಸಾಚಾರ್ಯ ಮೊದಲಾದ ಚರಿತ್ರಕಾರರ

ಮತ್ತೊಂದು ಗುಂಪು ಯಾವ ಒಂದು ಖಚಿತವಾದ ಅಭಿಪ್ರಾಯದ ಪ್ರಭಾವಕ್ಕೂ ಒಳಗಾಗದೆ, ಭಾರತದ ಇತಿಹಾಸವನ್ನು ನೈಜರೀತಿಯಲ್ಲಿ ಪುನರ್ರಚಿಸುವ ಪ್ರಯತ್ನ ನಡೆಸಿದರು.

ಬ್ರಿಟಿಷ್ ಇತಿಹಾಸಕಾರರಿಗೂ, ಭಾರತೀಯ ಇತಿಹಾಸಕಾರರಿಗೂ ಇರುವ ಭಿನ್ನಾಭಿಪ್ರಾಯಗಳನ್ನು ಇಲ್ಲಿಯ ವರೆಗೆ ವಿವರಿಸಿದ ಉದ್ದೇಶ, ನಮ್ಮ ಇತಿಹಾಸವನ್ನು ಸರಿಯಾಗಿ ವಿಮರ್ಶೆ ಮಾಡಬೇಕಾದಾಗ ಎದುರಿಸಬಹುದಾದ ತೊಂದರೆಗಳನ್ನು ತೋರಿಸಿಕೊಡುವುದೇ ಆಗಿದೆ. ಈ ಪಕ್ಷವನ್ನು ಎತ್ತಿ ಹಿಡಿದೋ ಆ ಪಕ್ಷವನ್ನು ಎತ್ತಿ ಹಿಡಿದೋ ನಾವು ನಿಜವಾದ ಸ್ಫೂರ್ತಿಯನ್ನೂ, ದೃಷ್ಟಿಯನ್ನೂ ಕಳೆದುಕೊಂಡಿದ್ದೇವೆ. ಇತಿಹಾಸದ ಸತ್ತ್ವ ಸರಿಯಾದ ರೀತಿಯಲ್ಲಿ ಪ್ರತಿಬಿಂಬಿತವಾಗಬೇಕಾದರೆ ಅದು ಚಿಕ್ಕ ಹಾಗೂ ದೊಡ್ಡ ಪಾತ್ರಗಳ ಬೆಳವಣಿಗೆಯನ್ನು ಈ ನಾಟಕ ರಂಗದಲ್ಲಿ ತೋರಿಸಿಕೊಡಬೇಕು. ಆ ಪಾತ್ರಗಳ ಉದ್ದೇಶಗಳೂ ಜಯಾಪಜಯಗಳೂ ಚರಿತ್ರೆಯ ಆತ್ಮವೇ. ಮುಖ್ಯ ಘಟನೆಗಳನ್ನೇ ಪ್ರಧಾನವಾಗಿ ಅಭ್ಯಾಸ ಮಾಡಿ, ಚಿಕ್ಕ ಚಿಕ್ಕ ಘಟನೆಗಳನ್ನು ಪೂರ್ಣವಾಗಿ ಉಪೇಕ್ಷಿಸುವ ಮನೋಭಾವ ಕಾಣುತ್ತಿದೆ. ಯಥೋಚಿತವಾಗಿ ರಚಿತವಾದ ಇತಿಹಾಸ, ಕಲಾಶಾಲೆಯಲ್ಲಿಟ್ಟಿರುವ ವರ್ಣಚಿತ್ರದಂತೆ. ಅದನ್ನು ನಾವು ಹೇಗೆ ನೋಡುತ್ತೇವೊ ಇದನ್ನೂ ಹಾಗೇ ನೋಡಬೇಕು. ಆ ವರ್ಣಚಿತ್ರ ರಚಿತವಾದ ಸ್ಟುಡಿಯೋಗಳಲ್ಲಿ ಏನಾಯಿತು ಹೇಗಾಯಿತು ಎಂಬ ಕುತೂಹಲಕಾರಿಯಾದ ಅಂಶಗಳೇ ಅದರಲ್ಲಿ ಇರುವುದಿಲ್ಲ. ಮುಖ್ಯ ಘಟನೆಗಳಿಗೆ ಪೂರಕವಾದ ಚಿಕ್ಕಚಿಕ್ಕ ಸಂದರ್ಭಗಳನ್ನು ಬಿಟ್ಟುಬಿಡುವುದೂ ಉಂಟು. ದೊಡ್ಡ ದೊಡ್ಡ ಘಟನೆಗಳು, ಹಿರಿಯ ವ್ಯಕ್ತಿಗಳು, ಇವರೇ ಪ್ರಮುಖವಾಗಿ ನಮ್ಮ ತಲೆಯಲ್ಲಿ ತುಂಬಿ, ಮಿಕ್ಕ ಕ್ಷೇತ್ರಗಳ ಚರ್ಚೆ ಬರುವುದೇ ಇಲ್ಲ. ಒಂದು ಕತೆ ಜೀವಂತವಾಗಬೇಕಾದರೆ ಚಿಕ್ಕ ಚಿಕ್ಕ ಪಾತ್ರಗಳು ಚೊಕ್ಕವಾಗಿ ರಚಿತವಾಗಬೇಕು; ಹಿರಿಯ ವ್ಯಕ್ತಿಗಳ ವಿರೋಧಿಗಳನ್ನೂ ಅನುಯಾಯಿಗಳನ್ನೂ ಏಕರೀತಿಯಾಗಿ ನೋಡುವ ದೃಷ್ಟಿ ಇರಬೇಕು; ಗಣನೀಯರಲ್ಲದ ವ್ಯಕ್ತಿಗಳೂ, ಯಃಕಶ್ಚಿತ್ ಮನುಷ್ಯರೂ ಈ ಕತೆಯ ಅಂಶವೆಂಬ ಭಾವನೆ ಮನದಟ್ಟಾಗಬೇಕು; ನಾವು ಸಮಾಜದ ಈ ಒಳಭಾಗದ ಜನರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳನ್ನು ಪ್ರತಿಬಿಂಬಿಸುವಂಥ ಇತಿಹಾಸವನ್ನು ಇನ್ನೂ ರಚಿಸಬೇಕಾಗಿದೆ. ಏಕೆಂದರೆ ಇಲ್ಲಿಯವರೆಗೆ ಆಡಳಿತದ ಕೇಂದ್ರ ವ್ಯಕ್ತಿಗಳೆನಿಸಿದವರ ರಾಜಕೀಯದ, ರಾಜ್ಯಾಂಗದ, ಆಡಳಿತದ ಮತ್ತು ಸೈನ್ಯದ ಸಮಸ್ಯೆಗಳನ್ನು ಅಭ್ಯಾಸ ಮಾಡುವುದೇ ನಮ್ಮ ಮುಖ್ಯ ಗುರಿಯಾಗಿತ್ತು. ಭಾರತೀಯ ಇತಿಹಾಸವನ್ನು ಕೇಂದ್ರ ಸರ್ಕಾರದ ದೃಷ್ಟಿಯಿಂದ ನೋಡುವ ಮನೋಭಾವವೂ ಪ್ರಾಂತ್ಯ, ಜಿಲ್ಲೆ, ಪಟ್ಟಣ ಮತ್ತು ಹಳ್ಳಿಗಳ ಬೆಳವಣಿಗೆಯನ್ನು ಕಡೆಗಣಿಸುವ ಪ್ರವೃತ್ತಿಯೂ ಈಗಲೂ ಇವೆ. ಇತಿಹಾಸವೆಂದರೆ ಗತಕಾಲದ ರಾಜ

ಕೀಯ ಚಟುವಟಿಕೆಗಳೆಂಬ ಭಾವನೆ ಇದ್ದ ವರೆಗೂ, ಇತಿಹಾಸದ ಅಧ್ಯಯನ ಕ್ಷೇತ್ರವನ್ನು ವಿಸ್ತರಿಸಲು ಸಾಧ್ಯವಾಗಲಿಲ್ಲ. ಇತಿಹಾಸ ಗತಕಾಲದ ಘಟನೆಗಳ ಒಟ್ಟು ಬೆಳವಣಿಗೆಯನ್ನು ರೂಪಿಸುವ ಒಂದು ಕಲೆಯೇ ಹೊರತು, ಅದು ಸಾಮಾನ್ಯ ತೀರ್ಮಾನಗಳನ್ನು ಕಂಡುಹಿಡಿಯುವ ಸಾಧನವಾಗಲಿ, ಘಟನೆಗಳ ವಿವರಣೆಯಾಗಲಿ, ಅವುಗಳ ಪರಿಷ್ಕರಣವಾಗಲಿ, ವ್ಯಕ್ತಿಯ ಅಥವ ಗುಂಪುಗಳ ಅಭ್ಯಾಸವಾಗಲಿ, ಪ್ರಸಿದ್ಧರ ಅಥವ ಅಪ್ರಸಿದ್ಧರ ಕಥೆಯಾಗಲಿ ಅಲ್ಲವೆಂಬ ರಾಂಕೆ ಯಂಥ ವಿಖ್ಯಾತ ಪಂಡಿತನ ಅಭಿಪ್ರಾಯವೂ ಈ ದಿಸೆಯಲ್ಲಿ ಅಷ್ಟಾಗಿ ಪ್ರಭಾವ ಬೀರಲಿಲ್ಲ. ಈ ಬಗೆಯ ಧೋರಣೆಯಿಂದ ಸಾಮಾಜಿಕ ಇತಿಹಾಸವನ್ನು ರಚಿಸುವ ಕಾರ್ಯಕ್ಕೆ ವಿಶೇಷವಾದ ಅಡಚಣೆಯುಂಟಾಯಿತು. ಮಾನವನ ಬುದ್ಧಿಶಕ್ತಿಯ ವಿಕಾಸವನ್ನು ನಿರೂಪಿಸುವುದೇ ಇತಿಹಾಸದ ಅಡಿಗಲ್ಲೆಂದೂ, ಪ್ರತಿ ಜನಾಂಗಕ್ಕೂ ಒಂದು ವಿಶೇಷ ಸುಪ್ತಶಕ್ತಿ ಇರುತ್ತದೆ ಎಂದೂ ಅಂಥ ಶಕ್ತಿಯಿಂದಲೇ ಆಯಾ ಜನಾಂಗದ ಸಂಪ್ರದಾಯಗಳೂ ಚಟುವಟಿಕೆಗಳೂ ಉದ್ಭವಿಸುತ್ತವೆಯೆಂದೂ ಕಾಂಪ್ಟೆಯಂಥ ಮೇಧಾವಿಗಳು ಘೋಷಿಸಿದ್ದರೂ ನಾವು ಅಂಥ ಅಭಿಪ್ರಾಯಕ್ಕೆ ಗಮನ ಕೊಡಲಿಲ್ಲ; ಸಮಾಜವೇ ರಾಜಕೀಯ ವ್ಯವಸ್ಥೆಗೆ ಮೂಲಭೂತವಾದದ್ದು ಮತ್ತು ಮುಖ್ಯವಾದದ್ದು ಎಂಬ ಅಂಶವನ್ನು ಮನಗಾಣಲಿಲ್ಲ. ಭಾರತೀಯ ಚರಿತ್ರಕಾರರು ಎಲಿನಾರ್ ಜಿ. ಬಾರ್ಬರನ "ಹದಿನೆಂಟನೆಯ ಶತಮಾನದ ಫ್ರಾನ್ಸಿನ ಮಧ್ಯಮ ವರ್ಗ" (*The Bourgeoisie in Eighteenth Century France*) ಮುಂತಾದ ಗ್ರಂಥಗಳನ್ನು ಮಾದರಿಯಾಗಿ ಇಟ್ಟುಕೊಂಡರೆ ಒಳ್ಳೆಯದು. ಈ ಗ್ರಂಥ ಇತಿಹಾಸಕ್ಕೂ ಸಮಾಜಶಾಸ್ತ್ರಕ್ಕೂ ಕಟ್ಟಿದ ಸೇತುವೆಯಂತಿದೆ. ಹದಿನೆಂಟನೆಯ ಶತಮಾನದ ಫ್ರೆಂಚ್ ಪರಿವರ್ತನ ಶೀಲ ಮಧ್ಯಮ ವರ್ಗದ ಸಮಾಜದ ಸ್ಥಾನಮಾನಗಳನ್ನೂ ೧೭೮೯ರ ಕ್ರಾಂತಿಪೂರ್ವ ದಶಕಗಳ ಸಾಮಾಜಿಕ ಪರಿಸ್ಥಿತಿಗಳನ್ನೂ ಅತ್ಯಂತ ವಿಶೇಷ ರೀತಿಯಲ್ಲಿ ಈ ಗ್ರಂಥ ನಿರೂಪಿಸುತ್ತದೆ. ಪ್ರೊ. ಬಿ. ಬಿ. ಮಿಶ್ರಾ ಅವರ "ಭಾರತೀಯ ಮಧ್ಯಮ ವರ್ಗಗಳು" (*The Indian Middle Classes*) ಎಂಬ ಗ್ರಂಥ ನನ್ನ ದೃಷ್ಟಿಯಲ್ಲಿ ಭಾರತೀಯ ಪಂಡಿತರೊಬ್ಬರಿಂದ ಹೊಸ ರೀತಿಯಲ್ಲಿ ಇತಿಹಾಸವನ್ನು ಅಭ್ಯಾಸ ಮಾಡಿದ ಒಂದೇ ಒಂದು ಕೃತಿ. ಈಗ ಅವಲೋಕಿಸುತ್ತಿರುವ ಕಾಲದ ಸಾಮಾಜಿಕ ಚರಿತ್ರೆ, ರಾಜಕೀಯ ಚರಿತ್ರೆಗಿಂತ ಹೆಚ್ಚಿನ ಪ್ರಾಧಾನ್ಯ ಪಡೆಯಬೇಕು ಎಂಬುದು ನನ್ನ ಅಭಿಪ್ರಾಯ. ಇಲ್ಲಿಯವರೆಗೆ ರಾಜಕೀಯ ಇತಿಹಾಸ ನಮ್ಮ ಕ್ಷೇತ್ರವಾಗಿತ್ತು. ನಾವು ಪಾಶ್ಚಾತ್ಯರಷ್ಟು ಸಾಧನೆ ನಡೆಸಬೇಕಾದರೆ ಈ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುವ ಕಾಲ ಈಗ ಬಂದಿದೆ.

ಈ ಯುಗದ ನಮ್ಮ ಅಭ್ಯಾಸದಲ್ಲಿ ಕಾಣಬಹುದಾದ ಮತ್ತೊಂದು ಕೊರತೆಯೆಂದರೆ ಮಾನಸಿಕ ಬೆಳವಣಿಗೆಯ ಇತಿಹಾಸದ ಕಡೆಗಿರುವ ನಮ್ಮ ಉಪೇಕ್ಷೆ.

ಇದರಿಂದ ನಾವು ನಮ್ಮ ತತ್ತ್ವಶಾಸ್ತ್ರಜ್ಞರಿಗೆ, ಕಲಾವಿದರಿಗೆ, ಗ್ರಂಥಕರ್ತರಿಗೆ, ವಿಜ್ಞಾನಿಗಳಿಗೆ, ಜ್ಞಾನಿಗಳಿಗೆ ಮತ್ತು ಸುಧಾರಕರುಗಳಿಗೆ ಬಹಳ ಅನ್ಯಾಯ ಮಾಡಿ ದಂತಾಗಿದೆ. ಮಾನವ ಏನನ್ನು ಹೇಳಿದ ಮತ್ತು ಏನನ್ನು ಮಾಡಿದ ಎಂಬುದರ ವಿಮರ್ಶಾತ್ಮಕ ವಿಚಾರಣೆಯೇ ಮಾನಸಿಕ ಇತಿಹಾಸ. ಒಂದು ಭಾವನೆ ಅಥವಾ ಅನೇಕ ಭಾವನೆಗಳ ಗುಂಪು ಮಾನವ ಘಟನೆಗಳ ಮೇಲೆ ಬೀರಿರಬಹುದಾದ ಪ್ರಭಾವ ವನ್ನು ಅಭ್ಯಾಸಮಾಡುವ ಮಾನಸಿಕ ಇತಿಹಾಸಜ್ಞನ ಹಳೆಯ ಸಮಸ್ಯೆಯಾದ ಮೌಲ್ಯಗಳ ಬಗ್ಗೆ ತೀರ್ಮಾನ ಕೈಗೊಳ್ಳುವ ಕಠಿಣ ಪ್ರಸಂಗವನ್ನು ಎದುರಿಸಬೇಕಾಗು ತ್ತದೆ. ಇಲ್ಲಿ ಇತಿಹಾಸಕಾರ ಸಾಮಾನ್ಯವಾದ ಮತ್ತು ಅನುಪಮವಾದ ಮೂಲ ತತ್ತ್ವಗಳನ್ನು ಭಾವನೆಗಳಿಂದಲೂ ವಿಚಾರ ಮತ್ತು ಆಸಕ್ತಿಗಳಿಂದಲೂ ಬೇರ್ಪಡಿಸ ಬೇಕಾಗುತ್ತದೆ. ತತ್ತ್ವಶಾಸ್ತ್ರ, ಸಾಹಿತ್ಯ, ಮತ, ವಿಜ್ಞಾನ ಮತ್ತು ಕಲೆಗಳಿಗೆ ಸಂಬಂಧಿ ಸಿದ ವಸ್ತುಗಳ ಸಂಗ್ರಹ ಮಾತ್ರವೇ ಮಾನಸಿಕ ಇತಿಹಾಸವಲ್ಲ; ಅದು "ಭಾವನೆ ಗಳ ನಕ್ಷೆ" (*The Cartography of Ideas*). ಅದರಲ್ಲಿ ಒಂದು ಸಮಾಜದ ಮೇಲೆ ಆಯಾ ಭಾವನೆಗಳಿಂದ ಉಂಟಾದ ಪರಿಣಾಮಗಳನ್ನು ಗುರುತಿಸುವುದೂ ಅರ್ಥ ಮಾಡಿಕೊಳ್ಳುವುದೂ ಆಗಿದೆ. ಸಾಮಾನ್ಯ ಅರ್ಥದಲ್ಲಿ ಮಾನಸಿಕ ಇತಿಹಾಸ ವೆಂದರೆ ಯಾರಿಂದ ಯಾವ ಭಾವನೆಗಳ ಕೊಡುಗೆಯಾಯಿತು? ಸಾಂಸ್ಕೃತಿಕ ಕ್ಷೇತ್ರದಲ್ಲಿ ಅವರು ಸಾಧಿಸಿದ ಅಂಗಗಳೇನು? ಅವನ್ನು ಎಲ್ಲಿ ಮತ್ತು ಹೇಗೆ ಸಾಧಿಸಿ ದರು? ಎಂಬುದನ್ನು ತಿಳಿಸುವುದೇ ಆಗಿದೆ. ವಿಶಾಲವಾದ ಅರ್ಥದಲ್ಲಿ ಅದು ಮಾನವನ ಸಾಂಸ್ಕೃತಿಕ ಜ್ಞಾನದ ಸಿಂಹಾವಲೋಕನವೆಂದು ಬೇಕಾದರೆ ಹೇಳ ಬಹುದು. ಉನ್ನತ ಭಾವನೆಗಳ ಮತ್ತು ಆದರ್ಶಗಳ ಮಧ್ಯೆ ಇರುವ ಸಂಬಂಧವನ್ನು ವಿವರಿಸಲು ಮಾನಸಿಕ ಇತಿಹಾಸ ಪ್ರಯತ್ನಿಸುವುದಲ್ಲದೆ, ಅವುಗಳಿಂದ ಭೌತಿಕ ವಿಷಯಗಳ ಮೇಲೆ ಉಂಟಾಗಿರಬಹುದಾದ ಪ್ರಭಾವವನ್ನು ಸೂಚಿಸಲೂ ಪ್ರಯತ್ನಿ ಸುತ್ತದೆ. ನಮ್ಮಲ್ಲಿ ವಿಜ್ಞಾನವನ್ನೋ ಕಲೆಯನ್ನೋ ಮತವನ್ನೋ ತತ್ತ್ವಶಾಸ್ತ್ರ ವನ್ನೋ ಇತರ ವಿಷಯಗಳನ್ನೋ ಅಭ್ಯಾಸ ಮಾಡುವ ಇತಿಹಾಸಕಾರರು ಅನೇಕ ರಿರಬಹುದು. ಆದರೆ ನಿಜವಾದ ಭಾವನೆಗಳನ್ನೇ ಅಭ್ಯಾಸ ಮಾಡಿ, ಅವುಗಳ ಲ್ಲಿರುವ ಸೂಕ್ಷ್ಮ ಸಂಬಂಧ ತೋರಿಸಿ, ಅವುಗಳ ಪರಸ್ಪರ ಪ್ರಭಾವಗಳನ್ನು ಗುರುತಿಸುವ ಇತಿಹಾಸಕಾರರು ಬಲು ವಿರಳ. ಆಲ್ಫ್ರೆಡ್ ಕ್ರೋಬರ್ ಹೇಳಿದ "ಸಂಸ್ಕೃತಿಯ ಬೆಳವಣಿಗೆಯ ರೂಪ"ವನ್ನೇ ಪ್ರಧಾನವಾಗಿ ಪರೀಕ್ಷಿಸುವ ತಾತ್ತ್ವಿಕ ಇತಿಹಾಸ ಭಾರತದಲ್ಲಿ ಈವರೆಗೂ ಬೇರು ಬಿಟ್ಟಿಲ್ಲ. ನಮ್ಮ ಮಧ್ಯೆ ಒಬ್ಬ ಬಕಲನೋ, ಒಬ್ಬ ಕಾಲಿಂಗ್‌ವುಡ್ಡನೋ, ಒಬ್ಬ ಟಾಯನ್‌ಬೀಯೋ, ಒಬ್ಬ ಕಾಂವ್ಟೆಯೋ, ಒಬ್ಬ ಕ್ರೋಚೆಯೋ, ಒಬ್ಬ ಸ್ಪೆಂಗ್ಲರನೋ ಬರುವನೆಂದು ಇನ್ನೂ ಎದುರು ನೋಡಬೇಕಾಗಿದೆ. ಮಾನಸಿಕ ಇತಿಹಾಸ ಅಭ್ಯಾಸ ಮಾಡುವ ಆಧಾರಗಳು ಬೇರೆ ಬೇರೆ ರೀತಿಯ ಇತಿಹಾಸಗಳನ್ನು ಅಭ್ಯಾಸ ಮಾಡಲು ದೊರೆ

ಯುವ ಆಧಾರಗಳಿಗಿಂತ ಅನಿಶ್ಚಿತವೆಂಬುದು ನಿಜ. ಇದಲ್ಲದೆ, ಮಾನಸಿಕ ಇತಿಹಾಸಕಾರ ಒಬ್ಬ ಕತೆಗಾರನಾಗಿರುವುದಕ್ಕಿಂತ ಹೆಚ್ಚಾಗಿ ದಾರ್ಶನಿಕನಾಗಿರಬೇಕಾದ್ದು ಅಗತ್ಯ. ತತ್ತ್ವಶಾಸ್ತ್ರದ ವಿವಿಧ ಭಾವನೆಗಳ ತೌರೂರಾದ ಮತ್ತು ಅತಿ ಹೆಚ್ಚಿನ ಭೌದ್ಧಿಕ ಪ್ರಗತಿಯ ತೊಟ್ಟಿಲು ಎನಿಸಿಕೊಂಡ ಭಾರತದಲ್ಲಿ ಪಾಶ್ಚಾತ್ಯರಿಗೆ ಸಮನಾಗಿ ನಿಲ್ಲಬಲ್ಲ ಒಬ್ಬನೇ ಒಬ್ಬ ತಾತ್ತ್ವಿಕ ಇತಿಹಾಸಕಾರ ಇಲ್ಲವೆಂದರೆ ಯಾರಿಗಾದರೂ ಅತ್ಯಾಶ್ಚರ್ಯವಾದೀತು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ತಾತ್ತ್ವಿಕ ಇತಿಹಾಸ, ಸಾಮಾನ್ಯ ಇತಿಹಾಸಕಾರನಿಗೂ ಮತ್ತು ಸಮಾಜ ವಿಜ್ಞಾನಿಗಳಿಗೂ ನಡುವಣ ಸೇತುವೆಯಾಗಿದೆ. ಪೌರಸ್ತ್ಯರಲ್ಲಿ ತಾತ್ತ್ವಿಕ ಇತಿಹಾಸದ ವೈವಿಧ್ಯ, ಸೂಕ್ಷ್ಮತೆಗಳು ಕಡಿಮೆ ಇದ್ದರೂ ಅವರಿಗೆ ತಮ್ಮದೇ ಆದ ಸಂಪ್ರದಾಯದ ಹಿನ್ನಲೆ ಇದ್ದು, ಯಾವ ಹೊಸ ಭಾವನೆಯನ್ನು ಬೇಕಾದರೂ ತಮ್ಮ ಮೂಲ ಭಾವನೆಗಳಲ್ಲಿ ಗುರುತಿಸಬಲ್ಲವರಾಗಿದ್ದಾರೆ. ಭಾರತದಲ್ಲಿ ಹತ್ತೊಂಬತ್ತನೆಯ ಶತಮಾನ ಜ್ಞಾನಪ್ರಸರಣ ಕಾರ್ಯದ ಅತ್ಯಂತ ಶ್ರೇಷ್ಠಯುಗವೆಂದು ಪರಿಗಣಿಸಲ್ಪಟ್ಟಿದೆ. ಆ ಕಾಲದಲ್ಲಿ ಹಲವು ಭಾವನೆಗಳೂ ವಿಜ್ಞಾನ ಮತ್ತು ಸಂಸ್ಕೃತಿಗಳೂ ಒಂದು ನವೋದಯಕ್ಕೆ ಹಾದಿ ಮಾಡಿದುವು. ಇದರಿಂದ ನಮ್ಮ ದೃಷ್ಟಿ ಬದಲಾಗಿ, ವಿಶಾಲವಾಯಿತು. ಈ ಪುನರುಜ್ಜೀವನ ಕಾಲ ನಮ್ಮಲ್ಲಿದ್ದ ಶ್ರೇಷ್ಠ ಜ್ಞಾನಿಗಳನ್ನು ಶುದ್ಧ ತಾತ್ತ್ವಿಕ ದರ್ಶನಕ್ಷೇತ್ರಕ್ಕೆ ತಕ್ಕ ಮಾನಸಿಕ ಇತಿಹಾಸಕಾರರಾಗುವಂತೆ ಪ್ರೇರೇಪಿಸಬಹುದಿತ್ತು. ಆದರೆ ನಮ್ಮ ಆ ಕಾಲದ ಪ್ರತಿಕ್ರಿಯೆ ಅಷ್ಟು ಆಶಾದಾಯಕವಾದದ್ದಾಗಿರಲಿಲ್ಲ. ನಮ್ಮಲ್ಲಿ ಆ ರೀತಿಯ ಇತಿಹಾಸವನ್ನು ಅಭ್ಯಾಸ ಮಾಡಲು ಸಾಕಷ್ಟು ಆಧಾರಗಳಿರಲಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ, ಬ್ರಹ್ಮಸಮಾಜ, ಆರ್ಯಸಮಾಜ, ಪ್ರಾರ್ಥನಾ ಸಮಾಜ, ರಾಮಕೃಷ್ಣಾಶ್ರಮ, ವಿವೇಕಾನಂದರ ಚಳವಳಿ, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ, ಅಲಿಘಡದ ಚಳವಳಿ, ರಾಷ್ಟ್ರೀಯತೆಯ ಬೆಳವಣಿಗೆ, ಕ್ರೈಸ್ತ ಪಾದ್ರಿಗಳ ಕಾರ್ಯಚಟುವಟಿಕೆ, ಗಾಂಧೀ ದರ್ಶನ—ಇವೇ ಮೊದಲಾದ ಕಾರ್ಯಚಟುವಟಿಕೆಗಳ ಬಗ್ಗೆ ದೊರೆಯಬಹುದಾದ ಮಾಹಿತಿ ಅಥವಾ ಆಧಾರ ಸಾಕಷ್ಟಿವೆ. ಈ ಚಳವಳಿಗಳೂ ಅವುಗಳ ಹಿಂದಿದ್ದ ಭಾವನೆಗಳೂ ಹೇಗೆ ಮತ್ತು ಎಷ್ಟರ ಮಟ್ಟಿಗೆ ಸಾಮಾನ್ಯ ವಿದ್ಯಾವಂತರ ಮೇಲೆ ಮತ್ತು ಅವಿದ್ಯಾವಂತರ ಮೇಲೆ ಪ್ರಭಾವ ಬೀರಿದುವು ಎಂಬುದರ ಬಗ್ಗೆ ಅಭ್ಯಾಸ ನಡೆಸುವಂತೆ ಈ ಆಧಾರಗಳು ನಮ್ಮನ್ನು ಕೈಬೀಸಿ ಕರೆಯುತ್ತಿವೆ. ನಮ್ಮಲ್ಲಿ ಈ ಚಳವಳಿಗಳ ಮೇಲೆ ಪಾಂಡಿತ್ಯಪೂರ್ಣ ಗ್ರಂಥಗಳು ಬೇಕಾದಷ್ಟಿವೆ. ಆದರೆ ಆ ಭಾವನೆಗಳು ಜನಸಮುದಾಯವನ್ನು ಹೇಗೆ ಮುಟ್ಟಿದವು, ಆ ಭಾವನೆಗಳ ಪರಸ್ಪರ ಸಂಬಂಧ ಏನು, ಒಂದು ಭಾವನೆ ಇನ್ನೊಂದರ ಮೇಲೆ ಹೇಗೆ ಪ್ರಭಾವ ಬೀರಿತು, ಅವುಗಳಿಂದ ಉಂಟಾದ ಪರಿಣಾಮ ಅಥವ ಪ್ರತಿಕ್ರಿಯೆಗಳೇನು ಎಂಬೀ ವಿಷಯಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಇನ್ನೂ ಗುರುತಿಸಬೇಕಾಗಿದೆ.

ಈ ವಿಷಯದ ಅಭ್ಯಾಸದಲ್ಲಿ ಮೂಲತಃ ಹೊಂದಾಣಿಕೆಯಿಲ್ಲದಿರುವುದೇ ನಮ್ಮ ಇತಿಹಾಸ ಗ್ರಂಥಗಳಲ್ಲಿ ತೋರಬಹುದಾದ ಅತ್ಯಂತ ಹೆಚ್ಚಿನ ಕೊರತೆ. ಆದರೂ ಯಾರೂ ನಮ್ಮ ಈ ಕೊರತೆಗೆ ತಲೆತಗ್ಗಿಸಬೇಕಾಗಿಲ್ಲ. ಏಕೆಂದರೆ, ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಲ್ಲಿ ಕೂಡ ವೃತ್ತಿಯಿಂದ ಇತಿಹಾಸಕಾರರೆನಿಸಿಕೊಂಡಿರುವ ಪಂಡಿತರೂ ಮಾನಸಿಕ ಇತಿಹಾಸವನ್ನು ಬರೆಯಲು ಅಷ್ಟಾಗಿ ಮುಂದೆ ಬಂದಿಲ್ಲ. ಜರ್ಮನಿಯಲ್ಲಿ ಮಾಕ್ಸ್ ವೆಬರ್ ಎಂಬ ಸಮಾಜಶಾಸ್ತ್ರ ಪಂಡಿತನಿಂದ ಮಾನಸಿಕ ಇತಿಹಾಸ ಪ್ರಸಿದ್ಧಿ ಹೊಂದಿತು. ಆ ಪಂಡಿತನ, "ಪ್ರಾಂಟೆಸ್ಟಂಟ್ ನೀತಿಶಾಸ್ತ್ರ ಮತ್ತು ಬಂಡವಾಳಶಾಹಿಯ ಸತ್ತ್ವ" (*Protestant Ethics and the Spirit of Capitalism*) ಎಂಬ ಗ್ರಂಥವನ್ನು ಮಾನಸಿಕ ಇತಿಹಾಸದ ಮಾದರಿ ಎನ್ನಬಹುದು. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಜೇಮ್ಸ್ ಹಾರ್ವೆ ರಾಬಿನ್‌ಸನ್ನನಿಂದ ರಚಿತವಾದ (೧೯೨೧) "ಮನಸ್ಸಿನ ಬೆಳವಣಿಗೆ" (*Mind in the Making*) ಎಂಬ ಗ್ರಂಥದಿಂದ ಆ ದೇಶದಲ್ಲಿ ಮಾನಸಿಕ ಇತಿಹಾಸದ ಅಭ್ಯಾಸ ಪ್ರಾರಂಭವಾಯಿತೆನ್ನಬಹುದು. ಆದ್ದರಿಂದ, ನಾವು ಈ ದೆಶೆಯಲ್ಲಿ ಮುಂದುವರೆಯಲು ಕಾಲವಿನ್ನೂ ಮಿಂಚಿಲ್ಲ. ಆದರೆ ಈ ಕೆಲಸಕ್ಕೆ ಸಾಕಷ್ಟು ನಿಷ್ಠೆ ಬೇಕು. ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳನ್ನು ಬಂಧಿಸುವ ಒಂದು ದೇಶದ ಸಾರೂಪ್ಯವೇ ಇತಿಹಾಸವೆಂದು ಹೇಳಿದಾಗ ಭಾವನೆಗಳಿಗೆ ಮಾತ್ರ ಪ್ರಾಧಾನ್ಯ ಕೊಟ್ಟಂತಾಗುವುದಾದರೂ ಇದು ನಿಜ. ಮಾನಸಿಕ ಇತಿಹಾಸವನ್ನು ಸರಿಯಾಗಿ ಅಭ್ಯಾಸ ಮಾಡಿದಲ್ಲಿ ನಾವು ಸಾಲೊಮನ್ನನ ಜ್ಞಾನವನ್ನು ಸಾಕ್ರೆಟೀಸನ ವಿವೇಕದೊಂದಿಗೆ ಹೊಂದಿಸಲು ಸಾಧ್ಯವಾದೀತು.

ಈ ಸಂದರ್ಭದಲ್ಲಿ ಇತ್ತೀಚಿನ ಇತಿಹಾಸದ ಬಗ್ಗೆ ಮತ್ತೊಂದು ವಿಷಯ ತಿಳಿಸಬಹುದು. ಈಗ ಭಾರತದಲ್ಲಿ ಭಾರಿ ಪ್ರಮಾಣದ ಬದಲಾವಣೆಯಾಗುತ್ತಿದೆ. ನಮ್ಮ ಇತಿಹಾಸದಲ್ಲೇ ಬಹು ದೊಡ್ಡದಾದ ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿ ಭಾರತದಲ್ಲಿ ಇಂದು ನಡೆಯುತ್ತಿದೆಯೆಂದು ಹೇಳಬಹುದು. ಸರ್ದಾರ್ ಪಣಿಕ್ಕರ್ ಈ ಕ್ರಾಂತಿಯನ್ನು ಕುರುಕ್ಷೇತ್ರದ ಯುದ್ಧಕ್ಕೆ ಹೋಲಿಸಿದ್ದಾರೆ. ಆದರೂ ಇತಿಹಾಸಕಾರರು ಈ ಮಹಾಕ್ರಾಂತಿಯ ಯಾವ ಘಟನೆಯ ಬಗೆಗೂ ಬರೆಯಲು ಅಷ್ಟಾಗಿ ಇಚ್ಛಿಸಿಲ್ಲವೆಂದು ಕಾಣುತ್ತದೆ. ಅಮೆರಿಕದಲ್ಲಿ ಪ್ರಚಲಿತ ಇತಿಹಾಸ (Current History) ಅತ್ಯಂತ ಜನಾದಾರಣೆಯವಾಗಿದೆ. ಆದರೆ ಭಾರತದಲ್ಲಿ ನಾವು ಪ್ರಚಲಿತ ಇತಿಹಾಸದಿಂದ ದೂರ ಹೋಗಲು ಯತ್ನಿಸುತ್ತಿದ್ದೇವೆ. ಇದಕ್ಕೆ ನಾವು ಕೊಡುವ ಕಾರಣ, ಇತ್ತೀಚಿನ ವಿಷಯಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಷ್ಕರಿಸಲು ಸಾಧ್ಯವಿಲ್ಲವೆಂಬುದಾಗಿದೆ. ದೇಶದ ಭವಿಷ್ಯವನ್ನು ಜನತೆಯ ಮುಂದೆ ಇಡುವುದೇ ಇತಿಹಾಸದ ಉದ್ದೇಶ. ಇತಿಹಾಸಕಾರ ರಾಜಕಾರಣಿಗಿಂತ ಭಿನ್ನನಾದ ವ್ಯಕ್ತಿ. ಇತಿಹಾಸದ ಈ ಉದ್ದೇಶ ಪೂರ್ತಿಯಾಗಬೇಕಾ

ದರೆ ಇತಿಹಾಸಕಾರನು ನಮ್ಮ ದೇಶದಲ್ಲಿ ಈಗ ಆಗುತ್ತಿರುವ ಮಹತ್ತರ ಬದಲಾವಣೆಯ ಆವಶ್ಯಕತೆಯನ್ನು ಪ್ರತಿಬಿಂಬಿಸಬೇಕು. ಸ್ವಾತಂತ್ರ್ಯಗಳಿಸಿದಾಗಿನಿಂದಲೂ ನಮ್ಮ ಗುರಿ ಜಾತ್ಯತೀತ ರಾಷ್ಟ್ರವನ್ನು ಕಟ್ಟುವುದೇ ಆಗಿದೆ. ಜಾತ್ಯತೀತ ಭಾವನೆ, ಅಭಿನ್ನ ಸಂಸ್ಕೃತಿ, ಪ್ರಜಾಪ್ರಭುತ್ವ, ಪರಸ್ಪರ ಚರ್ಚೆ ಸಹಕಾರ ಒಪ್ಪಿಗೆಗಳಿಂದ ತೀರ್ಮಾನವಾದ ಒಂದು ಸಾಮಾಜಿಕ ಮತ್ತು ಆರ್ಥಿಕ ರಚನೆ—ಇವು ನಮ್ಮ ದೇಶದ ಮುಂದಿರುವ ಗುರಿಗಳಾಗಿವೆ. ಇವು ನಮ್ಮ ಜನರ ಹೃದಯಗಳಲ್ಲಿ ಮತ್ತು ಮನಸ್ಸಿನಲ್ಲಿ ಆಳವಾಗಿ ಬೇರೂರದಿದ್ದರೆ ನಾವು ಒಗ್ಗಟ್ಟಿನಿಂದ ಮುನ್ನಡೆಯಲು ಸಾಧ್ಯವಾಗುವುದಿಲ್ಲ. ೧೯೪೭ಕ್ಕೆ ಮುಂಚೆ ಭಾರತೀಯರೆಲ್ಲ ಒಗ್ಗಟ್ಟಿನಿಂದ ಹೋರಾಡಲು ಸ್ಫೂರ್ತಿಯನ್ನಿತ್ತ ಹಲವಾರು ಅಂಶಗಳಲ್ಲಿ ಸ್ವರಾಜ್ಯವನ್ನು ಗಳಿಸಬೇಕೆಂಬ ಧ್ಯೇಯವೇ ಮುಖ್ಯವಾಗಿತ್ತು. ಆದರೆ ಸ್ವರಾಜ್ಯವನ್ನು ಗಳಿಸಿದ ಮರುಕ್ಷಣ, ನಮ್ಮಲ್ಲಿಯ ಒಗ್ಗಟ್ಟಿನಲ್ಲಿ ಮತ್ತು ಧ್ಯೇಯದಲ್ಲಿ ಒಡಕುಂಟಾಯಿತು. ನಾವು ನಮ್ಮ ಭಿನ್ನತೆಯ ಗುಣಗಳಿಗೆ ಮತ್ತೆ ಜಾರಿದೆವು. ಪ್ರಚಾರ ಮಾಡುವುದು ಇತಿಹಾಸದ ಕಾರ್ಯವಲ್ಲವೆಂಬುದು ನಿಜ. ಆದರೆ ಅದು ಸುವ್ಯವಸ್ಥಿತವಾಗಿ ಹಾಗೂ ನಿಷ್ಪಕ್ಷಪಾತ ದೃಷ್ಟಿಯಿಂದ ಘಟನೆಗಳನ್ನು ಅಭ್ಯಾಸಮಾಡುವ ಕಲೆ. ತಿಳಿವಳಿಕೆಯನ್ನು ಉತ್ತಮಪಡಿಸುವುದೂ ಒಳ್ಳೆಯ ಗುಣಗಳು ವರ್ಧಿಸುವಂತೆ ಮಾಡುವುದೂ ಒಂದು ದೇಶ ತನ್ನನ್ನೆ ಅರಿತುಕೊಳ್ಳುವಂತೆ ಸಹಾಯ ಮಾಡುವುದೂ ಇತಿಹಾಸದ ಉದ್ದೇಶ. ಈ ಉದ್ದೇಶ ಫಲಿಸಬೇಕಾದರೆ ನಮ್ಮಲ್ಲಿರುವ ಕುಂದು ಕೊರತೆಗಳ ಬಗ್ಗೆ, ನಮ್ಮ ಶಕ್ತಿಗಳ ಬಗ್ಗೆ, ಇತಿಹಾಸಕಾರರು ಸಾರ್ವಜನಿಕರಲ್ಲಿ ಅರಿವನ್ನುಂಟುಮಾಡಿಕೊಡಬೇಕು. ರಾಜಕಾರಣಿಗಳು ಆಗ ನಮ್ಮ ತೀರ್ಮಾನದ ಬಗ್ಗೆ ಎಚ್ಚರಿಕೆಯಿಂದಿರಲು ಪ್ರಯತ್ನಿಸುತ್ತಾರೆ; ಸಾರ್ವಜನಿಕರು ನಮ್ಮ ಅಭಿಪ್ರಾಯಕ್ಕೆ ಮನ್ನಣೆ ತೋರಿಸುತ್ತಾರೆ. ಇತಿಹಾಸಕಾರರು ಸಾರ್ವಜನಿಕ ಅಭಿಪ್ರಾಯ ಮೂಡಿಸುವುದರಲ್ಲಿ ಸಹಾಯಕರಾಗಬಹುದು. ಆಗ ಇತಿಹಾಸಕಾರರು ಅತ್ಯಂತ ಗೌರವ ಪಡೆಯಬಹುದು. ಏಕೆಂದರೆ ಅವರ ಕೃತಿಗಳು ಬರೀ ಗತ ಕಾಲದಿಂದ ತೆಗೆದುಕೊಂಡ ಘಟನಾವಳಿಗಳಾಗದೆ, ಸಜೀವಾತ್ಮಕವಾದ ವರ್ತಮಾನ ಕಾಲದ ಘಟನಾವಳಿಗಳಾಗುತ್ತವೆ. ಈ ದಾರಿಯಲ್ಲಿರುವ ಕಷ್ಟಗಳ ಅರಿವು ನನಗಿದೆ. ಏಕೆಂದರೆ ಒಬ್ಬ ಇತಿಹಾಸಕಾರ ಒಂದು ಗುಂಪಿನ ಪೂರ್ವಾಗ್ರಹಗಳ, ಭಾವನೆಗಳ, ಘೋಷಣೆಗಳ ಮತ್ತು ತನ್ನವೇ ಆದ ಅಭಿಪ್ರಾಯಗಳ ಕೈಗೊಂಬೆಯಾಗಬಹುದು. ಇವನ್ನೂ ಮೀರಿ ನಿಂತ ಶ್ರೇಷ್ಠಮಟ್ಟದ ಚರಿತ್ರಕಾರರು ನಮಗೆ ಇಂದು ಬೇಕಾಗಿದ್ದಾರೆ. ಇಂಥ ಇತಿಹಾಸಕಾರರು ನಿಷ್ಪಕ್ಷಪಾತ ದೃಷ್ಟಿಯಿಂದ ಸತ್ಯವನ್ನು ಅರಸಬಲ್ಲವರಾಗಿರಬೇಕು. ಏಕೆಂದರೆ ಇದೇ ಇತಿಹಾಸಕಾರನ ವೃತ್ತಿಯ ಮೂಲಸಾಧನ. ಪ್ರಚಲಿತ ಇತಿಹಾಸ ನಮ್ಮ ಮುಂದೆ ಧ್ಯೇಯವನ್ನು ಇಡುವುದರಲ್ಲಿ ಸಹಾಯಕವಾಗುವುದಲ್ಲದೆ, ಅದು ಆತ್ಮ ವಿಮರ್ಶೆಯ ಕೈಗನ್ನಡಿಯಾಗುತ್ತದೆ. ಸಮಾಜದ ಉನ್ನತಿಗೆ

ಘಾತಕವಾದ ಕುಂದುಕೊರತೆಗಳನ್ನು ಎತ್ತಿ ತೋರಿಸಲು ಎಡೆಮಾಡಿಕೊಡುತ್ತದೆ. ಈ ಮೂಲಕ ಇತಿಹಾಸ ನಮ್ಮ ಸಮಾಜದ ವ್ಯಾಧಿಗಳಿಗೆ ಸಂಜೀವಿನಿಯಾದೀತು. ಹಿಂದೆ ಎಂದೂ ಇಲ್ಲದ ಆತ್ಮ ವಿಮರ್ಶದೃಷ್ಟಿ ನಮಗೆ ಇಂದು ಆವಶ್ಯಕವಾಗಿ ಬೇಕಾಗಿದೆ. ನಮ್ಮ ದೇಶದ ವ್ಯವಹಾರ ಇಂದು ಯಾವ ಗೊಂದಲದಲ್ಲಾದರೂ ನಮ್ಮನ್ನು ನೂಕಬಹುದಾಗಿರುವುದರಿಂದ, ಈ ಆತ್ಮವಿಮರ್ಶೆಯ ಅರಿವು ಬಹಳ ಉಪಯುಕ್ತ. ಇತಿಹಾಸಕಾರರು ಈ ಅರಿವು ಉಂಟುಮಾಡುವ ಪ್ರಯತ್ನದಲ್ಲಿ ಜಯಶೀಲರಾಗುತ್ತಾರೆಂದು ನಂಬಬೇಕಾಗಿದೆ.

ಒಟ್ಟಿನಲ್ಲಿ ಇತಿಹಾಸದ ಈ ಸತ್ತ್ವವನ್ನೂ ಅದರ ಆವಶ್ಯಕತೆಯನ್ನೂ, ತೋರಿಸುವುದೇ ಈ ಲೇಖನದ ಉದ್ದೇಶ. ಚಿಕ್ಕ ಮತ್ತು ದೊಡ್ಡ ಘಟನೆಗಳನ್ನೂ ಚಾರಿತ್ರಿಕ ಪರಿಷ್ಕರಣದಲ್ಲಿ ಅಳವಡಿಸಿಕೊಳ್ಳಬೇಕು ; ಅದು ಸಾಮಾಜಿಕ, ಆರ್ಥಿಕ, ಮಾನಸಿಕ, ಪ್ರಚಲಿತ ಇತಿಹಾಸಗಳ ಪರಸ್ಪರ ಸಂಬಂಧವನ್ನೂ ಅದರ ಆವಶ್ಯಕತೆಯನ್ನೂ ಅರಿಯಬೇಕು. ಈ ಪೂರ್ಣದೃಷ್ಟಿಯೇ ಇತಿಹಾಸದ ಜೀವಾಳ.

ಡಾ. ಬಿ. ಕೆ. ಗುರುರಾಜರಾವ್

ದಕ್ಷಿಣ ಭಾರತದಲ್ಲಿ ಬೃಹತ್‌ಶಿಲಾಸಮಾಧಿ ಸಂಸ್ಕೃತಿ

ಬೃಹತ್‌ಶಿಲಾಸಮಾಧಿ ಸಂಸ್ಕೃತಿಯ ಹೆಸರು ಗ್ರೀಕ್ ಪದಗಳಾದ 'ಮೆಗಾಸ್' ಎಂದರೆ ದೊಡ್ಡ ಮತ್ತು 'ಲಿಥಾಸ್' ಎಂದರೆ ಕಲ್ಲು ಎಂಬೆರಡು ಪದಗಳಿಂದಾಗಿದ್ದು, ಆಂಗ್ಲಭಾಷೆಯಲ್ಲಿ 'ಮೆಗಾಲಿಥಿಕ್' ಎಂದಾಗಿದೆ. ಮೆಗಾಲಿಥಿಕ್ ಎಂದರೆ ದೊಡ್ಡ ಶಿಲೆಗಳಿಂದ ನಿರ್ಮಿತವಾದ ಸಮಾಧಿ ಕಟ್ಟಡ, ಅಥವಾ ಅಂತಹ ಕಟ್ಟಡಗಳುಳ್ಳ ಸಂಸ್ಕೃತಿ. ಹಾಗೆಂದಮಾತ್ರಕ್ಕೆ ದೊಡ್ಡಶಿಲೆಗಳಿಂದ ನಿರ್ಮಿತವಾದ ಕಟ್ಟಡಗಳೆಲ್ಲ ಬೃಹತ್‌ಶಿಲಾಸಮಾಧಿ ಸಂಸ್ಕೃತಿಗೆ ಸೇರಿದವೆಂದು ಹೇಳಲಾಗುವುದಿಲ್ಲ. ಯಾವುದೇ ಕಟ್ಟಡಗಳನ್ನು ಈ ಸಂಸ್ಕೃತಿಗೆ ಸೇರಿದವೆಂದು ಪರಿಗಣಿಸಬೇಕಾದರೆ ಅವು ಕಲ್ಲಿನಿಂದ ನಿರ್ಮಿಸಲ್ಪಟ್ಟ ಸಮಾಧಿಗಳಾಗಿರಬೇಕು. ದಕ್ಷಿಣಭಾರತದಲ್ಲಿ ಈ ಸಂಸ್ಕೃತಿಗೆ ಸೇರಿದ ಎಲ್ಲ ಸಮಾಧಿಗಳೂ ದೊಡ್ಡ ಕಲ್ಲುಗಳಿಂದ ನಿರ್ಮಿತವಾಗಿಲ್ಲ. ಸಣ್ಣ ಕಲ್ಲುಗಳಿಂದಲೇ ಅನೇಕ ಸಮಾಧಿಗಳು ನಿರ್ಮಿತವಾಗಿವೆ. ಅಲ್ಲದೆ, ಹಲವಾರು ಸಮಾಧಿಗಳ ನಿರ್ಮಾಣಕಾರ್ಯದಲ್ಲಿ ಕಲ್ಲುಗಳ ಉಪಯೋಗವೇ ಕಂಡುಬರದಿದ್ದರೂ ಸಾಂಸ್ಕೃತಿಕ ಅಂಶಗಳಲ್ಲಿ ಕಾಣುವ ಬಹಳಷ್ಟು ಸಾಮ್ಯಗಳಿಂದ ಅಂಥ ಸಮಾಧಿಗಳನ್ನು ಈ ಸಂಸ್ಕೃತಿಗೆ ಸೇರಿಸಬೇಕಾಗುತ್ತದೆ.

ಈ ರೀತಿಯ ಸಮಾಧಿಗಳು ದಕ್ಷಿಣಭಾರತದ ಮೂಲೆಮೂಲೆಗಳಲ್ಲೂ—ಅದರಲ್ಲೂ ಕರ್ಣಾಟಕದ ಪ್ರತಿಯೊಂದು ಜಿಲ್ಲೆಯಲ್ಲೂ—ಬಹುಸಂಖ್ಯಾತವಾಗಿದ್ದು, ಅವುಗಳಲ್ಲಿ ಅನೇಕ ವಿಧಗಳು ಕಂಡುಬಂದಿವೆ. ಇದರಿಂದ ಈ ಜನ ದಕ್ಷಿಣಭಾರತದಲ್ಲಿ ಬಹಳ ಪ್ರಬಲರಾಗಿದ್ದರೆಂದೂ ದೀರ್ಘಕಾಲ ಈ ಸಂಸ್ಕೃತಿ ನೆಲಸಿದ್ದಿತೆಂದೂ ನಿಸ್ಸಂದೇಹವಾಗಿ ಹೇಳಬಹುದು. ದಕ್ಷಿಣಭಾರತದ ಮಾನವಸಂಸ್ಕೃತಿಗಳ ಇತಿಹಾಸದಲ್ಲಿ ಇವುಗಳ ಪ್ರಾಮುಖ್ಯದ ಬಗೆಗೆ ಗಹನವಾದ ಸಂಶೋಧನೆಗಳು ನಡೆದಿವೆ. ಈ ಸಂಸ್ಕೃತಿ ಕ್ರಿ.ಪೂ. ಮೊದಲನೆಯ ಸಹಸ್ರಮಾನದಲ್ಲಿ ರೂಢಿಗೆಬಂದು ಕ್ರಮೇಣ ಚಾರಿತ್ರಕಯುಗವನ್ನು ಪ್ರಾರಂಭಿಸಿತೆಂದು ತಿಳಿದುಬಂದಿದೆ. ಕಬ್ಬಿಣವಸ್ತುಗಳ ತಯಾರಿಕೆ ಮತ್ತು ಉಪಯೋಗ, ಕುಂಬಾರ ಚಕ್ರದಮೇಲೆ ಮಾಡಿದ ಹೊಸ ರೀತಿಯ ಕಪ್ಪು-ಮತ್ತು-ಕೆಂಪುಬಣ್ಣದ ಮಣ್ಣಿನ ಪಾತ್ರೆಗಳ ಉಪಯೋಗ ಇವನ್ನು

ಈ ಸಂಸ್ಕೃತಿ ಬಳಕೆಗೆ ತಂದುದೇ ಅಲ್ಲದೆ ಸುಧಾರಿತ ಕೆರೆನೀರಾವರಿ ಬೇಸಾಯ ಪದ್ಧತಿಯನ್ನೂ ಪ್ರಾರಂಭಿಸಲು ಕಾರಣವಾಯಿತು. ತಮಿಳಿನ ಸಂಘಸಾಹಿತ್ಯದ ಶಾತವಾಹನಕಾಲದ ಸಮಾಜದಲ್ಲಿ ಕಾಣುವ ಸುವ್ಯವಸ್ಥಿತ ರಾಜ್ಯಗಳು, ಒಳ ಮತ್ತು ಹೊರನಾಡುಗಳೊಡನೆ ಏರ್ಪಟ್ಟಿದ್ದ ವ್ಯಾಪಾರ-ವಾಣಿಜ್ಯ ಚಟುವಟಿಕೆಗಳು, ಪ್ರಗತಿಪರ ಕಲೆ, ಕೈಗಾರಿಕೆ ಮತ್ತು ಸಾಹಿತ್ಯ—ಇವುಗಳಿಗೆ ಆಧಾರವಾಗಿದ್ದ ಸುಧಾರಿತ ವ್ಯವಸಾಯಪದ್ಧತಿಗಳನ್ನು ಬಳಕೆಗೆ ತರಲು ಈ ಸಂಸ್ಕೃತಿಯ ಜನ ಕಾರಣರೆಂದು ಖಚಿತವಾಗಿ ಹೇಳಬಹುದು. ಈ ಬೃಹತ್ ಶಿಲಾಸಮಾಧಿ ಸಂಸ್ಕೃತಿ ಪ್ರಗತಿಗಾಮಿ ನಾಗರಿಕ ಸಮಾಜದ ಒಂದಂಶವನ್ನು ಪ್ರತಿನಿಧಿಸುತ್ತಿದ್ದರೂ ಈ ಜನ ದಕ್ಷಿಣಭಾರತಕ್ಕೆ ಸಲ್ಲಿಸಿದ ಅಮೂಲ್ಯಸೇವೆ ಮೇಲೆ ಹೇಳಿದ ಅಂಶಗಳಿಂದ ವ್ಯಕ್ತ ವಾಗುತ್ತದೆ. ಆದ್ದರಿಂದ ಈ ಜನ ಯಾರು? ಎಲ್ಲಿಂದ ಬಂದರು? ಅವರಾಡುತ್ತಿದ್ದ ಭಾಷೆ ಯಾವುದು? ಎಂಬ ಪ್ರಶ್ನೆಗಳ ಉತ್ತರ ಇತಿಹಾಸ ದೃಷ್ಟಿಯಿಂದ ಬಹಳ ಮಹತ್ತ್ವಹೊಂದಿವೆ.

ದಕ್ಷಿಣಭಾರತದಲ್ಲಿ ಅಸಂಖ್ಯಾತವಾಗಿ ಕಂಡುಬರುವ ಈ ಸಮಾಧಿಗಳಲ್ಲಿ ವಿಶೇಷ ವಾಗಿ ರೂಢಿಯಲ್ಲಿದ್ದ ವಿಧಗಳು—(1) ಶಿಲಾವರ್ತುಲಗಳು—ಇವು ಕೆಲವುಬಾರಿ ಜಲ್ಲಿ ಕಲ್ಲಿನ ಗುಡ್ಡೆಯ ತಳದಲ್ಲಿರುತ್ತಿದ್ದ ಸಮಾಧಿಗಳನ್ನು ಆವರಿಸಿರುತ್ತಿದ್ದುವು. (2) ಒರಟಾದ ಕಲ್ಲುಬಂಡೆಗಳಿಂದ ನಿರ್ಮಿತವಾದ ಶಿಲಾತೊಟ್ಟಿಗಳು. (3) ತೆಳುವಾದ ಕಲ್ಲುಚಪ್ಪಡಿಗಳಿಂದ ರಚಿತವಾದ ತೊಟ್ಟಿಗಳು—ಕೆಲವು ಬಾರಿ ಈ ಚಪ್ಪಡಿಗಳ ಲ್ಲೊಂದರಲ್ಲಿ ಗುಂಡಾದ ಪ್ರವೇಶರಂಧ್ರವಿರುತ್ತಿತ್ತು. (4) ಸಮಾಧಿಗುಂಡಿಗಳು— ಈ ಗುಂಡಿಗಳಲ್ಲಿ ಸಾಮಾನ್ಯವಾಗಿ ದೊಡ್ಡ ಮಣ್ಣಿನ ಕುಂಭಗಳಲ್ಲೋ ತೊಟ್ಟಿ ಗಳಲ್ಲೋ ಅವಶೇಷಗಳನ್ನು ಇಟ್ಟಿರುತ್ತಿದ್ದರೆ, ಹಲವು ಗುಂಡಿಗಳಲ್ಲಿ ಮಣ್ಣಿನ ಪಾತ್ರೆಗಳಿಲ್ಲದೆ ನೇರವಾಗಿ ನೆಲದ ಮೇಲೆ ಅಸ್ಥಿಗಳನ್ನು ಇಡುತ್ತಿದ್ದರು. ಇವಲ್ಲದೆ ಕೆಲವು ಬಗೆಯ ಸಮಾಧಿಗಳು ಕೆಲವು ಪ್ರದೇಶಗಳಿಗೆ ಸೀಮಿತವಾಗಿರುತ್ತಿದ್ದುವು. ಉದಾಹರಣೆಗೆ: (ಅ) ಬಂಡೆಗಳಲ್ಲಿ ಕೊರೆದ ಗುಹಾಸಮಾಧಿಗಳು, (ಆ) ಕೊಡೆ ಕಲ್ಲುಗಳು—ಗುಂಡಿಯೊಳಗೆ ಶವವನ್ನು ಹೂತಿರುವ ಸ್ಥಳನಿರ್ದೇಶನಕ್ಕಾಗಿ ನೆಡುತ್ತಿದ್ದ, ಕೊಡೆಯನ್ನು ಹೋಲುವ ಶಿಲೆಗಳು ಮತ್ತು (ಇ) ಟೋಪಿಕಲ್ಲುಗಳು— ಮೇಲೆ ಹೇಳಿದ ಉದ್ದೇಶಸಾಧನೆಗಾಗಿ ನೆಟ್ಟ ಟೋಪಿಯಾಕಾರದ ಕಲ್ಲುಗಳು. ಈ ರೀತಿಯ ಸಮಾಧಿಗಳು ಕೇರಳದಲ್ಲಿ ಮಾತ್ರ ಕಂಡುಬಂದಿವೆ. ಇವಲ್ಲದೆ 'ಮೆನ್ಹಿರ್' ಅಥವಾ ನೆಡುಕಲ್ಲುಗಳು—ನೆಟ್ಟಗೆ ನಿಲ್ಲಿಸಿದ ಕಲ್ಲುಗಳು—ಇವೆ. ಇವು ಒಂದು ಸಾಲಿನಲ್ಲಿ ನೆಟ್ಟ ಕಲ್ಲುಗಳು. ಎರಡು ಅಥವಾ ಹೆಚ್ಚು ಸಾಲುಗಳಲ್ಲಿ ನೆಟ್ಟುದರಿಂದ ಉಂಟಾದ ಸಾಲುನೆಲೆಗಳು ಹಲವಾರು ಪ್ರದೇಶಗಳಲ್ಲಿ ಕಂಡು ಬಂದರೂ ಅವು ಇತರ ವಿಧಗಳಷ್ಟು ಹೆಚ್ಚಾಗಿ ಪ್ರಸರಿತವಾಗಿಲ್ಲ. ಮೇಲಿನ ವಿಧಗಳ ವಿಂಗಡಣೆ ಪರಸ್ಪರ ಹೊರತಾಗಿಯೂ ಇಲ್ಲ; ಪೂರ್ಣವ್ಯಾಪಕವಾಗಿರಲೂ

ಸಾಧ್ಯವಿಲ್ಲ. ಮಣ್ಣಿನ ಕುಂಭ ಅಥವಾ ತೊಟ್ಟಿಗಳನ್ನು ಸಾಮಾನ್ಯವಾಗಿ ಶಿಲಾ ವರ್ತುಲಗಳಲ್ಲಾಗಲಿ, ಶಿಲಾತೊಟ್ಟಿಗಳಲ್ಲಾಗಲಿ ಇಟ್ಟಿರುತ್ತಿದ್ದರು. ಹಾಗೆಯೇ ಸಮಾಧಿಗುಂಡಿಯನ್ನೋ ಶಿಲಾತೊಟ್ಟಿಯನ್ನೋ ಕೇವಲ ಮಣ್ಣಿನ ಕುಂಭ ಅಥವಾ ತೊಟ್ಟಿಯನ್ನೋ ಒಂದು ಶಿಲಾವರ್ತುಲ ಆವರಿಸಿಕೊಂಡಿರಬಹುದು. ಬಹುವಾಗಿ ಪರಿಸರದಲ್ಲಿ ಕಂಡುಬರುವ ಶಿಲಾಪದರಗಳ ಪ್ರಕೃತಿಗನುಗುಣವಾಗಿ ಸಮಾಧಿಗಳ ಆಕಾರ ನಿರ್ಧರಿಸಲ್ಪಡುತ್ತದೆ. ಗ್ರಾನೈಟ್ ಅಥವಾ ಪದರಗಳುಳ್ಳ ಶಿಲೆಗಳು ದೊರಕುವ ಪ್ರದೇಶದಲ್ಲಿ ಮಾತ್ರ ಕಲ್ಲುಚಪ್ಪಡಿಯ ತೊಟ್ಟಿಗಳನ್ನು ನಿರ್ಮಿಸಲು ಸಾಧ್ಯ. ಮೃದುವಾದ ಲ್ಯಾಟರೈಟ್ ಶಿಲೆಗಳುಳ್ಳೆಡೆಗಳಲ್ಲಿ ಗುಹಾ ಸಮಾಧಿಗಳನ್ನು ನಿರ್ಮಿಸುತ್ತಿದ್ದರು. ದೊಡ್ಡ ಕಲ್ಲುಗುಂಡುಗಳು ದೊರಕುತ್ತಿದ್ದ ಪ್ರದೇಶಗಳಲ್ಲಿ ಶಿಲಾವರ್ತುಲಗಳನ್ನು ಕಟ್ಟಲಾಗಿತ್ತು. ತಕ್ಕ ಕಲ್ಲುಗಳು ದೊರಕದ ಅಥವಾ ಕಲ್ಲಿನ ಅಭಾವವಿದ್ದ ಪ್ರದೇಶಗಳಲ್ಲಿ ಕೇವಲ ಸಮಾಧಿಗುಂಡಿಗಳು ಬಳಕೆ ಯಲ್ಲಿದ್ದುವು. ಹೀಗೆ ವಿವಿಧ ಪ್ರದೇಶಗಳ ಶಿಲಾರಚನೆಯ ಪ್ರಭಾವ ಕಂಡು ಬಂದರೂ ಕೆಲವು ಬಾರಿ ಹಲವಿಧ ಸಮಾಧಿಗಳು ಒಂದೇ ಪ್ರದೇಶದಲ್ಲಿ ಜೊತೆ ಯಾಗಿಯೂ ಇರುತ್ತವೆ. ಈ ರೀತಿಯಾದ ಭಿನ್ನ ವಿಧಗಳು ಒಟ್ಟಿಗೆ ಕಂಡುಬರಲು ಕಾರಣಗಳೇನೆಂಬುದು ಸ್ಪಷ್ಟವಿಲ್ಲವಾದರೂ ಬಹುಶಃ ವೈಯಕ್ತಿಕ ಸಾಮರ್ಥ್ಯ ಅಥವಾ ಅಭಿರುಚಿಯೂ ಆ ಸಮಾಜದಲ್ಲಿದ್ದ ಪಂಗಡಗಳು ಅಥವಾ ಮತೀಯ ವೈವಿಧ್ಯಗಳೂ ಇದಕ್ಕೆ ಕಾರಣವಾಗಿರಬೇಕೆಂದು ಊಹಿಸಲಾಗಿದೆ.

ಸಾಮಾನ್ಯವಾಗಿ ಈ ಸಮಾಧಿಗಳಲ್ಲಿ ಸತ್ತವರ ಅಸ್ಥಿಗಳಲ್ಲದೆ, ಅವರ ಆತ್ಮ ತೃಪ್ತ್ಯರ್ಥವಾಗಿ ಸಣ್ಣ ಮಣ್ಣಿನ ಪಾತ್ರೆಗಳಲ್ಲಿ ನಿಕ್ಷೇಪಿಸಿದ್ದ ಆಹುತಿ, ಮೃತರಿಗೆ ಸೇರಿದ ಆಭರಣಗಳು, ಆಯುಧೋಪಕರಣಗಳು ಮುಂತಾದ ವಸ್ತುಗಳು ಕಂಡು ಬರುತ್ತವೆ. ಸಾಧಾರಣವಾಗಿ ಈ ಮಣ್ಣಿನಪಾತ್ರೆಗಳು ಕಪ್ಪು ಮತ್ತು ಕೆಂಪು, ಪೂರ್ಣಕಪ್ಪು ಅಥವಾ ಪೂರ್ಣಕೆಂಪು ಮಣ್ಪಾತ್ರೆಗಳ ಗುಂಪಿಗೆ ಸೇರುತ್ತವೆ. ಕೆಲಬಾರಿ ಈ ಪಾತ್ರೆಗಳ ಮೇಲೆ ಕೊರೆದ ಅಥವಾ ಬಣ್ಣಗಳಿಂದ ಚಿತ್ರಿಸಿದ ರೇಖಾ ನಕ್ಷೆಗಳು ಅಥವಾ ಸುಟ್ಟ ಅನಂತರ ರಚಿಸಿದ, ಬಹುಶಃ ಒಡೆತನವನ್ನು ಸೂಚಿಸುವ ಗೀರುಚಿತ್ರಗಳು ಅಲಂಕಾರಸಾಧನಗಳಾಗಿ ಉಪಯೋಗಿಸಲ್ಪಟ್ಟಿರು ತ್ತವೆ. ಈ ಸಮಾಧಿಗಳಲ್ಲಿ ತಪ್ಪದೆ ಕಾಣಬರುವ ಕಬ್ಬಿಣದ ಆಯುಧೋಪಕರಣಗಳು ಮೃತರು ತಮ್ಮ ಜೀವಿತಕಾಲದಲ್ಲಿ ಉಪಯೋಗಿಸುತ್ತಿದ್ದವುಗಳಾಗಿರಬಹುದು. ಕೆಲವೊಂದುಬಾರಿ ಕಬ್ಬಿಣದ ವಸ್ತುಗಳಿಲ್ಲದ ಸಮಾಧಿಗಳು ಕಂಡುಬಂದರೂ ಹಾಗಾಗುವುದು ಆಕಸ್ಮಿಕವಾಗಿದ್ದು, ಹೆಚ್ಚಿನ ಮಹತ್ತ್ವವೇನೂ ಇಲ್ಲ. ಈ ಆಯುಧೋಪಕರಣಗಳಲ್ಲಿ ಸಾಮಾನ್ಯವಾಗಿ ಕತ್ತಿ, ಚಾಕು, ಭರ್ಜಿಮೊನೆ ಮುಂತಾದ ಆಯುಧಗಳೂ ಮಚ್ಚು, ಕೊಡಲಿ, ಕುಡುಗೋಲು, ಗುದ್ದಲಿ ಮುಂತಾದ ವ್ಯವಸಾಯೋಪಕರಣಗಳೂ ಹಣತೆ, ತೂಗುಸಾಧನ, ಬಾಣಲಿ ಮುಂತಾದ

ಗೃಹೋಪಕರಣಗಳೂ ದೊರಕುತ್ತವೆ. ಅನೇಕವಾಗಿ ಎಲ್ಲಾ ಸಮಾಧಿಗಳಲ್ಲೂ ಎಲುಬಿನ ಚೂರುಗಳು, ತಲೆಬುರುಡೆಗಳು ಮುಂತಾದ ಮೃತದೇಹದ ಅವಶೇಷಗಳು ದೊರಕುತ್ತವೆ. ಸಾಮಾನ್ಯವಾಗಿ ಈ ಸಮಾಧಿಗಳು ಗೌಣ ಅಥವಾ ದ್ವಿತೀಯ ಹಂತದ ಸಮಾಧಿಗಳು. ಮೃತದೇಹವನ್ನು ಮೊದಲು ಕೆಲಕಾಲ ಪ್ರಕೃತಿಯಲ್ಲಿ ತೆರೆದಿಟ್ಟಿದ್ದು ಅಥವಾ ತಾತ್ಕಾಲಿಕ ಸಮಾಧಿಗಳಲ್ಲಿ ಹೂತಿಟ್ಟಿದ್ದು, ಮಾಂಸಚರ್ಮಗಳು ನಶಿಸಿದ ಅನಂತರ ಮೊದಲ ತಾತ್ಕಾಲಿಕ ಸಮಾಧಿಗಳಿಂದ ಉಳಿದ ಮೂಳೆಗಳನ್ನು ತೆಗೆದು ವಿಧ್ಯುಕ್ತವಾಗಿ ದ್ವಿತೀಯ ಹಂತದ ಸಮಾಧಿಗಳಲ್ಲಿ ಹೂತಿಡುತ್ತಿದ್ದರೆಂಬುದಾಗಿ ಅಭಿಪ್ರಾಯಪಡಲಾಗಿದೆ. ಆದ್ದರಿಂದ ಮೃತ ದೇಹದ ಪೂರ್ಣ ಅವಶೇಷಗಳು ಕಾಣಬರುವುದಿಲ್ಲ. ಈ ಕಾರಣದಿಂದ ಅವಶೇಷಗಳು ಮೊದಲ ಹಂತದ ಸಮಾಧಿಗಳಲ್ಲಿ ಪೂರ್ಣವಾಗಿ ನಾಶವಾಗಿದ್ದರೆ ಅಥವಾ ಕಾರಣಾಂತರಗಳಿಂದ ಮೃತದೇಹ ದೊರಕದಿದ್ದರೆ, ಅಂಥವರ ಸಮಾಧಿಗಳಲ್ಲಿ ಅಸ್ಥಿಗಳ ಅವಶೇಷಗಳಿಲ್ಲದೆಯೂ ಇರಬಹುದು. ಕೆಲವುಬಾರಿ ಈ ಸಮಾಧಿಗಳಲ್ಲಿ ಪೂರ್ಣದೇಹವನ್ನು ಹೂತಿರುವ ನಿದರ್ಶನಗಳೂ ಇವೆ. ಅಲ್ಲದೆ ಮೃತದೇಹಗಳನ್ನು ಸುಟ್ಟ ಅನಂತರ ದೊರಕುವ ಮೂಳೆಗಳನ್ನು ಹೂತ ನಿದರ್ಶನಗಳೂ ಕಂಡುಬಂದಿವೆ. ಈ ರೀತಿಯ ನಿಯಮಕ್ಕೆ ಹೊರತಾದ ಅಪಸರಣ ವಿಧಾನಗಳು ಬಹಳ ವಿರಳವಾಗಿದ್ದು ಅಪವಾದಾತ್ಮಕವಾಗಿವೆಯಷ್ಟೆ. ಇದಲ್ಲದೆ ಈ ಸಮಾಧಿಗಳಲ್ಲಿ ಕೆಲವು ಸಲ ಚಿನ್ನ, ತಾಮ್ರ ಮತ್ತು ಕಂಚಿನ ಆಭರಣವಸ್ತುಗಳೂ ಸುಟ್ಟಮಣ್ಣಿನ ಅಥವಾ ಬೆಲೆಬಾಳುವ ಕಲ್ಲುಗಳ ಮಣಿಗಳೂ ಸಿಕ್ಕುವುದುಂಟು.

ಈ ಸಮಾಧಿಗಳ ನಿರ್ಮಾಪಕರು ಯಾರು? ಇವರ ಕಾಲವೇನು? ಎಂಬ ವಿಚಾರದಲ್ಲಿ ವಿದ್ವಾಂಸರಲ್ಲಿ ಹಲವಾರು ದಶಕಗಳಿಂದ ಚರ್ಚೆ ನಡೆದಿದ್ದು ಹಲವು ತಾತ್ಕಾಲಿಕ ಉತ್ತರಗಳು ಸೂಚಿತವಾಗಿ, ಇತ್ತೀಚಿನ ವರೆಗೂ ಅಂತಿಮ ನಿರ್ಧಾರವಾಗಿರಲಿಲ್ಲ. ಇತ್ತೀಚೆಗೆ ಪುರಾತತ್ತ್ವಸಂಶೋಧನೆಗಳಲ್ಲಿ ದೊರಕಿರುವ ಸಾಕ್ಷ್ಯಗಳಿಂದ ಈ ಸಮಸ್ಯೆಗಳಿಗೆ ಹೆಚ್ಚು ಸಂಭವನೀಯವಾದ ಮತ್ತು ಬಹುಭಾಗ ವಿದ್ವಾಂಸರು ಒಪ್ಪಿಕೊಂಡಿರುವ ಉತ್ತರಗಳು ಬೆಳಕಿಗೆ ಬಂದಿವೆ.

ಜರ್ಮನ್ ವಿದ್ವಾಂಸ ಕೌಂಟ್ ಫ್ಯೂರರ್ ವಾನ್ ಹೈಮೆನ್‌ಡಾರ್ಫ್[1] ಎಂಬಾತ ಈ ಜನ ದಕ್ಷಿಣಭಾರತದ ಇತಿಹಾಸದ ಆದ್ಯಪ್ರವರ್ತಕರಾದ ದ್ರಾವಿಡ ಭಾಷೆಗಳನ್ನಾಡುವ ಜನರಲ್ಲದೆ ಬೇರೆ ಯಾರೂ ಆಗಿರಲು ಸಾಧ್ಯವಿಲ್ಲವೆಂಬುದಾಗಿ ವಾದಿಸಿದ್ದಾನೆ. ಅಶೋಕನ ಶಾಸನಗಳಲ್ಲಿ ದ್ರಾವಿಡಭಾಷೆಯನ್ನು ಪಯೋಗಿಸುತ್ತಿದ್ದ ಚೋಳ, ಪಾಂಡ್ಯ, ಸತ್ಯಪುತ್ರ ಮತ್ತು ಕೇರಳಪುತ್ರ ರಾಜ್ಯಗಳ ಉಲ್ಲೇಖ ಕಂಡು

[1] Presidential address to Anthrop. Archæol. Sect. Ind. Sci. Cong. Assoc., 1950, pp. 179–80; and Indo-Asian Culture, Vol. 2, 1954, pp. 238–247

ಬರುತ್ತದೆ. ಬ್ರಹ್ಮಗಿರಿ ನೆಲೆಯಲ್ಲಿ ಪ್ರಾಕ್ತನ ಸಂಶೋಧನೆ ನಡೆಸಿದ ಡಾ. ಮಾರ್ಟಿಮರ್ ವೀಲರನ[1] ಅಭಿಪ್ರಾಯದಂತೆ ಈ ಸಂಸ್ಕೃತಿಯ ಜನ ಕ್ರಿ.ಪೂ. ಮೂರನೆಯ ಶತಮಾನದಂತ್ಯ ಅಥವಾ ಎರಡನೆಯ ಶತಮಾನದ ಆದಿಯಲ್ಲಿ ದಕ್ಷಿಣಕ್ಕೆ ಬಂದಿದ್ದರೆ ಅವರಾಡುತ್ತಿದ್ದ ಭಾಷೆ ಯಾವುದು, ರಾಜಕೀಯ ಹಾಗೂ ಸಾಂಸ್ಕೃತಿಕವಾಗಿ ಮೂಲನಿವಾಸಿಗಳನ್ನು ಪೂರ್ಣವಾಗಿ ನಿವಾರಿಸಿದ ಈ ಸಮರ್ಥ ಜನರ ಭಾಷೆ ಲೇಶಮಾತ್ರವೂ ಗುರುತಿಲ್ಲದಂತೆ ನಿರ್ನಾಮವಾಗಲು ಹೇಗೆ ಸಾಧ್ಯ?—ಎಂದು ಹೈಮೆನ್ ಡಾರ್ಫ್ ವಾದಿಸಿದ್ದಾನೆ. ಈ ಬಹುಸಮಂಜಸ ವಾದವಲ್ಲದೆ ಹಲವಿಧವಾದ ಸಾಹಿತ್ಯ, ಭಾಷಾ ಮತ್ತು ಪ್ರಾಕ್ತನ ಶಾಸ್ತ್ರೀಯ ಆಧಾರಗಳೂ ದ್ರಾವಿಡಭಾಷೆಗಳನ್ನುಪಯೋಗಿಸುತ್ತಿದ್ದ ಜನರೇ ಈ ಸಂಸ್ಕೃತಿಯನ್ನು ದಕ್ಷಿಣಭಾರತಕ್ಕೆ ತಂದು, ಅದರ ಬೆಳವಣಿಗೆಗೆ ಕಾರಣರಾದರೆಂಬ ಅಂಶವನ್ನು ಸಮರ್ಥಿಸುತ್ತವೆ. ಸ್ಥಳಾಭಾವದಿಂದ ಆ ಸಾಕ್ಷ್ಯಗಳನ್ನು ಇಲ್ಲಿ ಕೂಲಂಕಷವಾಗಿ ಪರಿಶೀಲಿಸಲು ಸಾಧ್ಯವಿಲ್ಲ. ತಮಿಳು ಭಾಷೆಯ ಸಂಘಸಾಹಿತ್ಯದಲ್ಲಿ ಬೃಹತ್ ಶಿಲಾಸಮಾಧಿಸಂಸ್ಕೃತಿಯಲ್ಲಿ ಕಾಣುವ ಶವಸಂಸ್ಕಾರಪದ್ಧತಿಗಳನ್ನು ಕುರಿತ ಪ್ರಸ್ತಾಪಗಳು ಹೇರಳವಾಗಿ ಕಂಡುಬರುತ್ತವೆ.[2] ಸಂಘಸಾಹಿತ್ಯವನ್ನು ಕ್ರಿ.ಶ. ಮೊದಲ ಮೂರು ಶತಮಾನಗಳ ಕಾಲಕ್ಕೆ ನಿರ್ದೇಶಿಸುವ ವಾದ[3]ವನ್ನೇ ಒಪ್ಪಿಕೊಂಡರೂ ಈ ಸಾಹಿತ್ಯಕ್ಕೆ ದೀರ್ಘಕಾಲದ ಬೆಳವಣಿಗೆಯ ಹಿನ್ನೆಲೆಯಿತ್ತೆಂಬುದೂ ಈ ಸಾಹಿತ್ಯದಲ್ಲಿ ಪ್ರಸ್ತಾಪಿತವಾಗಿರುವ ಅನೇಕ ಕೃತಿಗಳ, ಅವುಗಳ ಕರ್ತೃಗಳ ವಿಷಯ ನಮಗೆ ದೊರಕದೆ ಕಳೆದುಹೋಗಿವೆಯೆಂಬ ಅಂಶಗಳೂ ನಿರ್ವಿವಾದವಾದ ಸಂಗತಿಗಳು.[4] ಅಶೋಕನ ಕಾಲಾನಂತರದ ಕೇವಲ ಎರಡು ಶತಮಾನಗಳಲ್ಲಿ ಅನಾಗರಿಕ ಅನಕ್ಷರಸ್ಥದೆಶೆಯಿಂದ ಇಷ್ಟೊಂದು ಗಣನೀಯ ಭಾಷಾ ಮತ್ತು ಸಾಹಿತ್ಯಬೆಳವಣಿಗೆ ಆಗುವುದು ಸಾಧ್ಯವಿಲ್ಲ. ಭಾಷಾಶಾಸ್ತ್ರ ಪರಿಶೀಲನೆಯಿಂದ ಈ ದ್ರಾವಿಡಭಾಷೆಯ ಜನ ಉತ್ತರಭಾರತದಲ್ಲಿ ಆರ್ಯಭಾಷೆಯನ್ನಾಡುವ ಜನ ಬರುವ ಮೊದಲಿಂದಲೇ ವಾಸಿಸುತ್ತಿದ್ದಿರಬೇಕೆಂಬ ವಿಷಯ ನಿರ್ಧರವಾಗುತ್ತದೆ. ಆರ್ಯರ ಭಾರತಪ್ರವೇಶಕಾಲವನ್ನು ಕ್ರಿ. ಪೂ. ೧೨೦೦ಕ್ಕೂ ಈಚಿನ ಕಾಲಕ್ಕೆ ನಿರ್ದೇಶಿಸಲು ಸಾಧ್ಯವಿಲ್ಲವೆಂಬುದು ಸರ್ವಮಾನ್ಯವಾದ ಸಂಗತಿ. ಸುಪ್ರಸಿದ್ಧ ಭಾಷಾಶಾಸ್ತ್ರಜ್ಞರಾದ ಬರೋ[5] ಮತ್ತು ಕ್ಯೂಪರ್[6] ಅವರೂ ಆರ್ಯರ ಅತ್ಯಂತ

---

[1] *Ancient India*, No. 4, p. 181

[2] Srinivasan K. R., *Ancient India*, No. 2, 1946, pp. 9–16

[3] Sastri K. A. N., *The Cholas*, Vol. 1, 1955, pp. 68–70

[4] Sastri K.A. N., *A History of South India*, 1966, pp. 115-118

[5] Burrow T., *The Sanskrit Language*, 1954, p. 387

[6] Kuiper's Opinions were personally communicated to Dr. N. R. Banerjee. See Trans. Arch. Soc. of South India, 1962, p. 180

ಪ್ರಾಚೀನ ಗ್ರಂಥವಾದ ಋಗ್ವೇದ ಮತ್ತು ಅನಂತರದ ಕೃತಿಗಳಲ್ಲೂ ದ್ರಾವಿಡ ಭಾಷೆಯ ಅಂಶಗಳನ್ನು ಗುರುತಿಸಿದ್ದಾರೆ.

ಈ ಭಾಷಾಶಾಸ್ತ್ರದ ಪುರಾವೆಗಳನ್ನು ಇನ್ನಿತರ ಮೂಲಗಳಿಂದ ದೊರಕಬಹುದಾದ ಆಧಾರಗಳಿಂದಲೂ ಸಮರ್ಥಿಸಬಹುದಾಗಿದೆ. ಬೃಹತ್ ಶಿಲಾಸಮಾಧಿಗಳ ಕರ್ತೃಗಳೇ ದಕ್ಷಿಣಭಾರತಕ್ಕೆ ಕಪ್ಪು-ಕೆಂಪು ರೀತಿಯ ಮಣ್ಪಾತ್ರೆಗಳನ್ನು ಮೊದಲಬಾರಿಗೆ ತಂದಿರಬೇಕು. ಅದಕ್ಕೂ ಮೊದಲಿನ ನವಶಿಲಾಯುಗಸಂಸ್ಕೃತಿ ಕಾಲದಲ್ಲಿ ಕುಂಬಾರಚಕ್ರದ ಉಪಯೋಗ ಗೊತ್ತಿಲ್ಲದೆ ಕೈಯಿಂದ ಮಾಡಿ ನಯಗೊಳಿಸಿದ ಬೂದುಬಣ್ಣದ ಮಡಕೆಗಳು ಉಪಯೋಗಿಸಲ್ಪಡುತ್ತಿದ್ದುವು. ಮೊದಲಬಾರಿಗೆ ಪ್ರತಿಯೊಂದು ಬೃಹತ್ ಶಿಲಾಸಮಾಧಿಯಲ್ಲೂ ಉತ್ತಮ ಕೈಚಳಕದ ಕುಂಬಾರಚಕ್ರದ ಮೇಲೆ ಮಾಡಿದ ಮತ್ತು ಹೊಳಪಾದ ಮೇಲ್ಭಾಗವುಳ್ಳ ಈ ಗುಂಪಿನ ಮಣ್ಪಾತ್ರೆಗಳು ಉಪಯೋಗಕ್ಕೆ ಬಂದುವು. ಆದ್ದರಿಂದ ಆ ಜನರೇ ಈ ರೀತಿಯ ಮಣ್ಪಾತ್ರೆಗಳ ಉಪಯೋಗವನ್ನು ದಕ್ಷಿಣಕ್ಕೆ ತಂದವರೆಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಈ ರೀತಿಯ ಮಣ್ಪಾತ್ರೆಗಳು ಭಾರತದ ವಿವಿಧ ಪ್ರದೇಶಗಳಲ್ಲಿ ಬೇರೆಬೇರೆ ಕಾಲಗಳಲ್ಲಿ ಉಪಯೋಗದಲ್ಲಿದ್ದು ದಕ್ಷಿಣಭಾರತದ ಅಸ್ತಿತ್ವ ಇವರ ಜೀವಿತಕಾಲದ ಕೊನೆಯ ಹಂತಕ್ಕೆ ಸೇರುತ್ತದೆ. ದಖನ್, ಮಧ್ಯ ಮತ್ತು ಪಶ್ಚಿಮ ಭಾರತ ಪ್ರದೇಶಗಳಲ್ಲಿ ಕ್ರಿ.ಪೂ. ಮೊದಲ ಸಹಸ್ರಮಾನದ ಆರಂಭದಲ್ಲಿ ಕಬ್ಬಿಣದೊಂದಿಗೆ ಪ್ರವೇಶಿಸಿ ದಕ್ಷಿಣದ ನವಶಿಲಾಯುಗಸಂಸ್ಕೃತಿ ಮತ್ತು ಮಧ್ಯ ಭಾರತದ ತಾಮ್ರ-ಶಿಲಾಯುಗದ ಸಂಸ್ಕೃತಿಗಳ ಅಂತ್ಯವನ್ನು ಸೂಚಿಸುತ್ತದೆ. ಅದಕ್ಕೂ ಮೊದಲು ಅಲ್ಪಪರಿಮಾಣದಲ್ಲಿ ಕ್ರಿ. ಪೂ. ೧೬೦೦ರ ಸುಮಾರಿನಲ್ಲಿ ಪ್ರಾರಂಭಿಸಿದ ತಾಮ್ರ-ಶಿಲಾಸಂಸ್ಕೃತಿಯ ಅವಶೇಷಗಳೊಂದಿಗೂ ಕಂಡುಬರುತ್ತಿದ್ದರೂ ಭಾರತದಲ್ಲಿ ಕಬ್ಬಿಣದ ಉಪಯೋಗ ಕ್ರಿ. ಪೂ. ಎರಡನೆಯ ಸಹಸ್ರಮಾನದಂತ್ಯದಲ್ಲಿ ಆರಂಭಿಸಿದಾಗ ಮಧ್ಯಭಾರತದಲ್ಲಿ ಇದರ ಉಪಯೋಗ ಹೆಚ್ಚಿತು. ಕ್ರಿ.ಪೂ. ಎರಡನೆಯ ಸಹಸ್ರಮಾನದ ಕೊನೆಯೆರಡು ಶತಮಾನಗಳಲ್ಲಿ ಗಂಗಾನದಿಯ ಬಯಲಿನಲ್ಲೂ ಈ ರೀತಿಯಮಣ್ಪಾತ್ರೆಗಳ ಉಪಯೋಗ ವರ್ಣಚಿತ್ರಿತ ಬೂದುಬಣ್ಣದ ಮಡಕೆಗಳ ಸಂಸ್ಕೃತಿಯೊಂದಿಗೆ ಕಂಡುಬರುತ್ತದೆ. ಆರ್ಯಭಾಷೆಗಳನ್ನಾಡುತಿದ್ದ ಜನ ಭಾರತಕ್ಕೆ ಪ್ರವೇಶಿಸಿ ತಮ್ಮ ಮೊದಲ ಸಾಹಿತ್ಯಕೃತಿಗಳಾದ ಋಗ್ವೇದಾದಿ ಗ್ರಂಥಗಳನ್ನು ರಚಿಸಿದ ಕಾಲ ಇದೇ ಎಂಬುದನ್ನೂ ಇಲ್ಲಿ ಮತ್ತೊಮ್ಮೆ ಸ್ಮರಿಸುವುದು ಸೂಕ್ತ; ಮತ್ತು ವರ್ಣಚಿತ್ರಿತ ಬೂದುಬಣ್ಣದ ಮಡಕೆಗಳ ಸಂಸ್ಕೃತಿ ಆರ್ಯಭಾಷೆಗಳನ್ನಾಡುತ್ತಿದ್ದ ಜನರ ಕೊಡುಗೆಯೆಂಬುದನ್ನೂ ಪ್ರಾಕ್ತನ ಶಾಸ್ತ್ರಜ್ಞರು ಅನೇಕವಾಗಿ ಒಪ್ಪಿದ್ದಾರೆ.[1] ಇದಕ್ಕೂ ಮೊದಲು ಕಪ್ಪು-ಕೆಂಪು ಮಡಕೆಗಳು ಒಂದು ಸ್ವತಂತ್ರ ಸಂಸ್ಕೃತಿಯ ಅಂಗವಾಗಿ ಕ್ರಿ.ಪೂ. ೧೮೦೦-೧೨೦೦ರ ಸುಮಾರಿನಲ್ಲಿ ರಾಜಾ

---

[1] Lal, B. B., *Ancient India*, Nos. 10 & 11, 1955, p. 151

ಸ್ಥಾನದ ಆಗ್ನೇಯ ಭಾಗದಲ್ಲಿ ಉಪಯೋಗಿಸಲ್ಪಡುತ್ತಿದ್ದುವು. ಆ ಮೊದಲಿನ ಕಾಲದಲ್ಲಿ ಸೌರಾಷ್ಟ್ರದಲ್ಲಿ ಕ್ರಿ.ಪೂ. ಮೂರನೆಯ ಸಹಸ್ರಮಾನದಂತ್ಯದಲ್ಲಿ ನೆಲಸಿದ್ದ ಹರಪ್ಪ ನಾಗರಿಕತೆಯ ಅವಶೇಷಗಳಲ್ಲೂ ಕಂಡುಬಂದಿವೆ. ಹೀಗೆ ಬೃಹತ್ ಶಿಲಾಸಮಾಧಿ ಸಂಸ್ಕೃತಿಯ ಕರ್ತೃಗಳಾದ, ಕಪ್ಪು-ಕೆಂಪು ಮಡಕೆಗಳನ್ನು ದಕ್ಷಿಣಕ್ಕೆ ತಂದ, ಜನ ದ್ರಾವಿಡಭಾಷೆಗಳನ್ನಾಡುತ್ತಿದ್ದವರೆಂಬ ವಾದವನ್ನು ಒಪ್ಪಿಕೊಂಡರೆ ಕ್ರಿ.ಪೂ. ಮೂರನೆಯ ಸಹಸ್ರಮಾನದ ವರೆಗೂ ಅವರ ಪೂರ್ವೇತಿಹಾಸವನ್ನು ಪ್ರಾಕ್ತನ, ಭಾಷಾಶಾಸ್ತ್ರೀಯ ಮತ್ತು ಸಾಹಿತ್ಯಿಕ ಸಾಕ್ಷ್ಯಗಳ ಸಹಾಯದಿಂದ ರೂಪಿಸಲು ಸಾಧ್ಯವಾಗುತ್ತದೆ.

ಕೆಲವು ವಿದ್ವಾಂಸರು ಈ ಸಂಬಂಧವಾಗಿ ಕೆಲವು ಸಮಸ್ಯೆಗಳನ್ನೊಡ್ಡಿದ್ದಾರೆ.[1] ಕಪ್ಪು-ಕೆಂಪು ಮಡಕೆಗಳ ನಿರ್ಮಾತೃಗಳ ಸಂಬಂಧವಾದ ಪ್ರಾಕ್ತನ ಆಧಾರಗಳನ್ನು ಇಷ್ಟು ದೂರ ಲಂಬಿಸಿ, ದ್ರಾವಿಡಭಾಷೆಯ ಜನರನ್ನು ಅಷ್ಟೊಂದು ಪುರಾತನ ಕಾಲದ ವರೆಗೂ ಕೊಂಡೊಯ್ಯುವುದು ಮತ್ತು ಉತ್ತರ ಭಾರತದ ಬಹು ಭಾಗಗಳಲ್ಲಿ ಅವರನ್ನು ಅಲೆಯಿಸುವುದು ಸರಿಯೆ?—ಎಂಬುದು ಈ ಸಮಸ್ಯೆಗಳ ತಿರುಳಾಗಿದೆ. ಆದರೆ ಮೇಲಿನ ವಾದವನ್ನು ಸಮರ್ಥಿಸಲು ಬಹಳ ಪ್ರಬಲವಾದ ಹಲವು ಕಾರಣಗಳಿವೆ. ಸಾಹಿತ್ಯ-ಭಾಷಾ ಶಾಸ್ತ್ರಗಳಿಂದ ದೊರಕುವ ಪ್ರಮಾಣಗಳು ಆರ್ಯ-ದ್ರಾವಿಡ ಭಾಷೆಗಳ ಜನ ವೇದಗಳ ಆರಂಭದ ಮತ್ತು ಅನಂತರದ ಕಾಲಗಳಲ್ಲಿ ಸಂಪರ್ಕ ಹೊಂದಿದ್ದರೆಂಬುದನ್ನು ಸ್ಥಿರೀಕರಿಸುತ್ತವೆ. ಈ ಸಂಪರ್ಕಗಳು ಆ ಪುರಾತನ ಕಾಲದಲ್ಲಿ ಗಂಗಾ-ಯಮುನಾ ನದಿಗಳ ಬಯಲಿನಲ್ಲಿ ಮಾತ್ರ ಸಂಭವಿಸಲು ಸಾಧ್ಯವಿತ್ತು. ಆದುದರಿಂದ ದ್ರಾವಿಡಭಾಷೆಯ ಜನ ಆ ಕಾಲದಲ್ಲಿ ಗಂಗಾ-ಯಮುನಾ ನದಿಗಳ ಬಯಲಿನಲ್ಲಿ ವಾಸಿಸುತ್ತಿದ್ದಿರಬೇಕು. ಮತ್ತೆ, ದ್ರಾವಿಡ ಭಾಷೆಗಳನ್ನಾಡುವ ಜನರ ಗುಂಪುಗಳು ಐತಿಹಾಸಿಕ ಕಾಲದುದ್ದಕ್ಕೂ ಮಧ್ಯ ಮತ್ತು ಉತ್ತರ ಭಾರತದ ಹಲವಾರೆಡೆಗಳಲ್ಲಿ ವಾಸಿಸುತ್ತಿದ್ದರೆಂಬುದು ನಿರ್ವಿವಾದದ ಸಂಗತಿ. ದ್ರಾವಿಡರು ಆದಿಕಾಲದಲ್ಲಿ ಈ ಪ್ರದೇಶಗಳಲ್ಲಿ ವಾಸಿಸುತ್ತಿದ್ದುದರಿಂದ ಈ ರೀತಿಯ ವಸಾಹತುಗಳು ಉಳಿದುಬರಲು ಸಾಧ್ಯವಾಯಿತೆಂಬುದು ಸ್ಪಷ್ಟ. ಮತ್ತೂ ಒಂದು ಸಂಭವನೀಯ ಸಂಗತಿಯೆಂದರೆ, ಕೆಲವಾರು ಅನಾರ್ಯ ದ್ರಾವಿಡ ಆಚಾರ ವ್ಯವಹಾರಗಳಿಗೂ—ಉದಾ: ಪವಿತ್ರ ನಂದಿಯೊಡಗೂಡಿದ ಮಹಾಯೋಗಿ ಪಶುಪತಿಯ ಪೂಜೆ (ದ್ರಾವಿಡರ ಶೈವಮತ), ಮಾತೃದೇವತೆಯ (ದ್ರಾವಿಡರ ದುರ್ಗೆ ಅಥವಾ ಶಕ್ತಿ ಪೂಜೆ)—ಮತಕ್ಕೂ ಇರುವ ಪ್ರಾಮುಖ್ಯವನ್ನು ನಾವು ಹರಪ್ಪ ನಾಗರಿಕತೆಯಲ್ಲಿ ಕಾಣುತ್ತೇವೆ. ಮೇಲಿನ ವಾದವನ್ನು ಒಪ್ಪಿಕೊಂಡಲ್ಲಿ, ಹರಪ್ಪ ನಾಗರಿಕತೆಯೊಂದಿಗೆ ಸೌರಾಷ್ಟ್ರದಲ್ಲಿ ದ್ರಾವಿಡ ಭಾಷೆಗಳ ಜನ ಸಹಬಾಳ್ವೆ ಮಾಡುತ್ತಿದ್ದಾಗ ಈ ಪದ್ಧತಿಗಳನ್ನು ಸ್ವೀಕರಿಸಿರಬಹುದೆಂದು ಹೇಳಬಹುದಲ್ಲವೆ?

[1] Banerjee N. R., as quoted by Subba Rao B., *Personality of India*, 1958, p. 178 and *Iron Age in India*, 1965, pp. 226–233

ಈ ವಾದಸರಣಿಯನ್ನು ಒಪ್ಪಿದಲ್ಲಿ, ಇತಿಹಾಸದಲ್ಲಿ ಎದುರಾಗುವ ಹಲವಾರು ಘಟನೆಗಳನ್ನು ಸುಲಭವಾಗಿ ವಿವರಿಸಬಹುದು. ಕ್ರಿ. ಪೂ. ಎರಡನೆಯ ಶತಮಾನದ ಅಂತ್ಯಕಾಲದಲ್ಲಿ ದಕ್ಷಿಣ ರಷ್ಯ, ಈಶಾನ್ಯ ಇರಾನ್ ಮತ್ತು ಬಲೂಚಿಸ್ತಾನ ಪ್ರದೇಶಗಳ ವರೆಗೂ ಪ್ರಸರಿಸಿದ ಬೃಹತ್ ಶಿಲಾಸಮಾಧಿ ಸಂಸ್ಕೃತಿಯ ಜನ ಕಬ್ಬಿಣದ ಲೋಹವಿದ್ಯೆ ಮತ್ತು ವಸ್ತುಗಳ ಉಪಯೋಗಕ್ಕೆ ಸಂಬಂಧಿಸಿದ ಜ್ಞಾನವನ್ನು ಭಾರತದ ಗಡಿಪ್ರದೇಶದವರೆಗೂ ತಂದರು.[1] ಅನಂತರ ಸಾಂಸ್ಕೃತಿಕವಾಗಿ ಬಹಳ ಮಹತ್ತ್ವವುಳ್ಳ ಕಬ್ಬಿಣದ ಉಪಯೋಗಜ್ಞಾನ ಭಾರತಾದ್ಯಂತ ತ್ವರಿತಗತಿಯಲ್ಲಿ ಹಬ್ಬಿತು. ಆದರೆ ಈ ವಿದೇಶೀಯರ ಶವಸಂಸ್ಕಾರ ಪದ್ಧತಿ ಗಂಗಾ ಯಮುನಾ ಬಯಲಿನಲ್ಲಿ ಭದ್ರವಾಗಿ ತಳವೂರಿದ್ದ, ತಮ್ಮದೇ ಆದ ಸಂಸ್ಕೃತಿಯನ್ನು ರೂಪಿಸಿಕೊಂಡಿದ್ದ ಆರ್ಯ ಜನಾಂಗಕ್ಕೆ ರುಚಿಸದಿದ್ದುದರಿಂದ ಮತ್ತು ಕೆಲವಾರು ಭೌಗೋಳಿಕ ಕಾರಣಗಳಿಂದ ಬೃಹತ್ ಶಿಲಾಸಮಾಧಿ ಸಂಸ್ಕೃತಿ ಉತ್ತರ ಭಾರತದಲ್ಲಿ ಹಬ್ಬಲಾರದೆ ಹೋಯಿತು. ಆದರೆ ಸಾಮಾಜಿಕ, ಮತೀಯ ಮತ್ತು ತಾಂತ್ರಿಕ ರಂಗಗಳಲ್ಲಿ ಪ್ರಬಲರಾಗಿ ತಮ್ಮ ಪ್ರಾಮುಖ್ಯವನ್ನು ಬೆಳೆಸಿಕೊಂಡಿದ್ದ ಆರ್ಯ ಸಮಾಜದ ಒತ್ತಡ ಮತ್ತು ತಿರಸ್ಕಾರಗಳಿಗೆ ಸಿಕ್ಕಿ, ಆದಿಕಾಲದಿಂದಲೂ ಆವರೆಗೂ ಇತರ ಸಂಸ್ಕೃತಿಗಳ ಆಶ್ರಯದಲ್ಲಿ ದ್ವಿತೀಯ ದರ್ಜೆಯ ಸ್ಥಾನದಲ್ಲಿ ತೊಳಲುತ್ತಿದ್ದ, ದ್ರಾವಿಡಭಾಷೆಯ ಅಥವಾ ಕಪ್ಪು-ಕೆಂಪು ಮಡಕೆಗಳನ್ನುಪಯೋಗಿಸುತ್ತಿದ್ದ ಜನ ಈ ಸಮಯದಲ್ಲಿ ಕಬ್ಬಿಣದ ಉಪಯೋಗ ತಿಳಿದುಕೊಂಡುದರಿಂದ ಉಂಟಾದ ಹೊಸ ಹುರುಪಿನಿಂದ ಮತ್ತು ಹೊಸದಾಗಿ ತಾವು ಸ್ವೀಕರಿಸಿದ್ದ ಸಂಸ್ಕೃತಿಯಿಂದ ಉತ್ತೇಜಿತರಾಗಿ ತಮ್ಮದೇ ಆದ ಹೊಸಸ್ಥಾನವೊಂದನ್ನು ಹುಡುಕಲಾರಂಭಿಸಿದರು. ಉತ್ತರ ಭಾರತ ಆರ್ಯರ ಆಳ್ವಿಕೆಗೂ ಮಧ್ಯಭಾರತ ತಾಮ್ರಶಿಲಾಯುಗದ ಪ್ರಗತಿಪರ ಸಮಾಜದ ಹಿಡಿತಕ್ಕೂ ಈಡಾಗಿದ್ದುದರಿಂದ ಮತ್ತು ಆ ಪ್ರದೇಶಗಳಲ್ಲಿ ತಮ್ಮ ಹೊಸ ಮತದ ಅಂಗವಾದ ಸಮಾಧಿಗಳ ರಚನೆಗೆ ಅಗತ್ಯವಾದ ರೀತಿಯ ಕಲ್ಲುಗಳ ಅಭಾವವಿದ್ದುದರಿಂದ, ಅನುಕೂಲ ಪರಿಸ್ಥಿತಿಗಳನ್ನರಸುತ್ತ ದಕ್ಷಿಣ ಭಾರತಕ್ಕೆ ಬಂದು ತಲುಪಿದರು. ಅಲ್ಲಿನ ಪ್ರಾಕೃತಿಕ-ಭೌಗೋಳಿಕ ಅಂಶಗಳು ತಮಗೆ ಅನುಕೂಲವಾಗಿದ್ದುದಲ್ಲದೆ, ಅಲ್ಲಿ ಬಹು ಹಿಂದುಳಿದ ನವಶಿಲಾಯುಗ ಸಂಸ್ಕೃತಿಗಳ ಜನ ನೆಲೆಸಿದ್ದುದರಿಂದ ಆ ಜನರನ್ನು ತಮ್ಮ ಉತ್ತಮ ರೀತಿಯ ಸಂಸ್ಕೃತಿ ಮತ್ತು ತಾಂತ್ರಿಕ ವಿಧಾನಗಳಿಂದ ಸೋಲಿಸಿ ಕ್ರಮೇಣ ತಮ್ಮಲ್ಲಿ ಲೀನಗೊಳಿಸಿಕೊಂಡು ದಕ್ಷಿಣ ಭಾರತದಲ್ಲಿ ಇತಿಹಾಸ ಯುಗವನ್ನು ತ್ವರಿತಗತಿಯಲ್ಲಿ ಸ್ಥಾಪಿಸಿದರು.

---

[1] Schæffer, Robert, Stratigraphie Comparee et Chronologie de L' Asie Occidentale, Oxford, 1948

ಎಸ್. ನಾಗರಾಜು

ಕೈಗಾರಿಕೆ ಸಂಸ್ಥೆಗಳಲ್ಲಿ ಕಾರ್ಮಿಕರ ಗೈರುಹಾಜರಿಯ ಸಮಸ್ಯೆ

ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಮಿಕರ ಗೈರುಹಾಜರಿ ನಿರ್ವಾಹಕ ವ್ಯವಸ್ಥೆಗೆ ಸಂಬಂಧಪಟ್ಟಂತೆ ಒಂದು ದೊಡ್ಡ ಸಮಸ್ಯೆಯಾಗಿದೆ. ಪದೇಪದೇ ಉಂಟಾಗುವ ಮತ್ತು ದೀರ್ಘಕಾಲದವರೆಗೆ ವ್ಯಾಪಿಸುವ ಕಾರ್ಮಿಕ ಗೈರುಹಾಜರಿಯಿಂದ ಉತ್ಪಾದನೆ ಮೊಟಕಾಗುವುದಲ್ಲದೆ ಉತ್ಪಾದನ ಸಾಮರ್ಥ್ಯವನ್ನು ಮಿತಗೊಳಿಸುತ್ತದೆ. ಉತ್ಪಾದನ ಶ್ರಮಕ್ಕೆ ತಗುಲುವ ವೆಚ್ಚವನ್ನು ಅಧಿಕಗೊಳಿಸುತ್ತದೆ. ಅಷ್ಟೇ ಅಲ್ಲದೆ ಕಾರ್ಮಿಕರ ಕಾರ್ಯದಕ್ಷತೆಯನ್ನು ಕ್ಷೀಣಗೊಳಿಸಿ ಇದರಿಂದ ರಾಷ್ಟ್ರದ ಆರ್ಥಿಕ ಹಿತಕ್ಕೆ ಧಕ್ಕೆಯುಂಟಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಕಾರ್ಖಾನೆಗಳಲ್ಲಿ ಕಾರ್ಮಿಕರ ಹಾಜರಾತಿ ಒಂದೇ ಸಮನಾಗಿಲ್ಲದಿದ್ದರೆ ನಿಜವಾಗಿಯೂ ಕೆಟ್ಟದ್ದು. ಆದರೂ ಸರ್ಕಾರದವರಾಗಲಿ, ಕಾರ್ಮಿಕ ಮಾಲೀಕರುಗಳಾಗಲಿ ಮುಷ್ಕರ ಬೀಗಮುದ್ರೆಗಳ (ಲಾಕ್‌ಔಟ್) ಬಗ್ಗೆ ತೋರಿಸುವಷ್ಟು ಆಸಕ್ತಿಯನ್ನು ಕಾರ್ಮಿಕರ ಗೈರುಹಾಜರಿಯ ಬಗ್ಗೆ ತೋರಿಸುತ್ತಿಲ್ಲ. ಭಾರತದ ಕೈಗಾರಿಕಾ ಸಂಸ್ಥೆಗಳಲ್ಲಿನ ಹಾಜರಾತಿ ಪುಸ್ತಕಗಳು ಕಾರ್ಮಿಕರ ಅಧಿಕ ಪ್ರಮಾಣದ ಗೈರುಹಾಜರಿಯನ್ನು ತೋರಿಸುವ ದಾಖಲೆಗಳಾಗಿವೆ. ಈ ಹಿನ್ನೆಲೆಯಲ್ಲಿ ಭಾರತ ಹಾಗೂ ಮೈಸೂರು ರಾಜ್ಯದಲ್ಲಿರುವ ಕೈಗಾರಿಕಾ ಸಂಸ್ಥೆಗಳ ಕಾರ್ಮಿಕರ ಗೈರುಹಾಜರಿ ಸಮಸ್ಯೆಯ ತೀವ್ರತೆಯನ್ನು ತೋರಿಸಿ ಈ ಸಮಸ್ಯೆಗೆ ಕೆಲವು ಪರಿಹಾರ ಮಾರ್ಗಗಳನ್ನು ಸೂಚಿಸುವುದೇ ಈ ಲೇಖನದ ಉದ್ದೇಶ.

ಕಾರ್ಮಿಕರ ಗೈರುಹಾಜರಿ ಅಥವಾ ಕೈಗಾರಿಕಾ ಗೈರುಹಾಜರಿ ಎಂಬ ಪದದ ಅರ್ಥವನ್ನು ಇಲ್ಲಿ ಸ್ಥೂಲವಾಗಿ ಹೇಳಬಹುದು. ಕಾರ್ಮಿಕರು ಕಾರ್ಯಾಗಾರಗಳಲ್ಲಿ ಕೆಲಸಮಾಡಲು ನಿಯೋಜಿತರಾಗಿದ್ದಾಗ ಕೆಲಸದ ಮೇಲೆ ಹಾಜರಾಗಲು ಅಸಮರ್ಥರಾಗಿರುವುದು ಎಂದು, ಕೆ. ಎಸ್. ವೈದ್ ಇದನ್ನು ವಿವರಿಸಿದ್ದಾರೆ.[1] ಆದರೆ

[1] K. N. Vaid: Papers on Absenteeisim. Sri Ram Centre For Industrial Relations, New Delhi. 1967. P. 2.

ಭಾರತದ ಕೇಂದ್ರಸರ್ಕಾರದ ಕಾರ್ಮಿಕ ಇಲಾಖೆ ತನ್ನ ರಾಜ್ಯ ಶಾಖೆಗಳಿಗೆ ಕೆಲವು ವರ್ಷಗಳ ಹಿಂದೆಕಳುಹಿಸಿದ ಸುತ್ತೋಲೆಯಲ್ಲಿ 'ಕಾರ್ಮಿಕರ ಗೈರು ಹಾಜರಿ' ಎಂಬ ಪದದ ವಿಶಾಲವಾದ ಅರ್ಥ ವಿವರಣೆ ಇದೆ. ಇದರ ಪ್ರಕಾರ ಕಾರ್ಮಿಕರ ಗೈರುಹಾಜರಿಯು ಪ್ರಮಾಣ ಕೆಲಸ ಮಾಡಬೇಕಾದ ಮಾನವ ದಿವಸಗಳ ಒಟ್ಟು ಸಂಖ್ಯೆಗೂ (ಮಾನವದಿವಸಗಳೆಂದರೆ ಕೆಲಸ ಮಾಡಬೇಕಾದ ದಿವಸಗಳ ಸಂಖ್ಯೆ × ನಿಯೋಜಿತಕಾರ್ಮಿಕರ ಸಂಖ್ಯೆ) ಕಾರ್ಮಿಕರು ಆ ದಿವಸಗಳಲ್ಲಿ ಹಾಜರಾಗದಿರುವುದರಿಂದ ವ್ಯರ್ಥವಾದ ಮಾನವ ದಿವಸಗಳ ಒಟ್ಟು ಸಂಖ್ಯೆಗೂ ಇರುವ ಪ್ರಮಾಣ.[1] ಇದನ್ನು ಸಾಮಾನ್ಯವಾಗಿ ಸೇಕಡಾ ಪ್ರಮಾಣದಲ್ಲಿ ಸೂಚಿಸಲಾಗುತ್ತದೆ. ಈ ಕಾರಣದಿಂದ ಕಾರ್ಮಿಕರ ಗೈರುಹಾಜರಿಯು ಪ್ರಮಾಣವನ್ನು ಅಳತೆಮಾಡುವಾಗ ಕೆಳಗೆಕೊಟ್ಟಿರುವ ಸೂತ್ರವನ್ನು ಬಳಸಲಾಗುತ್ತದೆ.

$$\text{ಕಾರ್ಮಿಕ ಗೈರುಹಾಜರಿಯ ಪ್ರಮಾಣ} = \frac{\text{ಕಾರ್ಮಿಕರು ಕೆಲಸಕ್ಕೆ ಹಾಜರಾಗದಿದ್ದುದರಿಂದ ವ್ಯರ್ಥವಾದ ಮಾನವ ದಿವಸಗಳ ಒಟ್ಟು ಸಂಖ್ಯೆ}}{\text{ಕೆಲಸ ಮಾಡಬೇಕಾದ ಮಾನವ ದಿವಸಗಳ ಒಟ್ಟು ಸಂಖ್ಯೆ}} \times ೧೦೦$$

ಕಾರ್ಮಿಕರ ಗೈರುಹಾಜರಿ ವೈಯಕ್ತಿಕ ಕಾರಣಗಳಿಗಾಗಿ ಉಂಟಾಗುವುದರಿಂದ ಇದರಲ್ಲಿ ಕಾರ್ಮಿಕರ ಮುಷ್ಕರ, ಬೀಗಮುದ್ರೆ, ಕಾರ್ಮಿಕರ ಹಂಗಾಮಿ ವಜಾ ಮುಂತಾದ ಇತರ ಕಾರಣಗಳಿಂದ ಉದ್ಭವಿಸುವ ಗೈರುಹಾಜರಿಯನ್ನು ಸೇರಿಸುವುದಿಲ್ಲ.

ಭಾರತದಲ್ಲಿ ಎಲ್ಲಾ ಕೈಗಾರಿಕೆಗಳಿಗೂ ಸಂಬಂಧಿಸಿದಂತೆ ಕಾರ್ಮಿಕರ ಗೈರುಹಾಜರಿಯ ಅಂಕಿ ಅಂಶಗಳು ದೊರೆಯುವುದಿಲ್ಲ. ಏಕೆಂದರೆ ಈ ವಿಷಯದ ಬಗ್ಗೆ ಕಡ್ಡಾಯವಾಗಿ ಅಂಕಿಅಂಶಗಳನ್ನು ಸಂಗ್ರಹಿಸಬೇಕೆಂದು ಒತ್ತಾಯ ಪಡಿಸುವ ಕಾನೂನು ಯಾವುದೂ ದೇಶದಲ್ಲಿ ಜಾರಿಯಲ್ಲಿಲ್ಲ. ಆದರೂ ಕೆಲವು ಕೈಗಾರಿಕೋದ್ಯಮಿಗಳು ತಮ್ಮ ಸ್ವಂತ ಇಚ್ಛೆಯ ಮೇರೆಗೆ ಕೊಟ್ಟ ಅಂಕಿ ಅಂಶಗಳನ್ನು ಕಾರ್ಮಿಕ ಕಮಿಷನರುಗಳು ಸಂಗ್ರಹಿಸುತ್ತಾರೆ. ಆದುದರಿಂದ ದೊರೆಯುವಷ್ಟು ಅಂಕಿ ಅಂಶಗಳೇ ಈ ಲೇಖನಕ್ಕೆ ಆಧಾರವಾಗಿವೆ.

ಮೈಸೂರು ರಾಜ್ಯದಲ್ಲಿ ಕಾರ್ಮಿಕ ಗೈರುಹಾಜರಿಯ ಸೇಕಡಾ ಪ್ರಮಾಣ ಈ ರೀತಿ ಇತ್ತು :

---

[1] Report of the Labour Investigation Committee ; 1947, Government of India

ಕೋಷ್ಟಕ ೧[1]

ವರ್ಷ	೧೯೬೫	೧೯೬೬	೧೯೬೭	೧೯೬೮
ಗೈರುಹಾಜರಿಯ ಸೇಕಡಾ ಪ್ರಮಾಣ	೧೮.೨	೧೩.೯	೧೩.೩	೧೩.೦

ಮೇಲಿನ ಪಟ್ಟಿಯ ಪ್ರಕಾರ ಮೈಸೂರು ರಾಜ್ಯದಲ್ಲಿ ೧೯೬೫ ರಿಂದ ೧೯೬೮ರ ವರೆಗೆ ಕಾರ್ಮಿಕ ಗೈರುಹಾಜರಿಯ ಪ್ರಮಾಣ ಸೇಕಡ ೧೮.೨ರಿಂದ ಸೇ. ೧೩.೦ಕ್ಕೆ ಇಳಿದಿದೆ. ೧೯೬೫ರಲ್ಲಿ ಮೈಸೂರುರಾಜ್ಯದ ಕಾರ್ಮಿಕ ಗೈರುಹಾಜರಿಯ ಪ್ರಮಾಣ ಸೇಕಡ ೧೮.೨ ಇದ್ದಾಗ ಇಡೀ ಭಾರತದಲ್ಲಿ ಸೇಕಡ ೧೩.೨ ಮತ್ತು ಅಮೇರಿಕದಲ್ಲಿ ಕೇವಲ ಸೇ. ೨.೬ ಇತ್ತೆಂದು ತಿಳಿದರೆ[2] ನಮ್ಮ ರಾಜ್ಯದ ಹಾಗೂ ರಾಷ್ಟ್ರದ ಕಾರ್ಮಿಕರ ಗೈರುಹಾಜರಿ ಸಮಸ್ಯೆಯ ತೀವ್ರತೆ ಎಷ್ಟೆಂಬುದು ಗೊತ್ತಾಗುತ್ತದೆ.

ಮೈಸೂರು ರಾಜ್ಯದಲ್ಲಿನ ಕಾರ್ಮಿಕ ಗೈರುಹಾಜರಿಯ ಪ್ರಮಾಣವನ್ನು ಭಾರತದ ಇತರ ರಾಜ್ಯಗಳಲ್ಲಿನ ಪ್ರಮಾಣದ ಜೊತೆಯಲ್ಲಿ ಹೋಲಿಸಬಹುದು. ಇದರಿಂದ ಇವೆರಡರಲ್ಲಿ ಏನಾದರೂ ಸಾಮ್ಯ ಅಥವಾ ವ್ಯತ್ಯಾಸವಿದೆಯೇ ಎಂಬುದು ತಿಳಿಯುತ್ತದೆ. ಪರಸ್ಪರ ಯಾವುದು ಹೆಚ್ಚು ತೀವ್ರತೆಯುಳ್ಳದ್ದು ಎಂಬುದೂ ಗೊತ್ತಾಗುತ್ತದೆ. ಇದಕ್ಕೆ ಹತ್ತಿ ಜವಳಿ ಕೈಗಾರಿಕೆ ಮತ್ತು ಎಂಜಿನಿಯರಿಂಗ್ ಕೈಗಾರಿಕೆಗಳನ್ನು ಗಣನೆಗೆ ತೆಗೆದುಕೊಳ್ಳಬಹುದು. ಏಕೆಂದರೆ ಈ ಎರಡು ಕೈಗಾರಿಕೆಗಳಲ್ಲಿಯೇ ದೇಶದಲ್ಲಿರುವ ಒಟ್ಟು ಕೈಗಾರಿಕಾ ಕಾರ್ಮಿಕರಲ್ಲಿ ಸೇಕಡಾ ೬೦ಕ್ಕಿಂತ ಹೆಚ್ಚು ಮಂದಿ ನಿರತರಾಗಿದ್ದಾರೆ. ಅಷ್ಟೇ ಅಲ್ಲದೆ ಈ ಕೈಗಾರಿಕೆಗಳಲ್ಲಿನ ಕಾರ್ಮಿಕ ಗೈರುಹಾಜರಿಯ ಬಗ್ಗೆ ಅಂಕಿ ಅಂಶಗಳು ದೊರಕುತ್ತವೆ ಮತ್ತು ಅವುಗಳನ್ನು ಪರಸ್ಪರವಾಗಿ ಹೋಲಿಸುವುದೂ ಸಾಧ್ಯವಾಗುತ್ತದೆ.

ಮೇಲಿನ ಅಂಕಿಅಂಶಗಳನ್ನು ಪರಿಶೀಲಿಸಿದರೆ ಭಾರತದ ಹಾಗೂ ಮೈಸೂರು ರಾಜ್ಯಗಳಲ್ಲಿನ ಕಾರ್ಮಿಕ ಗೈರುಹಾಜರಿಯ ರೂಪಿಕೆಯಲ್ಲಿ ಒಂದು ಸಾಮ್ಯ ವಿರುವುದು ಕಾಣುತ್ತದೆ. ೧೯೬೦ರಿಂದ ೧೯೬೮ರ ವರೆಗೆ ಎಲ್ಲ ಹತ್ತಿ ಕೈಗಾರಿಕಾ ಕೇಂದ್ರಗಳಲ್ಲಿಯೂ ಕಾರ್ಮಿಕರ ಗೈರುಹಾಜರಿಯ ಪ್ರಮಾಣ ಯಾವ ನಿರ್ದಿಷ್ಟ ಪ್ರವೃತ್ತಿಯನ್ನೂ ಸೂಚಿಸುವುದಿಲ್ಲ. ಅಂದರೆ ಈ ಪ್ರಮಾಣ ಏಕಪ್ರಕಾರವಾಗಿ ಏರು ಅಥವಾ ಇಳಿಮುಖ ಪ್ರವೃತ್ತಿಯುಳ್ಳದ್ದಾಗಿಲ್ಲ. ವರ್ಷದಿಂದ ವರ್ಷಕ್ಕೆ ಈ ಪ್ರಮಾಣದಲ್ಲಿ ಏರುಪೇರು ಉಂಟಾಗಿರುವುದನ್ನು ಕಾಣಬಹುದು. ಉದಾಹರಣೆಗೆ

[1] Statistical Outline of Mysore, 1969. Bureau of Economics and Statistics, Govt. of Mysore

[2] Dinanath Dude: Problem of Absenteeism in Industry Yojana, Vol. XII, No. 26. Jan. 5, 1969. P. 14

ಕೋಷ್ಟಕ ೨

ಮೈಸೂರು ರಾಜ್ಯದಲ್ಲಿನ ಹಾಗೂ ಭಾರತದಲ್ಲಿನ ಕೆಲವು ಕೇಂದ್ರಗಳಲ್ಲಿ ಹತ್ತಿ ಜವಳಿ ಮತ್ತು ಎಂಜಿನಿಯರಿಂಗ್ ಕೈಗಾರಿಕೆಗಳಲ್ಲಿ ಕಾರ್ಮಿಕರ ಗೈರುಹಾಜರಿ (ಸೇಕಡಾ ಪ್ರಮಾಣ)[1]

ಕೈಗಾರಿಕಾ ಕೇಂದ್ರ ಅಥವಾ ರಾಜ್ಯಗಳು	ಕೈಗಾರಿಕೆಗಳು	೧೯೬೦	೧೯೬೧	೧೯೬೨	೧೯೬೩	೧೯೬೪	೧೯೬೫	೧೯೬೬	೧೯೬೭	೧೯೬೮	ವಾರ್ಷಿಕ ಸರಾಸರಿ
ಬೊಂಬಾಯಿ	ಹತ್ತಿ ಜವಳಿ ಕೈಗಾರಿಕೆ	೧೦.೫	೧೧.೯	೧೩.೩	೧೧.೮	೧೧.೬	೧೮.೪	೧೯.೫	೧೮.೬	೧೯.೫	೧೪.೮
ಅಹಮದಾಬಾದು	,,	೭.೩	N.A.	೮.೩	೮.೦	೭.೯	N.A.	N.A.	೧೦.೨	೧೩.೩	೭.೫
ಕೊಯಮತ್ತೂರು	,,	೧೧.೯	೧೨.೦	೧೨.೮	೧೩.೦	೧೨.೮	೧೩.೧	೧೩.೯	೧೨.೫	೧೨.೫	೧೨.೭
ಕಾನ್ಪುರ	,,	೧೪.೨	೧೫.೨	೧೫.೯	೧೫.೩	೧೨.೫	೧೨.೫	೧೨.೬	೧೧.೯	೧೫.೩	೧೩.೯
ಮೈಸೂರು	,,	೧೯.೨	೨೦.೯	೨೭.೩	೨೬.೪	೧೮.೬	೧೮.೪	೧೯.೨	೧೬.೮	೧೩.೮	೨೦.೧
ಬೊಂಬಾಯಿ	ಎಂಜಿನಿಯರಿಂಗ್ ಕೈಗಾರಿಕೆ	೧೩.೭	೧೨.೭	೧೩.೯	೧೩.೪	೧೩.೧	೧೫.೬	೧೬.೪	೧೫.೪	೧೭.೪	೧೪.೭
ಪಶ್ಚಿಮ ಬಂಗಾಳ	,,	೧೧.೫	೧೩.೩	೧೩.೨	೧೨.೯	೧೨.೯	೧೩.೭	೧೪.೮	೧೫.೬	೧೩.೭	೧೩.೫
ಮೈಸೂರು	,,	೯.೩	೧೦.೬	೧೫.೦	೧೨.೪	೧೩.೪	೧೪.೦	೧೩.೭	೧೩.೫	೧೫.೨	೧೩.೦

[1] Indian Labour Statistics 1968 and 1969, Labour Bureau, Government of India
N.A. ಅಂಕಿ ಅಂಶಗಳು ದೊರಕಿಲ್ಲ.

೧೯೬೦ರಿಂದ ೧೯೬೮ರ ವರೆಗೆ ಬೊಂಬಾಯಿಯಲ್ಲಿ ಹತ್ತಿ ಜವಳಿ ಕೈಗಾರಿಕೆಯಲ್ಲಿ ಕಾರ್ಮಿಕ ಗೈರುಹಾಜರಿ ಸೇಕಡಾ ೧೦.೫ರಿಂದ ೧೯.೫ರ ವರೆಗೂ, ಅಹಮದಾಬಾದಿನಲ್ಲಿ ಸೇಕಡಾ ೭.೩ರಿಂದ ೧೩.೩ರ ವರೆಗೂ, ಕೊಯಮತ್ತೂರಿನಲ್ಲಿ ಸೇಕಡಾ ೧೧.೯ರಿಂದ ೧೩.೯ರ ವರೆಗೂ ಕಾನ್ಪುರ, ಮೈಸೂರುಗಳಲ್ಲಿ ಕ್ರಮವಾಗಿ ಸೇಕಡಾ ೧೧.೯ರಿಂದ ೧೫.೯ರ ವರೆವಿಗೂ ಮತ್ತು ೧೩.೮ರಿಂದ ೨೭.೩ರ ವರೆವಿಗೂ ವ್ಯತ್ಯಾಸ ಹೊಂದಿರುವುದನ್ನು ನೋಡಬಹುದು. ಎಂಜಿನಿಯರಿಂಗ್ ಕೈಗಾರಿಕೆಯಲ್ಲೂ ಇದೇ ಬಗೆಯ ಸಾಮ್ಯವಿದೆ. ಆದರೆ ಹತ್ತಿ ಜವಳಿ ಕೈಗಾರಿಕೆಯಲ್ಲಿ ೧೯೬೦ ಮತ್ತು ೧೯೬೮ರಲ್ಲಿ ಕಾರ್ಮಿಕರ ಗೈರುಹಾಜರಿಯ ಪ್ರಮಾಣ ಮೈಸೂರು ರಾಜ್ಯವೊಂದನ್ನು ಉಳಿದು ಇತರ ಎಲ್ಲಾ ಕೇಂದ್ರಗಳಲ್ಲೂ ಏರಿರುವುದನ್ನು ಗಮನಿಸಬಹುದು. ಆದರೆ ಮೈಸೂರಿನಲ್ಲಿ ಮಾತ್ರ ಈ ಪ್ರಮಾಣ ಸೇಕಡಾ ೧೯.೩ರಿಂದ ಸೇಕಡಾ ೧೩.೮ಕ್ಕೆ ಇಳಿದಿರುವುದು ವ್ಯಕ್ತವಾಗುತ್ತದೆ. ಹತ್ತಿ ಜವಳಿ ಕೈಗಾರಿಕಾ ವೇತನಮಂಡಳಿಯ ಶಿಫಾರ್ಸುಗಳನ್ನು ಕಾರ್ಯಗತ ಮಾಡಿದ್ದರಿಂದ ಉಂಟಾದ ಕಾರ್ಮಿಕರ ವೇತನಗಳಲ್ಲಿ ಏರಿಕೆ, ಕಾರ್ಯಾಗಾರಗಳಲ್ಲಿ ಕೆಲಸದ ಸ್ಥಿತಿಗತಿಗಳಲ್ಲಿ ಮತ್ತು ಕಾರ್ಮಿಕರಿಗೆ ವಾಸಗೃಹ ಸೌಕರ್ಯಗಳ ನೀಡಿಕೆಯಲ್ಲಿ ಸುಧಾರಿತ ಪರಿಸ್ಥಿತಿಗಳು ಇವೇ ಮುಂತಾದ ವಿಷಯಗಳು ಈ ಇಳಿತಾಯಕ್ಕೆ ಕಾರಣಗಳಾಗಿರಬಹುದು.

ಮೈಸೂರಿನಲ್ಲಿ ಹತ್ತಿ ಬಟ್ಟೆ ಕೈಗಾರಿಕೆಯಲ್ಲಿ ಕಾರ್ಮಿಕರ ಗೈರುಹಾಜರಿಯ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಇಳಿತಾಯವಾಗಿರುವುದು ಸ್ವಾಗತಾರ್ಹವಾದರೂ ೧೯೬೦ರಿಂದ ೧೯೬೮ರ ವರೆಗಿನ ಕಾಲಾವಧಿಯಲ್ಲಿ ಈ ಗೈರುಹಾಜರಿಯ ವಾರ್ಷಿಕ ಸರಾಸರಿ ಪ್ರಮಾಣ ಇತರ ಕೇಂದ್ರಗಳ ಪ್ರಮಾಣಗಳಿಗಿಂತ ಅತ್ಯಂತ ಹೆಚ್ಚಿನದಾಗಿದೆ. ಈ ಅಂಶವನ್ನು ಕೋಷ್ಟಕ ೨ರಲ್ಲಿ ತೋರಿಸಲಾಗಿದೆ. ಮೈಸೂರು ರಾಜ್ಯದಲ್ಲಿ ಹತ್ತಿ ಜವಳಿ ಕೈಗಾರಿಕೆಯ ಕಾರ್ಮಿಕ ಗೈರುಹಾಜರಿಯ ವಾರ್ಷಿಕ ಸರಾಸರಿ ಪ್ರಮಾಣ ಸೇಕಡಾ ೨೦.೧ ಇದ್ದು ಇತರ ಕೇಂದ್ರಗಳಲ್ಲಿ—ಅಂದರೆ ಬೊಂಬಾಯಿಯಲ್ಲಿ ೧೪.೮%, ಅಹಮದಾಬಾದಿನಲ್ಲಿ ೭.೫%, ಕೊಯಮತ್ತೂರು ಕೇಂದ್ರದಲ್ಲಿ ೧೬.೧% ಮತ್ತು ಕಾನ್ಪುರದಲ್ಲಿ ೧೩.೯ ಇರುವುದನ್ನು ಗಮನಿಸಿದರೆ ಮೈಸೂರು ರಾಜ್ಯದಲ್ಲಿರುವ ಕಾರ್ಮಿಕ ಗೈರುಹಾಜರಿಯ ತೀವ್ರತೆ ಇತರ ಕೇಂದ್ರಗಳಿಗಿಂತ ಹೆಚ್ಚಾಗಿದೆಯೆಂದು ಹೇಳಬಹುದು.

ಎಂಜಿನಿಯರಿಂಗ್ ಕೈಗಾರಿಕೆಯಲ್ಲಿ ಮೈಸೂರು ರಾಜ್ಯದ ಕಾರ್ಮಿಕ ಗೈರುಹಾಜರಿಯ ಮಟ್ಟ ಭಾರತದ ಇತರ ರಾಜ್ಯಗಳ ಮಟ್ಟವನ್ನೇ ಹೆಚ್ಚುಕಡಿಮೆ ಹೊಂದಿದೆಯೆಂದು ಹೇಳಬಹುದು. ಪಶ್ಚಿಮ ಬಂಗಾಳ ಹಾಗೂ ಮೈಸೂರು ರಾಜ್ಯದ ಕಾರ್ಮಿಕರ ಗೈರುಹಾಜರಿಯ ವಾರ್ಷಿಕ ಸರಾಸರಿ ಪ್ರಮಾಣದಲ್ಲಿ ಯಾವ ಗಣನೀಯ ವ್ಯತ್ಯಾಸವೂ ಕಾಣಬರುವುದಿಲ್ಲ (ಪಶ್ಚಿಮ ಬಂಗಾಳದಲ್ಲಿನ ಸರಾಸರಿ ೧೩.೫ ಆದರೆ ಮೈಸೂರಿನ ಸರಾಸರಿ ೧೩.೦ ಮಾತ್ರ). ಎಂಜಿನಿಯರಿಂಗ್ ಕೈಗಾರಿಕೆ

ಯಲ್ಲಿ ಹೆಚ್ಚು ಪ್ರಗತಿ ಹೊಂದಿರುವ ಬೊಂಬಾಯಿ ಕೇಂದ್ರದ ಜೊತೆಯಲ್ಲಿ ಹೋಲಿಸಿದರೂ ಅಷ್ಟೇನೂ ಹೆಚ್ಚು ವ್ಯತ್ಯಾಸ ಕಾಣಬರುವುದಿಲ್ಲ. ಈ ವ್ಯತ್ಯಾಸದ ಪ್ರಮಾಣ ಸೇಕಡ ೧.೭ರಷ್ಟು ಮಾತ್ರ. ಒಟ್ಟಿನಲ್ಲಿ ಮೈಸೂರು ರಾಜ್ಯದಲ್ಲಿ ಭಾರತದ ಇತರ ಪ್ರದೇಶಗಳಿಗಿಂತ ಕಾರ್ಮಿಕ ಗೈರುಹಾಜರಿ ಸಮಸ್ಯೆಯು ತೀವ್ರತೆ ಹೆಚ್ಚಾಗಿದೆಯೆಂಬುದು ಮೇಲಿನ ವಿಶ್ಲೇಷಣೆಯಿಂದ ವೇದ್ಯವಾಗುತ್ತದೆ. ಆದರೆ ಇತರ ದೇಶಗಳ ಜೊತೆಯಲ್ಲಿ ಹೋಲಿಸಿದರೆ ಭಾರತದ ಕಾರ್ಮಿಕ ಗೈರುಹಾಜರಿಯ ಸಮಸ್ಯೆಯೂ ಅತಿ ತೀವ್ರವಾಗಿದೆಯೆಂಬುದನ್ನು ಮೊದಲೇ ತಿಳಿಸಲಾಗಿದೆ.

ಮುಖ್ಯಕಾರಣಗಳು : ಮೈಸೂರು ರಾಜ್ಯ ಹಾಗೂ ಭಾರತದಲ್ಲಿ ಕಾರ್ಮಿಕ ಗೈರುಹಾಜರಿಯ ಸಮಸ್ಯೆ ತೀವ್ರತರವಾಗಿರಲು ಅನೇಕ ಆರ್ಥಿಕ ಮತ್ತು ಸಾಮಾಜಿಕ ವಿಷಯಗಳು ಕಾರಣ. ಈ ಕಾರಣಗಳನ್ನು ಸಾಮಾನ್ಯವಾಗಿ ಮೂರು ಭಾಗಗಳನ್ನಾಗಿ ವಿಂಗಡಿಸಲಾಗುತ್ತದೆ. ಉದಾಹರಣೆಗೆ ಮೈಸೂರು ರಾಜ್ಯ ಸರ್ಕಾರ ಈ ಕಾರಣಗಳನ್ನು ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವ ಹಾಗೆ ಮೂರು ಮುಖ್ಯ ಭಾಗಗಳನ್ನಾಗಿ ವಿಂಗಡಿಸಿದೆ. ಅವುಗಳು (೧) ಅನಾರೋಗ್ಯ ಮತ್ತು ಅಪಘಾತಗಳು, (೨) ಸಾಮಾಜಿಕ ಮತ್ತು ಮತೀಯ ಕಾರಣಗಳು ಮತ್ತು (೩) ಇತರ ಕಾರಣಗಳು.

ಕೋಷ್ಟಕ ೩

ಮೈಸೂರು ರಾಜ್ಯದಲ್ಲಿನ ಕಾರ್ಮಿಕ ಗೈರುಹಾಜರಿಯ ಮೂಲಕಾರಣಗಳು[1]
(ಅಂಕಿ ಅಂಶಗಳು ಸೇಕಡಾ ಪ್ರಮಾಣದಲ್ಲಿವೆ)

ಕಾರಣಗಳು	೧೯೬೫	೧೯೬೬	೧೯೬೭	೧೯೬೮
೧. ಅನಾರೋಗ್ಯ ಮತ್ತು ಅಪಘಾತಗಳು	೩.೨	೩.೨	೩.೧	೩.೦
೨. ಸಾಮಾಜಿಕ ಮತ್ತು ಮತೀಯ ಕಾರಣಗಳು	೧.೩	೦.೭	೦.೯	೦.೯
೩. ಇತರ ಕಾರಣಗಳು	೧೩.೭	೯.೮	೯.೪	೯.೦

ಅನಾರೋಗ್ಯ ಮತ್ತು ಅಪಘಾತಗಳನ್ನು ಕಾರ್ಮಿಕರ ಗೈರುಹಾಜರಿಗೆ ವೈಯಕ್ತಿಕ ಕಾರಣಗಳಲ್ಲಿ ಸೇರಿಸಬಹುದು. ಮೈಸೂರು ರಾಜ್ಯದಲ್ಲಿ ಈ ಕಾರಣಗಳಿಂದ ಉಂಟಾದ ಕಾರ್ಮಿಕ ಗೈರುಹಾಜರಿ ೧೯೬೫ರಲ್ಲಿ ೩.೨% ಇದ್ದು ೧೯೬೮ರಲ್ಲಿ ೩.೦%ಕ್ಕೆ ಇಳಿದಿರುವುದನ್ನು ಮೇಲಿನ ಪಟ್ಟಿಯಲ್ಲಿ ಕಾಣಬಹುದು. ಭಾರತದಲ್ಲಿ

[1] Statistical Outline of Mysore, 1969

ಈ ಕಾರಣಗಳಿಂದ ವರ್ಷಕ್ಕೆ ಸರಾಸರಿ ಸುಮಾರು ೪.೦%ರಷ್ಟು ಗೈರುಹಾಜರಿ ಯಾದರೆ ಅಮೆರಿಕದಲ್ಲಿ ಈ ಕಾರಣಗಳಿಂದಾಗುವ ಗೈರುಹಾಜರಿ ೧.೯%ರಷ್ಟು ಮಾತ್ರ.[1] ಭಾರತದಲ್ಲಿ ಒದಗಿಸಲಾಗಿರುವ ಧಾರಾಳಪ್ರಮಾಣದ ನೌಕರರ ರಾಜ್ಯವಿಮಾ ಸೌಕರ್ಯಗಳೆ ಈ ಪ್ರಮಾಣದ ಕಾರ್ಮಿಕ ಗೈರುಹಾಜರಿಗಳಿಗೆ ಕಾರಣ ವಾಗಿವೆಯೆಂದು ಹೇಳಬಹುದು.

ಸಾಮಾಜಿಕ ಮತ್ತು ಮತೀಯ ಕಾರಣಗಳು ಗ್ರಾಮಾಂತರ ಪ್ರದೇಶಗಳಿಂದ ಬರುವ ಕಾರ್ಮಿಕರ ಮೇಲೆ ಪ್ರಬಲ ಪ್ರಭಾವ ಬೀರುತ್ತವೆ. ಹೆಚ್ಚು ಸಂಖ್ಯೆಯ ಕಾರ್ಮಿಕರಿಗೆ ಕಟ್ಟುನಿಟ್ಟಾಗಿ ಪಾಲಿಸಬೇಕಾದ ಕೆಲವು ಸಾಮಾಜಿಕ ಕರ್ತವ್ಯಗಳಾದ ಮದುವೆ, ಮುಂಜಿ, ಶ್ರಾದ್ಧ ಇತ್ಯಾದಿಗಳನ್ನು ಅಲಕ್ಷಿಸಲು ಸಾಧ್ಯವೇ ಇಲ್ಲ. ಜೊತೆಗೆ ಕಾರ್ಮಿಕರು ತಮ್ಮ ಹಳ್ಳಿಯ ಸಂಪರ್ಕವನ್ನು ಸಂಪೂರ್ಣವಾಗಿ ಕಡಿದುಹಾಕಲು ಅಸಮರ್ಥರಾಗಿರುತ್ತಾರೆ. ಪಟ್ಟಣದಲ್ಲಿನ ನಾಗರಿಕಜೀವನದ ಮೇಲಿನ ಜಿಗುಪ್ಸೆ ಯಿಂದಲೋ, ಕಾಯಿಲೆಬಿದ್ದಾಗಲೋ, ಹಳ್ಳಿಯಲ್ಲಿ ಬಿಟ್ಟುಬಂದಿರುವ ಹೆಂಡತಿ ಮಕ್ಕಳನ್ನು ಕೂಡಿಕೊಳ್ಳುವುದಕ್ಕಾಗಿಯೋ, ಕಾರ್ಮಿಕರು ಆಗಿಂದಾಗ್ಗೆ ಹಳ್ಳಿಗಳಿಗೆ ಹೋಗಿಬರುತ್ತಿರುತ್ತಾರೆ. ಇತ್ತೀಚಿನ ಒಂದು ಸಮೀಕ್ಷೆಯ ಪ್ರಕಾರ ಸೇಕಡಾ ೮೦ಕ್ಕಿಂತಲೂ ಹೆಚ್ಚು ಕಾರ್ಮಿಕರು ವರ್ಷಂಪ್ರತಿ ಎರಡು ಸಲಕ್ಕಿಂತಲೂ ಹೆಚ್ಚು ಸಾರಿ ಹಳ್ಳಿಗೆ ಹೋಗಿಬರುತ್ತಾರೆಂದು ತಿಳಿದುಬಂದಿದೆ. ಈ ಕಾರಣಗಳಿಂದ ಕಾರ್ಮಿಕರ ಗೈರುಹಾಜರಿ ಹೆಚ್ಚಾಗಿದೆ.[2] ಮೇಲಿನ ಕೋಷ್ಟಕದ ಪ್ರಕಾರ ಸಾಮಾಜಿಕ ಮತ್ತು ಮತೀಯ ಕಾರಣಗಳಿಂದಾಗಿ ಮೈಸೂರು ರಾಜ್ಯದಲ್ಲಿನ ಗೈರು ಹಾಜರಿ ೧೯೬೫ರಲ್ಲಿ ಸೇಕಡಾ ೧.೩ ಇದ್ದದ್ದು, ೧೯೬೮ರಲ್ಲಿ ಸೇಕಡಾ ೦.೯ಕ್ಕೆ ಇಳಿದಿದೆ.

ಮೇಲೆ ಹೇಳಿದ ಎರಡು ಕಾರಣಗಳನ್ನು ಬಿಟ್ಟು ಉಳಿದ ಎಲ್ಲ ಕಾರಣ ಗಳನ್ನೂ ‘ ಇತರ ಕಾರಣಗಳು ’ ಎಂಬ ಶೀರ್ಷಿಕೆಯಲ್ಲಿ ಸೇರಿಸಲಾಗಿದೆ. ಮೈಸೂರು ರಾಜ್ಯದಲ್ಲಿ ಈ ಕಾರಣಗಳಿಂದ ಉಂಟಾದ ಕಾರ್ಮಿಕ ಗೈರುಹಾಜರಿಯ ಪ್ರಮಾಣ ಬಹಳ ಅಧಿಕ. ೧೯೬೫ರಲ್ಲಿ ಇದು ಸೇಕಡಾ ೧೩.೫ ಇದ್ದು ೧೯೬೮ರಲ್ಲಿ ಸೇಕಡಾ ೯.೦ಕ್ಕೆ ಇಳಿದಿದೆ. ಆದರೂ ಈ ಪ್ರಮಾಣ ಹೆಚ್ಚೆನ್ನಿಸದೆ ಇರಲಾರದು. ಕೆಲಸ ಮಾಡುವ ಸ್ಥಳದಲ್ಲಿನ ಕಠಿಣ ಪರಿಸ್ಥಿತಿಗಳು ಮತ್ತು ವರ್ಷಂಪ್ರತಿ ಕಾರ್ಮಿಕರಿಗೆ ಕೊಡುವ ವಿಪುಲ ರಜಾ ಸೌಲಭ್ಯಗಳನ್ನೂ ಇತರ ಕಾರಣಗಳಲ್ಲಿ ಸೇರಿಸಬಹುದು.

ಕೆಲಸಮಾಡುವ ಸ್ಥಳಗಳಲ್ಲಿನ ಕಠಿಣ ಪರಿಸ್ಥಿತಿಗಳು, ಅಂದರೆ ಕೆಲಸಮಾಡಲು

---

[1] Ibid.

[2] Quoted by S. C. Pant: Indian Labour Problems, Chaitanya Publishing House, Allahabad. 1965. P. 22.

ಬೇಕಾದ ಒಳ್ಳೆಯ ವಾತಾವರಣವಿಲ್ಲದಿರುವಿಕೆ, ಮೇಲ್ವಿಚಾರಣೆಯ ನೀತಿ, ಬಟವಾಡೆ ಮತ್ತು ಬಡ್ತಿಗಳಲ್ಲಿ ಅನುಸರಿಸಬೇಕಾದ ನಿಬಂಧನೆಗಳ ಉಲ್ಲಂಘನೆ ಇತ್ಯಾದಿ ವಿಷಯಗಳು ರಾಜ್ಯದ ಕಾರ್ಮಿಕ ಗೈರುಹಾಜರಿಗೆ ಬಹಳವಾಗಿ ಕಾರಣಗಳಾಗಿವೆ. ಇಷ್ಟೇ ಅಲ್ಲದೆ ಸಾರಿಗೆ ಸೌಕರ್ಯಗಳ ಹಾಗೂ ಒಳ್ಳೆಯ ವಸತಿಸೌಕರ್ಯದ ಅಭಾವ ಮತ್ತು ಕೆಟ್ಟ ಹವೆ ಇವೂ ಕಾರ್ಮಿಕರು ಕೆಲಸದಿಂದ ತಪ್ಪಿಸಿಕೊಳ್ಳುವುದಕ್ಕೆ ಉತ್ತೇಜನ ನೀಡುತ್ತವೆ.

ಕೊನೆಯದಾಗಿ ನಮ್ಮ ದೇಶದಲ್ಲಿ ಪ್ರತಿಯೊಬ್ಬ ಕೈಗಾರಿಕಾ ಕಾರ್ಮಿಕನಿಗೂ ೩೦ ದಿವಸಗಳ ವಾರ್ಷಿಕ ರಜದ ಜೊತೆಗೆ ೪ ಅಥವಾ ೫ ದಿನಗಳ ಸಾರ್ವಜನಿಕ ರಜ, ೮ರಿಂದ ೧೫ ದಿವಸಗಳ ಆಕಸ್ಮಿಕ (ಕ್ಯಾಷುಯಲ್) ರಜ, ಒಂದು ತಿಂಗಳು ಅರ್ಧ ಸಂಬಳದ ಮೇಲೆ ಖಾಯಿಲೆ ರಜ ಇತ್ಯಾದಿ ರಜಗಳನ್ನು ಕೊಡಲಾಗುತ್ತದೆ. ಆದರೆ ಇತರ ದೇಶಗಳಲ್ಲಿ ಇಷ್ಟೊಂದು ವಿಪುಲ ರಜಾಸೌಕರ್ಯಗಳಿರುವುದಿಲ್ಲ. ಉದಾಹರಣೆಗಾಗಿ ಲಕ್ಸೆಂಬರ್ಗ್‌ನಲ್ಲಿ ಒಟ್ಟು ೮ ದಿನಗಳೂ ಬ್ರಿಟನ್ನಿನಲ್ಲಿ ೬ರಿಂದ ೧೨ ದಿನಗಳೂ, ಬೆಲ್ಜಿಯಂನಲ್ಲಿ ೧೨ ದಿನಗಳೂ ಅಮೇರಿಕ ಸಂಯುಕ್ತಸಂಸ್ಥಾನದಲ್ಲಿ ೭ ದಿನಗಳೂ, ಜಪಾನಿನಲ್ಲಿ ೬ ದಿನಗಳೂ ರಜಾದಿನಗಳಾಗಿರುತ್ತವೆ. ನಮ್ಮ ದೇಶದಲ್ಲಿ ವಿಪುಲ ರಜಾಸೌಕರ್ಯಗಳಿರುವುದೂ ಕಾರ್ಮಿಕ ಗೈರುಹಾಜರಿಗೆ ಪ್ರೋತ್ಸಾಹಕವಾಗಿದೆ.

ಪರಿಹಾರೋಪಾಯಗಳು: ಭಾರತ ಹಾಗೂ ಮೈಸೂರು ರಾಜ್ಯದಲ್ಲಿನ ಕಾರ್ಮಿಕ ಗೈರುಹಾಜರಿಯ ಸಮಸ್ಯೆಯ ಬಗ್ಗೆ ವಿವೇಚಿಸಿದ ಮೇಲೆ ಈ ಸಮಸ್ಯೆಯ ಪರಿಹಾರ ಕ್ರಮಗಳನ್ನೂ ಯೋಚಿಸಬೇಕು. ಕಾರ್ಮಿಕ ಗೈರುಹಾಜರಿ ಅನೇಕ ಕಾರಣಗಳಿಂದ ಉಂಟಾಗುವುದರಿಂದ ನಾವು ಯಾವುದಾದರೂ ಒಂದು ನಿರ್ದಿಷ್ಟ ಕ್ರಮವನ್ನು ಕೈಗೊಳ್ಳುವಂತಿಲ್ಲ. ಅನೇಕ ಪರಿಹಾರಕ್ರಮಗಳನ್ನು ಒಟ್ಟಿಗೆ ಅನುಸರಿಸಬೇಕಾಗುತ್ತದೆ. ಈ ಕೆಳಗಿನ ಈ ಪರಿಹಾರ ಕ್ರಮಗಳನ್ನು ಸೂಚಿಸಬಹುದು.

ಕಾರ್ಮಿಕ ಗೈರುಹಾಜರಿಯ ಸಮಸ್ಯೆ ನಮ್ಮ ದೇಶದಲ್ಲಿ ಅನೇಕ ವೇಳೆ ಕಾರ್ಖಾನೆಯೊಳಗಿನ ಕಠಿಣ ಪರಿಸ್ಥಿತಿಗಳಿಂದ ಉಂಟಾಗುವುದೆಂದು ಈ ಲೇಖನದಲ್ಲಿ ಮೊದಲೇ ತಿಳಿಸಲಾಗಿದೆ. ಈ ಪರಿಸ್ಥಿತಿಗಳನ್ನು ಸುಧಾರಿಸುವ ಕ್ರಮಗಳನ್ನು ಕೈಗೊಂಡ ಪಕ್ಷದಲ್ಲಿ ಈ ಸಮಸ್ಯೆಯನ್ನು ಸಾಕಷ್ಟುಮಟ್ಟಿಗೆ ಪರಿಹರಿಸಬಹುದು. ಕಾರ್ಮಿಕ ತನಿಖಾಸಮಿತಿಯು (Labour Investigation Committee 1947) ಸೂಚಿಸಿರುವಂತೆ ಕಾರ್ಖಾನೆಯೊಳಗೆ ಹಿತಕರವಾದ ಹಾಗೂ ಕಾರ್ಮಿಕರಿಗೆ ರುಚಿಸುವಂಥ ವಾತಾವರಣವನ್ನು ಕಲ್ಪಿಸಿದ್ದು, ಕಾರ್ಮಿಕ ಮತ್ತು ಮೇಲ್ವಿಚಾರಕ ಸಿಬ್ಬಂದಿಯ ನಡುವೆ ಮಧುರ ಬಾಂಧವ್ಯವಿರುವಂತೆ ಏರ್ಪಾಡುಮಾಡುವುದು, ಕಾರ್ಮಿಕರ ವೇತನಗಳನ್ನು ಸಾಕಷ್ಟು ಹೆಚ್ಚಿಸುವುದು, ಅಪಘಾತ ಮತ್ತು ಅನಾರೋಗ್ಯಗಳ ವಿರುದ್ಧ ಕಾರ್ಮಿಕರಿಗೆ ರಕ್ಷಣೆಗಳನ್ನು ಒದಗಿಸುವುದು ಇವೇ ಮೊದಲಾದ ಕ್ರಮಗಳಿಂದ ಸಮಸ್ಯೆಯ ತೀವ್ರತೆ ಬಹಳಮಟ್ಟಿಗೆ ಕಡಿಮೆಯಾಗಬಹುದು.

ಕಾರ್ಖಾನೆಯ ಹೊರಗಡೆ ಕಾರ್ಮಿಕರಿಗೆ ಸರಿಯಾದ ವಸತಿ ಮತ್ತು ಸಾರಿಗೆ ಸೌಕರ್ಯಗಳನ್ನು ಒದಗಿಸಿಕೊಡುವುದೂ ಮತ್ತೊಂದು ಮುಖ್ಯ ಪರಿಹಾರ ಕ್ರಮವಾಗಿದೆ. ಬೆಂಗಳೂರು ಮತ್ತು ಬೊಂಬಾಯಿಗಳಂಥ ದೊಡ್ಡ ದೊಡ್ಡ ನಗರಗಳಲ್ಲಿ ಈ ಎರಡು ಸೌಕರ್ಯಗಳ ಅಭಾವದಿಂದ ಕಾರ್ಮಿಕರ ಗೈರುಹಾಜರಿ ಸಮಸ್ಯೆ ತೀವ್ರವಾಗಿದೆ.

ಕಾರ್ಮಿಕರ ಹಾಜರಾತಿಯನ್ನು ಕ್ರಮಪಡಿಸಲು ಅನೇಕ ವಿಧವಾದ ಉತ್ತೇಜನ ಕ್ರಮಗಳು ನಮ್ಮ ರಾಜ್ಯದ ಕೈಗಾರಿಕೆಗಳಲ್ಲಿ ಅನುಷ್ಠಾನದಲ್ಲಿವೆ. ಉದಾಹರಣೆಗೆ, ಹಾಜರಾತಿ ಉಚಿತಾರ್ಥ (ಬೋನಸ್), ನಗದು ಬಹುಮಾನ, ಇತ್ಯಾದಿ ಉತ್ತೇಜನಗಳನ್ನು ಕ್ರಮವಾಗಿ ಕೆಲಸದ ಮೇಲೆ ಹಾಜರಾಗುವ ಕಾರ್ಮಿಕರಿಗೆ ಕೊಡುವ ಪದ್ಧತಿ ನಮ್ಮ ಹತ್ತಿ ಜವಳಿ ಹಾಗೂ ಎಂಜಿನಿಯರಿಂಗ್ ಕೈಗಾರಿಕೆಗಳಲ್ಲಿ ಜಾರಿಯಲ್ಲಿವೆ. ಆದರೆ ಈ ಉತ್ತೇಜನಗಳನ್ನು ಆದಷ್ಟು ಆಕರ್ಷಣೀಯವನ್ನಾಗಿ ಮಾಡಬೇಕು ಮತ್ತು ಈ ಪದ್ಧತಿಯನ್ನು ಎಲ್ಲ ಕೈಗಾರಿಕೆಗಳಿಗೂ ಅನ್ವಯಿಸಬೇಕು.

ಮತ್ತೊಂದು ಮುಖ್ಯ ಪರಿಹಾರಮಾರ್ಗವೆಂದರೆ ರಾಸ್ತೋಗಿಯವರು ಸೂಚಿಸಿರುವ ಹಾಗೆ 'ಕಾರ್ಮಿಕ ಗೈರುಹಾಜರಿಯಾದಾಗ ಅದರ ಹಿಂದೆಯೇ ಕೆಲವು ಕ್ರಮ ಕೈಗೊಳ್ಳಬೇಕು.[1] ಕೆಲಸಕ್ಕೆ ಆಗಾಗ್ಗೆ ತಪ್ಪಿಸಿಕೊಳ್ಳುವ ಕಾರ್ಮಿಕರ ಮನೆಗಳಿಗೆ ಅವರು ಗೈರುಹಾಜರಾದ ಮಾರನೆಯ ದಿವಸ ಒಬ್ಬ ನರ್ಸ್ ಅಥವಾ ಒಬ್ಬ ಪರಿಶೀಲಕನನ್ನು ಕಳುಹಿಸಿ ಅವರ ಗೈರುಹಾಜರಿಗೆ ಕಾರಣಗಳನ್ನು ಸಂಗ್ರಹಿಸಬೇಕು. ಆ ಕಾರಣಗಳಿಗೆ ತಕ್ಕ ಪರಿಹಾರ ಕ್ರಮಗಳನ್ನು ಕೈಗೊಂಡರೆ ಕಾರ್ಮಿಕ ಗೈರುಹಾಜರಿಯ ಪ್ರಮಾಣ ಕಡಿಮೆಯಾಗುವುದರಲ್ಲಿ ಸಂಶಯವಿಲ್ಲ. ಈ ಕ್ರಮವನ್ನು ಕೈಗಾರಿಕಾ ಕ್ಷೇತ್ರದಲ್ಲಿ ಬಹಳ ಪ್ರಗತಿ ಸಾಧಿಸಿರುವ ಅನೇಕ ಪಾಶ್ಚಾತ್ಯ ದೇಶಗಳಲ್ಲಿ ಅನುಸರಿಸಲಾಗುತ್ತಿದೆ.

ಕೊನೆಯದಾಗಿ ನಮ್ಮ ಕೈಗಾರಿಕೆಗಳಲ್ಲಿ ವಿಪುಲ ರಜಾನೀತಿಯ ಬದಲು ಒಂದು ನ್ಯಾಯಸಮ್ಮತವಾದ ಹಾಗೂ ದೃಢವಾದ ರಜಾನೀತಿಯನ್ನು ಅನುಸರಿಸಬೇಕು. ಕಾರ್ಮಿಕರುಗಳಿಗೆ ಯಾವ ಯಾವ ಕಾಲಗಳಲ್ಲಿ ರಜೆಯ ಅವಶ್ಯಕತೆ ಇದೆ ಅಥವಾ ಇಲ್ಲ ಎಂಬುದನ್ನು ಚೆನ್ನಾಗಿ ಪರಿಶೀಲಿಸಿ ರಜೆಯ ಅಗತ್ಯವಿರುವ ಕಾಲಗಳಲ್ಲಿ ರಜಾ ಸೌಕರ್ಯಗಳನ್ನು ಒದಗಿಸಬೇಕು ಮತ್ತು ಮಿಕ್ಕ ಕಾಲಗಳಲ್ಲಿ ಅದನ್ನು ಆದಷ್ಟು ಮಟ್ಟಿಗೆ ಕಡಿಮೆಮಾಡಬೇಕು. ಉದಾಹರಣೆಗೆ ನಮ್ಮ ರಾಜ್ಯದಲ್ಲಿ ಕೈಗಾರಿಕಾ ಗೈರುಹಾಜರಿ ಪ್ರಮಾಣ ಮೇ, ಜೂನ್ ತಿಂಗಳಗಳಲ್ಲಿ ಹೆಚ್ಚಾಗುತ್ತದೆ ಮತ್ತು

[1] J. L. Rastogi: Industrial Relations in Uttar Pradesh, Published by the author, 1965. P. 15.

ಸೆಪ್ಟೆಂಬರ್ ಅಕ್ಟೋಬರ್ ಮತ್ತು ನವಂಬರ್ ತಿಂಗಳುಗಳಲ್ಲಿ ಕಡಿಮೆಯಾಗುತ್ತದೆ. ಇದಕ್ಕೆ ಹೊಂದಿಕೊಳ್ಳುವ ರಜಾ ನೀತಿ ಅನುಸರಿಸಬೇಕು.

ಒಟ್ಟಿನಲ್ಲಿ ನಾನಾ ಕಾರಣಗಳಿಂದ ಉಂಟಾಗುವ ಈ ಗೈರುಹಾಜರಿ ಸಮಸ್ಯೆಯನ್ನು ಬಗೆಹರಿಸದಿದ್ದಲ್ಲಿ ರಾಷ್ಟ್ರದ ಹಾಗೂ ರಾಜ್ಯದ ಆರ್ಥಿಕ ಹಿತಕ್ಕೆ ಧಕ್ಕೆ ತಗಲುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಸೂಕ್ತ ಪರಿಹಾರ ಕ್ರಮಗಳನ್ನು ಅನುಸರಿಸುವುದು ಅತ್ಯಗತ್ಯ. ಮಾಲೀಕರು, ಕಾರ್ಮಿಕಸಂಘಗಳು, ಸರ್ಕಾರ ಮತ್ತು ವಾಣಿಜ್ಯ ಸಂಘಗಳು ಈ ಬಗೆ ಪರಸ್ಪರವಾಗಿ ಸಹಕರಿಸಬೇಕಾಗಿದೆ.

ಎ. ಎಸ್. ಧರಣೇಂದ್ರಯ್ಯ

ಹಸಿವು ಮತ್ತು ವರ್ತನೆ

ವ್ಯಕ್ತಿಯ ಜೀವನದಲ್ಲಿ ಹಸಿವಿನ ಪ್ರಭಾವ ಬಲು ಮಹತ್ತ್ವದ್ದು. ವೈವಿಧ್ಯಪೂರ್ಣವೂ ಕಲಾತ್ಮಕವೂ ಆದ ದೈಹಿಕ ರೂಪರಚನೆಗಳಿಂದಲೂ ಮಾನಸಿಕ ಗುಣಲಕ್ಷಣಗಳಿಂದಲೂ ಕೂಡಿರುವ ವ್ಯಕ್ತಿ ಈ ಜಗತ್ತಿನಲ್ಲಿ ಜಟಿಲವಾದ ಭೌತಿಕ, ಸಾಮಾಜಿಕ ಹಾಗೂ ಮಾನಸಿಕ ಪ್ರತ್ಯಾವರಣಗಳೊಂದಿಗೆ ಸರ್ವದಾ ವ್ಯವಹರಿಸುತ್ತಾನೆ. ಅನೇಕ ಜೈವಿಕ, ಸಾಮಾಜಿಕ ಮತ್ತು ಮಾನಸಿಕ ಅಭಿಪ್ರೇರಣೆಗಳು ಆತನ ವ್ಯವಹಾರವನ್ನು ನಿರ್ದೇಶಿಸುತ್ತಿರುತ್ತವೆ. ಅವುಗಳಲ್ಲಿ ಅತ್ಯಂತ ಪ್ರಬಲ ಜೈವಿಕ ಅಭಿಪ್ರೇರಣೆಗಳಾದ ಉಸಿರು, ಬಾಯಾರಿಕೆಗಳಂತೆಯೇ ಹಸಿವೂ ಒಂದು ಪ್ರಬಲ ಅಭಿಪ್ರೇರಣೆ. ಇದು ವ್ಯಕ್ತಿ, ಸಮಾಜ ಹಾಗೂ ರಾಷ್ಟ್ರಜೀವನಗಳಲ್ಲಿ ಮಹತ್ತ್ವಪೂರ್ಣವಾದ ಪಾತ್ರ ನಿರ್ವಹಿಸುತ್ತದೆ. ಇದು ಅನುಭವವೇದ್ಯವಾದ ಸತ್ಯ. ರಕ್ತಕ್ರಾಂತಿಗಳಂಥ ಅನೇಕ ಘಟನೆಗಳ ಹಿನ್ನೆಲೆಯಲ್ಲಿ ಹಸಿವಿನ ಕೈವಾಡವೂ ಗಣನೀಯವಾಗಿ ಇರುತ್ತದೆಯೆಂಬುದು ಆ ಘಟನೆಗಳನ್ನು ಪರಿಶೀಲಿಸಿದಾಗ ಬೆಳಕಿಗೆ ಬರುತ್ತದೆ. ಅಲ್ಲದೆ ಕಳ್ಳತನ, ದರೋಡೆ, ವಿಲೋಪನ, ವೇಶ್ಯಾವೃತ್ತಿ ಮುಂತಾದ ಅನೇಕ ಸಾಮಾಜಿಕ ವಿಕಾರಗಳ ಹಿಂದೆ ಹಸಿವಿನ ಕೈವಾಡ ಇದ್ದೇ ಇರುತ್ತದೆಯೆಂಬುದನ್ನೂ ಅನುಭವ ಮಾತ್ರವೇ ಅಲ್ಲದೆ ಅನೇಕ ವೈಜ್ಞಾನಿಕ ಅಧ್ಯಯನಗಳೂ ಸ್ಥಿರಪಡಿಸಿವೆ. ವ್ಯಕ್ತಿ ಮತ್ತು ಸಾಮಾಜಿಕಜೀವನಗಳಲ್ಲಿ ಇಷ್ಟು ಪ್ರಮುಖವೆನಿಸಿರುವ ಹಸಿವಿನ ಪೂರ್ವೋತ್ತರಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಪರಿಶೀಲಿಸುವುದು ಅತ್ಯಗತ್ಯವಾದದ್ದು.

ಹಸಿವಿನಿಂದ ಅಭಿಪ್ರೇರಿತವಾದ ವರ್ತನೆ

ಜೀವರಸಾಯನಿಕ ಪ್ರಕ್ರಿಯೆಯಿಂದಾಗಿ (metabolic process) ವ್ಯಕ್ತಿಯ ಶರೀರದಲ್ಲಿ ಜೀವಸತ್ತ್ವಾಂಶಗಳ ಕೊರತೆಯುಂಟಾದಾಗ ನಿರ್ದಿಷ್ಟವಾದ ಕೆಲವು ಅಗತ್ಯಗಳು (needs) ಉಂಟಾಗುತ್ತವೆ. ಈ ಅಗತ್ಯಗಳು ವ್ಯಕ್ತಿಯನ್ನು ಚೋದಿಸಿದಾಗ ಆತ ಕ್ರಿಯಾಶೀಲನಾಗುತ್ತಾನೆ. ಅಗತ್ಯಗಳ ಪೂರೈಕೆಯ (ಪರಿಹಾರದ)

ಹಾದಿಯಲ್ಲಿ ಈ ಕ್ರಿಯಾಶೀಲ ವರ್ತನೆ ಸಾಗಿದರೆ ಆಗ ಅದು 'ಅಭಿಪ್ರೇರಿತ ವರ್ತನೆ' (motivated behaviour) ಎನಿಸಿಕೊಳ್ಳುತ್ತದೆ. ಅಂದರೆ, ಅಭಿಪ್ರೇರಿತ ವರ್ತನೆ ಬಲು ಮುಖ್ಯವಾಗಿ ವ್ಯಕ್ತಿಯ ಅಗತ್ಯ ಮತ್ತು ಚೋದನೆ, ಗುರಿ ಅಥವಾ ಪರಿಹಾರದ ಮುನ್ನರಿವು (foresight) ಮತ್ತು ಗುರಿಯ ಸಾಧನ ಮತ್ತು ಪ್ರಯತ್ನ ಇವುಗಳನ್ನು ಒಳಗೊಂಡಿರುತ್ತದೆ. ಉದಾಹರಣೆಗೆ, ಜೀವರಸಾಯನಿಕ ಪ್ರಕ್ರಿಯೆಯಿಂದಾಗಿ ವ್ಯಕ್ತಿಯ ಶರೀರದಲ್ಲಿ ಆಹಾರಾಂಶಗಳ ಕೊರತೆಯುಂಟಾದಾಗ ವ್ಯಕ್ತಿಗೆ ಹಸಿವಿನ ಅನುಭವವಾಗಿ, ಅದನ್ನು ಹಿಂಗಿಸಿಕೊಳ್ಳಲು ಆವಶ್ಯಕವಾದ ಪರಿಹಾರದ (ಆಹಾರ) ಮುನ್ನರಿವು ಪಡೆದು ಅದರತ್ತ ಆತ ಸಾಗಿದಾಗ, ಅದು ಹಸಿವಿನಿಂದ ಅಭಿಪ್ರೇರಿತವಾದ ವರ್ತನೆಯೆನಿಸಿಕೊಳ್ಳುತ್ತದೆ.


ಸಾಧನ ಮತ್ತು ಪ್ರಯತ್ನ

ಜೈವಿಕ ಅಗತ್ಯ (ಹಸಿವು) ——————→ ಪರಿಹಾರ (ಆಹಾರ)

ಅಭಿಪ್ರೇರಿತ ವರ್ತನೆ

ಹಸಿವಿನ ಸಾಪೇಕ್ಷ ಶಕ್ತಿ

ವ್ಯಕ್ತಿಯ ವರ್ತನೆಯನ್ನು ಪ್ರಚೋದಿಸುವ ಅಂಶಗಳಲ್ಲಿ ಉಸಿರು, ತಾಯ್ತನದ ಚೋದನೆ, ಬಾಯಾರಿಕೆ—ಇವುಗಳನ್ನು ಬಿಟ್ಟರೆ ಹಸಿವೇ ಅತ್ಯಂತ ಶಕ್ತಿಯುತವಾದದ್ದೆಂಬುದು ಪ್ರಯೋಗಗಳಿಂದ ತಿಳಿದುಬಂದಿದೆ. ಅಭಿಪ್ರೇರಣೆಗಳ ಸಾಪೇಕ್ಷ ಶಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ಪ್ರಾಯೋಗಿಕ ಮನಃಶ್ಶಾಸ್ತ್ರಜ್ಞರು 'ವರ್ತನಾ ಪಂಜರ' (activity cage), 'ಪ್ರತಿಬಂಧಕ ಪೆಟ್ಟಿಗೆ' (obstruction box ಮುಂತಾದ ಪ್ರಯೋಗಸಾಧನಗಳನ್ನು ಬಳಸಿಕೊಂಡಿದ್ದಾರೆ. ಇವುಗಳಲ್ಲಿ ಪ್ರಸಿದ್ಧವಾದ, ವಾರ್ಡನನ ಪ್ರತಿಬಂಧಕ ಪೆಟ್ಟಿಗೆಯ ನೆಲಗಟ್ಟು ಈ ರೀತಿ ಇರುತ್ತದೆ:



ವಾರ್ಡನನ ಪ್ರತಿಬಂಧಕ ಪೆಟ್ಟಿಗೆಯ ನೆಲಗಟ್ಟಿನ ನಕ್ಷೆ[1]

[1] Woodworth and Marquis, *A Study of Mental Life*, p. 325

ಈ ಪೆಟ್ಟಿಗೆಯ ಮೊದಲ ಅಂಕಣದಲ್ಲಿ (ಅ), ಪ್ರಯೋಗಪಶುವನ್ನು (ಉದಾ: ಬಿಳಿ ಇಲಿ) ಇಡಲಾಗುತ್ತದೆ. ಎರಡನೆಯ ಅಂಕಣದಲ್ಲಿ (ಆ), ಪ್ರಯೋಗ ಪಶುವಿನ ಚಲನೆಯನ್ನು ಪ್ರತಿಬಂಧಿಸಲು ಒಂದು ವಿದ್ಯುತ್ ಚೌಕಟ್ಟನ್ನು (Electric grid) ನಿರ್ಮಿಸಲಾಗುತ್ತದೆ. ಮೂರನೆಯ ಅಥವಾ ನಾಲ್ಕನೆಯ ಅಂಕಣದಲ್ಲಿ ಅಗತ್ಯದ ಪರಿಹಾರವಸ್ತುವನ್ನು (ಉದಾ: ಆಹಾರ, ಸಂಗಾತಿ, ನೀರು, ಇತ್ಯಾದಿ) ಇಡಲಾಗುತ್ತದೆ. ಪ್ರಬಲವಾದ ಅಭಿಪ್ರೇರಣೆಯೊಂದಕ್ಕೆ ಒಳಗಾದ ಪ್ರಯೋಗಪಶುವನ್ನು ಈ ಪೆಟ್ಟಿಗೆಯಲ್ಲಿ ಬಿಟ್ಟಾಗ ಅದು ತನ್ನ ಗುರಿಯತ್ತ ಧಾವಿಸುತ್ತದೆ. ಪ್ರತಿಬಂಧಕವನ್ನು ದಾಟಿ ಅದು ತನ್ನ ಗುರಿಯನ್ನು ಮುಟ್ಟಿದ ತತ್‌ಕ್ಷಣ ಅದನ್ನು ಪುನಃ ಮೊದಲ ಸ್ಥಾನಕ್ಕೆ ವರ್ಗಾಯಿಸಲಾಗುತ್ತದೆ. ಹೀಗೆ ಒಂದು ಪೂರ್ವಯೋಜಿತ ಸಮಯದ ಅವಧಿಯಲ್ಲಿ (ಉದಾ: ಐದು ನಿಮಿಷ) ಆ ಪ್ರಾಣಿ ತನ್ನ ಗುರಿ ಮುಟ್ಟಲು ಎಷ್ಟು ಸಲ ಪ್ರತಿಬಂಧಕವನ್ನು ದಾಟಿ ಹೋಗುತ್ತದೆಯೆಂಬುದನ್ನು ದಾಖಲುಮಾಡಿಕೊಳ್ಳಲಾಗುತ್ತದೆ. ಹೀಗೆ ದೊರೆತ ಸಂಖ್ಯೆಯಿಂದ ಆ ಅಭಿಪ್ರೇರಣೆಯ ಶಕ್ತಿಯ ಪರಿಮಾಣವೆಷ್ಟೆಂಬುದು ವ್ಯಕ್ತವಾಗುತ್ತದೆ.

ಜೀವಿಯ ನಾನಾ ಅಭಿಪ್ರೇರಣೆಗಳ ಬಗ್ಗೆ ವಾರ್ಡನ್ ಮತ್ತು ಆತನ ಸಂಗಡಿಗರು ಮಾಡಿದ ಪ್ರಯೋಗದಲ್ಲಿ ಕೆಳಕಂಡ ಫಲಿತಾಂಶಗಳು ಹೊರಬಿದ್ದುವು.[2]

ಪರೀಕ್ಷಿಸಲಾದ ಚೋದನೆ			೨೦ ನಿಮಿಷಗಳ ಅವಧಿಯಲ್ಲಿ ಪ್ರತಿಬಂಧಕವನ್ನು ಎಷ್ಟು ಸಲ ದಾಟಲಾಯಿತು? (ಸರಾಸರಿ)
ತಾಯ್ತನದ ಚೋದನೆ (Maternal drive)	....	....	22.4
ಬಾಯಾರಿಕೆ	....	....	20.4
ಹಸಿವು	....	....	**18.2**
ಕಾಮ (Sex)	....	....	13.8
ಅನ್ವೇಷಣೆ	....	....	6.0
ಪರಿಹಾರವನ್ನು ಕೊಡದಿದ್ದಾಗ	....	....	3.5

ತಾಯ್ತನದ ಚೋದನೆ ಮತ್ತು ಬಾಯಾರಿಕೆಗಳನ್ನು ಬಿಟ್ಟರೆ ಹಸಿವೇ ಅತ್ಯಂತ ಹೆಚ್ಚು ಪ್ರಬಲವಾದ ಅಭಿಪ್ರೇರಣೆಯೆಂಬುದು ಮೇಲಿನ ಅಂಕಿಅಂಶಗಳಿಂದ ಸಿದ್ಧ


---

2 ಅದೇ

ವಾಗುತ್ತದೆ. ಅಲ್ಲದೆ, ಕಾಮಚೋದನೆಯೂ ಹಸಿವಿನಷ್ಟು ಪ್ರಬಲವಾದದ್ದಲ್ಲ ಎಂಬ ಅಂಶವೂ ಇಲ್ಲಿ ಸ್ಪಷ್ಟವಾಗಿದೆ.

ಹಸಿವಿನ ದೈಹಿಕ ನೆಲೆಗಳು : ಹಸಿವು ಮತ್ತು ಜಠರ ಆಕುಂಚನಗಳು

ವ್ಯಕ್ತಿಯ ದೇಹದಲ್ಲಿ ಆಹಾರಾಂಶಗಳ ಕೊರತೆಯುಂಟಾದಾಗ ಹಸಿವಿನ ಅನುಭವ ವಾಗುವುದು ಸರಿಯಷ್ಟೆ. ಈ ಅನುಭವಕ್ಕೆ ಸಂಬಂಧಿಸಿದಂತೆ ವ್ಯಕ್ತಿಯಲ್ಲಿ ಬಹು ಪ್ರಮುಖವಾಗಿ ಕಂಡುಬರುವ ದೈಹಿಕ ಕ್ರಿಯೆಗಳೆಂದರೆ ಜಠರ ಆಕುಂಚನಗಳು (Stomach contractions). ಈ ಆಕುಂಚನಗಳಿಗೂ ಹಸಿವಿನ ಯಾತನೆ (hunger pangs)ಗಳಿಗೂ ನೇರವಾದ ಸಂಬಂಧವಿದೆ ಎಂಬುದು ಪ್ರಯೋಗ ಗಳಿಂದ ಸಿದ್ಧಪಟ್ಟಿದೆ. ಇವುಗಳಲ್ಲಿ ಕ್ಯಾನನ್ ಮತ್ತು ಅವನ ಸಂಗಡಿಗರು ನಡೆಸಿದ ಪ್ರಯೋಗ ಮುಖ್ಯವಾದದ್ದು. ಅವರ ಪ್ರಯೋಗದ ಒಂದು ಸಾಮಾನ್ಯ ಯೋಜನೆ ಯನ್ನು ಈ ಕೆಳಗಿನ ಚಿತ್ರದಲ್ಲಿ ಕಾಣಬಹುದು.



ಹಸಿವಿನ ಯಾತನೆಗಳು ಮತ್ತು ಜಠರ ಆಕುಂಚನಗಳಿಗೆ ಇರುವ ಸಂಬಂಧ

1 ಸೂಚನೆ ಕೀಲಿಕೈ 2 ಬೆಲೂನು 3 ಜಠರ ಆಕುಂಚನಗಳ ಆಲೇಖ 4 ಕಾಲ (ನಿಮಿಷಗಳಲ್ಲಿ) 5 ಹಸಿವಿನ ಯಾತನೆಗಳು 6 ಹೊಟ್ಟೆಯ ಉಸಿರಾಟ ಪ್ರತಿಕ್ರಿಯೆಗಳು

ಪ್ರಾರಂಭದಲ್ಲಿ ಪ್ರಯೋಗಾರ್ಥಿಗಳು ಉದ್ದವಾದ ಒಂದು ಸಣ್ಣ ರಬ್ಬರಿನ ನಾಳದ ಕೊನೆಗೆ ಸೇರಿಸಲಾಗಿರುವ ಬೆಲೂನು ನುಂಗಲು ಅಭ್ಯಾಸಮಾಡಿಕೊಳ್ಳ

---

[3] Munn. N. L., *Introduction to Psychology*, p. 142–44.

ಬೇಕು. ಈ ಅಭ್ಯಾಸವಾದ ಮೇಲೆ ಆ ಬೆಲೂನು ಜಠರವನ್ನು ತುಂಬುವಷ್ಟು ದಪ್ಪವಾಗುವಂತೆ ಪ್ರಯೋಗಕರ್ತ ಅದಕ್ಕೆ ನಿಧಾನವಾಗಿ ಉಸಿರು ತುಂಬುತ್ತಾನೆ. ಅನಂತರ ಆ ರಬ್ಬರಿನ ನಾಳದ ಹೊರಗಿನ ಕೊನೆಯನ್ನು ತರಂಗಲೇಖಕ ಯಂತ್ರ ಸಲಕರಣೆಗೆ (Kymographic recording mechanism) ಅಳವಡಿಸಲಾಗುತ್ತದೆ. (ಹಿಂದಿನ ಚಿತ್ರವನ್ನು ನೋಡಿ.)

ಜಠರಭಿತ್ತಿಯು ಆಕುಂಚನವಾದಾಗ ಬೆಲೂನೂ ಆಕುಂಚನಗೊಳ್ಳುತ್ತದೆ. ಆಗ ಪ್ರಯೋಗಸಾಧನದಲ್ಲಿರುವ ಧೂಮಪಟಹದ (smoked drum) ಮೇಲೆ ಗೆರೆ ಬೀಳುತ್ತದೆ. ಹೀಗೆ ಗೊತ್ತಾದ ಅವಧಿಯಲ್ಲಿ ಆಗಬಹುದಾದ ಜಠರ ಆಕುಂಚನಗಳ ಗುರುತು ಬಿದ್ದು, 'ಜಠರಆಕುಂಚನ ಆಲೇಖಿ' ಸಿದ್ಧವಾಗುತ್ತದೆ. ಇದರ ಜೊತೆಗೆ ಹಸಿವಿನ ಯಾತನೆಗಳು, ಅವುಗಳ ಕಾಲ ಮತ್ತು ಹೊಟ್ಟೆಯ ಆಕುಂಚನಗಳು (abdomen contractions)—ಇವುಗಳ ಆಲೇಖಿಗಳನ್ನು ಪಡೆಯುವ ವ್ಯವಸ್ಥೆಯೂ ಈ ಪ್ರಯೋಗಸಾಧನದಲ್ಲಿರುತ್ತದೆ. ಪ್ರಯೋಗಾರ್ಥಿಗೆ ಹಸಿವಿನ ಯಾತನೆಯು ಅನುಭವವಾದಾಗಲೆಲ್ಲಾ, ಆತ ತನ್ನ ಮುಂದಿರುವ ದೂರಲೇಖಕ ಕೀಲಿಕೈಯನ್ನು (ಟೆಲಿಗ್ರಾಫಿಕ್ ಕೀ) ಅದುಮುತ್ತಿರಬೇಕು. ಇದರಿಂದ ಜಠರ ಆಕುಂಚನ ಆಲೇಖಿಯ ಕೆಳಗೇ ಹಸಿವುಯಾತನೆಯ ಆಲೇಖಿಯೂ ನಿರ್ಮಿತವಾಗುತ್ತದೆ. ಜಠರ ಆಕುಂಚನಗಳೂ ಹಸಿವುಯಾತನೆಗಳೂ ಒಂದೇ ಸಮಯದಲ್ಲಿ ಉಂಟಾಗುತ್ತವೆಂಬುದು ಈ ಎರಡು ಆಲೇಖಿಗಳನ್ನು ಪರಸ್ಪರ ಹೋಲಿಸಿ ನೋಡಿದಾಗ ವ್ಯಕ್ತವಾಗುತ್ತದೆ. ಹಸಿವುಯಾತನೆಗಳು ಹೊಟ್ಟೆ ಆಕುಂಚನಗಳಿಗೆ ಸಂಬಂಧಿಸಿರುವುದಿಲ್ಲವೆಂಬುದನ್ನೂ ಹೊಟ್ಟೆ ಆಕುಂಚನ ಆಲೇಖಿಯಿಂದ ತಿಳಿಯಬಹುದು.

ಕ್ಯಾನನ್ ಮತ್ತು ಸಂಗಡಿಗರ ಪ್ರಯೋಗದಿಂದ ಹೊರಬಿದ್ದಿರುವ ಕೆಲವು ಅಂಶಗಳಿವು: (1) ಹಸಿವುಯಾತನೆಗಳಿಗೂ ಜಠರ ಆಕುಂಚನಗಳಿಗೂ ನೇರವಾದ ಸಹಸಂಬಂಧವಿರುತ್ತದೆ. (2) ಜಠರ ಆಕುಂಚನಗಳ ತೀವ್ರತೆ ಹೆಚ್ಚಿದಂತೆ ಹಸಿವಿನ ಯಾತನೆಗಳ ತೀವ್ರತೆಯೂ ಹೆಚ್ಚುತ್ತದೆ. (3) ಹೊಟ್ಟೆಯ ಸ್ನಾಯು ಆಕುಂಚನಗಳಿಗೂ ಹಸಿವುಯಾತನೆಗಳಿಗೂ ಯಾವ ಸಂಬಂಧವೂ ಇಲ್ಲ.[4]

ಸಂತೋಷ, ಭಯ, ಕೋಪ ಮುಂತಾದ ಉತ್ಕಟವಾದ ಭಾವೋದ್ವೇಗ ಸ್ಥಿತಿಗಳಲ್ಲಿ ಜಠರ ಆಕುಂಚನಗಳು ಬಹುಮಟ್ಟಿಗೆ ಕಂಡುಬರುವುದಿಲ್ಲ. ಧೂಮಪಾನದಿಂದ ಅವುಗಳ ತೀಕ್ಷ್ಣತೆ ಕಡಿಮೆಯಾಗುತ್ತದೆ. ಇದು ಎಷ್ಟರಮಟ್ಟಿಗೆ ಕಡಿಮೆಯಾಗುವುದೆಂಬುದು ಹೊಗೆಸೊಪ್ಪಿನ ಶಕ್ತಿಯನ್ನು ಅವಲಂಬಿಸಿದೆ. ನಡುಪಟ್ಟಿಯನ್ನು ಬಹಳ ಬಿಗಿದು ಕೊಳ್ಳುವುದರಿಂದಲೂ 10–15 ನಿಮಿಷಗಳ ವರೆಗೆ

[4] ಅದೇ

ಜಠರ ಆಕುಂಚನಗಳನ್ನು ತಡೆಯಬಹುದು. ಬಿರುಸಾದ ದೈಹಿಕ ವ್ಯಾಯಾಮವೂ ಅವುಗಳನ್ನು ತಾತ್ಕಾಲಿಕವಾಗಿ ಪ್ರತಿಬಂಧಿಸಬಲ್ಲದು. ಆದರೆ ಅನಂತರ ಅವು ಹೆಚ್ಚು ತೀವ್ರವಾಗಿ ಕಾಣಿಸಿಕೊಳ್ಳುವ ಸಂಭವವಿದೆ.

ಮೇಲೆ ಹೇಳಲಾದ ನಿದರ್ಶನಗಳಿಂದಾಗಿ, ಹಸಿವಿನ ಅನುಭವಕ್ಕೆ ಜಠರ ಆಕುಂಚನಗಳೇ ಮೂಲಕಾರಣಗಳೆಂಬ ನಿರ್ಣಯಕ್ಕೆ ಬರಲಾಗದು. ಏಕೆಂದರೆ, ವ್ಯಕ್ತಿಯ ಶರೀರದಿಂದ ಜಠರವನ್ನು ಪ್ರತ್ಯೇಕಿಸಿದಾಗಲೂ ಹಸಿವಿನ ಅನುಭವಗಳಾಗುತ್ತವೆಯೆಂಬುದಕ್ಕೆ ಪ್ರಾಯೋಗಿಕ ನಿದರ್ಶನಗಳಿವೆ. ಇದರಿಂದಾಗಿ, ಹಸಿವಿಗೆ ಬೇರೆ ರೀತಿಯ ದೈಹಿಕ ನೆಲೆಗಳು ಇರಬೇಕೆಂಬುದು ಸಿದ್ಧವಾಗುತ್ತದೆ.

ಹಸಿವು ಮತ್ತು ರಕ್ತದ ರಾಸಾಯನಿಕ ವ್ಯತ್ಯಾಸಗಳು

ಜಠರ ಆಕುಂಚನಗಳೂ ಹಸಿವುಯಾತನೆಗಳೂ ರಕ್ತದಲ್ಲಿನ ರಾಸಾಯನಿಕ ಅಂಶಗಳನ್ನು ಅವಲಂಬಿಸಿರುತ್ತವೆ ಎಂಬುದಕ್ಕೆ ಪ್ರಾಯೋಗಿಕ ನಿದರ್ಶನಗಳಿವೆ. ಹಿಂದೆ ಹೇಳಿದಂತೆ ಜಠರವನ್ನು ದೇಹದಿಂದ ಪ್ರತ್ಯೇಕಿಸಿದಾಗಲೂ ಜಠರ ಮತ್ತು ಮಸ್ತಿಷ್ಕಗಳ ನಡುವಣ ಸಂಪರ್ಕತಂತುಗಳನ್ನು ಕತ್ತರಿಸಿಹಾಕಿದಾಗಲೂ ವ್ಯಕ್ತಿಯಲ್ಲಿ ಹಸಿವು ಅಭಿಪ್ರೇರಣೆ ಮುಂದುವರಿಯುವುದು ತಿಳಿದುಬಂದಿದೆ.[5] ರಕ್ತದ ಸಕ್ಕರೆಯ ಅಂಶವನ್ನು ಕಡಿಮೆಮಾಡುವ ಇನ್ಸುಲಿನ್ ಇಂಜೆಕ್ಷನ್ ಕೊಟ್ಟಾಗ ಜಠರ ಆಕುಂಚನಗಳು ಮತ್ತು ಹಸಿವುಯಾತನೆಗಳು ಉಂಟಾಗುತ್ತವೆ. ತದ್ವಿರುದ್ಧವಾಗಿ, ರಕ್ತದ ಸಕ್ಕರೆಯ ಅಂಶವನ್ನು ಹೆಚ್ಚಿಸುವ ಡೆಕ್ಸ್‌ಟ್ರೋಸ್ ಇಂಜಕ್ಷನ್ ಕೊಟ್ಟಾಗ ಅವು ನಿಲ್ಲುತ್ತವೆ.

ಹಸಿದ ನಾಯಿಯ ರಕ್ತವನ್ನು ಹೊಟ್ಟೆತುಂಬಿದ ನಾಯಿಗೆ ಇಂಜೆಕ್ಷನ್ ಮೂಲಕ ಕೊಟ್ಟಾಗ, ಅದರಲ್ಲಿ ಜಠರಆಕುಂಚನಗಳು ಕಂಡುಬರುವುವಲ್ಲದೆ, ಅವು ನಿಜವಾದ ಹಸಿವಿದ್ದಾಗ ಕಂಡುಬರುವ ಆಕುಂಚನಗಳಂತೆಯೇ ಇರುತ್ತವೆ. ಇದರಂತೆಯೇ ಆಹಾರ ಸೇವಿಸಿರುವ ನಾಯಿಯ ರಕ್ತವನ್ನು ಹಸಿದ ನಾಯಿಗೆ ಇಂಜೆಕ್ಷನ್ ಮೂಲಕ ಕೊಟ್ಟಾಗ, ಜಠರ ಆಕುಂಚನಗಳು ನಿಲ್ಲುತ್ತವೆ. ಅಂದಮೇಲೆ ಜಠರ ಆಕುಂಚನ ಮತ್ತು ಹಸಿವುಯಾತನೆಗಳೆರಡಕ್ಕೂ ರಕ್ತದ ರಸಾಯನಿಕ ಅಂಶಗಳೇ ದೈಹಿಕ ಕಾರಣಗಳೆಂಬುದು ಸಿದ್ಧವಾದಂತಾಗುತ್ತದೆ.[6]

ಹಸಿವು ಮತ್ತು ಆಹಾರೇಚ್ಛೆಗಳು ಅಥವಾ ರೋಚನಗಳು (Appetites)

ದೇಹದಲ್ಲಿ ಆಹಾರಾಂಶಗಳ ಕೊರತೆಯುಂಟಾದಾಗ, ವ್ಯಕ್ತಿಗೆ ಆಗುವ ಅನುಭವ

[5] *Journal of Genetic Psychology*, 1940, p. 153–63

[6] Morgan, G. T. and Steller, *Physiological Psychology*, pp. 391–92

ವನ್ನು ಸೂಚಿಸಲು 'ಹಸಿವು' ಎಂಬ ಪದವನ್ನು ಸಾಮಾನ್ಯವಾಗಿ ಬಳಸಿದರೂ, ವ್ಯಕ್ತಿಯಲ್ಲಿ ವಿಶಿಷ್ಟವಾದ ಹಸಿವುಗಳು ಅಥವಾ ಆಹಾರೇಚ್ಛೆಗಳು ಇರುತ್ತವೆ. ಉದಾಹರಣೆಗೆ, ದೇಹಕ್ಕೆ ಬೇಕಾದ ಸಸಾರಜನಕಪದಾರ್ಥಗಳು, ಖನಿಜಪದಾರ್ಥಗಳು, ಶರ್ಕರಪಿಷ್ಟಗಳು ಮುಂತಾದ ಕೆಲವು ವಿವಿಧ ಆಹಾರಪದಾರ್ಥಗಳಲ್ಲಿ ಸಾಕಷ್ಟು ಇದ್ದರೂ ಉಳಿದವುಗಳ ಕೊರತೆಯಿರುತ್ತದೆ. ಅಂದರೆ ಯಾವುದೇ ಆಹಾರವನ್ನು ಸೇವಿಸಿದರೂ ಹಸಿವು ಹಿಂಗಬಹುದಾದರೂ, ಕೊರತೆಯಿರುವ ಆಹಾರಾಂಶಗಳ ಅಗತ್ಯವಿರುವುದರಿಂದ ವ್ಯಕ್ತಿಯಲ್ಲಿ ಹಸಿವುಗಳು ಇರುತ್ತವೆ ಎಂದು ಹೇಳಬಹುದು.

ವಿವಿಧ ಹಸಿವುಗಳನ್ನು ಹಿಂಗಿಸಿಕೊಳ್ಳಬೇಕಾದರೆ ಯಾವ ಆಹಾರಾಂಶಗಳ ಕೊರತೆಯಿದೆ ಎಂಬುದನ್ನು ತಿಳಿದುಕೊಂಡು ಅದರಂತೆ ವ್ಯವಹರಿಸಲು ವೈದ್ಯರ ಸಲಹೆ ಅಗತ್ಯವೆನಿಸುವುದಾದರೂ, ತನ್ನ ದೇಹದ ಅಗತ್ಯಗಳಿಗೆ ಅನುಗುಣವಾದ ಆಹಾರಗಳನ್ನು ತನಗರಿವಿಲ್ಲದಂತೆಯೇ ಆರಿಸಿಕೊಳ್ಳುವ ಶಕ್ತಿ ವ್ಯಕ್ತಿಗೆ ಇರುತ್ತದೆ ಎಂಬುದು ಅಧ್ಯಯನಗಳಿಂದ ತಿಳಿದುಬಂದಿದೆ. ಈ ಬಗ್ಗೆ ಅತ್ಯಂತ ಪ್ರಸಿದ್ಧವಾದ ಪ್ರಯೋಗವೆಂದರೆ ಡೇವಿಸರ 'ಇಚ್ಛಿತ ಆಹಾರಸೇವನಾ ಪ್ರಯೋಗ' (Cafeteria feeding experiment).[7]

ಈ ಪ್ರಯೋಗಕ್ಕಾಗಿ 6ರಿಂದ 12ತಿಂಗಳ ವಯಸ್ಸಿನ ಮೂರು ಮಕ್ಕಳನ್ನು ಆರಿಸಿಕೊಳ್ಳಲಾಗಿತ್ತು. ಪ್ರತಿಯೊಂದು ಮಗುವಿನ ಎದುರಿಗೂ ಒಂದು ದೊಡ್ಡ ಹರಿವಾಣ ಇಡಲಾಗುತ್ತಿತ್ತು. ಆ ಹರಿವಾಣದ ತುಂಬ 12–20 ಬಗೆಯ ತಿಂಡಿ ತಿನಿಸುಗಳು ಪ್ರತ್ಯೇಕಪಾತ್ರೆಗಳಲ್ಲಿ ತುಂಬಿರುತ್ತಿದ್ದವು. ತಮಗೆ ಬೇಕಾದ ಆಹಾರ ತಿನ್ನಲು ಆ ಮಕ್ಕಳಿಗೆ ಅವಕಾಶ ಕೊಡಲಾಗಿತ್ತು. ತಾವು ಆಹಾರವನ್ನು ತಿನ್ನುವಾಗ, ಆ ಮಕ್ಕಳು ಸಿಕ್ಕಾಬಟ್ಟೆ ಚೆಲ್ಲಿಕೊಂಡು ಗಲೀಜುಮಾಡಿಕೊಳ್ಳುತ್ತಿದ್ದರೂ ಅವು ತಮಗೆ ಬೇಕಾದಷ್ಟು ಸಮತೋಲ (Balanced) ಆಹಾರ ಸೇವಿಸಿದ್ದುದು ಈ ಪ್ರಯೋಗದಿಂದ ತಿಳಿದುಬಂದಿತು. ಆಶ್ಚರ್ಯದ ಸಂಗತಿಯೆಂದರೆ ಒಂದೊಂದು ಮಗುವೂ ಒಮ್ಮೊಮ್ಮೆ ಬರೀ ತರಕಾರಿಯನ್ನೇ ಅಥವಾ ಬೆಣ್ಣೆಯನ್ನೇ ತಿಂದು ಹೊಟ್ಟೆತುಂಬಿಸಿಕೊಳ್ಳುತ್ತಿದ್ದದ್ದು ಕಂಡುಬಂದರೂ ಒಂದೊಂದು ದಿನ ಒಂದೊಂದು ಆಹಾರಪದಾರ್ಥದಿಂದ ಮತ್ತೊಂದು ಆಹಾರಪದಾರ್ಥಕ್ಕೆ ಬದಲಾಯಿಸುತ್ತಿತ್ತು. ಹೀಗೆ ಆ ಮಕ್ಕಳು ತಮ್ಮ ಆಹಾರದಲ್ಲಿ ಸಮತೋಲ ಕಾಯ್ದುಕೊಳ್ಳಲು ಸಾಧ್ಯವಾಗಿತ್ತು. ಇದರಿಂದಾಗಿ, ಆ ಮಕ್ಕಳು ಆಹಾರತಜ್ಞರ ಸಲಹೆಯಂತೆ ಆಹಾರವನ್ನು ಸೇವಿಸಿ ಬೆಳೆದ ಮಕ್ಕಳಂತೆಯೇ—ಅಷ್ಟೇಕೆ, ಅವುಗಳಿಗಿಂತಲೂ ಉತ್ತಮ ಆರೋಗ್ಯವಂತರಾಗಿ ಬೆಳೆದುವು. ಇಲಿಗಳ ಮೇಲೆ ನಡೆದ ಇದೇ ರೀತಿಯ

[7] American Journal of Sociology, 1939, p. 943

ಮತ್ತೊಂದು ಪ್ರಯೋಗದಲ್ಲೂ ಬಹಳ ಮಟ್ಟಿಗೆ ಇಂಥವೇ ಫಲಿತಾಂಶಗಳು ಹೊರ ಬಿದ್ದುವು. ಈ ರೀತಿಯ ಹಸಿವುಗಳು ಅಥವಾ ಆಹಾರೇಚ್ಛೆಗಳಿಗೆ ಸ್ವಾರಸ್ಯಕರವಾದ ಆನುಭವಿಕ ನಿದರ್ಶನಗಳೆಂದರೆ ಗರ್ಭಿಣಿ ಸ್ತ್ರೀಯರು ಸೇವಿಸುವ ಗೋಡೆಯ ಮಣ್ಣು, ಬೂದಿ, ಹುಳಿಹಣ್ಣು ಮುಂತಾದವು. ಇಂಥ ಕೆಲವು ಪದಾರ್ಥಗಳು ಅವರಿಗೆ ಅತ್ಯಗತ್ಯವಿರುವ ಸಸಾರಜನಕಪದಾರ್ಥಗಳನ್ನೂ ಕೆಲವು ಖನಿಜಪದಾರ್ಥಗಳನ್ನೂ ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದೇ ಈ ವಿಚಿತ್ರವರ್ತನೆಗೆ ಕಾರಣವಿರಬಹುದು.

ಹಸಿವು ಮತ್ತು ಸಾಮಾಜಿಕ ರೀತಿ ನೀತಿಗಳು

ಹಸಿವಿಗೆ ಪ್ರಬಲವಾದ ದೈಹಿಕ ಹಿನ್ನೆಲೆಯಿದ್ದರೂ ಅದು ಸಾಮಾಜಿಕ ರೀತಿನೀತಿಗಳಿಂದ ಸಾಕಷ್ಟು ಪ್ರಭಾವಿತವಾಗುತ್ತದೆಯೆಂಬುದಕ್ಕೆ ವಿವಿಧ ಸಂಸ್ಕೃತಿಗಳಲ್ಲಿನ ಆಹಾರ ಸೇವಿಸುವ ಕ್ರಮಗಳಲ್ಲೂ ಆಹಾರಪದಾರ್ಥಗಳಲ್ಲೂ ಆಹಾರಾಭ್ಯಾಸಗಳಲ್ಲೂ ಕಂಡುಬರುವ ವ್ಯತ್ಯಾಸಗಳೇ ಜೀವಂತ ನಿದರ್ಶನಗಳು. ಒಂದು ಸಂಸ್ಕೃತಿಯ ಆಹಾರಾಭ್ಯಾಸಗಳು ಅದರ ಧಾರ್ಮಿಕ ಹಾಗೂ ಸಾಮಾಜಿಕ ಸಂಪ್ರದಾಯಗಳು, ಆಹಾರಪೂರ್ವಾಗ್ರಹಗಳು (Prejudices), ಆಹಾರಾಯ್ಕೆಗಳು——ಇವನ್ನೇ ಅವಲಂಬಿಸಿರುತ್ತವೆ. ಧಾರ್ಮಿಕ ಕಾರಣಗಳಿಗಾಗಿ ಯಾವುದಾದರೂ ಆಹಾರಪದಾರ್ಥವನ್ನು ತ್ಯಜಿಸುವುದು, ಒಂದು ಸಂಸ್ಕೃತಿಯವರು ಮತ್ತೊಂದು ಸಂಸ್ಕೃತಿಯವರ ಆಹಾರದ ರೀತಿನೀತಿಗಳನ್ನು ಪೂರ್ವಾಗ್ರಹಪೀಡಿತರಾಗಿ ಹೀಯಾಳಿಸುವುದು—ಮುಂತಾದವು ಸರ್ವಸಾಮಾನ್ಯವಾಗಿ ನಮಗೆ ಕಂಡುಬರುವ ನಿದರ್ಶನಗಳು. ಮಾನವನ ಸಾಮಾಜಿಕ ಪರಿಸರ ಕೇವಲ ಆಹಾರೇಚ್ಛೆಗಳನ್ನು ಮಾತ್ರವಲ್ಲದೆ, ಹಸಿವನ್ನೂ ನಿಯಂತ್ರಿಸಬಲ್ಲದು. ಮನುಷ್ಯ ಎಲ್ಲಿಯೇ ವಾಸಿಸುತ್ತಿರಲಿ, ಎಷ್ಟೇ ಅನಾಗರಿಕನಾಗಿರಲಿ, ತನ್ನ ಪ್ರತ್ಯಾವರಣದಲ್ಲಿ ದೊರೆಯುವ ಆಹಾರ ಪದಾರ್ಥಗಳನ್ನು ಹಾಗೆಯೇ ಸೇವಿಸುವುದಿಲ್ಲ. ಅವುಗಳಲ್ಲಿ ಕೆಲವನ್ನು ಆರಿಸಿಕೊಂಡು ಕೆಲವನ್ನು ತಿರಸ್ಕರಿಸಿದರೆ, ಹೊಸದಾಗಿ ಕೆಲವನ್ನು ಉತ್ಪತ್ತಿಮಾಡಿಕೊಳ್ಳುತ್ತಾನೆ. ಆತನ ಅಹಾರಜೀರ್ಣಪ್ರಕ್ರಿಯೆಗಳು ಹಸಿವು ಅಥವಾ ಅದರ ಪರಿಹಾರಗಳಿಂದ ಉಂಟಾಗುವ ದೇಹದ ಲಯಗಳನ್ನು ಮಾತ್ರವೇ ಅವಲಂಬಿಸಿರದೆ ಆತನ ಸಾಂಸ್ಕೃತಿಕ ಹಿನ್ನೆಲೆ, ಅಭ್ಯಾಸ ಮತ್ತು ದೈನಂದಿನ ನಿಯಮಗಳನ್ನು ಅವಲಂಬಿಸಿರುತ್ತವೆ" ಎಂದು ಮ್ಯಾಲಿನೋವ್ಸ್ಕಿ ಹೇಳಿದ್ದಾನೆ.

ವ್ಯಕ್ತಿಗಳು ಹಸಿವನ್ನು ಹಿಂಗಿಸಿಕೊಳ್ಳುವ ರೀತಿ, ಸೇವಿಸುವ ಆಹಾರದ ಪ್ರಮಾಣ—ಇವು ಸಾಮಾಜಿಕ ಅನುಕೂಲದಿಂದ (social facilitation) ಬಹಳ ಮಟ್ಟಿಗೆ ಪ್ರಭಾವಿತವಾಗುತ್ತವೆ. ಇತರರ ಸಂಗಡ ಆಹಾರವನ್ನು ಸೇವಿಸುವಾಗ, ಅದರಲ್ಲೂ ಸಾಮೂಹಿಕ ಔತಣಗಳಲ್ಲಿ, ಜನ ಹೆಚ್ಚು ಆಹಾರ ಸೇವಿಸುವುದು ಎಲ್ಲರಿಗೂ ತಿಳಿದಿರುವ ವಿಷಯ. ಇದರಂತೆಯೇ ಇಷ್ಟವಾದ ಆಹಾರಪದಾರ್ಥ

ದೊರೆತಾಗ, ಹೊಟ್ಟೆತುಂಬಿದ್ದರೂ ಜನ ಅದನ್ನು ಸೇವಿಸುತ್ತಾರೆ. ಶ್ರೀ ರಾಮಕೃಷ್ಣ ಪರಮಹಂಸರು ಭೋಜನ ಕೂಟವೊಂದರಲ್ಲಿ ಹೊಟ್ಟೆತುಂಬ ಊಟಮಾಡಿ ಇನ್ನು ಸ್ವಲ್ಪವೂ ಸೇರುವುದಿಲ್ಲವೆಂಬ ಸ್ಥಿತಿಯಲ್ಲಿದ್ದಾಗಲೂ, ಅವರಿಗೆ ಪ್ರಿಯವಾದ ಜಿಲೇಬಿ ಬಂದಾಗ ಅದನ್ನು ಬಹಳ ಆನಂದದಿಂದ ತಿಂದರೆಂಬುದು ಒಂದು ಸ್ವಾರಸ್ಯಕರ ನಿದರ್ಶನ.

ಮೇಲಿನ ವಿಷಯಗಳನ್ನು ಪ್ರಾಯೋಗಿಕವಾಗಿ ಪರಿಶೀಲಿಸಲು ಕಾರ್ಟ್ಸ್ ಎಂಬವನು ಬಿಳಿ ಇಲಿಗಳ ಮೇಲೆ ಒಂದು ಪ್ರಯೋಗಸರಣಿಯನ್ನೇ ನಡೆಸಿದ. ಹೊಸ ಆಹಾರಪದಾರ್ಥಗಳನ್ನು ಕೊಟ್ಟಾಗ ಹೊಟ್ಟೆತುಂಬಿದ ಪ್ರಾಣಿಗಳಲ್ಲೂ ಹಸಿವುಂಟಾಗುವುದೆಂಬುದೂ ಹಸಿದವರು ತಿನ್ನುತ್ತಿರುವುದನ್ನು ನೋಡಿದಾಗ ಹೊಟ್ಟೆ ತುಂಬಿದವರೂ ತಿನ್ನಲು ಸಾಧ್ಯವೆಂಬುದೂ ಈ ಪ್ರಯೋಗಗಳಿಂದ ವ್ಯಕ್ತಪಟ್ಟ ಅಂಶಗಳು.[8]

ಒಟ್ಟಿನಲ್ಲಿ ಹೇಳುವುದಾದರೆ, ಹಸಿವು ಅಭಿಪ್ರೇರಣೆ ಎಲ್ಲರಲ್ಲೂ ಇದ್ದಾಗ್ಯೂ, ಆಹಾರೇಚ್ಛೆಗಳ ವಿಚಾರದಲ್ಲಿ, ವ್ಯಕ್ತಿಗಳಲ್ಲೂ ಸಂಸ್ಕೃತಿಗಳಲ್ಲೂ ವ್ಯಾಪಕವಾದ ವ್ಯತ್ಯಾಸಗಳಿರುತ್ತವೆ.

ಹಸಿವಿನ ಪರಿಣಾಮಗಳು

ತೀರದ ಹಸಿವಿನಿಂದ ಆಗುವ ದೈಹಿಕ ಮತ್ತು ಮಾನಸಿಕ ಪರಿಣಾಮಗಳು (ತಾತ್ಕಾಲಿಕ ಮತ್ತು ದೀರ್ಘಕಾಲಿಕ) ಇಷ್ಟೆಂದು ಹೇಳುವುದು ಕಷ್ಟ. ಆದರೆ ಈ ಪರಿಣಾಮಗಳು ಅತ್ಯಂತ ತೀವ್ರವಾಗಿರುತ್ತವೆಯೆಂಬುದಕ್ಕೆ ಅದೇ ಹಸಿವಿಗೆ ಸಂಬಂಧಿಸಿದಂತೆ ನಡೆಸಿದ ಪ್ರಯೋಗದ ಫಲಿತಾಂಶಗಳು ಯಥೇಚ್ಛವಾದ ನಿದರ್ಶನ ಒದಗಿಸಿವೆ.

ಈ ಪ್ರಯೋಗ ನಡೆದದ್ದು ಎರಡನೆಯ ಮಹಾಯುದ್ಧದ ಸಮಯದಲ್ಲಿ—ಅಮೆರಿಕದ ಮಿನ್ನೆಸೋಟಾ ವಿಶ್ವವಿದ್ಯಾನಿಲಯದಲ್ಲಿ. ಇದರ ಪ್ರಯೋಗಾರ್ಥಿಗಳೆಂದರೆ, ಪ್ರಯೋಗಕ್ಕೆ ವಶರಾಗಲು ತಾವಾಗಿಯೇ ಮುಂದೆ ಬಂದ 32 ಮಂದಿ ವಿದ್ವಾಂಸರು. ಅವರು ಹೆಚ್ಚು ಮೇಧಾವಿಗಳು. ವ್ಯಕ್ತಿಗಳ ನಡವಳಿಕೆಯ ಮೇಲೆ ಹಸಿವು ಯಾವ ಪ್ರಭಾವವನ್ನೂ ಬೀರುವುದಿಲ್ಲವೆಂದು ನಂಬಿದ್ದವರು.

ಈ ಪ್ರಯೋಗ ಒಂದು ವರ್ಷದ ವರೆಗೆ ನಡೆಯಿತು. ಮೊದಲ ಮೂರು ತಿಂಗಳ ಅವಧಿಯಲ್ಲಿ ಪ್ರಯೋಗಾರ್ಥಿಗಳಿಗೆ ಹೊಟ್ಟೆ ತುಂಬ ಆಹಾರ ಕೊಡಲಾಯಿತು. ಆ ಅವಧಿಯಲ್ಲಿ ಅವರಲ್ಲಿ ಕಂಡುಬರುತ್ತಿದ್ದ ವರ್ತನೆಗಳನ್ನು ದಾಖಲುಮಾಡಿಕೊಳ್ಳಲಾಯಿತು. ಅನಂತರ ಆರು ತಿಂಗಳ ಕಾಲ ಅವರಿಗೆ ಅರೆ

---

[8] Klineberg, Otto, *Social Psychology*

ಹೊಟ್ಟೆಗಾಗುವಷ್ಟು ಕೊಡಲಾಯಿತು. ಈ ಅವಧಿಯಲ್ಲೂ ಅವರ ವರ್ತನೆಗಳನ್ನು ದಾಖಲುಮಾಡಿಕೊಳ್ಳಲಾಯಿತು. ಕೊನೆಯ ಮೂರು ತಿಂಗಳ ಅವಧಿಯಲ್ಲಿ ಅವರು ಪುನಃ ಸಾಮಾನ್ಯಜೀವನಕ್ಕೆ ಹೊಂದಿಕೊಳ್ಳಲು ನೆರವು ನೀಡಲಾಯಿತು.

ಈ ಪ್ರಯೋಗದಿಂದ ಅನೇಕ ಮಹತ್ತ್ವಪೂರ್ಣ ಫಲಿತಾಂಶಗಳು ಬೆಳಕಿಗೆ ಬಂದುವು. ಆ ತರುಣ ವಿದ್ವಾಂಸರಲ್ಲಿ ಅರೆಹೊಟ್ಟೆಯ ಊಟದಿಂದಾಗಿ ಅನೇಕ ತೀವ್ರವಾದ ದೈಹಿಕ ಮಾನಸಿಕ ಬದಲಾವಣೆಗಳು ಕಂಡುಬಂದುವು. ಅವರ ದೇಹದ ತೂಕ ಬಹಳ ಕಡಿಮೆಯಾಯಿತಲ್ಲದೆ ಆರೋಗ್ಯವೂ ಬಹಳ ಕುಂದಿತು. ಇದರಿಂದಾಗಿ ಶರೀರದ ರೋಗಪ್ರತಿರೋಧ ಶಕ್ತಿಗೆ ತೀವ್ರ ಹಾನಿಯುಂಟಾಯಿತು. ಅಲ್ಲದೆ ಅವರಲ್ಲಿ ಅನೇಕ ಕೆಟ್ಟ ಚಾಳಿಗಳು ಕಾಣಿಸಿಕೊಂಡುವು. ಆಹಾರ ಸೇವಿಸುವಾಗ ಅವರು ಶಬ್ದಮಾಡುತ್ತ ತಿನ್ನುತ್ತಿದ್ದರಲ್ಲದೆ ತಟ್ಟೆಗಳನ್ನು ನೆಕ್ಕುತ್ತಿದ್ದರು. ಅವರ ಸಾಮಾನ್ಯ ಅಭಿರುಚಿಗಳಲ್ಲಿ ಗಣನೀಯವಾದ ಬದಲಾವಣೆಗಳಾದುವು. ಸದಾ ಅವರ ಗಮನ ಆಹಾರಪದಾರ್ಥಗಳಿಗೂ ಆಹಾರಪದಾರ್ಥಗಳಿಗೆ ಸಂಬಂಧಿಸಿದ ವಿಷಯಗಳಿಗೂ ಹರಿಯುತ್ತಿತ್ತು. ಆಹಾರದ ವಿವರಣೆಗಳುಳ್ಳ ಹಾಗೂ ಆಹಾರ ಪದಾರ್ಥಗಳ ಚಿತ್ರಗಳನ್ನೊಳಗೊಂಡ ಪುಸ್ತಕಗಳು ಅವರಿಗೆ ಚಿತ್ತಾಕರ್ಷಕವಾಗಿದ್ದುವು. ಅವರ ಮನಸ್ಸಿನ ತುಂಬ ಆಹಾರ ಕುರಿತ ಹಗಲುಗನಸುಗಳೇ.

ಆಹಾರ ಕದ್ದು ತಿನ್ನುವುದೇ ಮುಂತಾದ ಸಮಾಜಬಾಹಿರ ಚಟುವಟಿಕೆಗಳು ಅವರಲ್ಲಿ ಕಂಡುಬಂದುವು. ಅವರಲ್ಲೇ ಪರಸ್ಪರ ಘರ್ಷಣೆಗಳೂ ಅಪನಂಬಿಕೆಗಳೂ ಬೆಳೆದದ್ದು ಇನ್ನೊಂದು ಕುತೂಹಲಕಾರಿ ಅಂಶ.

ಅವರ ಬುದ್ಧಿಶಕ್ತಿ ಕಡಿಮೆಯಾಗದಿದ್ದರೂ ಬೌದ್ಧಿಕ ಕಾರ್ಯಗಳಲ್ಲಿ ತಮ್ಮ ಗಮನ ಕೇಂದ್ರೀಕರಿಸಲು ಅವರು ಅಸಮರ್ಥರಾದರು. ಹಸಿವು ತಮ್ಮನ್ನು ಸುಸಂಸ್ಕೃತರನ್ನಾಗಿ ಮಾಡುವ ಬದಲು ಅಸಭ್ಯರನ್ನಾಗಿ ಪರಿವರ್ತಿಸಿತು ಎಂದು ಅವರಲ್ಲನೇಕರು ಈ ಪ್ರಯೋಗಾವಧಿಯಲ್ಲಿ ತಮಗಾದ ಅನುಭವ ಕುರಿತ ವರದಿಯಲ್ಲಿ ತಿಳಿಸಿದರು. ತಮ್ಮ ನೈತಿಕ ಸಾಮಾಜಿಕ ಲೇಪನ ಎಷ್ಟು ತೆಳುವಾದದ್ದು ಎಂದೂ ಕೂಡ ಅವರು ಆಶ್ಚರ್ಯಪಟ್ಟದ್ದೂ ಉಂಟು.

ಈ ಪ್ರಯೋಗದಿಂದ ಹೊರಬಿದ್ದ ಅತ್ಯಂತ ಪ್ರಮುಖವಾದ ಅಂಶವಿದು: ವ್ಯಕ್ತಿ ಯಾವುದಾದರೂ ರಚನಾತ್ಮಕ ಅಥವಾ ಸೃಜನಾತ್ಮಕ ಕ್ರಿಯೆಯಲ್ಲಿ ಮಗ್ನನಾಗಬೇಕಾದರೆ, ಆತನ ಮೂಲ ಅಗತ್ಯಗಳಲ್ಲಿ ಒಂದಾದ ಹಸಿವು ಸಾಕಷ್ಟು ತೃಪ್ತಿ ಹೊಂದಿರಬೇಕು. 'ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು' ಎಂಬುದು ಗಾದೆ ಹೊಟ್ಟೆಗಿಲ್ಲದವರ ಪಾಡಿನ ಬಗ್ಗೆ ಪ್ರಯೋಗಾತ್ಮಕವಾಗಿ ಸಾಧಿಸಿ ತೋರಿಸಬಹುದಾಗಿದೆ. ವ್ಯಕ್ತಿಯ ಅನುಭವವನ್ನೇ ಸಮಾಜಕ್ಕೂ ಅನ್ವಯಿಸಬಹುದು. ಯಾವ ಸಂಸ್ಕೃತಿಯಾದರೂ ಸರ್ವತೋಮುಖವಾಗಿ ಬೆಳೆಯಬೇಕಾದರೆ ಅದರಲ್ಲಿ

ಸಾಹಿತ್ಯ, ಕಲೆ, ವಿಜ್ಞಾನಗಳು ಬೆಳೆದು ನಲಿಯಬೇಕಾದರೆ, ಅದರ ಜನತೆ ಹಸಿವಿನ ಕಪಿಮುಷ್ಟಿಯಿಂದ ಪಾರಾಗಬೇಕಾದ್ದು ಅತ್ಯಗತ್ಯವೆಂಬುದು ಸ್ಪಷ್ಟ.

ಜನಜೀವನದಲ್ಲಿ ಹಸಿವಿನ ಮಹತ್ತ್ವ ಎಷ್ಟೆಂಬುದು ಮಾರ್ಗರೆಟ್ ಮೀಡ್, ಹೋಮ್‌ಬರ್ಗ್ ಮುಂತಾದ ಮಾನವಶಾಸ್ತ್ರಜ್ಞರ ಅಧ್ಯಯನಗಳಿಂದ ತಿಳಿದು ಬರುತ್ತದೆ. ಉದಾಹರಣೆಗೆ, ಬೊಲಿವಿಯದ ಕೆಂಪು ಇಂಡಿಯನರಲ್ಲಿ ಸಿರಿಯೋನಿ ಎಂಬ ಬುಡಕಟ್ಟಿನ ಜನರ ಜೀವನ ರೀತಿನೀತಿಗಳ ಅಧ್ಯಯನದಿಂದ ದೊರೆತಿರುವ ವಿವರಗಳು ಮಿನ್ನೆಸೋಟಾ ವಿಶ್ವವಿದ್ಯಾನಿಲಯದ ಪ್ರಯೋಗದಲ್ಲಿ ಕಂಡುಬಂದ ಫಲಿತಾಂಶಗಳನ್ನೇ ಬಹಳಮಟ್ಟಿಗೆ ಹೋಲುತ್ತವೆ. ಆ ಜನರ ಚಟುವಟಿಕೆಗಳೆಲ್ಲ ಆಹಾರದ ಮತ್ತು ಆಹಾರ ಪಡೆಯುವ ವಿಧಾನಗಳ ಮೇಲೆಯೇ ಕೇಂದ್ರೀಕೃತವಾಗಿರುತ್ತವೆ. ಅವರ ಅಂತಃಕಲಹಗಳು ಮುಖ್ಯವಾಗಿ ಆಹಾರಸಂಬಂಧವಾದವುಗಳೇ. ಅವರ ಕನಸುಗಳಿಗೂ ಹಗಲುಗನಸುಗಳಿಗೂ ಆಹಾರದ ಬೇಟೆಯೇ ಪ್ರಮುಖ ವಸ್ತು. ಆಹಾರ ಬಹಳ ಕಡಿಮೆಯಾಗಿದ್ದಾಗ ಅವರಲ್ಲಿ ಲೈಂಗಿಕ ಸಂಬಂಧ ಅತ್ಯಲ್ಪಮಟ್ಟದಲ್ಲಿರುತ್ತದೆ. ಅವರ ಕತೆ, ಪುರಾಣ ಮತ್ತು ಕಲೆಗಳಲ್ಲೂ ಆಹಾರದ ವಿಷಯವೇ ಹಾಸುಹೊಕ್ಕು. ಅವರ ಮಂತ್ರವಿದ್ಯೆಯೂ ಪ್ರಮುಖವಾಗಿ ಆಹಾರಕ್ಕೇ ಸಂಬಂಧಿಸಿರುತ್ತದೆ.[9]

ಒಂದು ಸಂಸ್ಕೃತಿಯ ಅಳಿವು ಉಳಿವುಗಳಿಗೆ ಹಸಿವೂ ಹಸಿವಿನ ಪರಿಹಾರಗಳೂ ಬಹು ಪ್ರಮುಖ ಕಾರಕಾಂಶಗಳೆಂಬುದನ್ನು ಪ್ರಯೋಗದಿಂದಲೂ ನಿಜಜೀವನ ವೀಕ್ಷಣೆಯಿಂದಲೂ ದೊರೆತಿರುವ ಫಲಿತಾಂಶಗಳು ಸ್ಪಷ್ಟವಾಗಿ ಸಾರುತ್ತವೆ. ಭವ್ಯ ಸಂಸ್ಕೃತಿಯನ್ನು ಕಟ್ಟಬೇಕೆಂಬ ಇಚ್ಛೆಯುಳ್ಳ ಯಾವ ರಾಷ್ಟ್ರವೇ ಆಗಲಿ, ತನ್ನ ಜನತೆಯ ಆಹಾರಸಮಸ್ಯೆಯ ಪರಿಹಾರಕ್ಕೆ ಆದ್ಯಗಮನ ನೀಡಬೇಕಾದ್ದು ಅತ್ಯಾವಶ್ಯಕ.

---

[9] Thouless Robert, H., *General and Social Psychology*, P. 184

ಆಹಾರದ ಮಹತ್ತ್ವ

ಮಾನವನ ಇತಿಹಾಸವನ್ನು ರೂಪಿಸುವುದು ಅವನ ಹೊಟ್ಟೆ. ಕನ್‌ಫ್ಯೂಶಿಯಸನ ಪ್ರಕಾರ ಮನುಷ್ಯರ ಮಹಾ ವಾಂಛೆಗಳೆಂದರೆ ಕೇವಲ ಎರಡು: ದೇಹ ಪೋಷಣೆ ಮತ್ತು ಸಂತಾನೋತ್ಪಾದನೆ—ಆಹಾರ ಪಾನೀಯ ಮತ್ತು ದೇಹಸಂಗ. ಅನೇಕರು ಕಾಮವನ್ನು ಗೆದ್ದಿದ್ದಾರೆ, ಆದರೆ ಆಹಾರ ಪಾನೀಯ ಬಿಟ್ಟು ಬದುಕಿದ ಸಂತರು ಯಾರೂ ಇಲ್ಲ. ಜಿತೇಂದ್ರಿಯರಾದ ಋಷಿಗಳುಂಟು; ಆದರೆ ನಾಲ್ಕೈದು ಗಂಟೆಗಳಿಗಿಂತ ಹೆಚ್ಚು ಕಾಲ ಆಹಾರ ಚಿಂತನೆ ಮಾಡದ ಆಧ್ಯಾತ್ಮ ಜೀವಿಗಳಿಲ್ಲ. ನಮ್ಮ ತಲೆಯಲ್ಲಿ ಕೆಲವು ಗಂಟೆಗಳಿಗೊಮ್ಮೆ ಪಲ್ಲವಿಯಂತೆ ಪುನರ್ಭವಿಸುವ ವಿಚಾರವೊಂದೇ—'ನನ್ನ ಊಟ ಯಾವಾಗ?' ಇದು ಸಂಭವಿಸುವುದು ದಿನಕ್ಕೆ ಕನಿಷ್ಠ ಮೂರು ಬಾರಿ; ಕೆಲವು ಸಂದರ್ಭಗಳಲ್ಲಿ ನಾಲ್ಕೈದು ಸಾರಿ. ಅಂತರರಾಷ್ಟ್ರೀಯ ಸಮ್ಮೇಳನಗಳು ಕೂಡ—ಅವು ಎಂಥ ಗಹನ ರಾಜಕೀಯ ಬಿಕ್ಕಟ್ಟನ್ನೇ ಕುರಿತು ಚರ್ಚೆ ನಡೆಸುತ್ತಿರಲಿ—ಮಧ್ಯಾಹ್ನದ ಊಟಕ್ಕಾಗಿ ನಡುವೆ ಏಳುವುದು ಅನಿವಾರ್ಯ. ಪಾರ್ಲಿಮೆಂಟುಗಳು ಕೂಡ ಊಟದ ಸಮಯಕ್ಕೆ ತಕ್ಕಂತೆ ತಮ್ಮ ಅಧಿವೇಶನಗಳ ವೇಳೆಗಳನ್ನು ಗೊತ್ತುಪಡಿಸಿಕೊಳ್ಳಬೇಕು. ಪಟ್ಟಾಭಿಷೇಕ ಮಹೋತ್ಸವವೇ ಆದರೂ ಐದಾರು ಗಂಟೆಗಳಿಗಿಂತ ಹೆಚ್ಚು ದೀರ್ಘವಾಗಿರಬಾರದು; ಮಧ್ಯಾಹ್ನದ ಊಟಕ್ಕೆ ಭಂಗ ತರುವಂತೆ ಲಂಬಿಸಬಾರದು. ಹಾಗಾದರೆ ಅದೂ ಒಂದು ಸಾರ್ವಜನಿಕ ಹಿಂಸೆ. ನಮ್ಮ ಪ್ರಭೆಯೆಲ್ಲ ಜಠರಾಧಾರಿತ; ಊರ ಹಿರಿಯನ ಸಾರ್ವತ್ರಿಕ ಸನ್ಮಾನಕ್ಕೂ ಭೋಜನಕೂಟವೇ ಮುಖ್ಯ ವಿಧಿ.

ಇದಕ್ಕೆ ಕಾರಣವಿಲ್ಲದೆ ಇಲ್ಲ. ಊಟದ ತಟ್ಟೆಯ ಮುಂದೆ ನಡೆಯುವ ಸ್ನೇಹಸಂವರ್ಧನ ಶಾಂತಿಯುತ. ಭಿನ್ನ ದೃಷ್ಟಿಕೋನಗಳನ್ನು ದುಂಡುಗೊಳಿಸಲು ಇದು ಅತ್ಯುತ್ತಮ ಸಾಧನ. ಹಸಿದ ಇಬ್ಬರು ಮಿತ್ರೋತ್ತಮರನ್ನು ಒಟ್ಟಿಗೆ ಸೇರಿಸಿ ನೋಡಿ. ಪರಿಣಾಮ—ಖಂಡಿತ ಜಗಳ. ಒಳ್ಳೆಯ ಊಟದ ಪ್ರಭಾವ ಕೆಲವು ಗಂಟೆ ಮಾತ್ರವಲ್ಲ, ಹಲವಾರು ತಿಂಗಳು. ಮೂರು-ನಾಲ್ಕು ತಿಂಗಳ ಹಿಂದೆ ಒಳ್ಳೆಯ ಊಟ ಹಾಕಿಸಿದವನೊಬ್ಬ ಬರೆದ ಪುಸ್ತಕವನ್ನು ಕಟುವಾಗಿ ವಿಮರ್ಶಿಸಲು ನಾವು ಹಿಂದೆಗೆಯುತ್ತೇವೆ. ಈ ಬಗ್ಗೆ ಯಾರಾದರೂ ಅಂಕಿ ಅಂಶ ಸಂಗ್ರಹಿಸುವುದಾದರೆ ವೇದ್ಯವಾಗುವ ವಿಚಾರವಿದು: ಒಬ್ಬ ವ್ಯಕ್ತಿ ತನ್ನ ಮಿತ್ರರಿಗೆ ನೀಡುವ ಔತಣಗಳ ಸಂಖ್ಯೆಗೂ ಅಧಿಕಾರದಲ್ಲಿ ಆತ ಗಳಿಸುವ ಉನ್ನತಿಯ ವೇಗಕ್ಕೂ ನೇರ ಸಂಬಂಧವುಂಟು.

—ಲಿನ್ ಯುಟಾಂಗ್

ಕೆ. ಎಸ್. ಶಿವಣ್ಣ

ಆಗ್ನೇಯ ಏಷ್ಯದಲ್ಲಿ ಪಾಶ್ಚಾತ್ಯ ವಸಾಹತು ನೀತಿ

ಆಗ್ನೇಯ ಏಷ್ಯದ ರಾಷ್ಟ್ರಗಳು ಸ್ವಾತಂತ್ರ್ಯವನ್ನು ಗಳಿಸಿದ್ದು ಎರಡನೆಯ ಮಹಾಯುದ್ಧದಿಂದೀಚಿನ ಕಾಲದ ಇತಿಹಾಸದ ಅತ್ಯಂತ ಪ್ರಮುಖ ಘಟನೆಗಳಲ್ಲಿ ಒಂದು ಎನ್ನಬಹುದು. ಏಷ್ಯದ ಈ ಭಾಗದ ಅತ್ಯಂತ ದೊಡ್ಡ ರಾಷ್ಟ್ರವಾದ ಇಂಡೋನೇಷ್ಯ ದೇಶದ ಬಾಂಡುಂಗಿನಲ್ಲಿ ಪ್ರಪಂಚದ ಇತಿಹಾಸದಲ್ಲೇ ಮೊತ್ತಮೊದಲನೆಯದಾಗಿ ೧೯೫೫ರಲ್ಲಿ ಆಫ್ರಿಕ ಮತ್ತು ಏಷ್ಯ ರಾಷ್ಟ್ರಗಳ ಅಗ್ರಸಮ್ಮೇಳನವೊಂದು ನಡೆಯಿತೆಂಬ ಅಂಶವನ್ನು ಪರಿಶೀಲಿಸಿದಲ್ಲಿ ಈ ವಿಷಯ ಇನ್ನೂ ಹೆಚ್ಚಾಗಿ ಮನದಟ್ಟಾದೀತು. ಕೆಲವೇ ವರ್ಷಗಳ ಅಂತರದಲ್ಲಿ ಆಗ್ನೇಯ ಏಷ್ಯದ ವಿವಿಧ ಜನಾಂಗಗಳಿಗೆ ಸೇರಿದ ಸುಮಾರು ೩೦ ಕೋಟಿ ಜನ ದೀರ್ಘಕಾಲದಿಂದ ಧರಿಸಿದ್ದ ಪಾಶ್ಚಾತ್ಯ ರಾಷ್ಟ್ರಗಳ ದಾಸ್ಯ ಸಂಕೊಲೆಗಳನ್ನು ಕಿತ್ತುಹಾಕಿ ಹೊಸತಾದ ಒಂದು ರಾಜಕೀಯ ಅಂತಸ್ತನ್ನು ಪಡೆದರು. ಅನೇಕ ವೇಳೆ ವಸಾಹತು ರಾಷ್ಟ್ರಗಳ ವಿರುದ್ಧವಾಗಿ ನಡೆಸಿದ ಹಿಂಸಾತ್ಮಕ ಹೋರಾಟಗಳಿಂದ ಸ್ವಾತಂತ್ರ್ಯ ಲಭ್ಯವಾಯಿತೆನ್ನಬಹುದು. ಆಗ್ನೇಯ ಏಷ್ಯದಲ್ಲಿ ಪೌರಸ್ತ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳು ಎಂದು ಪರಸ್ಪರ ಭೇಟಿಯಾದುವೋ ಅಂದೇ ಇಂಥ ಹೋರಾಟ ಆರಂಭವಾಯಿತೆನ್ನಬಹುದು.

ಭೌಗೋಳಿಕವಾಗಿ ಆಗ್ನೇಯ ಏಷ್ಯದ ರಾಷ್ಟ್ರಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು: (೧) ಖಂಡಾಂತರ ರಾಷ್ಟ್ರಗಳು, (೨) ದ್ವೀಪಾಂತರ ರಾಷ್ಟ್ರಗಳು. ಥೈಲೆಂಡ್, ಬರ್ಮ, ಮಲಯ, ಲಾವೋಸ್, ಕ್ಯಾಂಬೋಡಿಯ, ಉತ್ತರ ವಿಯಟ್ನಾಂ ಮತ್ತು ದಕ್ಷಿಣ ವಿಯಟ್ನಾಂಗಳನ್ನು ಖಂಡಾಂತರ ರಾಷ್ಟ್ರಗಳೆನ್ನಬಹುದು. ಇಂಡೋನೇಷ್ಯ ಮತ್ತು ಫಿಲಿಪೀನ್ಸ್‌ಗಳನ್ನು ದ್ವೀಪಾಂತರ ರಾಷ್ಟ್ರಗಳೆನ್ನಬಹುದು. ಇತಿಹಾಸದಲ್ಲಿ ಆಗ್ನೇಯ ಏಷ್ಯ ಬಹಳ ಹಿಂದಿನಿಂದಲೂ ಅತ್ಯಂತ ಹಿರಿದಾದ ಪಾತ್ರ ವಹಿಸಿದೆ. ಇದಕ್ಕೆ ಅದರ ಭೌಗೋಳಿಕ ಸನ್ನಿವೇಶವೇ ಕಾರಣ. ಆಗ್ನೇಯ ಏಷ್ಯ ಹಿಂದೂ ಸಾಗರಕ್ಕೂ ಫೆಸಿಫಿಕ್ ಸಾಗರಕ್ಕೂ ನಡುವೆ ಒಂದು ಹೆಬ್ಬಾಗಿಲಿನಂತಿದೆ. ಈ ಹೆಬ್ಬಾಗಿಲನ್ನು ತಮ್ಮ ಅಧೀನದಲ್ಲಿಟ್ಟು

ಕೊಳ್ಳಲು ಹಿಂದಿನಿಂದಲೂ ವರ್ತಕರು, ಸಾಹಸಿಗಳು, ಪರಾಕ್ರಮಿಗಳು ಹೆಣಗು ತ್ತಿದ್ದರು. ಈ ಮೂಲಕ ಅವರು ಮುಖ್ಯವಾದ ಬಂದರುಗಳನ್ನು ತಮ್ಮ ಅಧೀನ ದಲ್ಲಿಟ್ಟುಕೊಳ್ಳುವ ಹಂಚಿಕೆ ನಡೆಸಿದ್ದರು. ಆಗ್ನೇಯ ಏಷ್ಯದಲ್ಲಿ ದೊರೆಯುವ ಉಪಯುಕ್ತವಾದ ಪ್ರಕೃತಿ ಸಂಪತ್ತು ಅವರನ್ನು ಸೂಜಿಗಲ್ಲಿನಂತೆ ಆಕರ್ಷಿಸಿ ತಮ್ಮದೇ ಆದ ರಾಜಕೀಯ ಪ್ರಭಾವವನ್ನು ಈ ದೆಶೆಯಲ್ಲಿ ಬೀರಲು ಕೈಬೀಸಿ ಕರೆಯಿತು. ಕಳೆದ ಶತಮಾನಗಳಲ್ಲಿ ಇಂಡೊನೇಷ್ಯದ ದ್ವೀಪಗಳು ತಮ್ಮಲ್ಲಿರುವ ಸಾಂಬಾರ ವಸ್ತುಗಳ ಸಂಗ್ರಹದಿಂದ ಉನ್ನತಸ್ಥಿತಿ ಪಡೆದಿದ್ದುವು. ಆಧುನಿಕ ಕಾಲದಲ್ಲಿ ರಬ್ಬರ್, ಟಿನ್, ಪೆಟ್ರೋಲಿಯಂ, ಅಕ್ಕಿ, ಸಕ್ಕರೆ, ಟೀ, ಕ್ವಿನೈನ್, ತೇಗದಮರ, ಹೊಗೆಸೊಪ್ಪು, ಸಣಬು ಮೊದಲಾದ ವಸ್ತುಗಳನ್ನು ಈ ಪ್ರದೇಶ ಪ್ರಮುಖವಾಗಿ ರಫ್ತುಮಾಡುತ್ತಿದೆ. ಆಯಕಟ್ಟಿನ ಮತ್ತು ಆರ್ಥಿಕ ಕಾರಣ ಗಳಿಂದಾಗಿ ಆಗ್ನೇಯ ಏಷ್ಯ ಹೆಬ್ಬಾಗಿಲು ಮಾತ್ರವೇ ಅಲ್ಲದೆ ಅನೇಕ ರಾಷ್ಟ್ರಗಳೂ ಸಂಸ್ಕೃತಿಗಳೂ ಸಂಧಿಸುವ ಸ್ಥಳವೂ ಆಗಿದೆ. ಪಾಶ್ಚಾತ್ಯ ರಾಷ್ಟ್ರಗಳೂ ಇತ್ತೀಚಿಗೆ ಜಪಾನೀಯರೂ ಏಷ್ಯದ ಈ ಭಾಗವನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಏಕೆ ಅಷ್ಟು ಹೆಣಗಾಡಿದರು ಎಂಬುದಕ್ಕೆ ಮೇಲೆ ವಿವರಿಸಿರುವ ಅಂಶಗಳೇ ಕಾರಣವೆಂದು ಹೇಳಬಹುದು. ಈ ಅಂಶಗಳೇ ಇವತ್ತಿಗೂ ಅತ್ಯಂತ ಹೆಚ್ಚಿನ ಪಾತ್ರವಹಿಸಿವೆ.

ಒಂದು ದೇಶದ ಇತಿಹಾಸವನ್ನು ರೂಪಿಸುವುದರಲ್ಲಿ ಆ ದೇಶದ ಭೌಗೋಳಿಕ ಹಿನ್ನೆಲೆ ಒಂದು ಪ್ರಮುಖ ಪಾತ್ರವಹಿಸುತ್ತದೆ. ಆದ್ದರಿಂದಲೇ ಭೂಗೋಳ ಶಾಸ್ತ್ರವನ್ನು ಇತಿಹಾಸದ ಒಂದು ಕಣ್ಣು ಎಂದು ಕರೆಯುತ್ತಾರೆ. ಆಗ್ನೇಯ ಏಷ್ಯದ ಭೌಗೋಳಿಕ ಹಿನ್ನಲೆ ಅಲ್ಲಿಯ ಇತಿಹಾಸದಲ್ಲಿ ಅತ್ಯಂತ ಮಹತ್ತರ ಪಾತ್ರ ವಹಿಸಿದೆ ಎಂಬುದು ಅಲ್ಲಿಯ ಭೌಗೋಳಿಕ ವೈವಿಧ್ಯವನ್ನು ಪರಿಚಯಮಾಡಿ ಕೊಂಡಾಗ ಅರಿವಾಗುತ್ತದೆ. ವೈವಿಧ್ಯ ಮತ್ತು ದೇಶಗಳ ಭೌಗೋಳಿಕ ಭಿನ್ನತೆ ಗಳೇ ಆಗ್ನೇಯ ಏಷ್ಯದ ವೈಲಕ್ಷಣ್ಯ ವರ್ಗದಲ್ಲಿನ ಮುಖ್ಯ ಅಂಶಗಳು. ಜನ ಸಂಖ್ಯೆಯ ಒತ್ತಡದಲ್ಲೂ ಭಿನ್ನತೆ ಎದ್ದುಕಾಣುತ್ತದೆ. ಉದಾಹರಣೆಗೆ, ಬರ್ಮದ ಪ್ರಸ್ಥಭೂಮಿ ಪ್ರದೇಶಗಳಲ್ಲಿ ಜನಸಂಖ್ಯೆ ವಿರಳವಾಗಿದ್ದರೆ, ಅದಕ್ಕೆ ವಿರುದ್ಧವಾಗಿ, ಇಂಡೋನೇಷ್ಯದ ರಾಜಕೀಯ ಕೇಂದ್ರವಾದ ಜಾವಾ ಪ್ರಪಂಚದ ಅತ್ಯಂತ ಹೆಚ್ಚಿನ ಜನಸಂಖ್ಯೆಯ ಒತ್ತಡವಿರುವ ಪ್ರದೇಶವೆನಿಸಿಕೊಂಡಿದೆ. ಜಾವಾ ಅತಿ ಹೆಚ್ಚಿನ ವ್ಯವಸಾಯಕ್ಕೆ ಒಳಪಟ್ಟಿರುವ ಪ್ರದೇಶವೂ ಆಗಿದೆ. ಆಗ್ನೇಯ ಏಷ್ಯದ ಒಂದೇ ದೇಶದಲ್ಲೂ ಜನಸಂಖ್ಯೆಯ ಒತ್ತಡದಲ್ಲಿ ವ್ಯತ್ಯಾಸ ಕಾಣಬಹುದು. ಹೀಗಾಗಿ ಅತಿ ಹೆಚ್ಚು ಜನ ವಾಸವಾಗಿರುವ ಪ್ರದೇಶದ ಪಕ್ಕದಲ್ಲಿ ಖಾಲಿ ಪ್ರದೇಶ ಗಳನ್ನು ನೋಡಬಹುದು. ಉದಾಹರಣೆಗೆ, ವಿಸ್ತೀರ್ಣದಲ್ಲಿ ಹಲವು ಮಡಿ ದೊಡ್ಡ ದಾದ ಸುಮಾತ್ರದಲ್ಲಿ ಜಾವಾದಲ್ಲಿರುವುದಕ್ಕಿಂತ ಕಡಿಮೆ ಜನಸಂಖ್ಯೆಯಿದೆ. ಫಿಲಿಪೀನ್ಸ್ ದೇಶದ ಮಿಂದನಾವ್ ದ್ವೀಪ, ಲೂಜಾನ್ ದ್ವೀಪದಲ್ಲಿರುವ ಹೆಚ್ಚಿನ

ಜನಸಂಖ್ಯೆಯನ್ನು ತನ್ನಲ್ಲಿಗೆ ವರ್ಗಾಯಿಸಿಕೊಳ್ಳಬಹುದಾಗಿದೆ. ಆಗ್ನೇಯ ಏಷ್ಯದಲ್ಲಿ ಜನಸಂಖ್ಯೆಯ ಸಮಸ್ಯೆ ಒಂದು ಸಾಮಾನ್ಯ ಸಮಸ್ಯೆಯಾಗದೆ, ಒಂದು ಪ್ರದೇಶಕ್ಕೆ ಸಂಬಂಧಿಸಿದ ಸಮಸ್ಯೆಯಾಗಿದೆ.

ಆಗ್ನೇಯ ಏಷ್ಯದ ಜನಾಂಗಗಳಲ್ಲಿ ಜಾತಿ, ಮತ ಮತ್ತು ಭಾಷಾ ವೈವಿಧ್ಯಗಳನ್ನು ಕಾಣಬಹುದಾಗಿದೆ. ಬರ್ಮೀಯರು ಮತ್ತು ಇಂಡೋನೇಷ್ಯನ್ನರು ಒಂದೇ ಬುಡಕಟ್ಟಿಗೆ ಸೇರಿದವರಲ್ಲ. ಹಾಗೆಯೇ ನೆರೆಹೊರೆಯವರಾದ ವಿಯಟ್ನಾಮೀಯರು ಮತ್ತು ಕಾಂಬೋಜರು ಒಂದೇ ಬುಡಕಟ್ಟಿನವರಲ್ಲ. ಸಯಾಮಿಗಳು ಮತ್ತು ಮಲಯದ ಜನಾಂಗದವರು ಒಂದೇ ಭಾಷೆಯನ್ನು ಆಡುವುದಿಲ್ಲ. ಅವರ ಮಾತೃಭಾಷೆಯ ಮೂಲವೂ ಬೇರೆ ಬೇರೆ ಆದರೂ ಅಂಥ ಭಾಷಾಸಂಪರ್ಕ (ಉದಾಹರಣೆಗೆ ಫಿಲಿಪೀನರಿಗೂ ಇಂಡೋನೇಷ್ಯನ್ನರಿಗೂ ಇರುವ ಭಾಷಾಸಂಪರ್ಕ) ಕೆಲವು ವೇಳೆ ಎರಡು ರಾಷ್ಟ್ರಗಳ ಮಧ್ಯೆ ಇದ್ದರೂ, ಅದು ಅಷ್ಟು ಬಲವಾಗಿ ಬೇರೂರಿಲ್ಲವೆಂದೇ ಹೇಳಬಹುದು. ಮತೀಯ ಕ್ಷೇತ್ರದಲ್ಲೂ ಇದೇ ರೀತಿಯ ವೈವಿಧ್ಯವನ್ನು ನೋಡಬಹುದು. ಥೈಲೆಂಡ್, ಬರ್ಮ ಮತ್ತು ಕ್ಯಾಂಬೋಡಿಯಗಳು ಹೆಚ್ಚಾಗಿ ಬೌದ್ಧಮತಾವಲಂಬಿಗಳಾಗಿದ್ದರೆ, ಫಿಲಿಪೀನ್ಸ್ ಸಂಪೂರ್ಣವಾಗಿ ಕ್ರೈಸ್ತಮತಾವಲಂಬಿ; ಇಂಡೋನೇಷ್ಯದಲ್ಲಿ ಹೆಚ್ಚಾಗಿ ಇಸ್ಲಾಂ ಮತಾನುಯಾಯಿಗಳಿದ್ದಾರೆ. ಇಂಡೋನೇಷ್ಯದ ಚಿಕ್ಕ ದ್ವೀಪವಾದ ಬಾಲಿಯಲ್ಲಿ ಇಂದಿಗೂ ಹಿಂದೂಮತಾವಲಂಬಿಗಳೇ ಅಧಿಕ ಸಂಖ್ಯೆಯಲ್ಲಿದ್ದಾರೆ. ವಿಯಟ್ನಾಂ ದೇಶದಲ್ಲಿ ಅನೇಕ ಚಿಕ್ಕ ಪುಟ್ಟ ಮತೀಯ ಪಂಗಡಗಳ ಜೊತೆಗೆ, ಬೌದ್ಧ ಮತ್ತು ಕ್ಯಾಥೊಲಿಕ್ ಮತಗಳು ಇಂದಿಗೂ ಪ್ರಮುಖವಾಗಿವೆ. ಇವೆಲ್ಲಕ್ಕಿಂತ ಭಿನ್ನವಾದ ಮಲಯ ದೇಶ ಮತೀಯ ವಿಷಯದಲ್ಲಾಗಲಿ, ಸಂಸ್ಕೃತಿಯ ವಿಷಯದಲ್ಲಾಗಲಿ ಮತ್ತೊಂದು ರೀತಿಯ ಚಿತ್ರವನ್ನು ನಮ್ಮ ಮುಂದಿಡುತ್ತದೆ. ಆ ದೇಶದಲ್ಲಿ ಚೀನೀಯರು ಮತ್ತು ಮಲಯ ಜನಾಂಗದವರು ಹೆಚ್ಚುಕಮ್ಮಿ ಸರಿಸಮಾನ ಸಂಖ್ಯೆಯಲ್ಲಿದ್ದಾರೆ.

ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಪ್ರಭಾವಗಳು ಆಗ್ನೇಯ ಏಷ್ಯದ ಇತಿಹಾಸದ ಉದ್ದಕ್ಕೂ ತಮ್ಮ ಪ್ರಭಾವ ಬೀರುತ್ತಾ ಪ್ರಪಂಚದ ಈ ಪ್ರದೇಶದಲ್ಲಿ ವೈವಿಧ್ಯವನ್ನುಂಟುಮಾಡಿವೆ. ಆಗ್ನೇಯ ಏಷ್ಯ ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕ ಪಡೆಯುವ ಮೊದಲು ಭಾರತೀಯ ಮತ್ತು ಚೀನೀ ಸಂಸ್ಕೃತಿಗಳ ಪ್ರಭಾವ ಪಡೆದಿತ್ತು. ಹದಿನಾರನೆಯ ಶತಮಾನದಿಂದ ಇತ್ತೀಚಿನವರೆಗೆ ಪಾಶ್ಚಾತ್ಯ ಜನಾಂಗದವರಾದ ಪೋರ್ಚುಗೀಸರು, ಸ್ಪಾನಿಷರು, ಡಚ್ಚರು, ಬ್ರಿಟಿಷರು, ಫ್ರೆಂಚರು ಮತ್ತು ಅಮೆರಿಕನ್ನರು ಈ ಪ್ರದೇಶದಲ್ಲಿ ಹೆಚ್ಚಿನ ಪಾತ್ರ ವಹಿಸಿದ್ದರು. ಆದ್ದರಿಂದ, ಅನೇಕ ಶತಮಾನಗಳಿಂದಲೂ ಆಗ್ನೇಯ ಏಷ್ಯ ಹೊರಗಿನಿಂದ ಬಂದ ಸಂಸ್ಕೃತಿಗಳನ್ನು ಪಡೆದುಕೊಂಡು ತನ್ನದನ್ನಾಗಿ ಮಾಡಿಕೊಂಡಿತೇ ವಿನಾ, ಪ್ರಪಂಚಕ್ಕೆ ತನ್ನದೇ ಆದ ವಿಶಿಷ್ಟ ಕಾಣಿಕೆಗಳನ್ನು

ಕೊಡಲಿಲ್ಲ. ಈ ಪ್ರದೇಶ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದ ಕಾಲದಿಂದ ಅಲ್ಲಿ ವೈವಿಧ್ಯ ಕಡಮೆಯಾಗುವುದರ ಬದಲು ಹೆಚ್ಚಾಯಿತೆಂದು ಹೇಳಬಹುದು. ಸ್ವಾತಂತ್ರ್ಯವನ್ನು ಗಳಿಸದ ಆಗ್ನೇಯ ಏಷ್ಯದ ರಾಷ್ಟ್ರಗಗಳು ಇಂದಿಗೂ ಏಕತೆಯನ್ನಾಗಲಿ ಒಗ್ಗಟ್ಟನ್ನಾಗಲಿ ಪ್ರದರ್ಶಿಸಿಲ್ಲ.

ಇಂಥ ಭಿನ್ನತೆಗಳಿದ್ದಾಗ್ಯೂ, ಈ ಪ್ರದೇಶದ ರಾಷ್ಟ್ರಗಳು ಕೆಲವು ವಿಷಯಗಳಲ್ಲಿ ಒಂದೇ ಬಗೆಯ ಲಕ್ಷಣಗಳನ್ನೂ ಅನುಭವಗಳನ್ನೂ ಪಡೆದಿವೆ. ಇದರಿಂದಾಗಿ ಆಗ್ನೇಯ ಏಷ್ಯ ಎಂಬ ಭೌಗೋಳಿಕ ಭಾಗವನ್ನು ಪ್ರತ್ಯೇಕವಾಗಿ ಅಭ್ಯಾಸಮಾಡುವ ಅವಶ್ಯಕತೆ ಉಂಟಾಗಿದೆಯಲ್ಲದೆ, ಈ ಪ್ರದೇಶ ಏಷ್ಯದ ಇತರ ಭಾಗಗಳಿಗಿಂತ ಭಿನ್ನವಾದ ಮತ್ತು ವಿಶಿಷ್ಟವಾದ ಸ್ಥಾನ ಪಡೆದುಕೊಂಡಿದೆ. ಒಂದೇ ರೀತಿಯ ಆರ್ಥಿಕ ಅಡಿಪಾಯ ಮತ್ತು ಒಂದೇರೀತಿಯ ಸಾಮಾಜಿಕ ಜನಜೀವನವೇ ಈ ಸಾಮಾನ್ಯ ಲಕ್ಷಣಗಳು. ಇವು ಒಂದೇ ರೀತಿಯಾದ ಐತಿಹಾಸಿಕ ಬೆಳವಣಿಗೆಯಿಂದಾದವು. ಪಾಶ್ಚಾತ್ಯರ ವಸಾಹತು ನೀತಿಗೂ ಜಪಾನೀಯರ ಮಿಲಿಟರಿ ಆಡಳಿತಕ್ಕೂ (ಎರಡನೆಯ ಮಹಾಯುದ್ಧದ ಕಾಲದಲ್ಲಿ) ಆಗ್ನೇಯ ಏಷ್ಯದ ಅನೇಕ ರಾಷ್ಟ್ರಗಳು ಒಳಗಾದ್ದರಿಂದ, ಆ ದೇಶಗಳು ಒಂದೇ ವಿಧವಾದ ರಾಜಕೀಯ ಅನುಭವವನ್ನು ಆಧುನಿಕ ಕಾಲದಲ್ಲಿ ಪಡೆಯಲು ಸಹಕಾರಿಯಾಯಿತು. ಮೇಲೆ ವಿವರಿಸಿದ ಅಂಶಗಳಿಂದಾಗಿ ಈ ಪ್ರದೇಶದ ರಾಷ್ಟ್ರಗಳು ಎದುರಿಸುತ್ತಿರುವ ಸಮಸ್ಯೆಗಳು ಒಂದೇ ರೀತಿಯಾಗಿವೆ.

ಆರ್ಥಿಕವಾಗಿ ಆಗ್ನೇಯ ಏಷ್ಯ ದ್ವಂದ್ವರೀತಿಯ ಅಭಿವೃದ್ಧಿಯನ್ನು ತೋರಿಸುತ್ತದೆ. ಮೊದಲನೆಯದಾಗಿ ಈ ಪ್ರದೇಶದ ಹೆಚ್ಚಿನ ಜನ ರೈತವರ್ಗಕ್ಕೆ ಸೇರಿದವರಾಗಿದ್ದು ತಮ್ಮ ಜೀವನಕ್ಕಾಗಿ ಬತ್ತದ ವ್ಯವಸಾಯವನ್ನೇ ಮುಖ್ಯ ಕಸಬನ್ನಾಗಿ ಅವಲಂಬಿಸುತ್ತಾರೆ. ಆದರೆ ಹತ್ತೊಂಬತ್ತನೆಯ ಶತಮಾನದಿಂದೀಚೆಗೆ ಆಗ್ನೇಯ ಏಷ್ಯ ಪ್ರಪಂಚದ ಮಾರುಕಟ್ಟೆಯ ಪ್ರಭಾವಕ್ಕೆ ಒಳಗಾದಂದಿನಿಂದ, ಈ ಪ್ರದೇಶದ ಅನೇಕ ಭಾಗಗಳಲ್ಲಿ ನಾವು ದ್ವಂದ್ವರೀತಿಯ ಆರ್ಥಿಕ ವ್ಯವಸ್ಥೆಯನ್ನು ನೋಡಬಹುದು. ಏಕೆಂದರೆ ತಲೆಮಾರುಗಳಿಂದ ಬಂದ ದೇಶೀಯ ಆರ್ಥಿಕ ವ್ಯವಸ್ಥೆಯ ಜೊತೆಗೆ ಹೊಸಹೊಸ ವ್ಯವಸಾಯೋತ್ಪನ್ನಗಳನ್ನು ತಯಾರಿಸುವ ಆರ್ಥಿಕ ವ್ಯವಸ್ಥೆಯನ್ನೂ ನೋಡಬಹುದು. ಪಶ್ಚಿಮ ರಾಷ್ಟ್ರಗಳಿಂದ ಹರಿದುಬಂದ ಬಂಡವಾಳ ಮತ್ತು ವೈಜ್ಞಾನಿಕ ತಂತ್ರಗಳು ಆಗ್ನೇಯ ಏಷ್ಯದ ಫಲವತ್ತಾದ ಭೂಮಿಗಳನ್ನೂ ನೈಸರ್ಗಿಕ ಸಂಪತ್ತನ್ನೂ ಅಭಿವೃದ್ಧಿಪಡಿಸುವ ದೆಶೆಯಲ್ಲಿ ಹೆಚ್ಚಿನ ಸಹಾಯಮಾಡಿ, ದೇಶೀಯ ಆರ್ಥಿಕ ವ್ಯವಸ್ಥೆಯ ಮಧ್ಯೆ ಆಧುನಿಕ ರೀತಿಯ ಉತ್ಪಾದನ ವ್ಯವಸ್ಥೆಯನ್ನು ಸ್ಥಾಪಿಸಿತು. ಈ ಹೊಸಹೊಸ ಉತ್ಪಾದನ ಕೇಂದ್ರಗಳು ಹೊರದೇಶಗಳಿಗೆ ರಫ್ತುಮಾಡುವಂತಹ ವ್ಯವಸಾಯೋತ್ಪನ್ನಗಳಾದ

ರಬ್ಬರ್, ಟೀ, ಸಕ್ಕರೆ, ಹೊಗೆಸೊಪ್ಪು, ಕಾಫಿ ಮತ್ತು ಇತರ ವಸ್ತುಗಳನ್ನು ತಯಾರಿಸುವುದರಲ್ಲಿ ನಿರತವಾಯಿತು. ಆಗ್ನೇಯ ಏಷ್ಯ ವಿಶ್ವದ ಮಾರುಕಟ್ಟೆಯ ಪ್ರಭಾವಕ್ಕೆ ಒಳಗಾದ್ದರಿಂದ, ಆ ಪ್ರದೇಶದಲ್ಲಿ ಪರದೇಶಗಳ ಮಾರುಕಟ್ಟೆಗಳ ಬೇಡಿಕೆಗಳನ್ನು ಪೂರೈಸಲು ಅಕ್ಕಿ ಮತ್ತು ರಬ್ಬರ್‌ಗಳನ್ನು ಉತ್ಪಾದಿಸಲು ದೇಶೀಯ ರೈತರು ಮತ್ತು ದೊಡ್ಡದೊಡ್ಡ ವಾಣಿಜ್ಯಸಂಸ್ಥೆಗಳು ವ್ಯವಸಾಯವನ್ನು ಅತ್ಯಧಿಕ ರೀತಿಯಲ್ಲಿ ಕೈಗೊಳ್ಳಲು ಸಹಾಯವಾಯಿತು. ಇದರಿಂದಾಗಿ ಅನೇಕ ರೈತರು ಬಹುಕಾಲದಿಂದ ಬಂದಿದ್ದ ತಮ್ಮ ಕುಟುಂಬ ಮತ್ತು ಗ್ರಾಮದ ಆರ್ಥಿಕ ಬೇಡಿಕೆಗಳನ್ನು ಪೂರೈಸುವುದಕ್ಕೆ ಮಾತ್ರ ಮಿತವಾಗಿದ್ದ ಉತ್ಪಾದನ ವ್ಯವಸ್ಥೆಯನ್ನು ಬಿಟ್ಟುಕೊಟ್ಟು ರಫ್ತು ಮಾಡುವುದರಿಂದ ದೊರೆಯಬಹುದಾದ ಹಣಕ್ಕೋಸ್ಕರವಾಗಿ ವಾಣಿಜ್ಯ ಬೆಳೆಗಳನ್ನು ತಮ್ಮ ಭೂಮಿಗಳಲ್ಲಿ ಬೆಳೆಯಲು ಪ್ರಾರಂಭಿಸಿದರು. ಥೈಲೆಂಡ್, ವಿಯಟ್ನಾಂ ಮತ್ತು ಬರ್ಮ ದೇಶಗಳು ಈ ರೀತಿಯಾಗಿ ಏಷ್ಯದ ಬತ್ತದ ಕಣಜಗಳೆಂದು ಪ್ರಸಿದ್ಧಿಯಾದುವು. ಮಲಯ ಮತ್ತು ಇಂಡೋನೇಷ್ಯ ದೇಶಗಳು ಚಹಾ ಮತ್ತು ರಬ್ಬರ್‌ಗಳನ್ನು ಹೆಚ್ಚಾಗಿ ರಫ್ತುಮಾಡುವ ರಾಷ್ಟ್ರಗಳಾದುವು. ಚಿಕ್ಕ ಹಿಡುವಳಿದಾರರು ರಬ್ಬರನ್ನು ಹೆಚ್ಚಾಗಿ ಬೆಳೆಯುತ್ತಿದ್ದರು. ಪಾಶ್ಚಾತ್ಯರಿಂದ ನಿರ್ದೇಶಿತವಾದ ಎಸ್ಟೇಟ್ ಮಾದರಿಯ ವ್ಯವಸಾಯಕ್ರಮ ಇಂಡೊನೇಷ್ಯ ಮತ್ತು ಫಿಲಿಪೀನ್ಸ್ ದೇಶಗಳಲ್ಲಿ ಜಾರಿಗೆ ಬಂತು. ಇದರಿಂದಾಗಿ ಆ ದೇಶಗಳ ಸಕ್ಕರೆ, ಹೊಗೆಸೊಪ್ಪು, ಚಹಾ, ಕಾಫಿ ಕ್ವಿನೈನ್ ಮತ್ತು ಸೆಣಬುಗಳು ಪ್ರಪಂಚದ ಮಾರುಕಟ್ಟೆಯ ಬೇಡಿಕೆಗಳ ಪೂರೈಕೆಗೆ ಒದಗುವಂತಾಯಿತು.

ಆಗ್ನೇಯ ಏಷ್ಯದ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆ ಮುಖ್ಯವಾಗಿ ಚಿರುಸಾದ ಎರಡು ಭಾಗಗಳನ್ನು ಹೊಂದಿದ್ದುವು. ಮೊದಲನೆಯ ಭಾಗದಲ್ಲಿ ರಾಜರುಗಳು ಮತ್ತು ಅವರ ಆಸ್ಥಾನಗಳ ಶ್ರೀಮಂತ ಪಾಳೆಯಗಾರರು; ಮತ್ತೊಂದು ಭಾಗದಲ್ಲಿ ಬಹುಸಂಖ್ಯಾತ ರೈತವರ್ಗ. ಇಂಡೋನೇಷ್ಯದ ಕೆಲವು ಭಾಗಗಳಲ್ಲಿ ಈ ರೀತಿಯ ವರ್ಗಭೇದಯುಕ್ತ ಮತ್ತು ಅಧಿಕಾರಸಂಬಂಧವುಳ್ಳ ಸಮಾಜವ್ಯವಸ್ಥೆ ಎಷ್ಟರಮಟ್ಟಿಗೆ ಸಾಗಿತ್ತೆಂದರೆ ಆ ಪ್ರದೇಶಗಳಲ್ಲಿ ಉನ್ನತ ವರ್ಗಕ್ಕೇ ಒಂದು ಭಾಷೆಯೂ ಕೀಳುಜನಕ್ಕೆ ಮತ್ತೊಂದು ಭಾಷೆಯೂ ಇದ್ದುವು. ಕೆಲವು ವಿಮರ್ಶಕರ ಅಭಿಪ್ರಾಯದಂತೆ ಈ ರೀತಿಯ ಸಮಾಜಿಕ ವ್ಯವಸ್ಥೆ ಅನೇಕ ಶತಮಾನಗಳ ಭಾರತೀಯ ಸಂಸ್ಕೃತಿಯ ಪ್ರಭಾವದಿಂದಾದದ್ದು. ಆದರೂ ಹಿಂದೂ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ಆಗ್ನೇಯ ಏಷ್ಯದ ರಾಷ್ಟ್ರಗಳು ಅನುಸರಿಸಲಿಲ್ಲವೆನ್ನಬಹುದು. ರಾಜಕೀಯ ಕ್ಷೇತ್ರದಲ್ಲಿ ಪುರೋಹಿತವರ್ಗ ಅತ್ಯಂತ ಹಿರಿದಾದ ಪಾತ್ರ ವಹಿಸಿತ್ತು. ಈ ವರ್ಗ ದೊಡ್ಡದೊಡ್ಡ ಶ್ರೀಮಂತ ಕುಟುಂಬಗಳ ಜೊತೆಯಲ್ಲಿ ಸಂಪರ್ಕ ಹೊಂದಿತ್ತು. ರಾಜಾಧಿಕಾರವನ್ನು ಸುವ್ಯವಸ್ಥಿತವಾಗಿ ಪ್ರತಿಪಾದಿಸಲು ಈ ವರ್ಗದ ಆವಶ್ಯಕತೆ ಹೆಚ್ಚಾಗಿತ್ತು. ಈ ರೀತಿಯ ಸಂಪ್ರದಾಯ ಆಗ್ನೇಯ

ಏಷ್ಯದ ಹಲವು ಭಾಗಗಳಲ್ಲಿ ಪ್ರಸಿದ್ಧವಾಗಿತ್ತು. ಮೊದಮೊದಲು ಮತೀಯ ಸಂಪ್ರದಾಯಗಳು ರಾಜಾಸ್ಥಾನಗಳಿಗೆ ಸೀಮಿತವಾಗಿದ್ದುವು. ಬಹುಸಂಖ್ಯಾತ ರೈತವರ್ಗ ಹಿಂದಿನಿಂದ ನಡೆದುಕೊಂಡು ಬಂದ ಪ್ರಾಣಿಪೂಜೆಯೇ ಮೊದಲಾದ ನಂಬಿಕೆಗಳನ್ನು ನಡೆಸಿಕೊಂಡು ಬರುತ್ತಿತ್ತು.

ಇವೊತ್ತಿಗೂ ಆಗ್ನೇಯ ಏಷ್ಯದ ರೈತವರ್ಗಗಳಲ್ಲಿ ಈ ಪ್ರಭಾವವನ್ನು ಗುರುತಿಸಬಹುದು. ಆದರೆ ಅನಂತರದ ಶತಮಾನಗಳಲ್ಲಿ ಮತೀಯ ಭಾವನೆಗಳು ರೈತಜನಾಂಗದಲ್ಲಿ ಹೆಚ್ಚಿನ ಪ್ರಾಮುಖ್ಯವನ್ನು ಪಡೆದು ರಾಜಕೀಯ ಬೆಳವಣಿಗೆಯಲ್ಲಿ ಹೆಚ್ಚಿನ ಪಾತ್ರವಹಿಸಿದವು. ಅನೇಕ ವೇಳೆ ಆಗ್ನೇಯ ಏಷ್ಯದ ಮತಗಳು ಆಧ್ಯಾತ್ಮಿಕ ಮತ್ತು ಭೌತಪ್ರಪಂಚಕ್ಕೆ ವಿರುದ್ಧವಾದ ಭಾವನೆಗಳನ್ನು ಬಿತ್ತುವುದರಲ್ಲಿ ಸಹಾಯವಾದುವು. ಈ ಭಾವನೆಗಳು ಮುಂದೆ ಸುಭದ್ರವಾದ ವ್ಯಕ್ತಿನಿಷ್ಠವಾದ ಆರ್ಥಿಕ ಬೆಳವಣಿಗೆಗೆ ಅಡ್ಡಿಯನ್ನುಂಟುಮಾಡಿದುವು.

ಈ ದೇಶೀಯ ಸಮಾಜವ್ಯವಸ್ಥೆಯ ಜೊತೆಗೆ ಮತ್ತೊಂದು ಸಾಮಾಜಿಕ ಪರಿಸ್ಥಿತಿಯನ್ನು ನೋಡುತ್ತೇವೆ. ಕೆಲವು ಶತಮಾನಗಳ ಹಿಂದೆ ಪರದೇಶಗಳಿಂದ ಬಂದ ವ್ಯಾಪಾರಿಗಳು—ಹೆಚ್ಚಾಗಿ ಭಾರತೀಯರು ಮತ್ತು ಚೀನೀಯರು—ಆಗ್ನೇಯ ಏಷ್ಯದ ರಾಷ್ಟ್ರಗಳಲ್ಲಿ ಸ್ಥಿರವಾಗಿ ನೆಲೆನಿಂತರು. ತಮ್ಮ ಆರ್ಥಿಕ ಚಟುವಟಿಕೆಗಳಿಂದಾಗಿ ಇವರು ಅನೇಕ ದೇಶಗಳಲ್ಲಿ ಉನ್ನತ ಸ್ಥಾನಮಾನ ಗಳಿಸಿಕೊಂಡರು. ಆದರೆ ಭಾರತೀಯರಾಗಲಿ, ಚೀನೀಯರಾಗಲಿ ದೇಶೀಯ ಸಂಸ್ಕೃತಿಯೊಡನೆ, ಸಮಾಜಿಕ ಜೀವನದೊಡನೆ ಹೆಚ್ಚಾಗಿ ಬೆರೆಯದೆ ತಮ್ಮದೇ ಆದ ವಿಶಿಷ್ಟ ಸಂಪ್ರದಾಯ, ಸಂಸ್ಕೃತಿಗಳನ್ನೇ ಅನುಸರಿಸುತ್ತ ಬಂದರು. ಕಾಲ ಕಳೆದಂತೆ ಈ ಜನಾಂಗದವರು ಆಯಾ ದೇಶಗಳಲ್ಲಿ ವ್ಯಾಪಾರಿ ಅಥವ ವೈಶ್ಯಕುಲದವರಾಗಿ ಪರಿವರ್ತನೆಗೊಂಡರು. ಇಂಥ ಒಂದು ವರ್ಗ ಹೆಚ್ಚಿನ ದೇಶೀಯ ಸಮಾಜದಲ್ಲಿ ಹಿಂದೆ ಇರಲಿಲ್ಲ. ಅವರು ಸಮಾಜಕ್ಕೆ ಅನೇಕ ಉಪಯುಕ್ತವಾದ ಸೇವೆಗಳನ್ನು ಸಲ್ಲಿಸುತ್ತಿದ್ದರು. ಆದರೆ ಅನೇಕ ವೇಳೆ, ಸಾಲ ಕೊಡುವ ಮೂಲಕವೋ, ಜಮೀನುದಾರರಾಗಿಯೋ ದೇಶೀಯರ ಮೇಲೆ ತಮ್ಮ ಹತೋಟಿ ಇಟ್ಟುಕೊಳ್ಳಲು ಪ್ರಾರಂಭಿಸಿದರು. ಇದರಿಂದಾಗಿ ಅಂದು ಉದ್ಭವಿಸಿದ ಅಸಮಾಧಾನ ಇಂದಿಗೂ ಉಳಿದುಕೊಂಡುಬಂದಿದೆ.

ಹದಿನಾರನೆಯ ಶತಮಾನದಿಂದೀಚೆಗೆ ಪಾಶ್ಚಾತ್ಯ ವಾಣಿಜ್ಯ ಸಂಪರ್ಕದಿಂದ ಆಗ್ನೇಯ ಏಷ್ಯದ ಸಾಮಾಜಿಕ ವ್ಯವಸ್ಥೆಯಲ್ಲಿ ಅಂದಿನ ವರೆಗೂ ಇದ್ದ ಅನೇಕ ಭಾಗಗಳ ಜೊತೆಗೆ ಹೊಸ ಅಂಗ ಬಂದು ಸೇರಿಕೊಂಡಿತು. ಐರೋಪ್ಯರು ಆಗ್ನೇಯ ಏಷ್ಯದ ಸಮಾಜಿಕ ವ್ಯವಸ್ಥೆಯಲ್ಲಿ ಮತ್ತೊಂದು ಭಾಗವಾದರು. ಹತ್ತೊಂಬತ್ತನೆಯ ಶತಮಾನದ ಕೊನೆಯ ವೇಳೆಗೆ ಐರೋಪ್ಯರು ಭಾರಿಭಾರಿ ಉದ್ಯಮಗಳನ್ನು ಆಗ್ನೇಯ ಏಷ್ಯದಲ್ಲಿ ಸ್ಥಾಪಿಸಿ ಮೇಲೆ ಹೇಳಿದ

"ದ್ವಂದ್ವ-ಆರ್ಥಿಕ" ವ್ಯವಸ್ಥೆಯನ್ನು ರಚಿಸಿದರು. ಈ ರೀತಿಯ ಆರ್ಥಿಕ ಬೆಳವಣಿಗೆಯಿಂದಾಗಿ ಅಮೆರಿಕನ್ ಮತ್ತು ಐರೋಪ್ಯ ವಾಣಿಜ್ಯಪಟುಗಳು, ಪ್ಲಾಂಟರುಗಳು ಮತ್ತು ವ್ಯಾಪಾರಿಗಳು ಈ ದೇಶಗಳಲ್ಲಿ ನೆಲೆಸುವಂತಾಗಿ, ಅಲ್ಲಿಯ ಸಾಮಾಜಿಕ ವ್ಯವಸ್ಥೆಯಲ್ಲಿ ಉನ್ನತ ಸ್ಥಾನಮಾನಗಳನ್ನು ಪಡೆದುಕೊಂಡರು. ದೇಶೀಯರು, ಭಾರತೀಯರು ಮತ್ತು ಚೀನೀಯರು ಪಾಶ್ಚಾತ್ಯರಿಗಿಂತ ಕೀಳೆಂಬ ಭಾವನೆ ಬೆಳೆಯಿತು. ಅನೇಕ ದೇಶಗಳಲ್ಲಿ ಪಾಶ್ಚಾತ್ಯರು ಅನುಸರಿಸಿದ ವಸಾಹತು ನೀತಿಯಿಂದಾಗಿ ಭಾರತೀಯರು ಮತ್ತು ಚೀನೀಯರು ಈ ದೇಶಗಳಿಗೆ ವಲಸೆ ಬಂದು ಇಲ್ಲಿಯ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ರಚನೆಯಲ್ಲಿ ಪ್ರಮುಖ ಅಂಗಗಳಾದರು. ಸಾಮ್ರಾಜ್ಯಶಾಹಿ ರಾಷ್ಟ್ರಗಳು ಈ ರೀತಿಯ ಪರಕೀಯರ ವಲಸೆಗೆ ಉತ್ತೇಜನಕೊಟ್ಟವು. ಬ್ರಿಟಿಷರು ಬರ್ಮದಲ್ಲೂ ಡಚ್ಚರು ಇಂಡೋನೇಷ್ಯದಲ್ಲೂ ಈ ರೀತಿಯ ಉತ್ತೇಜನ ನೀಡಿದುದರಿಂದ ಭಾರತೀಯರು, ಬರ್ಮಕ್ಕೂ, ಚೀನೀಯರು ಇಂಡೋನೇಷ್ಯಕ್ಕೂ ವಲಸೆಹೋಗಲು ಕಾರಣವಾಯಿತು. ಆದರೆ ಈ ಜನಾಂಗದವರು ಆ ದೇಶಗಳಿಗೆ ಹೋದದ್ದು ಅವುಗಳಲ್ಲಿ ಅಭಿವೃದ್ಧಿಗೆ ಬರುತ್ತಿದ್ದ ಐರೋಪ್ಯರ ಗಣಿಗಳಲ್ಲೋ ಎಸ್ಟೇಟುಗಳಲ್ಲೋ ಕೂಲಿಕಾರರಾಗಿ ದುಡಿಯಲು. ಅವರಲ್ಲಿ ಕೆಲವರು ಮಾತ್ರ ಸ್ವಲ್ಪ ಉತ್ತಮದರ್ಜೆಯ ನೌಕರಿಗಳನ್ನು ಪಡೆಯಲು ಸಾಧ್ಯವಾಯಿತು. ಮತ್ತೆ ಕೆಲವರು ಪಾಶ್ಚಾತ್ಯರು ಸ್ಥಾಪಿಸಿದ ಬಂಡವಾಳ ಪದ್ಧತಿಯನ್ನು ಉಪಯೋಗಿಸಿಕೊಂಡು, ಆ ದೇಶಗಳ ವಾಣಿಜ್ಯೋದ್ಯಮಗಳಲ್ಲಿ ಹೆಚ್ಚಿನ ಪಾತ್ರವಹಿಸಿದರು. ಅಂಥ ಪರಕೀಯ ವಾಣಿಜ್ಯ ಉದ್ಯಮಗಳಿಗೂ, ವ್ಯಾಪಾರಸ್ಥರಿಗೂ ಯೂರೋಪಿಯನ್ ಸಾಮ್ರಾಜ್ಯಶಾಹಿ ಆಡಳಿತಗಳ ಬೆಂಬಲ ಮತ್ತು ಸಹಕಾರಗಳಿದ್ದುವು. ಆದರೆ ಪರಕೀಯರ ಇರುವಿಕೆ ಮತ್ತು ಅವರ ಚಟುವಟಿಕೆಗಳು ಅನೇಕ ಶತಮಾನಗಳಿಂದ ಸುಪ್ತವಾಗಿದ್ದ ಜಾತಿಪಂಗಡಗಳ ದ್ವೇಷವನ್ನು ಹೆಚ್ಚಿಸಲು ಸಹಾಯಕವಾದುವು.

ಒಟ್ಟಿನಲ್ಲಿ ಹೇಳುವುದಾದರೆ ಪಾಶ್ಚಾತ್ಯ ರಾಷ್ಟ್ರಗಳ ವಸಾಹತು ನೀತಿಯಿಂದಾಗಿ ಆಗ್ನೇಯ ಏಷ್ಯದಲ್ಲಿ "ಸಂಕೀರ್ಣ ಸಮಾಜ"ವೊಂದು ಸ್ಥಾಪಿತವಾಯಿತು. ಶ್ರಮವಾಗಲಿ, ಐಶ್ವರ್ಯವಾಗಲಿ ಸಮಾಜದ ವಿವಿಧ ವರ್ಗಗಳಲ್ಲಿ ಹಂಚಿಕೆಯಾಗದೆ, ಜಾತಿಪಂಗಡಗಳ ಆಧಾರಗಳ ಮೇಲೆ ಹಂಚಿಕೆಯಾದರೆ, ಅಂಥ ಸಮಾಜವನ್ನು "ಬಹುತ್ವ ಸಮಾಜ" (ಪ್ಲೂರಲ್ ಸೊಸೈಟಿ) ಎಂದು ಕರೆಯುತ್ತಾರೆ. ಐರೋಪ್ಯರೂ, ಏಷ್ಯದ ಬೇರೆ ಬೇರೆ ಭಾಗಗಳಿಂದ ವಲಸೆಬಂದಿದ್ದ ಪರಕೀಯರೂ ದೇಶಿಯರ ನಡುವೆ, ಅವರ ಅಕ್ಕಪಕ್ಕದಲ್ಲಿ, ಈ ಪ್ರದೇಶದ ಅನೇಕ ದೇಶಗಳಲ್ಲಿ ನೆಲೆಸಿದರು. ಆದರೆ ಇವರನ್ನೆಲ್ಲ ಒಂದುಗೂಡಿಸುವ ಯಾವ ಸಾಮಾನ್ಯ ಆದರ್ಶವಾಗಲಿ ಇರಲಿಲ್ಲ. ಭಾರಿ ಉದ್ಯಮಗಳು ಪಾಶ್ಚಾತ್ಯರ ಕೈಯಲ್ಲಿದ್ದುವು. ಭಾರತೀಯರೂ ಚೀನೀಯರೂ 1939ಕ್ಕೆ ಮುಂಚೆ ಕೆಲವು ಜಪಾನೀಯರೂ

ಅರಬ್ಬರೂ ಇತರ ಪರಕೀಯರೂ ಮಧ್ಯಮ ದರ್ಜೆಯ ನೌಕರಿಗಳನ್ನೂ ಸ್ಥಾನಮಾನಗಳನ್ನೂ ಪಡೆದರು. ಸಾಮಾನ್ಯವಾಗಿ ಪರಕೀಯರು ಕುಶಲಕೆಲಸಗಾರರಾಗೋ, ಸಾಲವನ್ನು ಕೊಡುವ ಸಾಲಗಾರರಾಗೋ, ಚಿಕ್ಕಪುಟ್ಟ ಅಂಗಡಿಗಳ ಮಾಲೀಕರಾಗೋ, ಗುಮಾಸ್ತರಾಗೋ ತಮ್ಮ ಜೀವನ ಸಾಗಿಸುತ್ತಿದ್ದರು. ಹಲವು ಅಂತಸ್ತುಗಳುಳ್ಳ ಪಿರಮಿಡ್ಡಿನೋಪಾದಿಯಲ್ಲಿ ರಚಿತವಾದ ಇಂಥ ಸಾಮಾಜಿಕ ವ್ಯವಸ್ಥೆಯಲ್ಲಿ ದೇಶೀಯ ಶ್ರೀಮಂತವರ್ಗ ಅನೇಕ ದಶಕಗಳ ವರೆಗೆ ಉನ್ನತಮಟ್ಟದ ಸ್ಥಾನಗಳನ್ನು ಅಲಂಕರಿಸಿತ್ತು. ಆದರೆ ಸುಮಾರು ೧೮೫೦ ರಿಂದೀಚೆಗೆ, ಯಾವಾಗ ಪಾಶ್ಚಾತ್ಯರ ರಾಜಕೀಯ ಪ್ರಾಬಲ್ಯ ಹೆಚ್ಚಿತೋ ಅಂದಿನಿಂದ, ಈ ಶ್ರೀಮಂತವರ್ಗದ ಸ್ಥಾನಮಾನಗಳು ಅವನತಿಯ ಹಾದಿಹಿಡಿದುವೆನ್ನಬಹುದು.

ಸಾಮಾನ್ಯವಾಗಿ ಆಗ್ನೇಯ ಏಷ್ಯದ ಎಲ್ಲ ಭಾಗಗಳಲ್ಲೂ ಪಾಶ್ಚಾತ್ಯರು ಬಂದಾಗ ಮೊದಮೊದಲು ದೇಶೀಯರು ಅವರನ್ನು ಶಸ್ತ್ರಬಲದಿಂದ ಎದುರಿಸಲು ಪ್ರಯತ್ನಿಸಿದರು. ಆದರೆ ಪಾಶ್ಚಾತ್ಯರು ಉತ್ತಮವಾದ ಶಸ್ತ್ರಾಸ್ತ್ರಗಳನ್ನೂ ತಂತ್ರಗಳನ್ನೂ ಉಳ್ಳವರಾಗಿದ್ದುದ್ದರಿಂದಲೂ ಆಗ್ನೇಯ ಏಷ್ಯದ ರಾಜಮನೆತನಗಳಲ್ಲಿ ಒಡಕುಗಳಿದ್ದುದ್ದರಿಂದಲೂ ಪಾಶ್ಚಾತ್ಯರು ಸುಲಭವಾಗಿ ದೇಶೀಯರನ್ನು ಗೆಲ್ಲಲು ಸಾಧ್ಯವಾಯಿತು. ಹದಿನಾರನೆಯ ಶತಮಾನದ ಆದಿಭಾಗದಲ್ಲಿ ಬಂದ ಪೋರ್ಚುಗೀಸರೇ ಐರೋಪ್ಯರಲ್ಲೆಲ್ಲ ಮೊದಲಿಗರು. ಅವರ ಅನಂತರ ಸ್ಪಾನಿಷರು ಮತ್ತು ಡಚ್ಚರು ಅವರನ್ನನುಸರಿಸಿದರು. ಪೋರ್ಚುಗೀಸರನ್ನು ಮಲಕ್ಕದಿಂದ ಓಡಿಸುವ ಪ್ರಯತ್ನದಲ್ಲಿ ಡಚ್ಚರು ನಿರತರಾಗಿದ್ದಾಗ ಸ್ಪಾನಿಷರು ಫಿಲಿಪೀನ್ಸ್ ದ್ವೀಪಗಳನ್ನು ಆಕ್ರಮಿಸಿಕೊಂಡರು. ೧೯ನೆಯ ಶತಮಾನದ ಕೊನೆಯವರೆಗೂ, ಅಂದರೆ ಸ್ಪಾನಿಷ್-ಅಮೆರಿಕನ್ ಯುದ್ಧವಾಗಿ ಆ ದ್ವೀಪಗಳು ಅಮೇರಿಕದ ವಶಕ್ಕೆ ಹೋಗುವ ಮುನ್ನ. .ಸ್ಪಾನಿಷರು ಈ ದ್ವೀಪಗಳನ್ನು ತಮ್ಮ ಅಧಿಕಾರದಲ್ಲಿಟ್ಟುಕೊಂಡಿದ್ದರು. ಜಾವಾದ್ವೀಪವನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು ಡಚ್ಚರು ಕೊನೆಗೆ ಇಂಡೋನೇಷ್ಯವನ್ನೆಲ್ಲ ಆಕ್ರಮಿಸಿಕೊಂಡರು. ಬ್ರಿಟಿಷರು ಮಲಯವನ್ನು ಆಕ್ರಮಿಸಿಕೊಂಡರು. ೧೯ನೆಯ ಶತಮಾನದಲ್ಲಿ ಬರ್ಮವೂ ಅವರ ವಶವಾಯಿತು. ಫ್ರೆಂಚರು ಕೊನೆಯದಾಗಿ ಅನ್ನಾಂ, ಲಾವೋಸ್, ಕ್ಯಾಂಬೋಡಿಯ, ಟಾಂಕಿನ್‌ಗಳನ್ನು, ತಮ್ಮ ಹತೋಟಿಗೆ ತಂದುಕೊಂಡರು. ಫ್ರೆಂಚ್-ಇಂಡೋಚೀನ ವಸಾಹತು ಸ್ಥಾಪಿತವಾಯಿತು.

ಪಾಶ್ಚಾತ್ಯರು ಆಗ್ನೇಯ ಏಷ್ಯ ದೇಶಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿದ ಕ್ರಮದಲ್ಲೂ ಅವರುಗಳು ಅನುಸರಿಸಿದ ಆಡಳಿತಕ್ರಮಗಳಲ್ಲೂ ಅನೇಕ ವ್ಯತ್ಯಾಸಗಳಿದ್ದುವು. ಉದಾಹರಣೆಗೆ, ಇಂಡೋನೇಷ್ಯದಲ್ಲಿ ಡಚ್ ಈಸ್ಟ್ ಇಂಡಿಯ ಕಂಪನಿ ಎಂಬ ವ್ಯಾಪಾರಸಂಸ್ಥೆ ಮೊದಲು ಒಂದು ವಸಾಹತನ್ನು ಸ್ಥಾಪಿಸಿದ ಮೇಲೆ

ಡಚ್ಚರ ಸರ್ಕಾರ ಹೆಚ್ಚಿನ ರಾಜಕೀಯ ಹತೋಟಿಯನ್ನು ತನ್ನ ಕೈಯಲ್ಲಿ ನೇರವಾಗಿ ಇಟ್ಟುಕೊಳ್ಳುವ ಇಚ್ಛೆ ವ್ಯಕ್ತಪಡಿಸಿತು. ಫಿಲಿಫೀನ್ಸ್‌ನಲ್ಲಿ ಮೊದಲಿಂದಲೂ ಸ್ಪಾನಿಷ್ ಸರ್ಕಾರ ವಸಾಹತು ಸ್ಥಾಪಿಸುವ ಸಾಹಸದಲ್ಲಿ ನೇರವಾದ ಪಾತ್ರವಹಿಸಿತು. ಅನೇಕ ವೇಳೆ ಕ್ರೈಸ್ತಪಾದ್ರಿಗಳ ಪಾತ್ರ ಈ ದೆಶೆಯಲ್ಲಿ ಅತ್ಯಂತ ಹೆಚ್ಚಿನದಾಗಿತ್ತು. ಫಿಲಿಪೀನ್ಸ್ ಮತ್ತು ಇಂಡೋಚೀನಗಳಲ್ಲಿ ವಸಾಹತುಗಳನ್ನು ಸ್ಥಾಪಿಸಲು ಕ್ರೈಸ್ತಮತ ಪ್ರಚಾರಕರು ಸಹಾಯಕರಾದರು. ಫಿಲಿಫೀನ್ಸ್ ಇವೊತ್ತಿಗೂ ಈ ಪ್ರದೇಶಗಳಲ್ಲಿ ಮುಖ್ಯವಾಗಿ ಕೆಥೊಲಿಕ್ ಮತಾವಲಂಬಿಯಾದ ಒಂದು ದೇಶ ವಾಗಿದೆ. ಇದರಿಂದ ಇಲ್ಲಿ ಕ್ರೈಸ್ತಮತ ಪ್ರಚಾರಕರ ಪಾತ್ರವನ್ನು ಊಹಿಸಿಕೊಳ್ಳ ಬಹುದು. ಬರ್ಮದಲ್ಲಿ ವ್ಯಾಪಾರದ ಉದ್ದೇಶಗಳು ವಸಾಹತು ಸ್ಥಾಪಿಸಲು ಹೆಚ್ಚಿನ ಕಾರಣವಾದುವು. ಇಲ್ಲಿ ಕ್ರೈಸ್ತಮತ ಪ್ರಚಾರಕರ ಪಾತ್ರ ಕಿರಿದೆನ್ನ ಬಹುದು.

ಪಾಶ್ಚಾತ್ಯ ರಾಷ್ಟ್ರಗಳು ಯಾವ ರೀತಿಯಲ್ಲಿ ತಮ್ಮ ಅಧೀನಗಳಲ್ಲಿದ್ದ ವಸಾಹತುಗಳನ್ನು ಆಳಿದುವು ಎಂಬ ವಿಷಯದಲ್ಲೂ ಹಲಕೆಲವು ವ್ಯತ್ಯಾಸಗಳನ್ನು ನೋಡಬಹುದು. ಡಚ್ಚರು ಇಂಡೋನೇಷ್ಯದ ಅನೇಕ ಭಾಗಗಳ ಮೇಲೆ "ಪರೋಕ್ಷ" ಆಡಳಿತವನ್ನು ಹೇರಿದರು. ಈ "ಪರೋಕ್ಷ" ಮಾದರಿಯ ಆಡಳಿತದ ಪ್ರಕಾರ ದೇಶೀಯ ರಾಜರುಗಳನ್ನೂ ಪಾಳಯಗಾರರನ್ನೂ ಅವರವರ ಪ್ರದೇಶ ಗಳಲ್ಲೇ ಸ್ಥಾಪಿಸಿ, ಮೇಲೆ ನೋಡಿದಲ್ಲಿ ಅವರೇ ಅಧಿಕಾರವನ್ನು ಚಲಾಯಿಸು ತ್ತಿದ್ದಂತೆ ಕಂಡುಬಂದರೂ ನಿಜವಾದ ಅಧಿಕಾರಸೂತ್ರವನ್ನು ಡಚ್ಚರು ತಮ್ಮ ಕೈಯಲ್ಲಿಟ್ಟುಕೊಂಡಿದ್ದರು. ಈ ಅಧಿಕಾರವನ್ನು ದೇಶೀಯ ರಾಜರ ಮೂಲಕ ನಡೆಸುತ್ತಿದ್ದರು. ಇದಕ್ಕೆ ವಿರುದ್ಧವಾಗಿ ಬ್ರಿಟಿಷರು ಬರ್ಮದಲ್ಲಿದ್ದ ದೇಶೀಯ ರಾಜವಂಶವನ್ನೇ ಕಿತ್ತೊಗೆದು "ನೇರ" ಅಧಿಕಾರವನ್ನು ಸ್ಥಾಪಿಸಿದರು. ಇದಕ್ಕಿಂತ ಹೆಚ್ಚಿನದಾಗಿ, ವಸಾಹತು ಆಡಳಿತಗಳ ಉದ್ದೇಶ, ಆದರ್ಶಗಳಲ್ಲಿ ಡಚ್ಚರಿಗೂ, ಬ್ರಿಟಿಷರಿಗೂ ಫ್ರೆಂಚರಿಗೂ ಅಮೆರಿಕನ್ನರಿಗೂ ಒಮ್ಮತವಿರಲಿಲ್ಲ. ಮುಖ್ಯವಾಗಿ ಪಾಶ್ಚಾತ್ಯ ಮಾದರಿಯ ವಿದ್ಯಾಪ್ರಸಾರದ ಮೂಲಕ ಬ್ರಿಟಿಷರು ಮತ್ತು ಅಮೆರಿಕನ್ನರು ತಮ್ಮ ಅಧೀನದಲ್ಲಿದ್ದ ದೇಶೀಯರಿಗೆ ಕ್ರಮಕ್ರಮವಾಗಿ ಹಕ್ಕು ಗಳನ್ನು ಆಡಳಿತ ಕ್ರಮದಲ್ಲಿ ಕೊಡುತ್ತಾ ಕೊನೆಗೆ ಸಂಪೂರ್ಣವಾಗಿ ಸ್ವಾತಂತ್ರ್ಯ ಘೋಷಿಸುವ ಉದ್ದೇಶ ವ್ಯಕ್ತಪಡಿಸಿದರು. ಇದಕ್ಕೆ ವಿರುದ್ಧವಾಗಿ ಡಚ್ಚರು ಮತ್ತು ಫ್ರೆಂಚರು ನಿಧಾನವಾಗಿ ಹಂತಹಂತವಾದ ಮತ್ತು ಹಿರಿತನದ ದೃಷ್ಟಿಯುಳ್ಳ ನೀತಿಯ ಮೂಲಕ ತಮ್ಮ ಅಧೀನದಲ್ಲಿದ್ದ ದೇಶೀಯರಿಗೆ ಸ್ವಾತಂತ್ರ್ಯವನ್ನು ಕೊಡುವ ಉದ್ದೇಶವಿಟ್ಟುಕೊಂಡಿದ್ದರು. ಅವರ ಈ ಭಿನ್ನವಾದ ನೀತಿಗಳಿಂದಾಗಿ ಇಂದು ಇಂಡೋನೇಷ್ಯ ಮತ್ತು ವಿಯಟ್ನಾಂಗಳು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಉದಾಹರಣೆಗೆ ಆ ದೇಶಗಳಲ್ಲಿ ಇಂದಿಗೂ ನಿಷ್ಠವಾದ

ಉತ್ತಮ ದರ್ಜೆಯ ಆಡಳಿತವರ್ಗದ ಅಭಾವವಿದೆ. ಆದರೆ ಈ ರೀತಿಯ ಸಮಸ್ಯೆ ಫಿಲಿಫೀನ್ಸ್‌ನಲ್ಲಾಗಲಿ, ಬರ್ಮದಲ್ಲಾಗಲಿ ಅಷ್ಟು ಪ್ರಬಲವಾಗಿ ತೋರಿಲ್ಲ.

ಪಾಶ್ಚಾತ್ಯ ರಾಷ್ಟ್ರಗಳ ವಸಾಹತು ನೀತಿಗಳ ಉದ್ದೇಶ ಮತ್ತು ಆದರ್ಶಗಳಲ್ಲಿ ವ್ಯತ್ಯಾಸಗಳಿದ್ದರೂ ಅವು ಪರಿಣಾಮದಲ್ಲಿ ಏಕಪ್ರಕಾರವಾಗಿದ್ದುವು. ಆಡಳಿತಕ್ರಮ "ನೇರ"ವಾಗಿದ್ದರೂ "ಪರೋಕ್ಷ"ವಾಗಿದ್ದರೂ, ಆಗ್ನೇಯ ಏಷ್ಯದ ರಾಜರುಗಳು, ಸುಲ್ತಾನರು ಮತ್ತು ಪಾಳೆಯಗಾರರು ತಮ್ಮ ತಮ್ಮ ನಿಜವಾದ ರಾಜತ್ವವನ್ನು, ಆಳುವ ಅಧಿಕಾರವನ್ನು, ಕಳೆದುಕೊಂಡರು. ಇದರಿಂದಾಗಿ ಆಗ್ನೇಯ ಏಷ್ಯದ ರಾಜವಂಶಗಳು, ಆಸ್ಥಾನಗಳ ಶ್ರೀಮಂತ ವರ್ಗಗಳು ಗತಕಾಲದ ರಾಜಕೀಯ ವ್ಯವಸ್ಥೆಯ ಅಲಂಕಾರಪ್ರಾಯ ಪ್ರತಿನಿಧಿಗಳಾಗಿ ಉಳಿದುಕೊಂಡುವು. ಆದರೆ ಪಾಶ್ಚಾತ್ಯರ ಆಡಳಿತ ಇತಿಹಾಸಕಾಲದಿಂದ ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದಿದ್ದ ರಾಜಕೀಯ ವ್ಯವಸ್ಥೆಯನ್ನು ಅಲ್ಲೋಲಕಲ್ಲೋಲಗೊಳಿಸಿದ್ದರಿಂದ ಅಥವಾ ಅದನ್ನು ಪದಚ್ಯುತಿಗೊಳಿಸಿದ್ದರಿಂದ ಬರಿಯ ದುಷ್ಪರಿಣಾಮಗಳೇ ಉಂಟಾದುವೆಂದು ಹೇಳಲು ಸಾಧ್ಯವಿಲ್ಲ. ಇಂಥ ಬದಲಾವಣೆ ಎಲ್ಲೆಲ್ಲೂ ಕೆಡುಕನ್ನೆ ಉಂಟುಮಾಡಲಿಲ್ಲ. ಹಾಗೆ ನೋಡುವುದಾದರೆ ಪಾಶ್ಚಾತ್ಯ ವಸಾಹತು ಆಡಳಿತ ಹಿಂದಿನ ರಾಜ್ಯಾಂಗ ವ್ಯವಸ್ಥೆಯಲ್ಲಿದ್ದ ಅನೇಕ ಅಪಾಯಕಾರಿ ಅಂಶಗಳನ್ನು ತೆಗೆದು ಹಾಕಿತು. ಹಿಂದೆ ಇದ್ದ ಆಗ್ನೇಯ ಏಷ್ಯದ ರಾಜವಂಶಗಳು ದರ್ಪ ದಬ್ಬಾಳಿಕೆಗಳಿಗೆ ಹೆಸರಾಗಿದ್ದು, ತಮ್ಮತಮ್ಮಲ್ಲೆ ಸಿಂಹಾಸನಕ್ಕಾಗಿ ಭ್ರಾತೃಕಲಹ ನಡೆಸುತ್ತಿದ್ದುವು. ಅಲ್ಲದೆ ಕೃಷಿವರ್ಗವನ್ನೂ ಗುಲಾಮರನ್ನೂ ಶೋಷಿಸುವುದರಲ್ಲಿ ಅನೇಕ ರಾಜವಂಶಗಳು ಹೆಸರಾಗಿದ್ದುವು. ಪಾಶ್ಚಾತ್ಯ ಆಡಳಿತ ಇಂಥ ಅಂಶಗಳನ್ನು ತೊಡೆದುಹಾಕಿ ಹೊಸ ರಾಜಕೀಯ ರಚನೆಗೆ ಅಸ್ತಿಭಾರ ಹಾಕಿತು. ಇದರಿಂದಾಗಿ ಮುಂದೆ ಆಧುನಿಕ ಹಾಗೂ ರಾಷ್ಟ್ರೀಯ ಬೆಳವಣಿಗೆಯಾಯಿತು. ಅನೇಕ ವೇಳೆ ಪಾಶ್ಚಾತ್ಯ ರಾಷ್ಟ್ರಗಳ ವಸಾಹತು ಆಡಳಿತವೇ ಮೊತ್ತ ಮೊದಲನೆಯ ಬಾರಿಗೆ ರಾಷ್ಟ್ರೀಯತೆಯ ಕಲ್ಪನೆಯನ್ನು ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ಸೃಷ್ಟಿಸಲು ಸಹಾಯಕವಾಯಿತು. ಉದಾಹರಣೆಗೆ, ಇಂಡೋನೇಷ್ಯ ಮತ್ತು ಫಿಲಿಫೀನ್ಸ್. ಈ ಚದುರಿಹೋದ ದ್ವೀಪಸಮುದಾಯಗಳು "ರಾಷ್ಟ್ರ"ವೆನಿಸಿಕೊಳ್ಳಲು ಪಾಶ್ಚಾತ್ಯ ವಸಾಹತು ಧೋರಣೆ ಮತ್ತು ಆಡಳಿತಗಳು ಹೆಚ್ಚಿನ ಪಾತ್ರವಹಿಸಿದುವು. ತಮ್ಮತಮ್ಮಲ್ಲೇ ಕಾದಾಡುತ್ತಿದ್ದ ಚಿಕ್ಕಪುಟ್ಟ ಪಾಳೆಯಪಟ್ಟುಗಳನ್ನು ಸುಭದ್ರವಾದ ಆಡಳಿತದಿಂದ ಒಂದುಗೂಡಿಸಿ, ಪಾಶ್ಚಾತ್ಯ ರಾಷ್ಟ್ರಗಳು ಈ ಪ್ರದೇಶದಲ್ಲಿ ಒಂದು ವಿಧವಾಗಿ "ರಾಷ್ಟ್ರೀಯತೆ"ಯ ಭಾವನೆಗೆ ಅಡಿಗಲ್ಲನ್ನು ಹಾಕಿದುವು. ಸುವ್ಯವಸ್ಥಿತ ಹಾಗೂ ಅನೇಕವೇಳೆ ಉದಾರ ತತ್ತ್ವಗಳಿಂದ ಪ್ರೇರಿತವಾದ ಆಡಳಿತದ ಸ್ಥಾಪನೆ, ಲಂಚಗುಳಿತನ ದಬ್ಬಾಳಿಕೆಗಳ ನಿರ್ಮೂಲ, ಆಧುನಿಕ ಸಂಪರ್ಕಸಾರಿಗೆಗಳ ಸೃಷ್ಟಿ, ಆರೋಗ್ಯ ರಕ್ಷಣಾವ್ಯವಸ್ಥೆ ಮತ್ತು ಪಾಶ್ಚಾತ್ಯ

ಮಾದರಿಯ ವಿದ್ಯಾಭ್ಯಾಸಕ್ರಮ (ಕ್ರೈಸ್ತಮತ ಪ್ರಚಾರಕರಿಂದಲೋ ವಸಾಹತು ಸರ್ಕಾರಗಳಿಂದಲೋ ಸ್ಥಾಪಿಸಲ್ಪಟ್ಟ ವಿದ್ಯಾಸಂಸ್ಥೆಗಳು)—ಇವುಗಳನ್ನು ವಸಾಹತು ನೀತಿಯ ಆಡಳಿತದ ಒಳ್ಳೆಯ ಪರಿಣಾಮಗಳನ್ನೆಬಹುದು.

ಸಾಮ್ರಾಜ್ಯಶಾಹಿ ಆಡಳಿತದಿಂದ ಈ ಸಾಧನೆಗಳಾದರೂ ಒಟ್ಟಿನಲ್ಲಿ ಹೆಚ್ಚಿನ ದುಷ್ಪರಿಣಾಮಗಳೇ ಆದುವೆಂದು ಹೇಳಬಹುದು. ಮೊತ್ತಮೊದಲನೆಯದಾಗಿ ವಸಾಹತು ಆಡಳಿತ ಎಷ್ಟಾದರೂ ಪರಕೀಯರ ಆಡಳಿತ. ಪಾಶ್ಚಾತ್ಯರ ಆಡಳಿತ ದಿಂದ ದೇಶೀಯ ರಾಜಕೀಯ ಅವನತಿ ಹೊಂದಿತು. ಇದು ಆಗ್ನೇಯ ಏಷ್ಯದ ಎಲ್ಲ ವರ್ಗಗಳ ಜನಾಂಗದವರ ಮೇಲೂ ಅಳಿಸಲಾರದ ಮುದ್ರೆಯನ್ನು ಒತ್ತಿತು. ಎರಡನೆಯದಾಗಿ ವಸಾಹತು ಆಡಳಿತ ಬಲದ ಆಧಾರದ ಮೇಲೆ ನಿಂತಿತ್ತು. ಇದರಿಂದಾಗಿ, ಹಿಂದೆ ಈ ಪ್ರದೇಶದಲ್ಲಿದ್ದ ದರ್ಪ ದಬ್ಬಾಳಿಕೆಗಳಿಂದ ಕೂಡಿದ ಆಡಳಿತ ಕ್ರಮವೇ ಮುಂದುವರಿದಂತಾಯಿತು. ಈ ಶತಮಾನದಲ್ಲಿ, ಅದೂ ಕೆಲವೇ ಪ್ರದೇಶಗಳಲ್ಲಿ, ಕೆಲವು ಪ್ರಜಾಪ್ರಭುತ್ವದ ತತ್ತ್ವಗಳನ್ನು ಆಡಳಿತದಲ್ಲಿ ತರುವ ಪ್ರಯತ್ನವನ್ನು ವಸಾಹತು ಸರ್ಕಾರಗಳು ನಡೆಸಿದವು. ಆದರೆ ಈ ದಿಕ್ಕಿನಲ್ಲಿ ಹೆಚ್ಚಿನ ಪ್ರಗತಿ ಆಗದೆ ಹಿಂದಿನ ದರ್ಪನಿಷ್ಠವಾದ ಪರಸ್ಪರ ಸಂಬಂಧ ತಾಯ್ನಾಡಿಗೂ ವಸಾಹತಿಗೂ ನಡುವೆ ಮುಂದುವರಿಯುತ್ತಲೆ ಹೋಯಿತು. ಮೂರನೆಯದಾಗಿ ಪಾಶ್ಚಾತ್ಯ ಉದ್ಯಮ ಸಂಸ್ಥೆಗಳು ವಸಾಹತು ಆಡಳಿತದ ಬೆಂಬಲದಿಂದ ಹೆಚ್ಚಿನ ಲಾಭ ಗಳಿಸಿದುವು: ಇದರಿಂದಾಗಿ ಆಗ್ನೇಯ ಏಷ್ಯದ ರಾಷ್ಟ್ರಗಳಲ್ಲಿನ ಜೀವನ ಮಟ್ಟ ಉತ್ತಮಗೊಳ್ಳಲಿಲ್ಲ. ಗಳಿಸಿದ ಸಂಪತನ್ನು ಪುನಃ ಆಯಾ ದೇಶಗಳಲ್ಲೇ ಉದ್ಯಮಗಳಲ್ಲಿ ತೊಡಗಿಸುವುದರ ಬದಲು, ಆ ರೀತಿ ಸಂಪಾದಿಸಿದ ಸಂಪತ್ತು ಐರೋಪ್ಯ ಷೇರುದಾರರಿಗೆ ಸಂದಾಯವಾಗುತ್ತಿತ್ತು. ಇದರಿಂದಾಗಿ ಬಡವರಿಗೂ ಶ್ರೀಮಂತರಿಗೂ ನಡುವೆ ಇದ್ದ ಅಂತರ ಹಾಗೆಯೇ ಉಳಿಯಿತು. ವಸಾಹತು ನೀತಿಯಿಂದಾಗಿ ಉದ್ಭವಿಸಿದ ಸಂಕೀರ್ಣವಾದ ಸಮಾಜವ್ಯವಸ್ಥೆಯಲ್ಲಿ ಐರೋಪ್ಯರು ಮತ್ತು ಅನೇಕವೇಳೆ ಇತರ ದೇಶಗಳಿಂದ ವಲಸೆಗಾರರಾಗಿ ಬಂದ ಏಷ್ಯನರು ಐಶ್ವರ್ಯವಂತ ವರ್ಗದವರಾಗಿ ಪರಿಗಣಿತರಾಗಿದ್ದರು. ಇದಕ್ಕೆ ವಿರುದ್ಧವಾಗಿ ದೇಶೀಯರು ದಲಿತ ಮತ್ತು ಶೋಷಿತವರ್ಗದವರೆನಿಸಿಕೊಂಡಿದ್ದರು.

ಆದಾಗ್ಯೂ ಪಾಶ್ಚಾತ್ಯರ ವಸಾಹತು ಆಡಳಿತ ಆಗ್ನೇಯ ಏಷ್ಯದಲ್ಲಿ ಹಲ ಕೆಲವು ಕಾರಣಗಳಿಂದ, ಧೋರಣೆಗಳಿಂದ ತನ್ನ ಅವನತಿಗೆ ತಾನೇ ಹಾದಿಮಾಡಿ ಕೊಂಡಿತು. ಇದು ವಿವಿಧ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಎಡೆಮಾಡಿಕೊಟ್ಟಿತು. ಮೊದಲನೆಯದಾಗಿ ಐರೋಪ್ಯರು ಆಗ್ನೇಯ ಏಷ್ಯದ ರಾಷ್ಟ್ರಗಳಲ್ಲಿ ಉದ್ಯಮ, ವ್ಯಾಪಾರ, ಕೈಗಾರಿಕೆಗಳನ್ನು ನಡೆಸುವುದಕ್ಕಾಗಿ ದೇಶೀಯರ ಸಹಾಯ, ಬೆಂಬಲಗಳ ಆವಶ್ಯಕತೆಯನ್ನು ಕಂಡುಕೊಂಡರು. ಆಡಳಿತದ ಅನೇಕ ಹುದ್ದೆಗಳಿಗೆ ದೇಶೀಯರನ್ನು ನೇಮಿಸಿಕೊಳ್ಳಲು ವಸಾಹತು ಸರ್ಕಾರಗಳು ಪಾಶ್ಚಾತ್ಯ ಮಾದರಿಯ ವಿದ್ಯಾಭ್ಯಾಸ ಕ್ರಮವನ್ನು ದೇಶೀಯರಿಗೆ ವಿವಿಧ ರಂಗಗಳಲ್ಲಿ

ತರಬೇತಿಕೊಡಲು ಜಾರಿಗೆ ತಂದುವು. ಪಾಶ್ಚಾತ್ಯ ಮಾದರಿಯ ವಿದ್ಯಾಭ್ಯಾಸವನ್ನು ಪಡೆದ ಪ್ರತ್ಯೇಕ ಸಾಮಾಜಿಕ ಗುಂಪೊಂದು ಇದರಿಂದ ಆಗ್ನೇಯ ಏಷ್ಯದ ರಾಷ್ಟ್ರಗಳಲ್ಲಿ ಸೃಷ್ಟಿಯಾಯಿತು. ಸಂಖ್ಯೆಯಲ್ಲಿ ಹೆಚ್ಚಿನವರಲ್ಲದ ಈ ಬುದ್ಧಿವಂತರ ಗುಂಪಿನಿಂದ ಮುಂದೆ ವಸಾಹತು ನೀತಿಯ ಆಡಳಿತದ ವಿರುದ್ಧ ಚಳವಳಿ ನಡೆಸುವ ಮುಂದಾಳುಗಳ ಪಡೆ ಸಿದ್ಧವಾಯಿತು. ಪಾಶ್ಚಾತ್ಯ ಮಾದರಿಯ ಈ ರೀತಿಯ ವಿದ್ಯಾಭ್ಯಾಸಕ್ರಮದ ಪರಿಣಾಮಗಳನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿರಲಿಲ್ಲ. ಏಕೆಂದರೆ ಪಾಶ್ಚಾತ್ಯ ಜ್ಞಾನಸಂಪತ್ತಿನೊಡನೆ ಸಂಪರ್ಕ ಬೆಳೆದ ಕಾಲದಿಂದ, ಯೂರೋಪಿನಲ್ಲಿ ಪ್ರಬಲವಾಗಿದ್ದ ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಸಮಾಜವಾದ, ಮಾರ್ಕ್ಸ್‌ನ ಸಿದ್ಧಾಂತಗಳು ಮುಂತಾದವು ಆಗ್ನೇಯ ಏಷ್ಯದ ರಾಷ್ಟ್ರಗಳ ಮುಂದಾಳುಗಳ ಮೇಲೆ ಹೆಚ್ಚಿನ ಪರಿಣಾಮ ಬೀರದಿರಲಿಲ್ಲ. ಅನೇಕ ಮಂದಿ ಯೂರೋಪ್ ಅಮೇರಿಕಗಳಿಗೆ ಉನ್ನತ ಶಿಕ್ಷಣಕ್ಕೆ ಹೋದ ತರುಣರಿಗೆ ಪಾಶ್ಚಾತ್ಯ ಜ್ಞಾನರಾಶಿಯ ಬಾಗಿಲು ತೆರೆಯಿತು.

ಈ ರೀತಿಯಾಗಿ ಪಶ್ಚಿಮಕ್ಕೂ ಆಗ್ನೇಯ ಏಷ್ಯಕ್ಕೂ ಉಂಟಾದ ಸಂಪರ್ಕದ ಪರಿಣಾಮಗಳು ಅನೇಕ. ಪಶ್ಚಿಮದಿಂದ ಬಂದ ಜ್ಞಾನವನ್ನು ಅರಗಿಸಿಕೊಳ್ಳುವುದರ ಜೊತೆಗೆ ಈ ಯುವಕ ವಿದ್ಯಾರ್ಥಿಗಳು ಐರೋಪ್ಯ ರಾಷ್ಟ್ರಗಳಲ್ಲಿದ್ದ ರಾಜಕೀಯ ವ್ಯವಸ್ಥೆಗಳನ್ನು ಅಭ್ಯಾಸ ಮಾಡಿದರು. ಅಲ್ಲಿದ್ದ ರಾಜಕೀಯ ಸಂಘಸಂಸ್ಥೆಗಳು, ರಾಜಕೀಯ ಪಕ್ಷಗಳೇ ಮೊದಲಾದವುಗಳನ್ನು ನೋಡಿ ಆಕರ್ಷಿತರಾದರು. ಸ್ವದೇಶಗಳಿಗೆ ಮರಳಿದ ಅನಂತರ ಅವರಲ್ಲಿ ಅನೇಕರು ಪಶ್ಚಿಮದ ಈ ಸಂಪ್ರದಾಯಗಳನ್ನು ಮತ್ತು ಸಂಕೇತಗಳನ್ನು ತಮ್ಮ ದೇಶಗಳ ಪರಿಸ್ಥಿತಿಗೆ ಹೊಂದಿಸಿಕೊಳ್ಳಲು ಪ್ರಯತ್ನ ನಡೆಸಿದರು. ಅವರು ರಾಷ್ಟ್ರೀಯತೆಯ ಭಾವನೆಗಳನ್ನು ಬೆಳೆಸಿ ರಾಷ್ಟ್ರೀಯ ಪಕ್ಷಗಳನ್ನು ಕಟ್ಟಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೆಚ್ಚಿನ ಪಾತ್ರ ವಹಿಸಿದರು. ಇಪ್ಪತ್ತನೆಯ ಶತಮಾನದಲ್ಲಿ ಮೊತ್ತಮೊದಲ ಬಾರಿಗೆ ವಸಾಹತು ನೀತಿಯ ವಿರುದ್ಧ ಸುಸಂಘಟಿತವಾದ, ಆಧುನಿಕ ರೀತಿಯಿಂದ ಕೂಡಿದ ಮತ್ತು ರಾಷ್ಟ್ರೀಯತೆಯ ಅರಿವನ್ನಿಟ್ಟುಕೊಂಡ ಗುಂಪುಗಳು ಹೋರಾಡಲು ಸಿದ್ಧವಾದುವು. ಈ ರೀತಿಯಿಂದ ಜಾಗೃತವಾದ ರಾಷ್ಟ್ರೀಯತೆಯ ಭಾವನೆಯೇ ಕ್ರಮೇಣ ಆಗ್ನೇಯ ಏಷ್ಯನ್ ರಾಷ್ಟ್ರಗಳಲ್ಲಿನ ಎಲ್ಲ ವರ್ಗಗಳನ್ನೂ ಪಾಶ್ಚಾತ್ಯ ವಸಾಹತು ಆಡಳಿತಗಳ ವಿರುದ್ಧ ಸಮಗ್ರ ಹೋರಾಟ ನಡೆಸಲು ಹುರಿದುಂಬಿಸಿತು. ಈ ಹೋರಾಟದ ಪರಿಣಾಮವೆಂದರೆ ಪಾಶ್ಚಾತ್ಯ ರಾಷ್ಟ್ರಗಳ ವಸಾಹತು ಆಡಳಿತಗಳ ಅವನತಿ. ಎರಡನೆಯ ಮಹಾಯುದ್ಧವಾದ ಮೇಲೆ ಆಗ್ನೇಯ ಏಷ್ಯದ ಒಂದೊಂದೇ ರಾಷ್ಟ್ರಗಳು ಸ್ವಾತಂತ್ರ್ಯ ಪಡೆದುವು. ಹಲವು ಕಡೆ ಹಿಂಸಾತ್ಮಕ ಹೋರಾಟದಿಂದ ಸ್ವಾತಂತ್ರ್ಯ ಗಳಿಸಬೇಕಾಯಿತು. ಉಳಿದ ಕಡೆ ಸಾಮ್ರಾಜ್ಯಶಾಹಿ ರಾಷ್ಟ್ರವೇ ಕಾಲ ಬದಲಾಗುತ್ತಿರುವುದನ್ನು ಅರಿತುಕೊಂಡು ತನ್ನ ವಸಾಹತಿನ ಜನಾಂಗಕ್ಕೆ ಸಂಪೂರ್ಣ ಅಧಿಕಾರವನ್ನು ಒಪ್ಪಿಸಿತು.

ಡಾ. ಕೆ. ಪುಟ್ಟಸ್ವಾಮಯ್ಯ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಿರುದ್ಯೋಗಸಮಸ್ಯೆಯ ಆಧುನಿಕ ಪರಿಶೀಲನೆ

ತೀರ ಈಚಿನ ವರೆಗೂ, ಎಂದರೆ ಹತ್ತೊಂಬತ್ತನೆಯ ಶತಮಾನದ ಮಧ್ಯದ ವರೆಗೂ ವೈಯಕ್ತಿಕ ನಡತೆಯ ಲೋಪದೋಷಗಳೇ ಬಹಳ ಮಟ್ಟಿಗೆ ನಿರುದ್ಯೋಗಕ್ಕೆ ಕಾರಣವೆಂದು ಪರಿಗಣಿಸಲಾಗಿತ್ತು. ಬದಲಾಯಿಸುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲು ಅವಶ್ಯವಾದ ತರಬೇತಿ ಮತ್ತು ಪ್ರವೃತ್ತಿಪಡೆದಿರದಂಥ ಜನರನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳಲಾಗದ್ದರಿಂದ ಅವರು ನಿರುದ್ಯೋಗಿಗಳಾಗಿದ್ದರೆಂದು ವಾದಿಸಲಾಗುತ್ತಿತ್ತು. ಈ ಅಭಿಪ್ರಾಯಕ್ಕೆ ಬುಡವಿಲ್ಲವೆಂಬುದನ್ನು ಹಿಂದೆಯೇ ಕಂಡುಕೊಳ್ಳಲಾಗಿತ್ತಾದರೂ ಇಪ್ಪತ್ತನೆಯ ಶತಮಾನದಲ್ಲಿ ಸಂಭವಿಸಿದ ಎರಡು ಯುದ್ಧಗಳು ಸಾಮಾಜಿಕ ಮತ್ತು ಆರ್ಥಿಕ ನಂಬುಗೆಗಳ ಆಧಾರವನ್ನೇ ಅಲುಗಾಡಿಸುವ ತನಕ, ನಿರುದ್ಯೋಗ ನಿವಾರಣೆಯ ಜವಾಬ್ದಾರಿ ರಾಷ್ಟ್ರದ್ದೇ ಎಂಬ ಅಭಿಪ್ರಾಯ ಮಾತ್ರ ಸಂಪೂರ್ಣವಾಗಿ ಅಂಗೀಕೃತವಾಗಿರಲಿಲ್ಲ.

ಆದರೆ ಈ ನಿರುದ್ಯೋಗದ ಹೊಣೆಗಾರಿಕೆ ಈಚೆಗೆ ವ್ಯಕ್ತಿಯಿಂದ ರಾಷ್ಟ್ರಕ್ಕೆ ವರ್ಗವಾಗಿರುವುದಂತೂ ಖಂಡಿತ. ಈ ವರ್ಗಾವಣೆ ಬಲು ಅಗೋಚರವಾಗಿ ನಡೆದಿದೆ. ಈ ಬಗ್ಗೆ ವಿಶ್ಲೇಷಣೆ ನಡೆಸುವುದು ಸ್ವಾರಸ್ಯಕರ. ನಿರುದ್ಯೋಗದ ಬಗ್ಗೆ ವ್ಯಕ್ತಿಯನ್ನು ಹೆಚ್ಚು ಆಕ್ಷೇಪಿಸಲು ಸಾಧ್ಯವಿಲ್ಲವೆಂದೂ ಸಂದರ್ಭಗಳ ಪ್ರಭಾವಕ್ಕೆ ಅವನು ಬಲಿಯಾಗಿರುವನೆಂದೂ ಅರ್ಥಶಾಸ್ತ್ರಜ್ಞರು ಒಪ್ಪಿಕೊಂಡಿದ್ದರೂ ಆರ್ಥಿಕ ವ್ಯವಸ್ಥೆಗೂ ಈ ಪರಿಸ್ಥಿತಿಗೂ ಇದ್ದ ಸಂಬಂಧವನ್ನು ಅವರು ಒಪ್ಪಲು ಹಿಂದೆ ಸಿದ್ಧವಾಗಿರಲಿಲ್ಲ. ಹತ್ತೊಂಬತ್ತನೆಯ ಶತಮಾನದ ಅರ್ಥಶಾಸ್ತ್ರಜ್ಞರಲ್ಲಿ ಕೆಲವರಾದರೂ, ವರ್ಷದ ಕೆಲವು ಋತುಗಳಲ್ಲಿ ಸಂಭವಿಸುವ ನಿಯತಕಾಲಿಕ ನಿರುದ್ಯೋಗದ ಕಾರಣವನ್ನು ಕಂಡುಹಿಡಿಯಲು ಪ್ರಯತ್ನಮಾಡಲಿಲ್ಲ. ಹವಾಗುಣ ಪರಿಸ್ಥಿತಿಗಳು ಬೆಳೆಗಳ ಹೆಚ್ಚಳವನ್ನು ಅಥವಾ ಅಭಾವವನ್ನು ಕಂಡುಕೊಳ್ಳಲು ಸಹಾಯಕವಾಗಿದ್ದು, ಪ್ರಪಂಚದ ಔದ್ಯಮಿಕ ಪರಿಸ್ಥಿತಿಗಳು ಬಹಳ

ಮಟ್ಟಿಗೆ ಅವುಗಳನ್ನೆ ಅವಲಂಬಿಸಿವೆಯೆಂದು ಆಗ ಅಭಿಪ್ರಾಯಪಡಲಾಗಿತ್ತು. ಸೂರ್ಯನ ಮೇಲೆ ನಿಯತ ಕಾಲಗಳಲ್ಲಿ ಮಚ್ಚೆಗಳು ಅಥವಾ ಚುಕ್ಕೆಗಳು ಕಾಣಿಸಿಕೊಂಡಾಗ ಪ್ರಪಂಚದಲ್ಲಿ ಮಳೆಯಾಗದೆ ಜಗತ್ತಿನಲ್ಲಿ ಸಾಮಾನ್ಯವಾಗಿ ವ್ಯಾವಸಾಯಿಕ ಮಾಂದ್ಯ ಅಥವಾ ಕುಸಿತ ಕಂಡುಬರುವುದೆಂಬ ವಾದವನ್ನು ಪ್ರಮಾಣೀಕರಿಸಲು ಡಬ್ಲ್ಯು. ಎಸ್. ಜೇಮ್ಸ್‌ನಂಥವರು ಪ್ರಯತ್ನಿಸಿದರು. ಪೂರ್ಣ ಉದ್ಯೋಗನೀತಿಯ ಪ್ರತಿಪಾದಕರಾದ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಲಾರ್ಡ್ ಬೆವರಿಜ್ ಅಂಥವರು ಕೂಡ ಕೇವಲ ನಲವತ್ತು ವರ್ಷಗಳ ಹಿಂದೆ ಹವೆಯಲ್ಲಿ ಆಗಾಗ ಸಂಭವಿಸುವ ಬದಲಾವಣೆಗಳಿಂದ ವ್ಯವಸಾಯದ ಬೆಳೆಗಳ ಮೇಲೂ ಪ್ರಪಂಚದ ವ್ಯಾಪಾರ ಪರಿಸ್ಥಿತಿಗಳ ಮೇಲೂ ಪರಿಣಾಮವುಂಟಾಗಲು ಸಾಧ್ಯವಿದೆ ಯೆಂದು ವಾದಿಸಿದ್ದರು.

ನಿರುದ್ಯೋಗದಬಗ್ಗೆ ಅರ್ಥಶಾಸ್ತ್ರಜ್ಞರು ಹೆಚ್ಚಾಗಿ ಆಸಕ್ತಿ ತಳೆಯಲಾರಂಭಿಸಿದ್ದು ಹತ್ತೊಂಬತ್ತನೆಯಶತಮಾನದ ಕೊನೆಯ ಭಾಗದಲ್ಲಿ. ಆಲ್ಫ್ರೆಡ್ ಮಾರ್ಷಲ್ ೧೮೯೦ರಲ್ಲಿ ಪ್ರಕಟಿಸಿದ ಪುಸ್ತಕದ ಪ್ರಥಮಸಂಪುಟದಲ್ಲಿ "ನಿರುದ್ಯೋಗ ಸಮಸ್ಯೆ" ಯನ್ನು ಕುರಿತ ಪ್ರಸ್ತಾಪವಿಲ್ಲ. ಅವರು "ಉದ್ಯೋಗದ ಅಸ್ಥಿರತೆ" ಎಂಬ ಮಾತನ್ನಷ್ಟೇ ಹೇಳಿದ್ದಾರೆ. ಮಾರ್ಷಲ್ ದೃಷ್ಟಿಯಲ್ಲಿ ನಿರುದ್ಯೋಗ ಸಮಸ್ಯೆ ಯೆಂಬುದು ಅತಿಯಾದ ಪ್ರಚಾರದಿಂದ, ತೀವ್ರ ಸಾಮಾಜಿಕ ಅಂತಃಕರಣದಿಂದ ಮತ್ತು ಅಂಕಿಅಂಶಗಳ ತಪ್ಪು ವ್ಯಾಖ್ಯಾನದಿಂದ ಸೃಷ್ಟಿಯಾಗಿರುವ ಸಮಸ್ಯೆ. ಉದ್ಯೋಗ ಪರಿಸ್ಥಿತಿ ಹಿಂದಿದ್ದಕ್ಕಿಂತ ಸ್ವಲ್ಪ ಅಧಿಕವಾಗಿ ಅಸ್ಥಿರವಾಗಿದೆಯೆಂಬುದೇ ಹತ್ತೊಂಬತ್ತನೆಯ ಶತಮಾನದ ಮತ್ತು ಇಪ್ಪತ್ತನೆಯ ಶತಮಾನದ ಆದಿಭಾಗದ ಅರ್ಥಶಾಸ್ತ್ರಜ್ಞರು ಹೊಂದಿದ್ದ ಅಭಿಪ್ರಾಯ. ಆದ್ದರಿಂದ ಅವರು ಅರ್ಥವ್ಯವಸ್ಥೆಯ ರೋಗವಾದ ವ್ಯಾಪಾರ ಚಕ್ರದ ಕಡೆಗೆ ತಮ್ಮ ಅಧ್ಯಯನದೃಷ್ಟಿ ಹರಿಯಿಸಿದರು. ೧೮೮೮ರ ಬ್ರಿಟನ್ನಿನ ವಿಶ್ವಕೋಶವೊಂದರಲ್ಲಿ 'ಕಾರ್ಮಿಕರಲ್ಲಿ ಉದ್ಯೋಗ ರಹಿತ ಅವಸ್ಥೆಯ ಬಗ್ಗೆ ಬಳಸಲಾದ ಒಂದು ಆಧುನಿಕಶಬ್ದ' ಎಂಬುದಾಗಿ ನಿರುದ್ಯೋಗ ಪದಕ್ಕೆ ಅರ್ಥ ಕೊಟ್ಟಿದೆ. 'ನಿರುದ್ಯೋಗ ಎಲ್ಲರ ಗಮನ ಸೆಳೆಯುವ ಜರೂರಿನ ಸಮಸ್ಯೆಯಾಗಿ ಪರಿಣಮಿಸಿದ್ದಕ್ಕೆ ಕಾರಣವಾದದ್ದು ಆ ಸಮಸ್ಯೆಯ ತೀವ್ರತೆಯಲ್ಲ. ಅದಕ್ಕಿಂತ ಮಿಗಿಲಾಗಿ ಇದಕ್ಕೆ ಹೆಚ್ಚಿನ ಪ್ರಚಾರ ದೊರಕಿತು. ಈ ಪ್ರಚಾರಕ್ಕೆ ಹೆಚ್ಚಿನ ಸೌಲಭ್ಯಗಳಿದ್ದುವು. ಜೊತೆಗೆ ಕೈಗಾರಿಕಾ ಪ್ರಜಾಪ್ರಭುತ್ವದ ಬೆಳವಣಿ ಗೆಯೂ, ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಮೀಸಲಾದ ಶಾಸ್ತ್ರೀಯ ವಿಧಾನಗಳೂ ಆ ಕಾಲದ ಉದಾತ್ತ ಲೋಕಾನುರಾಗ ಮನೋಭಾವವೂ ಈ ಸಮಸ್ಯೆಗೆ ದೊರಕಿದ ಹೆಚ್ಚಿನ ಪ್ರಾಶಸ್ತ್ಯಕ್ಕೆ ಕಾರಣಗಳು—ಎಂಬುದಾಗಿ ಆ ವಿಶ್ವಕೋಶದಲ್ಲಿ ಹೇಳಲಾಗಿದೆ. ಈ ಕಾರಣಗಳಿಂದಾಗಿ ಪ್ರತ್ಯೇಕವಾದ ಪರಿಹಾ ರೋಪಾಯಗಳನ್ನು ಪ್ರಯೋಗಿಸಬೇಕೆಂದು ನಾನಾ ಬಗೆಯಲ್ಲಿ ಒತ್ತಾಯಪಡಿಸ

ಲಾಯಿತೆಂದೂ ಹೇಳಿದೆ. ನಿರುದ್ಯೋಗದ ಸಾಮಾಜಿಕ ಕಲ್ಪನೆ ಈ ಶತಮಾನದ ಮೊದಲನೆಯ ದಶಕದಲ್ಲೂ ಅಸ್ತಿತ್ವಕ್ಕೆ ಬಂದಿರಲಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ನಿರುದ್ಯೋಗದ ಕಾರಣಗಳು ಬಹಳಮಟ್ಟಿಗೆ ಮಾನವನ ಸ್ವಭಾವದಲ್ಲಿ ಕಂಡುಬರುವ ನ್ಯೂನತೆಗಳೇ ಎಂಬ ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ಭಾವನೆ ಮಾಯವಾಗಿ, ಅದು 'ದೇವರು ಕೊಟ್ಟ ಶಿಕ್ಷೆಯಲ್ಲ, ಮಾನವ ನಿರ್ಮಿತ ದಂಡನೆ'ಯೆಂಬ ಅಭಿಪ್ರಾಯವೇನೋ ಜನರ ಮನಸ್ಸಿನಲ್ಲಿ ಮೂಡಿತು. ಆದರೆ ಸಮಾಜವೂ ಬದಲಾವಣೆಯಾಗುತ್ತಿರುವ ಪರಿಸ್ಥಿತಿಗಳಿಗನುಗುಣವಾಗಿ ತನ್ನ ಆರ್ಥಿಕ ವ್ಯವಸ್ಥೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಸಮರ್ಥವಾದ ಕಾರಣ ಸಾಮಾನ್ಯ ನಿರುದ್ಯೋಗ ಪರಿಸ್ಥಿತಿ ತಲೆದೋರಿತೆಂಬ ಭಾವನೆಗೂ ಚಕ್ರಗತಿಯಲ್ಲಿ ಆವರ್ತಿಸುವ ಬದಲಾವಣೆಗಳೂ ಕೈಗಾರಿಕೆ ಮತ್ತು ವ್ಯಾಪಾರಗಳ ಸಂಘಟನೆಯಲ್ಲಿ ಸಂಭವಿಸುವ ಲೋಪದೋಷಗಳಿಂದಲೇ ಹೊರತು ಹವಾಗುಣದ ಅಸ್ಥಿರತೆಯಿಂದಾಗಿ ಅಲ್ಲ ಎಂಬ ಅಭಿಪ್ರಾಯಕ್ಕೂ ಮನ್ನಣೆ ದೊರಕಲು ಬಹಳಕಾಲವೇ ಬೇಕಾಯಿತು.

ಆ ಕಾಲದ ಆರ್ಥಿಕ ಸಾಹಿತ್ಯದಲ್ಲಿ, ಈ ವಿಷಯದ ಬಗ್ಗೆ ನಡೆದ ಸ್ವಾರಸ್ಯವಾದ ಚರ್ಚೆಗಳ ಉಲ್ಲೇಖಗಳಿವೆ. ೧೮೮೬ರಲ್ಲಿ "ಉದ್ಯೋಗದ ಅಸ್ಥಿರತೆ ಮತ್ತು ಬೆಲೆಗಳಲ್ಲಿ ವ್ಯತ್ಯಾಸಗಳು" ಎಂಬ ಪ್ರಬಂಧದಲ್ಲಿ ಔದ್ಯಮಿಕ ವ್ಯವಸ್ಥೆಯಲ್ಲಿ ಕಂಡುಬರುವ ಮೂಲದೋಷವೇ ಉದ್ಯೋಗದ ಅಸ್ಥಿರತೆ ಎಂದೂ ಅಸ್ತಿತ್ವದಲ್ಲಿರುವ "ಉದ್ಯೋಗದ ಅಸ್ಥಿರತೆ"ಯನ್ನು ತೆಗೆದು ಹಾಕುವುದು ಆರ್ಥಿಕ ಕಾರ್ಯನೀತಿಯ ಮುಖ್ಯೋದ್ದೇಶವಾಗಿರಬೇಕೆಂದೂ ಹೆಚ್. ಎಸ್. ವಾಕ್ಸ್‌ವೇಲ್ ದೃಢ ಅಭಿಪ್ರಾಯ[1] ಪಟ್ಟಿದ್ದಾರೆ. ನಿರುದ್ಯೋಗವನ್ನು ಕುರಿತ ಮೊದಲನೆಯ ಗ್ರಂಥ ಪ್ರಕಟವಾದದ್ದು ೧೯೦೯ರಲ್ಲಿ, ಲಾರ್ಡ್‌ಬೆವರಿಜರಿಂದ. "ನಿರುದ್ಯೋಗ: ಉದ್ಯಮದ ಒಂದು ಸಮಸ್ಯೆ" ಎಂದು ಈ ಗ್ರಂಥದ ಹೆಸರು. ಇದರಲ್ಲಿ ಬೇರೆ ಬೇರೆ ರೀತಿಯ ನಿರುದ್ಯೋಗಗಳನ್ನೂ ಅವುಗಳ ಕಾರಣಗಳನ್ನೂ ವಿಂಗಡಿಸಲಾಗಿದೆ. ಅವುಗಳ ಬಗ್ಗೆ ವಿವರಣೆಯಿದೆ. ಉಗ್ರಸ್ವರೂಪದ ಚಕ್ರಗತಿಯಲ್ಲಿ ಆವರ್ತಿಸುವ ಬದಲಾವಣೆಗಳ ಜಾಡ್ಯನಿವಾರಣೆಗೆ ಲೋಕೋಪಯೋಗಿ ಕಾಮಗಾರಿಗಳ ಕಾರ್ಯನೀತಿಗಳನ್ನು ರೂಪಿಸಿಕೊಳ್ಳುವುದೇ ಔಷಧವೆಂದು ಸಹ ಅವನು ಸಲಹೆ ಮಾಡಿದ. ಆದರೆ ಲೋಕೋಪಯೋಗಿ ಕಾಮಗಾರಿಗಳಿಂದ ನಿರುದ್ಯೋಗ ನಿವಾರಣೆಯಾಗದೆಂಬುದು ಆರ್. ಜಿ. ಹಾಟ್ರಿಯ ಅಭಿಪ್ರಾಯ. ನಿರುದ್ಯೋಗವೆಂಬ ಈ ಶತ್ರುವನ್ನು ಸಾರ್ವಜನಿಕ ನಿಯೋಜನೆಯೆಂಬ ಆಯುಧದಿಂದಲೇ ಸಂಹಾರ ಮಾಡಬಹುದೆಂಬುದು ಕೇನ್ಸ್,

1 ಪೆಟಿಯೆಂಬವನ ಅಭಿಪ್ರಾಯ ಹೀಗಿದೆ: "ಸಾವಿರ ಜನರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳದೆ, ಅವರು ದುಡಿಯುವ ಕಾರ್ಯಪ್ರವೃತ್ತಿಯನ್ನು ಅವರು ಕಳೆದುಕೊಳ್ಳುವಂತೆ ಮಾಡುವುದಕ್ಕಿಂತ, ಆ ಸಾವಿರ ಜನರ ದುಡಿಮೆಯ ಫಲವನ್ನೊಮ್ಮೆ ಸುಟ್ಟುಬಿಡುವುದೇ ಲೇಸು."

ಹೆಂಡರ್ಸನ್, ರಾಬರ್ಟ್‌ಸನ್ ಮುಂತಾದ ಉದಾರವಾದಿಗಳ ಅಭಿಪ್ರಾಯ. ಒಟ್ಟಿನಲ್ಲಿ ನಿರುದ್ಯೋಗದ ಕಾರಣವನ್ನು ಕುರಿತ ಮೂರು ವಿಚಾರ ಪಂಥಗಳಿದ್ದುವು. "ವ್ಯಾಪಾರ ಸ್ವಾತಂತ್ರ್ಯ"ವನ್ನು—ಎಂದರೆ ಅಬಾಧಿತ ಸ್ಪರ್ಧೆ ಮತ್ತು ವ್ಯಾಪಾರ ನೀತಿಯನ್ನು—ಅನುಸರಿಸದಿರುವುದರಿಂದ ಲಭಿಸುವ ಶಿಕ್ಷೆಯೇ ನಿರುದ್ಯೋಗ—ಎಂದು ಒಂದು ಪಂಥ. ವ್ಯಾಪಾರ ಚಕ್ರಗಳ ಪರಿಣಾಮವಾಗಿ ನಿರುದ್ಯೋಗ ಸಂಭವಿಸುತ್ತದೆ—ಎಂದು ಎರಡನೆಯ ಪಂಥ ವರ್ಣಿಸಿತು. ಅಲ್ಲದೆ ನಿರುದ್ಯೋಗ ಪರಿಸ್ಥಿತಿ ಬಹುಮಟ್ಟಿಗೆ ಅನಿವಾರ್ಯ; ಇದು ಮಿತವಾಗಿದ್ದಲ್ಲಿ ಹಿತಕರವಾಗಿಯೂ ಇರಲು ಸಾಧ್ಯ ಎಂಬುದು ಈ ಪಂಥದ ಅಭಿಪ್ರಾಯ. ಬಳಿಕೆ, ನಿಯೋಜನೆಗಳ ವೆಚ್ಚದ ಕೊರತೆಯ ಫಲವಾಗಿ, ಬೇಡಿಕೆಯ ಇಳಿತಾಯವೇ ನಿರುದ್ಯೋಗಕ್ಕೆ ಕಾರಣವೆಂಬುದು ಮೂರನೆಯ ಪಂಥದ ವಾದ.

"ವ್ಯಾಪಾರಸ್ವಾತಂತ್ರ್ಯ" ನೀತಿಯನ್ನನುಸರಿಸದ್ದರಿಂದ ಲಭಿಸುವ ಶಿಕ್ಷೆಯೇ ನಿರುದ್ಯೋಗ ಎಂದು ಹೇಳುವವರು, ಏಕಸ್ವಾಮ್ಯ ವೃತ್ತಿ ಸಂಘ ವ್ಯವಹಾರಗಳಿಂದಾಗಿ ಮತ್ತು ನಿರುದ್ಯೋಗಿಗಳಿಗೆ ನೀಡುವ ಪಡಿಭಿಕ್ಷ ಪದ್ಧತಿ (Dole System)ಯಿಂದಾಗಿ ಕೂಲಿ ದರಗಳು ಏರಿರುವುವೆಂದು ವಾದಿಸುತ್ತಾರೆ. ಈ ನಿರ್ಬಂಧಗಳನ್ನು ತೆಗೆದುಹಾಕಿದಾಗ ಸ್ಪರ್ಧೆ ಹೆಚ್ಚಿ, ಹೆಚ್ಚು ಹೆಚ್ಚು ಮಂದಿ ಕಾರ್ಮಿಕರನ್ನು ನೇಮಕಮಾಡಿಕೊಳ್ಳಲೂ ಹೆಚ್ಚು ಲಾಭಗಳಿಸಲೂ ಉದ್ಯಮಿಗಳಿಗೆ ಸಾಧ್ಯವಾಗುವುದೆಂದೂ ಕೂಲಿ ದರಗಳ ಮಟ್ಟ ಇಳಿಯುವುದೆಂದೂ ಇವರ ವಾದ. ಇನ್ನು ವ್ಯಾಪಾರ ಅನಿರ್ಬಂಧವಾಗಿ ನಡೆಯುವಂತೆ ಬಿಟ್ಟಲ್ಲಿ ಸ್ಪರ್ಧೆ ಮಾರುಕಟ್ಟೆಯ ಶಕ್ತಿಗಳ ಪರಸ್ಪರ ಘರ್ಷಣೆಯ ಪರಿಣಾಮವಾಗಿ ಸಮತೋಲಸ್ಥಿತಿ ಸ್ವಭಾವಿಕವಾಗಿ ಉಂಟಾಗುವುದೆಂದೂ ಒಂದು ದೇಶದಲ್ಲಿ ದೊರೆಯುವ ನೈಸರ್ಗಿಕ ಸಾಧನಸಂಪತ್ತು, ಉತ್ಪಾದನಸಂಪತ್ತು ಮತ್ತು ಉತ್ಪಾದಕ ಸಾಮಗ್ರಿಗಳಿಗನುಸಾರವಾಗಿ, ಉದ್ಯೋಗಾರ್ಹರೆಲ್ಲ ಉದ್ಯೋಗದಲ್ಲಿ ನೇಮಕಹೊಂದುವರೆಂದೂ ಇವರ ವಾದ.

ಆದರೆ ವಾಸ್ತವಾಂಶಗಳು ಮೇಲಿನ ವಾದವನ್ನು ಸಮರ್ಥಿಸುವುದಿಲ್ಲ. ಪರಿಪೂರ್ಣ ಸ್ಪರ್ಧೆ ಇರುವ ಮಾರುಕಟ್ಟೆಗಳೇ ಇಲ್ಲ. ಆದಕಾರಣ, ನಿರ್ಬಂಧಗಳನ್ನೆಲ್ಲ ತೆಗೆದುಹಾಕಿದಲ್ಲಿ ಎಲ್ಲವೂ ತಾನೇ ತಾನಾಗಿ ಸರಿಹೋಗುವುದೆಂದು ಭಾವಿಸುವುದು ಸರಿಯಲ್ಲ. ಈ ವಾದ ಸಾಮಾನ್ಯ ವ್ಯಾಪಾರಿಯ ವಾದ. ಕಡಿಮೆ ಕೂಲಿಯಿಂದ ಬೆಲೆಗಳು ಕಡಿಮೆಯಾಗುವುವೆಂದೂ ಅದರಿಂದಾಗಿ ಕಡಿಮೆ ದರಗಳಲ್ಲಿ ತಾನು ಹೆಚ್ಚು ಪ್ರಮಾಣದಲ್ಲಿ ಮಾರಾಟಮಾಡಬಹುದೆಂದೂ ಹೀಗಾದಲ್ಲಿ ತಾನು ಹೆಚ್ಚು ಮಂದಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡಬಹುದೆಂದೂ, ಆತನ ಅಭಿಪ್ರಾಯ. ಎಲ್ಲ ನಿಯೋಜಕರೂ ಹೀಗೆ ಮಾಡಿದಲ್ಲಿ ಹೊಸ ಮಟ್ಟಗಳಲ್ಲಿ ಕೂಲಿಗಳ ಹೊಂದಾಣಿಕೆ ಆಗುವುದೇ ವಿನಾ ಹೆಚ್ಚು ಮಂದಿಗೆ ಉದ್ಯೋಗಾವಕಾಶ ದೊರೆಯದು. ಅಲ್ಲದೆ, ಲಾಭಗಳಿಕೆಯ ಪ್ರಮಾಣ ಕಡಿಮೆಯಾಗುವ ಸಂದರ್ಭವಿದೆ.

ಹೊಸ ಬಂಡವಾಳ ನಿಯೋಜನೆಗಳಿಗೆ ಅವಕಾಶವಿರದ ಕಾರಣ ಕೊನೆಗೆ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುವುದೇ ಹೊರತು ಕಡಿಮೆಯಾಗದು. ಆದಕಾರಣ ಇದು ಭ್ರಮೆ.

ವ್ಯಾಪಾರಚಕ್ರಗಳ ಪರಿಣಾಮವೇ ನಿರುದ್ಯೋಗವೆಂದು ವಾದಿಸುವವರು, ಉದ್ಯೋಗದಲ್ಲಿ ನಿಯತಕಾಲಿಕ ಬದಲಾವಣೆಗಳನ್ನೇ ಮುಂದೊಡ್ಡುತ್ತಾರೆಯೇ ಹೊರತು ಸಾಮಾನ್ಯ ನಿರುದ್ಯೋಗ ಪರಿಸ್ಥಿತಿಯ ಬಗ್ಗೆ ಕಾರಣಗಳನ್ನು ವಿವರಿಸುವುದಿಲ್ಲ. ಉದ್ದಿಮೆದಾರರೊಳಗೆ ಹೆಚ್ಚು ಪೈಪೋಟಿಯಿಂದಾಗಿ ವ್ಯಾಪಾರದಲ್ಲಿ ವೃದ್ಧಿ-ಕುಸಿತಗಳು ಸಂಭವಿಸಬಹುದು. ಇದರ ಪರಿಣಾಮವಾಗಿ, ಸಾಧನ ಸಂಪತ್ತಿಯ ಮತ್ತು ಜನಸಮುದಾಯದ ಬೇಡಿಕೆಗಳ ದೃಷ್ಟಿಯಿಂದ ಸಮರ್ಥನೀಯವಾಗಿರುವುದಕ್ಕಿಂತ ಅಧಿಕವಾಗಿ, ಬೇಡಿಕೆಗಳ ನಿರೀಕ್ಷಣೆಯ ದೃಷ್ಟಿಯಿಂದಲೇ ಅಧಿಕ ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುವುದು; ಅಥವಾ, ಅಂಥ ವೃದ್ಧಿ ಮತ್ತು ಕುಸಿತಗಳು ಮಾರ್ಶಲ್, ಪಿಗೂ, ಲ್ಯಾವಿಂಗ್ಟನ್—ಇವರು ಅಭಿಪ್ರಾಯಪಟ್ಟಂತೆ, ಉದ್ಯಮ ಮತ್ತು ವ್ಯಾಪ್ಯಾರಕ್ಷೇತ್ರದ ಧುರೀಣರ ಮನಸ್ಸಿನಲ್ಲಿ ಏಳುವ ಆಕಾಂಕ್ಷೆ ನಿರಾಸೆಗಳ ಅಲೆಗಳ ಪರಿಣಾಮಗಳಾಗಿರಬಹುದು. ಏನೇ ಇದ್ದರೂ ಅಂಥ ನಿಯತಕಾಲಿಕ ನಿರುದ್ಯೋಗ ಹಿತಕರವಾಗಿರುವುದೆಂಬ ಅಭಿಪ್ರಾಯವನ್ನು ಎಲ್ಲ ವಿಚಾರಪರ ಅರ್ಥಶಾಸ್ತ್ರಜ್ಞರೂ ವಿರೋಧಿಸಿದ್ದಾರೆ. ಅದೂ ಅಲ್ಲದೆ, ಅಂಥ ವ್ಯಾಪಾರಚಕ್ರಗಳು ದಕ್ಷನಲ್ಲದ ಉತ್ಪಾದಕನನ್ನು ವ್ಯಾಪಾರಕ್ಷೇತ್ರದಿಂದ ಹೊರಗೆ ಹಾಕುವ ಬಗ್ಗೆ ಸ್ವಾಭಾವಿಕವಾಗಿ ಸಹಾಯಕವಾಗಿರುತ್ತವೆಂದು ಹೇಳಲು ಸಾಧ್ಯವಿಲ್ಲ. ವಾಸ್ತವವಾಗಿ ಹೊರಗೆ ಹೋಗುವವನು ಕನಿಷ್ಠ ದಕ್ಷತೆಯ ಉತ್ಪಾದಕನಲ್ಲ. ಕಡಿಮೆ ಹಣದ ಬಲ ಇರುವವನು.

ನಿರುದ್ಯೋಗದ ಸಮಸ್ಯೆಯ ಬಗ್ಗೆ ಇನ್ನೂ ಆಧುನಿಕ ಮತ್ತು ವಿವೇಕಪೂರ್ಣ ಪರಿಶೀಲನೆ ನಡೆಸಲು ಈಗ ಅನುವಾಗಿದ್ದೇವೆ. ಪದಾರ್ಥಗಳ ಬೇಡಿಕೆಯ ಕೊರತೆ, ಉಳಿತಾಯ ನಿಯೋಜನೆಗಳ ನಡುವೆ ಅಸಮತೆ—ಈ ಕಾರಣಗಳಿಂದಾಗಿ ನಿರುದ್ಯೋಗ ಸಂಭವಿಸುವುದೆಂಬುದು ಈಗ ದೃಢಪಟ್ಟಿದೆ.

ಉಳಿತಾಯಗಳು ಮತ್ತು ವಿನಿಯೋಗ, ಬಳಕೆ ಮತ್ತು ಉತ್ಪಾದನೆ ಒಂದನ್ನೊಂದು ಅನುಸರಿಸಿದಲ್ಲಿ ನಿರುದ್ಯೋಗವಿರುವುದಿಲ್ಲ.

ಕಳೆದ ಯುದ್ಧದಿಂದಾಗಿ ನಿರುದ್ಯೋಗ ಸಮಸ್ಯೆಯ ಬಗ್ಗೆ ಅರ್ಥಶಾಸ್ತ್ರಜ್ಞರ ಪರಿಶೀಲನೆಯ ದೃಷ್ಟಿಕೋನ ಸಂಪೂರ್ಣ ಬದಲಾವಣೆ ಹೊಂದಿತು. ಯುದ್ಧಕಾಲದಲ್ಲಿ ಪೂರ್ಣೋದ್ಯೋಗದ ಸ್ಥಿತಿ ನಿರ್ಮಿಸಲು ಸಾಧ್ಯವೆಂಬುದನ್ನು ಎಲ್ಲರೂ ಅರಿತರು. "ಯುದ್ಧಕಾಲದಲ್ಲಿ ಎಲ್ಲರಿಗೂ ಕೆಲಸಕೊಡಲು ಸಾಧ್ಯವಿದ್ದಲ್ಲಿ, ಶಾಂತಿ ಕಾಲದಲ್ಲಿಯೂ ಎಲ್ಲರೂ ಕೆಲಸವನ್ನೇಕೆ ಹೊಂದಿರಬಾರದು?" ಇದು ಆಗ ಉದ್ಭವಿಸಿದ ಸಹಜಪ್ರಶ್ನೆ. ಇನ್ನೂ ಈ ಪ್ರಶ್ನೆಗೆ ಉತ್ತರ ಕೊಡದೆ ಇರಲು ಸಾಧ್ಯವಿರಲಿಲ್ಲ.

ಆದುದರಿಂದ ಕಡ್ಡಾಯ ನಿರುದ್ಯೋಗದ ಅವಧಿಗಳನ್ನು ಆದಷ್ಟು ಕಡಿಮೆ ಮಾಡುವಂಥ ಪರಿಸ್ಥಿತಿಯನ್ನು ನಿರ್ಮಿಸುವ ಸಲುವಾಗಿ "ಪೂರ್ಣ ಉದ್ಯೋಗ"ದ ಘೋಷಣೆ ಹೊರಬಿತ್ತು. ಯುದ್ಧಕಾಲದಲ್ಲಿ, ಸಮಾಜವಾದಿಯಲ್ಲದ ದೇಶಗಳಲ್ಲೂ ವಿದೇಶೀ ವ್ಯಾಪಾರ ಮತ್ತು ಆರ್ಥಿಕ ನಿಯಂತ್ರಣ, ಕೂಲಿ ಮತ್ತು ಬೆಲೆ, ಕಾರ್ಮಿಕಮಾರುಕಟ್ಟೆ, ಉಳಿತಾಯ, ಬಂಡವಾಳ ನಿಯೋಜನೆ ಮುಂತಾದವು ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟದ್ದರಿಂದ ವಾಸ್ತವಿಕವಾಗಿ ಅತಿ-ಉದ್ಯೋಗ ಪರಿಸ್ಥಿತಿಯುಂಟಾಯಿತು. ಉದ್ಯಮದಾರರು ಬಳಸುವ ಕಾರ್ಮಿಕಶಕ್ತಿಯ, ಸಾಧನ ಸಾಮಗ್ರಿಗಳ ಮತ್ತು ಕಾರ್ಖಾನೆಯ ಸ್ಥಳದ ಮೇಲೆ ಸರ್ಕಾರ ಅನೇಕ ನೇರವಾದ ನಿಯಂತ್ರಣಗಳನ್ನು ಇಟ್ಟುಕೊಂಡಿತು. ಅಲ್ಲದೆ ಚಾಲ್ತಿಯಲ್ಲಿದ್ದ ಕೂಲಿಯ ಮಟ್ಟದಲ್ಲಿ, ನಿರ್ದಿಷ್ಟ ಉದ್ಯಮಗಳಲ್ಲಿ ಮತ್ತು ವಲಯಗಳಲ್ಲಿ ಕೆಲಸಮಾಡಬೇಕೆಂದು ಸಹ ಅದು ಒತ್ತಾಯಪಡಿಸಿತು. ಇವೆಲ್ಲದರ ಪರಿಣಾಮವಾಗಿ, ಯುದ್ಧದಲ್ಲಿ ತೊಡಗಿದ್ದ ಸಮಸ್ತ ದೇಶಗಳಿಂದ ನಿರುದ್ಯೋಗ ನಿರ್ಮೂಲವಾಯಿತು.

ಯುದ್ಧಾನಂತರಕಾಲದಲ್ಲಿ ಬೆಲೆಗಳು ಏರುವ ಪ್ರವೃತ್ತಿ ತೋರಿದುವಲ್ಲದೆ ಮತ್ತೆ ವ್ಯಾಪಾರ ಚಕ್ರದ ಆವರ್ತನೆಯಾಗುವುದೆಂದೂ ಕುಸಿತದ ಪರಿಸ್ಥಿತಿ ತಲೆದೋರುವುದೆಂದೂ ಶಂಕಿಸಲಾಗಿತ್ತು. ಹಣದ ಉಬ್ಬರ,ಬೆಲೆ ಇಳಿತ—ಇವುಗಳ ನಡುವೆ ಸುರಕ್ಷಿತ ಮಾರ್ಗ ಅನುಸರಿಸಲು ಸರ್ಕಾರಗಳು ಹೆಣಗುತ್ತಿವೆ. ಅನೇಕ ದೇಶಗಳಲ್ಲಿ ಕೆಲವರ್ಷಗಳಿಂದೀಚೆಗೆ ಜನ್ಮತಾಳಿರುವ ಪಂಚವಾರ್ಷಿಕ ಯೋಜನೆಗಳು ಇದಕ್ಕೆ ಸಾಕ್ಷಿ.

ನಿರುದ್ಯೋಗನಿವಾರಣೆಯ ಬಗ್ಗೆ ಕ್ರಮ ಕೈಗೊಳ್ಳುವ ಹೊಣೆಗಾರಿಕೆ ರಾಷ್ಟ್ರದ್ದೇ ಎಂಬುದು ಇಂದು ಸಾಮಾನ್ಯವಾಗಿರುವ ನಂಬಿಕೆ. "ರಾಷ್ಟ್ರದ ಜವಾಬ್ದಾರಿಗಳನ್ನು ಮತ್ತು ಅಧಿಕಾರಗಳನ್ನು ಬಹುಮಟ್ಟಿಗೆ ವಿಸ್ತೃತಗೊಳಿಸಿದ ಹೊರತು ಸಂಪೂರ್ಣ ಉದ್ಯೋಗ ಪರಿಸ್ಥಿತಿ ಪ್ರಾಪ್ತವಾಗಲಾರದು ಮತ್ತು ಮುಂದುವರಿದುಕೊಂಡು ಹೋಗಲಾರದು" ಎಂಬುದು ಲಾರ್ಡ್ ಬೆವರಿಜ್ ಅಭಿಪ್ರಾಯ. ಏನೇ ಇರಲಿ, ಉದ್ಯೋಗಾವಕಾಶಗಳನ್ನು ಹೆಚ್ಚಿಸುವಂಥ ಪೂರ್ಣೋದ್ಯೋಗದ ಕಲ್ಪನೆ ಸಹಜವಾಗಿ ಪ್ರಪಂಚದಲ್ಲೆಲ್ಲ ಯೋಜಕರ, ಸಿದ್ಧಾಂತಿಗಳ ಮತ್ತು ರಾಜನೀತಿಜ್ಞರ ಮನಸ್ಸನ್ನು ಆಕರ್ಷಿಸಿದೆ. ಭಾರತದ ಸಂವಿಧಾನದಲ್ಲಿ ಸಹ ಸಾಕಷ್ಟು ಜೀವನೋಪಾಯಸಾಧನ ಕಲ್ಪಿಸುವುದು ರಾಷ್ಟ್ರದ ಕಾರ್ಯನೀತಿಯ ನಿರ್ದೇಶಕ ತತ್ವಗಳಲ್ಲಿ ಒಂದೆಂದು ವಿಧಿಸಲಾಗಿದೆ.

ನಿರುದ್ಯೋಗ ಸಮಸ್ಯೆಯನ್ನು ಭಾರತ ಸರ್ಕಾರವೂ ಎದುರಿಸಬೇಕಾಗಿದೆ. ಈ ಸವಾಲನ್ನು ಭಾರತ ಸರ್ಕಾರ ಅಂಗೀಕರಿಸುವ ಲಕ್ಷಣಗಳಿದ್ದರೂ, ಕಾರ್ಯತಃ ಇದನ್ನು ಪರಿಹರಿಸಲು ಸಮರ್ಥವಿರುವುದೆಂದು ಭಾವಿಸಲಾದ ಮತ್ತು ನಿಶ್ಚಿತವಾದ ಒಂದು ಕಾರ್ಯಕ್ರಮವನ್ನಿನ್ನೂ ಸೂತ್ರೀಕರಿಸಬೇಕಾಗಿದೆ.

ಕೆ. ಆರ್. ರಂಗಾಚಾರ್

ಮಾನವಭೂಗೋಳದ ಸ್ವರೂಪ

ಭೂಮಿಯ ಜನ್ಮದಂದು ಭೂಗೋಳಶಾಸ್ತ್ರದ ವಸ್ತುವೂ ಜನಿಸಿತು. ಕಪಿರೂಪದಿಂದ ಮಾನವನ ವಿಕಾಸವಾದಾಗ ಮಾನವಭೂಗೋಳ ಜನಿಸಿತು. ಪ್ರತಿಯೊಂದು ವಸ್ತುವಿಗಾಗಿಯೂ, ಪ್ರತಿಯೊಂದು ಆವಶ್ಯಕತೆಗಾಗಿಯೂ ಅವನು ಭೂಮಿಯನ್ನೇ ಆಶ್ರಯಿಸಬೇಕು. ಮಾನವನ ಪ್ರತಿಯೊಂದು ಕಾರ್ಯಾಚರಣೆಯಲ್ಲೂ ಭೂಮಿ ತನ್ನ ಸ್ಥಾನದ ಹಿರಿಮೆಯನ್ನೂ ಸಹಾಯದ ಮಹತ್ವವನ್ನೂ ತೋರಿಸಿಕೊಟ್ಟಿದೆ. ಮಾನವನಿಗೂ ಭೂಮಿಗೂ ಇರುವ ಸಂಬಂಧದ ವೈಜ್ಞಾನಿಕ ವಿವೇಚನೆಯೇ ಮಾನವಭೂಗೋಳ; ಭೌತಿಕ, ಜೈವಿಕ ಹಾಗೂ ನಿರ್ಜೀವ ವಸ್ತುಗಳ ಸೃಷ್ಟಿ ಹಾಗೂ ಲಯಗಳಿಂದ ಕೂಡಿರುವ ಭೂವಾತಾವರಣಕ್ಕೆ ಸಂಬಂಧಿಸಿದಂತೆ ಮನುಷ್ಯನ ಕಾರ್ಯಕ್ರಮಗಳ ವಿಶೇಷ ಅಧ್ಯಯನ.

ಭೂಮಿಯ ಮೇಲಿರುವ ಪರ್ವತ, ಮೈದಾನ, ನದಿಗಳೂ, ಭೂಕಂಪವೇ ಮುಂತಾದ ಪ್ರಾಕೃತಿಕ ವ್ಯಾಪಾರಗಳು ಮನುಷ್ಯನ ಹತೋಟಿಗೆ ಹೊರತಾಗಿರುವುವು. ಪ್ರಕೃತಿ ಇವೆಲ್ಲವನ್ನೂ ತನ್ನ ಅಧೀನದಲ್ಲಿಟ್ಟುಕೊಂಡಿದೆ–ಇದೇ ಪ್ರಾಕೃತಿಕ ಭೂಗೋಳ. ಮನೆ, ನಗರ, ಹಳ್ಳಿ, ವ್ಯವಸಾಯ, ಗಣಿ, ಕಾರ್ಖಾನೆ, ಬಸ್ಸು—ಇವು ಮನುಷ್ಯನಿಂದ ನಿರ್ಮಾಣವಾದವು. ಇವುಗಳ ಮೇಲೆ ಪ್ರಕೃತಿಯ ಹತೋಟಿಯಿದ್ದರೂ, ಮನುಷ್ಯನಿಲ್ಲದಿದ್ದಲ್ಲಿ ಇವುಗಳೂ ಇಲ್ಲ—ಇದು ಮಾನವಭೂಗೋಳದ ನಿಜಸ್ವರೂಪ. ಇವೆರಡೂ ಭೂಗೋಳಶಾಸ್ತ್ರದ ಎರಡು ಕಣ್ಣುಗಳು.

ಸಾಂಸ್ಕೃತಿಕ ವಲಯದ ಅಧ್ಯಯನವೇ ಮಾನವಭೂಗೋಳ. ಮಾನವನ ಮುನ್ನಡೆಯನ್ನಳೆಯುವ ಶಾಸ್ತ್ರಗಳಾದ ಇತಿಹಾಸ ಅರ್ಥಶಾಸ್ತ್ರಗಳೇ ಮುಂತಾದವುಗಳೊಡನೆ ಇವು ಸಮಾನಸ್ಥಾನ ಪಡೆದಿದೆ.

ಮಾನವ ಒಂದು ಪ್ರದೇಶದಲ್ಲಿ ವಾಸಿಸಿ, ಅಲ್ಲಿನ ಉತ್ಪನ್ನಗಳನ್ನು ಉಪಯೋಗಿಸಿಕೊಂಡು, ಆ ಪ್ರದೇಶದ ಮೇಲೆ ತನ್ನ ಸಾಂಸ್ಕೃತಿಕ ಲಕ್ಷಣಗಳನ್ನು ಅಚ್ಚೊತ್ತುತ್ತಾನೆ. ಆದ್ದರಿಂದ ಅಲ್ಲಿನ ವಸ್ತುವೈವಿಧ್ಯಲಕ್ಷಣಗಳು ಸ್ಪಷ್ಟವಾಗಿರುತ್ತವೆ. ಒಂದು ಪ್ರದೇಶವನ್ನು ವಾಸಯೋಗ್ಯ ಪ್ರದೇಶವನ್ನಾಗಿ ಮಾಡಲು ಅವನು

ಅನೇಕ ಬದಲಾವಣೆ ಮಾಡುತ್ತಾನೆ. ಸಂಚಾರಸೌಲಭ್ಯಕ್ಕಾಗಿ ಅನೇಕ ನಿರ್ಮಾಣ ಕಾರ್ಯ ಕೈಕೊಳ್ಳುತ್ತಾನೆ. ಇವನು ಹೀಗೆ ತನ್ನ ಆವಶ್ಯಕತೆಗಳ ಪೂರೈಕೆಗಾಗಿ ಉಪಯೋಗಿಸಿಕೊಂಡ ವಸ್ತುಗಳ ಅವಶೇಷಗಳು ಆಯಾ ಕಾಲಗಳ ಸಾಂಸ್ಕೃತಿಕ ಪ್ರತಿನಿಧಿಗಳಂತೆ ಕಂಡುಬರುತ್ತವೆ.

'ಅಭದ್ರಭೂಮಿ ಹಾಗೂ ಅವಿಶ್ರಾಂತ ಮಾನವನ ಮಧ್ಯೆ ಇರುವ ಬದಲಾಗುವ ಸತ್ಸಂಬಂಧದ ಅಧ್ಯಯನದ ವಿಷಯವೇ ಮಾನವಭೂಗೋಳ'–ಎಂದು ಕುಮಾರಿ ಸೆಂಪೆಲ್‌ರವರು ತಿಳಿಸುತ್ತಾರೆ.

ಮಾನವ ಭೂಮಿಯ ಮೇಲೆ ಎಷ್ಟೋ ವಸ್ತುಗಳನ್ನು ಸೃಷ್ಟಿಸಿ, ನಿರ್ಮಿಸಿ, ಸಂಶೋಧಿಸಿರುತ್ತಾನೆ. ಪ್ರಾಚೀನ ಕಾಲದ ಎಷ್ಟೋ ವಿಷಯಗಳು ಪ್ರಕೃತಿಯಿಂದ ನಿಯಂತ್ರಿತಗೊಂಡರೂ, ಮನುಷ್ಯನಿಯಂತ್ರಣದ ಪ್ರಭಾವ ಕಂಡುಬರುತ್ತದೆ.

ಒಂದೇ ರೀತಿಯ ಪ್ರಾಕೃತಿಕ ಪರಿಸ್ಥಿತಿಗಳಿದ್ದರೂ ಜನರಲ್ಲಿ ವಿಭಿನ್ನತೆ ಏಕೆ ಉಂಟಾಗುತ್ತದೆ—ಎಂಬ ಪ್ರಶ್ನೆಗೆ ಮಾನವಭೂಗೋಳ ಉತ್ತರಕೊಡುತ್ತದೆ. ಕೆಲವರು ಪ್ರಕೃತಿದತ್ತ ಅನುಕೂಲಗಳನ್ನು ಉಪಯೋಗಿಸಿಕೊಂಡು, ಅದು ಕೊಡುವ ಕಷ್ಟಗಳನ್ನು ಎದುರಿಸಿ, ಅಭಿವೃದ್ಧಿಹೊಂದುತ್ತಾರೆ. ಉಳಿದವರು ಪ್ರಕೃತಿಯ ಕಠಿಣ ನಡವಳಿಕೆಗೆ ಸೋಮಾರಿತನದಿಂದ ತಲೆಬಾಗುತ್ತಾರೆ. ಮಾನವಪ್ರಯತ್ನಗಳ ಸಾಧನೆಯೇ ಮಾನವಭೂಗೋಳ.

ಇದಲ್ಲದೆ ಮಾನವ ತಾನು ವಾಸಿಸುವ ಭೂಮಿಯ ಹೊರವಲಯಕ್ಕೆ ಯಾವ ಪ್ರತಿಕ್ರಿಯೆಯನ್ನೂ ತೋರದೆ ವಾಸಮಾಡಲಾರ. ಅದನ್ನು ಒಂದಲ್ಲ ಒಂದು ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಾನೆ. ಹಾಗೆ ಕಂಡುಬಂದ ಕುರುಹುಗಳು ಆ ಪ್ರದೇಶವನ್ನು ವಾಸಯೋಗ್ಯ ಪ್ರದೇಶವನ್ನಾಗಿ ಮಾಡಿದೆ.

ವ್ಯವಸಾಯ, ಪದಾರ್ಥೋತ್ಪಾದನೆ, ವ್ಯಾಪಾರ, ಗಣಿಗಾರಿಕೆ ಮತ್ತು ವಸತಿ, ವ್ಯವಸಾಯದ ಬಯಲುಗಳು, ರಸ್ತೆಗಳು, ಕಾರ್ಖಾನೆಗಳು, ಸಾಕಿದ ಪ್ರಾಣಿಗಳು ಇತ್ಯಾದಿ ಆರ್ಥಿಕತೆಗಳೊಂದಿಗೆ ಸೇರಿರುವ ಮಾನವೋಪಯೋಗಿ ಸಂಸ್ಕೃತಿಯ ಲಕ್ಷಣಗಳಾದ ಇವು ಮಾನವನ ಅಚ್ಚೊತ್ತುವಿಕೆಯ ಆಸಕ್ತಿಯನ್ನು ಕೆರಳಿಸಿ, ಮಾನವ (ಸಾಂಸ್ಕೃತಿಕ) ಭೂಗೋಳದ ಗುರಿಯಾಗಿಸುತ್ತದೆ—ಎಂದು ಫಿಂಚ್ ಮತ್ತು ಟ್ರಿವಾರ್ಥರವರು ತಮ್ಮ Elements of Geography ಎಂಬ ಕೃತಿಯಲ್ಲಿ ತಿಳಿಸಿದ್ದಾರೆ.

ಈ ಅರ್ಥದಲ್ಲಿ ಮಾನವಭೂಗೋಳದಲ್ಲಿ ಮನುಷ್ಯನಿಗೂ ಪರಿವೇಷ್ಟನಕ್ಕೂ ಇರುವ ಆರ್ಥಿಕ ಸಂಬಂಧವನ್ನು ಮಾತ್ರ ಸೇರಿಸಬಹುದಾಗಿದೆ. ಮಾನವ ಒಂದು ಗೊತ್ತಾದ ವಾತಾವರಣದಲ್ಲಿದ್ದು ತನ್ನ ಆವಶ್ಯಕತೆಗಳನ್ನು ಪೂರೈಸಿಕೊಂಡು, ಜೀವಿಕೆಯ ಉಪಾರ್ಜನ ಸಾಧನಗಳನ್ನು ಯಾವ ರೀತಿ ಅಳವಡಿಸಿಕೊಳ್ಳುತ್ತಾನೆಂಬುದು ಈ ಶಾಸ್ತ್ರದ ವ್ಯಾಪ್ತಿಗೆ ಒಳಪಟ್ಟಿರುವ ವಿಷಯ.

ಮಾನವಭೂಗೋಳ ಮಾನವನ ಸಾಂಸ್ಕೃತಿಕ ಚಟುವಟಿಕೆಗಳ ಇತಿಹಾಸ— ಎಂಬುದು ಇನ್ನೊಬ್ಬ ಶಾಸ್ತ್ರಜ್ಞನ ವಾಖ್ಯೆ.

ಎಲ್ಲ ಶಾಸ್ತ್ರಗಳಿಗಿರುವಂತೆ ಮಾನವಭೂಗೋಳಕ್ಕೂ ಕೆಲವು ಮೂಲ ಸಿದ್ಧಾಂತಗಳಿವೆ. ಭೂಗೋಳಶಾಸ್ತ್ರದ ಅಧ್ಯಯನ ಈ ಮೂಲತತ್ತ್ವಗಳನ್ನು ಅನುಸರಿಸಿದೆ. ಇವುಗಳಲ್ಲಿ ಮುಖ್ಯವಾದವು ಎರಡು :

1) ಪರಿವರ್ತನ ತತ್ತ್ವ (ಪ್ರಿನ್ಸಿಪಲ್ ಆಫ್ ಆಕ್ಟಿವಿಟಿ)
2) ಭೂವಲಯ ಏಕತಾ ತತ್ತ್ವ (ಪ್ರಿನ್ಸಿಪಲ್ ಆಫ್ ಟೆರಿಸ್ಟ್ರಿಯಲ್ ಯೂನಿಟಿ).

ಪರಿವರ್ತನ ತತ್ತ್ವ

ಪರಿವರ್ತನ ತತ್ತ್ವದ ಮೂಲವ್ಯಕ್ತಿ ಫ್ರಾನ್ಸಿನ ಸುಪ್ರಸಿದ್ಧ ಭೂಗೋಳಜ್ಞನಾದ ಜೀನ್ ಬ್ರ್ರುಷ್. ಈತ ತನ್ನ ಮಾನವಭೂಗೋಳ ಎಂಬ ಗ್ರಂಥಗಲ್ಲಿ ಈ ತತ್ತ್ವ ಪ್ರತಿಪಾದಿಸಿದ್ದಾನೆ.

ಜಗತ್ತಿನಲ್ಲಿ ಪ್ರತಿವಸ್ತುವೂ ಆಗಾಗ್ಗೆ ಹೊಸ ಹೊಸ ರೂಪ ತಳೆಯುತ್ತಿರುತ್ತದೆ. ಬದಲಾವಣೆ ಅಥವಾ ಪರಿವರ್ತನೆ ಅದರ ನೈಜಲಕ್ಷಣ. ಕೋಟ್ಯಂತರ ವರ್ಷ ಗಳಿಂದಲೂ ಇದು ನಡೆದುಬಂದಿರುವ ಪ್ರಾಕೃತಿಕ ನಿಯಮ. ಪರ್ವತಪ್ರದೇಶ ಕಾಲಾಂತರದಲ್ಲಿ ಪೀಠಭೂಮಿಯಾಗಿರುತ್ತದೆ, ಮುಂದೆ ಮೈದಾನವಾಗುತ್ತದೆ. ಯುವನದಿ (V) ಬರುಬರುತ್ತಾ U ಕಣಿವೆಗಳಿಂದ ಕೂಡಿರುವ ನದೀ ಪಾತ್ರವಾಗುತ್ತದೆ. ಹ್ವಾಂಗ್-ಹೋ ನದಿ ತನ್ನ ಪಾತ್ರವನ್ನು ಬದಲಾಯಿಸುತ್ತಾ ಹೋಗುತ್ತದೆ. ಈ ಶತಮಾನದಲ್ಲಿರುವ ಸಸ್ಯವರ್ಗ, ಪ್ರಾಣಿವರ್ಗ, ವಾಯುಗುಣ ಇವು ಹಿಂದಿನ ಶತಮಾನಗಳಲ್ಲಿ ಇರಲಿಲ್ಲ; ಮುಂದಿನ ಶತಮಾನಗಳಲ್ಲಿ ಕಂಡು ಬರುವುದೂ ಕಷ್ಟವೆ!

ಭೌತಿಕ ರೂಪದ ಆಂತರಿಕ ಶಕ್ತಿಯ ಪ್ರಭಾವದಿಂದ ಘನವಸ್ತುಗಳು ದೃಢತ್ವ ಮತ್ತು ಧಾರಣ ಸಾಮರ್ಥ್ಯಗಳನ್ನು ಪಡೆದಿದ್ದರೂ ಅದರ ಪೆಡಸುತನದಿಂದಾಗಿ ದೊಡ್ಡ ಪರ್ವತಗಳು ಬೆಟ್ಟಗಳಾಗಿ, ಬೆಟ್ಟಗಳು ಸಣ್ಣ ಬಂಡೆಗಳಾಗಿ, ಸಣ್ಣ ಬಂಡೆ ಗಳು ಮರಳಾಗಿ ಪರಿವರ್ತಿತವಾಗುತ್ತವೆ. ಜಡವಸ್ತುಗಳಲ್ಲಿ ಸಂಸಕ್ತತ್ವ ಹಾಗೂ ಸಂಲಗ್ನತ್ವಗಳು ಇಲ್ಲದಿದ್ದಲ್ಲಿ ಈ ಕಾರ್ಯ ಮತ್ತಷ್ಟು ಶೀಘ್ರವಾಗಿ ನಡೆದು, ಜಗತ್ತು ಎಂದೋ ಪ್ರಳಯಕ್ಕೆ ಕಾರಣವಾಗುತ್ತಿತ್ತು.

ಸೂರ್ಯನ ಪ್ರಭಾವದಿಂದ ವಾಯುಮಂಡಲದಲ್ಲಿ ಅನೇಕ ಬದಲಾವಣೆ ಗಳಾಗುತ್ತವೆ. ಮಳೆ, ಹಿಮ, ಬಿರುಗಾಳಿ—ಇತ್ಯಾದಿಗಳು ಉಂಟಾಗುವುದಲ್ಲದೆ, ಭೂಮಿಯ ಮೇಲ್ಭಾಗದಲ್ಲೂ ಅನೇಕ ಪರಿವರ್ತನೆಗಳಾಗುತ್ತವೆ. ಪ್ರಾಣಿ, ಸಸ್ಯ

ಹಾಗೂ ಮಾನವವರ್ಗಕ್ಕೆ ಸೂರ್ಯನೇ ಆಧಾರ. ಇದರಿಂದ ಭೂಮಿಯ ಮೇಲ್ಭಾಗದಲ್ಲುಂಟಾಗುವ ಎಲ್ಲ ರೀತಿಯ ಬದಲಾವಣೆಗಳಿಗೂ ಸೂರ್ಯನೇ ಕಾರಣ. ಗುರುತ್ವಾಕರ್ಷಣ ಶಕ್ತಿಯೂ ಈ ತತ್ತ್ವಪ್ರತಿಪಾದನೆಗೆ ಸಾಕಷ್ಟು ಸಹಾಯ ಮಾಡಿದೆ.

ಪ್ರಕೃತಿಯ ಶಕ್ತಿಗಳು ತಮ್ಮಷ್ಟಕ್ಕೆ ತಾವೇ ಕೆಲಸಮಾಡಬಲ್ಲವುಗಳಲ್ಲ. ಅವು ಒಂದರೊಡನೊಂದು ಸೇರಿಕೊಂಡು ಕಾರ್ಯಾಚರಣೆ ನಡೆಸುತ್ತವೆ. ಇದರಲ್ಲೂ ಒಂದು ರೀತಿಯ ಕ್ರಮಬದ್ಧತೆ ಇರುವುದು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಕಂಡು ಬರುವುದು. ಇದರ ಆಧಾರದ ಮೇಲೆ ಪರಿವರ್ತನ ಸಿದ್ಧಾಂತ ಚೇತನ ಜಗತ್ತಿಗೇ ಅಲ್ಲ; ಅಚೇತನ ಜಗತ್ತಿಗೂ ಕೂಡ ಸಂಬಂಧಪಟ್ಟದ್ದು—ಎಂದು ತಿಳಿದು ಬರುತ್ತದೆ.

ಉದಾಹರಣೆಗೆ ಪರ್ವತಗಳನ್ನು ತೆಗೆದುಕೊಳ್ಳಬಹುದು. ಪರ್ವತಗಳು ಪರಿವರ್ತಿತ ಘನಗಳಾಗಿರುವುದರಿಂದ, ಅವುಗಳ ನಿರ್ಮಾಣದಲ್ಲಿ ಆಂತರಿಕ ಹಾಗೂ ಬಾಹ್ಯಶಕ್ತಿಗಳು ಕಾರ್ಯಾಚರಣೆ ನಡೆಸಿ, ಬೇರೆ ಬೇರೆ ಅವಸ್ಥೆಗಳನ್ನು ದಾಟುವಂತೆ ಮಾಡುತ್ತವೆ. ಭೂಭಾಗ ಒಂದು ಗೊತ್ತಾದ ಆತ್ಮಕಥನವನ್ನು ಹೊಂದಿರುತ್ತದೆ. ನಿರಂತರ ಬದಲಾವಣೆಗಳ ಪರಂಪರೆಯನ್ನು ಅವು ತೋರಿಸುತ್ತವೆ. ಶೈಶವಾವಸ್ಥೆಯಿಂದ ಪ್ರಸ್ತುತ ರೂಪ ಹೇಗೆ ಹೊಂದುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು.

ಪರ್ವತಗಳ ವಿವಿಧ ಅವಸ್ಥೆಗಳನ್ನು ತರುಣ, ಪ್ರೌಢ ಮತ್ತು ವೃದ್ಧಾವಸ್ಥೆ ಎಂಬುದಾಗಿ ವಿಭಾಗಿಸಬಹುದು. ಈ ಅವಸ್ಥಾ ಸರಪಳಿ ಮಧ್ಯದಲ್ಲಿ ಕಳಚಿಬಿದ್ದರೆ, ಹೊಸರೂಪದ ಪರ್ವತಗಳಾಗಿ ಮತ್ತೆ ಅವಸ್ಥಾ ಪರಂಪರೆ ಪ್ರಾರಂಭವಾಗುತ್ತದೆ.

ನದಿಗಳೂ ಕೂಡ ಇದೇ ಸಿದ್ಧಾಂತದ ಪ್ರತಿಪಾದನೆ ಮಾಡುತ್ತವೆ. ಮಾನವ ಜೀವನದಂತೆ ಈ ನದಿಗಳೂ ಕೂಡ ಪ್ರಾರಂಭದಲ್ಲಿ ಲವಲವಿಕೆಯಿಂದ ಕೂಡಿದ್ದು ಅತಿ ಶೀಘ್ರವಾಗಿ ಹರಿಯುತ್ತ, ಮೈದಾನಕ್ಕೆ ಬಂದಕೂಡಲೆ ಯುವಕನಂತೆ ತುಸು ಗಂಭೀರವಾಗಿ ಮುಂದುವರೆದು, ಅನಂತರ ಪ್ರೌಢನಂತೆ ನಿಧಾನವಾಗಿ ಆಳವಾಗಿ ಅನುಭಾವಿಕವಾಗಿ ಹರಿಯುತ್ತಾ, ಅಂತ್ಯದಲ್ಲಿ ವೃದ್ಧನಂತೆ ಬಹಳ ನಿಧಾನವಾಗಿ ಅನೇಕ ಕವಲುಗಳಾಗಿ ಹರಿದು ಸಮುದ್ರ ಸೇರುತ್ತವೆ. ಪರಿವರ್ತನೆ ನದಿಯ ಹುಟ್ಟುಗುಣವೆಂದು ಇದರಿಂದ ತಿಳಿದುಬರುತ್ತದೆ.

ಸೂರ್ಯನ ಪ್ರಭಾವದಿಂದ ವಾಯುಗೋಳ ಕೆಲವು ಕಡೆ ಅತಿ ಉಷ್ಣವೂ, ಕೆಲವು ಕಡೆ ಅತಿ ಶೀತವೂ ಆಗಿರುತ್ತದೆ. ಅಂತೆಯೇ ಸಸ್ಯ ಹಾಗೂ ಪ್ರಾಣಿವರ್ಗಗಳು ಪರಿವರ್ತನ ವಾದದ ಬಲೆಯಲ್ಲಿ ಸಿಲುಕಿವೆ. ಮರಗಿಡಗಳು ಇಂದು ಯಾವ ಸ್ಥಿತಿಯಲ್ಲಿರುತ್ತವೆಯೋ, ನಾಳೆ ಅದೇ ಸ್ಥಿತಿಯಲ್ಲಿರುವುದಿಲ್ಲ. ಶೈಶವ, ತರುಣ ಹಾಗೂ ವೃದ್ಧಾವಸ್ಥೆಗಳನ್ನು ಚಕ್ರರೂಪದಲ್ಲಿ ಇವು ಹೊಂದುತ್ತವೆ. ವಸಾಹತು

ನಿರ್ಮಾಣದಲ್ಲೂ ಇದೇ ರೀತಿಯ ಬದಲಾವಣೆಗಳು ಕಂಡುಬರುತ್ತವೆ. ಹಳ್ಳಿಯಾಗಿದ್ದುದು ಗ್ರಾಮವಾಗಿ, ನಗರವಾಗಿ, ಅನಂತರ ದೊಡ್ಡ ಪಟ್ಟಣವಾಗಿ ಪರಿವರ್ತಿತವಾಗುತ್ತದೆ. ಈ ರೀತಿ ಈ ತತ್ತ್ವ ಮಾನವ ಹಾಗೂ ನಗರ ನಿರ್ಮಾಣ ಜೀವನದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಒಟ್ಟಿನಲ್ಲಿ ಪ್ರತಿ ಮಾನವಕ್ರಿಯೆಯೂ ಈ ಸಿದ್ಧಾಂತಕ್ಕೆ ಅನುಸಾರವಾಗಿ ನಡೆಯುತ್ತದೆ. ಬ್ರುನ್ಹ್ ನ ಮಾತುಗಳಲ್ಲಿ ಹೇಳಬೇಕಾದರೆ—'ಮಾನವನ ಇಂದ್ರಿಯಗೋಚರ ವಿಷಯಗಳಾದ ಅಪಕರ್ಷಣ (ತಿರೋಗತಿ), ಉತ್ಕರ್ಷಣ (ಪ್ರಗತಿ)ಗಳು ಭೂಮಿಯ ಇತರ ವಿಷಯಗಳಂತೆ ಸ್ಥಿರವಾದವುಗಳಲ್ಲ. ಅವು ಒಂದು ನಿರ್ಧಾರಿತ ಚಲನೆ ಹೊಂದಿರುತ್ತವೆ. ಅವುಗಳ ಚಲನೆಯ ತೀಕ್ಷ್ಣತೆಯನ್ನು ನಾವು ನಿರ್ಧರಿಸಬೇಕಾಗುತ್ತದೆ. ಭೌಗೋಳಿಕ ವಿಷಯಗಳನ್ನು ಅವಲೋಕಿಸುವವರು ಇದೇ ಮನೋಭಾವ ಹೊಂದಿರುವವರು ಭೌತಿಕಾವಸ್ಥೆಯ ವಿಷಯಗಳಂತೆ ಮಾನವಾವಸ್ಥೆಯ ವಿಷಯಗಳೂ ಉತ್ಕರ್ಷಣೆಯಂತೆ ಸತ್ಯವಾದವು.

ಭೂವಲಯ ಏಕತಾ ತತ್ತ್ವ

ಇದನ್ನು ಪರಸ್ಪರ ಸಂಬಂಧ ತತ್ತ್ವ (ಪ್ರಿನ್ಸಿಪಲ್ ಆಫ್ ಇಂಟರ್-ಕನೆಕ್ಷನ್) ಎಂದೂ ಕರೆಯುತ್ತಾರೆ.

ಪ್ರಪಂಚದ ಎಲ್ಲ ಭೌಗೋಳಿಕ ಚೇತನಾತ್ಮಕ ಹಾಗೂ ಅಚೇತನಾತ್ಮಕ ತಥ್ಯಗಳು ಒಂದನ್ನೊಂದು ಅವಲಂಬಿಸಿರುತ್ತವೆ. ಯಾವ ತಥ್ಯವೂ ಸ್ವತಂತ್ರವಾಗಿ ತನ್ನ ಕಾಲಮೇಲೆ ತಾನು ನಿಲ್ಲಲಾಗುವುದಿಲ್ಲ. ಅಂತೆಯೆ ಅವುಗಳ ಬೇರೆ ಬೇರೆ ಅಧ್ಯಯನವೂ ಸಾಧ್ಯವಿಲ್ಲ.

ವಾಯುಮಂಡಲ ಈ ಸಿದ್ಧಾಂತದ ಪ್ರತಿಪಾದನೆ ಮಾಡುತ್ತದೆ. ಸೂರ್ಯನ ಶಾಖದಿಂದ ವಾಯುವಿನ ಒತ್ತಡದಲ್ಲಿ ವ್ಯತ್ಯಾಸ ಕಂಡುಬರುವುದು. ಇದರಿಂದ ಮಳೆಗಾಳಿ, ಬಿರುಗಾಳಿ, ಸುಂಟರಗಾಳಿ, ಚಕ್ರವಾತ ಮುಂತಾದವು ಉತ್ಪನ್ನವಾಗುತ್ತವೆ. ಈ ದೃಷ್ಟಿಯಿಂದ ಮಳೆಯ ರಾಜ ಇಂದ್ರನಾಗದೆ, ಸೂರ್ಯನಾಗುತ್ತಾನೆ. ಇದೇ ರೀತಿ ಪರ್ವತ, ನದಿಗಳ ಮಧ್ಯೆಯೂ ಹತ್ತಿರದ ಸಂಬಂಧವಿದೆ. ಇವು ವಿಭಿನ್ನವಾದವುಗಳಾದರೂ ಏಕತಾರೂಪ ಪಡೆದಿವೆ. ನದಿಗಳು ಪರ್ವತಗಳ ಮಣ್ಣನ್ನು ತಂದು ಕಣಿವೆಗಳಲ್ಲಿ ತುಂಬಿಸಿ, ಅಲ್ಲಿಂದ ಮುಂದೆ ಸಮುದ್ರ ತಳವನ್ನು ತುಂಬುತ್ತವೆ. ಲಕ್ಷಾಂತರ ವರ್ಷಗಳ ಈ ರೀತಿಯ ಸಂಗ್ರಹದ ಪರಿಣಾಮವಾಗಿ ಹಿಮಕಾಲದಲ್ಲಿ ಉಂಟಾದ ಪರಿವರ್ತನೆಗಳಿಂದ ಸ್ತರೀಕೃತ (ಪದರ ಪದರವಾದ) ಪರ್ವತಶ್ರೇಣಿಗಳಾದುವು. ಒಂದಾನೊಂದು ಕಾಲದಲ್ಲಿ ಸಮುದ್ರವಿದ್ದ ಸ್ಥಳದಲ್ಲಿ ಇಂದು ಹಿಮಾಚ್ಛಾದಿತ ಹಿಮಾಲಯಾ ಪರ್ವತಗಳಿವೆ. ಈ ಅನುಪಮ ಬದಲಾವಣೆಗೆ ನದಿ ಮತ್ತು ಪರ್ವತಗಳ ನಡುವಣ ಸತ್ಸಂಬಂಧವೇ ಕಾರಣ.

ಸಸ್ಯಭೂಗೋಳ ಮತ್ತು ವಾಯುಗುಣ ಶಾಸ್ತ್ರಗಳ ಮಧ್ಯೆ ಘನವಾದ

ಸಂಬಂಧವಿದೆ. ಸಸ್ಯವರ್ಗ ಪರಿವೇಷ ವಾಯುಗುಣ ಪರಿವೇಷವನ್ನು ಅನುಸರಿಸುತ್ತದೆ. ಸ್ವಾಭಾವಿಕ ಸಸ್ಯವರ್ಗ ಉಷ್ಣತೆಗೂ ಮಳೆಗೂ ಅನುಗುಣವಾದದ್ದು. ಮಳೆ ಮತ್ತು ಉಷ್ಣತೆಗಳು ಹೆಚ್ಚಾಗಿರುವ ಸಮಭಾಜಕ ವೃತ್ತಪ್ರದೇಶಗಳಲ್ಲಿ ನಿತ್ಯ ಹಸುರಿನ ಕಾಡು ಇರುತ್ತದೆ. ಅತ್ಯುಷ್ಣ ಹಾಗೂ ಮಳೆ ಇಲ್ಲದಿರುವುದರಿಂದ ಮರುಭೂಮಿಗಳು ಏರ್ಪಟ್ಟು, ಯಾವುದೇ ರೀತಿಯ ಸಸ್ಯವರ್ಗವೂ ಗೋಚರವಾಗುವುದಿಲ್ಲ. ತನ್ನಲ್ಲಿನ ಜಲಾಂಶವನ್ನು ರಕ್ಷಿಸಿಕೊಳ್ಳುವ ಮುಳ್ಳಿನ ಗಿಡಗಳಿರುತ್ತವೆ. ಈ ರೀತಿಯಲ್ಲಿ ಸ್ವಾಭಾವಿಕ ಸಸ್ಯವರ್ಗ ಒಂದು ಪ್ರದೇಶದ ವಾಯುಗುಣದ ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತದೆ. ಸಸ್ಯವರ್ಗಕ್ಕೂ, ಪರಿಸರಕ್ಕೂ ನಿಕಟ ಸಂಬಂಧವಿರುತ್ತದೆ. ಸ್ಟೆಪ್ಪೀಸ್, ಸವನ್ನಾ, ಟೈಗಾ ಇತ್ಯಾದಿ ಸಸ್ಯವರ್ಗಗಳು ಒಂದೊಂದು ವಿಶಿಷ್ಟವರ್ಗದ ಸಸ್ಯಸಮೂಹವನ್ನು ತೋರಿಸುತ್ತವೆ.

ಪ್ರಾಣಿ ಭೂಗೋಳದಲ್ಲೂ ಆಂತರಿಕ, ಪಾರಸ್ಪರಿಕ, ಸಂಬಂಧವಿದೆ. ಸಸ್ಯಗಳಿಗಿಂತಲೂ ಹೆಚ್ಚಿನ ಸಾಮಾಜಿಕತೆ ಪ್ರಾಣಿಗಳಲ್ಲಿ ಕಂಡುಬರುತ್ತದೆ. ಪ್ರಾಣಿ ಸಂಘಟನೆಯ ಬೆಳವಣಿಗೆಯಲ್ಲಿ ಪ್ರಕೃತಿ ತನ್ನದೇ ಆದ ಪಾತ್ರ ವಹಿಸಿ, ಕ್ರೂರ ಹಾಗೂ ದಯನೀಯ ಪ್ರಾಣಿಗಳನ್ನಾಗಿ ವಿಂಗಡಿಸುತ್ತದೆ. ಸಸ್ಯ ಹಾಗೂ ಪ್ರಾಣಿಗಳ ಸಾಂಘಿಕ ಚಟುವಟಿಕೆಗಳು ಒಂದಕ್ಕೊಂದು ಸಂಬಂಧ ಹೊಂದಿರುವ ಕಾರ್ಯಭಾಗಗಳಾಗಿವೆ.

ಮಾನವ ಭೂಗೋಳದ ನಾನಾ ವಿಭಾಗಗಳು ಒಂದರೊಡನೊಂದು ಸಂಬಂಧ ಹೊಂದಿವೆ. ಇದರ ಕೇಂದ್ರಬಿಂದು ಮಾನವ. ಎಲ್ಲೇ ಇರಲಿ, ಅವನಿಗೆ ಶುದ್ಧ ವಾಯು, ಸೂರ್ಯನ ಶಾಖ, ನೀರು—ಬೇಕು. ನೀರಿನ ಒದಗುವಿಕೆಗೆ ತಕ್ಕಂತೆ ಅಂದರೆ ನದೀದಡಗಳಲ್ಲೊ, ಸರೋವರಗಳ ಪಕ್ಕದಲ್ಲೊ ನಗರಗಳು ನಿರ್ಮಾಣವಾಗುತ್ತಿದ್ದುವು.

ಮೈದಾನ ಪ್ರದೇಶಗಳಲ್ಲಿ ಒತ್ತಾದ ಜನಸಂಖ್ಯೆ ಇರುತ್ತದೆ. ಪರ್ವತ ಹಾಗೂ ಶಿಲಾಮಯ ಪ್ರದೇಶಗಳಲ್ಲಿ ಅವು ಅನುಪಯುಕ್ತವಾದವುಗಳಾದುದರಿಂದ ಜನಸಾಂದ್ರತೆ ಕಡಿಮೆ ಇರುತ್ತದೆ. ಹೀಗೆ ಪ್ರಾಕೃತಿಕ ವಿಷಯಗಳು ಜನಸಾಂದ್ರತೆಯನ್ನು ತನ್ನ ಹತೋಟಿಯಲ್ಲಿರಿಸಿಕೊಂಡಿರುತ್ತದೆ.

ಮಾನವ ಮತ್ತು ವಾಯುಗುಣದ ಸಂಬಂಧವೂ ಇದೇ ರೀತಿಯದು. ಭೂಮಿಯ 50% ಭಾಗ ಅತಿ ಶೀತ, ಅತಿ ಉಷ್ಣ ಹಾಗೂ ಅತಿ ಆರ್ದ್ರತೆಯ ಕಾರಣದಿಂದ ಮನುಷ್ಯನಿಗೆ ಹೆಚ್ಚು ಉಪಯೋಗವಾಗಿಲ್ಲ. ಇಂಥ ಪ್ರದೇಶಗಳಲ್ಲಿ ಚ.ಮೈ.ಗೆ 20ಕ್ಕಿಂತಲೂ ಹೆಚ್ಚು ಜನ ದೊರೆಯಲಾರರು. ವಾಯುಗುಣದ ಅಡಿತಡೆಗಳು ಇಲ್ಲದಿದ್ದ ಕಡೆ ಒತ್ತಾದ ಜನಸಂಖ್ಯೆ ಇದ್ದು, ಮನೆಗಳು ಜೇನುಗೂಡಿನಂತೆ ಕಂಡುಬರುತ್ತವೆ. ಆಯಾ ಪ್ರದೇಶದ ಉತ್ಪಾದನೆ, ಕೈಗಾರಿಕೆ, ವ್ಯಾಪಾರ ದೃಷ್ಟಿಕೋನಗಳಿಗೆ ಒಂದು ನಿಶ್ಚಿತರೂಪ ದೊರೆತು, ಮಾನವ ಸಂಸ್ಕೃತಿ ಪ್ರಭಾವಿತಗೊಳ್ಳುತ್ತದೆ.

ಪ್ರತಿ ಪ್ರದೇಶದ ಸಾಂಸ್ಕೃತಿಕ ವಿಕಾಸ ಆಯಾ ಪ್ರದೇಶದ ಭೌಗೋಳಿಕ ವಿಷಯುಗಳನ್ನೇ ಅನುಸರಿಸಿರುತ್ತದೆ. ಮಾನವ ಮೂಲಸಂಪತ್ತಿನ ಹಂಚಿಕೆಯನ್ನು ಬದಲಿಸಲಾರ. ಯಾಂತ್ರಿಕ ಜೀವನದಲ್ಲಿ ಅದು ನಾಡು ಮತ್ತು ಸಮಾಜದ ಪ್ರಗತಿಯ ಮೂಲವಾಗಿದೆ. ದೇಶದ ಸಂಪತ್ತು ಮತ್ತು ರಾಜನೈತಿಕ ಶಕ್ತಿಯನ್ನು ಅದು ನಿರ್ಧರಿಸುತ್ತದೆ. ಇದರ ಪರಿಣಾಮವಾಗಿ ಅನೇಕ ರಾಜಕೀಯ ಸಮಸ್ಯೆಗಳು ಉದ್ಭವಿಸುವುದೂ ಉಂಟು.

ಮಾನವನ ಬೆಳವಣಿಗೆಗೆ ಅಡ್ಡಿಯೆಂದು ಒಂದಾನೊಂದು ಕಾಲದಲ್ಲಿ ಭಾವಿಸುತ್ತಿದ್ದ ಸಾಗರ, ಸಮುದ್ರಗಳು, ಇಂದು ವಿಶಾಲ ಜಲಮಾರ್ಗಗಳಾಗಿ ಮಾನವನ ಪ್ರಗತಿಗೆ ಸಹಾಯಕವಾಗಿವೆ.

ಮನುಷ್ಯನಿಗೂ, ಪ್ರಾಣಿ, ಸಸ್ಯವರ್ಗಗಳಿಗೂ ಇದೇ ರೀತಿಯ ಸಂಬಂಧವಿದೆ. ಊಟ, ಬಟ್ಟೆ, ನಿವಾಸಗಳಿಗಾಗಿ ಮಾನವ ಅವುಗಳನ್ನು ಆಶ್ರಯಿಸುತ್ತಾನೆ. ಅವುಗಳಿಂದ ಉಂಟಾಗುವ ಭೌಗೋಳಿಕ ಬದಲಾವಣೆಗಳ ಅನುಕೂಲಗಳನ್ನು ಪಡೆಯುತ್ತಾನೆ.

ಈ ರೀತಿ ಮಾನವ ಒಂದು ರಾಷ್ಟ್ರದ ಅಥವಾ ವಿಶ್ವದ ಕೇಂದ್ರ ಬಿಂದುವಾಗಿರುತ್ತಾನೆ. ಭೂಮಿಯೊಂದಿಗೆ ಇವನ ಸಂಬಂಧ ನಿರಂತರವಾಗಿರುತ್ತದೆ. ಈ ದೃಷ್ಟಿಯಿಂದ ಮಾನವ ಭೂಗೋಳದಲ್ಲಿ ಈಗಾಗಲೆ ತಿಳಿಸಿದ ಎರಡು ಮೂಲ ಸಿದ್ಧಾಂತಗಳು ಕಂಡುಬರುತ್ತವೆ. ಮಾನವನ ಭೌತಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳ ವಿಕಾಸದಲ್ಲಿ ಇವೆರಡರ ಪ್ರಭಾವ ಕಂಡುಬರುತ್ತದೆ. ಭೌತಿಕ ಪರಿಸ್ಥಿತಿಗಳು ಪರಿವರ್ತನೆ ಹೊಂದುವಂಥವು. ಅವು ಮಾನವನ ಮೇಲೆ ಪ್ರಭಾವ ಬೀರುತ್ತವೆ. ಇದೇ ರೀತಿ ಮನುಷ್ಯನೂ ಪರಿವರ್ತನೆಗೊಳ್ಳುವನು. ಭೌತಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳು ಅವನ ಮೇಲೆ ಪ್ರಭಾವ ಬೀರುತ್ತವೆ. ಆದ್ದರಿಂದ ಮಾನವ ಭೂಗೋಳದ ಅಧ್ಯಯನದಲ್ಲಿ ಪ್ರಾಕೃತಿಕ ಭೂಗೋಳದ ಸಹಾಯದ ಆವಶ್ಯಕತೆ ಬಹಳ ಇದೆ. ಆದರೆ ಯಾವ ಮಟ್ಟದವರೆಗೆ ಭೌತಿಕ ಪರಿಸ್ಥಿತಿಗಳು ಮಾನವನ ಮೇಲೆ ಪ್ರಭಾವ ಬೀರುತ್ತವೆ ಎಂಬುದನ್ನು ಅನುಸರಿಸಿ, ಎರಡು ವಿಚಾರ ಧಾರೆಗಳು ಕಂಡುಬರುತ್ತಿವೆ.

(1) ಪರಿಸರವಾದ (ಎನ್ವಿರನ್‌ಮೆಂಟಲಿಸ್ಟ್)

(2) ಸಂಭವವಾದ (ಪಾಸಿಬಿಲಿಸಂ)

ಪರಿಸರವಾದ:— ಪ್ರಕೃತಿ ಸರ್ವಶಕ್ತವೆಂಬುದು ಈ ವಾದದ ಸಾರ. ಮಾನವ ಪರಿಸರದ ಶಿಶು. ಅವನ ಆಚಾರ-ವಿಚಾರ, ಆರ್ಥಿಕ, ರಾಜನೀತಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳಲ್ಲಿ ಅದರ ಪಡಿಯಚ್ಚು ಕಂಡುಬರುತ್ತದೆ. ಮಾನವನ ರೀತಿನೀತಿಗಳೂ ಅವನ ಶರೀರದಲ್ಲೂ ವ್ಯತ್ಯಾಸಗಳು ಕಂಡುಬಂದರೆ ಅದಕ್ಕೆ ಮೇಲ್ಮೈ ಲಕ್ಷಣ, ವಾಯುಗುಣ, ಮಣ್ಣು, ಇತ್ಯಾದಿ ಪ್ರಾಕೃತಿಕ ವಿಷಯಗಳು ಕಾರಣ.

ಏಷ್ಯನ್ನರು ಸೋಮಾರಿಗಳು ಮತ್ತು ಐರೋಪ್ಯರು ಕಷ್ಟಸಹಿಷ್ಣುಗಳಾಗಿರಲು ಅಲ್ಲಿನ ವಾಯುಗುಣ ಪರಿಸ್ಥಿತಿಗಳೇ ಕಾರಣವೆಂದು ಹಿಪ್ಪೋಕ್ರೆಟಿಸ್ ತಿಳಿಸುತ್ತಾನೆ. ಪರ್ವತವಾಸಿಗಳು ಉತ್ತರವಾಗಿ, ಶೂರ, ಧೀರ, ಸಜ್ಜನರಾಗಿರುತ್ತಾರೆ ಮತ್ತು ಬಯಲು ಪ್ರದೇಶಗಳಲ್ಲಿ ಇರುವವರು ತೆಳುದೇಹ ಹೊಂದಿದ್ದು, ಸುಂದರರೂ ಬಲಯುತರೂ ಆಗಿರುತ್ತಾರೆ—ಎಂಬುದು ಅವನ ಮತ. ಈಜಿಪ್ಟನಲ್ಲಿ ಹಿಂದೆ ಉನ್ನತ ಮಟ್ಟದ ಸಂಸ್ಕೃತಿ ಬೆಳೆಯಲು ಅಲ್ಲಿನ ಭೌಗೋಳಿಕ ಪರಿಸ್ಥಿತಿಗಳೇ ಕಾರಣವೆಂದು ಹೆರೆಡೊಟಸ್ ಹಾಗೂ ಥ್ಯೂಸಿ ಡೈಡ್ಸ್ ತಿಳಿಸುತ್ತಾರೆ.

"ಯೂರೋಪಿನಲ್ಲಿರುವ ಶೀತಪ್ರದೇಶಗಳಲ್ಲಿರುವವರು ಧೈರ್ಯಶಾಲಿಗಳಾಗಿದ್ದರೂ, ಚತುರತೆ, ತಾಂತ್ರಿಕತೆ ಹಾಗೂ ಬೌದ್ಧಿಕ ಶಕ್ತಿಗಳಲ್ಲಿ ಹಿಂದುಳಿದವರಾಗಿರುತ್ತಾರೆ. ಇದರ ಪರಿಣಾಮವಾಗಿ ಅನೇಕ ವರ್ಷಗಳವರೆಗೆ ಸ್ವತಂತ್ರವಾಗಿದ್ದರೂ, ರಾಜಕೀಯ ವ್ಯವಸ್ಥೆ ಹಾಗೂ ನೆರೆಹೊರೆಯುವರೊಂದಿಗೆ ಹೊಂದಿಕೊಂಡು ಹೋಗುವುದರಲ್ಲಿ ನಿಸ್ಸತ್ತ್ವರಾಗಿರುತ್ತಾರೆ. ಆದರೆ ಏಷ್ಯನ್ನರು ಬಲು ಬುದ್ಧಿವಂತರೂ, ಕುಶಲಿಗಳೂ ಆಗಿರುತ್ತಾರಾದರೂ, ಒಂದೇ ಕಡೆಯಲ್ಲಿ ನೆಲೆಸಿರುವುದರಿಂದ ಧಾರ್ಷ್ಟ್ಯತೆ ಕಡಿಮೆಯಾಗಿ ಗುಲಾಮಗಿರಿಗೆ ಒಳಗಾಗುತ್ತಾರೆ"—ಎಂದು ಅರಿಸ್ಟಾಟಲ್ ತಿಳಿಸುತ್ತಾನೆ.

ಇತ್ತೀಚಿನ ವರ್ಷಗಳಲ್ಲಿ ಈ ವಾದದ ಮುಖ್ಯ ಸಮರ್ಥಕನೆಂದರೆ ಬೋಡಿನ್. ವಲಯಗಳು, ಅಕ್ಷಾಂಶ ಹಾಗೂ ಭೂಮಿಯ ಎತ್ತರಕ್ಕೆ ತಕ್ಕಂತೆ ಜನರ ಸ್ವಭಾವಗಳೂ ಬದಲಾಗುತ್ತವೆ—ಎಂದು ಬೋಡಿನ್ ಅಭಿಪ್ರಾಯ. ಈತನ ಪ್ರಕಾರ ಉತ್ತರ ಪ್ರದೇಶಗಳಲ್ಲಿರುವವರು ಪಶು ಸಮಾನರೂ ನಿರ್ದಯಿಗಳೂ ಸಾಹಸಿಗಳೂ ಆಗಿರುತ್ತಾರೆಂದೂ ದಕ್ಷಿಣದಲ್ಲಿರುವವರು ಅಹಿಂಸಾವಾದಿಗಳೂ, ಚತುರರೂ, ಬುದ್ಧಿವಂತರೂ ಆಗಿರುತ್ತಾರೆಂದೂ ಆತ ಹೇಳುತ್ತಾನೆ. ಇದು ಉತ್ತರಾರ್ಧಗೋಳಕ್ಕೆ ಸಂಬಂಧಪಡುತ್ತದೆ. ಅವನ ಪ್ರಕಾರ ಉತ್ತರ ಸಮಶೀತೋಷ್ಣವಲಯದಲ್ಲಿರುವವರು ಅವರ ಉತ್ತರದಲ್ಲಿರುವವರಿಗಿಂತ ಹೆಚ್ಚು ಬುದ್ಧಿವಂತರು, ದಕ್ಷಿಣದವರಿಗಿಂತ ಹೆಚ್ಚು ಕಷ್ಟಸಹಿಷ್ಣುಗಳು.

ಒಂದು ಶತಮಾನದ ಅನಂತರ ಮಾಂಟೆಸ್‌ಕ್ಯೂ ಇದೇ ಭಾವನೆಗಳನ್ನು ಪ್ರತಿಧ್ವನಿಸಿದ. ಕಾರ್ಲ್ ರಿಟ್ಟರ್‌ನಂತೂ ಪ್ರಾದೇಶಿಕ ನಿಯಂತ್ರಣದಲ್ಲಿ ಹೆಚ್ಚು ನಂಬಿಕೆಯನ್ನಿಟ್ಟಿದ್ದ. ಆದರೆ ಮನುಷ್ಯನ ಸಾಧನೆಗಳಿಗೂ ಆತ ಅಷ್ಟೇ ಮಹತ್ವ ನೀಡಿದ. ಹಂಬೋಲ್ಟ್ ಮಾತ್ರ ಈ ವಿಷಯವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಅಳೆದ.

೧೯ನೆಯ ಶತಮಾನದಲ್ಲಿ ಡಾರ್ವಿನ್ನನ 'ದಿ ಆರಿಜಿನ್ ಆಫ್ ಸ್ಪಿಷೀಸ್' ಬೆಳಕಿಗೆ ಬಂದಕೂಡಲೆ, ವೈಜ್ಞಾನಿಕ ಜಗತ್ತಿನಲ್ಲಿ ಒಂದು ಕ್ರಾಂತಿಯೇ ಉಂಟಾಯಿತು. ಅದುವರೆವಿಗೆ ಇದ್ದ ಅನೇಕ ವೈಜ್ಞಾನಿಕ ತತ್ವಗಳು ಬದಲಾವಣೆ

ಗೊಂಡವು. ಭೂಗೋಳಜ್ಞರ ವಿಚಾರ ಕ್ರಮದಲ್ಲೂ ಬದಲಾವಣೆಗಳಾದುವು. ಹೆಕೆಲ್ ಎಂಬ ವಿಜ್ಞಾನಿ ಜೀವಿಪರಿಸ್ಥಿತಿ ಶಾಸ್ತ್ರ (Oecology)ವನ್ನು ಕಂಡು ಹಿಡಿದಿದ್ದೇ ಅಲ್ಲದೆ ಭೂಮಿಯ ಮೇಲ್ಮೈಯ ಪ್ರಾಮುಖ್ಯವನ್ನು ವಿವರಿಸಿದ. ಅಲ್ಲದೆ ಸಾವು, ಅಪರಾಧ, ಮದುವೆ—ಇತ್ಯಾದಿ ಸಾಮಾಜಿಕ ಘಟನೆಗಳ ಮೇಲೂ ಪ್ರಕೃತಿ ತನ್ನ ಪ್ರಭಾವವನ್ನು ಬೀರುತ್ತದೆ ಎಂದು ವಿವರಿಸಿದ. ಇದರಿಂದ ಪ್ರಕೃತಿವಾದಕ್ಕೆ ಪುಷ್ಟಿ ದೊರೆತಂತಾಯಿತು.

ಬಾಹ್ಯ ಪ್ರಾಕೃತಿಕ ಘಟನೆಗಳು ಮಾನವನ ಮನಸ್ಸಿನ ಮೇಲೂ, ಪ್ರಾಕೃತಿಕ ಘಟನೆಗಳ ಮೇಲೆ ಮಾನವನೂ ಪ್ರಭಾವ ಬೀರಿರುವುದನ್ನು ಕಾಣಬಹುದು. ಇದು ಇತಿಹಾಸದಲ್ಲಿ ಉಂಟಾಗಿರುವ ಬದಲಾವಣೆಗಳಿಗೆ ಮೂಲಕಾರಣ. ಇದು ಬಕೆಲ್ ಎಂಬ ಇತಿಹಾಸಜ್ಞನ ತಿಳಿವಳಿಕೆ.

ಬಕೆಲ್ ಹಾಗೂ ಡಿಮೋಲಿನರು ಪರಿಸರವಾದವನ್ನು ಸ್ಪಷ್ಟೀಕರಿಸುತ್ತಾ, ಮನುಷ್ಯನ ಪ್ರತಿಯೊಂದು ಪ್ರತಿಕ್ರಿಯೆಯಲ್ಲೂ ಪರಿಸರದ ಪ್ರಭಾವವನ್ನು ತೋರಿಸಿ, ಸಮಾಜ ಬಾಹ್ಯ ಪರಿಸ್ಥಿತಿಗಳಿಂದ ರೂಪುಗೊಳ್ಳುತ್ತದೆ—ಎಂದು ತಿಳಿಸಿದ್ದಾರೆ.

ಎಲ್ಲೆನ್ ಸೆಂಪೆಲ್ ಎಂಬವಳು ರೆಟ್ಜೆಲಿಯರ್ಸ ಪಂಥದ ಪ್ರತಿಪಾದಕಳು. ತನ್ನ 'ಇನ್‌ಫ್ಲುಯೆನ್ಸಸ್ ಆಫ್ ಜಿಯೋಗ್ರಾಫಿಕ್ ಎನ್‌ವಿರನ್‌ಮೆಂಟ್' ಎಂಬ ಸುಪ್ರಸಿದ್ಧ ಪುಸ್ತಕದಲ್ಲಿ ಆಕೆ ಈ ವಾದವನ್ನು ಮುಂದುವರಿಸಿದ್ದಾಳೆ.

'ಭೂಮಿಯ ಮೇಲ್ಮೈಯ ಫಲವೇ ಮಾನವ. ಅಂದರೆ ಅವನು ಭೂಮಿಯ ಶಿಶು. ಭೂಮಿ ಅವನಿಗೆ ಆಹಾರ ಉಣಿಸಿ, ಅವನು ಕೈಗೊಳ್ಳುವ ಕಾರ್ಯಗಳನ್ನು ನಿರ್ಮಿಸಿ, ಮನಸ್ಸಿನ ಯೋಚನಾಲಹರಿಗೆ ಸೂಕ್ತ ಪಥಪ್ರದರ್ಶನಮಾಡಿ, ನೀರಾವರಿ ಹಾಗೂ ನಾವೆಯ ಸಮಸ್ಯೆಗಳನ್ನು ಅವನ ಮುಂದಿಡುತ್ತಾ, ಅವುಗಳನ್ನು ಬಗೆ ಹರಿಸುವ ರೀತಿಯನ್ನು ತೋರಿಸುತ್ತದೆ. ಭೂಮಿ ಪರ್ವತದೇಶದ ನಿವಾಸಿಗಳಿಗೆ ಕಬ್ಬಿಣದಂತಿರುವ ಕಾಲುಗಳನ್ನು ಕೊಟ್ಟಿರುತ್ತದೆ. ಸಮುದ್ರತೀರ ನಿವಾಸಿಗಳಿಗೆ ಇವೇ ಕಾಲುಗಳು ನಿಶ್ಯಕ್ತವಾಗಿರುವವುಗಳಾದರೂ ಹುಟ್ಟು ಹಾಕುವುದಕ್ಕೆ ಅನುಕೂಲವಾಗುವಂತೆ ಕಸುವುಳ್ಳ ಎದೆ ಹಾಗೂ ತೋಳುಗಳನ್ನು ನೀಡಿರುತ್ತದೆ. ನದೀ ಬಯಲುಗಳಲ್ಲಿ ಅವನಿಗೆ ತನ್ನದೇ ಆದ ಭೂಮಿಯನ್ನು ನೋಡಿಕೊಳ್ಳುವ ಶಕ್ತಿಯನ್ನು ನೀಡಿರುತ್ತದೆ. ಗಾಳಿಯ ನಿರಂತರ ಹೊಡೆತಕ್ಕೆ ಎದುರಾಗಿರಾವ ಪೀಠ ಭೂಮಿಯಲ್ಲೂ ಎಲ್ಲೆಯಿಲ್ಲದ ಹುಲ್ಲುಗಾವಲುಗಳಲ್ಲೂ ಜಲರಹಿತ ವಿಶಾಲ ಮರು ಭೂಮಿಗಳಲ್ಲೂ ವಾಸಿಸುವ ಮಾನವನಿಗೆ ತನ್ನ ಪ್ರಾಣಿಸಂಪತ್ತನ್ನು ನೋಡಿಕೊಳ್ಳುವ ಕಾರ್ಯದೊಂದಿಗೆ ಬೇಕಾದಷ್ಟು ಬಿಡುವು ಇರುವುದರಿಂದ ಇವನು ಧರ್ಮ ಒಂದು ಅವಶ್ಯ ವಸ್ತುವೆಂದು ಕಂಡುಕೊಳ್ಳುತ್ತಾನೆ. ದೇವರಲ್ಲಿ ನಂಬಿಕೆ ಹೆಚ್ಚಿ ಮುಂದೆ ಇದೇ ನಂಬಿಕೆ ಧರ್ಮಾಂಧತೆಗೆ ದಾರಿಮಾಡಿ, ವಿಶಾಲ ಸಾಮ್ರಾಜ್ಯ ನಿರ್ಮಾಣಕ್ಕೆ ಎಡೆಕೊಡುತ್ತದೆ.'

—ಎಂದು ತಿಳಿಸುತ್ತಾಳೆ. ಪರಿಸರವಾದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಇನ್ನೊಂದಿಲ್ಲ.

ಸಂಭವವಾದ :—ಪರಿಸರವಾದವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ವೀಕ್ಷಿಸಿದರೆ ಬಹುಕಾಲದವರೆಗೆ ಅದು ನಿಲ್ಲುವಂಥವುದಲ್ಲವೆಂಬುದನ್ನು ಕಂಡುಕೊಳ್ಳಬಹುದು. ಮಾನವನ ಕೆಲಸ ಕಾರ್ಯಗಳ ಮೇಲೆ ಭೂಪರಿಸ್ಥಿತಿಗಳ ಪರಿಸರದ ಪ್ರಭಾವವನ್ನು ಪರೀಕ್ಷಿಸಿದಲ್ಲಿ, ಅವುಗಳ ಪೂರ್ಣಪ್ರಭಾವ ಕಂಡುಬರುವುದಿಲ್ಲವೆಂದು ತಿಳಿದುಬರುತ್ತದೆ. ಇದರಿಂದ ಆಯಾ ಪ್ರದೇಶಗಳಲ್ಲಿ ಸಮಾನ ಆರ್ಥಿಕ, ನೈತಿಕ ಹಾಗೂ ಸಾಮಾಜಿಕ ಪ್ರವೃತ್ತಿಗಳು ನಿರ್ಮಾಣವಾಗಲಾರವು.

ತಂಡ್ರ ಪ್ರದೇಶದಲ್ಲಿ ಏಕರೀತಿಯ ಪ್ರಾಕೃತಿಕ ಪರಿಸ್ಥಿತಿಗಳಿದ್ದರೂ ಎಸ್ಕಿಮೋ ಮತ್ತು ಸಾಮೋದಿನ್ ಜನಾಂಗದವರ ಮಧ್ಯೆ ಅನೇಕ ವ್ಯತ್ಯಾಸಗಳಿವೆ. ಭೂಮಿಯ ಬಾಹ್ಯಪರಿಸ್ಥಿತಿಗಳು ಮಾನವನ ಮೇಲೆ ಪ್ರಭಾವಬೀರುವುವಾದರೂ, ಮಾನವನೂ ಆ ಪರಿಸ್ಥಿತಿಗಳ ಮೇಲೆ ಪ್ರಭಾವಬೀರಬಲ್ಲ. ಇವು ಒಂದನ್ನೊಂದು ಎಷ್ಟು ಪ್ರಭಾವಿತಗೊಳಿಸುತ್ತವೆಂದರೆ ಮೊದಲನೆಯದರ ಪ್ರಭಾವ ಎಲ್ಲಿಂದ ಪ್ರಾರಂಭ, ಎರಡನೆಯದರ ಪ್ರಭಾವ ಎಲ್ಲಿಗೆ ಕೊನೆ ಎಂದು ತಿಳಿಯುವುದು ಕಷ್ಟವಾಗುತ್ತದೆ. ಪ್ರಕೃತಿ ಕೊಟ್ಟಿರುವ ವಸ್ತುಗಳೆಂದು ನಾವು ಯಾವುದನ್ನು ಪರಿಗಣಿಸುತ್ತೇವೆಯೋ, ಅವು ಆಯಾಯಾ ಸ್ಥಳದಲ್ಲಿ ಮಾನವದತ್ತವಾದ ವಸ್ತುಗಳೇ ಹೊರತು, ಅವು ಪ್ರಕೃತಿ ನೀಡಿದವಲ್ಲ.

ಭೂಮಧ್ಯಸಮುದ್ರ ವಾಯುಗುಣ ಪ್ರದೇಶದಲ್ಲಿ ನಿರ್ಮಾಣವಾಗುವುವೆನ್ನಲಾಗುವ ಗೋಧಿ, ಅಂಜೂರ, ದ್ರಾಕ್ಷಿ ಮುಂತಾದವನ್ನು ಮಾನವ ಆ ಪ್ರದೇಶಕ್ಕೆ ತಂದು ಅಭಿವೃದ್ಧಿಪಡಿಸಿದ. ರಷ್ಯ, ಕೆನಡಗಳಲ್ಲಿನ ಉತ್ತರ ಶೀತವಲಯದಅಂಚಿನಲ್ಲೂ ಮಾನವ ಗೋಧಿಯ ಪರಿವೇಶವನ್ನು ನಿರ್ಮಿಸಿದ್ದಾನೆ. ಅದನ್ನು ಇನ್ನೂ ಉತ್ತರಕ್ಕೆ ತಳ್ಳಿದ್ದಾನೆ. ಸತ್ವ ಕಡಿಮೆ ಇರುವ ಫ್ರಾನ್ಸಿನ ಮಣ್ಣಿನಲ್ಲೂ ಗೋಧಿಯನ್ನು ಬೆಳೆಯಲಾಗುತ್ತಿದೆ. ಇವೆಲ್ಲ ಮಾನವನ ಪ್ರಯತ್ನದ ಫಲಗಳು. ಅರಣ್ಯಗಳನ್ನು ತರಿದು ವ್ಯವಸಾಯ ಪ್ರದೇಶಗಳಾಗಿ ಮಾಡಿ, ಕೆಲವು ವರ್ಷಗಳ ಅನಂತರ ಮತ್ತೆ ಆ ಪ್ರದೇಶವನ್ನು ಹಾಗೆಯೆ ಬಿಟ್ಟುಬಿಟ್ಟಲ್ಲಿ ಮೊದಲಿನ ಅರಣ್ಯಗಳು ಬೆಳೆಯಲಾರವು. ಮನುಷ್ಯನ ಭೌಗೋಳಿಕ ಹಿನ್ನೆಲೆಯ ಬೆಳವಣಿಗೆಗೆ ಪ್ರಾಕೃತಿಕ ಪರಿಸರವೊಂದೇ ಸಾಲದು; ಸಾಮಾಜಿಕ, ಆರ್ಥಿಕ, ಐತಿಹಾಸಿಕ ಪರಿಸರಗಳ ಸಹಾಯವೂ ಬೇಕು.

ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯನ್ನು ಗಮನಿಸಿದಾಗ, ಪ್ರಕೃತಿದತ್ತ ಸೌಲಭ್ಯಗಳನ್ನು ಮಾನವ ತಳ್ಳಿಹಾಕಿರುವ ಉದಾಹರಣೆಗಳು ಬೇಕಾದಷ್ಟಿವೆ. ಅಮೆರಿಕದಿಂದ ಅಗ್ಗದ ಬೆಲೆಯ ಗೋಧಿ ಸಿಕ್ಕಿ, ಕಡಿಮೆ ಖರ್ಚಿನಲ್ಲಿ ಆಮದಾಗುವ ಭರವಸೆ ಪಡೆದಕೂಡಲೆ, ವ್ಯವಸಾಯಭರಿತದೇಶವಾಗಿದ್ದ ಇಂಗ್ಲೆಂಡ್ ತನ್ನೆಲ್ಲ ಶಕ್ತಿಗಳನ್ನೂ, ಮೂಲಸ್ರೋತಗಳನ್ನೂ ಕೈಗಾರಿಕೆಗಳಲ್ಲಿ ಕೇಂದ್ರೀಕರಿಸಿತು. ಈ ಕಾರಣದಿಂದಲೆ

ಡೆನ್ಮಾರ್ಕ್‌ದೇಶ ಗೋಧಿ ಬೆಳೆಯುವುದನ್ನು ನಿಲ್ಲಿಸಿ, ಪಶುಪಾಲನೆಯನ್ನು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಪಡಿಸಿಕೊಂಡಿತು.

ಕೈಗಾರಿಕೆಗಳ ಅಭಿವೃದ್ಧಿಯಲ್ಲೂ ಮಾನವನ ಕೈವಾಡ ಬೇಕಾದಷ್ಟಿದೆ. ದೇಶದ ಆಮದು ರಫ್ತುಗಳನ್ನು ಅನುಸರಿಸಿ ಕೈಗಾರಿಕೆಗಳ ಸ್ಥಾಪನೆಯಾಗುತ್ತದೆ. ಆದಕ್ಕೆ ತಕ್ಕಂತೆ ಅವು ಅಭಿವೃದ್ಧಿಯಾಗುತ್ತದೆ.

ಕಿರ್ಚಾಫ್‌ನು ಮಾನವನ ಪ್ರಾಮುಖ್ಯವನ್ನು ವಿವರಿಸುತ್ತಾ ಅವನ ಮಾನಸಿಕ ನಿರ್ಣಯಗಳಿಗೆ ಪ್ರಾಧಾನ್ಯತೆ ನೀಡಿದ್ದಾನೆ.

ಇತರ ಭೂಗೋಳಜ್ಞರು ಪ್ರಾಕೃತಿಕ ಅಡ್ಡಿ ಆತಂಕಗಳನ್ನು ನಿರ್ಲಕ್ಷಿಸ ಲಾರರು. ಅಂತೆಯೇ ಕ್ರಿಯಾಶೀಲ ಮನುಷ್ಯ ಅವುಗಳನ್ನು ದೂರಮಾಡಿ ತನ್ನ ಪ್ರಾಧಾನ್ಯವನ್ನು ಹೇಗೆ ಕಾಪಾಡಿಕೊಳ್ಳುತ್ತಾನೆ—ಎಂಬುದನ್ನೂ ಅವರು ವಿವರಿ ಸಿದ್ದಾರೆ. ಸಂಭವವಾದದ ಈ ಹೊಸ ವಿಚಾರಧಾರೆಯನ್ನು ಫಬ್‌ವ್ರೆ ಪ್ರತಿಪಾದಿಸಿದ. ಲಾ ಬ್ಲಾಶ್, ಬ್ರುರ್ನ್ಷ್, ಈಸಾ ಬೋಮೆನ್ ಮತ್ತು ಕಾರ್ಲ್ ಸೆನರರೂ ತಮ್ಮ ಕೃತಿಗಳಲ್ಲಿ ಈ ವಾದವನ್ನು ಸ್ಪಷ್ಟಪಡಿಸಿದ್ದಾರೆ.

ಆದರೆ ಈ ವಾದಗಳನ್ನು ಶಾಸ್ತ್ರಜ್ಞರು ಮರೆಯತೊಡಗಿದ್ದಾರೆ. ಅವರಿಗೆ 'Man commands nature by obeying her' ಎನ್ನುವ ಗಾದೆ ಮಾತು ನೆನಪಿಗೆ ಬಂದು, ವಾದಗಳ ಘರ್ಷಣೆಗಳನ್ನು ದೂರಮಾಡಿ, ಅವುಗಳ ಮಧ್ಯೆ ಸಮನ್ವಯತೆಯನ್ನು ತರಲು ಪ್ರಯತ್ನಿಸಿದ್ದಾರೆ.

ಎಲ್ಸ್‌ವರ್ತ್ ಹಂಟಿಂಗ್‌ಟನ್ನನ ಮಾತುಗಳಲ್ಲಿ ಹೇಳುವುದಾದರೆ, 'ಈ ರೀತಿ ಪ್ರಪಂಚದ ಬೇರೆಬೇರೆ ಭಾಗಗಳಲ್ಲಿನ ಜನರ ಭೌತಿಕ ಹೊರರೂಪ, ವಸ್ತ್ರಾಲಂಕಾರ, ನಡತೆ, ಭಾವನೆಗಳು ಬೇರೆ ಬೇರೆ ಆಗಿರುತ್ತವೆ; ಬೇರೆ ಬೇರೆ ರೀತಿಯ ಆಹಾರವನ್ನು ಅವರು ತಿನ್ನುತ್ತಾರೆ; ಹುಲ್ಲಿನ ಜೋಪಡಿಗಳಿಂದ ಹಿಡಿದು ಗಗನಚುಂಬಿತ ಕಟ್ಟಡ ಗಳವರೆಗೆ ನಿರ್ಮಾಣದಲ್ಲಿ ತೊಡಗಿದ್ದಾರೆ; ಅವರು ಕೆಲಸಮಾಡುವ ರೀತಿ, ಜೀವನಕ್ಕಾಗಿ ಅವಲಂಬಿಸಿರುವ ಕಸುಬುಗಳು ಬೇರೆಬೇರೆಯಾಗಿರುತ್ತವೆ.

'ಈ ವೈವಿಧ್ಯಪೂರ್ಣ ವಿವರಗಳೇ ಮಾನವ ಭೂಗೋಳದ ವಿಷಯ. ಮಾನವನ ಈ ಎಲ್ಲ ರೀತಿಯ ಪರಿಸ್ಥಿತಿಗಳೂ ಭೂಮಿಯ ಮೇಲೆ ಯಾವ ರೀತಿ ಹರಡಿವೆ ಎಂಬುದೊಂದೇ ಅಲ್ಲದೆ, ಅಷ್ಟೂ ರೀತಿಗಳಲ್ಲಿ ಏಕೆ ಹರಡಿವೆ ಎಂಬುದನ್ನು ಕಂಡು ಹಿಡಿಯುವುದೇ ಆಗಿದೆ. ಕೆಲವು ಸಂದರ್ಭಗಳಲ್ಲಿ ಈ ರೀತಿಯ ಹಂಚಿಕೆಗೂ ಪರ್ವತ, ನದಿ, ಮಳೆ, ಕಾಡು ಇತ್ಯಾದಿ ಭೌಗೋಳಿಕ ಪರಿಸರಗಳಿಗೂ ಸಂಬಂಧವಿದೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಜನಸಾಂದ್ರತೆ, ನಾಗರಿಕತೆಯ ಮಟ್ಟ, ತಲೆ ತಲಾಂತರದಿಂದ ಬಂದಿರುವ ಭೌತಿಕ ಹಾಗೂ ಮಾನಸಿಕ ಸತ್ವಗಳು ಇತ್ಯಾದಿ ಮಾನವಾಂಶಗಳ ಮೇಲೆ ಆಧಾರಪಟ್ಟಿವೆ. ಮಾನವ ಚಟುವಟಿಕೆಯ ವಿವಿಧ ರೀತಿಯ ಹಂಚಿಕೆಗಳಿಗೆ ನೇರ ಜವಾಬ್ದಾರಿಯಾದ ಮಾನವಿಕ ಪರಿಸ್ಥಿತಿಗಳೂ

ಅಧ್ಯಯನಾನಂತರ ಭೌಗೋಳಿಕ ಪರಿಸರವೂ ಅವ್ಯಕ್ತವಾಗಿ ಮಾನವನ ಮೇಲೆ ಪ್ರಭಾವ ಬೀರುತ್ತದೆ—ಎಂದು ತಿಳಿದು ಬರುತ್ತದೆ. ಆದ್ದರಿಂದ ಭೌಗೋಳಿಕ ಪರಿಸರಕ್ಕೂ ಮಾನವನ ಚಟುವಟಿಕೆ ಇಲ್ಲವೇ ಗುಣಗಳಿಗೂ ಇರುವ ಸಂಬಂಧದ ಸ್ವರೂಪ ಹಾಗೂ ಅದರ ಹಂಚಿಕೆಯ ಅಧ್ಯಯನವೇ ಮಾನವ ಭೂಗೋಳ.’

ಎಂ. ಎಸ್. ರಾಮರಾವ್

‘ ನ್ಯಾಯ ’ ಶಬ್ದದ ವ್ಯಾಪ್ತಿ

ಒಂದು ರಾಷ್ಟ್ರದಲ್ಲಿ ನ್ಯಾಯಾಲಯಗಳಿಂದ ತೀರ್ಮಾನವಾಗುವ ಅಥವಾ ನ್ಯಾಯಾಲಯಗಳ ತೀರ್ಮಾನದ ವ್ಯಾಪ್ತಿಗೆ ಒಳಪಡುವ ಎಲ್ಲ ವ್ಯವಹಾರಗಳೂ ನ್ಯಾಯ ಎಂಬ ಶಬ್ದದಲ್ಲಿ ಅಡಕವಾಗಿವೆ. ಇದು ಸ್ಥೂಲವಾಗಿ ಇಂಗ್ಲಿಷಿನ ‘ ಲಾ ’ ಎಂಬುದರ ಸಮಾನಾರ್ಥಕ ಶಬ್ದ; ಕಾನೂನು ಎಂಬ ಪದವನ್ನೂ ಪರ್ಯಾಯವಾಗಿ ಬಳಸಲಾಗುತ್ತಿದೆ. ನೈತಿಕ ಸೂತ್ರಗಳು ‘.ಲಾ’ ಎಂಬುದರ ವಿಸ್ತೃತ ಪ್ರಯೋಗದಲ್ಲಿ ಸೇರಿದ್ದರೂ ನ್ಯಾಯಾಲಯಗಳ ವ್ಯವಹಾರದ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಉದಾಹರಣೆಗೆ, ಆಕಸ್ಮಿಕವಾಗಿ ನೀರಿನಲ್ಲಿ ಮುಳುಗುತ್ತಿರುವ ಚಿಕ್ಕ ಶಿಶುವೊಂದನ್ನು ರಕ್ಷಿಸುವುದು ಹತ್ತಿರದಲ್ಲಿ ನಿಂತುನೋಡುತ್ತಿರುವ ಹಿರಿಯರೆಲ್ಲರ ಕರ್ತವ್ಯ. ಆದರೆ. ಹಾಗೆ ಅವರು ರಕ್ಷಿಸದಿದ್ದರೆ, ಅವರನ್ನು ನ್ಯಾಯಾಲಯ ಶಿಕ್ಷೆಗೆ ಗುರಿಪಡಿಸುವಂತಿಲ್ಲ. ನೀತಿ ನಿಯಮಗಳ ದೃಷ್ಟಿಕೋನದಿಂದ ಇದನ್ನು ಅಪರಾಧವೆಂದು ಪರಿಗಣಿಸಿದರೂ, ಕಾನೂನಿನ ದೃಷ್ಟಿಯಿಂದ ಇದು ಅಪರಾಧವಾಗುವುದಿಲ್ಲ.

ಶಾಸನಸಭೆಗಳಿಂದ ಅಂಗೀಕೃತವಾದ ಕಾಯಿದೆಗಳೂ, ಅನೂಚಾನವಾಗಿ ನಡೆದುಕೊಂಡು ಬಂದಿರುವ ಪದ್ಧತಿಗಳೂ, ಸರ್ಕಾರ, ಕಾರ್ಪೊರೇಷನ್, ಪೌರಸಭೆ, ಪಂಚಾಯಿತಿ, ನಾನಾ ಸಂಘಗಳು ಮುಂತಾದವುಗಳಿಂದ ರಚಿತವಾದ ನಿಯಮಾವಳಿಗಳೂ ಲಾ ಅಥವಾ ನ್ಯಾಯದ ವ್ಯಾಪ್ತಿಯಲ್ಲಿವೆ.

ಸಮಾಜದಲ್ಲಿರುವ ವ್ಯಕ್ತಿಗಳ ಹಕ್ಕುಬಾಧ್ಯತೆಗಳು ಇದರಿಂದ ಹೊರಗಲ್ಲ. ವ್ಯವಹಾರದಲ್ಲಿ ಒಬ್ಬ ರಾಷ್ಟ್ರಿಕ ಯಾವ ರೀತಿ ನಡೆದುಕೊಳ್ಳಬೇಕು. ಹೇಗೆ ವರ್ತಿಸಿದರೆ ಇನ್ನೊಬ್ಬನ ಹಕ್ಕಿಗೆ ಚ್ಯುತಿ ಬರುತ್ತದೆ, ಹಾಗಾದಾಗ ಅದಕ್ಕೆ ಇರುವ ಪರಿಹಾರಗಳೇನು ಮುಂತಾದುವನ್ನು ತಿಳಿಸುವುದೆಲ್ಲ ಈ ಶಬ್ದದ ಅರ್ಥದಲ್ಲಿ ಸೇರಿದೆ. ಯಾವುದನ್ನು ಮಾಡಬೇಕೋ ಅದನ್ನು ಮಾಡದೆ, ಯಾವುದನ್ನು ಮಾಡಬಾರದೋ ಅದನ್ನು ಮಾಡಿದರೆ ಆಗ ಹಕ್ಕುಬಾಧ್ಯತೆಗಳ ಮತ್ತು ಅವುಗಳ ಉಲ್ಲಂಘನೆಯ ಪ್ರಶ್ನೆ ಏಳುವುದು ಸಹಜ. ಇದಕ್ಕೆ ಶಾಸನಸಭೆಗಳ ನಿಯಮಗಳಿರಬಹುದು, ಅಥವಾ ಹಿಂದೂ ಮುಸ್ಲಿಂ ಕ್ರೈಸ್ತರಿಗೆ ಅನ್ವಯವಾಗುವ ಅನೂಚಾನವಾಗಿ ನಡೆದು

ಬಂದಿರುವ ಹಿಂದೂ ಧರ್ಮಶಾಸ್ತ್ರ, ಖೊರಾನ್, ಬೈಬಲ್‌ಗಳಲ್ಲಿ ಕಂಡುಬರುವ ಪದ್ಧತಿಗಳಿರಬಹುದು. ಇವೆಲ್ಲ ಹಕ್ಕುಬಾಧ್ಯತೆಗಳ ವ್ಯಾಪ್ತಿಗೆ ಒಳಪಟ್ಟವು.

'ನ್ಯಾಯ' ಮೂಕಪ್ರಾಣಿಗಳಿಗೆ ಅನ್ವಯವಾಗುತ್ತದೆಯೆ ಅಥವಾ ಮಾನವನಿಗೆ ಮಾತ್ರವೆ—ಎಂಬ ವಿಚಾರದಲ್ಲಿ ಹಿಂದಿನಕಾಲದಿಂದಲೂ ದೀರ್ಘವಾಗಿ ಚರ್ಚೆ ನಡೆದಿದೆ. ಗ್ರೀಸ್ ದೇಶದ ತತ್ವಜ್ಞಾನಿಯಾದ ಪ್ಲೇಟೋವಿನ "ಡಿಲೆಜಿಬಸ್" ಎಂಬ ಗ್ರಂಥದಲ್ಲಿ ಇದರ ಪ್ರಸ್ತಾಪವಿದೆ. ಮನುಷ್ಯನನ್ನು ಕೊಂದ (ಕೊಲೆಮಾಡಿದ) ಹಸು, ಎತ್ತು, ಕುದುರೆ, ಕತ್ತೆ, ನಾಯಿ ಮುಂತಾದ ಪ್ರಾಣಿಗಳನ್ನೂ ಅಪರಾಧಿಯನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸುವ ರೀತಿಯಲ್ಲಿ ವಿಚಾರಣೆ ಮಾಡಿ ಸಾಕ್ಷಿಗಳ ಹೇಳಿಕೆಯ ಮೇಲೆ ತೀರ್ಮಾನ ಕೊಟ್ಟು ಆ ಪ್ರಾಣಿಯ ಅಪರಾಧ ರುಜುವಾತಾಗಿದ್ದರೆ, ಅದಕ್ಕೆ ಮರಣದಂಡನೆ ವಿಧಿಸುತ್ತಿದ್ದದ್ದುಂಟು. ಆ ಪ್ರಾಣಿಯನ್ನು ಕೊಂದು ಅದರ ಮಾಂಸವನ್ನು ರಾಷ್ಟ್ರದ ಗಡಿಯಿಂದ ಹೊರಕ್ಕೆ ಎಸೆದು ಬಿಡಬೇಕೆಂದು ತೀರ್ಮಾನ ಮಾಡಿದ ಅನೇಕ ನಿದರ್ಶನಗಳಿವೆ. ಆದರೆ, ಆಧುನಿಕ ನ್ಯಾಯಶಾಸ್ತ್ರದ ಪ್ರಕಾರ ಪ್ರಾಮುಖ್ಯವಾಗಿ ನ್ಯಾಯ ಮನುಷ್ಯನಿಗೆ ಮಾತ್ರ ಅನ್ವಯಿಸುತ್ತದೆ.

ಮನುಷ್ಯ ಎಂಬುದರಲ್ಲಿ ಮಾನವರೆಲ್ಲರೂ ಸೇರಿರುತ್ತಾರೆ. ಅಲ್ಲದೆ, ನಿರ್ಜೀವಿಗಳಾದ ಸಂಘಸಂಸ್ಥೆಗಳೂ ಸೇರಿರುತ್ತವೆ. ಮನುಷ್ಯರಂತೆಯೇ ಇವುಗಳಿಗೂ ಹಕ್ಕುಬಾಧ್ಯತೆಗಳಿದ್ದು, ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿವೆ. ದೇವಸ್ಥಾನಗಳು, ಮಠಗಳು, ಪೌರಸಭೆ, ಪಂಚಾಯಿತಿ, ಸಂಘ, ರಾಜ್ಯಸರ್ಕಾರ ಮುಂತಾದವುಗಳೂ ನ್ಯಾಯಾಲಯದಲ್ಲಿ ವ್ಯವಹಾರ ಹೂಡಬಹುದು. ಅವಯಸ್ಕರು (ಮೈನರ್) ಹುಚ್ಚರು ಇವರಿಗೂ ಹಕ್ಕುಬಾಧ್ಯತೆಗಳಿವೆ. ಆದರೆ, ಅವರ ಪರವಾಗಿ ಅವರ ಹಿತ ಚಿಂತಕರು ವ್ಯವಹಾರ ನಡೆಸಬೇಕು.

'ನ್ಯಾಯ ಶಬ್ದದ ಅರ್ಥವನ್ನರಿಯಲು ನ್ಯಾಯಾಲಯಗಳ ಸ್ವರೂಪ, ಅವುಗಳ ನಿರ್ವಹಣೆಯಲ್ಲಿ ಅವು ವಹಿಸತಕ್ಕ ಪಾತ್ರ ಈ ಅಂಶಗಳನ್ನೂ ಅರಿಯಬೇಕು. ಭಾರತದಲ್ಲಿ ಲಿಖಿತರೂಪದಲ್ಲಿ ಸಂವಿಧಾನವಿದೆ. ಅದರಲ್ಲಿ ತಿಳಿಸಿರುವಂತೆ ಪರಮೋಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯಗಳೂ ಇವುಗಳ ಕೆಳಗೆ ಜಿಲ್ಲಾ ನ್ಯಾಯಾಲಯಗಳೂ ಸಿವಿಲ್ ನ್ಯಾಯಾಧೀಶರ ಸಬಾರ್ಡಿನೇಟ್ ನ್ಯಾಯಾಧೀಶರ ಮ್ಯಾಜಿಸ್ಟ್ರೇಟ್ ಮತ್ತು ಮುನ್ಸೀಫರ ನ್ಯಾಯಾಲಯಗಳೂ ಇವೆ. ಸಿವಿಲ್ ವ್ಯಾಜ್ಯಗಳಿಗೆ ಅತ್ಯಂತ ಕೆಳಗಿನ ನ್ಯಾಯಾಲಯವೆಂದರೆ ಮುನ್ಸೀಫ್ ನ್ಯಾಯಾಲಯ.

ಪರಮೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರನ್ನು ರಾಷ್ಟ್ರಾಧ್ಯಕ್ಷರು ನಿಯಮಿಸುತ್ತಾರೆ. ಇವೆರಡು ನ್ಯಾಯಾಲಯಗಳಿಗೂ, ಕ್ರಿಮಿನಲ್ ಹಾಗೂ ಸಿವಿಲ್ ಸ್ವಭಾವದ ವ್ಯಾಜ್ಯಗಳಲ್ಲಿ ಅಪೀಲು ಹಿಡಿದು ತೀರ್ಮಾನಮಾಡುವ ಅಧಿಕಾರವಿದೆ. ಮಿಕ್ಕ ನ್ಯಾಯಾಲಯಗಳ ಅಧಿಕಾರಿಗಳನ್ನು

ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಶಿಫಾರಿಸಿನ ಮೇಲೆ ಗವರ್ನರ್ ನಿಯಮಿಸುತ್ತಾರೆ. ಕ್ರಿಮಿನಲ್ ಸ್ವಭಾವದ ವ್ಯಾಜ್ಯಗಳನ್ನು ನಡೆಸುವ ಅತ್ಯಂತ ಕೆಳದರ್ಜೆಯ ಕೋರ್ಟುಗಳೆಂದರೆ ಸ್ಪೆಷಲ್ ಒಂದು ಅಥವಾ ಎರಡನೆ ತರಗತಿಯ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು, ಇವುಗಳ ಮೇಲೆ ಸೆಷನ್ಸ್ ನ್ಯಾಯಾಲಯ ಗಳಿವೆ. ಖೂನಿ ಮೊದಲಾದ ಉಗ್ರ ಅಪರಾಧಗಳ ವಿಚಾರಣೆ ನಡೆಸತಕ್ಕ ನ್ಯಾಯಾ ಲಯಗಳೇ ಈ ಸೆಷನ್ಸ್ ನ್ಯಾಯಾಲಯಗಳು. ಕೆಲವು ಪರಿಮಿತಿಗಳಿಗೆ ಒಳಪಟ್ಟ ಈ ಕೋರ್ಟುಗಳು, ಕ್ರಿಮಿನಲ್ ಅಪೀಲುಗಳನ್ನು, ತೀರ್ಮಾನ ಮಾಡುತ್ತಿವೆ. ನ್ಯಾಯಾಧಿಪತಿಗಳು ನಿರ್ದಾಕ್ಷಿಣ್ಯವಾಗಿ ಹಾಗೂ ಕ್ಷಿಪ್ರವಾಗಿ ವ್ಯಾಜ್ಯಗಳನ್ನು ತೀರ್ಮಾನಮಾಡಬೇಕೆಂಬುದು ನಿರ್ವಿವಾದವಾದ ವಿಷಯ. ವ್ಯಾಜ್ಯಗಳ ತೀರ್ಮಾನದಲ್ಲಿ ಹೊಸ ಕಾನೂನುಗಳನ್ನೇ ಈ ನ್ಯಾಯಾಲಯಗಳು ರಚನೆ ಮಾಡುತ್ತವೆಂದು ಕೆಲವು ನ್ಯಾಯಶಾಸ್ತ್ರ ತಜ್ಞರ ವಾದವಿದೆ. ನ್ಯಾಯಾಲಯಗಳ ಈ ವ್ಯಾಖ್ಯಾನಗಳೂ ನ್ಯಾಯದ ವ್ಯಾಪ್ತಿಗೆ ಒಳಪಟ್ಟಿವೆ.

ಪರಮೋಚ್ಚ ನ್ಯಾಯಾಲಯದಲ್ಲಿ ಆಗುವ ತೀರ್ಪುಗಳು ಸಂವಿಧಾನದ ೧೪೧ನೆಯ ಪ್ರಕರಣದ ಪ್ರಕಾರ ನ್ಯಾಯವೆನಿಸುತ್ತವೆ. ಅಂದರೆ, ಭಾರತದ ಎಲ್ಲ ನ್ಯಾಯಾಲಯಗಳೂ ಅವಕ್ಕೆ ಬದ್ಧವಾಗಿರುತ್ತವೆ. ಅದನ್ನು ಬದಲಾಯಿಸುವಂತಿಲ್ಲ. ಇವನ್ನು ಬದಲಾಯಿಸುವ ಹಕ್ಕು ಪರಮೋಚ್ಚ ನ್ಯಾಯಾಲಯಕ್ಕೆ ಮಾತ್ರ ಸೇರಿದ್ದು.

ಮೇಲೆ ನಮೂದಿಸಿದ ನ್ಯಾಯಾಲಯಗಳಲ್ಲದೆ ಆಡಳಿತಾಂಗದ ಅನೇಕ ಟ್ರಿಬ್ಯುನಲ್‌ಗಳಿವೆ. ಕಂದಾಯ (ರೆವಿನ್ಯೂ), ವರಮಾನತೆರಿಗೆ, (ಇನ್‌ಕಂಟ್ಯಾಕ್ಸ್), ಮಾರಾಟತೆರಿಗೆ, (ಸೇಲ್ಸ್‌ಟ್ಯಾಕ್ಸ್), ಜಮೀನು ಹಿಡುವಳಿ, ಕಾರ್ಮಿಕ ಟ್ರಿಬ್ಯುನಲ್ (ಟೆನೆನ್ಸಿ) ಮುಂತಾದವು. ಇವು ಆಯಾ ಕಾಯಿದೆಗಳ ವ್ಯಾಪ್ತಿಗೆ ಒಳಪಟ್ಟ ವ್ಯವಹಾರಗಳನ್ನು ತೀರ್ಮಾನಿಸುತ್ತವೆ. ಇವುಗಳಮೇಲೆ ಉಚ್ಚ ಹಾಗೂ ಪರಮೋಚ್ಚ ನ್ಯಾಯಾಲಯಗಳಿಗೆ ಅಧಿಕಾರವಿದೆ. ಹಲವು ನಿಯಮಿತ ಸಂದರ್ಭ ಗಳಲ್ಲಿ ಈ ಅಧಿಕಾರವನ್ನು ಪಯೋಗಿಸಬೇಕಾಗುತ್ತದೆ.

ತೀವ್ರವೇಗದಲ್ಲಿ ಬೆಳೆಯುತ್ತಿರುವ ಅಂತರರಾಷ್ಟ್ರೀಯ ನಿಯಮವನ್ನೂ ಕಡೆ ಗಣಿಸುವಂತಿಲ್ಲ. ರಾಷ್ಟ್ರದ ಒಪ್ಪಂದಗಳೂ, ಅನೂಚಾನವಾಗಿ ಬೆಳೆದುಬಂದ ಅಂತರ ರಾಷ್ಟ್ರೀಯ ಪದ್ಧತಿಗಳೂ, ಅಂತರರಾಷ್ಟ್ರೀಯ ನ್ಯಾಯಾಲಯಗಳ ತೀರ್ಪುಗಳೂ ಶ್ರೇಷ್ಠ ತಜ್ಞರ ಅಭಿಪ್ರಾಯಗಳೂ ಈ ಶಬ್ದದಲ್ಲಿ ಸೇರಿರುತ್ತವೆ.

' ನ್ಯಾಯ 'ದ ಹುಟ್ಟು, ಸ್ವಭಾವ, ಬೆಳವಣಿಗೆ ಮತ್ತು ನೀತಿಗೂ ನ್ಯಾಯಕ್ಕೂ ಇರುವ ಸಂಬಂಧ, ನ್ಯಾಯ ಯಾವರೀತಿ ಇರಬೇಕು, ಶಾಸನಗಳು ಯಾವ ' ಧರ್ಮ 'ವನ್ನನುಸರಿಸಬೇಕು, ಆಡಳಿತಾಂಗದ ಟ್ರಿಬ್ಯುನಲ್‌ಗಳು ನ್ಯಾಯಾ ಲಯಗಳೇ, ನ್ಯಾಯ ಎಲ್ಲ ದೇಶಗಳಲ್ಲಿಯೂ ಏಕರೂಪ ಪಡೆದಿಲ್ಲವೇಕೆ ಮುಂತಾದು ವೆಲ್ಲ ಜಟಿಲವಾದ ವಿಷಯಗಳಾಗಿ ಪರಿಶೀಲನಾರ್ಹವಾಗಿವೆ.

ಒಟ್ಟಿನಲ್ಲಿ, ನ್ಯಾಯ ಎಂಬ ಪದದ ಅರ್ಥವ್ಯಾಪ್ತಿ ಬಲುದೊಡ್ಡದು. ರೂಢಿಯಲ್ಲಿ ಈ ಅರ್ಥವ್ಯಾಪ್ತಿ ಮೂಡಿಬರುವಂತಾಗಬೇಕು. ನ್ಯಾಯದ ನಾನಾ ಮುಖಗಳನ್ನು ಕುರಿತ ವ್ಯಾಪಕವಾದ ಚರ್ಚೆ, ಲೇಖನ, ಗ್ರಂಥನಿರ್ಮಾಣಗಳು ಕನ್ನಡದಲ್ಲಿ ಬೆಳೆದಾಗ ಈ ಶಬ್ದ ವೈತುಂಬಿ ನಿಲ್ಲುತ್ತದೆ.

ಡಾ. ಜಿ. ಎಸ್. ಗಾಯಿ

ಕೆಳದಿ ನಾಯಕರ ಇತಿಹಾಸ ಕುರಿತು ಕೆಲವು ವಿಚಾರಗಳು*

ವಿಜಯನಗರ ಸಾಮ್ರಾಜ್ಯದ ಪತನದ ನಂತರ ದಕ್ಷಿಣ ಭಾರತದಲ್ಲಿ–ಅದರಲ್ಲೂ ಕರ್ನಾಟಕದಲ್ಲಿ–ಹಿಂದೂ ಸಂಸ್ಕೃತಿಯ ದೀವಟಿಗೆಯನ್ನು ಪ್ರಜ್ವಲಗೊಳಿಸಿದ ಅರಸುಮನೆತನಗಳಲ್ಲಿ ಕೆಳದಿಯ ನಾಯಕರು ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಕ್ರಿ.ಶ. ೧೬ನೆಯ ಶತಮಾನದ ಪ್ರಾರಂಭದಿಂದ ಸುಮಾರು ೨೫೦ ವರ್ಷಗಳವರೆಗೆ ರಾಜ್ಯಭಾರಮಾಡಿದ ಈ ನಾಯಕರು ಮೊದಲು ವಿಜಯನಗರ ಅರಸರ ಮಾಂಡಲಿಕರಾಗಿದ್ದು ತರುವಾಯ ಸ್ವತಂತ್ರರಾಗಿ ಆಳಿದರು. ಈ ಮನೆತನದ ಉಚ್ಛ್ರಾಯಕಾಲದಲ್ಲಿ ಅವರ ರಾಜ್ಯವಿಸ್ತಾರವು ಉತ್ತರಕ್ಕೆ ಹೊನ್ನಾವರ–ಗೋವೆಯವರೆಗಿನ ಪ್ರದೇಶವನ್ನೂ ದಕ್ಷಿಣಕ್ಕೆ ಕಾಸರಗೊಡ–ಕಣ್ಣನೂರವರೆಗಿನ ಕರಾವಳಿ ಪ್ರದೇಶವನ್ನೂ ಘಟ್ಟದ ಮೇಲೆ ಶಿವಮೊಗ್ಗೆಯ ಸುತ್ತುಮುತ್ತಲಿನ ಎಲ್ಲ ಪ್ರದೇಶವನ್ನೂ ಒಳಗೊಂಡಿತ್ತು. ಕೆಳದಿ, ಇಕ್ಕೇರಿ, ಭುವನಗಿರಿ ಮತ್ತು ಬಿದನೂರು ಅಥವಾ ನಗರ ಈ ಸ್ಥಳಗಳು ಅವರ ರಾಜಧಾನಿಯ ಪಟ್ಟಣಗಳಾಗಿದ್ದವು. ಈ ಮನೆತನದಲ್ಲಿ ೧೬ ಮಂದಿ ಪುರುಷರೂ ಇಬ್ಬರು ಸ್ತ್ರೀಯರೂ ಆಳಿ, ಬಾಳಿ ನಾಡನ್ನು ಬೆಳಗಿದರು. ಅವರಲ್ಲಿ ಸದಾಶಿವನಾಯಕ, ಮೊದಲನೆಯ ವೆಂಕಟಪ್ಪನಾಯಕ, ಶಿವಪ್ಪನಾಯಕ ಹಾಗೂ ಚೆನ್ನಮ್ಮಾಜಿಯವರ ಹೆಸರುಗಳು ಕರ್ನಾಟಕ ಚರಿತ್ರೆಯಲ್ಲಿ ಅಜರಾಮರವಾಗಿವೆ. ಈ ಚೆನ್ನಮ್ಮಾಜಿಯ ಮಗ ಹಿರಿಯ ಬಸವಪ್ಪನಾಯಕನೇ ಶಿವತತ್ವರತ್ನಾಕರ ಗ್ರಂಥದ ಕರ್ತೃ. ಈ ಸುಪ್ರಸಿದ್ಧ ಸಂಸ್ಕೃತ ಗ್ರಂಥವು ಹಿರಿಯ ಬಸವಪ್ಪನಾಯಕನ ಕಾಲದವರೆಗೆ ಕೆಳದಿ ಮನೆತನದ ಚರಿತ್ರೆಯನ್ನು ತಿಳಿಯಪಡಿಸುವುದಲ್ಲದೆ ಅನೇಕ ವಿಷಯಗಳ ಕುರಿತು ಬರೆದಂಥ ಜ್ಞಾನಕೋಶವಿರುತ್ತದೆ. ಸುಮಾರು ೧೮ನೆಯ ಶತಮಾನದ ಕೊನೆಗೆ ಲಿಂಗಣ್ಣ ಕವಿ

---

* ೧೯೬೯ರ ಮೇ ತಿಂಗಳ ದಿನಾಂಕ ೧೯ರಂದು ಶಿವಮೊಗ್ಗೆಯಲ್ಲಿ ನಡೆದ ಕೆಳದಿ ಅರಸರ ಇತಿಹಾಸ ಸಮ್ಮೇಳನದಲ್ಲಿ ಓದಿದ ಲೇಖನವು.

ವಿರಚಿತ ಕೆಳದಿನೃಪವಿಜಯವು ಈ ವಂಶದ ಚರಿತ್ರೆಯ ಬಗ್ಗೆ ಬರೆದ ಇನ್ನೊಂದು ಮಹತ್ವದ ಗ್ರಂಥ. ಅಲ್ಲದೆ ಈ ಮನೆತನಕ್ಕೆ ಸಂಬಂಧಪಟ್ಟ ನೂರಾರು ಶಾಸನಗಳು ಶಿವಮೊಗ್ಗೆಯ ಸುತ್ತುಮುತ್ತಲಿನ ಪ್ರದೇಶದಲ್ಲಿ ಹಾಗೂ ದಕ್ಷಿಣಕನ್ನಡ ಜಿಲ್ಲೆಯಲ್ಲಿ ದೊರೆತಿವೆ. ಡಚ್, ಫ್ರೆಂಚ್, ಪೋರ್ತುಗೀಜ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಈ ವಂಶದ ಬಗ್ಗೆ ಅನೇಕ ದಾಖಲೆಗಳು ದೊರೆಯುತ್ತವೆ. ಹಾಗೂ ಅನೇಕ ವಿದೇಶೀ ಪ್ರವಾಸಿಗರ ವರದಿಗಳೂ ಉಪಲಬ್ಧವಾಗಿವೆ ಅಲ್ಲದೆ ಕೆಳದಿ ನಾಯಕರ ಚರಿತ್ರೆಯನ್ನು ಕುರಿತು ಅನೇಕ ಆಧುನಿಕ ಪಾಶ್ಚಾತ್ಯ ಹಾಗೂ ಭಾರತೀಯ ವಿದ್ವಾಂಸರು ಬರೆದಿದ್ದಾರೆ. ಅವರಲ್ಲಿ ಸಿವೆಲ್ ಮಹಾಶಯರು ಮೊದಲಿಗರೆಂದು ಹೇಳಬಹುದು. ಆಮೇಲೆ ಎಲ್. ಡಿ. ಬಾರ್ನೆಟ್, ಹೊಸಕೋಟೆ ಕೃಷ್ಣಶಾಸ್ತ್ರಿ, ಶಾಮಶಾಸ್ತ್ರಿ, ಎಂ. ಎಚ್. ಕೃಷ್ಣ, ಫಾದರ್ ಹೀರಾಸ್, ನರಹರಯ್ಯ, ಎಂ. ಎಸ್. ಪುಟ್ಟಣ್ಣ ಮುಂತಾದವರ ಹೆಸರುಗಳನ್ನು ನೆನೆದುಕೊಳ್ಳಬಹುದು. ಶ್ರೀ ನೆಲಮಂಗಲ ಲಕ್ಷ್ಮೀನಾರಾಯಣರಾಯರು ೧೯೩೬ರಷ್ಟು ಹಿಂದೆ—ವಿಜಯನಗರದ ಷಟ್‌ಶತಸಾಂವತ್ಸರಿಕ ಸಂಸ್ಮರಣ ಸಂಚಿಕೆಯಲ್ಲಿ-ಕೆಳದಿ ನಾಯಕರ ಇತಿಹಾಸದ ಬಗ್ಗೆ-ಅದರಲ್ಲೂ ವಿಶೇಷವಾಗಿ ಅವರ ವಂಶಾವಳಿಯ ಬಗ್ಗೆ—ಶಾಸನಗಳ ಆಧಾರದಿಂದ ಪ್ರಮಾಣಭೂತವಾದ ಸಂಶೋಧನಾತ್ಮಕ ಲೇಖನವನ್ನು ಪ್ರಕಟಿಸಿದ್ದಾರೆ.[1]

ಹೀಗೆ ಕೆಳದಿ ನಾಯಕರ ಬಗ್ಗೆ ಅನೇಕ ಗ್ರಂಥಗಳೂ, ವಿದ್ವಾಂಸರ ಲೇಖನಗಳೂ, ವರದಿಗಳೂ ಉಪಲಬ್ಧವಿದ್ದಾಗ್ಯೂ ಇನ್ನೂ ಎಷ್ಟೋ ಸಂಗತಿಗಳ ಬಗ್ಗೆ ಸಮರ್ಪಕವಾದ ವಿವರಗಳು ದೊರೆತಿರುವದಿಲ್ಲ. ಅನೇಕ ವಿಷಯಗಳು ವಿವಾದಾಸ್ಪದವಾಗಿಯೇ ಉಳಿದಿವೆ. ಶಿವತತ್ವರತ್ನಾಕರ ಮತ್ತು ಕೆಳದಿನೃಪವಿಜಯದಲ್ಲಿ ಕೊಟ್ಟಿರುವ ಕೆಲವು ವಿವರಗಳು ಶಾಸನಗಳಂಥ ಇತರ ಪ್ರಮಾಣಭೂತವಾದ ಆಧಾರಗಳಿಂದ ವಿಶದವಾಗುವ ಐತಿಹಾಸಿಕ ಅಂಶಗಳಿಗೆ ಅಸಮಂಜಸವಾಗಿಯೂ ಪರಸ್ಪರ ವಿರೋಧವಾಗಿಯೂ ಇರುತ್ತವೆ. ಉದಾ: ವಿಜಯನಗರದ ಅರಸು ಕೃಷ್ಣದೇವರಾಯನು ಚೌಡಪ್ಪನಾಯಕನನ್ನು ತನ್ನ ರಾಜಧಾನಿಗೆ ಬರಮಾಡಿಕೊಂಡನೆಂದೂ ಅಲ್ಲಿಂದ ಹಿಂತಿರುಗಿದನಂತರ ಕ್ರಿ.ಶ. ೧೪೯೯ರಲ್ಲಿ ನಾಯಕನ ಪಟ್ಟಾಭಿಷೇಕವಾಯಿತೆಂದೂ ಕೆಳದಿನೃಪವಿಜಯದಲ್ಲಿ ಹೇಳಿದೆ. ಆದರೆ ಇತಿಹಾಸಜ್ಞರಿಗೆ ತಿಳಿದಂತೆ ಕೃಷ್ಣದೇವರಾಯನು ವಿಜಯನಗರದ ಸಿಂಹಾಸನವನ್ನು ಕ್ರಿ.ಶ. ೧೫೦೯-೧೦ರಲ್ಲಿ ಏರಿದನು. ಆದ್ದರಿಂದ ಆತನು ಕ್ರಿ.ಶ. ೧೪೯೯ಕ್ಕಿಂತ ಮುಂಚೆಯೇ ನಾಯಕನನ್ನು ಬರಮಾಡಿಕೊಂಡಿರುವದು ಅಸಾಧ್ಯ. ಹೀಗೆ ಈ ಗ್ರಂಥಗಳಲ್ಲಿ ಕೆಲವು ವಿವರಗಳು ಸಮರ್ಪಕವಿರುವುದಿಲ್ಲ. ಅವುಗಳನ್ನು ನಿರ್ದುಷ್ಟವಾದ ಮತ್ತು

---

[1] *Vijayanagara Sex-Centenary Volume*, (1936), pp. 255-69. ಇತ್ತೀಚೆಗೆ ಶ್ರೀ ಕೆ. ಡಿ. ಸ್ವಾಮಿನಾಥನ್ ಎಂಬುವವರು ಕೆಳದಿ ನಾಯಕರ ಬಗ್ಗೆ ಬರೆದಿರುವ ಪುಸ್ತಕವು ಅನೇಕ ಲೋಪ-ದೋಷಗಳಿಂದ ಕೂಡಿದ್ದು ಅಷ್ಟು ನಂಬಲರ್ಹವಾಗಿರುವುದಿಲ್ಲ.

ಆಧಾರಯುತವಾದ, ಅದರಲ್ಲೂ ಶಾಸನಗಳಂಥ ಪ್ರಮಾಣಭೂತವಾದ ಆಧಾರಗಳ ಒರೆಗಲ್ಲಿಗೆ ಹಚ್ಚಿ ಸತ್ಯಸಂಗತಿಗಳನ್ನು ತಿಳಿದುಕೊಳ್ಳುವುದು ಸಂಶೋಧಕರ-ಇತಿಹಾಸಜ್ಞರ ಕರ್ತವ್ಯ. ಇಂಥ ಅನೇಕ ಸಮಸ್ಯೆಗಳಲ್ಲಿ ಕೆಲವನ್ನು ಕುರಿತು ಮಾತ್ರ ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

ಶಿವತತ್ವರತ್ನಾಕರ ಮತ್ತು ಕೆಳದಿನೃಪವಿಜಯದಲ್ಲಿ ಹೇಳಿದಂತೆ ಕೆಳದಿ ಮನೆತನದ ಮೂಲಪುರುಷನು ಚೌಡಪ್ಪನೆಂದೂ ಆತನೇ ಈ ಮನೆತನದ ಅಸ್ತಿಭಾರ ವನ್ನು ಹಾಕಿದನೆಂದೂ ಎಲ್ಲ ಆಧುನಿಕ ವಿದ್ವಾಂಸರು ಒಪ್ಪಿದ್ದಾರೆ. ಆತನ ಕಾಲದ ಒಂದೇ ಒಂದು ಶಾಸನವು[2] ಇದುವರೆಗೆ ದೊರೆತಿದ್ದು ಅದರ ತೇದಿಯು ಕ್ರಿ.ಶ. ೧೫೦೬. ಇದಾದ ನಂತರ ಸುಮಾರು ೪೦ ವರುಷಗಳವರೆಗೆ ಅಂದರೆ ಚೌಡಪ್ಪನ ಮಗ ಸದಾಶಿವನಾಯಕನ ಮೊಟ್ಟಮೊದಲನೆಯ ಕ್ರಿ.ಶ. ೧೫೪೪-೪೫ರ ತೇದಿಯ ಶಾಸನದವರೆಗೆ[3] ಈ ಮನೆತನದ ಬಗ್ಗೆ ನಂಬಲರ್ಹವಾದ ಯಾವ ಶಾಸನಗಳೂ ಇದುವರೆಗೆ ದೊರಕಿರುವದಿಲ್ಲ.[4]

ಇಲ್ಲಿ ವಿಜಯನಗರದ ಅರಸು ಅಚ್ಯುತರಾಯನ ಕಾಲದ ಮೂರು ಶಾಸನ ಗಳನ್ನು ಗಮನಿಸಬಹುದು. ಅವು ದಕ್ಷಿಣಕನ್ನಡ ಜಿಲ್ಲೆಯ ಬಸರೂರು, ಕೋಟೇಶ್ವರ ಮತ್ತು ಉಪ್ಪೂರು ಎಂಬಲ್ಲಿ ದೊರೆತಿದ್ದು ಅವುಗಳ ತೇದಿ ಕ್ರಿ.ಶ. ೧೫೩೩ರಿಂದ ೧೫೩೬ರವರೆಗೆ ಇರುತ್ತದೆ.[5] ಈ ಶಾಸನಗಳಲ್ಲಿ ಸುಂಕಣನಾಯಕ ನೆಂಬುವವನು ಬಾರಕೂರು ರಾಜ್ಯವನ್ನು ಅಚ್ಯುತರಾಯನಿಂದ ಪಡೆದುಕೊಂಡಿದ್ದ ನೆಂದೂ ಆತನ ಕೈಕೆಳಗೆ ಕೊಂಡಪ್ಪವಡೆಯನೆಂಬಾತನು ಆ ಭಾಗವನ್ನು ಆಳುತ್ತಿದ್ದ ನೆಂದೂ ಬರೆದಿದೆ. ಈ ಶಾಸನಗಳನ್ನು ಕೇಂದ್ರ ಶಾಸನ ಶಾಖೆಯ ವಾರ್ಷಿಕ ವರದಿಗಳಲ್ಲಿ ಉಲ್ಲೇಖಿಸಿದ್ದು ಬಸರೂರು ಶಾಸನದ ಬಗ್ಗೆ ಹೇಳುವಾಗ ಸಂಪಾದಕರು ಈ ನಾಯಕನ ಹೆಸರನ್ನು ಸಂಖಣನಾಯಕನೆಂದು ಭಾವಿಸಿ ಆತನು ಕೆಳದಿ ನ್ಾಯಕರ ವಂಶಕ್ಕೆ ಸೇರಿದವನೆಂದು ಬರೆದಿದ್ದಾರೆ.[6] ಶ್ರೀ ಲಕ್ಷ್ಮೀನಾರಾಯಣ ರಾಯರು ಮೇಲೆ ಹೇಳಿದ ತಮ್ಮ ಲೇಖನದಲ್ಲಿ ಈ ನಾಯಕನ ಬಗ್ಗೆ ಪ್ರಸ್ತಾಪಿಸಿರು

---

[2] *M.A.R.*, 1930. No. 65.

[3] *E.C.*, Vol. VII, SK, 255.

[4] ಸದಾಶಿವನಾಯಕನ ಕಾಲದ್ದೆಂದು ಹೇಳಲಾದ ಕ್ರಿ.ಶ. ೧೫೨೯ರ ತೇದಿಯ ತಾಮ್ರಶಾಸನ ವೊಂದರಲ್ಲಿ (*M.A.R*, 1928, No. 65) ಚೌಡಪ್ಪನ ತಾತ ಹಾಗೂ ತಂದೆಯ ಹೆಸರು ದೇವಾಗೌಡ ಮತ್ತು ಗೋಪಗೌಡ ಎಂದು ಬರೆದಿದೆ. ಆದರೆ ಈ ಶಾಸನವು ಕೃತಕ (spurious) ಪಿರಬಹುದೆಂದು ಅದರ ಸಂಪಾದಕರ ಅಭಿಪ್ರಾಯ.

[5] *SII*, Vol. IX, Part II. Nos. 555 and 578; and *ARSIE* 1928–29. APP. B, No. 487.

[6] *ARSIE*, 1927–28, p. 63.

ವದಿಲ್ಲ. ಕೆಳದಿ ಮನೆತನದಲ್ಲಿ ಇಬ್ಬರು ಸಂಕಣನಾಯಕರಿದ್ದರು. ಒಬ್ಬನು ದೊಡ್ಡ ಸಂಕಣನಾಯಕ. ಇನ್ನೊಬ್ಬನು ಚಿಕ್ಕಸಂಕಣನಾಯಕ. ಇವರಿಬ್ಬರೂ ಸದಾಶಿವನಾಯಕನ ಮಕ್ಕಳಾಗಿದ್ದರು. ಮೇಲೆ ಹೇಳಿದಂತೆ ಸದಾಶಿವನಾಯಕನ ಅತ್ಯಂತ ಪ್ರಾಚೀನ ಶಾಸನವು ಕ್ರಿ.ಶ. ೧೫೪೪–೪೫ರ ತೇದಿಯದಾಗಿದ್ದು ಆತನು ಬಾರಕೂರು ರಾಜ್ಯಕ್ಕೆ ಅಧಿಪತಿಯಾದ ವಿಷಯವನ್ನು ತಿಳಿಸುವ ಪ್ರಾಚೀನತಮ ಶಾಸನವು[7] ಕ್ರಿ.ಶ. ೧೫೫೪ರ ತೇದಿಯದಾಗಿರುತ್ತದೆ. ಆದುದರಿಂದ ಅವನ ಮಕ್ಕಳಲ್ಲಿ ಒಬ್ಬನಾದ ಸಂಕಣನಾಯಕನು ಕ್ರಿ.ಶ. ೧೫೩೩ರಷ್ಟು ಹಿಂದೆಯೇ ಬಾರಕೂರು ರಾಜ್ಯಕ್ಕೆ ಅಧಿಪತಿಯಾಗಿದ್ದನೆಂದು ಹೇಳುವುದು ಸಮಂಜಸವೆನಿಸುವುದಿಲ್ಲ. ಸದಾಶಿವನಾಯಕನಿಗಿಂತ ಮುಂಚಿತವಾಗಿ ಆತನ ತಂದೆಯಾದ ಚೌಡಪ್ಪನಾಯಕನು ಬಾರಕೂರು ಭಾಗಕ್ಕೆ ಅಧಿಪತಿಯಾಗಿದ್ದನೆಂದು ನಮಗೆ ಬೇರೆ ಆಧಾರಗಳಿಂದ ತಿಳಿದಿಲ್ಲ. ಮೇಲೆ ಹೇಳಿದ ಮೂರೂ ಶಾಸನಗಳಲ್ಲಿ ನಾಯಕನ ಹೆಸರು ಸುಂಕಣನಾಯಕನೆಂದಿದ್ದು ಕೇಂದ್ರ ಶಾಸನ ಶಾಖೆಯ ವರದಿಗಳ ಸಂಪಾದಕರು ಭಾವಿಸಿದಂತೆ ಸಂಕಣನಾಯಕನೆಂದಿರುವುದಿಲ್ಲ. ಆತನ ಹೆಸರನ್ನು ಮೂರೂ ಶಾಸನಗಳಲ್ಲಿ ತಪ್ಪಾಗಿ ಬರೆದಿರಲಾರರು. ಮೇಲಾಗಿ ಈ ಸುಂಕಣನಾಯಕನು ಕೆಳದಿಮನೆತನದವನಾಗಿದ್ದನೆಂಬುವುದಕ್ಕೆ ಶಾಸನಗಳಲ್ಲಿ ಯಾವ ಸೂಚನೆಯೂ ಇರುವುದಿಲ್ಲ. ಯಡವಮುರಾರಿ, ಕೋಟೆಕೋಲಾಹಲ ಮುಂತಾದ ಕೆಳದಿ ನಾಯಕರ ಬಿರುದುಗಳಾಗಲೀ ವಿಶುದ್ಧಾದ್ವೈತ–ಶಿವಭಕ್ತಿಪರಾಯಣ ಮುಂತಾದ ವಿಶೇಷಣಗಳಾಗಲೀ ಇರುವುದಿಲ್ಲ. ಕ್ರಿ.ಶ. ೧೫೦೬ರ ತೇದಿಯ ಚೌಡಪ್ಪನಾಯಕನ ಶಾಸನದಲ್ಲಿ ಸಹ ಎಡವಮುರಾರಿ ಎಂಬ ಬಿರುದನ್ನು ಉಪಯೋಗಿಸಲಾಗಿದೆ.[8] ಇವೆಲ್ಲ ಕಾರಣಗಳಿಂದ ಬಸರೂರು, ಕೋಟೇಶ್ವರ ಮತ್ತು ಉಪ್ಪೂರು ಶಾಸನಗಳಲ್ಲಿ ಉಲ್ಲೇಖಿಸಿರುವ ಸುಂಕಣನಾಯಕನು ಕೆಳದಿಮನೆತನದವನಲ್ಲವೆಂದು ತಿಳಿಯಬೇಕಾಗುತ್ತದೆ.

ಕ್ರಿ.ಶ. ೧೫೬೨ರ ತೇದಿಯ ಶಾಸನವೊಂದರಲ್ಲಿ[9] ಸದಾಶಿವನಾಯಕನು ತಮ್ಮ ತಂದೆ ಚೌಡಪ್ಪನಿಗೂ ತಾಯಿ ತಿರುಮಂಮನವರಿಗೂ ಕೈಲಾಸಪದವಿ ದೊರೆಯುವ ಉದ್ದೇಶದಿಂದ ಭೂಮಿಯನ್ನು ದಾನಮಾಡಿದ ಸಂಗತಿಯಿದೆ. ಇದರಿಂದ ಪ್ರಸಿದ್ಧ ಸದಾಶಿವನಾಯಕನ ಪುಣ್ಯಮಾತೆಯ ಹೆಸರು ತಿರುಮಂಮ ಎಂದು ಇದ್ದುದಾಗಿ ತಿಳಿಯುವುದು.[10]

---

[7] *SII*, Vol. VII, No. 366.

[8] ಈ ಬಿರುದನ್ನು ಸದಾಶಿವನಾಯಕನು ವಿಜಯನಗರದ ಅರಸು ರಾಮರಾಜನಿಂದ ಪಡೆದುಕೊಂಡನೆಂದು ಶಿವತತ್ವರತ್ನಾಕರದಲ್ಲಿ ಹೇಳಿದೆ.

[9] *SII.*, Vol. IX, Part II, No. 674.

[10] ಶ್ರೀ ಲಕ್ಷ್ಮೀನಾರಾಯಣರಾಯರು ತಮ್ಮ ಲೇಖನದಲ್ಲಿ ಈ ಹೆಸರನ್ನು ವಿರುಪಮ್ಮ ಎಂದು ಬರೆದಿದ್ದಾರೆ.

ಕೆಳದಿಯ ಅರಸುಮನೆತನದಲ್ಲಿ ಇಮ್ಮಡಿ ಸದಾಶಿವನಾಯಕನ ಸ್ಥಾನ ಮಾನದ ಬಗ್ಗೆ ಅನೇಕ ಊಹಾಪೋಹಗಳನ್ನು ಮಾಡಲಾಗಿದೆ. ಸದಾಶಿವ ನಾಯಕನು ತನ್ನ ತಮ್ಮನಾದ ಭದ್ರಪ್ಪನಾಯಕನಿಗೆ ಇಮ್ಮಡಿ ಸದಾಶಿವನಾಯಕ ನೆಂಬ ಹೆಸರನ್ನಿಟ್ಟು ರಾಜ್ಯಭಾರವನ್ನು ವಹಿಸಿಕೊಟ್ಟನೆಂದು ಶಿವತತ್ವರತ್ನಾಕರದಲ್ಲಿ ಹೇಳಿದರೆ ಕೆಳದಿನೃಪವಿಜಯದಲ್ಲಿ ವಿಜಯನಗರದ ಅರಸು ಕೃಷ್ಣದೇವರಾಯನು ಸದಾಶಿವನಾಯಕನಿಗೇ ಇಮ್ಮಡಿನಾಯಕನೆಂಬ ಬಿರುದನ್ನು ದಯಪಾಲಿಸಿದನೆಂದು ಬರೆದಿದೆ. ಇಮ್ಮಡಿ ಸದಾಶಿವನ ಕಾಲದ ಐದು ಶಾಸನಗಳು ಇದುವರೆಗೆ ದೊರೆತಿದ್ದು ಅವೆಲ್ಲವೂ ಕ್ರಿ.ಪೂ. ೧೫೬೬ರ ತೇದಿಯದೇ ಇರುತ್ತವೆ. ಮತ್ತು ಅವುಗಳಲ್ಲಿ ಆತನ ತಂದೆ–ಅಜ್ಜಂದಿರ ಬಗ್ಗೆ ಉಲ್ಲೇಖವಿಲ್ಲದ್ದರಿಂದ ವಂಶಾವಳಿಯಲ್ಲಿ ಆತನ ಸ್ಥಾನಮಾನದ ಬಗ್ಗೆ ನಿರ್ಧರಿಸುವುದು ಕಷ್ಟಸಾಧ್ಯ.[11] ಕ್ರಿ.ಶ. ೧೫೯೭ರ ತೇದಿಯ ಮೊದಲನೆಯ ವೆಂಕಟಪ್ಪನಾಯಕನ ತಾಮ್ರಶಾಸನದಲ್ಲಿ[12] ಈ ವೆಂಕಟಪ್ಪನಾಯಕ ನನ್ನು ಸದಾಶಿವನಾಯಕನ ಮೊಮ್ಮಗನೆಂದೂ ಇಮ್ಮಡಿ ಸದಾಶಿವನಾಯಕನ ಮಗ ನೆಂದೂ ಕರೆದಿದೆ. ಇದರಿಂದ ಇಮ್ಮಡಿ ಸದಾಶಿವನಾಯಕನು ಸದಾಶಿವನಾಯಕನ ಮಗನೆಂದೂ ಮೊದಲನೆಯ ವೆಂಕಟಪ್ಪನಾಯಕನ ತಂದೆಯೆಂದೂ ತಿಳಿಯುವುದು. ಈ ವೆಂಕಟಪ್ಪನಾಯಕನ ತಂದೆಯ ಹೆಸರು ದೊಡ್ಡಸಂಕಣನಾಯಕನೆಂದು ಬೇರೆ ಆಧಾರಗಳಿಂದ ಗೊತ್ತಿರುವುದರಿಂದ ದೊಡ್ಡಸಂಕಣನಾಯಕನೇ ಇಮ್ಮಡಿ ಸದಾಶಿವ ನಾಯಕನೆಂದು ಶ್ರೀ ಲಕ್ಷ್ಮೀನಾರಾಯಣರಾಯರು ಬರೆದಿದ್ದಾರೆ.[13] ಆದರೆ ವಿಜಯನಗರದ ಅರಸು ಶ್ರೀರಂಗರಾಯನ ಕಾಲದ ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲೂಕಿನ ಸಾತೇನಹಳ್ಳಿಯಲ್ಲಿ ದೊರೆತ ಕ್ರಿ.ಶ. ೧೫೮೧ರ ತೇದಿಯ ಶಾಸನದಲ್ಲಿ[14] 'ಶ್ರೀಮನ್ಮಹಾನಾಯಕಾಚಾರ್ಯ ಇಮ್ಮಡಿ ಸದಾಶಿವನಾಯಕರ ಕುಮಾರ ಸಂಖಣನಾಯಕರು' ಎಂದು ಬರೆದದ್ದರಿಂದ ಸಂಕಣನಾಯಕನ ತಂದೆಯಾದ ಸದಾಶಿವನಾಯಕನಿಗೇ ಇಮ್ಮಡಿ ಸದಾಶಿವನಾಯಕನೆಂಬ ಹೆಸರಿದ್ದಿ ತೆಂದು ತಿಳಿಯಲವಕಾಶವಿದೆ. ಈ ವಿಷಯವನ್ನು ಕುರಿತು ಬರೆದಿರುವ ತಮ್ಮ ಲೇಖನದಲ್ಲಿ[15] ಡಾ. ಗೋಪಾಲ್ ಅವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿ ಮೇಲೆ ಉದಾಹರಿಸಿದ ವೆಂಕಟಪ್ಪನಾಯಕನ ತಾಮ್ರಶಾಸನದಲ್ಲಿ ಉಕ್ತವಾದ ಇಮ್ಮಡಿಸದಾಶಿವನಾಯಕನು ಸದಾಶಿವನಾಯಕನ ಮಗನೆಂಬ ಹೇಳಿಕೆಯು

---

11 ಒಂದು ಶಾಸನದಲ್ಲಿ ಆತನನ್ನು ಮಹಾರಾಜಾಧಿರಾಜ - ಪರಮೇಶ್ವರ ಎಂದು ತಪ್ಪಾಗಿ ಸಂಬೋಧಿಸಲಾಗಿದೆ.

12 *M.A.R.*, 1923, pp. 105 –07.

13 *Vij. Sex - Cent. Vol.*, p. 259.

14 *ARIE.* 1957–58, App. B, No. 304.

15 *Journ. Myth. Soc.*, Vol. LV, pp. 92–98.

ನಂಬಲಾಗದೆಂದು ಬರೆದಿದ್ದಾರೆ. ಮತ್ತು ಈ ತಾಮ್ರಶಾಸನದ ಹೊರತು ಬೇರೆ ಎಲ್ಲಿಯೂ ಸದಾಶಿವನಾಯಕನ ಮಗನಿಗೆ ಹಾಗೂ ವೆಂಕಟಪ್ಪನಾಯಕನ ತಂದೆಗೆ ಅರ್ಥಾತ್ ದೊಡ್ಡಸಂಕಣನಾಯಕನಿಗೆ ಇಮ್ಮಡಿಸದಾಶಿವನಾಯಕನೆಂಬ ಉಲ್ಲೇಖ ವಿರುವದಿಲ್ಲೆಂದು ಡಾ. ಗೋಪಾಲ್ ಹೇಳಿದ್ದಾರೆ. ಆದರೆ ಸಾಗರ ತಾಲೂಕಿನ ವರದಾತೀರ್ಥ ಹಳ್ಳಿಯಲ್ಲಿರುವ ರಾಮೇಶ್ವರ ದೇವಸ್ಥಾನದಲ್ಲಿ ಕ್ರಿ.ಶ. ೧೬೯೯ರ ತೇದಿಯ ವೆಂಕಟಪ್ಪನಾಯಕನ ಕಾಲದ ಶಿಲಾಶಾಸನವು ೧೯೨೮ರಲ್ಲಿ ಪ್ರಸಿದ್ಧ ವಾಗಿದೆ.[16] ಈ ಶಾಸನದಲ್ಲಿ "ಕೆಳದಿಯ ಸದಾಶಿವರಾಯನಾಯಕರ ಪೌತ್ರ ರಾದ ಇಮ್ಮಡಿಸದಾಶಿವರಾಯನಾಯಕರ ಪುತ್ರರಾದ ವೆಂಕಟಪ್ಪನಾಯಕರು ಜೀರ್ಣೋದ್ಧಾರವ ಮಾಡಿಸಿದ ರಾಮೇಶ್ವರ ದೇವಸ್ಥಾನಕ್ಕೆ ಶುಭಮಸ್ತು" ಎಂದು ಹೇಳಿದೆ. ಈ ಶಾಸನವು ಡಾ. ಗೋಪಾಲ್ ಅವರ ಗಮನಕ್ಕಾಗಲೀ ಶ್ರೀ ಲಕ್ಷ್ಮೀನಾರಾಯಣರಾವ್ ಅವರ ಗಮನಕ್ಕಾಗಲೀ ಬಂದಂತಿಲ್ಲ. ಆದರೆ ಇಲ್ಲಿ ಕೊಟ್ಟಿರುವ ಇಮ್ಮಡಿ ಸದಾಶಿವನಾಯಕನ ಉಲ್ಲೇಖವು ಮೇಲೆ ಹೇಳಿದ ಶ್ರೀ ಲಕ್ಷ್ಮೀನಾರಾಯಣರಾವ್ ಅವರ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಅಂತೂ ಈ ಇಮ್ಮಡಿಸದಾಶಿವನಾಯಕನ ಪ್ರಶ್ನೆಯು ಜಟಿಲವಾಗಿದ್ದು ಇನ್ನೂ ಖಚಿತವಾಗಿ ಹೆಚ್ಚಿನ ಆಧಾರಗಳು ದೊರಕುವವರೆಗೆ ಯಾವುದನ್ನೂ ನಿಶ್ಚಿತವಾಗಿ ಹೇಳುವಂತಿಲ್ಲ.

ಮೊದಲನೆಯ ವೆಂಕಟಪ್ಪನಾಯಕನ ತರುವಾಯ ಆತನ ಮಗನಾದ ಭದ್ರಪ್ಪನಾಯಕನು ತಂದೆಯಿದ್ದಾಗಲೇ ತೀರಿಕೊಂಡದ್ದರಿಂದ ಮೊಮ್ಮಗನಾದ ವೀರಭದ್ರನಾಯಕನು ಪಟ್ಟಕ್ಕೆ ಬಂದುದಾಗಿ ಶಿವತತ್ತ್ವರತ್ನಾಕರದಿಂದ ತಿಳಿಯುವುದು. ಈಗ ೫-೬ ವರ್ಷಗಳ ಹಿಂದೆ ಉಡುಪಿಯ ಶ್ರೀಕೃಷ್ಣಮಠದ ಆಗಿನ ಪರ್ಯಾಯ ಸ್ವಾಮಿಗಳ (ಶಿರೂರ ಮಠ) ಅನುಗ್ರಹದಿಂದ ಪ್ರಸ್ತುತ ಲೇಖಕರಿಗೆ ಕೆಲವು ತಾಮ್ರ ಶಾಸನಗಳು ಅವಗಾಹನೆಗಾಗಿ ದೊರೆತವು.[17] ಅವುಗಳಲ್ಲಿ ಮೂರು ತಾಮ್ರ ಶಾಸನಗಳು ಕೆಳದಿಯ ನಾಯಕರಿಗೆ ಸಂಬಂಧಪಟ್ಟಿದ್ದು ಒಂದು ಶಾಸನದಲ್ಲಿ[18] ವೆಂಕಟಪ್ಪನಾಯಕರ ಪುತ್ರರು ಭದ್ರಪ್ಪನಾಯಕರು ಉಡುಪಿಯ ಶ್ರೀಕೃಷ್ಣ ದೇವರಿಗೆ ದತ್ತಿಬಿಟ್ಟ ಉಲ್ಲೇಖವಿದೆ. ಈ ಶಾಸನದ ತೇದಿಯು ಕ್ರಿ.ಶ. ೧೬೦೩ ಇದ್ದುದರಿಂದ ಭದ್ರಪ್ಪನಾಯಕನು ಆ ತೇದಿಯವರೆಗೆ ಜೀವಿಸಿದ್ದನೆಂದು ತಿಳಿಯು ವುದು. ಉಳಿದೆರಡು ತಾಮ್ರಶಾಸನಗಳು[19] ಭದ್ರಪ್ಪನಾಯಕನ ಮಗನಾದ ವೀರಭದ್ರನಾಯಕನ ಕಾಲದ್ದಾಗಿವೆ.

ವೀರಭದ್ರನಾಯಕನು ತನಗೆ ಸಂತಾನಪ್ರಾಪ್ತಿಯಿಲ್ಲದ್ದರಿಂದ ರಾಜ್ಯ

---

[16] *M.A.R.*, 1928, No. 86.

[17] *ARIE*, 1963-64, App. A, Nos. 39–49.

[18] Ibid., No. 39.

[19] Ibid., Nos. 40–41.

ಭಾರವನ್ನು ತನ್ನ ಚಿಕ್ಕಪ್ಪಂದಿರಾದ ಶಿವಪ್ಪನಾಯಕ ಮತ್ತು ಆತನ ತಮ್ಮನಾದ ಎರಡನೆಯ ವೆಂಕಟಪ್ಪನಾಯಕರಿಗೆ ವಹಿಸಿಕೊಟ್ಟನೆಂದು ಶಿವತತ್ತ್ವರತ್ನಾಕರದಲ್ಲಿ ಹೇಳಿದೆ. ಶಿವಪ್ಪನಾಯಕನ ಕಾಲದ ಶಾಸನಗಳು ಕ್ರಿ.ಶ. ೧೬೫೨ರಿಂದ ೧೬೫೯ರ ವರೆಗೆ ದೊರೆತಿದ್ದು ವೆಂಕಟಪ್ಪನಾಯಕನ ಕಾಲದ ಕ್ರಿ.ಶ. ೧೬೬೦ರ ತೇದಿಯ ಎರಡೇ ಶಾಸನಗಳು ಇದುವರೆಗೆ ದೊರೆತಿವೆ.[20] ಇತ್ತೀಚೆಗೆ ಉತ್ತರಪ್ರದೇಶದ ವಾರಣಾಸಿ(ಕಾಶಿ)ಯಲ್ಲಿ ಪಂಚಕ್ರೋಶಿಯ ದಾರಿಯಲ್ಲಿರುವ ಸುಪ್ರಸಿದ್ಧವಾದ ಕಪಿಲಧಾರಾತೀರ್ಥದ ಗೋಡೆಗಳಲ್ಲಿ ಎರಡು ಹಾಗೂ ಆ ತೀರ್ಥದ ಮೇಲ್ಗಡೆಯ ಮಂಟಪದ ನೆಲದಲ್ಲಿ ಒಂದು ಹೀಗೆ ಒಟ್ಟು ಮೂರು ಶಾಸನಗಳು ದೊರೆತಿದ್ದು ಅವು ಕೆಳದಿನಾಯಕರ ಮನೆತನಕ್ಕೆ ಸಂಬಂಧಪಟ್ಟಿರುತ್ತವೆ.[21] ಕರ್ನಾಟಕದ ಹೊರಗಡೆ–ಅದೂ ಸಾವಿರಾರು ಮೈಲಿನಷ್ಟು ದೂರದ ವಾರಣಾಸಿಯಲ್ಲಿ ದೊರೆತ ಕೆಳದಿನಾಯಕರ ಈ ಶಾಸನಗಳು ವಿಶೇಷ ಗಮನಾರ್ಹವಾಗಿವೆ. ಈ ಮೂರು ಶಾಸನಗಳಲ್ಲಿ ಎರಡು ಶಾಸನಗಳು ನಾಗರಿಲಿಪಿಯಲ್ಲಿದ್ದು ಒಂದು ಸಂಸ್ಕೃತ ಭಾಷೆಯಲ್ಲಿ ಮತ್ತು ಒಂದು ಸಂಸ್ಕೃತಪ್ರಭಾವಿತ ಪ್ರಾದೇಶಿಕ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಮೂರನೆಯ ಶಾಸನವು ಕನ್ನಡ ಲಿಪಿ ಹಾಗೂ ಭಾಷೆಯಲ್ಲಿದೆ. ಈ ಮೂರೂ ಶಾಸನಗಳ ಕಾಲವು ವಿಕ್ರಮ ಶಕೆ ೧೭೧೨ ಹಾಗೂ ಶಾಲಿವಾಹನ ಶಕೆ ೧೫೭೭ ಎಂದಿದ್ದು ಕ್ರಿ.ಶ. ೧೬೫೫ ಎಂದಾಗುತ್ತದೆ. ಅವುಗಳಲ್ಲಿ ಕೆಳದಿಯ ಶಿವಪ್ಪನಾಯಕ ಮತ್ತು ವೆಂಕಟಪ್ಪನಾಯಕರು ಕಪಿಲಧಾರಾತೀರ್ಥವನ್ನು ಉತ್ಖನನ ಮಾಡಿಸಿದರೆಂದು ಹೇಳಿದೆ. ಅಂದರೆ ಆ ತೀರ್ಥವನ್ನು ಜೀರ್ಣೋದ್ಧಾರ ಇಲ್ಲವೆ ಹೂತುಹೋಗಿದ್ದನ್ನು ಪುನಃ ಅಗಳಿಸಿದರು ಎಂದು ತಿಳಿಯಬೇಕು. ಸಂಸ್ಕೃತ ಶಾಸನಗಳಲ್ಲಿ "ಶ್ರೀಮತ್ಕೆಲದಿ ಮಹೀಪಾಲ ಸದಾಶಿವನಾಯಕಸ್ಯ ಪ್ರಪೌತ್ರೌ ಸಂಕಣನಾಯಕಸ್ಯ ಪೌತ್ರೌ ಸಿದ್ಧಪ್ಪನಾಯಕಸ್ಯ ಪುತ್ರೌ ರಾಜಾನೌ ಶಿವಪ್ಪನಾಯಕ–ವೆಂಕಟಪ್ಪನಾಯಕೌ" ಎಂದು ವಂಶಾವಳಿಯನ್ನು ವಿವರಿಸಲಾಗಿದೆ. ಕನ್ನಡ ಶಾಸನದಲ್ಲಿಯೂ ಇದೇ ವಂಶಾವಳಿಯನ್ನು ಕೊಟ್ಟಿದೆ. ಇದರಿಂದ ಶಿವಪ್ಪನಾಯಕ ಹಾಗೂ ವೆಂಕಟಪ್ಪನಾಯಕರು ಕ್ರಿ.ಶ. ೧೬೫೫ರಲ್ಲಿ ಕೂಡಿ ಆಳುತ್ತಿದ್ದರೆಂದು (joint rule) ತಿಳಿಯುವುದು. ಈ ಶಾಸನಗಳಲ್ಲಿರುವ ವಂಶಾವಳಿಯು ನಮಗೆ ಬೇರೆ ಆಧಾರಗಳಿಂದ ತಿಳಿದುಬರುವ ವಂಶಾವಳಿಗೆ ಸರಿಯಾಗಿರುತ್ತದೆ. ಈ ಮೂರೂ ಶಾಸನಗಳು ದ್ವಿಭಾಷಾಯುತವಾಗಿವೆ. ಅಂದರೆ ಪ್ರತಿಯೊಂದು ಶಾಸನದ ಮೇಲ್ಗಡೆ ನಸ್ತಾಲೀಕ್ ಲಿಪಿ ಹಾಗೂ ಪರ್ಶಿಯನ್ ಭಾಷೆಯಲ್ಲಿ ಒಂದೊಂದು ಶಾಸನವನ್ನು ಬರೆಯಲಾಗಿದೆ.[22] ಈ ಪರ್ಶಿಯನ್ ಶಾಸನಗಳು

---

20 *M.A.R.* 1916, p. 67.

21 ARIE., 1963–64, App. B., Nos. 484–86.

22 ARIE., 1963–64, App. D., Nos. 387–89.

ಮೊಗಲರ ಅರಸು ಶಹಾಜಹಾನನ ಆಳಿಕೆಗೆ ಸಂಬಂಧಪಟ್ಟಿದ್ದು ಎರಡರಲ್ಲಿ ಆತನ ಆಳಿಕೆಯ ೨೯ನೆಯ ವರ್ಷ ಮತ್ತು ಹಿಜರಿ ಶಕೆ ೧೦೬೫, ರಜಬ್ ೨೯ ಎಂಬ ತೇದಿಯ ಉಲ್ಲೇಖವಿದೆ. ಇದು ಕ್ರಿ.ಶ. ೧೬೫೫, ಮೇ ೨೫ಕ್ಕೆ ಸರಿಯಾಗುತ್ತಿದ್ದು ಸಂಸ್ಕೃತ ಹಾಗೂ ಕನ್ನಡ ಶಾಸನಗಳ ತೇದಿಗೆ ಹೊಂದಾಣಿಕೆಯಾಗುತ್ತದೆ. ಪರ್ಶಿಯನ್ ಭಾಷೆಯ ಶಾಸನಗಳಲ್ಲಿ ಒಂದರಲ್ಲಿ ಮಾತ್ರ ಸಂಕಣನಾಯಕನಿಂದ ಪ್ರಾರಂಭವಾಗುವ ವಂಶಾವಳಿಯನ್ನು ನಿರೂಪಿಸಲಾಗಿದೆ. ಆದರೆ ಮೂರೂ ಶಾಸನಗಳಲ್ಲಿ ಶಿವಪ್ಪನಾಯಕ ಮತ್ತು ವೆಂಕಟಪ್ಪನಾಯಕರನ್ನು ಮೊಗಲ ಬಾದಶಹನ ದೌಲತ್-ಖ್ವಾ-ಇ-ಫಿದ್ವೀ ಅಂದರೆ ವಿಶ್ವಾಸದ ಅಧಿಕಾರಿಗಳು (loyal officers) ಎಂದು ಕರೆಯಲಾಗಿದೆ. ಪರ್ಶಿಯನ್ ಭಾಷೆಯ ಶಾಸನಗಳನ್ನು ಬರೆದಿರುವ ಅಧಿಕಾರಿಯು ಮೊಗಲ ಬಾದಶಹನ ಕೈಕೆಳಗಿದ್ದಿರಬಹುದಾದ್ದರಿಂದ ಆತನು ಕೆಳದಿನಾಯಕರನ್ನು ಸಹ ಬಾದಶಹನ ಅಧಿಕಾರಿಗಳೆಂದು ತಪ್ಪಾಗಿ ಬರೆದಿರಬಹುದೆಂದು ಅನಿಸುತ್ತದೆ.

ಸಿ. ಕೆ. ರೇಣುಕಾರ್ಯ

ಶಿಕ್ಷಣವೆಚ್ಚ ಮತ್ತು ಆರ್ಥಿಕ ಪ್ರಗತಿ

ಪ್ರತಿಯೊಂದು ಅರ್ಥವ್ಯವಸ್ಥೆಯಲ್ಲೂ ಶಿಕ್ಷಣದ ಮೇಲೆ ವಿನಿಯೋಗವಾಗುತ್ತಿರುವ ಹಣದ ಪ್ರಮಾಣ ಹೆಚ್ಚಿನದು. ಹಣದ ಈ ನಿಯೋಜನೆ ಆರ್ಥಿಕವಾಗಿ ಉತ್ಪಾದಕವಾಗಿರಬೇಕೆಂಬ ನಿರೀಕ್ಷೆ ಸಹಜವೇ. ಶಿಕ್ಷಣದ ಮೇಲೆ ವೆಚ್ಚಮಾಡುವ ಬದಲು ಅದನ್ನು ಉತ್ಪಾದನೆಯಲ್ಲಿ ಬಂಡವಾಳವಾಗಿ ತೊಡಗಿಸಿದಾಗ ಅಲ್ಲಿ ಲಾಭ ಬರುವುದು ಸಹಜ. ಆದ್ದರಿಂದ ಈ ಅಮೂಲ್ಯವಾದ ಬಂಡವಾಳವನ್ನು ಶಿಕ್ಷಣದಲ್ಲಿ ತೊಡಗಿಸಿದಾಗ ಅದೂ ಆರ್ಥಿಕವಾಗಿ ಲಾಭಕರವಾಗಿ ಪರಿಣಮಿಸಬೇಕು ಎಂಬುದು ಆರ್ಥಿಕ ನ್ಯಾಯ. ಹೀಗಾಗದ ಪಕ್ಷದಲ್ಲಿ ಇಷ್ಟೊಂದು ಬಂಡವಾಳ ಸೋರಿದಂತಾಗಿ ಆರ್ಥಿಕ ಪ್ರಗತಿ ಕುಂಠಿತವಾಗಬಹುದು. ಆದರೆ ಶಿಕ್ಷಣದ ವೆಚ್ಚವನ್ನು ಯಾವ ದೃಷ್ಟಿಯಿಂದಲೂ ಬಂಡವಾಳದ ಸೋರಿಕೆಯೆಂದು ಪರಿಗಣಿಸಲಾಗುವುದಿಲ್ಲ. ಏಕೆಂದರೆ ಶಿಕ್ಷಣವೂ ಇತರ ಉದ್ಯಮಗಳಂತೆ ಲಾಭದಾಯಕವಾದದ್ದು. ಅದು ಆರ್ಥಿಕಕ್ಷೇತ್ರದಲ್ಲಿ ನಿಯೋಜಿತವಾದ ಬಂಡವಾಳಕ್ಕೆ ಹೊಂದಿಕೊಂಡಂತೆ ಅನೇಕ ಆರ್ಥಿಕ, ಸಾಮಾಜಿಕ ಲಾಭಗಳನ್ನು ಉತ್ಪಾದಿಸುತ್ತದೆ. ಈ ಲಾಭಗಳು ಆಂತರಿಕವಿರಬಹುದು ಅಥವಾ ಬಾಹ್ಯರೂಪದ್ದಾಗಿರಬಹುದು. ವಿದ್ಯಾವಂತರು ತಮ್ಮ ಜೀವಿತಕಾಲದಲ್ಲಿ ಅವಿದ್ಯಾವಂತರು ಗಳಿಸುವುದಕ್ಕಿಂತಲೂ ಹೆಚ್ಚಾಗಿ ಗಳಿಸಬಹುದಾದ ಆದಾಯ, ವಿಸ್ತಾರವಾದ ಉದ್ಯಮಾವಕಾಶ, ಪಡೆಯಬಹುದಾದ ಬಡ್ತಿ ಮುಂತಾದವೆಲ್ಲ ಆಂತರಿಕ ಲಾಭಗಳು. ಸಾಮಾಜಿಕವಾಗಿ ದೊರೆಯುವ ಲಾಭ ಬಾಹ್ಯವಾದದ್ದು. ಅರ್ಥವ್ಯವಸ್ಥೆ ಸಮರ್ಪಕವಾಗಿ ನಡೆಯುವುದಕ್ಕೆ ವಿದ್ಯಾವಂತರು ವಹಿಸುವ ಪಾತ್ರ, ಔದ್ಯೋಗಿಕ ಪ್ರಗತಿ, ಮುಂದಿನ ತಲೆಮಾರಿನವರಿಗಾಗಿ ಇವರು ಕಲ್ಪಿಸಬಹುದಾದ ಬಂಡವಾಳಸಂಚಯ, ವಿಜ್ಞಾನ ಹಾಗೂ ಯಂತ್ರಕೌಶಲಗಳ ಸಂಶೋಧನೆ ಮತ್ತು ಪ್ರಗತಿ, ಬಂಡವಾಳ ಪ್ರಧಾನಕೈಗಾರಿಕೆಯಿಂದ ಶ್ರಮದ ಉಳಿಕೆ, ಅಧಿಕವಿರಾಮಕಲ್ಪನೆ—ಮುಂತಾದವೆಲ್ಲ ಬಾಹ್ಯಲಾಭಗಳು.

ಶಿಕ್ಷಣದ ಮೇಲೆ ಮಾಡಿದ ವೆಚ್ಚ ಶಿಕ್ಷಣ ಮುಗಿದ ವರ್ಷದಿಂದ ಪ್ರಾರಂಭವಾಗಿ ಒಬ್ಬ ವ್ಯಕ್ತಿಯ ಇಡೀ ಜೀವಮಾನದವರೆಗೆ ಪ್ರಸರಿಸಿರುತ್ತದೆ. ಅಂದ ಮೇಲೆ ಒಂದು

ಅರ್ಥವ್ಯವಸ್ಥೆಯಲ್ಲಿ ತೊಡಗಿಸಲಾದ ಯಂತ್ರಗಳು, ಕಾರ್ಖಾನೆ ಮುಂತಾದ ಭೌತಿಕ ವಸ್ತುಗಳೇ ಅಲ್ಲದೆ ಶಿಕ್ಷಣದ ಮೇಲೆ ಮಾಡಿದ ವೆಚ್ಚವೂ ಬಂಡವಾಳವೇ. ಇನ್ನೂ ಸ್ವಾರಸ್ಯವಾದ ಅಂಶವೆಂದರೆ, ಶಿಕ್ಷಣದ ಮೇಲೆ ವಿನಿಯೋಗಿಸಿದ ಹಣದಿಂದ, ಭೌತಿಕ ಬಂಡವಾಳ ನಿಯೋಜನೆಯಿಂದ ಬರಬಹುವಾದ್ದಕ್ಕಿಂತ ಹೆಚ್ಚಿನ ಲಾಭವನ್ನು ತರಬಲ್ಲ ವೆಂಬುದು ಇತ್ತೀಚಿನ ಹಲವು ಸಂಶೋಧನೆಗಳಿಂದ ವ್ಯಕ್ತಪಟ್ಟಿದೆ.

ವಿದ್ಯಾಭ್ಯಾಸದ ಮೇಲಿನ ವೆಚ್ಚಕ್ಕೂ, ಆರ್ಥಿಕ ಪ್ರಗತಿಗೂ ಇರುವ ನಿಕಟ ಸಂಬಂಧವನ್ನು ಮೊದಲಿನಿಂದಲೂ ಅರ್ಥಶಾಸ್ತ್ರಜ್ಞರು ಗುರುತಿಸಿದ್ದಾರೆ. ಅರ್ಥಶಾಸ್ತ್ರದ ಪಿತಾಮಹ ಆಡಂ ಸ್ಮಿತ್ ಉನ್ನತ ವಿದ್ಯಾಭ್ಯಾಸಕ್ಕೂ, ಹೆಚ್ಚಿನ ಆದಾಯಕ್ಕೂ ನಿಕಟ ಸಂಬಂಧವಿದೆಯೆಂದು ವಾದಿಸಿದ. ಹಾಗೆಯೇ ಮಾಲ್ಥಸ್ ಜನಸಂಖ್ಯೆಯ ನಿಯಂತ್ರಣಕ್ಕೆ ವ್ಯಾಪಕ ಶಿಕ್ಷಣವೂ ಒಂದು ಅಗತ್ಯವೆಂದೂ ಸಾಮಾಜಿಕ ಅನ್ಯಾಯಗಳನ್ನು ತಡೆಗಟ್ಟಲು ಇದು ಅವಶ್ಯವೆಂದೂ ಅಭಿಪ್ರಾಯಪಟ್ಟ. ಸರ್ಕಾರ ಶಿಕ್ಷಣರಂಗವನ್ನು ಪ್ರವೇಶಿಸಿ ಆರ್ಥಿಕಪ್ರಗತಿಯ ದೃಷ್ಟಿಯಿಂದ ಅದನ್ನು ಉತ್ತಮಪಡಿಸಬೇಕೆಂಬುದು ಸೀನಿಯರ್‌ನ ಅಭಿಪ್ರಾಯ. ಮುಂದೆ ಮ್ಯಾಕುಲೋಚ್ ಮತ್ತು ಮಿಲ್ ಇವರು ಶಿಕ್ಷಣದಲ್ಲಿ ಹಣ ನಿಯೋಜನೆಯ ಪ್ರಾಮುಖ್ಯವನ್ನು ಎತ್ತಿಹಿಡಿದರು. ಆದರೆ ಈ ಅರ್ಥಶಾಸ್ತ್ರಜ್ಞರಾರೂ ಶಿಕ್ಷಣವನ್ನು ಆರ್ಥಿಕ ಲಾಭ–ನಷ್ಟಗಳ ದೃಷ್ಟಿಯಿಂದ ಕೂಲಂಕಷವಾಗಿ ಚರ್ಚಿಸುವ ಪ್ರಯತ್ನ ನಡೆಸಲಿಲ್ಲ.

ಶಿಕ್ಷಣವೊಂದು ರಾಷ್ಟ್ರೀಯ ನಿಯೋಜನೆಯೆಂದೂ ಅದರಿಂದಾಗಿ ಸರ್ಕಾರ ಈ ಕ್ಷೇತ್ರದಲ್ಲಿ ಪ್ರವೇಶಿಸಬೇಕೆಂದೂ ಆಲ್‌ಫ್ರೆಡ್ ಮಾರ್ಷಲ್ ಅಭಿಪ್ರಾಯಪಟ್ಟ. ಅಷ್ಟೇ ಅಲ್ಲ, ಶಿಕ್ಷಣವೆಚ್ಚವನ್ನು ಭೌತಿಕ ಬಂಡವಾಳದಂತೆಯೇ–ಅಂಚುವೆಚ್ಚದಿಂದ ಇನ್ನೇನೂ ಲಾಭಬರದಂಥ ಮಟ್ಟದ ವರೆಗೆ—ಇವನ್ನು ವಿಸ್ತರಿಸಬಹುದೆಂದು ವಾದಿಸಿದ ಇರ್ವಿಂಗ್ ಫಿಷರ್ ತನ್ನ ಅತ್ಯಂತ ಜಟಿಲವಾದ ಬಂಡವಾಳ ಮೀಮಾಂಸೆಗೆ ಬಂಡವಾಳದ ಮಾನವಾಂಶವನ್ನೂ ಅಳವಡಿಸಿದ್ದಾನೆ.

ಶಿಕ್ಷಣಕ್ಕಾಗಿ ನಿಯೋಜಿತವಾದ ಸಂಪತ್ತು ಭವಿಷ್ಯದ ವರಮಾನಪ್ರವಾಹವನ್ನು ಹೆಚ್ಚಿಸಲು ಸಮರ್ಥ ಎಂಬುದು ಈತನ ಅಭಿಪ್ರಾಯ. ಶ್ರಮವಿಭಜನೆಯ ಅವ್ಯವಸ್ಥೆಯನ್ನು ಸರಿಪಡಿಸುವ ಸಾಧನ ವಿದ್ಯಾಭ್ಯಾಸ–ಎಂದು ಕಾರ್ಲ್‌ಮಾರ್ಕ್ಸ್ ನಂಬಿದ್ದ.

ಕೇನ್ಸ್‌ನ 'ಅವಧಿ'ಯ ವಿಶ್ಲೇಷಣೆಯಲ್ಲಿ ಅರ್ಥಶಾಸ್ತ್ರಜ್ಞರ ಗಮನ ಶಿಕ್ಷಣ ವೆಚ್ಚದ ಕಡೆ ಅಷ್ಟಾಗಿ ಹರಿಯಲಿಲ್ಲವೆಂದು ಹೇಳಬಹುದು. ಆದರೆ ಇತ್ತೀಚಿನ ಕೆಲವು ಅರ್ಥಶಾಸ್ತ್ರಜ್ಞರು ಈ ವಿಷಯಕ್ಕೆ ಬಹಳ ಗಮನಕೊಟ್ಟಿದ್ದಾರೆ. ಅದರಲ್ಲಿ ಅಮೆರಿಕದ ಅರ್ಥಶಾಸ್ತ್ರಜ್ಞರು ಪ್ರಮುಖರು. ಅವರಿಂದ ಈ ರಂಗದಲ್ಲಿ ಅದ್ಭುತ ಸಂಶೋಧನೆಗಳು ನಡೆದಿವೆ. ಇವು ಶಿಕ್ಷಣವೆಚ್ಚಕ್ಕೂ, ಆರ್ಥಿಕಪ್ರಗತಿಗೂ ಇರುವ ನೇರಸಂಬಂಧವನ್ನು ಸ್ಪಷ್ಟವಾಗಿ ಚಿತ್ರಿಸುವುದರಲ್ಲಿ ಸಹಾಯಕವಾಗಿವೆ.

ಬಂಡವಾಳ ಶೇಖರಣೆಯಿಲ್ಲದೆ ಆರ್ಥಿಕ ಪ್ರಗತಿ ಅಸಾಧ್ಯವೆಂಬುದು ಸ್ಪಷ್ಟ. ಈ

ಬಂಡವಾಳವೆಂಬ ಪದ ವಿಸ್ತಾರವಾದ ವ್ಯಾಪ್ತಿಯುಳ್ಳದ್ದು. ಭೌತಿಕ ಬಂಡವಾಳವಲ್ಲದೆ ಮಾನವ ಬಂಡವಾಳ ಕೂಡ (ಶಿಕ್ಷಣ, ತರಪೇತು, ಆಹಾರ ಮತ್ತು ಆರೋಗ್ಯ ಯೋಜನೆಗಳು) ಬಂಡವಾಳ ಶೇಖರಣೆಗೆ ಅಗತ್ಯವೆಂಬುದನ್ನು ಈಗ ಸಂಶೋಧನೆಗಳಿಂದ ಗುರುತಿಸಲಾಗಿದೆ. ಇದರಿಂದ ಸ್ಪಷ್ಟವಾಗಿರುವ ಒಂದು ಅಂಶವೆಂದರೆ, ವಿದ್ಯಾಭ್ಯಾಸದ ದಾಸ್ತಾನು ಹೆಚ್ಚಿದಂತೆ, ಅರ್ಥವ್ಯವಸ್ಥೆಯಲ್ಲಿನ ಇಡೀ ಜ್ಞಾನದ ದಾಸ್ತಾನು ಸಹ ವೃದ್ಧಿಯಾಗುತ್ತದೆ. ಇದು ಸರಕು ಮತ್ತು ಸೇವೆಗಳ ಉತ್ಪನ್ನಕ್ಕೆ ಸಂಪೂರ್ಣವಾಗಿ ಸಹಾಯಕವಾಗಿ ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸುತ್ತದೆ.

ಶಿಕ್ಷಣದ ಮೇಲೆ ಮಾಡಲಾಗುವ ವೆಚ್ಚ ಎಷ್ಟರ ಮಟ್ಟಿಗೆ ಬಂಡವಾಳ ಶೇಖರಣೆಗೆ ಅವಕಾಶಮಾಡಿಕೊಡುತ್ತದೆ ಎಂಬ ಪ್ರಶ್ನೆ ಏಳುವುದು ಸಹಜ. ಇದನ್ನು ಕಂಡುಹಿಡಿಯಲು ವಿಪುಲವಾಗಿ ಸಂಶೋಧನೆಗಳು ನಡೆಯುತ್ತಿವೆ. ಭೌತಿಕ ಬಂಡವಾಳದ ಮೇಲೆ ಬರುವ ಲಾಭವನ್ನು ಗುರುತಿಸುವಂತೆ ಶಿಕ್ಷಣದ ಮೇಲಿನ ವೆಚ್ಚದಿಂದ ಬರುವ ಲಾಭವನ್ನು ಗುರುತಿಸುವುದು ಬಹಳ ಕಠಿಣ. ಇದಕ್ಕೆ ಕಾರಣಗಳು ಅನೇಕ. ಶಿಕ್ಷಣ, ಭೌತಿಕ ಬಂಡವಾಳದಂತಲ್ಲ. ಇದರಲ್ಲಿ ಅಸಮತೆ ಬಹಳ. ಇದು ಕೇವಲ ಆರ್ಥಿಕ ಪ್ರಯೋಜನವನ್ನಷ್ಟೇ ನೀಡುವ ನಿಯೋಜನೆಯಲ್ಲ. ಬದಲಿಗೆ ಸಾಮಾಜಿಕ ಲಾಭವೇ ಮುಂತಾದುವನ್ನು ಪ್ರತಿಫಲವಾಗಿ ನೀಡುವಂಥದು. ಇವೆಲ್ಲವನ್ನೂ ಹಣದ ಮೂಲಕ ಅಳತೆಮಾಡುವುದು ಕಠಿಣ. ವೆಚ್ಚ–ಲಾಭ (ಕಾಸ್ಟ್–ಬೆನಿಫಿಟ್) ಸಿದ್ಧಾಂತಕ್ಕೆ ಇದನ್ನು ಅಳವಡಿಸುವುದು ಸಹ ಬಹಳ ಕಷ್ಟ. ಆದರೂ ಶಿಕ್ಷಣವೆಚ್ಚದಿಂದ ಬರುವ ಲಾಭವನ್ನು ಪ್ರತಿಫಲಸಿದ್ಧಾಂತ (ರೇಟ್ ಆಫ್ ರಿಟರ್ನ್ ಥಿಯರಿ), ವೆಚ್ಚ–ಲಾಭ ಸಿದ್ಧಾಂತ, ಅರ್ಥ ಗಣಿತಕ್ರಮ (ಎಕನಾಮೆಟ್ರಿಕ್ ಮೆಥೆಡ್)ಗಳ ಮೂಲಕ ಗುರುತಿಸುವ ಪ್ರಯತ್ನ ನಡೆದಿದೆ.

ಆರ್ಥಿಕ ಬೆಳವಣಿಗೆ ಕುರಿತ ಈಚಿನ ಕೆಲವು ಸಂಶೋಧನೆಗಳಲ್ಲಿ ಗುರುತಿಸ ಬಹುದಾದ ಆದಾನಗಳಿಂದ (ಐಡೆಂಟಿಫೈಯಬಲ್ ಇನ್‌ಪುಟ್ಸ್) ತಲಾ ವರಮಾನ ಮತ್ತು ಒಟ್ಟು ಉತ್ಪನ್ನ ಅಥವಾ ಪ್ರಧಾನದ (ಔಟಪುಟ್) ಮೇಲೆ ಒಂದು ನಿರ್ದಿಷ್ಟ ಅವಧಿಯಲ್ಲಿ ಆಗಿರುವ ಪರಿಣಾಮವನ್ನು ವಿಶ್ಲೇಷಿಸುವ ಯತ್ನ ನಡೆದಿದೆ. ಅಳೆಯಲು ಸಾಧ್ಯವಿರುವ ಉತ್ಪಾದನಾಂಗಗಳನ್ನು (ನಿಜ ಬಂಡವಾಳ ಮತ್ತು ಶ್ರಮ) ಒಂದು ಅರ್ಥವ್ಯವಸ್ಥೆಯ ಒಟ್ಟು ಉತ್ಪತ್ತಿಯ ಹೆಚ್ಚಳದೊಡನೆ ಹೋಲಿಸಲಾಗಿದೆ. ಒಟ್ಟು ಉತ್ಪನ್ನದಿಂದ, ಗುರುತಿಸಬಹುದಾದ ಅವಯವಗಳಿಂದ ಬರುವ ಪ್ರದಾನವನ್ನು ಕಳೆದರೆ, ಗುರುತಿಸಲು ಸಾಧ್ಯವಿಲ್ಲದ ಉತ್ಪಾದನಾಂಗಗಳ ತೊಡಗಿಸುವಿಕೆಯಿಂದ ಬರುವ ಪ್ರದಾನ ವೆಷ್ಟು ಎಂಬುದು ತಿಳಿಯುತ್ತದೆ. ಈ ಶೇಷಭಾಗವನ್ನು (ರೆಸಿಡ್ಯುಯಲ್ ಫ್ಯಾಕ್ಟರ್) ಮುಂದೆ ವಿಶ್ಲೇಷಿಸಿ ಶಿಕ್ಷಣದಿಂದ ಬೆಳವಣಿಗೆಯ ಮೇಲೆ ಆಗಿರುವ ಪರಿಣಾಮವನ್ನು ಲೆಕ್ಕಹಾಕುವ ಪ್ರಯತ್ನಗಳು ನಡೆದಿವೆ.

೧೯೪೯–೧೯೫೭ರ ನಡುವೆ ಅಮೆರಿಕ ಸಂಯುಕ್ತ ಸಂಸ್ಥಾನದ ಆರ್ಥಿಕ ಬೆಳವಣಿಗೆ

ಯಲ್ಲಿ ಈ ಶೇಷಾಂಶಗಳು ಸೇಕಡಾ ೪೬ ರಷ್ಟು ಉತ್ಪನ್ನ ಹೆಚ್ಚಳಕ್ಕೆ ಕಾರಣವಾಗಿದ್ದು ವೆಂದು ಜೆ. ಡಬ್ಲ್ಯೂ. ಕೆಂಡ್ರಿಕ್ ತೋರಿಸಿದ್ದಾರೆ. ೧೯೧೯–೧೯೫೭ರ ನಡುವೆ ಒಟ್ಟು ಉತ್ಪನ್ನದ ಹೆಚ್ಚಳ ವರ್ಷಕ್ಕೆ ಸುಮಾರು ಸೇಕಡಾ ೩ರಂತೆ ನಡೆಯಿತು. ಆದರೆ ಸಂಪತ್ತಿನ ನಿಯೋಜನೆಯ ಬೆಳವಣಿಗೆ ವರ್ಷಕ್ಕೆ ಕೇವಲ ಸೇಕಡಾ ೧ರಂತೆ ನಡೆಯಿತು. ಈ ಎರಡೂ ಬೆಳವಣಿಗೆಗಳ ಅಂತರಕ್ಕೆ ಮಾನವ ಬಂಡವಾಳ (ಹ್ಯೂಮನ್ ಕ್ಯಾಪಿಟಲ್) ತೊಡಗಿಸುವಿಕೆಯೇ ಮುಖ್ಯ ಕಾರಣ ಎಂದು ಟಿ. ಡಬ್ಲ್ಯೂ. ಶೂಲ್ಜ್ ವಾದಿಸಿದ್ದಾರೆ. ಆಧುನಿಕ ಅರ್ಥವ್ಯವಸ್ಥೆಯಲ್ಲಿ ಶಿಕ್ಷಣ ಪ್ರಗತಿಯೂ, ಅದರ ಮೇಲೆ ಹಣ ನಿಯೋಜನೆಯೂ ಆರ್ಥಿಕ ಬೆಳವಣಿಗೆಗೆ ಚೈತನ್ಯದಾಯಕವೆಂದು, ಅವರ ಇತರ ಅನೇಕ ಸಂಶೋಧನೆಗಳು ತೋರಿಸಿವೆ. ಅಮೆರಿಕದ ಆರ್ಥಿಕ ಬೆಳವಣಿಗೆಯಲ್ಲಿ ' ಶೇಷಾಂಶ 'ಗಳ ಕಾಣಿಕೆಯನ್ನು ಅಳಿತಮಾಡುವ ಪ್ರಯತ್ನವನ್ನು ನಡೆಸಿದವರು ಡೆನಿಸನ್. ೧೯೬೪ರಲ್ಲಿ ಅವರು ತಮ್ಮ ಅಧ್ಯಯನಕ್ಕೆ ೧೯೦೯–೫೭ರ ಅವಧಿಯನ್ನು ಆರಿಸಿಕೊಂಡರು. ಕಾರ್ಮಿಕರ ಗುಣವೃದ್ಧಿ ರೂಪದ ಶಿಕ್ಷಣದಿಂದಾಗಿ ಬೆಳೆವಣಿಗೆಗೆ ಕಾಣಿಕೆ ೧೯೨೭ ರಲ್ಲಿ ಸೇಕಡಾ ೧೨.೪ ಇದ್ದುದು, ೧೯೨೯–೫೭ರಲ್ಲಿ ಸೇಕಡಾ ೨೩ಕ್ಕೆ ಏರಿತು, ಎಂಬ ನಿರ್ಣಯಕ್ಕೆ ಅವರು ಬಂದರು. ಶಿಕ್ಷಣದಿಂದಾಗಿ ಪ್ರತಿಯೊಬ್ಬ ಉದ್ಯೋಗಿಯ ಉತ್ಪಾದಕತೆ ಇದೇ ಅವಧಿಯಲ್ಲಿ ಸೇಕಡಾ ೨೯ ರಿಂದ ಸೇಕಡಾ ೪೨ಕ್ಕೇರಿತು. ೧೯೨೯–೫೭ರ ಅವಧಿಯಲ್ಲಿನ ಜ್ಞಾನವೃದ್ಧಿಯಿಂದಾಗಿ ಒಟ್ಟು ಉತ್ಪಾದಕ ಬೆಳವಣಿಗೆಗೆ ಸೇಕಡಾ ೨೦ರಷ್ಟು ಕಾಣಿಕೆ ನೀಡಿತು. ಒಟ್ಟಿನಲ್ಲಿ ವಿದ್ಯಾಭ್ಯಾಸ ಈ ಅವಧಿಯಲ್ಲಿ ಅಮೆರಿಕದ ಬೆಳವಣಿಗೆಗೆ ಸೇಕಡಾ ೪೨ ರಷ್ಟು ಕಾಣಿಕೆ ನೀಡಿತು. ಈ ಲೆಕ್ಕಾಚಾರ ಕೆಲವು ತಪ್ಪುಕಲ್ಪನಾತ್ಮಕ ಊಹೆಗಳ ಮೇಲೆ ಆಧಾರಿತವಾಗಿದ್ದರೂ, ಡೆನಿಸನ್ ಅವರು ಆರ್ಥಿಕ ಬೆಳವಣಿಗೆಯಲ್ಲಿ ಶಿಕ್ಷಣ ವಹಿಸುತ್ತಿರುವ ಪ್ರಮುಖ ಪಾತ್ರವನ್ನು ಪ್ರತಿಪಾದಿಸುವುದರಲ್ಲಿ ಸಮರ್ಥರಾಗಿದ್ದಾರೆ.

ಶಿಕ್ಷಣ ವೆಚ್ಚದಿಂದ ಬರುವ ಪ್ರತಿ ಫಲದರ (ರೇಟ್ ಆಫ್ ರಿಟರ್ನ್)ವನ್ನು ಲೆಕ್ಕ ಹಾಕುವ ಪ್ರಯತ್ನವನ್ನು ಅರ್ಥಶಾಸ್ತ್ರಜ್ಞರು ಕೈಗೊಂಡಿದ್ದಾರೆ.

೧೯೬೩ರಲ್ಲಿ ಹೆನ್ಸನ್‌ರವರು ಅಮೆರಿಕದಲ್ಲಿ ವಿವಿಧ ಮಟ್ಟಗಳಲ್ಲಿ ಶಾಲಾ ಶಿಕ್ಷಣದಿಂದ ಬರುವ ಪ್ರತಿಫಲವನ್ನು ಲೆಕ್ಕಹಾಕಿದರು. ಅವರ ಲೆಕ್ಕಾಚಾರದ ಪ್ರಕಾರ ಪ್ರಾಥಮಿಕ ವಿದ್ಯಾಭ್ಯಾಸದ ಮೊದಲ ಎರಡು ವರ್ಷದ ಶಿಕ್ಷಣಕ್ಕೆ ಅಂಚು ಪ್ರತಿಫಲದರ (ಮಾರ್ಜಿನಲ್ ರೇಟ್ ಆಫ್ ರಿಟರ್ನ್) ಸೇಕಡಾ ೮.೯ ರಷ್ಟಿತ್ತು. ಮುಂದಿನ ೪ ವರ್ಷಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇದು ೧೪.೫ ಕ್ಕೇರಿತು. ಇನ್ನೂ ಮುಂದಣ ಎರಡು ವರ್ಷದ ಶಿಕ್ಷಣಘಟ್ಟದಲ್ಲಿ ಸೇಕಡಾ ೨೯.೨ ರಷ್ಟು ಉನ್ನತ ಮಟ್ಟದಷ್ಟಿತ್ತು; ಇದರ ಅನಂತರದ ಶಿಕ್ಷಣಕ್ಕೆ ಪ್ರತಿಫಲ ಕಡಿಮೆಯಾಗಿ, ೧೫–೧೬ನೇ ವರ್ಷಗಳ ಶಿಕ್ಷಣಕ್ಕೆ ಮತ್ತೆ ಸೇಕಡಾ ೧೫.೬ ಕ್ಕೇರಿತು. ಕಾಲೇಜು ಶಿಕ್ಷಣದ ಪ್ರತಿಫಲವು ಇತರ ನಿಯೋಜನಮಾರ್ಗಗಳಿಂದ ದೊರಕಬಹುದಾದ ಪ್ರತಿಫಲಕ್ಕೆ ಸಮನಾದುದೆಂದು ೧೯೬೪ರಲ್ಲಿ ಬೆಕರ್ ಪ್ರತಿಪಾದಿಸಿದರು.

ಈಚೆಗೆ ಅನೇಕ ದೇಶಗಳಲ್ಲಿ ಅರ್ಥಶಾಸ್ತ್ರಜ್ಞರು ಶಿಕ್ಷಣದಲ್ಲಿ ಹಣ ತೊಡಗಿಸುವುದರಿಂದ ಬರುವ ಪ್ರತಿಫಲ ದರದ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ಭೌತಿಕ ಬಂಡವಾಳ ಸಂಚಯ ವೇಗವಾಗಿ ಆಗಬೇಕಾದರೆ ಶಿಕ್ಷಣದಲ್ಲಿ ಹಣತೊಡಗಿಸುವುದು ಅತ್ಯಂತ ಮುಖ್ಯವೆಂಬ ತೀರ್ಮಾನವನ್ನೇ ಈ ಸಂಶೋಧನೆಗಳೆಲ್ಲ ಸಾರುತ್ತವೆ.

ಭಾರತದಲ್ಲೂ ಶಿಕ್ಷಣಕ್ಕಾಗಿ ಹಣ ವೆಚ್ಚಮಾಡುವುದರಿಂದ ಬರುವ ಪ್ರತಿಫಲವನ್ನು ಲೆಕ್ಕಹಾಕುವ ಪ್ರಯತ್ನಗಳು ನಡೆದಿವೆ. ಹರ್‌ಬರ್ಗ್‌ರವರು ಪ್ರಥಮಬಾರಿಗೆ ಭಾರತದಲ್ಲಿ ಶಿಕ್ಷಣದಿಂದ, ಹಾಗೂ ಭೌತಿಕ ಬಂಡವಾಳ ಸಾಮಗ್ರಿಗಳಿಂದ ಬರುವ ಪ್ರತಿಫಲವನ್ನು ಲೆಕ್ಕಹಾಕುವ ಪ್ರಯತ್ನ ನಡೆಸಿದರು. ಅವರು ಈ ಅಧ್ಯಯನಕ್ಕಾಗಿ ೧೦೦೧ ಕಂಪನಿಗಳನ್ನೂ, ಹೈದರಾಬಾದಿನಲ್ಲಿ ನಡೆದ ಒಂದು ಶಿಕ್ಷಣಸಮೀಕ್ಷೆಯನ್ನೂ ಆಧರಿಸಿದರು. ಅವರಿಗೆ ದೊರೆತ ಫಲಿತಾಂಶಗಳೆಂದರೆ ೧೯೫೬–೫೯ರ ಅವಧಿಯಲ್ಲಿ ಭಾರತದ ಅರ್ಥವ್ಯವಸ್ಥೆಯ ಔದ್ಯೋಗಿಕರಂಗದಲ್ಲಿ ಭೌತಿಕ ಬಂಡವಾಳದ ಮೇಲಿನ ಪ್ರತಿಫಲ ಸೇಕಡಾ ೧೭.೨ ಮತ್ತು ೨೬.೧ರ ನಡುವೆ ಇತ್ತು. ಶಿಕ್ಷಣರಂಗದಲ್ಲಿ ಸೆಕೆಂಡರಿ ಶಿಕ್ಷಣದ ಪ್ರತಿಫಲ ಸೇಕಡಾ ೧೦–೧೨ರಷ್ಟು, ಉನ್ನತ ಶಿಕ್ಷಣದ ಮೇಲಿನ ಪ್ರತಿಫಲ ಸೇಕಡಾ ೧೬–೧೭ ರಷ್ಟು ಇತ್ತು. ಸೆಕೆಂಡರಿ ಮತ್ತು ಉನ್ನತ ಶಿಕ್ಷಣಗಳೆರಡನ್ನೂ ಸೇರಿಸಿದರೆ ಪ್ರತಿಫಲ ಸೇಕಡಾ ೧೪–೧೫ ರಷ್ಟಾಗುತ್ತದೆ. ಕೇವಲ ಆರ್ಥಿಕ ದೃಷ್ಟಿಕೋನದಿಂದಲೇ ನೋಡಿದ್ದಾದರೆ ಭಾರತದಲ್ಲಿ ಭೌತಿಕ ಬಂಡವಾಳದ ಪ್ರತಿಫಲವೆ, ಶಿಕ್ಷಣದ ಮೇಲಿನ ಪ್ರತಿಫಲಕ್ಕಿಂತ ಹೆಚ್ಚಾಗಿದೆ ಎಂಬುದು ಅವರ ಅಧ್ಯಯನದಿಂದ ದೊರಕಿರುವ ಫಲಿತಾಂಶ.

೧೯೬೬ ರಲ್ಲಿ ಕೊಠಾರಿಯವರು ಸಹ ಈ ಬಗ್ಗೆ ಅಧ್ಯಯನ ನಡೆಸಿದರು. ಬೊಂಬಾಯಿಗೆ ಸಂಬಂಧಿಸಿದಂತೆ ಸಮೀಕ್ಷೆಯ ಆಧಾರದ ಮೇಲೆ ಅಧ್ಯಯನ ನಡೆಸಲಾಯಿತು. ಭಾರತದಲ್ಲಿ ತಾಂತ್ರಿಕ ಶಿಕ್ಷಣದ ಮೇಲಿನ ನಿಯೋಜನೆಯಿಂದ ಹೆಚ್ಚು ಪ್ರತಿಫಲ ಬರುತ್ತದೆ ಎಂಬುದು ಅವರ ತೀರ್ಮಾನ. ಶ್ರೀಮತಿ ಹುಸೇನ್‌ರು ಈ ಬಗ್ಗೆ ಇನ್ನೂ ವ್ಯಾಪಕವಾದ ಅಧ್ಯಯನ ನಡೆಸಿದ್ದಾರೆ—(೧೯೬೭). (ನೋಡಿ ಅನುಬಂಧ ೧)

ಇನ್ನೂ ಅನೇಕರು ನಡೆಸಿರುವ ಅಧ್ಯಯನದಿಂದ ವ್ಯಕ್ತವಾಗಿರುವ ಸಂಗತಿಯೆಂದರೆ, ಅತ್ಯಂತ ಪ್ರಗತಿಹೊಂದಿರುವ ರಾಷ್ಟ್ರಗಳಲ್ಲಿ ಭೌತಿಕ ಬಂಡವಾಳ, ಮಾನವ ಬಂಡವಾಳದ ಬೆಳವಣಿಗೆಯ ಗತಿಗಿಂತ ಕಡಿಮೆ ವೇಗದಲ್ಲಿ ಬೆಳೆಯುತ್ತಿದೆ. ಆದರೆ ಪ್ರಗತಿಹೊಂದುತ್ತಿರುವ ರಾಷ್ಟ್ರಗಳಲ್ಲಿ (ಅದರಲ್ಲೂ ಭಾರತದಲ್ಲಿ) ಇದಕ್ಕೆ ವ್ಯತಿರಿಕ್ತವಾದ ರೀತಿಯಲ್ಲಿ ಬೆಳವಣಿಗೆ ನಡೆದಿದೆ. ಪ್ರಗತಿಹೊಂದಿದ ರಾಷ್ಟ್ರವಾದ ಅಮೆರಿಕದಲ್ಲಿ ಇವೆರಡೂ ರೀತಿಯ ಬಂಡವಾಳದ ಮೇಲಿನ ಪ್ರತಿಫಲ ಹೆಚ್ಚು ಕಡಿಮೆ ಸಮವಾಗಿ ನಡೆದಿದೆ. ಆದರೆ ಪ್ರಗತಿಹೊಂದುತ್ತಿರುವ ರಾಷ್ಟ್ರಗಳಲ್ಲಿ ಮಾನವ ಬಂಡವಾಳದ ನಿಯೋಜನೆಯಿಂದ ಬರುತ್ತಿರುವ ಪ್ರತಿಫಲ ಭೌತಿಕ ಬಂಡವಾಳದ ಮೇಲಿನ ಪ್ರತಿಫಲಕ್ಕಿಂತ ಕಡಿಮೆಯಿದೆ. ಪ್ರತಿಫಲ ದೃಷ್ಟಿಯಿಂದ ಶಿಕ್ಷಣರಂಗದ ಒಳಗೇ

ನಿಯೋಜನೆಯಿಂದ ಬರುವ ಪ್ರತಿಫಲಗಳು ಅಸಮಾನವಿವೆ. ವ್ಯಾಪಕವಾದ ಪ್ರಾಥಮಿಕ ಶಿಕ್ಷಣ ಮತ್ತು ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದಂತೆ ಉನ್ನತ ವಿಧ್ಯಾಭ್ಯಾಸ ವಿಸ್ತರಣೆಯೇ ಈಗಿನ ಅಗತ್ಯ.

ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಶಿಕ್ಷಣದ ಮೇಲಿನ ವೆಚ್ಚ ಕಡಿಮೆ. ಉದಾಹರಣೆಗೆ, ಸೋವಿಯತ್ ಒಕ್ಕೂಟದಲ್ಲಿ ರಾಷ್ಟ್ರೀಯ ವರಮಾನದ ಶೇಕಡಾ ೭.೦ನ್ನು ಶಿಕ್ಷಣದ ಮೇಲೆ ವಿನಿಯೋಗಿಸಲಾಗುತ್ತದೆ. ಅಮೆರಿಕದಲ್ಲಿ ಇದಕ್ಕಾಗಿ ಆಗುವ ವೆಚ್ಚ ರಾಷ್ಟ್ರೀಯ ವರಮಾನದ ಶೇಕಡಾ ೬.೫. ಜಪಾನಿನಲ್ಲಿ ಸೇಕಡಾ. ೫.೭, ಭಾರತದಲ್ಲಿ ಸೇಕಡಾ ೩ಕ್ಕಿಂತಲೂ ಕಡಿಮೆ. ಇತರ ಪ್ರಗತಿ ಹೊಂದುತ್ತಿರುವ ರಾಷ್ಟ್ರಗಳಿಗೆ ಹೋಲಿಸಿದರೂ ಭಾರತದಲ್ಲಿನ ನಿಯೋಜನ ಕಡಿಮೆಯೇ (ಅನುಬಂಧ ೨). ಕೇವಲ ಈಚೆಗೆ ಇಲ್ಲಿ ಮಾನವ ಬಂಡವಾಳದ ಅಂಶವನ್ನು ಗುರುತಿಸಲಾಗಿದೆ. ಯೋಜನೆಯಿಂದ ಯೋಜನೆಗೆ ಭಾರತದಲ್ಲಿ ಶಿಕ್ಷಣದ ಮೇಲಿನ ನಿಯೋಜನೆ ಹೆಚ್ಚಿರುವುದು ಸತ್ಯ. (ಅನುಬಂಧ ೩). ಪ್ರಥಮ ಯೋಜನೆಯಲ್ಲಿ ಶಿಕ್ಷಣಕ್ಕೆ ೧೧೪.೦ ಕೋಟಿ ರೂಗಳನ್ನು ನಿಯೋಜಿಸಲಾಗಿದ್ದು ೧೯೬೫–೬೬ರಲ್ಲಿ ಈ ಮೊತ್ತ ೬೧೦.೦ ಕೋಟಿ ರೂಗಳಿಗೇರಿದೆ. ೪ನೇ ಯೋಜನೆ ಅವಧಿಯಲ್ಲಿ ೮೨೨.೬೬ ಕೋಟಿ ರೂಗಳನ್ನು ಶಿಕ್ಷಣದ ಮೇಲೆ ವಿನಿಯೋಗಿಸುವ ನಿರೀಕ್ಷೆ ಇದೆ.

೧೯೮೫–೮೬ರ ವೇಳೆಗೆ ೪೦೩೬.೪ ಕೋಟಿ ರೂಗಳನ್ನು ಶಿಕ್ಷಣಕ್ಕಾಗಿ ವಿನಿಯೋಗಿಸಬೇಕೆಂದು ಶಿಕ್ಷಣ ಆಯೋಗ ಶಿಫಾರಸು ಮಾಡಿದೆ. ಅಂದರೆ ರಾಷ್ಟ್ರೀಯ ನಿವ್ವಳ ಉತ್ಪತ್ತಿಯಲ್ಲಿ ಶಿಕ್ಷಣವೆಚ್ಚ ೨.೯ ರಿಂದ ೧೯೮೫–೮೬ರಲ್ಲಿ ಸೇಕಡಾ ೬.೦ಕ್ಕೆ ಏರುತ್ತದೆ.

ಭಾರತದಲ್ಲಿ ಶಿಕ್ಷಣವೆಚ್ಚದ ಬಗ್ಗೆ ಸರಿಯಾದ ಯೋಜನೆ ಇಲ್ಲದಿರುವುದು ಸ್ಪಷ್ಟ. ಇದಕ್ಕೆ ಹೆಚ್ಚುತ್ತಿರುವ ನಿರುದ್ಯೋಗವೇ ನಿದರ್ಶನ. ವಿದ್ಯಾವಂತರ ಸೂಚ್ಯಂಕ, ರಾಷ್ಟ್ರೀಯ ಉತ್ಪನ್ನದ ಸೂಚ್ಯಂಕಕ್ಕಿಂತ ವೇಗವಾಗಿ ಬೆಳೆಯುತ್ತಿದೆ. (ನೋಡಿ ಅನುಬಂಧ ೪–೫). ಇದು ಬಂಡವಾಳ ನಿಯೋಜನೆಯ ದೃಷ್ಟಿಯಿಂದ ಆರ್ಥಿಕ ಅನ್ಯಾಯ ವಾಗುತ್ತದೆ.

ಭಾರತದಲ್ಲಿ ಬಂಡವಾಳದ ಕೊರತೆಯಿರುವುದರಿಂದ, ಇರುವ ಅಲ್ಪ ಬಂಡವಾಳ ವನ್ನು ಅತ್ಯಂತ ಹೆಚ್ಚು ಫಲ ಬರುವ ರೀತಿಯಲ್ಲಿ ನಿಯೋಜಿಸುವುದು ಅಗತ್ಯ. ಶಿಕ್ಷಣದ ಮೇಲೆ ನಿಯೋಜಿಸಲಾಗುತ್ತಿರುವ ಬಂಡವಾಳವನ್ನು, ಬೇರೆ ಉಪಯುಕ್ತ ರಂಗಗಳಿಂದ ಇತ್ತಕಡೆ ತಿರುಗಿಸಲಾಗುತ್ತಿರುವುದರಿಂದ, ಇದರಿಂದ ಹೆಚ್ಚಿನ ಫಲ ಬರುವಂತೆ ಮಾಡ ಬೇಕಾದ್ದು ಅಗತ್ಯ. ಇದಕ್ಕೆ ಯಾವ ಯಾವ ಶಿಕ್ಷಣದ ಮೇಲಿನ ವೆಚ್ಚದಿಂದ ಪ್ರತಿಫಲ ಯಾವ ಮಟ್ಟದಲ್ಲಿ ಬರುತ್ತದೆ ಎಂಬುದರ ಕೂಲಂಕಷ ಲೆಕ್ಕಾಚಾರ ಅಗತ್ಯ. ಈ ರೀತಿಯ ಸಂಶೋಧನೆಯ ಕೊರತೆ ಪ್ರಸ್ತುತದಲ್ಲಿದೆ. ನಡೆದಿರುವ ಕೆಲವು ಸಂಶೋಧನೆಗಳು ನಾವು ತಪ್ಪುರೀತಿಯ ಶಿಕ್ಷಣದ ಮೇಲೆ ಹಣ ನಿಯೋಜನೆ ಮಾಡುತ್ತಿದ್ದೇವೆಂಬುದನ್ನು

ತೋರಿಸಿವೆ. ೪ನೇ ಯೋಜನೆಯ ಅವಧಿಯಲ್ಲಿ ಆರ್ಥಿಕ ಬೆಳವಣಿಗೆಗೆ ಶಿಕ್ಷಣದ ಮೇಲಿನ ನಿಯೋಜನೆಯನ್ನು ಸಂಯೋಜಿಸಲಾಗುತ್ತದೆ ಎಂದು ಆಶಿಸಬಹುದು.

(ಅನುಬಂಧ ೧)

ಕ್ರಮ ಸಂಖ್ಯೆ	ವಿದ್ಯಾವಂತರು	ಸರಾಸರಿ ಪ್ರತಿಫಲ		ಅಂಚು ಪ್ರತಿಫಲ	
		ಖಾಸಗಿ	ಸಾಮಾಜಿಕ	ಖಾಸಗಿ	ಸಾಮಾಜಿಕ
	೧	೨	೩	೪	೫
೧.	ಮೆಟ್ರಿಕ್ಯುಲೇಟ್	೪೮	೩೭	—	—
೨.	ಪದವೀಧರರು	೧೨	೪	–೫	–೧೪
೩.	ಸ್ನಾತಕೋತ್ತರ (ಸಾಮಾನ್ಯ)	೧೦	೩	–೩	–೧
೪.		೯	೩	+	+

ಶ್ರೀಮತಿ ಹುಸ್ಸೈನ್ (೧೯೬೭) ಎ

(ಅನುಬಂಧ ೨)

ಶಿಕ್ಷಣದಲ್ಲಿ ಸರ್ಕಾರ ತೊಡಗಿಸುತ್ತಿರುವ ಹಣದ ಪ್ರಮಾಣ

ದೇಶ	ವರ್ಷ	ಒಟ್ಟು ರಾಷ್ಟ್ರೀಯ ಆದಾಯದ ಸೇಕಡಾ
ಸಿಲೋನ್	೧೯೬೧	೫.೩
ಜಪಾನ್	೧೯೬೨	೪.೬
ಕೊರಿಯಾ ರಿಪಬ್ಲಿಕ್	೧೯೬೧	೪.೧
ಕಾಂಬೋಡಿಯಾ	೧೯೬೧	೩.೭
ಮಲೇಷಿಯಾ	೧೯೬೨	೩.೫
ಇರಾನ್	೧೯೬೨	೩.೩
ಚೈನಾ ರಿಪಬ್ಲಿಕ್	೧೯೬೨	೨.೮
ಲಾವೋಸ್	೧೯೬೩	೨.೭
ಫಿಲಿಪೈನ್ಸ್	೧೯೬೨	೨.೭
ಥ್ಯಾಲ್ಯಾಂಡ್	೧೯೬೨	೨.೫
ಬರ್ಮಾ	೧೯೬೨	೨.೧
ಪಾಕಿಸ್ಥಾನ	೧೯೬೨	೧.೮
ಭಾರತ	೧೯೬೦	೧.೬
ಇಂಡೋನೇಷ್ಯ	೧೯೬೦	೧.೩
ಅಫ್‌ಘಾನಿಸ್ತಾನ	೧೯೬೦	೧.೧

(ಅನುಬಂಧ ೩)

ಯೋಜನೆಗಳಲ್ಲಿ ವೆಚ್ಚ

ಕೋಟಿರೂಗಳಲ್ಲಿ

	ಮೊದಲನೆ ಯೋಜನೆ	ಎರಡನೆ ಯೋಜನೆ	ಮೂರನೆ ಯೋಜನೆ	ನಾಲ್ಕನೆ ಯೋಜನೆ (ತಾತ್ಕಾಲಿಕ)
ಎಲಿಮೆಂಟರಿ ವಿದ್ಯಾಭ್ಯಾಸ	೮೫	೯೫	೧೭೯	೨೧೭.೮೭
ಸೆಕೆಂಡರಿ ವಿದ್ಯಾಭ್ಯಾಸ	೨೦	೫೧	೧೦೩	೧೨೬.೨೫
ವಿಶ್ವವಿದ್ಯಾನಿಲಯ ವಿದ್ಯಾಭ್ಯಾಸಗಳು	೧೪	೪೮	೮೭	೧೮೧.೭೬
ಇತರ ವಿದ್ಯಾಭ್ಯಾಸಗಳು	೩೪	೭೯	೨೨೭	೨೮೨.೬೯
ಒಟ್ಟು	೧೫೩	೨೭೩	೫೯೬	೮೦೮.೫೭*

ಮೂಲ. ಇಂಡಿಯಾ ೧೯೬೯

*ನಾಲ್ಕನೆಯ ಯೋಜನೆಯಲ್ಲಿ ೮೨೨.೬೬ ಕೋಟಿ ರೂಗಳನ್ನು ವೆಚ್ಚಮಾಡಲಾಗುವುದೆಂದು, ಇತ್ತೀಚಿನ ಯೋಜನಾ ಕರಡುಪ್ರತಿ ಸೂಚಿಸುತ್ತದೆ.

(ಅನುಬಂಧ ೪)

೧೯೫೧-೫೨ರಿಂದ ೧೯೬೦-೬೧ರ ವರೆಗೆ ವಿದ್ಯಾವಂತರ ದಾಸ್ತಾನು ಹೆಚ್ಚಳ ಹಾಗೂ ರಾಷ್ಟ್ರೀಯ ಉತ್ಪನ್ನ ಹೆಚ್ಚಳ ಸೂಚ್ಯಂಕ

೧೯೫೧-೫೨ ರಿಂದ ೧೯೬೦-೬೧

ವರ್ಷ	ಸೆಕೆಂಡರಿ ವಿದ್ಯಾಭ್ಯಾಸ	ಉನ್ನತ	ಎಲ್ಲಾ ರೀತಿಯ ವಿದ್ಯಾವಂತರು	ರಾಷ್ಟ್ರೀಯ ಉತ್ಪತ್ತಿ ಸೂಚ್ಯಂಕ
೧೯೫೦-೫೧	೧೦೦	೧೦೦	೧೦೦	೧೦೦
೧೯೫೧-೫೨	೧೦೬	೧೦೫	೧೦೬	೧೦೩
೧೯೫೨-೫೩	೧೧೫	೧೧೦	೧೧೪	೧೦೭
೧೯೫೩-೫೪	೧೨೫	೧೧೬	೧೨೩	೧೧೩
೧೯೫೪-೫೫	೧೩೫	೧೨೩	೧೩೨	೧೧೬
೧೯೫೫-೫೬	೧೪೬	೧೩೧	೧೪೨	೧೧೮
೧೯೫೬-೫೭	೧೫೮	೧೩೮	೧೫೪	೧೨೪
೧೯೫೭-೫೮	೧೭೧	೧೪೮	೧೬೬	೧೨೩
೧೯೫೮-೫೯	೧೮೫	೧೫೮	೧೭೯	೧೩೨
೧೯೫೯-೬೦	೧೯೯	೧೬೯	೧೯೨	೧೩೪
೧೯೬೦-೬೧	೨೧೫	೧೮೦	೨೦೭	೧೪೪

(ಅನುಬಂಧ ೫)

ಭಾರತದಲ್ಲಿ ವಿದ್ಯಾಭ್ಯಾಸದ ಮೇಲಿನ ನಿಯೋಜನೆಯ ಬೆಳವಣಿಗೆ

ಕೋಟಿ ರೂಗಳಲ್ಲಿ

	೧೯೫೦–೫೧	೧೯೫೫–೫೬	೧೯೬೦–೬೧	೧೯೬೪–೬೫	೧೯೬೫–೬೬
ನೇರ ನಿಯೋಜನೆ	೯೧.೦೫	೧೪೪.೮೧	೨೫೭.೩೬	೪೨೧.೫೩	೪೯೦.೭೦
ಪರೋಕ್ಷ ನಿಯೋಜನೆ	೨೩.೩೩	೪೪.೮೫	೮೭.೦೨	೧೧೨.೮೨	೧೧೯.೬೭
ಒಟ್ಟು ನಿಯೋಜನೆ	೧೧೪.೩೮	೧೮೯.೬೬	೩೪೪.೩೮	೫೩೪.೩೫	೬೧೦.೩೭

ಬಂಡವಾಳಗಾರರು ಮತ್ತು ಶ್ರಮಜೀವಿಗಳು

"ಬಂಡವಾಳ ಮತ್ತು ಶ್ರಮ ಒಂದಕ್ಕೊಂದು ಪೂರಕವಾಗಿರಬೇಕೆಂಬುದೇ ನನ್ನ ಆದರ್ಶವೆಂಬುದನ್ನು ನಾನು ಸತತವಾಗಿ ಹೇಳುತ್ತಾ ಬಂದಿದ್ದೇನೆ. ಐಕಮತ್ಯ ಮತ್ತು ಸಾಮರಸ್ಯದಿಂದ ಬಾಳುವ ಮಹಾನ್ ಕುಟುಂಬದಂತೆ ಶ್ರಮಜೀವಿಗಳೂ, ಬಂಡವಾಳಗಾರರೂ ಒಂದಾಗಿ ಇರಬೇಕು. ಬಂಡವಾಳಗಾರರು ಶ್ರಮಜೀವಿಗಳ ಭೌತಿಕ ಒಳಿತನ್ನು ಮಾತ್ರವಲ್ಲದೆ ಅವರ ನೈತಿಕ ಹಿತಚಿಂತನೆಯನ್ನೂ ಗಮನದಲ್ಲಿಟ್ಟು ಕೊಂಡು, ತಮ್ಮ ಮೇಲ್ವಿಚಾರಣೆಯಲ್ಲಿ ದುಡಿಯುವ ಆ ಶ್ರಮಜೀವಿಗಳ ಒಳಿತನ್ನೆ ಧ್ಯೇಯವಾಗುಳ್ಳ ಧರ್ಮದರ್ಶಿಗಳಂತೆ ವರ್ತಿಸಬೇಕು. . . .

* * *

"ಶ್ರಮಜೀವಿಗಳು ಮತ್ತು ಬಂಡವಾಳಗಾರರು ಸಮಾನ ವಿಕಾಸವನ್ನು ಹೊಂದಿದಲ್ಲಿ, ನ್ಯಾಯಬದ್ಧ ಕೊಳುಕೊಡೆಯ ವಿಷಯದಲ್ಲಿ ಪರಸ್ಪರ ಅಶ್ವಸ್ತರಾದಲ್ಲಿ, ಉಭಯತ್ರರಿಗೂ ಸಾಮಾನ್ಯವಾದ ಉದ್ದಿಮೆಯೊಂದರಲ್ಲಿ ತಾವೆಲ್ಲ ಸಮಪಾಲು ದಾರರೆಂಬ ಭಾವನೆ ಮೂಡಿದಲ್ಲಿ ಪರಸ್ಪರ ಅರಿವು ಮತ್ತು ಆದರವನ್ನು ಬೆಳೆಸಿಕೊಳ್ಳು ತ್ತಾರೆ. ಸಾಮರಸ್ಯ ಸಾಧ್ಯವೇ ಇಲ್ಲದ ವೈರಿಗಳೆಂಬಂತೆ ಒಬ್ಬರು ಇನ್ನೊಬ್ಬರನ್ನು ನೋಡಬೇಕಾಗಿಲ್ಲ. ಆದರೆ ಇಂದಿನ ಕಷ್ಟ, ಬಂಡವಾಳಗಾರರು ಇಂದು ಸುಸಂಘಟಿತ ರಾಗಿದ್ದು ಆತ್ಮರಕ್ಷಣೆಗಾಗಿ ತಮ್ಮ ಸುತ್ತ ಕಂದಕಗಳನ್ನು ತೋಡಿಕೊಂಡಿರುವಂತಿದೆ. ಇಂತಹ ರಕ್ಷಣಾ ವ್ಯವಸ್ಥೆ ಶ್ರಮಜೀವಿಗಳಲ್ಲಿ ಇಲ್ಲ. ಮನಸ್ಸಿನ ವಿಕಾಸಕ್ಕೆ ಕೊಂಚವೂ ಅವಕಾಶವನ್ನೊದಗಿಸದ ಆತ್ಮಹೀನ ಯಾಂತ್ರಿಕ ಉದ್ಯೋಗದ ಅಡಿಯಲ್ಲಿ ಸಿಕ್ಕಿ ಶ್ರಮಜೀವಿಯ ಬುದ್ಧಿಕುಶಲತೆ ನಾಮಾವಶೇಷವಾಗತೊಡಗಿವೆ. ತನ್ನ ಸ್ಥಾನ ಮಾನಗಳ ಗೌರವ ಮತ್ತು ಪೂರ್ಣಶಕ್ತಿಗಳನ್ನು ಅರಿಯಲು ಅಡ್ಡಿಯಾಗಿರುವ ಅಂಶವೂ ಅದೆ. ತನ್ನ ಬೇಡಿಕೆಗಳನ್ನು ಬಂಡವಾಳಗಾರನ ಎದುರಿನಲ್ಲಿ ತಾನೇ ಮುಂದಿರಿಸುವುದರ ಬದಲು ಬಂಡವಾಳಗಾರರೇ ತನ್ನ ಸಂಬಳವನ್ನು ನಿರ್ಣಯಿಸ ಬೇಕೆಂಬ ತತ್ತ್ವವನ್ನು ನಂಬಬೇಕೆಂದೇ ಆತನಿಗೆ ಬೋಧನೆಯನ್ನೀಯಲಾಗಿದೆ. ಆತನು ಋಜುಮಾರ್ಗದಲ್ಲಿ ಸಂಘಟಿತನಾಗಿದ್ದೇ ಆದರೆ, ತನ್ನ ಬುದ್ಧಿಕುಶಲತೆ ಗಳನ್ನು ಚುರುಕುಗೊಳಿಸಿಕೊಂಡಿದ್ದೇ ಆದರೆ, ಅನೇಕ ಬಗೆಯ ಉದ್ಯೋಗಗಳನ್ನು ಕಲಿತುಕೊಂಡಿದ್ದೇ ಆದರೆ, ಜೀವನೋಪಾಯಕ್ಕೆ ಯಾವ ಮಾರ್ಗವೂ ಇಲ್ಲವೆಂದು ಭಯಪಡಬೇಕಾದ ಅಗತ್ಯವಿಲ್ಲದಂತಾಗಿ ತಲೆಯೆತ್ತಿ ನಡೆಯುವುದು ಆತನಿಗೆ ಸಾಧ್ಯವಾಗುತ್ತದೆ."

—ಗಾಂಧೀಜಿ

ಡಾ. ಹೆಚ್. ಎಂ. ಸದಾಶಿವಯ್ಯ

ಸಮಾಜಶಾಸ್ತ್ರದ ಆಧುನಿಕ ಪ್ರವೃತ್ತಿಗಳು

ಸಮಾಜಶಾಸ್ತ್ರ ಬೆಳೆದು ರೂಪಗೊಂಡದ್ದು ಪಾಶ್ಚಾತ್ಯ ದೇಶಗಳಲ್ಲಿ. ನಮ್ಮ ದೇಶದಲ್ಲಿ ಸಮಾಜಶಾಸ್ತ್ರ ಸುವ್ಯವಸ್ಥಿತವಾಗಿ ಬೆಳೆದದ್ದು ಇಂಗ್ಲಿಷರ ಸಂಪರ್ಕವಾದ ಮೇಲೆ. ಆದುದರಿಂದ ಮೊದಲು ಪಾಶ್ಚಾತ್ಯ ದೇಶಗಳಲ್ಲಿ ಸಮಾಜಶಾಸ್ತ್ರದ ಬೆಳವಣಿಗೆಯನ್ನು ಸಂಕ್ಷೇಪವಾಗಿ ತಿಳಿಸಿ ಅದರ ಹಿನ್ನೆಲೆಯಲ್ಲಿ ನಮ್ಮ ದೇಶದ ಸಮಾಜಶಾಸ್ತ್ರದ ಪ್ರಮುಖ ಪ್ರವೃತ್ತಿಗಳನ್ನು ನಿರೂಪಿಸಲಾಗಿದೆ.

ಸಾವಿರಾರು ವರ್ಷಗಳಿಂದ ಮನುಷ್ಯ ತಾನು ಜೀವಿಸಿರುವ ಸಮಾಜದ ವಿಷಯವಾಗಿ ಅವಲೋಕಿಸಿರುವುದಲ್ಲದೆ, ಅದನ್ನು ಕುರಿತು ಚಿಂತನೆ ನಡೆಸಿದ್ದಾನೆ. ತತ್ವಜ್ಞಾನಿಗಳೂ, ಧಾರ್ಮಿಕಸಂತರೂ, ಶಾಸನಕಾರರೂ ಎಲ್ಲ ಕಾಲಗಳಲ್ಲಿಯೂ ತಮ್ಮ ಸಮಾಜಜೀವನದ ವಿಷಯವಾಗಿ ಆಳವಾಗಿ ಆಲೋಚಿಸಿ ತಮ್ಮ ಸಿದ್ಧಾಂತಗಳನ್ನು ನಿರೂಪಿಸಿದ್ದಾರೆ. ಅವರು ರಚಿಸಿದ ಅನೇಕ ಉದ್ಗ್ರಂಥಗಳು ಸರ್ವಕಾಲಗಳಿಗೂ ಉಪಯುಕ್ತವಾದವು. ಪ್ಲೇಟೋವಿನ " ರಿಪಬ್ಲಿಕ್ ", ಅರಿಸ್ಟಾಟಲನ " ಪಾಲಿಟಿಕ್ಸ್ ", ಕೌಟಿಲ್ಯನ " ಅರ್ಥಶಾಸ್ತ್ರ " ಮೊದಲಾದುವುಗಳನ್ನು ಉದಾಹರಿಸಬಹುದು.

ಮನುಷ್ಯ ಮೊದಲು ಸಮಾಜವನ್ನೂ ಪ್ರಕೃತಿಯನ್ನೂ ಮತ್ತು ಅವುಗಳ ನಿಯಮಗಳನ್ನೂ ಗೌರವ ಮತ್ತು ಭಯಗಳಿಂದ ವೀಕ್ಷಿಸುತ್ತಿದ್ದ. ಅದಕ್ಕೆ ತಕ್ಕಂತೆ ಸಮಾಜದ ನಿಯಮಗಳನ್ನು ರೂಪಿಸಿಕೊಳ್ಳಬೇಕಾದ್ದು ಅಶಕ್ಯವೆಂದು ಭಾವಿಸಿದ್ದ. ಗ್ರೀಕರ ಕಾಲದಲ್ಲಿ ಸೋಫಿಸ್ಟರು ಪ್ರಕೃತಿ ಮತ್ತು ಅದರ ನಿಯಮಗಳಿಗೂ ಮಾನವ ಸಮಾಜದಲ್ಲಿ ರೂಢಿಯಲ್ಲಿರುವ ಆಚಾರ ಸಂಪ್ರದಾಯಗಳಿಗೂ ಇರುವ ವ್ಯತ್ಯಾಸವನ್ನು ನಿರೂಪಿಸಿದರು. ಇದರಿಂದ ಜನರ ಸಮಾಜ ಸಂಪ್ರದಾಯಗಳೂ ನೀತಿ ನಿಯಮಗಳೂ ದೈವದತ್ತವಾದುವೆಂಬ ನಂಬಿಕೆಯು ಸಡಿಲವಾಯಿತು. ಅವೆಲ್ಲವೂ ತಾರ್ಕಿಕ ವಿವರಣೆಗೆ ಒಳಪಡಬಹುದಾದ ವಿಷಯಗಳೆಂದು ಜನ ತಿಳಿದು ಅವುಗಳ ವಿಷಯವಾಗಿ ವಿಚಾರಮಾಡಲುಪಕ್ರಮಿಸಿದರು. ಮಾನವನ ಲೌಕಿಕ ಜೀವನದ ವಿಷಯಗಳನ್ನು ಕಾರ್ಯಕಾರಣ ದೃಷ್ಟಿಯಿಂದ ನೋಡುವ ಮನೋಭಾವವನ್ನು ಆರಂಭಿಸಿದವರು ಸೋಫಿಸ್ಟರು.

ಮನುಷ್ಯಜೀವನದ ಸಾರ್ಥಕತೆಗೆ ಸಮಾಜ ಅತ್ಯಗತ್ಯವೆಂದು ಪ್ಲೇಟೊ ಮತ್ತು ಅರಿಸ್ಟಾಟಲ್ ನಿರೂಪಿಸಿ, ವ್ಯಕ್ತಿಗಿಂತಲೂ ಸಮಾಜ ಹೆಚ್ಚು ಆರ್ಷೇಯವೂ ಮುಖ್ಯವೂ ಆದದ್ದೆಂದು ಅಭಿಪ್ರಾಯಪಟ್ಟರು. ಪ್ಲೇಟೊವಿನ ಪ್ರಕಾರ ನ್ಯಾಯವೆಂಬುದು (Justice) ಬಲಿಷ್ಠರು ಬಲಹೀನರ ಮೇಲೆ ತೋರಿಬ ದೌರ್ಜನ್ಯವೂ ಅಲ್ಲ, ಬಲಹೀನರು ಬಲಿಷ್ಠರನ್ನು ಹತೋಟಿಯಲ್ಲಿಟ್ಟುಕೊಳ್ಳಲು ಮಾಡುವ ಪ್ರಯತ್ನವೂ ಅಲ್ಲ; ಅದು ಸಮಾಜ ಒಂದು ಗೊತ್ತಾದ ರೀತಿಯಲ್ಲಿ ಸುಗಮವಾಗಿ ತನ್ನ ಕಾರ್ಯಗಳನ್ನು ಸಾಧಿಸಲು ಅಗತ್ಯವಾಗಿ ಬೇಕಾಗುವ ವ್ಯಕ್ತಿ ಮತ್ತು ಸಮಾಜದ ಸಂಬಂಧಗಳನ್ನು ನಿರೂಪಿಸುವ ಒಂದು ತತ್ವ—ಎಂದು ತಿಳಿಸಿದ್ದಾನೆ. ಆದರೆ ಆತ ಸಾಮಾನ್ಯ ಮನುಷ್ಯರ ನಿತ್ಯಜೀವನದ ರೀತಿನೀತಿಗಳ ವಿಮರ್ಶೆಯ ಗೋಜಿಗೆ ಹೋಗಲಿಲ್ಲ. ಅವನ ಪ್ರಮುಖವಾದ ಆಸಕ್ತಿ ಆದರ್ಶ ಸಮಾಜದ ರೂಪರೇಖೆಗಳ ನಿರೂಪಣೆ. ಗ್ರೀಕರು ರಾಜ್ಯವೂ ಸಮಾಜವೂ ಒಂದೇ ಎಂದು ಭಾವಿಸಿದ್ದರು. ಸಮಾಜಕ್ಕೂ ರಾಜ್ಯಕ್ಕೂ ಇರುವ ವ್ಯತ್ಯಾಸವನ್ನು ತಿಳಿಯಲು ಅವರು ಪ್ರಯತ್ನಿಸಲಿಲ್ಲ. ಆದರೂ ಗ್ರೀಕರ ಪ್ರಮುಖ ತತ್ತ್ವಜ್ಞರ ಬರವಣಿಗೆಗಳಲ್ಲಿ ಸಮಾಜ ಸಂಸ್ಥೆಗಳ ವಿಷಯದಲ್ಲಿ ಹಲವಾರು ಫಲಪ್ರದ ಅಭಿಪ್ರಾಯಗಳ ಮತ್ತು ಉನ್ನತ ಆದರ್ಶಗಳ ನಿರೂಪಣೆಯನ್ನು ಕಾಣಬಹುದು. ಕುಟುಂಬ ಜೀವನ, ದಾಂಪತ್ಯಸಂಬಂಧ, ಸಮಾಜದಲ್ಲಿ ಹೆಂಗಸಿನ ಸ್ಥಾನ, ವರ್ಗಗಳ ವ್ಯತ್ಯಾಸ ಮೊದಲಾದ ವಿಚಾರಗಳನ್ನು ಆಲೋಚಿಸಿ ಅವರು ಹಲವಾರು ನಿರ್ದಿಷ್ಟವಾದ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಒಟ್ಟಿನಲ್ಲಿ ಗ್ರೀಕರು ಸ್ವಜಸ್ಥಿತಿಯನ್ನು ಅವಲೋಕಿಸುವ ಗೊಡವೆಗೆ ಹೆಚ್ಚಾಗಿ ಹೋಗದೆ ಕೇವಲ ಆದರ್ಶಗಳ ಬೆಳಕಿನಲ್ಲಿ ಸಮಾಜದ ಸ್ಥಿತಿಗತಿಗಳನ್ನು ನಿರೂಪಿಸಿದರು. ತಾತ್ತ್ವಿಕ, ನೈತಿಕ ಮತ್ತು ಆದರ್ಶದೃಷ್ಟಿಯು ಸಮಾಜಜೀವನಕ್ಕೆ ಅಗತ್ಯವಾದರೂ, ಮುಖ್ಯವಾಗಿ ಸಮಾಜದ ವಾಸ್ತವಿಕ ಶಕ್ತಿಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಅವಲೋಕಿಸುವ ಅಗತ್ಯವನ್ನು ಗ್ರೀಕರು ಮನಗಾಣಲಿಲ್ಲ.

ಪೂರ್ವಕಾಲದಲ್ಲಿ ನಾನಾದೇಶಗಳಲ್ಲಿ, ಬಾಳಿದ ಮಹಾವ್ಯಕ್ತಿಗಳೂ ಜನರೂ ಸಮಾಜದಲ್ಲಿ ಬಾಳಬೇಕಾದ ರೀತಿಯನ್ನೂ, ಅವರು ಜೀವನದಲ್ಲಿ ನೆನಪಿಡಬೇಕಾದ ಆದರ್ಶಗಳನ್ನೂ, ನೀತಿಶಾಸ್ತ್ರ ಮತ್ತು ಧರ್ಮನಿರೂಪಣೆಗಳ ಮಾರ್ಗದಲ್ಲಿ ಭೋಧಿಸಿದರು. ಸಮಾಜ ಜೀವನದ ವಾಸ್ತವಿಕತೆಗೆ ಅವರು ಹೆಚ್ಚು ಗಮನ ಕೊಡಲಿಲ್ಲ. ಸಮಾಜಜೀವನದಲ್ಲಿ ವ್ಯಕ್ತಿಯ ಮೇಲೆ ಪ್ರಭಾವ ಬೀರುವ ಹಲವಾರು ಶಕ್ತಿಗಳ ರೀತಿಯನ್ನು ಗಣನೆಗೆ ತಂದುಕೊಳ್ಳಲಿಲ್ಲ. ಸಮಾಜಜೀವನದ ಬಾಹ್ಯಪರಿಸರದ ವಿಷಯವಾಗಿ ಅವರು ಹೆಚ್ಚು ಆಸಕ್ತಿವಹಿಸಲಿಲ್ಲ. ಇವುಗಳ ವಿಚಾರವಾಗಿ ಕೇವಲ ಸೂಕ್ಷ್ಮವಾಗಿ ಸೂತ್ರರೂಪದಲ್ಲಿ ನಿರೂಪಿಸಿದರು.

ಮನುಷ್ಯ ತಾನು ಬಾಳುವ ಸಮಾಜದ ರೀತಿನೀತಿಗಳನ್ನು ನಿರ್ವಿಕಾರ

ಮನಸ್ಸಿನಿಂದ ಅವಲೋಕಿಸುವುದು ಸುಲಭವಲ್ಲ. ಸಾಮಾಜಿಕ ವಿಜ್ಞಾನಗಳು ಅಸ್ತಿತ್ವಕ್ಕೆ ಬಂದದ್ದು ಉಳಿದ ವಿಜ್ಞಾನಗಳಾದಮೇಲೆ—ಎಂಬುದನ್ನು ವಿಚಾರಿಸಿದರೆ ಇದು ಅರ್ಥವಾಗುತ್ತದೆ. ಮಿಕ್ಕ ವಿಜ್ಞಾನಗಳ ವಸ್ತುವನ್ನು ವೀಕ್ಷಿಸುವಾಗ ನಿರ್ಲಿಪ್ತ ಮನೋಭಾವನೆ ಸಾಧ್ಯ. ಆದರೆ ಮನುಷ್ಯನು ತನ್ನ ಜೀವನದ ಹಾಸು ಹೊಕ್ಕಾಗಿರುವ ವಿವಿಧ ಸಂಸ್ಥೆಗಳ ಕಾರ್ಯಕ್ಷೇತ್ರವನ್ನು ವೀಕ್ಷಿಸುವಾಗ ಆತನ ಆಸೆ ಆಕಾಂಕ್ಷೆಗಳು ಆತನ ಅಧ್ಯಯನದ ಮೇಲೆ ತಮ್ಮ ಪ್ರಭಾವ ಬೀರುವುದು ಸ್ವಾಭಾವಿಕ. ಆದ್ದರಿಂದಲೇ ಮನುಷ್ಯನು ಮೊಟ್ಟಮೊದಲು ಪ್ರಕೃತಿಯ ವಸ್ತುಗಳಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸಿದ.

ಸಮಾಜಶಾಸ್ತ್ರ (Sociology) ಎಂಬ ಪದವನ್ನು 1838ರಲ್ಲಿ ಫ್ರಾನ್ಸಿನ ಆಗಸ್ಟ್ ಕಾಂಮ್ಟೆ (Auguste Comte) (1795-1857) ಮೊಟ್ಟಮೊದಲಿಗೆ ಉಪಯೋಗಿಸಿದ್ದಾನೆ. ಆತ ವಿಜ್ಞಾನದ ಬೆಳವಣಿಗೆಯನ್ನು ವಿಕಾಸತತ್ತ್ವದ ಹಿನ್ನೆಲೆಯಲ್ಲಿ ಅವಲೋಕಿಸಿದ. ಗಣಿತಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರಗಳಾದ ಮೇಲೆ ಕೊನೆಗೆ ಸಮಾಜಶಾಸ್ತ್ರ ವಿಜ್ಞಾನಕ್ಷೇತ್ರವನ್ನು ಪ್ರವೇಶಿಸಿತು. ಕಾಂಮ್ಟೆಯ ವರ್ಗೀಕರಣದಲ್ಲಿ ಸಮಾಜಶಾಸ್ತ್ರವು ತಾರ್ಕಿಕವಾಗಿಯೂ ಮತ್ತು ಕಾಲಗಣನೆಯ ದೃಷ್ಟಿಯಿಂದಲೂ ಉಳಿದ ವಿಜ್ಞಾನಗಳನಂತರ ರೂಪಗೊಂಡಿತು. ಅದು ಅತ್ಯಂತ ಸಂಕೀರ್ಣವಾದ ಮತ್ತು ಕಿರಿಯದಾದ ವಿಜ್ಞಾನ. ಮಾನವಸಮಾಜ ವಿಜ್ಞಾನ ಅತ್ಯಂತ ಶೈಶಾವಾವಸ್ಥೆಯಲ್ಲಿದೆಯೆಂದು ಸುಪ್ರಸಿದ್ಧ ಮಾನವಶಾಸ್ತ್ರಜ್ಞನಾದ ರಾಡ್‌ಕ್ಲಿಫ್ ಬ್ರೌನ್ ಹೇಳಿದ್ದಾನೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಸಮಾಜಶಾಸ್ತ್ರದ ಉದಯಕ್ಕೆ ಇತಿಹಾಸದ ತತ್ತ್ವಶಾಸ್ತ್ರವೂ (Philosophy of History) ಸಹಾಯಮಾಡಿತು. ಇತಿಹಾಸಕಾರರು ಮನುಷ್ಯನ ಬೆಳವಣಿಗೆಯನ್ನು ಕಾಲಾನುಕ್ರಮವಾಗಿ ನಿರೂಪಿಸಿದರು. ಮನುಷ್ಯನ ಚರಿತ್ರೆಯನ್ನು ಅವಲೋಕಿಸಿದರೆ ಆತ ಹೇಗೆ ಅನೇಕ ಹಂತಗಳಲ್ಲಿ ಅಭಿವೃದ್ಧಿಹೊಂದಿದನೆಂಬುದು ಗೋಚರವಾಗುವುದು. ಇತಿಹಾಸದ ತತ್ತ್ವಶಾಸ್ತ್ರಜ್ಞರು ಚಾರಿತ್ರಿಕ ನಿಯತಕಾಲಗಳು ಮತ್ತು ಸಾಮಾಜಿಕ ಮಾದರಿಗಳು ಎಂಬ ಕಲ್ಪನೆಗಳನ್ನು (ಕಾನ್ಸೆಪ್ಟ್ಸ) ಸಮಾಜಶಾಸ್ತ್ರಜ್ಞರಿಗೆ ಒದಗಿಸಿದರು ; ರಾಜ್ಯಕ್ಕೂ ಸಮಾಜಕ್ಕೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ನಿರೂಪಿಸಿದರು. ಸಮಾಜಶಬ್ದಕ್ಕೆ ರಾಜ್ಯಕ್ಕಿಂತ ವಿಶಾಲವಾದ ಅರ್ಥವಿದೆಯೆಂಬ ಅಂಶವನ್ನು ವಿಶದಪಡಿಸಿದರು.

ಹತ್ತೊಂಬತ್ತನೆಯ ಶತಮಾನದಲ್ಲಿ ಸಾಮಾಜಿಕ ಪರಿಶೀಲನೆ (ಸೋಷಿಯಲ್ ಸರ್ವೆ) ಪ್ರಾಮುಖ್ಯಕ್ಕೆ ಬಂತು. ಅದು ಸಮಾಜದಲ್ಲಿರುವ ದೋಷಗಳ ನಿವಾರಣೆಗೆ ಅಂಕಿ ಅಂಶಗಳನ್ನು ಸಂಗ್ರಹಿಸಿ ನಿವಾರಣೋಪಾಯಗಳನ್ನು ಸೂಚಿಸುವ ಉದ್ದೇಶದಿಂದ ಕೂಡಿತ್ತು. ಆದ್ದರಿಂದ ಅದು ಮುಖ್ಯವಾಗಿ ಕಾರ್ಯನಿರತವಾದದ್ದು

ಅಪರಾಧ ಮತ್ತು ಬಡತನಗಳ ಕ್ಷೇತ್ರಗಳಲ್ಲಿ. ಮನುಷ್ಯ ವಿಜ್ಞಾನಗಳ ಪ್ರಗತಿಯ ಫಲವಾಗಿ ಯಂತ್ರೋಪಕರಣಗಳನ್ನು ಸೃಷ್ಟಿಸಿ ತನ್ನ ಜೀವನವನ್ನು ಉತ್ತಮಪಡಿಸಿ ಕೊಳ್ಳಬಹುದೆಂಬ ಧೃಡನಂಬಿಕೆ ಮೂಡಿತು. ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ಅವುಗಳ ನಿಜಸ್ವರೂಪದ ಅರಿವು ಅಗತ್ಯ. ಪ್ರಕೃತಿ ವಿಜ್ಞಾನದ ಪದ್ಧತಿಗಳನ್ನು ಅನುಸರಿಸಿ ಸಮಾಜದ ಸಮಸ್ಯೆಗಳನ್ನು ಗ್ರಹಿಸುವುದು ಅಗತ್ಯ ಎಂಬುದು ಮನವರಿಕೆ ಯಾಯಿತು. ಅಂಕಿ ಅಂಶಗಳ ಸಂಗ್ರಹಣೆಯೊಂದು ಅತ್ಯುತ್ತಮ ಸಾಧನವಾಗಿ ಒದಗಿಬಂತು. ಇದು ವಿಷಯಗಳ ವಾಸ್ತವಿಕ ದೃಷ್ಟಿಗೆ ಅನುವಾಯಿತು. ಇದು ಇತ್ಯಾತ್ಮಕ ವಿಜ್ಞಾನ (ಪಾಸಿಟಿವ್ ಸೈಯನ್ಸ್) ವಾಸ್ತವಾಂಶಗಳನ್ನು ಅಂಗೀಕರಿಸಿ ಅವುಗಳ ಆಧಾರದ ಮೇಲೆ ತತ್ವನಿರೂಪಿಸುವುದೇ ಇದರ ಪ್ರಮುಖ ಲಕ್ಷಣ.

ಹತ್ತೊಂಬತ್ತನೆಯ ಶತಮಾನದಲ್ಲಿ ಸಮಾಜಶಾಸ್ತ್ರ ರೂಪಗೊಳ್ಳುವಾಗ, ಪ್ರಕೃತಿವಿಜ್ಞಾನದ ಕ್ಷೇತ್ರದಲ್ಲಿ ವಿಕಾಸತತ್ತ್ವ ಪ್ರಾಶಸ್ತ್ಯಗಳಿಸಿತ್ತು. ಸಮಾಜ ಶಾಸ್ತ್ರ ಕ್ಷೇತ್ರದಲ್ಲಿ ಆ ತತ್ತ್ವವನ್ನು ಅಳವಡಿಸಿಕೊಂಡು ಸಮಾಜದ ರಚನೆ ಮತ್ತು ಕಾರ್ಯಗಳನ್ನು ವೀಕ್ಷಿಸಲಾಯಿತು. ಇಂಗ್ಲೆಂಡಿನ ಹರ್ಬರ್ಟ್ ಸ್ಪೆನ್ಸರ್ ಸಮಾಜವಿಕಾಸತತ್ತ್ವವನ್ನು ಪ್ರತಿಪಾದಿಸಿದವರಲ್ಲಿ ಅತ್ಯಂತ ಪ್ರಮುಖನಾಗಿದ್ದವನು. ಜೀವವಿಜ್ಞಾನದ ವಿಕಾಸತತ್ತ್ವವನ್ನು ಸಾಮಾಜಿಕ ವಿಷಯಗಳಿಗೆ ಅಂಗೀಕರಿಸಿ ಸಾಮಾಜಿಕ ವಿಕಾಸವನ್ನು ವಿವರಿಸುವ ಪದ್ಧತಿ ಹೆಚ್ಚಾಗಿ ಬಳಕೆಗೆ ಬಂತು. ಇವು ಸಮಾಜಜೀವನವೆಂಬ ವ್ಯವಸ್ಥಿತ ದೇಹದ ಅವಿಭಾಜ್ಯ ಅಂಗಗಳು. ಸಮಾಜ ವೆಂಬುದು ಜೀವಂತ ವ್ಯಕ್ತಿಗೆ ಹೋಲಿಸಬಹುದಾದ, ಪರಸ್ಪರಾವಲಂಬಿ ಅಂಗಗಳಿಂದ ಕೂಡಿದ ಒಂದು ಸಮಷ್ಟಿ. ಸಮಾಜ ವಿಕಾಸದ ಶ್ರೇಣಿಗಳನ್ನು ಅರಿತು ಅವುಗಳನ್ನು ವಿವರಿಸುವುದು ಸಮಾಜಶಾಸ್ತ್ರದ ಮುಖ್ಯಕಾರ್ಯವಾಯಿತು. ವಿಜ್ಞಾನದ ಬೆಳವಣಿಗೆಯನ್ನು ಮತ್ತು ಯಂತ್ರೋಪಕರಣಗಳ ಉಪಯೋಗ ಹೆಚ್ಚುತ್ತಿರು ವುದನ್ನೂ ಅವಲೋಕಿಸಿ ಸಮಾಜದ ಬೆಳವಣಿಗೆಯಲ್ಲಿ ಅವುಗಳ ಪರಿಣಾಮದ ಅಧ್ಯಯನ ನಡೆಯಿತು. ಮನುಷ್ಯನ ಜೀವನವು ಒಂದು ಗೊತ್ತಾದ ಸುವ್ಯವಸ್ಥಿತ ರೀತಿಯಲ್ಲಿ ಸಾಗುತ್ತಿರುವುದಾಗಿ ಧೃಡವಾಗಿ ನಂಬಿ ತಮ್ಮ ಅಧ್ಯಯನವನ್ನು ಮುಂದುವರಿಸಿ ಸಾಮಾಜಿಕ ಜೀವನದ ನಾನಾವಿಭಾಗಗಳ ಮೇಲೆ ತತ್ತ್ವಗಳನ್ನು ನಿರೂಪಿಸಲಾಯಿತು. ಆದರೆ ಮನುಷ್ಯನ ಜೀವನ ಯಾವಾಗಲೂ ಸುಗಮವಲ್ಲ ವೆಂಬುದು ಗಮನಕ್ಕೆ ಬಾರದಿರಲಿಲ್ಲ. ಆದರೂ ಮನುಷ್ಯ ಸಾಧಾರಣವಾಗಿ ಪ್ರಗತಿಯ ದಿಕ್ಕಿನಲ್ಲೇ ಸರ್ವದಾ ಮುಂದುವರಿಯುವನೆಂಬ ಅಚಲ ನಂಬಿಕೆಯೂ ಇತ್ತು. ವಿಜ್ಞಾನಕ್ಷೇತ್ರದಲ್ಲಿ ಮನುಷ್ಯನ ಅಸಂಖ್ಯ ಸಾಧನೆಗಳ ಮತ್ತು ಕೈಗಾರಿಕಾಭಿವೃದ್ಧಿಯ ಹಿನ್ನೆಲೆಯಲ್ಲಿ ಸಮಾಜಶಾಸ್ತ್ರಜ್ಞರು ನಿರೂಪಿಸಿದ ಅಭಿ ಪ್ರಾಯಗಳು ಸಾಧುವೆಂದು ತೋರಿದವು.

ಆದರೆ ಮೊದಲನೆಯ ಮಹಾಯುದ್ಧ ಈ ಅಭಿಪ್ರಾಯಗಳನ್ನು ನೀರುಪಾಲು

ಮಾಡಿತು. ಆಸ್ವಾಲ್ಡ್ ಸ್ಪೆಂಗ್ಲರ್ "ಡಿಕ್ಲೈನ್ ಆಫ್ ದಿ ವೆಸ್ಟ್" ಎಂಬ ಗ್ರಂಥದಲ್ಲಿ ಪಾಶ್ಚಾತ್ಯ ನಾಗರಿಕತೆಯು ಅವನತಿಯನ್ನು ವಿಶದಪಡಿಸಿದ. ಇದರಿಂದ ಮನುಷ್ಯನ ನಿರಂತರ ಪ್ರಗತಿಯಲ್ಲಿದ್ದ ನಂಬಿಕೆ ಸಡಿಲವಾಯಿತು. ಪ್ರಗತಿವಾದದ ವಿಕಾಸತತ್ತ್ವವು ಸಮಾಜ ಪ್ರಕ್ರಿಯೆಗಳನ್ನೂ ಗುರಿಯನ್ನೂ ವಿವರಿಸಲು ಅಸಮರ್ಥ ವಾಯಿತು. ಇವರ ಪರಿಣಾಮವಾಗಿ ಸಮಾಜಶಾಸ್ತ್ರಜ್ಞರು ಹೆಚ್ಚಾಗಿ ಸಮಾಜದ ಸ್ವರೂಪ, ರಚನೆ ಮತ್ತು ಪ್ರಕ್ರಿಯೆಗಳನ್ನು ಅಭ್ಯಾಸಿಸಲು ಉಪಕ್ರಮಿಸಿದರು. ವ್ಯಕ್ತಿಯ ಮತ್ತು ಸಮಾಜದ ಸಂಬಂಧವನ್ನು ಪರಿಶೀಲಿಸುವುದು ಆಗತ್ಯವಾಯಿತು. ಇದರಿಂದ ಆಧುನಿಕ ಸಮಾಜದ ಅಧ್ಯಯನದಲ್ಲಿ ಸಮಾಜದ ಮಾನಸಿಕ, ಭೌತಿಕ ಮತ್ತು ವರ್ಗೀಯ ಸ್ಥಿತಿಗಳಿಗೆ ಹೆಚ್ಚು ಗಮನಕೊಡಲು ಆರಂಭವಾಯಿತು. ಸಮುದಾಯಕ್ಕೂ ಅದು ನೆಲಸಿರುವ ಸುತ್ತಲ ಸನ್ನಿವೇಶಕ್ಕೂ ಇರುವ ಸಂಬಂಧಗಳ ಅಧ್ಯಯನಕ್ಕೆ ಹೆಚ್ಚು ಪ್ರಾಮುಖ್ಯ ದೊರೆಯಿತು. ಚಿಕಾಗೊ ವಿಶ್ವವಿದ್ಯಾನಿಲಯದ ಸುಪ್ರಸಿದ್ಧ ಸಮಾಜಶಾಸ್ತ್ರಜ್ಞರಾದ ಆರ್. ಇ. ಪಾರ್ಕ್ಸ್ ಮತ್ತು ಇ.ಎ. ಬರ್ಗಸರು ಸಾಮಾಜಿಕ ಜೀವಿಪರಿಸ್ಥಿತಿಶಾಸ್ತ್ರಕ್ಕೆ (Social Ecology) ಹೆಚ್ಚು ಗಮನಕೊಟ್ಟರು. ಭಾರತದ ಸಮಾಜಶಾಸ್ತ್ರಜ್ಞರಲ್ಲಿ ಸಾಮಾಜಿಕ ಜೀವಿಪರಿಸ್ಥಿತಿ ಶಾಸ್ತ್ರಕ್ಕೆ ಹೆಚ್ಚು ಗಮನಕೊಟ್ಟವರು ರಾಧಾಕುಮುದ್ ಮುಖರ್ಜಿ. ವ್ಯಕ್ತಿ ಸಮಾಜಗಳ ಪರಸ್ಪರ ಸಂಬಂಧ ಮತ್ತು ಸಾಮಾಜಿಕ ಪ್ರಕ್ರಿಯೆಗಳು ಹೆಚ್ಚು ಹೆಚ್ಚಾಗಿ ಪಂಡಿತರ ಗಮನವನ್ನು ಸೆಳೆದವು. ಇಷ್ಟೇ ಅಲ್ಲದೆ ಸಣ್ಣ ಸಣ್ಣ ಗುಂಪು ಗಳಲ್ಲಿರುವ ವ್ಯಕ್ತಿಗಳ ಪರಸ್ಪರ ಸಂಬಂಧಗಳನ್ನೂ ಮಾನಸಿಕ ಪ್ರವೃತ್ತಿಗಳನ್ನೂ ಗಣನೆಗೆ ತಂದುಕೊಂಡು ಅಭ್ಯಾಸಮಾಡಲಾಗಿದೆ. ಇದಕ್ಕೆ ಸಮಾಜಗಣಿತ (ಸೋಷಿಯೊಮಿಟ್ರಿ) ಎಂದು ಹೆಸರು. ಇದು ಹೆಚ್ಚಾಗಿ ಅಮೆರಿಕದಲ್ಲಿ ವಾಡಿಕೆಗೆ ಬಂದಿದೆ.

ಆಧುನಿಕ ಸಮಾಜಶಾಸ್ತ್ರದ ಇನ್ನೊಂದು ಮುಖ್ಯಲಕ್ಷಣ ಸಮಾಜಶಾಸ್ತ್ರದ ಅಧ್ಯಯನ ವಿಧಾನ ಅಥವಾ ಪದ್ಧತಿಗೆ ಸಂಬಂಧಪಟ್ಟದ್ದು. ಸತ್ಯಾನ್ವೇಷಣೆಯಲ್ಲಿ ನಿಗಮನ (Deduction) ಮತ್ತು ಅನುಗಮನ (Induction) ತಾರ್ಕಿಕ ಮಾರ್ಗ ಗಳನ್ನು ಉಪಯೋಗಿಸಿದ್ದಾನೆ. ಈ ಎರಡು ವಿಧಗಳನ್ನೂ ಪ್ರಾಜ್ಞರು ವಿಶೇಷವಾಗಿ ಎಲ್ಲ ಕಾಲದಲ್ಲಿಯೂ ಉಪಯೋಗಿಸಿರುವರು. ಇಂದು ಈ ಮಾರ್ಗಗಳು ಸಮಾಜ ಶಾಸ್ತ್ರದ ಅಧ್ಯಯನಕ್ಕೆ ಸಾಧುವಲ್ಲವೆಂದು ಅನೇಕರಿಂದ ತಿರಸ್ಕೃತವಾಗಿವೆ. ಪ್ರಕೃತಿ ವಿಜ್ಞಾನಿಗಳು ಅವಲೋಕನ ಮತ್ತು ಪ್ರಯೋಗಗಳಿಗೆ ಪ್ರಾಶಸ್ತ್ಯಕೊಡುತ್ತಾರೆ. ಮನುಷ್ಯನನ್ನು ಪ್ರಯೋಗಕ್ಕೆ ಉಪಯೋಗಿಸುವುದು ಕಷ್ಟವೆಂಬುದನ್ನು ಅವರು ಅರಿತಿರುವರು. ಆದ್ದರಿಂದ ಆತನ ಬಾಹ್ಯಪ್ರಪಂಚದ ಕಾರ್ಯಕ್ಷೇತ್ರದಲ್ಲಿ ಕಾಣ ಬಹುದಾದ ವಿಷಯಗಳನ್ನು ಅಂಕಿ ಅಂಶಗಳ ಸಹಾಯದಿಂದ ಸಂಗ್ರಹಿಸಿ, ಅವುಗಳ ಆಧಾರದಮೇಲೆ ತಮ್ಮ ಸಿದ್ಧಾಂತಗಳನ್ನು ನಿರೂಪಿಸುತ್ತಾರೆ. ಅವರು ಅಧ್ಯಯನದಲ್ಲಿ

ಸಂಖ್ಯಾಪರಿಶೀಲನಶಾಸ್ತ್ರ (Statistics) ಮತ್ತು ಪರಿಮಾಣ ನಿರೂಪಣೆಗೆ(Quantification) ಆದ್ಯತೆಯನ್ನು ಕೊಟ್ಟರು. ಅನುಭವವೊಂದೇ ಜ್ಞಾನಕ್ಕೆ ಮೂಲಾಧಾರ. ಸಂಗ್ರಹಿತ ವಿಷಯಗಳನ್ನು ಪ್ರತ್ಯಕ್ಷ ಅನುಭವಾತ್ಮಕ ಪದ್ಧತಿಯ ಹಿನ್ನೆಲೆಯಲ್ಲಿ ಪರೀಕ್ಷಿಸಿ ಅವುಗಳ ಆಧಾರದಮೇಲೆ ಮಾತ್ರ ತತ್ವನಿರೂಪಣೆ ಮಾಡುವುದು ಸಾಧ್ಯ. ಮುಖ್ಯವಾಗಿ ಪ್ರಕೃತಿ ವಿಜ್ಞಾನದ ಪದ್ಧತಿಗಳನ್ನು ಸಮಾಜಶಾಸ್ತ್ರದ ಅಧ್ಯಯನಕ್ಕೆ ಅನ್ವಯಿಸುವುದು ಸಾಧ್ಯವೆಂದೂ, ಅದು ಸಾಧುವೆಂದೂ ಇವರು ಮನಗಂಡಿದ್ದರು. ಅವರ ಅಭಿಪ್ರಾಯದಲ್ಲಿ ಸಾಮಾಜಿಕ ವಿಷಯಗಳಿಗೆ ಕಾರಣವನ್ನು ನಿರೂಪಿಸುವುದು ಅಸಾಧ್ಯ. ಆದರೆ ಅವುಗಳ ಸಂಭವನೀಯತೆಯನ್ನು ನಾವು ಅರಿಯಬಹುದು. ಸಂಖ್ಯಾಪರಿಶೀಲನಶಾಸ್ತ್ರದ ಅನೇಕ ಸಂಬಂಧಕರಣ (ಮಲ್ಟಿಪಲ್ ಕಾರಿಲೇಷನ್) ಮತ್ತು ಆಂಶಿಕ ಸಂಬಂಧಕರಣ (ಪಾರ್ಷಿಯಲ್ ಕಾರಿಲೇಷನ್) ಇವುಗಳ ಸಹಾಯದಿಂದ ವಿವಿಧ ಸಮಾಜ ಘಟನೆಗಳಿಗೆ ಇರುವ ಪರಸ್ಪರ ಸಂಬಂಧವನ್ನು ಅರಿಯಬಹುದು. ಆದರೆ ಇವರು ಕಾಲಾತೀತ ಕಾರ್ಯಕಾರಣ ಸಂಬಂಧವನ್ನಾಗಲೀ, ಸಂಭವನೀಯತೆಯನ್ನಾಗಲೀ ಒಪ್ಪುವುದಿಲ್ಲವೆಂಬುದು ಕಾರಲ್ ಜಿಮರ್‌ಮನ್‌ಮತ. ಇವರು ಒಂದು ಘಟನೆಗೆ ಕಾರಣವಾದ ಒಂದು ಅಂಶವನ್ನು ಮಾತ್ರ ಕಂಡು ಹಿಡಿಯುವ ಪ್ರಯತ್ನದಲ್ಲಿ ತೊಡಗಿರುವರೆಂದು ಅಭಿಪ್ರಾಯಪಟ್ಟಿದ್ದಾನೆ. ಈ ನವ್ಯ ಇತ್ಯಾತ್ಮಕ ಅನುಭವೈಕವಾದವನ್ನು (ನಿಯೊ ಪಾಸಿಟಿವಿಸ್ಟ್ ಎಂಪಿರಿಸಿಸಮ್) ಅನೇಕ ಸಮಾಜಶಾಸ್ತ್ರಜ್ಞರು ಸಮಂಜಸವಾದ ಮಾರ್ಗವೆಂದು ಅನುಸರಿಸಿರುವರು. ಅವರು ಸಾಮಾಜಿಕ ತತ್ತ್ವಕ್ಕೆ (Sociological Theory) ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಿಲ್ಲ. ಈ ಪ್ರವೃತ್ತಿಗೆ ಸಂಬಂಧಿಸಿದಂತೆ ಮ್ಯಾಕ್ ಐವರ್ ಒಬ್ಬ ಸಂಶೋಧಕ ವಿದ್ಯಾರ್ಥಿಯ ವಿಷಯವನ್ನು ಹೇಳಿದ್ದಾನೆ. ನಿರುದ್ಯೋಗದ ವಿಚಾರವಾಗಿ ಅಧ್ಯಯನ ಮಾಡುವುದು ಆ ಸಂಶೋಧಕನ ಇಚ್ಛೆಯಾಗಿತ್ತು. ನಿರುದ್ಯೋಗದಲ್ಲಿ ಯಾವ ಅಂಶದ ಮೇಲೆ ಅಧ್ಯಯನವನ್ನು ಕೇಂದ್ರೀಕರಿಸಬೇಕೆಂದಿದ್ದೀಯೆ ಎಂಬ ಪ್ರಶ್ನೆಗೆ ಆತ, ಮೊದಲು ವಿಷಯಸಂಗ್ರಹಣೆ ಮಾಡುವುದಾಗಿಯೂ ಅನಂತರ ಮಿಕ್ಕ ವಿಷಯಗಳನ್ನು ಆಲೋಚಿಸುವುದಾಗಿಯೂ ತಿಳಿಸಿದನಂತೆ. ಈ ರೀತಿ ಸಂಶೋಧನೆಯ ಔಚಿತ್ಯದ ಅರಿವೇ ಆತನಿಗೆ ಇರಲಿಲ್ಲ. ಗೊತ್ತುಗುರಿಯಿಲ್ಲದೆ, ಸರಿಯಾದ ಉಪಕಲ್ಪನೆಯ ಆಧಾರವಿಲ್ಲದ ವಿಷಯ ಸಂಗ್ರಹಣೆಗೆ ಮಿತಿಯುಂಟೆ ? ಹೀಗೆ ವಿಷಯಸಂಗ್ರಹಣೆಗೆ ಹೊರಟರೆ ಎಷ್ಟು ಕಾಲವಾದರೂ ಸಾಲದು, ಎಷ್ಟು ಹಣವಿದ್ದರೂ ಸಾಲದು. ಮ್ಯಾಕ್ ಐವರನು ಸಂಖ್ಯಾಪರಿಶೀಲನಶಾಸ್ತ್ರದ ಉಪಯೋಗಕ್ಕೆ ವಿರೋಧವಾಗಿಲ್ಲ. ಆದರೆ ಆತನ ವಿರೋಧ ಇರುವುದು ಸಮಾಜಶಾಸ್ತ್ರ ಕ್ಷೇತ್ರದಲ್ಲಿ ಭೌತವಿಜ್ಞಾನ ಪದ್ಧತಿಗಳ ಅಂಧ ಅನುಕರಣೆಯಬಗ್ಗೆ. ರಾಧಾ ಕಮಲ ಮುಖರ್ಜಿ ಮತ್ತು ಸೋರೊಕಿನರ ಅಭಿಪ್ರಾಯಗಳೂ ಈ ಬಗೆಯವೇ ಆಗಿವೆ. ಮ್ಯಾಕ್ ಐವರ್ ಈ ಬಗ್ಗೆ ತನ್ನ ಅಭಿಪ್ರಾಯ

ಗಳನ್ನು ಖಚಿತವಾಗಿ ನಿರೂಪಿಸಿದ್ದಾನೆ. ಸಮಾಜಶಾಸ್ತ್ರದಲ್ಲಿ ಭೌತ ವಿಜ್ಞಾನಗಳ ಪದ್ಧತಿಯನ್ನು ಅನುಸರಿಸಿ ವಿಷಯಗಳನ್ನು ಸಂಗ್ರಹಿಸಬೇಕು. ಆದರೆ ಆ ವಿಷಯ ಗಳನ್ನು ಎಣಿಸಿ ಅಳೆಯುವುದು ಸೂಕ್ತಕ್ರಮವಲ್ಲ. ಸಾಮಾಜಿಕ ಸಂಬಂಧಗಳು ಅರ್ಥಪೂರ್ಣವಾದ ಸಂಬಂಧಗಳು. ಅವು ಆಂತರಿಕ ಅನುಭವಗಳಿಂದ ಪ್ರೇರಿತ ವಾದವು. ಆ ಅನುಭವಗಳು ಬಾಹ್ಯ ಪ್ರಪಂಚದ ಭೌತವಸ್ತುಗಳಲ್ಲ. ಈ ಅನು ಭವಗಳನ್ನು ಬಹಿರಂಗವಾಗಿ ಸೂಚಿಸುವ ವಿಷಯುಗಳನ್ನು ಗಣನೆಗೆ ತಂದುಕೊಳ್ಳು ವುದು ಅಗತ್ಯ. ಆದರೆ ನಾವು ಅರ್ಥಮಾಡಿಕೊಳ್ಳಬೇಕಾಗಿರುವುದು ಬಹಿರಂಗ ಕಾರ್ಯಗಳನ್ನಲ್ಲ. ಪ್ರತಿಯೊಂದು ಸಾಮಾಜಿಕ ಸಂಬಂಧದಲ್ಲೂ ಅಂತರಂಗ ಮತ್ತು ಬಾಹ್ಯ ವ್ಯವಸ್ಥೆಗಳಿರುತ್ತವೆ. ಪ್ರತಿ ಸಾಮಾಜಿಕ ಕ್ರಿಯೆಯ ಈ ಎರಡು ಮುಖ ಗಳನ್ನೂ ನಾವು ಪರಿಶೀಲಿಸಬೇಕು. ಈ ಎರಡು ಮುಖಗಳಿಗೂ ಅನುಗುಣವಾಗಿ ವ್ಯಕ್ತಿಯ ನಡವಳಿಕೆ ಇರುತ್ತದೆ. ವ್ಯಾಕ್ ಐವರನ ಪ್ರಕಾರ, ಸಮಾಜ ವಿಜ್ಞಾನ ಗಳ ವಿಷಯುಗಳನ್ನು ಸತ್ಯವೆಂದು ದೃಢಪಡಿಸುವಾಗ ಸಂಖ್ಯಾಪರಿಶೀಲನಶಾಸ್ತ್ರ ಪದ್ಧತಿಗಳಿಂದ ಪಡೆದ ಜ್ಞಾನಕ್ಕೆ ಸಾಮಾಜಿಕ ಕಲ್ಪನಾಶಕ್ತಿ ಅತ್ಯಾವಶ್ಯಕ.

ಆಧುನಿಕ ಸಮಾಜಶಾಸ್ತ್ರದಲ್ಲಿ ಹೆಚ್ಚು ಪ್ರಾಮುಖ್ಯಗಳಿಸಿರುವ ನವೀನ ದೃಷ್ಟಪ್ರಮಾಣವಾದದ (Neo-Positivism) ಒಂದು ಪ್ರಮುಖ ಪರಿಣಾಮವನ್ನು ನಾವು ಕಾಣಬಹುದು. ಕ್ಷೇತ್ರಾಧ್ಯಯನದ (ಫೀಲ್ಡ್ ಸ್ಟಡಿ) ಗೊಡವೆಗೆ ಹೋಗದೆ ಬರವಣಿಗೆಗಳ ಆಧಾರದ ಮೇಲೆ ಸಾಮಾಜಿಕ ತತ್ವಗಳನ್ನು ನಿರೂಪಿಸುವ ಪದ್ಧತಿ ನಶಿಸಲು ಅನುಕೂಲವಾಯಿತು. ಸಾಮಾಜಿಕ ಸಂಶೋಧಕ ಜನಸಾಮಾನ್ಯರಲ್ಲಿ ಬೆರೆತು ನಡವಳಿಕೆಗಳನ್ನು ಅರಿತಾಗಲೇ ಆತನ ಜ್ಞಾನ ಪರಿಪಕ್ವವಾಗುವುದೆಂಬುದು ಮನವರಿಕೆಯಾಯಿತು.

ಆಧುನಿಕ ಸಮಾಜಶಾಸ್ತ್ರದ ಮೂರನೆಯ ಪ್ರಮುಖ ಲಕ್ಷಣ ಸಾಮಾಜಿಕ ಬದಲಾವಣೆಗೆ ಸಂಬಂಧಿಸಿದ್ದು. ಇದಕ್ಕೆ ನವ್ಯ ಚಲನಾತ್ಮಕ ಸಮಾಜಶಾಸ್ತ್ರ (ನಿಯೊ ಡೈನಮಿಕ್ ಸೋಷಿಯಾಲಜಿ) ಎಂದು ಹೆಸರು. ಈ ಪಂಥ ಹತ್ತೊಂಬತ್ತ ನೆಯ ಶತಮಾನದ ಸಮಾಜಪರಿವರ್ತನೆಯ ಅಧ್ಯಯನದಲ್ಲಿದ್ದ ಲೋಪದೋಷ ಗಳನ್ನು ಸರಿಪಡಿಸಿ ತನ್ನದೇ ಆದ ಕೆಲವು ವಿಶಿಷ್ಟಗುಣಗಳನ್ನು ಪಡೆದಿತ್ತು. ಇದು ಚಾರಿತ್ರಿಕ ದೃಷ್ಟಿಯಿಂದ ಸಾಮಾಜಿಕ ಬದಲಾವಣೆಗಳನ್ನು ವೀಕ್ಷಿಸಿತು. ಇದು ಸಾಮಾಜಿಕ ಬದಲಾವಣೆಗಳಲ್ಲಿ ಕೇವಲ ಪಾಶ್ಚಾತ್ಯ ನಾಗರಿಕತೆಗಳನ್ನು ಮಾತ್ರ ಪರಿಗಣಿಸದೆ, ವಿಶ್ವದ ಎಲ್ಲ ಪ್ರಮುಖ ನಾಗರಿಕ ಸಮಾಜಗಳ ಜೀವನ ಕ್ರಮವನ್ನು ಗಣನೆಗೆ ತಂದುಕೊಂಡಿತು. ಈ ನವೀನಪಂಥ ಸಾಮಾಜಿಕ ಬದಲಾವಣೆಗಳಲ್ಲಿ ಮನುಷ್ಯನ ಬುದ್ಧಿಶಕ್ತಿಗೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟು ನೈಸರ್ಗಿಕ ಶಕ್ತಿಗಳಿಗೆ ಗೌಣಸ್ಥಾನಕೊಟ್ಟಿತು. ಸ್ಪೆಂಗ್ಲರ್ ಚಿತ್ರಿಸಿದ್ದ ಪಾಶ್ಚಾತ್ಯ ನಾಗರಿಕತೆಯ ದುರಂತ ಚಿತ್ರವನ್ನು ತೊಡೆದುಹಾಕಿ, ಐತಿಹಾಸಿಕ ಹಿನ್ನೆಲೆಯನ್ನು

ಗಮನಿಸಿ ವಿಶ್ವದ ನಾನಾ ನಾಗರಿಕತೆಗಳಲ್ಲಿ ನಿರೂಪಿಸಿದ್ದ ಜೀವನದ ಬಗೆಗಳನ್ನು ವಿವರಿಸಿತು. ಈ ಅಭಿಪ್ರಾಯಗಳನ್ನು ಪ್ರತಿಪಾದಿಸಿದವರಲ್ಲಿ ಇಬ್ಬರು ಅತ್ಯಂತ ಪ್ರಮುಖರು. ಇವರಲ್ಲಿ ಒಬ್ಬ ವಿಶ್ವವಿಖ್ಯಾತ ಇತಿಹಾಸಕಾರ ಆರ್ನಾಲ್ಡ್ ಟಾಯ್ನ್‌ಬಿ. ಮತ್ತೊಬ್ಬ ಸುಪ್ರಸಿದ್ಧ ಸಮಾಜಶಾಸ್ತ್ರಜ್ಞ ಸೊರೊಕಿನ್. ಇವರಿಬ್ಬರ ಕಾರ್ಯ ಕ್ಷೇತ್ರಗಳು ಭಿನ್ನವಾದವು. ಈ ಸಮಕಾಲೀನರ ಪರಸ್ಪರ ಪರಿಚಯವಾದದು ತಮ್ಮ ಉದ್ಗ್ರಂಥಗಳ ಕೀರ್ತಿಯಿಂದ. ಇವರು ಪ್ರತಿಪಾದಿಸಿದ ಸಾಮಾಜಿಕ ಬದಲಾವಣೆಗಳ ತತ್ವದ ಹಿನ್ನೆಲೆಯಲ್ಲಿ ಆಧುನಿಕ ಸಮಾಜಶಾಸ್ತ್ರಜ್ಞರು ಸಾಮಾಜಿಕ ಪರಿವರ್ತನೆಯ ವಿಷಯದಲ್ಲಿ ವಿವಿಧ ದೇಶಗಳಲ್ಲಿ ಸಂಶೋಧನೆ ನೆರವೇರಿಸಿದರು.

ಭಾರತದಲ್ಲಿ ಆಧುನಿಕ ಸಮಾಜಶಾಸ್ತ್ರದ ಬೆಳವಣಿಗೆಯು ಪ್ರಾಮುಖ್ಯ ತಳೆದದ್ದು ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದ. ಪಾಶ್ಚಾತ್ಯ ಸಂಸ್ಕೃತಿ ನಮಗೆ ಹೊರಗಿನದು. ಈ ಸಂಸ್ಕೃತಿಯ ಬೆಳವಣಿಗೆ ಯೂರೋಪಿನಲ್ಲಿ ಸಹಜವಾಗಿ ಆಯಿತು. ಆದ್ದರಿಂದ ಅಲ್ಲಿ ಸಂಸ್ಕೃತಿಗಳ ಘರ್ಷಣೆ ಇರಲಿಲ್ಲ. ಅದರ ಬೆಳವಣಿಗೆ ಗ್ರೀಕೋರೋಮನರ ಸಂಸ್ಕೃತಿಯ ತಳಹದಿಯ ಮೇಲೆ ಮಧ್ಯಮ ಯುಗದ ಸಂಸ್ಕೃತಿಯ ಬಹುಭಾಗಗಳನ್ನು ಅಳವಡಿಸಿಕೊಂಡು ಬೆಳೆದುಬಂದಿದೆ. ಆದ್ದರಿಂದ ಸಮಾಜಶಾಸ್ತ್ರಜ್ಞರು ತಮ್ಮ ಬರವಣಿಗೆಗಳಲ್ಲಿ ಸಂಸ್ಕೃತಿಯ ಸಂಘರ್ಷಣೆಗೆ ಹೆಚ್ಚು ಗಮನಕೊಡುವ ಅಗತ್ಯವಿರಲಿಲ್ಲ.

ಭಾರತದ ಚರಿತ್ರೆ ಭಿನ್ನವಾದದ್ದು. ನಮ್ಮ ಸಂಸ್ಕೃಯ ಮೇಲೆ ಹಲವು ಸಂಸ್ಕೃತಿಗಳ ಪ್ರಭಾವವನ್ನು ಕಾಣಬಹುದಾಗಿದೆ. ಹೆಚ್ಚಾಗಿ ಪಾಶ್ಚಾತ್ಯ ನಾಗರಿಕತೆ ತನ್ನ ಪ್ರಭಾವವನ್ನು ಬೀರಿದೆಯೆಂಬ ಅಂಶ ನಿರ್ವಿವಾದವಾದದ್ದು. ಪಾಶ್ಚಾತ್ಯ ಸಂಸ್ಕೃತಿ ನಮ್ಮ ದೇಶದ ಜನಜೀವನದ ಮೇಲೆ ಬೀರಿರುವ ಪ್ರಭಾವದ ರೀತಿಯನ್ನೂ ಅದರ ಫಲಿತಾಂಶವನ್ನೂ ಭಾರತದ ಸಮಾಜಶಾಸ್ತ್ರಜ್ಞರು ಅಧ್ಯಯನ ಮಾಡಿದ್ದಾರೆ.

ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕ ನಮ್ಮಲ್ಲಿ ವಿವಿಧ ಪ್ರತಿಕ್ರಿಯೆಗಳಿಗೆ ಎಡೆಕೊಟ್ಟಿತು. ನಾವು ಆಧುನಿಕ ಪಾಶ್ಚಾತ್ಯ ಸಂಸ್ಕೃತಿಯನ್ನು ಸಂಪೂರ್ಣವಾಗಿ ತ್ಯಜಿಸಬೇಕು ಎಂಬುದು ಮೊದಲನೆಯ ಪ್ರತಿಕ್ರಿಯೆ. ಈ ಅಭಿಪ್ರಾಯವನ್ನು ನಾವು ಆನಂದ ಕುಮಾರ ಸ್ವಾಮಿಯವರ ಬರೆವಣಿಗೆಗಳಲ್ಲಿ ನೋಡುತ್ತೇವೆ. ಅವರು ಸಮಾಜಶಾಸ್ತ್ರದ ವಿಷಯದಲ್ಲಿ ವ್ಯವಸ್ಥಿತ ಗ್ರಂಥಗಳನ್ನು ಬರೆಯದೆ ಇದ್ದರೂ, ಅವರ ಬರವಣಿಗೆಗಳಲ್ಲಿ, ಪುರಾತನ ಸಂಸ್ಕೃತಿ, ಸಾಂಪ್ರದಾಯಿಕ ಸಮಾಜ, ಮನುಷ್ಯನ ಗುಣಗಳು, ಗುರಿ ಮೊದಲಾದ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಆಧುನಿಕ ನಾಗರಿಕತೆಯಿಂದ ಜನತೆಗೆ ಅನುಕೂಲಕ್ಕಿಂತ ಹೆಚ್ಚಾಗಿ ಅನಾಹುತವೇ ಒದಗುವುದೆಂದು ಭಾವಿಸಿದ್ದಾರೆ. ಇವನ್ನು ಉಗ್ರವಾಗಿ ಟೀಕಿಸಿದ್ದಾರೆ. "ಆಧುನಿಕ ನಾಗರಿಕತೆಯು ಕೇವಲ ಹಿಂಸಾತ್ಮಕಯಂತ್ರ. ಅದಕ್ಕೆ ಆತ್ಮವಾಗಲಿ ಗುರಿಯಾಗಲಿ

ಇಲ್ಲ.” ಆದರಲ್ಲಿ ಮಾನವತೆ ಕಡಿಮೆ. ನಾಗರಿಕತೆ ಮೂಲಭೂತತತ್ವಗಳ ಅಥವಾ ಪ್ರಾಥಮಿಕ ತತ್ವಗಳ (First Principles) ಆಧಾರದ ಮೇಲಿರಬೇಕು. ಈ ಆಧಾರಗಳ ಮೇಲೆ ನಿರ್ಮಿತವಾದ ಆದರ್ಶಸಮಾಜದ ದೃಷ್ಟಿಕೋನದಿಂದ ಯೋಗ್ಯತೆಯನ್ನು ನಿರ್ಣಯಿಸುತ್ತಾರೆ. ಸಾಂಪ್ರದಾಯಿಕ ಸಮಾಜದಲ್ಲಿರುವ (Traditional Society) ವ್ಯವಸ್ಥೆ ನೈಸರ್ಗಿಕ ವ್ಯವಸ್ಥೆಗೆ ಅನುಗುಣವಾಗಿರುವುದು. ಅಂಥ ಸರ್ವಸಮ್ಮತ ಸಮಾಜದಲ್ಲಿ (ಯುನಾನಿಮಸ್ ಸೊಸೈಟಿ) ಮನುಷ್ಯ ಸ್ವಾರ್ಥವನ್ನು ಬಿಟ್ಟು, ತನ್ನ ನಿಜಸ್ವರೂಪವನ್ನು ಅರಿತು, ಅದಕ್ಕೆ ಅನುಗುಣವಾಗಿ ಜೀವನವನ್ನು ಸಾಗಿಸುವನು. ಇದು ಸಾಧ್ಯವಾಗಬೇಕಾದರೆ ನಾವು ಸಾಂಪ್ರದಾಯಿಕ ಸಮಾಜದ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಸ್ಥಿರೀಕರಿಸಬೇಕು. ಈ ವಿಚಾರ ಧಾರೆ ನಮ್ಮ ದೇಶದಲ್ಲಿ ಅನೇಕ ಕಠಿಣ ಸಮಸ್ಯೆಗಳನ್ನು ತಂದೊಡ್ಡುತ್ತದೆ. ನಮ್ಮ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳ ಹಿನ್ನೆಲೆಯಲ್ಲಿ, ಕುಮಾರ ಸ್ವಾಮಿ ಯವರ ಬರೆವಣಿಗೆಯಿಂದ ಆಗುವ ಪ್ರಯೋಜನ ಬಹಳ ಸ್ವಲ್ಪ. ಅವರು ಮೌಲ್ಯಗಳ ವಿಚಾರದಲ್ಲಿ ನಿರ್ದಿಷ್ಟವಾದ ವಿವರಣೆಗಳನ್ನು ನೀಡಿಲ್ಲ. ಪ್ರಾಚ್ಯ ಮತ್ತು ಪಾಶ್ಚಾತ್ಯ ನಾಗರಿಕತೆಯ ಸಂಯೋಜನೆ ಸಾಧ್ಯವಿಲ್ಲವೆಂದು ಅವರು ಭಾವಿಸುತ್ತಾರೆ. ನಾವು ಹೇಗೆ ಪಾಶ್ಚಾತ್ಯ ಸಂಸ್ಕೃತಿಯನ್ನು ತಿರಸ್ಕರಿಸಬೇಕೋ ಹಾಗೆಯೇ ಪ್ರಾಚ್ಯ ಸಂಸ್ಕೃತಿಯನ್ನೂ ತಿರಸ್ಕರಿಸಬೇಕು. ಸಾಂಪ್ರದಾಯಿಕ ತತ್ವಗಳ ಅನುಷ್ಠಾನವೇ ಸಮಾಜದ ಉದ್ಧಾರಕ್ಕೆ ಇರುವ ದಾರಿ. ನಮ್ಮ ಅಮೂಲ್ಯವಾದ ಪುರಾತನ ತತ್ವಗಳ ಆಧಾರದ ಮೇಲೆ ಸಮಾಜವನ್ನು ನಿರ್ಮಿಸಬೇಕೆಂದು ಅವರು ತಿಳಿಸಿದ್ದಾರೆ. ಇದರಲ್ಲಿ ಸಮಾಜದ ಗಣ್ಯರು ಪ್ರಮುಖ ಪಾತ್ರವನ್ನು ವಹಿಸಬೇಕು.

ಒಟ್ಟಿನಲ್ಲಿ ಆನಂದಕುಮಾರ ಸ್ವಾಮಿಯವರು ಆಧುನಿಕ ನಾಗರಿಕತೆಯ ದೋಷಗಳನ್ನೂ ಸಮಸ್ಯೆಗಳನ್ನೂ ವಿವರಿಸಿರುವರೇ ಹೊರತು, ಅವುಗಳಿಗೆ ಯಾವ ಪರಿಹಾರಗಳನ್ನು ಸೂಚಿಸಿಲ್ಲವೆಂದು ಹೇಳಬಹುದು.

ಡಾಕ್ಟರ್ ರಾಧಾಕಮಲ ಮುಖರ್ಜಿಯವರು ಭಾರತದ ಸುಪ್ರಸಿದ್ಧ ಸಮಾಜ ಶಾಸ್ತ್ರಜ್ಞರು. ಅವರು ಅರ್ಥಶಾಸ್ತ್ರ, ಸಮಾಜಶಾಸ್ತ್ರಗಳಲ್ಲಿ ಉನ್ನತವಾದ ಪಾಂಡಿತ್ಯ ಪಡೆದವರು. ಅವರ ಹೆಸರು ಪಾಶ್ಚಾತ್ಯ ದೇಶಗಳಲ್ಲಿ ಪ್ರಖ್ಯಾತವಾಗಿದೆ. ಅವರು ಮೂವತ್ತು ಗ್ರಂಥಗಳನ್ನೂ ಅನೇಕ ಪ್ರೌಢ ಪ್ರಬಂಧಗಳನ್ನೂ ರಚಿಸಿದ್ದಾರೆ.

ಡಾ. ಮುಖರ್ಜಿಯವರು ತಮ್ಮ ಬರವಣಿಗೆಯಲ್ಲಿ “ಆಧುನಿಕತೆ”ಯ ಭಾವವನ್ನು ವಿಸ್ತಾರಗೊಳಿಸಿ ಅದರಲ್ಲಿ ಸಾಂಪ್ರದಾಯಿಕತೆಯ ಮೌಲ್ಯಗಳನ್ನು ಅಳವಡಿಸಲು ಪ್ರಯತ್ನ ಮಾಡಿದ್ದಾರೆ. ಅವರ ಪ್ರಥಮ ಆಸಕ್ತಿ ಅರ್ಥಶಾಸ್ತ್ರ. ಆದರೆ ಮನುಷ್ಯ ಎದುರಿಸಬೇಕಾದ ಸಮಸ್ಯೆಗಳಿಗೂ, ಆತನ ಮೇಲ್ಮೆಗೂ ಸಮಾಜ ವಿಜ್ಞಾನಗಳ ಸಂಯೋಜಿತ ದೃಷ್ಟಿಯ ಆವಶ್ಯಕತೆಯನ್ನು ಅವರು ಅರಿತಿದ್ದಾರೆ. ಮನುಷ್ಯ ಜೀವನದ ಹಲವು ಭಾಗಗಳು ಒಂದಕ್ಕೊಂದು ಹೆಣೆದುಕೊಂಡಿರು

ವುದರಿಂದ ವಿವಿಧ ಸಮಾಜ ವಿಜ್ಞಾನಗಳು ಸಮಗ್ರದೃಷ್ಟಿಯನ್ನು ಹೊಂದಬೇಕೆಂಬ ಅಭಿಪ್ರಾಯವನ್ನು ಅವರು ಪ್ರತಿಪಾದಿಸಿದ್ದಾರೆ. ಜೀವನದಲ್ಲಿ ಮೌಲ್ಯಗಳ ಪ್ರಾಮುಖ್ಯವನ್ನು ಮನಗಂಡು, ಅವನ್ನು ಸಮಾಜಶಾಸ್ತ್ರದ ದೃಷ್ಟಿಯಿಂದ ವಿವರಿಸಿದ್ದಾರೆ. ಮುಖರ್ಜಿಯವರ ಪ್ರಕಾರ ಸಮಾಜದಲ್ಲಿ ಒಂದು ಗೊತ್ತಾದ ಶ್ರೇಣಿಯಲ್ಲಿರುವ ಪಂಗಡಗಳನ್ನು ಕಾಣಬಹುದು: (1) ಸಂದಣಿ (ಕ್ರೌಡ್) (2) ಸ್ವಹಿತ ಆಸಕ್ತ ಗುಂಪು (ದಿ ಇಂಟರೆಸ್ಟ್ ಗ್ರೂಪ್) (3) ಸಮುದಾಯ (ದಿ ಕಮ್ಯೂನಿಟಿ) (4) ಜನಸಾಮಾನ್ಯ (ದಿ ಕಾಮನಾಲ್ಟಿ). ಈ ವಿವಿಧ ಪಂಗಡಗಳು ಪ್ರತ್ಯೇಕ ನಡವಳಿಕೆಗಳನ್ನೂ ರೂಢಿಗಳನ್ನೂ ಆದರ್ಶಗಳನ್ನೂ ಹೊಂದಿರುತ್ತವೆ. ಇವುಗಳ ಆದರ್ಶಗಳೂ ಮೌಲ್ಯಗಳೂ ವಿವಿಧ ರೀತಿಯಲ್ಲಿರುವುವು. ಇವುಗಳ ಆದರ್ಶ ಮತ್ತು ಗುರಿಗಳಲ್ಲಿ ವ್ಯತ್ಯಾಸಗಳಿದ್ದರೂ, ಇವುಗಳಿಗೆಲ್ಲ ಸಮಾಜದಲ್ಲಿ ತೀವ್ರ ಒಲವು ಅಥವಾ ವಾತ್ಸಲ್ಯ. ಈ "ಬೃಹತ್ ಸಮಾಜ"ದಲ್ಲಿರುವ ಮೌಲ್ಯಗಳು ಸ್ವಪ್ರೇರಣೆಯ ವಾತ್ಸಲ್ಯ ಅಥವಾ ಪ್ರೀತಿ (ಸ್ಪಾಂಟೇನಿಯಸ್ ಲೌವ್), ಸಾಮಾಜಿಕ ಜವಾಬ್ದಾರಿ (ಸೋಷಿಯಲ್ ರೆಸ್ಪಾನ್ಸಿಬಿಲಿಟಿ), ಐಕಮತ್ಯ (ಸಾಲಿಡಾರಿಟಿ), ಮತ್ತು ಸಹಕಾರ (ಕೋ-ಆಪರೇಷನ್). ಈ ಅತ್ಯುನ್ನತ ಮಟ್ಟದ ಸಮಾಜದಲ್ಲಿ ವ್ಯಕ್ತಿ ತನ್ನ ನೈಜ ಸ್ವರೂಪ ಅರಿತು, ಸ್ವಾರ್ಥವನ್ನು ಬಿಟ್ಟು ಸರ್ವರ ಹಿತಚಿಂತನೆ ಮಾಡುವ ಮಹಾವ್ಯಕ್ತಿಯಾಗುತ್ತಾನೆ.

ಮನುಷ್ಯನು ಜೀವನದ ಮೌಲ್ಯಗಳನ್ನು ಪಡೆಯುವ ರೀತಿಯನ್ನು ವಿವಿಧ ಸಾಮಾಜಿಕ ವಿಜ್ಞಾನಗಳು ತಿಳಿಸುತ್ತವೆ. ಮೌಲ್ಯಗಳು ಮನುಷ್ಯನ ಪೂರ್ಣ ಜೀವನಕ್ಕೆ ಅಗತ್ಯ. ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ನ್ಯಾಯಶಾಸ್ತ್ರ, ನೀತಿಶಾಸ್ತ್ರ ಮೊದಲಾದವು ಮಾನವ ತನ್ನ ಜೀವನಾಧಾರವಾದ ಮೌಲ್ಯಗಳನ್ನು ಅರಸುವ ರೀತಿಯನ್ನು ತಿಳಿಸುತ್ತವೆ. ವಿವಿಧ ಸಮಾಜ ವಿಜ್ಞಾನಗಳು ಪರಸ್ಪರ ಹೊಂದಾಣಿಕೆಯಿಂದ ತಮ್ಮ ಅಧ್ಯಯನವನ್ನು ಮುಂದುವರೆಸಬೇಕು. ಆಗಲೇ ಇವು ಮನುಷ್ಯಜೀವನದ ಸಾರ್ಥಕತೆಗೆ ಸಹಾಯಕವಾಗುತ್ತವೆ. ಸಮಾಜ ವಿಜ್ಞಾನಗಳೆಲ್ಲವೂ ಪರಸ್ಪರ ನಿಕಟ ಸಂಬಂಧಗಳುಳ್ಳ ವಿಜ್ಞಾನಗಳೆಂದು ಭಾವಿಸಿ, ಮನುಷ್ಯನ ಸಮಗ್ರಜೀವನದ ಪ್ರಕ್ರಿಯೆಗಳನ್ನು ಅರ್ಥಪೂರ್ಣವಾಗಿ ವಿವರಿಸುವ ಒಂದು "ಬೃಹತ್ ಸಮಾಜ ವಿಜ್ಞಾನ" ಅಗತ್ಯವೆಂದು ಮುಖರ್ಜಿಯವರು ತಿಳಿಸಿದ್ದಾರೆ. ಈ ವಿಜ್ಞಾನ ಕೇವಲ ಸಮಾಜ ವಿಜ್ಞಾನಗಳ ಜ್ಞಾನವನ್ನಲ್ಲವೆ ಎಲ್ಲಾ ವಿಜ್ಞಾನಗಳ ಜ್ಞಾನರಾಶಿಯನ್ನೂ ಉಪಯೋಗಿಸಿಕೊಳ್ಳುತ್ತದೆ.

ಪಾಶ್ಚಾತ್ಯ ನಾಗರಿಕತೆ ನಮ್ಮ ನಾಡಿನ ಜನಜೀವನದ ಮೇಲೆ ಬೀರಿರುವ ಪ್ರಭಾವವನ್ನು ಒಂದು ಸಮಸ್ಯೆಯೆಂದು ಭಾವಿಸದೆ, ಅದು ಸಾಮಾಜಿಕ ಪ್ರಕ್ರಿಯೆ ಯೆಂದು ಪರಿಗಣಿಸಿದವರಲ್ಲಿ ಮುಖ್ಯರಾದವರು ಡಿ. ವಿ. ಮುಖರ್ಜಿಯವರು. ಇಂಡಿಯಾ ದೇಶದ ಸಂಸ್ಕೃತಿಯ ಬೆಳವಣಿಗೆಯನ್ನು ಐತಿಹಾಸಿಕ ದೃಷ್ಟಿಯಿಂದ

ಪರಿಶೀಲಿಸಿದರೆ, ಅದು ತನ್ನ ಮೇಲೆ ಪ್ರಭಾವ ಬೀರಿದ ಸಂಸ್ಕೃತಿಗಳೊಡನೆ ಸಮೀಕರಿಸಿ ಸಂಯೋಜನೆಹೊಂದಿದ ರೀತಿಯನ್ನು ನೋಡಬಹುದು. ಅನೇಕ ಸಂಸ್ಕೃತಿಗಳು ನಮ್ಮ ನಾಡಿನ ಸಂಸ್ಕೃತಿಯ ಮೇಲೆ ತಮ್ಮ ಪ್ರಭಾವ ಬೀರಿದವು. ನಾವು ಇಂದು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವನ್ನು ವಾಸ್ತವಿಕ ಅಂಶಗಳ ಆಧಾರದ ಮೇಲೆ, ವೈಜ್ಞಾನಿಕ ದೃಷ್ಟಿಯಿಂದ ನಿರ್ವಿಕಾರ ಮನೋಭಾವದಿಂದ ನೋಡುವ ಆವಶ್ಯಕತೆಯನ್ನು ಡಿ. ವಿ. ಮುಖರ್ಜಿಯವರು ತಿಳಿಸಿದ್ದಾರೆ. ಇದರಿಂದ ಸಮಾಜದ ಸಮಸ್ಯೆಗಳ ಪರಿಹಾರಕ್ಕೆ ಅನುಕೂಲವಾಗುವುದೆಂದು ತಿಳಿಸಿದ್ದಾರೆ.

ಭಾರತದ ಆಧುನಿಕ ಸಮಾಜಶಾಸ್ತ್ರಜ್ಞರಲ್ಲಿ ಶ್ರೇಷ್ಠರಾದ ಡಾ. ಜಿ. ಎಸ್. ಘುರಿಯೆರವರು ಅನೇಕ ವರ್ಷಗಳ ಕಾಲ ಬೊಂಬಾಯಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದರು. ಅವರು ಸಂಸ್ಕೃತದಲ್ಲಿ ಶ್ರೇಷ್ಠವಿದ್ವಾಂಸರು; ಭಾರತೀಯ ಸಂಸ್ಕೃತಿಯನ್ನು ಆಳವಾಗಿ ಅಭ್ಯಾಸಮಾಡಿರುವರು.

ಡಾ. ಘುರಿಯೆರವರ ಆಸಕ್ತಿ ಬಹುಮುಖವಾದದು. ಭಾರತದ ಜನರ ಉಡುಪುಗಳು, ಭರತನಾಟ್ಯ, ಅದಕ್ಕೆ ಸಂಬಂಧಿಸಿದ ಉಡಿಗೆ ತೊಡಿಗೆಗಳು, ಜಾತಿ, ಸಂಸ್ಕೃತಿ, ನಗರಜೀವನ, ಗ್ರಾಮೀಣಜೀವನದ ವಿವಿಧ ಬದಲಾವಣೆಗಳು, ಪಾಶ್ಚಾತ್ಯ ಸಮಾಜದ ವಿಚಾರಗಳು, ನೀಗ್ರೋ ಆಫ್ರಿಕದಲ್ಲಿ ಜನಾಂಗಗಳ ಪರಸ್ಪರ ಸಂಬಂಧಗಳು, ಇವೇ ಮೊದಲಾದ ಹಲವಾರು ವಿಷಯಗಳ ಮೇಲೆ ಗ್ರಂಥಗಳನ್ನು ರಚಿಸಿರುವರು. ಅವರ ಬರೆವಣಿಗೆಗಳಲ್ಲಿ ಆಳವಾದ ಪ್ರೌಢ ಪಾಂಡಿತ್ಯವು ಗೋಚರವಾಗುತ್ತದೆ. ಅವರ "ಕ್ಲಾಸ್ ಕ್ಯಾಸ್ಟ್ ಅಂಡ್ ಆಕ್ಯುಪೇಷನ್" ಎಂಬ ಪುಸ್ತಕವು ಜಾತಿಯ ವಿಚಾರದ ಅಧ್ಯಯನಕ್ಕೆ ಇಂದಿಗೂ ಪ್ರಮಾಣಗ್ರಂಥ. "ಫ್ಯಾಮಿಲಿ ಅಂಡ್ ಕಿನ್ ಇನ್ ಇಂಡೋ ಯುರೋಪಿಯನ್ ಕಲ್ಚರ್" ಎಂಬ ಗ್ರಂಥದಲ್ಲಿ ಅವರು ಕುಟುಂಬಗಳ ತುಲನಾತ್ಮಕ ಅಧ್ಯಯನ ಮಾಡಿದ್ದಾರೆ. ಡಾ. ಘುರಿಯೆರವರು ಧರ್ಮದ ವಿಷಯವಾಗಿ ಬರೆದಿರುವ ಗ್ರಂಥಗಳಲ್ಲಿ ಅವರ ಪರಿಪಕ್ವವಾದ ಸಾಮಾಜಿಕ ದೃಷ್ಟಿ ಗೋಚರವಾಗುತ್ತದೆ. "ಗಾಡ್ಸ್ ಅಂಡ್ ಮೆನ್" ಎಂಬ ಪುಸ್ತಕದಲ್ಲಿ, ಭಾರತದಲ್ಲಿ ಪೂಜಿಸಲ್ಪಡುತ್ತಿರುವ ಅನೇಕ ದೇವತೆಗಳಲ್ಲಿ ಜನರ ಭಾವನೆಯ ವಿಕಾಸದ ರೀತಿಯನ್ನು ಚಿತ್ರಿಸಿದ್ದಾರೆ. ಅವರ "ಇಂಡಿಯನ್ ಸಾಧೂಸ್" (*Indian Sadhus*) ಎಂಬ ಗ್ರಂಥದಲ್ಲಿ ವಿರಕ್ತ ಪಂಥಗಳ ಹುಟ್ಟು ಬೆಳವಣಿಗೆ ಮತ್ತು ಕಾರ್ಯಕ್ಷೇತ್ರಗಳನ್ನು ಸಮಾಜಶಾಸ್ತ್ರದೃಷ್ಟಿಯಿಂದ ಅವಲೋಕಿಸಿರುವುದನ್ನು ಕಾಣಬಹುದು. ಇಲ್ಲಿ ಚಾರಿತ್ರಿಕ ದೃಷ್ಟಿಯಿಂದ ಶ್ರೀ ಶಂಕರಾಚಾರ್ಯರ ಕಾರ್ಯಗಳ ಧಾರ್ಮಿಕ ಸಂಸ್ಥೆಗಳ (ಮಠಗಳು) ಕಾರ್ಯಕ್ಷೇತ್ರಗಳ ನಿರೂಪಣೆಯಿದೆ. ಇದರಿಂದ ಮನುಷ್ಯನ ಉನ್ನತಿಗೆ ಧಾರ್ಮಿಕ ಸಂಸ್ಥೆಗಳು ಹೇಗೆ ಉತ್ತಮ ಸಹಕಾರಿಗಳಾಗಬಹುದೆಂದು ಆಧುನಿಕ ಸಮಾಜ ಸಂದರ್ಭಗಳಿಂದ ಅವರು ಸೂಚಿಸಿದ್ದಾರೆ.

ಡಾ. ಘುರಿಯೆರವರು ಸಂಸ್ಕೃತಿಯ ವಿಷಯವಾಗಿ ದೀರ್ಘಕಾಲ ವ್ಯಾಸಂಗ ಮಾಡಿರುವರು. ೧೯೫೪ರಿಂದ ೧೯೫೭ರ ವರೆಗೆ ವಿದ್ಯಾರ್ಥಿಗಳಿಗೆ ಪ್ರಪಂಚದ ವಿವಿಧ ನಾಗರಿಕತೆಗಳ ವಿಷಯವನ್ನು ಬೋಧಿಸಿದ್ದಾರೆ. ವಿಶ್ವದ ವಿವಿಧ ಸಂಸ್ಕೃತಿಗಳ ವಿಚಾರವಾಗಿ ಅಧ್ಯಯನಮಾಡಿ, ಆಳವಾಗಿ ಆಲೋಚಿಸಿ ಸಂಸ್ಕೃತಿಯ ಮೂಲ ತತ್ತ್ವಗಳನ್ನು ನಿರೂಪಣೆಮಾಡುವ ಬೃಹತ್ ಪ್ರಯತ್ನದಲ್ಲಿ ತೊಡಗಿದ್ದಾರೆ. ಈ ನಿರಂತರ ಅಧ್ಯಯನಫಲವೇ "ರಿಲಿಜಿಯಸ್ ಕಾನ್‌ಶಿಯಸ್‌ನೆಸ್" (೧೯೬೫) ಎಂಬ ಉದ್ಗ್ರಂಥ. ಸಂಸ್ಕೃತಿಯ ಆಧಾರಗಳ ಪ್ರಮುಖ ವಿಷಯವಾದ ಧರ್ಮವನ್ನು ವಿಶ್ವದ ಮೂರು ಪ್ರಾಚೀನ ನಾಗರಿಕತೆಗಳ (ಮೆಸೊಪೊಟೇಮಿಯ, ಈಜಿಪ್ಟ್, ಇಂಡಿಯನ್—ಹಿಂದು) ಆಧಾರದ ಮೇಲೆ ನಿರೂಪಿಸಿರುವರು. ಸಂಸ್ಕೃತಿಯ ಆಧಾರಗಳನ್ನು ವಿಶದವಾಗಿ ನಿರೂಪಿಸಿರುವ ಈ ರೀತಿ ಪಂಡಿತರೆಲ್ಲರ ಮನ್ನಣೆ ಪಡೆದಿದೆ.

ಸಂಪ್ರದಾಯ ಮತ್ತು ಆಧುನಿಕತೆಗೆ ಇರುವ ಸಂಬಂಧವನ್ನು ಅದರ ತತ್ತ್ವ ಜಿಜ್ಞಾಸೆಗೆ ಹೋಗದೆ ವಾಸ್ತವಿಕ ವಿಷಯಗಳ ಆಧಾರದ ಮೇಲೆ "ವೈಜ್ಞಾನಿಕ ದೃಷ್ಟಿ"ಯಿಂದ ನೋಡುವ ಸಮಾಜಶಾಸ್ತ್ರಜ್ಞರಲ್ಲಿ ಮುಖ್ಯರಾದವರು, ಡಾ. ಎಂ. ಎನ್. ಶ್ರೀನಿವಾಸ್.

ಡಾ. ಶ್ರೀನಿವಾಸ್ ಭಾರತೀಯ ಸಮಾಜಕ್ಕೆ ಅನ್ವಯವಾಗುವಂತೆ ಸಮಾಜಶಾಸ್ತ್ರದ ಅಧ್ಯಯನಕ್ಕೆ ಕೆಲವು ಮುಖ್ಯ ಕಲ್ಪನೆಗಳನ್ನು ನಿರೂಪಿಸಿದ್ದಾರೆ. ಈ ಕಲ್ಪನೆಗಳಲ್ಲಿ ಮುಖ್ಯವಾದುದು "ಸಾಂಸ್ಕೃತೀಕರಣ" (ಸ್ಯಾನ್ಸ್ಕ್ರಿಟೈಸೇಷನ್). ಜಾತಿ ಶ್ರೇಣಿಯಲ್ಲಿ ಕೆಳಭಾಗದಲ್ಲಿ ಇರುವವರು ಮೇಲಿರುವ ಉತ್ತಮ ಜಾತಿಯವರ ಜೀವನದ ರೀತಿಯನ್ನು ಅನುಕರಣೆಮಾಡುವುದರಿಂದ ಸಮಾಜದ ಜಾತಿಶ್ರೇಣಿಯಲ್ಲಿ ತಮ್ಮ ಸ್ಥಾನವನ್ನು ಉತ್ತಮಪಡಿಸಿಕೊಳ್ಳುತ್ತಾರೆ. ಇದರಿಂದ ಜಾತಿಶ್ರೇಣಿಯ ಮಧ್ಯಭಾಗದಲ್ಲಿ ಚಲನಸ್ವಾತಂತ್ರ್ಯವಿದೆ. ಜಾತಿಗಳಲ್ಲಿ ಆಗುತ್ತಿರುವ ವಿವಿಧ ಬದಲಾವಣೆಗಳನ್ನು ಈ ಕಲ್ಪನೆಯ ನೆರವಿನಿಂದ ಅರ್ಥಮಾಡಿಕೊಳ್ಳಲು ಅನುಕೂಲವಾಗುತ್ತದೆ. ಅವರ ಇನ್ನೊಂದು ಕಲ್ಪನೆ "ಪ್ರಬಲಜಾತಿ" (ಡಾಮಿನೆಂಟ್ ಕ್ಯಾಸ್ಟ್). ಈ ಕಲ್ಪನೆಯ ಸಹಾಯದಿಂದ ಗ್ರಾಮಗಳಲ್ಲಿರುವ ವಿವಿಧ ಸಾಮಾಜಿಕ ಸಂಬಂಧಗಳನ್ನು ಅಧ್ಯಯನ ಮಾಡಲು ಅನುಕೂಲವಾಗುತ್ತದೆ. ಪಾಶ್ಚಾತ್ಯೀಕರಣ (ವೆಸ್ಟರ್ನೈಸೇಷನ್) ಕಲ್ಪನೆಯ ಸಹಾಯದಿಂದ ಆಧುನಿಕ ಭಾರತದ ಸಮಾಜದಲ್ಲಿ ವರ್ಗಗಳ ಚಲನೆಗಳನ್ನು ವಿವರಿಸಲು ಅನುಕೂಲವಾಯಿತು. ಈ ಸಾಮಾಜಿಕ ಚಲನೆಯಿಂದ ಸಮಾನತೆಯ ತತ್ತ್ವಕ್ಕೆ ಪುಷ್ಟಿದೊರೆಯಿತು. ಪಾಶ್ಚಾತ್ಯ ಸಂಸ್ಕೃತಿಯ ಇನ್ನೊಂದು ಮಹತ್ವಪೂರ್ಣ ಪರಿಣಾಮವೆಂದರೆ ಲೌಕಿಕ ದೃಷ್ಟಿ ಪ್ರಚೋದನೆ (Secularization). ಇದರ ಪರಿಣಾಮವನ್ನು ನಾವು ದೇಶದ ಪ್ರಮುಖ ಸಂಸ್ಥೆಗಳಾದ ಕುಟುಂಬ ಮತ್ತು ಜಾತಿಗಳ ಕ್ಷೇತ್ರದಲ್ಲಿ ಕಾಣಬಹುದು.

ಹಳ್ಳಿಯ ಸಮುದಾಯ ಜೀವನದ ಮೇಲೆಯೂ ಆಗಿರುವ ಪಾಶ್ಚಾತ್ಯ ಮೌಲ್ಯಗಳ ಪ್ರಭಾವವನ್ನು ಡಾ. ಶ್ರೀನಿವಾಸ್‌ರವರು ವಿವರಿಸಿದ್ದಾರಲ್ಲದೆ ಸಮಾಜಶಾಸ್ತ್ರದ ಬೆಳವಣಿಗೆಗೆ ಕ್ಷೇತ್ರಸಂಶೋಧನೆಯ ಅಗತ್ಯವನ್ನು ಪ್ರತಿಪಾದಿಸಿದ್ದಾರೆ.

ನಮ್ಮ ದೇಶದ ಈಗಿನ ಸಮಸ್ಯೆಗಳಲ್ಲಿ ಮುಖ್ಯವಾದದ್ದು ಜನರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳ ಮೇಲ್ಮೆ. ಈ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ನಮ್ಮ ಸಮಾಜದ ರೂಪ ರಚನೆಗಳ ಅರಿವು ಅಗತ್ಯ. ಆರ್ಥಿಕ ಬೆಳವಣಿಗೆ ಬಹಳ ಸಂಕೀರ್ಣ ಸಮಸ್ಯೆ. ಇದು ಕಾರ್ಯಗತವಾಗಬೇಕಾದರೆ ನಾನಾ ಸಮಾಜ ವಿಜ್ಞಾನಗಳ ಪರಸ್ಪರ ಸಹಕಾರ ಅಗತ್ಯ. ದೇಶದ ಅಭಿವೃದ್ಧಿಯೇ ನಮ್ಮ ಮುಂದೆ ಇರುವ ಬೃಹತ್ ಸಮಸ್ಯೆ. ಸಮಾಜದ ವಾಸ್ತವಿಕ ಸ್ಥಿತಿಯ ಜ್ಞಾನ ಇದಕ್ಕೆ ಅಗತ್ಯವಾದ ಹಿನ್ನೆಲೆಯನ್ನೊದಗಿಸುತ್ತದೆ. ಸಮಾಜದಲ್ಲಿರುವ ವಿವಿಧ ಶಕ್ತಿಗಳ ಕಾರ್ಯ ಸ್ವರೂಪವನ್ನು ತಿಳಿದುಕೊಳ್ಳುವುದು ಇದಕ್ಕೆ ಅಗತ್ಯ. ನಮ್ಮ ಸಮಾಜದಲ್ಲಿ ಜಾತಿ ಮತ್ತು ಧರ್ಮ ಹೆಚ್ಚು ಪ್ರಭಾವ ಬೀರುತ್ತವೆ. ಶ್ರೀನಿವಾಸ್ ಅವರ ಬರೆವಣಿಗೆಯ ಹೆಚ್ಚುಭಾಗ ಜಾತಿಯ ಪ್ರಭಾವವನ್ನು ಕುರಿತದ್ದಾಗಿದೆ. ಮತದ ಪ್ರಭಾವದ ವಿಚಾರವಾಗಿ ಮೈಸೂರಿನ ಕೊಡಗರ ಸಮಾಜವನ್ನು ಅಧ್ಯಯನ ಮಾಡಿದ್ದಾರೆ. ಕೊಡಗರಲ್ಲಿ, ಧರ್ಮ ಯಾವ ರೀತಿಯಲ್ಲಿ ಅವರ ಜೀವನದ ಬಹುಭಾಗದ ಮೇಲೆ ಪ್ರಭಾವ ಬೀರಿದೆಯೆಂಬುದರ ವಿವರಣೆಯನ್ನು ಇದರಲ್ಲಿ ಕಾಣಬಹುದು. ಇದನ್ನು ಕುರಿತು, ಇವರು ಬರೆದಿರುವ ಪುಸ್ತಕದಲ್ಲಿ ಸಮಾಜದ ವಿವಿಧ ಕ್ಷೇತ್ರಗಳನ್ನು ಪರಿಶೀಲಿಸಿ ಧರ್ಮಕ್ಕೂ ಸಮಾಜಕ್ಕೂ ಇರುವ ಸಂಬಂಧವನ್ನು ಸೂಚಿಸಿದೆ. ಶ್ರೀನಿವಾಸರು ಸಮಾಜದ ಬದಲಾವಣೆಯ ಅಧ್ಯಯನದಲ್ಲಿ ಗ್ರಾಮೀಣ ಸಮಾಜದ ಬದಲಾವಣೆಗಳಿಗೆ ವಿಶೇಷಗಮನ ಕೊಟ್ಟಿದ್ದಾರೆ. ನಮ್ಮ ದೇಶ ಗ್ರಾಮಾಭಿವೃದ್ಧಿ ಕಾರ್ಯಕ್ಕೆ ಮಹತ್ವದ ಸ್ಥಾನ ಕೊಟ್ಟಿರುವುದೇ ಇದಕ್ಕೆ ಕಾರಣ.

ಡಾ. ಶ್ಯಾಮಚರಣ ದೂಬೆಯವರು ಗ್ರಾಮೀಣ ಜೀವನದ ವಿಷಯವಾಗಿ ಎರಡು ಮುಖ್ಯ ಗ್ರಂಥಗಳನ್ನು ಬರೆದಿದ್ದಾರೆ. ಅವರು "ಇಂಡಿಯನ್ ವಿಲೇಜ್" ಎಂಬ ಪುಸ್ತಕದಲ್ಲಿ ಒಂದು ಗ್ರಾಮದ ಜೀವನದ ನಾನಾ ಮುಖಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ನಿರೂಪಿಸಿದ್ದಾರೆ. "ಇಂಡಿಯಾ'ಸ್ ಚೇಂಜಿಂಗ್ ವಿಲೇಜ್" ಎಂಬ ಪುಸ್ತಕದಲ್ಲಿ ಭಾರತ ಸರ್ಕಾರದ ಸಮಾಜ ಅಭಿವೃದ್ಧಿ ಯೋಜನೆಯ ವಿವಿಧ ಕಾರ್ಯಕ್ಷೇತ್ರಗಳ ವಿಮರ್ಶಾತ್ಮಕವಾಗಿ ವಿವರಣೆಯಿದೆ.

ಸಾಮಾಜಿಕ ಜೀವನವೇ ಸಮಾಜ ಶಾಸ್ತ್ರದ ಕ್ಷೇತ್ರ. ಜೀವನವು ಎಣಿಕೆಗೆ, ತೂಕಕ್ಕೆ, ಅಳತೆಗೆ ಸಿಕ್ಕುವ ಭೌತವಸ್ತುವಲ್ಲ. ಸಮಾಜದ ಅಧ್ಯಯನದಲ್ಲಿ ಅಂಕಿ ಅಂಶಗಳ ಅಗತ್ಯವಿದೆ. ಆದರೆ ಅಧ್ಯಯನ ಪೂರ್ಣವಾಗಬೇಕಾದರೆ ಪರಿಸರದ ಅಧ್ಯಯನವೊಂದೇ ಸಾಲದು. ಮಾನವನ ಸಾಮಾಜಿಕ ಜೀವನಕ್ಕೆ ಚೇತನವಾಗಿರುವ ಅಂತರಶಕ್ತಿಗಳ ಅರಿವು ಅಗತ್ಯ. ಇದನ್ನು ಅರಿಯಲು ವ್ಯಕ್ತಿಯ

ಜೀವನದ ಬಗೆಯನ್ನು ಆಸಕ್ತಿಯಿಂದ ಅವಲೋಕಿಸಿ ವ್ಯಕ್ತಿಯ ಆಸೆ, ಆಕಾಂಕ್ಷೆ ಮತ್ತು ಆದರ್ಶಗಳನ್ನು ತಿಳಿಯಬೇಕು. ಇವುಗಳನ್ನು ಅರಿಯಲು ಜನರು ಮಾತನಾಡುವ ಭಾಷೆಯ ಉಪಯೋಗ ಸಹಾಯಕವಾಗುತ್ತದೆ. ಅವುಗಳನ್ನು ಸ್ಫುಟವಾಗಿ ವಿವರಿಸಲು ಮಾತೃಭಾಷೆಯ ಅಗತ್ಯವಿದೆ. ಆದುದರಿಂದ ಸಮಾಜ ವಿಜ್ಞಾನಗಳ ಬೆಳವಣಿಗೆಗೆ ಕನ್ನಡದಲ್ಲಿ ಮಾಡುವ ಅಧ್ಯಯನ ಹೆಚ್ಚು ಫಲಪ್ರದ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಮಟ್ಟದಲ್ಲಿ ಕನ್ನಡದಲ್ಲಿ ಅಧ್ಯಯನ ನಡೆಸುವುದಕ್ಕೆ ಅಗತ್ಯವಾದ ಪರಿಕರವೂ ಪರಿಸರವೂ ಧಾರಾಳವಾಗಿದೆ. ವಿವಿಧ ವಿಷಯಗಳ ಅಧ್ಯಯನಕ್ಕೆ ಬೇಕಾಗುವ ಗ್ರಂಥಗಳ ರಚನೆಯು ಆಗಬೇಕು. ಅದಕ್ಕೆ ಎಲ್ಲರ ಆಸಕ್ತಿ, ದುಡಿಮೆ ಮತ್ತು ಸಹಕಾರ ಅಗತ್ಯ.

ಕೆ. ಎಸ್. ನಂಜುಂಡಪ್ಪ

ಚಿಕ್ಕದೇವರಾಜ ಒಡೆಯರು ಮತ್ತು ವೈಷ್ಣವ ಧರ್ಮ

ದೊಡ್ಡ ದೇವರಾಜರ ಮಕ್ಕಳಾದ ಚಿಕ್ಕದೇವರಾಜ ಒಡೆಯರು ಮೈಸೂರಿನ ಗಣ್ಯ ರಾಜರುಗಳಲ್ಲಿ ಅತ್ಯಂತ ಪ್ರಮುಖರು. ಪಾರ್ಥಿವ ಶಕ ಸಾವಿರದ ಐನೂರ ಅರವತ್ತೆಂಟು ಆಶ್ವಯುಜ ಶುಕ್ಲ ಪಕ್ಷದ ಹನ್ನೆರಡನೆಯ ದಿನದಂದು ಹುಟ್ಟಿದ ಇವರು ೧೬೭೩ರಲ್ಲಿ ಸಿಂಹಾಸನಾರೋಹಣ ಮಾಡಿ ೧೭೦೪ರವರೆಗೆ ವಿಜೃಂಭಣೆಯಿಂದ ಮೈಸೂರು ರಾಜ್ಯವನ್ನು ಆಳಿದರು. ಅವರು ಬರೆದರೆಂದು ಹೇಳಲಾದ "ಗೀತ ಗೋಪಾಲ", "ಚಿಕ್ಕದೇವರಾಜ ಬಿನ್ನಪಂ" ಅಲ್ಲದೆ "ಬೆಳಗೊಳದ ಗೊಮ್ಮಟೇಶ್ವರ ಚರಿತ್ರೆ", "ಮೈಸೂರು ದೊರೆಗಳ ವಂಶಾವಳಿ", "ಚಿಕ್ಕದೇವರಾಜ ವಿಜಯಂ" ಮುಂತಾದ ಸಾಹಿತ್ಯ ಕೃತಿಗಳು ಇವರ ಚರಿತ್ರೆಯನ್ನು ಪುನರ್ರಚಿಸಲು ಮುಖ್ಯ ಮೂಲಸಾಧನಗಳಾಗಿವೆ. ಈ ಸಾಹಿತ್ಯಮೂಲಗಳೇ ಅಲ್ಲದೆ ಅತ್ಯಮೂಲ್ಯವಾದಂಥ ರಾಜರಿಗೆ ಸಂಬಂಧಿಸಿದ ಶಾಸನಗಳೂ ಕೂಡ ದೊರೆತಿವೆ. ಅವರು ಶಕ್ತ ರಾಜರು ಮತ್ತು ದಕ್ಷ ಆಡಳಿತಗಾರರೂ ಆಗಿದ್ದರು. ಅವರು ವಿಸ್ತರಿಸಿದ ಸಂಪದ್ಭರಿತವಾದ ಮೈಸೂರು ರಾಜ್ಯ ದಕ್ಷಿಣದ ಪಳನಿ ಮತ್ತು "ಆನೆಮಲೆ" ಯಿಂದ ಉತ್ತರದ "ಮಿಡಗೇಸಿ" ವರೆಗೂ—ಪೂರ್ವದ "ಸೇಲಂ" ಜಿಲ್ಲೆಯ "ಕರ್ಣಾಟಕ ಘರ್" ನಿಂದ ಪಶ್ಚಿಮದ "ಕೊಡಗು" ಮತ್ತು "ಮಂಜರಾಬಾದ್" ಗಡಿಗಳವರೆಗೂ ಪ್ರಸರಿಸಿದ್ದಿತು. ಅವರ ಸೇನೆ ಅನೇಕ ಶತ್ರುಗಳೊಂದಿಗೆ ಹೋರಾಡಿ ಜಯಗಳಿಸಿತು. ಆಡಳಿತದಲ್ಲಿ ಹೊಸರೀತಿಯನ್ನು ಆಚರಣೆಗೆ ತರುವುದರಲ್ಲಿ ತೊಡಗಿದರು. ಆಡಳಿತ ಪದ್ಧತಿಯ ಇಡೀ ಕ್ರಮವನ್ನೇ ಸುಧಾರಿಸಿ ಹದಿನೆಂಟು ವಿಭಾಗಗಳು ಎಂದು ಕರೆಯಲಾಗುವ ಪದ್ಧತಿಯನ್ನು ಅಸ್ತಿತ್ವಕ್ಕೆ ತಂದರು. ಅವರು ಸಾಹಿತ್ಯ ಮತ್ತು ಕಲೆಯ ದೊಡ್ಡ ಪೋಷಕರಾಗಿದ್ದರು. "ಸಚ್ಛೂದ್ರಾಚಾರ ನಿರ್ಣಯಂ" ಮತ್ತು ಚಿಕ್ಕದೇವರಾಜ ಬಿನ್ನಪಂ" ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವೆಲ್ಲಕ್ಕೂ ಮಿಗಿಲಾಗಿ ಭಿನ್ನ ಭಿನ್ನ ಮತೀಯರೆಲ್ಲರಿಗೂ ಪ್ರೋತ್ಸಾಹ ನೀಡಿ, ಸಮಾಜ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದರಲ್ಲಿ ತುಂಬಾ ದಕ್ಷರಾಗಿದ್ದರು ಮತ್ತು ಕುತೂಹಲ ಉಳ್ಳವರಾಗಿದ್ದರು. ಶೈವ, ಜೈನ ಮತ್ತು ವೈಷ್ಣವ ಧಾರ್ಮಿಕ ಸಂಸ್ಥೆಗಳಿಗೆ ದಾನ ಕೊಡುತ್ತಿದ್ದರು.

ವೈಯಕ್ತಿಕವಾಗಿ ಅವರು ವೈಷ್ಣವ ಪಂಥದ ಅನುಯಾಯಿಗಳಾಗಿದ್ದರು. ಶ್ರೀ ವೈಷ್ಣವ ದೇವಾಲಯಗಳನ್ನು ದುರಸ್ತಿ ಮಾಡುವುದು; ಹೊಸ ಹೊಸದಾಗಿ ದತ್ತಿ ಬಿಡುವುದು; ಕೊಳ ತೋಡಿಸುವುದು; ಮತ್ತು ದೇವಾಲಯದ ಆವರಣವನ್ನು ಚೊಕ್ಕಟವಾಗಿಡುವುದು; ಇವುಗಳಲ್ಲಿ ಚಿಕ್ಕದೇವರಾಜ ಒಡೆಯರು ಹೆಚ್ಚು ಆಸಕ್ತಿ ವಹಿಸುತ್ತಿದ್ದರು. ೧೬೮೫ರ ಒಂದು ಪವಿತ್ರ ಸಂದರ್ಭದಲ್ಲಿ ಚಿಕ್ಕದೇವರಾಜ ಒಡೆಯರು ಮಳವಳ್ಳಿ ಲಕ್ಷ್ಮೀನಾರಾಯಣ ದೇವಾಲಯಕ್ಕೆ ಭೇಟಿಕೊಟ್ಟು ದೇವಾಲಯದ ಮುಂಭಾಗದಲ್ಲಿ ಒಂದು ಕೊಳವನ್ನು ತೋಡಿಸಿದರು.

ಬಾಲ್ಯದಲ್ಲಿ ಚಿಕ್ಕದೇವರಾಜ ಒಡೆಯರು ತಿರುಮಲ ಅಯ್ಯಂಗಾರ್ ಮೊದಲಾದ ಶ್ರೀವೈಷ್ಣವ ಗುರುಗಳ ಬಳಿ ಅಧ್ಯಯನ ನಡೆಸಿ ಶುದ್ಧ ವೈಷ್ಣವರಾಗಿ ಪರಿವರ್ತನೆಗೊಂಡರು. ಶ್ರೀವೈಷ್ಣವ ಮತದಲ್ಲಿ ಅವರಿಗೆ ಅತ್ಯಂತ ಆಸಕ್ತಿಯಿದ್ದಿತು. ಆ ಪಂಥಕ್ಕೆ ಅವರು ಮಹತ್ವದ ಪ್ರೋತ್ಸಾಹ ನೀಡಿದರು. ಈ ಕಾರಣದಿಂದಲೇ "ಶ್ರೀವೈಷ್ಣವ ಮತ ಪ್ರತಿಷ್ಠಾಪಕ" ಮತ್ತು "ಸದಾ ಶ್ರೀವೈಷ್ಣವ ಪ್ರಿಯ" ಎಂದು ಅವರನ್ನು ಹೊಗಳಿದ್ದು.

ವಿದ್ಯೆಯಲ್ಲಿ ಬೃಹಸ್ಪತಿ ಎನ್ನಿಸಿಕೊಂಡ ಶ್ರೀವೈಷ್ಣವ ಬ್ರಾಹ್ಮಣನಾದ ತಿರುಮಲರಾಯನನ್ನು ಚಿಕ್ಕದೇವರಾಜ ಒಡೆಯರು ಸಚಿವನನ್ನಾಗಿ ನೇಮಿಸಿ ಕೊಂಡರು. ಅಲ್ಲದೆ ಅವರು ಬ್ರಾಹ್ಮಣರಿಗೆ ಅನ್ನ ದಾನವನ್ನು ಮಾಡುವುದರಲ್ಲೂ ಆಸಕ್ತಿವಹಿಸಿದ್ದರು. ೧೬೭೬ರಲ್ಲಿ ಹರದನಹಳ್ಳಿಯಲ್ಲಿ ಒಂದು ಛತ್ರವನ್ನು ತೆರೆಯಲು ಆಜ್ಞಾಪಿಸಿ ಅದಕ್ಕಾಗಿ ಬೊಮ್ಮಸಹಳ್ಳಿ ಎಂಬ ಊರನ್ನೇ ದತ್ತಿಯಾಗಿ ಬಿಟ್ಟು ಕೊಟ್ಟರು. ತಮ್ಮಗುರುಗಳಾದ ತಿರುಮಲ ಅಯ್ಯಂಗಾರರ ಗೌರವಾರ್ಥ ರಾಜರು ಒಂದು ಛತ್ರವನ್ನು ಕಟ್ಟಿಸಿದರಲ್ಲದೆ ಶ್ರೀರಂಗಪಟ್ಟಣದ ಈಶಾನ್ಯದಿಕ್ಕಿನಲ್ಲಿ ವೆಂಕಟೇಶ್ವರ' ದೇವಾಲಯವನ್ನು ಕಟ್ಟಿಸಿದರು. ವೈಷ್ಣವ ಹಿತರಕ್ಷಣೆ ಮತ್ತು ಅಧ್ಯಯನವನ್ನು ಪ್ರೋತ್ಸಾಹಿಸುವುದರಲ್ಲಿ ಒಡೆಯರು ತೀವ್ರಾಸಕ್ತಿ ವಹಿಸಿದ್ದರು. ೧೬೭೮ರಲ್ಲಿ ಶ್ರೀವೈಷ್ಣವಪಂಡಿತನಾಗಿದ್ದ ಅಳಸಿಂಗಾರ್ ಅಯ್ಯಂಗಾರ್‌ರವರಿಗೆ ಎರಡು ಗ್ರಾಮಗಳನ್ನು ಉಂಬಳಿಯಾಗಿ ಬಿಟ್ಟುಕೊಟ್ಟರು.

ತಿರುನಾರಾಯಣಪುರಿ ಅಥವಾ ಯಾದವಗಿರಿಯೆಂದು ಕರೆಯಲ್ಪಡುತ್ತಿದ್ದ ಸ್ಥಳವು ಶ್ರೀವೈಷ್ಣವರಿಗೆ ಒಂದು ಪ್ರಮುಖ ಕೇಂದ್ರವಾಗಿದ್ದಿತು. ಅಲ್ಲಿ ಸಿಂಗಾರ್ ಅಯ್ಯಂಗಾರ್, ತಿರುಮಲ ಅಯ್ಯಂಗಾರ್ ಎಂಬ ಇಬ್ಬರು ಮೇಧಾವಿಗಳಾದ ಪಂಡಿತರು ಇದ್ದರು. ಅವರಿಗೆ ವೇದಜ್ಞಾನವು ಚೆನ್ನಾಗಿದ್ದಿತಲ್ಲದೆ ಮಹಾಭಾರತ ಮತ್ತು ಭಗವದ್ಗೀತೆಗಳನ್ನು ಪಠನಮಾಡುವುದರಲ್ಲಿ ನಿಷ್ಣಾತರಾಗಿದ್ದರು. ೧೬೭೮ರಲ್ಲಿ ಚಿಕ್ಕದೇವರಾಜರು ಯಾದವಗಿರಿಗೆ ಭೇಟಿ ಕೊಟ್ಟು ಈ ಇಬ್ಬರು ಪಂಡಿತರ ಬಗ್ಗೆ ತುಂಬಾ ಸುಪ್ರೀತರಾದರು. ಅವರ ಅಧ್ಯಯನಕಾರ್ಯಕ್ಕೆ ಪ್ರೋತ್ಸಾಹ ನೀಡಲು ಬೀರವಳ್ಳಿ ಗ್ರಾಮವನ್ನು ಉಂಬಳಿಯಾಗಿ ಕೊಟ್ಟರು. ಚಿಕ್ಕದೇವರಾಜರು ಒಬ್ಬ

ಅತ್ಯಂತ ಧಾರ್ಮಿಕಭಾವನೆಯುಳ್ಳ ರಾಜರಾಗಿದ್ದು ಧರ್ಮಶಾಸ್ತ್ರದ ಕಟ್ಟಾ ಅನುವರ್ತಿಗಳಾಗಿದ್ದರು. ಎಲ್ಲಾ ಪವಿತ್ರ ಸಂದರ್ಭಗಳಲ್ಲೂ ಧಾರ್ಮಿಕವಿಧಿಗಳನ್ನು ತಪ್ಪದೇ ಆಚರಿಸುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ಸಾಧಾರಣವಾಗಿ ಅವರು ಯಾವುದಾದರೊಂದು ಧರ್ಮಕಾರ್ಯವನ್ನು ಪ್ರಜಾಹಿತಕ್ಕಾಗಿ ಮಾಡುತ್ತಿದ್ದರು.

ಶ್ರೀಕೃಷ್ಣಜಯಂತಿಯ ಸಂದರ್ಭದಲ್ಲಿ ಮಾಣಿಕಪುರದ ಜಮೀನನ್ನು ಗೋಪಾಲಸ್ವಾಮಿ ದೇವರ ಪೂಜಾರ್ಥ ಉಂಬಳಿ ಕೊಟ್ಟರು. ತಮ್ಮ ಸೇವಕರು ಅಂತಹ ಧರ್ಮಕಾರ್ಯವನ್ನು ಮಾಡುವಂತೆ ಕೆಲಸವನ್ನು ಮಾಡಲು ರಾಜರು ಪ್ರೋತ್ಸಾಹಿಸುತ್ತಿದ್ದರು. ಶ್ರೀರಾಮನವಮಿಯ ಸಂದರ್ಭದಲ್ಲಿ ರಾಜರ ಒಬ್ಬ ಸೇವಕನು ಭೂಮಿಯನ್ನು ಕೊಂಡು ಅದನ್ನು ಕೋದಂಡರಾಮ ದೇವಾಲಯಕ್ಕೆ ಉಂಬಳಿ ಕೊಟ್ಟನು. ಇದೇ ಸಂದರ್ಭದಲ್ಲಿ ರಾಜರು ಅದೇ ದೇವರಿಗೆ ತಮ್ಮ ವೈಯಕ್ತಿಕ ಕೊಡುಗೆಯನ್ನೂ ಕೊಟ್ಟರು. ಈ ಕೊಡುಗೆಯ ಪತ್ರವನ್ನು ತಾವೇ ಬರೆದು ಸಹಿ ಹಾಕಿರುವರೆಂದು ದಾಖಲೆ ಸ್ಪಷ್ಟಪಡಿಸುತ್ತದೆ. ಇದು ಅವರು ಅಂತಹ ಧರ್ಮಕಾರ್ಯಗಳಲ್ಲಿ ಎಷ್ಟು ಉತ್ಸಾಹಿಗಳಾಗಿದ್ದರೆಂಬುದನ್ನು ರುಜುವಾತುಪಡಿಸುತ್ತದೆ.

೧೬೭೪ರಲ್ಲಿ ಇವರು ಜಡಿಗನ ದುರ್ಗವನ್ನು ಗೆದ್ದು ಅದಕ್ಕೆ "ಚಿಕ್ಕದೇವರಾಯ ದುರ್ಗ" ವೆಂದು ಹೊಸದಾಗಿ ನಾಮಕರಣ ಮಾಡಿದರು. ಅದೇ ಸ್ಥಳದಲ್ಲಿ ಯವನರ ಧಾಳಿಯ ಸಂದರ್ಭದಲ್ಲಿ ಕಳೆದುಹೋಗಿದ್ದ "ವರಾಹ" ಪ್ರತಿಮೆಯನ್ನು ಮತ್ತೆ ಪಡೆದರು. ಅದನ್ನು ಶ್ರೀರಂಗಪಟ್ಟಣಕ್ಕೆ ತಂದು ದೇವಾಲಯವೊಂದರಲ್ಲಿ ಪ್ರತಿಷ್ಠಾಪಿಸಿ ಅತ್ಯಂತ ಭಕ್ತಿಯಿಂದ ಆರಾಧಿಸುತ್ತಿದ್ದರು.

ಚಿಕ್ಕದೇವರಾಜ ಒಡೆಯರು ಅನೇಕ ಸ್ಥಳಗಳಲ್ಲಿ ಅನೇಕ ವೈಷ್ಣವ ದೇವಾಲಯಗಳನ್ನು ಕಟ್ಟಿಸಿದರು. ಇವುಗಳಲ್ಲಿ ಬೆಂಗಳೂರಿನ ಟಿಪ್ಪೂಸುಲ್ತಾನನ ಅರಮನೆಯ ಬಳಿಯಿರುವ ವೆಂಕಟೇಶ್ವರ ದೇವಾಲಯವು ಹೆಚ್ಚು ಪ್ರಾಮುಖ್ಯವಾದುದು. ಅಲ್ಲದೇ ಇದೇ ದೇವಸ್ಥಾನವನ್ನು ಇವರ ಮಕ್ಕಳಾದ ಕಂಠೀರವ ನರಸಿಂಹರಾಜ ಒಡೆಯರು ಅಭಿವೃದ್ಧಿಗೊಳಿಸಿದರು.

ಚಿಕ್ಕದೇವರಾಜ ಒಡೆಯರವರ ನಾಣ್ಯಗಳು ವೈಷ್ಣವ ಪಂಥದೆಡೆಗೆ ಅವರಿಗಿದ್ದ ಖಚಿತವಾದ ಒಲವನ್ನು ಸೂಚಿಸುತ್ತವೆ. ನಾಣ್ಯಗಳ ಮುಖದ ಮೇಲೆ 'ಮುರಳೀಧರ' ಮತ್ತು 'ಕಾಳಿಂಗಮರ್ದನ' ಪ್ರತಿಮೆಗಳನ್ನು ಮುದ್ರಿಸಲಾಗಿದೆ.

ತಮ್ಮ ಕುಶಲ ಆರ್ಥಿಕ ನೀತಿಯಿಂದ ಚಿಕ್ಕದೇವರಾಜ ಒಡೆಯರು ದೊಡ್ಡ ಐಶ್ವರ್ಯವನ್ನು ಕೂಡಿಸಿದ್ದರು. ಈ ಕಾರಣದಿಂದ ಇವರಿಗೆ 'ನವಕೋಟಿ ನಾರಾಯಣ' ಎಂಬ ಬಿರುದು ಬಂದಿತ್ತು. ಈ ಬಿರುದೂ ಸಹ ಅವರು ವೈಷ್ಣವ ಪಂಥದ ಪರಮ ಅನುಯಾಯಿಗಳಾಗಿದ್ದರೆಂಬುದನ್ನು ದೃಢಪಡಿಸುತ್ತದೆ.

ಸಾಹಿತ್ಯದ ಅಭಿವೃದ್ಧಿಗೆ ರಾಜರು ಬಹಳಷ್ಟು ಪ್ರೋತ್ಸಾಹಕೊಟ್ಟರು. ಚಿಕ್ಕದೇವರಾಜರ ಆಸ್ಥಾನದಲ್ಲಿ ಅನೇಕ ವೈಷ್ಣವ ಕವಿಗಳಿದ್ದರು ಮತ್ತು ಅವರಿಗೆ

ರಾಜಾಶ್ರಯವೂ ಇದ್ದಿತು. ತಿರುಮಲರಾಯ, ತಿಮ್ಮಕವಿ, ಚಿಕ್ಕುಪಾಧ್ಯಾಯ, ಕವಯಿತ್ರಿಯಾದ ಶೃಂಗಾರಮ್ಮ ಇವರುಗಳು ಪ್ರಮುಖರಾಗಿದ್ದರು. ಈ ಕವಯಿತ್ರಿಯು ತನ್ನನ್ನು "ಚಿಕ್ಕದೇವರಾಜರ ಕಿರಿಯ ಮಗಳೆಂದು" ಕರೆದುಕೊಂಡಿದ್ದಾಳೆ. ತಿರುಪತಿ ದೇವರಾದ ಶ್ರೀನಿವಾಸನೊಂದಿಗೆ ಪದ್ಮಿನಿ ವಿವಾಹವನ್ನು ವರ್ಣಿಸುವ 'ಪದ್ಮಿನಿ ಕಲ್ಯಾಣ' ಕಾವ್ಯವನ್ನು ಇವಳು ಬರೆದಳು. ಸ್ವತಃ ಚಿಕ್ಕದೇವರಾಜರು 'ಗೀತಗೋಪಾಲ' 'ಭಾಗವತ' 'ಶೇಷಧರ್ಮ' ಮತ್ತು 'ಚಿಕ್ಕದೇವರಾಜ ಬಿನ್ನಪಂ'—ಕೃತಿಗಳ ಕರ್ತೃಗಳಾಗಿದ್ದಾರೆ. 'ಚಿಕ್ಕದೇವರಾಜ ಬಿನ್ನಪಂ' ಎಂಬ ಕೃತಿಯು ಮೇಲುಕೋಟೆ ದೇವಾಲಯದ ಪ್ರಭು ನಾರಾಯಣಸ್ವಾಮಿಯನ್ನು ಉದ್ದೇಶಿಸಿ ಹೇಳಿದ ಮೂವತ್ತು ಆರೋಪಗಳನ್ನು ಒಳಗೊಂಡಿದೆ. ಚಿಕ್ಕದೇವರಾಜರು ಮೇಲುಕೋಟೆ ನಾರಾಯಣನನ್ನು ತಮ್ಮ ಕುಲದೇವತೆಯೆಂದು ಕರೆದಿದ್ದಾರೆ. ಇದರಿಂದ ಅವರೊಬ್ಬರು ಶುದ್ಧ ಶ್ರೀವೈಷ್ಣವರಾಗಿದ್ದರೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಅವರು ಮೇಲುಕೋಟೆ ಚೆಲುವನಾರಾಯಣಸ್ವಾಮಿಯ ನಿಜವಾದ ಆರಾಧಕರಾಗಿದ್ದರು. ವಜ್ರಮುಕುಟ (ವೈರಮುಡಿ) ಹಬ್ಬಕ್ಕೆ ಅವರು ಪ್ರಾಧಾನ್ಯ ನೀಡಿದರಲ್ಲದೆ 'ಗಜೇಂದ್ರ' ಹಬ್ಬವನ್ನು ಪ್ರಾರಂಭಿಸಿದರು.

ಮಧ್ಯಯುಗದ ಅಂತ್ಯಭಾಗದಲ್ಲಿ ವೈಷ್ಣವ ಮತದ ಹರಡುವಿಕೆ ಮತ್ತು ಅಭಿವೃದ್ಧಿಗೆ ಮೈಸೂರಿನ ಕೊಡುಗೆಯು ಗಮನಾರ್ಹವಾದುದೆಂದು ಶ್ರೀ ಎ. ಎನ್. ಕೃಷ್ಣಅಯ್ಯಂಗಾರ್ ಹೇಳಿರುತ್ತಾರೆ. ಈ ಸಂದರ್ಭದಲ್ಲಿ ಮೈಸೂರು ದೊರೆಗಳಾದ ಚಿಕ್ಕದೇವರಾಜ ಒಡೆಯರು ವೈಷ್ಣವ ಧರ್ಮಾಭಿವೃದ್ಧಿಗೆ ಹೆಚ್ಚು ಪ್ರೋತ್ಸಾಹ ನೀಡಿದರು ಎಂದೂ ಹೇಳಬಹುದು.

ಚಿಕ್ಕದೇವರಾಜ ಒಡೆಯರು ತಾವು ವೈಷ್ಣವ ಮತದ ಪರಮ ಅನುಯಾಯಿಗಳಾಗಿದ್ದರೂ ಪರಮತಸಹಿಷ್ಣು ದೊರೆಗಳಾಗಿದ್ದರು. ಶೈವ ಮತ್ತು ಜೈನ ಮತಗಳೆರಡಕ್ಕೂ ಸಮಾನ ಪ್ರೋತ್ಸಾಹ ಕೊಟ್ಟರು. ವೀರಶೈವ ಧರ್ಮಾಚಾರಗಳನ್ನು ತಿಳಿದವರಾಗಿದ್ದರು. ರೇವಣಾರಾಧ್ಯ ಮಠದ ರುದ್ರಮುನಿ ದೇವಾರಾಧ್ಯರಿಗೆ ಉಳ್ಳಂಬಳ್ಳಿ ಗ್ರಾಮವನ್ನು ಉಂಬಳಿಯಾಗಿ ಕೊಟ್ಟರು. ವೀರಶೈವ ಧರ್ಮದ ಆಚಾರ್ಯರಾದ ಷಡಕ್ಷರಯ್ಯನವರೊಂದಿಗೆ ರಾಜರಿಗಿದ್ದ ಸಂಬಂಧವು ಅವರ ಪರಮತ ಸಹಿಷ್ಣುತೆಗೆ ಸಾಕ್ಷಿಯಾಗಿದೆ. ಜೈನಧರ್ಮಾನುಯಾಯಿಗಳೊಂದಿಗೆ ಇವರು ಸ್ನೇಹದಿಂದಿದ್ದರು. ಶ್ರವಣಬೆಳಗೊಳಕ್ಕೆ ಭೇಟಿಯಿತ್ತು ಅಲ್ಲೂ ಒಂದು ಕಲ್ಯಾಣಿಯನ್ನು ನಿರ್ಮಿಸಿದರು. ಚಿದಾನಂದ, ವಿಶಾಲಾಕ್ಷ ಪಂಡಿತರೇ ಮೊದಲಾದ ಜೈನ ಕವಿಗಳು ಅವರ ಆಶ್ರಯವನ್ನು ಪಡೆದಿದ್ದರು.

ಈ ಎಲ್ಲಾ ಐತಿಹಾಸಿಕ ದಾಖಲೆಗಳಿಂದ ಚಿಕ್ಕದೇವರಾಜ ಒಡೆಯರ ಕಾಲದ ವೈಷ್ಣವ ಧರ್ಮದ ಸ್ವರೂಪವನ್ನು ಹಾಗೂ ಒಡೆಯರೇ ಎಷ್ಟರಮಟ್ಟಿಗೆ ಈ ಧರ್ಮದ ಅನುಯಾಯಿಗಳಾಗಿದ್ದುಕೊಂಡು ಈ ಮತದ ಸರ್ವತೋಮುಖವಾದ ಅಭ್ಯುದಯಕ್ಕೆ ಕಾರಣಕರ್ತರಾದರು ಎಂಬುದನ್ನು ಕಾಣಬಹುದಾಗಿದೆ.

ಡಾ. ಎಂ. ಮಾದಯ್ಯ

ಪಂಚವಾರ್ಷಿಕ ಯೋಜನೆಯಲ್ಲಿ ಜನಸಂಖ್ಯೆಯ ನಿಯಂತ್ರಣ

ಇಂಡಿಯಾ ದೇಶದ ಜನಸಂಖ್ಯೆ ಬೆಳವಣಿಗೆಯನ್ನು ಪರಿಶೀಲಿಸಿದವರಿಗೆ ಒಂದು ರೀತಿಯಾದ ಭಯ ಉಂಟಾಗುತ್ತದೆ. ಏಕೆಂದರೆ ಈಗಾಗಲೇ ದೇಶದ ಸಹಸ್ರಾರು ಜನ ಜೀವನಕ್ಕೆ ಅತ್ಯಾವಶ್ಯಕವಾದ ವಸ್ತುಗಳನ್ನು ಪಡೆಯಲು ಸಾಧ್ಯವಾಗದೆ ಕಡು ಬಡತನದಲ್ಲಿದ್ದಾರೆ. ಈ ಬಡತನದ ಜೊತೆಗೆ ಜನಸಂಖ್ಯೆ ಏರುತ್ತಲೇ ಇದೆ. ೧೯೬೧ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆ ೪೩.೯೨ ಕೋಟಿಗಳಷ್ಟಿತ್ತು. ೧೯೬೯ರ ಮಧ್ಯದಲ್ಲಿ ಮಾಡಿದ ಅಂದಾಜಿನ ಪ್ರಕಾರ ಜನಸಂಖ್ಯೆ ಸುಮಾರು ೫೩.೫ ಕೋಟಿ ತಲಪಿದೆ. ಪ್ರಪಂಚದ ದೇಶಗಳ ಪೈಕಿ ಜನಸಂಖ್ಯೆಯಲ್ಲಿ ಮೊದಲನೆಯ ಸ್ಥಾನವನ್ನು ಕಮ್ಯುನಿಸ್ಟ್ ಚೀನವು (೭೬ ಕೋಟಿ) ಮತ್ತು ಎರಡನೆಯ ಸ್ಥಾನವನ್ನು ಭಾರತವೂ ಪಡೆದಿವೆ. ವಿಶ್ವಸಂಸ್ಥೆ ೧೯೬೭ರಲ್ಲಿ ನಡೆಸಿದ ಜನಸಂಖ್ಯೆಯ ಸಮೀಕ್ಷೆಯ ಪ್ರಕಾರ ಪ್ರಪಂಚದಲ್ಲಿ ೩೪೦ ಕೋಟಿ ಜನಸಂಖ್ಯೆ ಇತ್ತೆಂದು ಅಂದಾಜುಮಾಡಲಾಗಿದೆ. ಪ್ರಪಂಚದ ಒಟ್ಟು ಜನಸಂಖ್ಯೆಯ ಪೈಕಿ ಸೇಕಡಾ ೧೫ರಷ್ಟು ಭಾರತದಲ್ಲಿದೆ. ಆದರೆ ಪ್ರಪಂಚದ ವಿಸ್ತೀರ್ಣದಲ್ಲಿ ಕೇವಲ ಸೇಕಡಾ ೨.೫ರಷ್ಟನ್ನು ಮಾತ್ರ ಭಾರತ ಹೊಂದಿದೆ. ಸಾರ್ವಜನಿಕ ಆರೋಗ್ಯ ಸ್ಥಿತಿ ಉತ್ತಮಗೊಂಡಿರುವುದರಿಂದ ಭಾರತದಲ್ಲಿ ಮರಣಹೊಂದುವವರ ಪ್ರಮಾಣ ಸಾಕಷ್ಟು ಕಡಿಮೆಯಾಗಿದೆ. ಆದರೆ ಜನನಪ್ರಮಾಣದಲ್ಲಿ ಯಾವ ಬದಲಾವಣೆಯೂ ಕಂಡುಬಂದಿಲ್ಲ. ಇದರ ಪರಿಣಾಮವಾಗಿ ಜನಸಂಖ್ಯೆ ಒಂದೇ ಸಮನೇ ಏರುತ್ತಿರುವುದನ್ನು ಕಾಣುತ್ತಿದ್ದೇವೆ.

೧೯೬೧-೧೯೬೭ರ ಅವಧಿಯಲ್ಲಿ ಜನಸಂಖ್ಯೆಯ ಏರುವಿಕೆಯ ಪ್ರಮಾಣ ವರ್ಷಕ್ಕೆ ಸೇಕಡಾ ೨.೪ ಇತ್ತು. ಅಲ್ಲಿಂದೀಚೆಗೆ ಅದು ವರ್ಷಕ್ಕೆ ಸೇಕಡಾ ೨.೫ರಷ್ಟಾಗಿದೆ. ಭಾರತದಲ್ಲ ಸರಾಸರಿ ಆಯುಃ ಪರಿಮಾಣ ೧೯೨೦ರ ದಶಕದಲ್ಲಿ ಸರಾಸರಿ ೨೭ ವರ್ಷಗಳಿದ್ದದ್ದು, ೧೯೪೫ರ ವೇಳೆಗೆ ಸುಮಾರು ೩೨ ವರ್ಷಗಳಿಗೇರಿತು. ಈಗ ಇದು ೫೦ ವರ್ಷ ತಲುಪಿದೆಯೆಂದು ಅಂದಾಜು ಮಾಡಲಾಗಿದೆ.

(ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಗಂಡಸರ ಸರಾಸರಿ ಆಯುಸ್ಸು ೬೬ ವರ್ಷ, ಹೆಂಗಸರ ಆಯುಃ ಪರಿಮಾಣ ೭೦ ವರ್ಷ). ವಿಸ್ತೀರ್ಣದಲ್ಲಿ ಭಾರತ, ಅಮೆರಿಕದ ಸಂಯುಕ್ತ ಸಂಸ್ಥಾನದ ೧/೩ರಷ್ಟು ಮಾತ್ರ ಇದ್ದರೂ, ಅಮೆರಿಕದ ಜನಸಂಖ್ಯೆಯ ೨ ೧/೩ಯಷ್ಟು ಜನ ಇಲ್ಲಿದ್ದಾರೆ. ಪ್ರತಿ ೧ ೧/೩ ಸೆಕೆಂಡಿಗೆ ಒಂದು ಮಗು ಭಾರತದಲ್ಲಿ ಹುಟ್ಟುತ್ತಿದೆ ಎಂದು ಲೆಕ್ಕ ಹಾಕಲಾಗಿದೆ. ಅಂದರೆ ಪ್ರತಿನಿತ್ಯ ೫೫ ಸಾವಿರಕ್ಕಿಂತ ಹೆಚ್ಚು ಮಕ್ಕಳು ಮತ್ತು ೧ ವರ್ಷಕ್ಕೆ ೨ ಕೋಟಿ ೧೦ ಲಕ್ಷ ಮಕ್ಕಳು ಭಾರತದಲ್ಲಿ ಜನ್ಮವೆತ್ತುತ್ತವೆ. ಜನನ ಪ್ರಮಾಣ ಒಂದುಸಾವಿರ ಪ್ರಜಾಸಂಖ್ಯೆಗೆ ೪೦ ರಂತೆಯೂ, ಮರಣ ಪ್ರಮಾಣ ೧೬ರ ರಂತೆಯೂ ಇದ್ದು ಪ್ರತಿ ವರ್ಷ ಸುಮಾರು ೮೦ ಲಕ್ಷ ಜನ ಸಾಯುತ್ತಾರೆ. ಅದರ ಪರಿಣಾಮವಾಗಿ ಭಾರತದ ಪ್ರಜಾಸಂಖ್ಯೆಗೆ ಪ್ರತಿವರ್ಷ ೧ ಕೋಟಿ ೩೦ ಲಕ್ಷ ಜನ ಸೇರುತ್ತಾರೆ. ಅಂದರೆ ಪ್ರತಿವರ್ಷ ಆಸ್ಟ್ರೇಲಿಯ ಖಂಡದ ಒಟ್ಟು ಜನಸಂಖ್ಯೆಗಿಂತ ಹೆಚ್ಚಿಗೆ ಜನ ಭಾರತದ ಜನಸಂಖ್ಯೆಗೆ ಸೇರಿಕೊಳ್ಳುತ್ತಾರೆ

ಮುಂದಿನ ಪಟ್ಟಿಯನ್ನು ನೋಡಿದರೆ ಜನಸಂಖ್ಯೆ ಯಾವ ಪ್ರಮಾಣದಲ್ಲಿ ಏರಿದೆ ಎಂಬುದನ್ನು ಕಾಣಬಹುದು.

ವರ್ಷ	ಜನಸಂಖ್ಯೆ (ಕೋಟಿಗಳಲ್ಲಿ)	ಶೇಕಡಾವಾರು ಏರಿಕೆ
೧೯೦೧	೨೩.೮	—
೧೯೧೧	೨೪.೯	೫.೮
೧೯೨೧	೨೪.೮	–೦.೩
೧೯೩೧	೨೭.೫	೧೧.೦
೧೯೪೧	೩೧.೯	೧೪.೩
೧೯೫೧	೩೫.೯	೧೩.೪
೧೯೬೧	೪೩.೯	೨೧.೪೬
೧೯೬೯ (ವರ್ಷದ ಮಧ್ಯದ ಅಂದಾಜು)	೫೩.೫	—

ಭಾರತದಲ್ಲಿ ಈಗಿರುವಂತೆಯೇ ಜನನ ಪ್ರಮಾಣ ಮುಂದುವರಿದರೆ ೧೯೯೯ರ ವೇಳೆಗೆ ಒಂದು ಶತಕೋಟಿ ಜನಸಂಖ್ಯೆ ಇರುವುದೆಂದು ಮೇಲ್ಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಡಾ. ಚಂದ್ರಶೇಖರ್ (ಮಾಜಿ ಕೇಂದ್ರ ಸಚಿವರು) ಅಭಿಪ್ರಾಯಪಟ್ಟಿದ್ದಾರೆ.

ಜನಸಂಖ್ಯೆಯ ಸಮಸ್ಯೆಯನ್ನು ಆಹಾರದ ಸಮಸ್ಯೆಯೊಂದಿಗೆ ವಿಮರ್ಶಿಸಿದರೆ ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆ ಎಂಥ ತೀವ್ರಪರಿಣಾಮ ಉಂಟಾಗಿದೆ ಎಂಬುದು ತಿಳಿದುಬರುತ್ತದೆ. ಮನುಷ್ಯ ಕ್ಷಯಿಸಿದ ಶಕ್ತಿಯನ್ನು ಪಡೆಯಲು

ಕನಿಷ್ಠ ಪಕ್ಷ ದಿನ ಒಂದಕ್ಕೆ ೧೫೦೦ ಕ್ಯಾಲೊರಿ ಆಹಾರ ಬೇಕು ಎಂದು ನಿರ್ಧರಿಸಲಾಗಿದೆ. ಇದರ ಪ್ರಕಾರ ಭಾರತದಲ್ಲಿರುವ ಜನಸಂಖ್ಯೆಗೆ ಆಹಾರ ಒದಗಿಸಬೇಕಾದರೆ, ಭಾರತದಲ್ಲಿ ಉತ್ಪನ್ನಮಾಡುತ್ತಿರುವ ಆಹಾರ ವಸ್ತುಗಳು ಸಾಲದೆ ಪ್ರತಿವರ್ಷ ೧ ಕೋಟಿ ಅಥವ ೧ ಕೋಟಿ ೩೦ ಲಕ್ಷ ಟನ್‌ಗಳಷ್ಟು ಆಹಾರವನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. ತನ್ನ ಆಹಾರ ಬೇಡಿಕೆಯನ್ನು ಪೂರೈಸಿಕೊಳ್ಳಲು ಕಳೆದ ಅನೇಕ ವರ್ಷಗಳಿಂದ ಭಾರತ ಅಮೆರಿಕದ ಒಟ್ಟು ಗೋಧಿ ಬೆಳೆಯ ಸೇಕಡಾ ೩೦ರಷ್ಟನ್ನು ಆಮದು ಮಾಡಿಕೊಳ್ಳುತ್ತಿತ್ತು. ಈ ಆಮದು ಭಾರತದಲ್ಲಿ ಉಪಯೋಗಿಸಲಾಗುವ ಒಟ್ಟು ಆಹಾರ ವಸ್ತುಗಳ ಶೇಕಡಾ ೭ರಷ್ಟು ಆಗುತ್ತದೆ ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದರೆ ಟಿ. ಆರ್. ಮಾಲ್‌ಥಸ್ ಜನಸಂಖ್ಯಾ ಸಿದ್ಧಾಂತವು ಭಾರತದ ಸ್ಥಿತಿಗೆ ಬಹಳಮಟ್ಟಿಗೆ ಒಪ್ಪುತ್ತದೆ ಎಂದು ಹೇಳಬಹುದು. ಎಚ್ಚರಿಕೆವಹಿಸಿ ನಮ್ಮ ದೇಶದಲ್ಲಿ ಜನನ ನಿಯಂತ್ರಣ ಕ್ರಮಗಳನ್ನು ಅನುಸರಿಸದೆ ಹೋದರೆ, ಏರುತ್ತಿರುವ ಜನಸಂಖ್ಯೆ ನಮ್ಮ ಎಲ್ಲ ಆರ್ಥಿಕ ಅಭಿವೃದ್ಧಿಯನ್ನೂ ನಿರ್ವೀರ್ಯಗೊಳಿಸುತ್ತದೆ.

ಇಂಥ ತೀವ್ರಸಮಸ್ಯೆಯನ್ನು ಗಣನೆಗೆ ತೆಗೆದುಕೊಂಡು ಭಾರತ ಸರ್ಕಾರ ಬೃಹತ್‌ಪ್ರಮಾಣದಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು, ಕಳೆದ ಮೂರು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ, ಕೈಗೊಂಡಿದೆ. ಜನನ ಪ್ರಮಾಣವು ಈಗ ಒಂದುಸಾವಿರ ಪ್ರಜಾಸಂಖ್ಯೆಗೆ ೪೦ ಇದೆ. ಇದನ್ನು ೧೯೭೩–೭೪ರ ವೇಳೆಗೆ ೩೨ಕ್ಕೆ ಇಳಿಸುವುದು ಮತ್ತು ೧೯೭೮ರ ವೇಳೆಗೆ ೨೫ಕ್ಕೆ ಇಳಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ.

ಕುಟುಂಬ ಯೋಜನೆ ಸರ್ಕಾರದ ನೀತಿಯೆಂದು ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೊದಲಬಾರಿಗೆ ಪರಿಗಣಿಸಲಾಯಿತು. ಅಲ್ಪ ಪ್ರಮಾಣದಲ್ಲಿ ಕುಟುಂಬ ಯೋಜನೆಗೆ ಹಣವನ್ನು ನಿಗದಿ ಮಾಡಲಾಯಿತು. ಆದರೆ ಎರಡನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ಅವಧಿಯವರೆಗೆ ಕುಟುಂಬ ಯೋಜನೆಯನ್ನು ದೊಡ್ಡ ಪ್ರಮಾಣದಲ್ಲಿ ಕಾರ್ಯಗತಗೊಳಿಸಲಾಗಲಿಲ್ಲ.

ಮೂರನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ, ಕುಟುಂಬ ಯೋಜನೆಯನ್ನು ಕೇವಲ ಶಸ್ತ್ರ ಚಿಕಿತ್ಸೆ ಕ್ರಮಗಳಿಗೆ ಅಳವಡಿಸದೆ, ದೊಡ್ಡ ಪ್ರಮಾಣದಲ್ಲಿ ಜನರ ಮನವೊಲಿಸಿ, ಜನರೇ ಸ್ವಪ್ರೇರಣೆಯಿಂದ ಕುಟುಂಬ ಯೋಜನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ತೀವ್ರರೀತಿಯಲ್ಲಿ ಪ್ರಚಾರ ಕಾರ್ಯ ಪ್ರಾರಂಭಿಸಲಾಯಿತು. ಯಾವ ರೀತಿ ಈ ಕಾರ್ಯಕ್ರಮಕ್ಕೆ ಪ್ರೋತ್ಸಾಹ ದೊರೆತಿದೆ ಎಂಬುದನ್ನು ಅದಕ್ಕಾಗಿ ವೆಚ್ಚ ಮಾಡಿರುವ ಹಣದಿಂದ ತಿಳಿದುಕೊಳ್ಳಬಹುದು.

೧ನೇ ಯೋಜನೆ,	೧೯೫೧–೫೬	೭೦ ಲಕ್ಷ ರೂ.
೨ನೇ ಯೋಜನೆ,	೧೯೫೬–೬೧	೫ ಕೋಟಿ ರೂ.
೩ನೇ ಯೋಜನೆ,	೧೯೬೧–೬೬	೨೫ ಕೋಟಿ ರೂ.
ವಾರ್ಷಿಕ ಯೋಜನೆಗಳು	೧೯೬೬–೬೯	೭೫ ಕೋಟಿ ರೂ.
೪ನೇ ಯೋಜನೆ,	೧೯೬೯–೭೧	೩೦೦ ಕೋಟಿ ರೂ.

ಜನರಿಗೆ ಕುಟುಂಬ ಯೋಜನೆ ವಿಷಯದಲ್ಲಿ ತಿಳಿವಳಿಕೆಕೊಡಲು ಮತ್ತು ಅದನ್ನು ಅನುಸರಿಸಲು ಸಹಾಯಕವಾದ ಸೇವೆಗಳನ್ನು ಒದಗಿಸಲು ಕುಟುಂಬ ಯೋಜನಾ ಕೇಂದ್ರಗಳನ್ನು ದೇಶಾದ್ಯಂತ ಸ್ಥಾಪಿಸಲಾಗಿದೆ. ೧೯೫೧ರಲ್ಲಿ ಒಂದು ಕುಟುಂಬ ಯೋಜನಾ ಕೇಂದ್ರವೂ ಇರಲಿಲ್ಲ. ಆದರೆ ೧೯೫೬ರ ವೇಳೆಗೆ ೧೪೭ ಮತ್ತು ೧೯೬೬ರ ವೇಳೆಗೆ ೧೧,೪೭೪ ಕೇಂದ್ರಗಳು ಸ್ಥಾಪಿತವಾದುವು. ಇದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಗರ್ಭನಿರೋಧಕ ವಸ್ತುಗಳನ್ನು ಜನರಿಗೆ ಒದಗಿಸಲು ೯೩೬೯ ಕೇಂದ್ರಗಳು ಸ್ಥಾಪಿಸಲ್ಪಟ್ಟವು. ೧೯೬೯ನೆ ಇಸವಿ ಏಪ್ರಿಲ್ ತಿಂಗಳ ಆದಿ ಭಾಗದ ವೇಳೆಗೆ ೪೮೪೦ ಗ್ರಾಮಾಂತರ ಕುಟುಂಬ ಯೋಗಕ್ಷೇಮ ಕೇಂದ್ರಗಳು, ೨೧,೭೫೨ ಗ್ರಾಮಾಂತರ ಉಪ ಕೇಂದ್ರಗಳು ಮತ್ತು ೧೮೫೫ ನಗರ ಕುಟುಂಬ ಯೋಗಕ್ಷೇಮ ಕೇಂದ್ರಗಳು ಸ್ಥಾಪಿಸಲ್ಪಟ್ಟು ಅವು ಕಾರ್ಯ ನಿರ್ವಹಿಸುತ್ತಿದ್ದವು.

ಕುಟುಂಬ ಯೋಜನೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ೨೩.೦೦ ಆಸ್ಪತ್ರೆಗಳಲ್ಲಿ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಗರ್ಭನಿರೋಧಕ ಶಸ್ತ್ರ ಚಿಕಿತ್ಸೆಗಾಗಿ ಏರ್ಪಾಟು ಮಾಡಲಾಗಿದೆ. ಇದರ ಜೊತೆಗೆ ೧೭೨ ಸಂಚಾರಿ ಆಸ್ಪತ್ರೆಗಳು ಗರ್ಭನಿರೋಧಕ ಶಸ್ತ್ರಚಿಕಿತ್ಸೆಯನ್ನು ಒದಗಿಸುತ್ತಿವೆ. ಕಳೆದ ೪ ವರ್ಷಗಳಿಂದ (೧೯೬೬ ರಿಂದ) ಸ್ವಯಂ ಪ್ರೇರಣೆಯಿಂದ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿರುವ ವಿವಾಹಿತರ ಸಂಖ್ಯೆ ಏರುತ್ತಿದೆ. ೧೯೬೬–೬೭ರಲ್ಲಿ ಸ್ವಯಂಪ್ರೇರಣೆಯಿಂದ ಶಸ್ತ್ರಚಿಕಿತ್ಸೆ ಮಾಡಿಕೊಂಡವರ ಸಂಖ್ಯೆ ೮ ಲಕ್ಷ ಇದ್ದದ್ದು, ೧೯೬೭–೬೮ರಲ್ಲಿ ೧೮ ಲಕ್ಷಗಳಿಗೆ ಏರಿತು. ಇದುವರೆಗೆ ೬೫ ಲಕ್ಷ ಜನ ಶಸ್ತ್ರಚಿಕಿತ್ಸೆಗಳನ್ನು ಮಾಡಿಸಿಕೊಂಡಿದ್ದಾರೆ. ಇದರೊಂದಿಗೆ ಇಂಡಿಯಾದಲ್ಲೇ ಗರ್ಭನಿರೋಧಕ ವಸ್ತುಗಳನ್ನು ಮತ್ತು ಔಷಧಿಗಳನ್ನು ತಯಾರಿಸಿ ಸುಲಭ ದರದಲ್ಲಿ ಅವುಗಳನ್ನು ಜನರಿಗೆ ಹಂಚಲು ಏರ್ಪಾಡು ಮಾಡಲಾಗಿದೆ.

ಶಸ್ತ್ರಚಿಕಿತ್ಸೆಯಲ್ಲದೆ ಕುಟುಂಬ ಯೋಜನಾ ಕ್ರಮಗಳಲ್ಲಿ ಬಹಳವಾಗಿ ಅನುಸರಿಸಲಾಗುತ್ತಿರುವ ಮತ್ತೊಂದು ಕ್ರಮವೆಂದರೆ ವಂಕಿಧಾರಣೆ (IUCD) ಪದ್ಧತಿ. ಮೊದಲಬಾರಿಗೆ ೧೯೬೫ರ ಜುಲೈ ತಿಂಗಳಲ್ಲಿ ಈ ಪದ್ಧತಿಯನ್ನು ಇಂಡಿಯಾದಲ್ಲಿ ಜಾರಿಗೆ ತರಲಾಯಿತು. ತೀವ್ರರೀತಿಯ ಸಂಶೋಧನೆಗಳನ್ನು ನಡೆಸಿದ ಮೇಲೆ ಇಂಡಿಯಾದ ಪರಿಸ್ಥಿತಿಗೆ ವಂಕಿಧಾರಣೆಯು ಪರಿಣಾಮಕಾರಿಯಾಗಿ ಹೊಂದಿ

ಕೊಳ್ಳುತ್ತದೆ ಎಂಬುದನ್ನು ತಿಳಿದುಕೊಳ್ಳಲಾಯಿತು. ಶಸ್ತ್ರಚಿಕಿತ್ಸೆಗೆ ಒಳಗಾಗಲು ಇಷ್ಟಪಡದವರು ಇದನ್ನು ಸುಲಭವಾಗಿ ಒಪ್ಪಿಕೊಳ್ಳುವರು ಎಂಬುದನ್ನು ಅರಿತುಕೊಳ್ಳಲಾಯಿತು. ಪಟ್ಟಣಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ೮ ಲಕ್ಷ ಜನ ಮಂಕಿಯನ್ನು ಅಳವಡಿಸಿಕೊಂಡರು. ಇದುವರೆಗೆ ೩೦ ಲಕ್ಷ ಮಂಕಿಧಾರಣೆಗಳು ನಡೆದಿವೆ.

ಜನರ ಉತ್ಸಾಹವನ್ನು ಮನಗಂಡು ೪ನೇ ಯೋಜನೆಯಲ್ಲಿ ಕುಟುಂಬ ಯೋಜನಾ ಕಾರ್ಯವನ್ನು ವಿಸ್ತರಿಸಲು ೨ ಕೋಟಿ ಮಂಕಿಧಾರಣೆಗಳನ್ನು ನಿರ್ವಹಿಸಲು ಯೋಚಿಸಲಾಗಿದೆ. ೧೫೬೭ ವೈದ್ಯರುಗಳಿಗೆ ಮಂಕಿಯನ್ನು ಅಳವಡಿಸುವ ವಿಧಾನದಲ್ಲಿ ತರಬೇತಿ ಕೊಡಲಾಗಿದೆ. ೭೫೦ ಆಸ್ಪತ್ರೆಗಳಲ್ಲಿ ಮತ್ತು ೨೮ ಸಂಚಾರಿ ಕುಟುಂಬ ಯೋಜನಾ ಆಸ್ಪತ್ರೆಗಳಲ್ಲಿ ಮಂಕಿ ಧಾರಣೆಯನ್ನು ಮಾಡಲು ಅನುಕೂಲ ಕಲ್ಪಿಸಲಾಗಿದೆ. ಸರ್ಕಾರಿ ಆರೋಗ್ಯ ಕೇಂದ್ರಗಳ ಮೂಲಕ ಮತ್ತು ಖಾಸಗೀ ವೈದ್ಯರುಗಳ ಮೂಲಕ ಗರ್ಭನಿರೋಧಕ ವಸ್ತುಗಳನ್ನು ಹಂಚುವುದರ ಜೊತೆಗೆ ಬೃಹತ್ ಪ್ರಮಾಣದಲ್ಲಿ ನಿರೋಧ್ (Nirodh)ಗಳನ್ನು ಹಂಚಲು ಏರ್ಪಾಡು ಮಾಡಲಾಗಿದೆ. ನಿರೋಧ್‌ಗಳು ಕಡಿಮೆ ದರದಲ್ಲಿ ದೊರೆಯುವಂತೆ ಮಾಡಲು, ಸರ್ಕಾರ ನಿರೋಧ್ ತಯಾರಿಕೆಗೆ ಸಹಾಯಧನ ಒದಗಿಸುತ್ತದೆ. ಈ ಎಲ್ಲಾ ಕ್ರಮಗಳ ಪರಿಣಾಮವಾಗಿ ನಾಲ್ಕನೇ ಯೋಜನೆ ಕೊನೆ ವೇಳೆಗೆ ೧ ಕೋಟಿ ೮೦ ಲಕ್ಷ ಜನನಗಳನ್ನು ತಪ್ಪಿಸಬಹುದೆಂದು ಅಂದಾಜುಮಾಡಲಾಗಿದೆ.

ಗರ್ಭನಿರೋಧಕ ವಸ್ತುಗಳನ್ನು ಒದಗಿಸುವುದು ಮತ್ತು ಕುಟುಂಬ ಯೋಜನೆ ಅನುಸರಿಸಲು ಜನರಿಗೆ ತಕ್ಕ ಸೇವೆಗಳನ್ನು ಒದಗಿಸುವುದು ಸರ್ಕಾರದ ಕುಟುಂಬ ಯೋಜನೆಯ ಮುಖ್ಯ ಅಂಗವಾಗಿದ್ದರೂ, ಇತರ ಕ್ರಮಗಳನ್ನೂ ಕೂಡ ಸರ್ಕಾರ ಕೈಗೊಂಡಿದೆ. ಅವು ಯಾವುವೆಂದರೆ: (೧) ಕುಟುಂಬ ಯೋಜನೆ ಪ್ರಚಾರ; (೨) ಪರಿಣಾಮಕಾರಿಯಾಗಿ ಈ ವಿಷಯದಲ್ಲಿ ಜನರನ್ನು ವಿದ್ಯಾವಂತರನ್ನಾಗಿ ಮಾಡುವುದು; (೩) ಕುಟುಂಬ ಯೋಜನೆಗೆ ಸಂಬಂಧಪಟ್ಟಂತೆ ಅಂಕಿ ಅಂಶಗಳನ್ನು ಸಂಗ್ರಹಿಸುವುದು ಮತ್ತು ದಾಖಲೆ ಇಡುವುದು; (೪) ಕುಟುಂಬ ಯೋಜನೆ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವುದು; (೫) ಆಗಿಂದಾಗ್ಗೆ ಕುಟುಂಬಯೋಜನೆ ಪ್ರಗತಿ ಬಗ್ಗೆ ಮಾಪನ ಮಾಡುವುದು ಮತ್ತು ದೋಷಗಳು ಕಂಡುಬಂದರೆ ಅವುಗಳನ್ನು ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳುವುದು; (೬) ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವಂತೆ ಜನರನ್ನು ಪ್ರೋತ್ಸಾಹಿಸಲು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರಿಗೆ ನಗದು ಹಣದ ರೂಪದಲ್ಲಿ ಬಹುಮಾನಕೊಡುವುದು, ಅವರಿಗೆ ಪುಕ್ಕಟೆ ರಜಾಕೊಡಿಸುವುದು, ಇತ್ಯಾದಿ; (೭) ಯಶಸ್ವಿಯಾಗಿ ಗರ್ಭನಿರೋಧಕ ಕಾರ್ಯವನ್ನು ಕೈಗೊಂಡ ವೈದ್ಯರುಗಳಿಗೆ (ಖಾಸಗೀ ವೈದ್ಯರಾಗಲೀ ಅಥವ ಸರ್ಕಾರಿ ಸೇವೆಯಲ್ಲಿರುವ ವೈದ್ಯ

ರಾಗಲೀ) ನಗದು ಹಣದ ರೂಪದಲ್ಲಿ ಬಹುಮಾನ ಕೊಡುವುದು. ಉದಾಹರಣೆಗೆ, ಗುಜರಾತ್ ಸರ್ಕಾರವು ಒಳ್ಳೆಯ ಪ್ರಗತಿಯನ್ನು ಸಾಧಿಸಿದ ವೈದ್ಯರಿಗೆ ೨೦೦೦ ರೂಪಾಯಿಯ ನಗದು ಬಹುಮಾನ ಕೊಡುತ್ತದೆ.

ಕುಟುಂಬ ಯೋಜನೆ ಕಾರ್ಯಗಳನ್ನು ಕಾರ್ಯಗತಗೊಳಿಸುವಾಗ ಸರ್ಕಾರ ಒಂದು ತೊಂದರೆಯನ್ನು ಎದುರಿಸುತ್ತಿದೆ. ಇಂಡಿಯದಲ್ಲಿ ಸಾಕಷ್ಟು ಮಹಿಳಾ ವೈದ್ಯರುಗಳು ದೊರೆಯದೆ ಇರುವುದು. ಇಂಡಿಯಾದ ಸ್ತ್ರೀಯರು ಸ್ವಾಭಾವಿಕವಾಗಿ ನಾಚಿಕೆಪಡುವಂತಹವರು. ಪುರುಷವೈದ್ಯರ ಎದುರಿಗೆ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಇಷ್ಟಪಡುವುದಿಲ್ಲ. ಜೊತೆಗೆ ತಮ್ಮ ದೇಹವನ್ನು ಅವರ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲು ಇಷ್ಟಪಡುವುದಿಲ್ಲ. ಅನೇಕ ಸ್ತ್ರೀಯರಿಗೆ ಕುಟುಂಬ ಯೋಜನೆ ಕ್ರಮಗಳನ್ನು ಅನುಸರಿಸುವುದು ಒಳ್ಳೆಯದು ಎಂಬುದು ತಿಳಿದುಬಂದಿದೆ. ಆದರೆ ಪುರುಷ ವೈದ್ಯರುಗಳ ಹತ್ತಿರ ಅವರು ಹೋಗಲು ಇಷ್ಟಪಡುವುದಿಲ್ಲವಾದುದರಿಂದ, ಕುಟುಂಬಯೋಜನೆಯು ಮತ್ತಷ್ಟು ಯಶಸ್ವಿಯಾಗಿ ನಿರ್ವಹಿಸಲ್ಪಡಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಮಹಿಳಾವೈದ್ಯರುಗಳ ಸಂಖ್ಯೆಯನ್ನು ಹೆಚ್ಚಿಸುವುದು ಸರ್ಕಾರದ ಕಾರ್ಯಕ್ರಮಗಳಲ್ಲಿ ಒಂದು ಅತ್ಯವಶ್ಯಕ ಕ್ರಮವಾಗಿದೆ.

ಕುಟುಂಬ ಯೋಜನೆಯನ್ನು ಮತ್ತಷ್ಟು ಬಲಗೊಳಿಸಲು ಇನ್ನೂ ಕೆಲವು ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಯತ್ನಿಸುತ್ತಿದೆ. ಅವು ಯಾವುವೆಂದರೆ:— (೧) ಕೆಲವು ಮಕ್ಕಳಾದ ಮೇಲೆ ವಿವಾಹಿತರಿಗೆ ಬಲಾತ್ಕಾರವಾಗಿ ಗರ್ಭನಿರೋಧಕ ಶಸ್ತ್ರಚಿಕಿತ್ಸೆ ಮಾಡುವುದು; (೨) ಹೆಚ್ಚಿಗೆ ಮಕ್ಕಳಾದವರ ಮೇಲೆ ತೆರಿಗೆ ಹಾಕುವುದು: (೩) ಯುವಕರು ಮತ್ತು ಯುವತಿಯರು ಮದುವೆಯಾಗಬೇಕಾದರೆ ಒಂದು ನಿರ್ದಿಷ್ಟ ವಯೋಮಿತಿಯನ್ನು ಗೊತ್ತುಮಾಡುವುದು; ಮತ್ತು (೪) ಗರ್ಭಪಾತ ಮಾಡಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶ ಮಾಡಿಕೊಡುವುದು.

ಮೇಲ್ಕಂಡ ರೀತಿಯಲ್ಲಿ ವ್ಯಾಪಕವಾದ ಕುಟುಂಬಯೋಜನಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ ನಾವು ನಿರೀಕ್ಷಿಸಿರುವಂತೆ ಜನನ ಪ್ರಮಾಣವನ್ನು ಒಂದು ಸಾವಿರ ಪ್ರಜಾಸಂಖ್ಯೆಗೆ ೨೫ರಂತೆ ನಿಗದಿಗೊಳಿಸಬೇಕಾದರೆ, ೧೯೭೯ರ ವೇಳೆಗೆ ೩½ ಕೋಟಿ ಜನನಗಳನ್ನು ತಡೆಗಟ್ಟಬೇಕಾಗಿದೆ. ಆದುದರಿಂದ ಮುಂದಿನ ವರ್ಷಗಳಲ್ಲಿ ಗ್ರಾಮಾಂತರ ಮತ್ತು ಪಟ್ಟಣಪ್ರದೇಶಗಳಲ್ಲಿ ಕುಟುಂಬ ಯೋಜನಾ ಕಾರ್ಯವನ್ನು ತೀವ್ರಗೊಳಿಸುವುದು ಅತ್ಯವಶ್ಯಕವಾಗಿದೆ.

ಮೂಢನಂಬಿಕೆ, ಬಡತನ, ಸಂಪ್ರದಾಯ ಮತ್ತು ಅನಕ್ಷರತೆ ಸಮಸ್ಯೆಗಳಿಂದ ಬಳಲುತ್ತಿರುವ ನಮ್ಮ ಸಮಾಜದಲ್ಲಿ ಕುಟುಂಬಯೋಜನೆಯು ನಿಧಾನವಾಗಿ ಫಲ ನೀಡುತ್ತದೆ. ಆದರೆ ಇದನ್ನು ಸಾಧಿಸಬೇಕಾದರೆ ನಮಗೆ ತಾಳ್ಮೆ ಇರಬೇಕು ಮತ್ತು ಹೆಚ್ಚಿನ ಪ್ರಮಾಣದಲ್ಲಿ ಹಣ ವೆಚ್ಚಮಾಡಲು ಸಿದ್ಧರಾಗಿರಬೇಕು.

ಕೃತಿಸ್ವಾಮ್ಯ

ಒಂದು ಕೃತಿಯಲ್ಲಿ ಕೃತಿಕಾರನ ವೈಶಿಷ್ಟ್ಯ ರೂಪವೆತ್ತು ನಿಲ್ಲುತ್ತದೆ. ಕೃತಿಯಿಂದ ಫಲ ಪಡೆಯುವ ಹಕ್ಕು ಅವನಿಗಿದೆ. ಆ ವೈಶಿಷ್ಟ್ಯವನ್ನು ಕಾಪಾಡಿಕೊಳ್ಳಲು, ಅವನು ಪಡೆಯಬೇಕಾದ ಫಲವನ್ನು ಇನ್ನೊಬ್ಬ ತಿನ್ನದಂತೆ ಮಾಡಲು ಕೃತಿಸ್ವಾಮ್ಯದ ಕಾನೂನನ್ನು ರಚಿಸಲಾಯಿತು. ಭಾರತದಲ್ಲಿ ೧೯೫೭ರ ಇಸವಿಯ ಕೃತಿಸ್ವಾಮ್ಯ ಕಾಯಿದೆ ಕೃತಿಕಾರನ ಹಕ್ಕುಬಾಧ್ಯತೆಗಳನ್ನು ನಿಷ್ಕರ್ಷಿಸುತ್ತದೆ. ಈ ಕಾಯಿದೆ ೧೯೫೮ರ ಜನವರಿ ೨೧ರಂದು ಜಾರಿಗೆ ಬಂತು. ಕೃತಿಗಳಿಗೆ ಸಂಬಂಧಿಸಿದಂತೆ ಅದರಲ್ಲಿ ಹೇಳಿದ ಹಕ್ಕುಗಳನ್ನಲ್ಲದೆ ಕೃತಿಯ ಒಡೆಯ ಬೇರೆ ಯಾವ ಹಕ್ಕುಗಳನ್ನೂ ಪಡೆಯಲಾರ. ನೆಚ್ಚಿಗೆ ಅಥವಾ ಭರವಸೆಯ ಭಂಗದ ಫಲವಾಗಿ (Breach of trust or confidence) ಕೃತಿಸ್ವಾಮ್ಯಕ್ಕೆ ಚ್ಯುತಿಯುಂಟಾದ ಸಂದರ್ಭದಲ್ಲಿ ಅದರ ವಿಚಾರದಲ್ಲಿರುವ ನಿವೃತ್ತಿಗಳನ್ನು ಕೃತಿಸ್ವಾಮ್ಯ ಕಾಯಿದೆ ಕುಂಠಿತಗೊಳಿಸುವುದಿಲ್ಲ.

ಕೃತಿಸ್ವಾಮ್ಯ ಒಂದು ವಿಶಿಷ್ಟ (Exclusive) ಹಕ್ಕು. ಒಂದು ಕೃತಿ ಪ್ರಥಮವಾಗಿ ಪ್ರಕಟವಾದ ಬಳಿಕ ಅದನ್ನು ಪ್ರಕಟಿಸಲೂ ಪ್ರತಿ ಮಾಡಿ ಮಾರಲೂ ರೂಪಾಂತರಗೊಳಿಸಲೂ ಮಾರ್ಪಡಿಸಲೂ, ಅದನ್ನು ಪ್ರದರ್ಶಿಸಲೂ (Perform) ನಿರೂಪಿಸಲೂ (represent) ಕಾಯಿದೆ ನೀಡುವ ವಿಶಿಷ್ಟ ಹಕ್ಕು–ಕೃತಿಸ್ವಾಮ್ಯ. ಇದು ಕೃತಿಸ್ವಾಮ್ಯದ ಬಗ್ಗೆ ಅಮ್ದರ್ ನೀಡಿರುವ ವ್ಯಾಖ್ಯೆ. ಕೃತಿಸ್ವಾಮ್ಯ ಕಾಯಿದೆಯ ೧೪ನೆಯ ಕಲಮಿನಲ್ಲಿ ‘ ಕೃತಿಸ್ವಾಮ್ಯ ’ದ ಅರ್ಥ ವಿವರಣೆಯಿದೆ. ಅದರ ಪ್ರಕಾರ ಕೃತಿಗಳಲ್ಲಿ ನಾಲ್ಕು ವಿಧ: (೧) ಸಾಹಿತ್ಯ, ನಾಟಕ ಅಥವಾ ಗಾಯನ ಕೃತಿಗಳು (೨) ಕಲಾಕೃತಿಗಳು (೩) ಚಲನ ಚಿತ್ರಗಳು, (೪) ಧ್ವನಿಮುದ್ರಣಗಳು. ಈ ನಾಲ್ಕು ರೀತಿಯ ಕೃತಿಗಳಲ್ಲಿ ಇರುವ ಯಾವ ತೆರನಾದ ಹಕ್ಕುಗಳಿಗೆ ‘ ಕೃತಿಸ್ವಾಮ್ಯ ’ವೆಂದು ಹೇಳಬೇಕೆಂಬುದನ್ನು ಅದು ವಿಶದಪಡಿಸುತ್ತದೆ. ಇದು ಈ ಕಾಯಿದೆಯ ಅತ್ಯಂತ ಪ್ರಮುಖವಾದ ಕಲಮು.

ಸಾಹಿತ್ಯ, ನಾಟಕ ಅಥವಾ ಗಾಯನ ಕೃತಿಗಳಿಗೆ ಸಂಬಂಧಿಸಿದಂತೆ ಇರುವ ಹಕ್ಕುಗಳಿವು :

(೧) ಕೃತಿಗೆ ಯಾವುದಾದರೂ ಭೌತಿಕ ರೂಪವನ್ನು (Material form) ಕೊಟ್ಟು ಪುನರ್ ಸೃಷ್ಟಿಸುವುದು (reproduce)

(೨) ಕೃತಿಯ ಪ್ರಕಾಶನ

(೩) ಕೃತಿಯ ಬಹಿರಂಗ ಪ್ರದರ್ಶನ (Perform)

(೪) ಕೃತಿಯ ಭಾಷಾಂತರ, ಅದರ ಪುನರ್ ಸೃಷ್ಟಿ, ಪ್ರದರ್ಶನ, ಪ್ರಕಟನೆ.

(೫) ಕೃತಿಯ ಸಂಬಂಧವಾದ ಚಲನಚಿತ್ರ ಅಥವಾ ಧ್ವನಿಮುದ್ರಣ.

(೬) ಕೃತಿಯನ್ನು ಬಾನುಲಿಪ್ರಸಾರದ ಮೂಲಕ ಶ್ರುತಪಡಿಸುವುದು ಅಥವಾ ಧ್ವನಿವರ್ಧಕ ಅಥವಾ ಇಂಥ ಇತರ ಸಾಧನಗಳ ಮೂಲಕ ಶ್ರುತಪಡಿಸುವುದು.

(೭) ಕೃತಿಯ ರೂಪಾಂತರ

(೮) ಕೃತಿಯ ಭಾಷಾಂತರ ಮತ್ತು ರೂಪಾಂತರಗಳಲ್ಲಿ ಮೇಲೆ ೧ರಿಂದ ೬ರ ತನಕ ವಿವರಿಸಿರುವುದರಲ್ಲಿ ಯಾವುದನ್ನಾದರೂ ಮಾಡುವುದು. ಕಲಾಕೃತಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವನ್ನು ಮಾಡುವ ಅಥವಾ ಮಾಡಿಸುವ ಹಕ್ಕುಗಳು :—

(೧) ಕೃತಿಗೆ ಯಾವುದಾದರೂ ಭೌತಿಕ ರೂಪವನ್ನು ಕೊಟ್ಟು ಪುನರ್ ಸೃಷ್ಟಿಸುವುದು.

(೨) ಚಲನ ಚಿತ್ರದಲ್ಲಿ ಕೃತಿಯನ್ನು ಸೇರಿಸುವುದು. ಕೃತಿಯನ್ನು ಪ್ರಕಾಶಗೊಳಿಸುವುದು.

(೩) ಕೃತಿಯ ರೂಪಾಂತರಕರಣ.

(೪) ಕೃತಿಯ ರೂಪಾಂತರಕ್ಕೆ ಮೇಲೆ ಹೇಳಿದ ಮೂರರಲ್ಲಿ ಯಾವುದನ್ನಾದರೂ ಮಾಡುವುದು.

ಚಲನ ಚಿತ್ರಗಳ ವಿಚಾರಗಳಲ್ಲಿ ಈ ಕೆಳಗಿನ ಕೆಲಸಗಳನ್ನು ಮಾಡುವ ಮತ್ತು ಮಾಡಿಸುವ ಹಕ್ಕು :—

(೧) ಚಲನ ಚಿತ್ರದ ಪ್ರತಿ ಮಾಡುವುದು.

(೨) ಚಲನ ಚಿತ್ರದ ನೋಟದ ಭಾಗವನ್ನು ಬಹಿರಂಗವಾಗಿ ತೋರಿಸುವುದು. ಅದರ ಧ್ವನಿಭಾಗವನ್ನು ಬಹಿರಂಗದಲ್ಲಿ ಶ್ರುತಪಡಿಸುವುದು.

(೩) ಚಲನ ಚಿತ್ರಕ್ಕೆ ಸಂಬಂಧಪಟ್ಟ ಧ್ವನಿವಾಹಿನಿಯ ಯಾವುದಾದರೂ ಭಾಗವನ್ನು ಆ ವಾಹಿನಿಯಿಂದ ಮುದ್ರಿಸಿಕೊಳ್ಳುವುದು.

(೪) ಬಾನುಲಿಯ ಮೂಲಕ ಚಲನ ಚಿತ್ರದ ಪ್ರಸಾರ.

ಧ್ವನಿ ಮುದ್ರಣಕ್ಕೆ ಸಂಬಂಧಿಸಿದಂತೆ ಆ ಮುದ್ರಿಕೆಯನ್ನು ಉಪಯೋಗಿಸಿ ಈ ಕೆಳಗಿನ ಕೆಲಸಗಳನ್ನು ಮಾಡುವ ಮತ್ತು ಮಾಡಿಸುವ ಹಕ್ಕು :—

(೧) ಆ ಧ್ವನಿಮುದ್ರಣದಿಂದ ಬೇರೆ ಧ್ವನಿಮುದ್ರಣ.

(೨) ಧ್ವನಿಮುದ್ರಣದಲ್ಲಿ ಒಳಗೊಂಡದ್ದನ್ನು ಬಹಿರಂಗವಾಗಿ ಶ್ರುತಪಡಿಸುವುದು.

(೩) ಧ್ವನಿ ಮುದ್ರಣದಲ್ಲಿ ಒಳಗೊಂಡದ್ದನ್ನು ಬಾನುಲಿ ಪ್ರಸರಣ ಮುಖಾಂತರ ಶ್ರುತಪಡಿಸುವುದು.

ಮೂಲ, ಭಾಷಾಂತರ, ರೂಪಾಂತರಗಳ ವಿಚಾರದಲ್ಲಿ ಮೇಲೆ ಹೇಳಿದ ಹಕ್ಕುಗಳು ಬಹುತೇಕ ಅನ್ವಯಿಸುತ್ತವೆ.

ರೂಪಾಂತರ, ಕಲಾಕೃತಿ, ಚಲನಚಿತ್ರ, ಸಾಹಿತ್ಯಕೃತಿ, ಬಾನುಲಿ ಧ್ವನಿಮುದ್ರಣ ಕೃತಿ ಮುಂತಾದ ಶಬ್ದಗಳಿಗೆ ಶಾಸನದ ಎರಡನೇ ವಿಧಿ ಅರ್ಥಗಳನ್ನು ಕೊಡುತ್ತದೆ. ಅವುಗಳ ಅರ್ಥವಿವರಣೆ ಕೂಲಂಕಷವಾಗಿ ಇಲ್ಲಿ ಹೇಳುವುದು ಅನಗತ್ಯ. ಮೇಲೆ ಬರೆದ ಶಬ್ದಗಳಿಗೆ ಎರಡನೇ ವಿಧಿಯಲ್ಲಿ ಹೇಳಿದ ಅರ್ಥಗಳನ್ನು ಇಟ್ಟುಕೊಂಡು ಓದಬೇಕೆಂದು ತಿಳಿದುಕೊಂಡರೆ ಸಾಕು.

ಕೃತಿಸ್ವಾಮ್ಯ ಯಾರಿಗೆ? :–ಕೃತಿಸ್ವಾಮ್ಯದ ಹಕ್ಕು ಮೊತ್ತಮೊದಲಿಗೆ ಕೃತಿಕಾರನಿಗೆ ಸೇರಿದುದು. ಅವನ ಹಕ್ಕುಗಳು ಶಾಸನದಲ್ಲಿ ಹೇಳಿದ ಕೆಲವು ಸಂದರ್ಭಗಳಲ್ಲಿ ಕುಂಠಿತಗೊಳ್ಳುತ್ತದೆ. (೧) ಒಂದು ವೃತ್ತಪತ್ರಿಕೆ, ಅಥವಾ ನಿಯತಕಾಲಿಕವೊಂದರ ಯಜಮಾನನಲ್ಲಿ ಉದ್ಯೋಗ ಪಡೆದಂಥವನು ಅಲ್ಲಿ ಒಪ್ಪಂದದ ಪ್ರಕಾರ ಕೆಲಸ ಮಾಡುತ್ತಿದ್ದಾಗ, ವಿರೋಧವಾದ ಒಪ್ಪಂದವಿಲ್ಲದಿದ್ದಲ್ಲಿ, ಅವನು ಬರೆದ ಲೇಖನವನ್ನು ಪತ್ರಿಕೆಗಳಲ್ಲಿ ಪ್ರಕಟಮಾಡುವ ಅಥವಾ ಪುನರ್‌ಮುದ್ರಿಸುವ ಬಗ್ಗೆ ಕೃತಿಸ್ವಾಮ್ಯದ ಮೊದಲನೆಯ ಹಕ್ಕುದಾರ ಯಜಮಾನ. ಬೇರೆ ವಿಚಾರಗಳಲ್ಲಿ ಕೃತಿಕಾರನೇ ಅದರ ಮೊದಲ ಸ್ವಾಮ್ಯ ಹೊಂದುತ್ತಾನೆ. (೨) ಪ್ರತಿಫಲಕ್ಕಾಗಿ ಒಬ್ಬ ಇನ್ನೊಬ್ಬನಿಗೆ ಒಂದು ಛಾಯಾಚಿತ್ರ, ವರ್ಣಚಿತ್ರ, ಭಾವಚಿತ್ರ, ಕೆತ್ತನೆಯ ಕೆಲಸ ಅಥವಾ ಚಲನ ಚಿತ್ರ ಮಾಡಿಪ್ಪಾದರೆ ಅದರ ಮೊತ್ತಮೊದಲಿನ ಕೃತಿಸ್ವಾಮ್ಯದ ಹಕ್ಕು, ಬೇರೆ ಯಾವ ಒಪ್ಪಂದವೂ ಇಲ್ಲದಿದ್ದ ಪಕ್ಷದಲ್ಲಿ, ಪ್ರತಿಫಲ ನೀಡಿದವನಿಗೆ ಸೇರಿದ್ದು (೩) ಮೇಲೆ (೧) ಮತ್ತು (೨)ರಲ್ಲಿ ಹೇಳಿದಂಥ ಯಾವ ಸಂದರ್ಭವಾಗಲಿ ಪ್ರತ್ಯೇಕ ಒಪ್ಪಂದವಾಗಲಿ ಇಲ್ಲದೆ ಒಬ್ಬ ಇನ್ನೊಬ್ಬನಲ್ಲಿ ಉದ್ಯೋಗಿಯೋ ಅಭ್ಯಾಸಿಯೋ (ಅಪ್ರೆನ್‌ಟಿಸ್) ಆಗಿ ಈ ಒಪ್ಪಂದದ ಪ್ರಕಾರ ಕೃತಿ ರಚಿಸಿದರೆ ಅದರ ಪ್ರಥಮ ಮಾಲೀಕತ್ವ ಯಜಮಾನನಿಗೆ ಸಲ್ಲುತ್ತದೆ. (೪) ಸರಕಾರದ ಕೃತಿಯನ್ನು ಯಾರೇ ರಚಿಸಲಿ, ಅದರ ಒಡೆತನ ಸರಕಾರದ್ದು. (೫) ಕೆಲವು ಅಂತರರಾಷ್ಟ್ರೀಯ ಸಂಸ್ಥೆಗಳಿಗೂ ಈ ಬಗ್ಗೆ ಕಾಯಿದೆಯಲ್ಲಿ ಹಕ್ಕುಗಳನ್ನು ನೀಡಲಾಗಿದೆ. ಅಂಥ ಕೃತಿಗಳ ಪ್ರಥಮ ಹಕ್ಕು ಸಂಬಂಧಪಟ್ಟ ವಿಶ್ವಸಂಸ್ಥೆಯದು.

ಕೃತಿಸ್ವಾಮ್ಯದ ಪರಭಾರೆ :–ಈಗಾಗಲೇ ಅಸ್ತಿತ್ವದಲ್ಲಿರುವ ಅಥವಾ ಇನ್ನು ಮುಂದೆ ಅಸ್ತಿತ್ವಕ್ಕೆ ಬರಲಿರುವ ಕೃತಿಯ ಹಕ್ಕನ್ನೂ ಸಂಪೂರ್ಣವಾಗಿ ಅಥವಾ ಅಂಕಿತವಾಗಿ ಪರಭಾರೆ ಮಾಡಬಹುದು. ಅದರಲ್ಲಿ ಹಕ್ಕುಳ್ಳವನೋ ಅವನಿಂದ ಅಧಿಕಾರ ಹೊಂದಿದವನೋ ಬರಹಮೂಲಕ ಹೀಗೆ ಮಾಡಿಕೊಡಬೇಕು. ಮರಣ ಶಾಸನ (ಉಯಿಲು) ಅಥವಾ ಅದರ ತಿದ್ದುಪಡಿಯ ಮೂಲಕ ಒಬ್ಬನಿಗೆ ಒಂದು ಕೃತಿಯ

ಹಸ್ತಪ್ರತಿ, ಬಂದರೆ ಆ ಉತ್ತರಾಧಿಕಾರಿಯು ಅದರ ಹಕ್ಕುದಾರ. ಬರಹಗಾರನಾದವನು ತನ್ನ ಕೃತಿಯ ಒಡೆತನವನ್ನು ತ್ಯಜಿಸಬೇಕಾದರೆ ಹಾಗೆಂದು ಕಾಪಿರೈಟ್ ರಿಜಿಸ್ಟ್ರಾರರಿಗೆ ಬರೆಯಬೇಕು. ಕೃತಿಸ್ವಾಮ್ಯ ಹೊಂದಿರುವವನೋ ಅವನಿಂದ ಅಧಿಕಾರ ಪಡೆದವನೋ ಪರವಾನಿಗೆ (ಲೈಸೆನ್ಸ್) ಕೊಡುವುದರ ಮೂಲಕ ಆ ಕೃತಿಯನ್ನು ಇನ್ನೊಬ್ಬರು ಉಪಯೋಗಿಸಲು ಅವಕಾಶ ಕೊಡಬಹುದು. ಸಕಾರಣವಾಗಿ ಕಾಪಿರೈಟ್ ಬೋರ್ಡಿಗೆ ಒಬ್ಬ ದೂರು ಕೊಟ್ಟಲ್ಲಿ ಅದನ್ನು ವಿಮರ್ಶಿಸಿ ಪರವಾನಿಗೆಯನ್ನು ಸೂಕ್ತ ಷರತ್ತುಗಳೊಂದಿಗೆ ಕೊಡಿಸುವ ಅಧಿಕಾರ ಅದಕ್ಕೂ ಇದೆ. ಕೆಲವು ನಿರ್ದಿಷ್ಟ ಕಾರಣಗಳಿದ್ದರೆ ಅದಕ್ಕೆ ಮೂಲದ ಭಾಷಾಂತರ ಮಾಡಲು ಪರವಾನಿಗೆ ಕೊಡುವ ಹಕ್ಕೂ ಅದಕ್ಕುಂಟು.

ಕೃತಿಸ್ವಾಮ್ಯ ಎಷ್ಟರ ತನಕ :–ಸಾಹಿತ್ಯ, ನಾಟಕ, ಗಾಯನ ಅಥವಾ ಕಲಾಕೃತಿ ಆ ಕೃತಿಕಾರನ ಜೀವಮಾನದ ಕಾಲದಲ್ಲಿ ಪ್ರಕಟಗೊಂಡಲ್ಲಿ ಅವನು ತೀರಿಹೋದ ವರ್ಷದಿಂದ ಐವತ್ತು ವರ್ಷಗಳ ತನಕ ಆ ಕೃತಿಯ ಮೇಲೆ ಸ್ವಾಮ್ಯವಿರುತ್ತದೆ. ಕೃತಿ ಇಬ್ಬರದ್ದಾಗಿದ್ದರೆ ಅವರಿಬ್ಬರಲ್ಲಿ ಯಾವನು ಬಳಿಕ ತೀರಿಹೋಗುವನೋ ಅವನ ಮರಣವಾದ ವರ್ಷದಿಂದ ಐವತ್ತು ವರ್ಷ ಕೃತಿಸ್ವಾಮ್ಯವಿರುತ್ತದೆ. ಈ ವಿಧಿಯ ಆಧಾರದಿಂದ ಡಾ. ಕಿಟ್ಟೆಲರ ನಿಘಂಟನ್ನು ಅವರು ಮರಣಿಸಿದ ಐವತ್ತುವರ್ಷಗಳ ಅನಂತರ ಮದ್ರಾಸು ವಿಶ್ವವಿದ್ಯಾನಿಲಯ ಪ್ರಕಟಮಾಡುವ ಅನುವು ಪಡೆಯಿತು. ಈ ನಿಯಮ ಛಾಯಾಚಿತ್ರಗಳಿಗೆ ಅನ್ವಯಿಸುವುದಿಲ್ಲ. ಒಂದು ಕೃತಿ ಗುಪ್ತನಾಮದಿಂದ ಅಥವಾ ಹೆಸರಿಲ್ಲದೆ ಪ್ರಕಟಗೊಂಡಲ್ಲಿ ಅದು ಪ್ರಕಟವಾದ ಅನಂತರದ ವರ್ಷದಿಂದ ಆರಂಭವಾಗಿ ಐವತ್ತುವರ್ಷಗಳಕಾಲ ಅದರಲ್ಲಿ ಕೃತಿಸ್ವಾಮ್ಯವಿರುತ್ತದೆ. ಈ ಅವಧಿ ತೀರುವ ಮುನ್ನ ಅದರ ನಿಜವಾದ ಕರ್ತೃ ಯಾರೆಂದು ತಿಳಿದುಬಂದಲ್ಲಿ ಅವನು ತೀರಿದ ವರ್ಷದ ಮರುವರ್ಷದಿಂದ ಐವತ್ತು ವರ್ಷಕಾಲ ಕೃತಿಸ್ವಾಮ್ಯ ಉಳಿಯುತ್ತದೆ. ಒಂದು ಸಾಹಿತ್ಯ, ನಾಟಕ, ಗಾಯನ ಅಥವಾ ಕೆತ್ತನೆಯ ಕೃತಿಕಾರನಿಗೆ ಅದರಲ್ಲಿ ಸ್ವಾಮ್ಯವಿದ್ದು, ಆತನ ಜೀವಮಾನ ಕಾಲದಲ್ಲಿ ಆ ಕೃತಿ ಅಥವಾ ಅದರ ರೂಪಾಂತರ ಪ್ರಕಟವಾಗಿರದಿದ್ದರೆ, ಅದು ಪ್ರಕಟಿಸಲ್ಪಟ್ಟ, ಅನಂತರದ ವರ್ಷದಿಂದ ಐವತ್ತುವರ್ಷಗಳ ಕಾಲ ಕೃತಿಸ್ವಾಮ್ಯವಿರುತ್ತದೆ. ಅದರ ರೂಪಾಂತರ ಆ ಮೊದಲೇ ಪ್ರಕಟಗೊಂಡಿದ್ದರೆ ಅದು ಪ್ರಕಟಗೊಂಡ ಮರುವರ್ಷದಿಂದ ಐವತ್ತುವರ್ಷಗಳ ತನಕ ಹಕ್ಕಿದೆ. ಛಾಯಾಚಿತ್ರ, ಚಲನಚಿತ್ರ, ಧ್ವನಿಮುದ್ರಣಗಳ ವಿಚಾರದಲ್ಲಿ ಅದು ಪ್ರಕಟಗೊಂಡ ಮರುವರ್ಷದಿಂದ ಐವತ್ತುವರ್ಷಗಳಕಾಲ ಆ ಹಕ್ಕು. ಸರ್ಕಾರಿ ಪ್ರಕಟನೆಗಳಲ್ಲಿ ಸರಕಾರ ಅದರ ಮೊತ್ತಮೊದಲಿನ ಕೃತಿಸ್ವಾಮ್ಯ ಹೊಂದಿದ್ದ ಪಕ್ಷದಲ್ಲಿ ಅದು ಪ್ರಕಟಗೊಂಡ ಮರುವರ್ಷದಿಂದ ಐವತ್ತುವರ್ಷಗಳಕಾಲ ಕೃತಿಸ್ವಾಮ್ಯ ಸರಕಾರದ್ದು. ಕೆಲವು ಅಂತರರಾಷ್ಟ್ರೀಯ ಸಂಸ್ಥೆಗಳೂ ಕೃತಿಸ್ವಾಮ್ಯ ಹೊಂದಿರಬಹುದು. ಆ ಸಂಸ್ಥೆಗಳು ಯಾವುವು ಎಂದು ಪ್ರಕಟಿಸುವ ಅಧಿಕಾರ ಕೇಂದ್ರ ಸರಕಾರದ್ದು. ಅವುಗಳಿಗೆ ಸೇರಿದ ಕೃತಿಗಳ ಸ್ವಾಮ್ಯ ಅವು ಪ್ರಕಟಗೊಂಡ ಮರುವರ್ಷದಿಂದ ಐವತ್ತುವರ್ಷಗಳ ತನಕ.

ಕೃತಿಸ್ವಾಮ್ಯದ ನೋಂದಣಿ :–ಕೃತಿಸ್ವಾಮ್ಯವನ್ನು ನೋಂದಣಿ (ರಿಜಿಸ್ಟ್ರೇಷನ್) ಮಾಡಬಹುದಾಗಿದೆ. ಕಾಯಿದೆಯಲ್ಲಿ ಇದಕ್ಕೆ ಅನುವಿದೆ. ಇದಕ್ಕಾಗಿ ರಿಜಿಸ್ಟ್ರೇಷನ್ ಕಚೇರಿ ತೆರೆಯಲಾಗಿದೆ. ಕೃತಿಯ ಹೆಸರು, ಕೃತಿಸ್ವಾಮ್ಯದ ಹಕ್ಕುದಾರ, ಪ್ರಕಟಿಸಿದವನ ಹೆಸರು, ಕೃತಿಕಾರನ ಹೆಸರು ಮುಂತಾದುವುಗಳನ್ನು ನೋಂದಣಿ ಮಾಡಿಸಬಹುದು. ಕೃತಿಸ್ವಾಮ್ಯದ ಹಕ್ಕುಳ್ಳವರು ಅದಕ್ಕಾಗಿ ಅದಕ್ಕೆ ನಿಗದಿಯಾಗಿರುವ ಅರ್ಜಿ ನಮೂನೆಯಲ್ಲಿ ಬರೆದು ಅದಕ್ಕೆ ಸಲ್ಲತಕ್ಕ ಶುಲ್ಕಕೊಟ್ಟು ಅದನ್ನು ಕಾಪಿರೈಟ್ ರಿಜಿಸ್ಟ್ರಾರರಿಗೆ ಸಲ್ಲಿಸಿದರೆ ಅವರು ಸೂಕ್ತ ವಿಚಾರಣೆ ನಡೆಯಿಸಿ ಕೃತಿಯನ್ನು ನೋಂದಣಿ ಮಾಡುತ್ತಾರೆ. ಕಾಪಿರೈಟ್ ರಿಜಿಸ್ಟರಿನಲ್ಲಿ ದಾಖಲಾದದ್ದು ಅಲ್ಲಿ ಬರೆದ ವಿಚಾರಗಳ ಬಗ್ಗೆ ಆಪಾತತಃ ಪುರಾವೆ (ಪ್ರೈಮಫೇಷಿಯ ಎವಿಡೆನ್ಸ್). ಅದರಲ್ಲಿ ಬರೆದದು ತಪ್ಪೆಂದು ಸಿದ್ಧವಾಗುವ ತನಕ ಅದು ಸತ್ಯವೆಂದು ಗಣಿಸಬೇಕು. ಕೆಲವು ಸಂದರ್ಭಗಳಲ್ಲಿ ಅದರಲ್ಲಿ ಬರೆದದ್ದನ್ನು ತಿದ್ದುಪಡಿಮಾಡುವ ಅಧಿಕಾರವನ್ನು ಕಾಪಿರೈಟ್ ರಿಜಿಸ್ಟ್ರಾರರಿಗೂ ಮಾಡಿಸುವ ಅಧಿಕಾರವನ್ನು ಬೋರ್ಡಿಗೂ ಕೊಡಲಾಗಿದೆ. ಕೃತಿಸಾಮ್ಯ ರಿಜಿಸ್ಟರಿನಲ್ಲಿ ಬರೆದ ವಿಚಾರಗಳು ಸಾರ್ವಜನಿಕರಿಗೆ ಜಾಹೀರು ಪಡಿಸಲಾದ (ನೋಟೀಸು) ವಿಚಾರಗಳೆಂದು ತಿಳಿಯತಕ್ಕದ್ದು.

ಕೃತಿಸ್ವಾಮ್ಯಚ್ಯುತಿ :–ಕೃತಿಯ ಒಡೆಯನ ಅಥವಾ ಕೃತಿಸ್ವಾಮ್ಯ ಬೋರ್ಡಿನ ಪರವಾನಿಗೆಯಿಲ್ಲದೆಯೋ ಕೊಟ್ಟ ಪರವಾನಿಗೆ ಷರತ್ತುಗಳಿಗೆ ವಿರೋಧವಾಗಿಯೋ ಯಾರಾದರೂ ಯಾವುದಾದರೂ ಕಾರ್ಯ ಮಾಡಿದರೆ, ಅಥವಾ ಕಾಯಿದೆಯ ಪ್ರಕಾರ ಕೃತಿಯ ಒಡೆಯನಿಗೆ ಕೊಡಲಾದ ಹಕ್ಕುಗಳನ್ನು ತಾನೇ ನಿರ್ವಹಿಸಿದ್ದಾದರೆ ಅವನು ಕೃತಿಸ್ವಾಮ್ಯಕ್ಕೆ ಚ್ಯುತಿತರುತ್ತಾನೆ. ಆತ ಮಾಡಿದ ಕೆಲಸ–ಅಥವಾ ಮಾಡಗೊಟ್ಟ ಪ್ರದರ್ಶನ ಕೃತಿಸ್ವಾಮ್ಯಕ್ಕೆ ಭಂಗ ತರುವಂಥದು ಎಂಬ ತಿಳಿವಳಿಕೆ ಅವನಿಗೆ ಇಲ್ಲದಿದ್ದರೆ ಅಥವಾ ಅದನ್ನು ತಿಳಿಯಲು ಆಸ್ಪದವಿಲ್ಲದಿದ್ದರೆ ಅವನು ಅಪರಾಧಿಯಾಗಲಾರ. ಕೃತಿಸ್ವಾಮ್ಯಕ್ಕೆ ಚ್ಯುತಿ ಬರುವ ಕೃತಿಯನ್ನು ಮಾರಾಟಕ್ಕೊ ಅಥವಾ ಬಾಡಿಗೆಗೊ ತಯಾರು ಮಾಡಿದರೆ, ಮಾರಾಟ ಮಾಡಿದರೆ ಅಥವಾ ಬಾಡಿಗೆಗೆ ಕೊಟ್ಟರೆ ಮಾರಾಟ ಪ್ರದರ್ಶನ (Trade display) ಮಾಡಿದರೆ ಮಾರಾಟ ಅಥವಾ ಬಾಡಿಗೆಗೆ ನೀಡುವುದಾಗಿ ಮುಂದೆ ಬಂದರೆ ಆತ ಕೃತಿಸ್ವಾಮ್ಯಕ್ಕೆ ಚ್ಯುತಿತರುತ್ತಾನೆ. ವ್ಯಾಪಾರಕ್ಕಾಗಿ ಅಂಥ ಕೃತಿಯನ್ನು ಹಂಚಿದರೆ (ಲಾಭದ ದೃಷ್ಟಿಯಿಂದ) ಅಥವಾ ಕೃತಿಸ್ವಾಮ್ಯಕ್ಕೆ ತೊಂದರೆ ಬರುವ ರೀತಿಯಲ್ಲಿ ಅದನ್ನು ಹಂಚಿದರೆ (ಧರ್ಮಾರ್ಥವಾಗಿ ಹಂಚುವ ಕೆಲಸವೂಕೂಡ) ಆಗಲೂ ಕೃತಿಸ್ವಾಮ್ಯಕ್ಕೆ ಚ್ಯುತಿಬರುತ್ತದೆ. ಅದನ್ನು ವ್ಯಾಪಾರಕ್ಕಾಗಿ ಬಹಿರಂಗವಾಗಿ ಪ್ರದರ್ಶಿಸಿದರೆ ಅಥವಾ ತನ್ನ ಉಪಯೋಗಕ್ಕಲ್ಲದೆ ಬೇರೆಯವರಿಗೆ ಅದನ್ನು ಸಾದರ ಪಡಿಸಿದರೆ ಕೃತಿಸ್ವಾಮ್ಯ ಚ್ಯುತಿಯ ತಪ್ಪಿಗೆ ಒಳಗಾಗಬೇಕಾಗುತ್ತದೆ. ಯಾವುದಾದರೂ ಸಾಹಿತ್ಯ, ನಾಟಕ, ಗಾಯನ ಅಥವಾ ಕಲಾಕೃತಿಯನ್ನು ಚಲನಚಿತ್ರ ರೂಪದಲ್ಲಿ ಪುನಃ ರಚಿಸಿದರೆ ಅದೂ ಕೃತಿಸ್ವಾಮದ ಚ್ಯುತಿಯೇ (ಕಲಂ ೫೧).

ಆದರೆ ಕೃತಿಸ್ವಾಮ್ಯವಿರಬೇಕಾದರೆ ಆ ಕೃತಿ ಕೃತಿಕಾರನದಾಗಿರಬೇಕು. ಅದು ಅವನ ಸ್ವಂತ ಬುದ್ಧಿಶಕ್ತಿ, ವಿವೇಕ ಜಾಣ್ಮೆಗಳ ಕೆಲಸಗಳಿಂದ ಕೂಡಿರಬೇಕು. ಒಂದು ಭಾವನೆಯ (ಐಡಿಯಾ) ಬಗ್ಗೆ ಯಾರಿಗೂ ಸ್ವಾಮ್ಯವಿಲ್ಲ. ರಾಮ ಕೊಟ್ಟ ಒಂದು ವಿಚಾರಕ್ಕೆ ಗೋವಿಂದ ಒಂದು ರೂಪು ಕೊಟ್ಟು ಕಥೆ ಬರೆದರೆ ರಾಮನಿಗೆ ಆ ಕಥೆಯಲ್ಲಿ ಯಾವ ಕೃತಿಸ್ವಾಮ್ಯವೂ ಇಲ್ಲ. ಕೃತಿಸ್ವಾಮ್ಯ ಗೋವಿಂದನಿಗೆ ಸೇರಿದುದು.

ಯಾವ ಕೃತಿಯೂ ಸಂಪೂರ್ಣವಾಗಿ ಮೂಲಭೂತ (ಒರಿಜಿನಲ್) ಎಂದು ಹೇಳುವುದು ಅಸಾಧ್ಯ. ಒಂದು ವಿಚಾರಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಓದಿ ಮಥಿಸಿ ತನ್ನದೇ ಆದ ಕ್ರಮದಲ್ಲಿ ಒಬ್ಬ ಒಂದು ಗ್ರಂಥ ಬರೆದರೆ ಅದು ಅವನ ಸ್ವಂತ ಕೃತಿ. ಇನ್ನೊಬ್ಬ ಅದೇ ವಿಚಾರದಲ್ಲಿ ಇನ್ನೊಂದು ಗ್ರಂಥ ಬರೆಯುವ ಹಕ್ಕು ತಪ್ಪುವುದಿಲ್ಲ. ಒಬ್ಬ ಪಟ್ಟ ಕಷ್ಟದ ಫಲಿತಾಂಶವನ್ನು ಇನ್ನೊಬ್ಬನು ಏನೂ ಪ್ರಯಾಸಪಡದೆ ತನ್ನ ಕೃತಿಯಲ್ಲಿ ಉಪಯೋಗಿಸಿದರೆ ಅನಂತರ ಬಂದ ಕೃತಿಯ ವಿನ್ಯಾಸ, ಭಾಷೆ ಇತ್ಯಾದಿಗಳನ್ನು ಪರಿಶೀಲಿಸುವಾಗ ಅದು ಮೊದಲು ಬರೆದ ಕೃತಿಯಲ್ಲಿ ಕಂಡ ಭಾವನೆಯನ್ನೇ ತರುವುದಿದ್ದರೆ ಅದು ಮೊದಲಿನ ಕೃತಿಯ ಚೌರ್ಯವೆನ್ನಬಹುದು. ಕೃತಿಯಲ್ಲಿ ವೈಯಕ್ತಿಕತೆಯು ಕೂಡಿರುವುದೇ ಎಂಬುದನ್ನು ಪರಿಶೀಲಿಸಬೇಕು. ಒಂದು ಕೃತಿಯಲ್ಲಿ ಏನಾದರೂ ವೈಯಕ್ತಿಕ ಕೆಲಸ, ಶ್ರಮ, ಬುದ್ಧಿಶಕ್ತಿಯ ಬಳಸುವಿಕೆ ಕಂಡು ಬಂದರೆ ಆ ಕೃತಿ ಅಂಥವನದಾಗುತ್ತದೆ. ಒಂದು ಕೃತಿಯ ಹೆಸರಿನಲ್ಲಿ (ಟೈಟಲ್) ಕೃತಿಸ್ವಾಮ್ಯವಿಲ್ಲ. ಮೊದಲಿನ ಕೃತಿಕಾರನೂ ಮತ್ತಿನ ಕೃತಿಕಾರನೂ ಒಂದೇ ಮೂಲದಿಂದ ತೆಗೆದು ಬೇರೆ ಬೇರೆ ಕೃತಿಗಳನ್ನು ರಚಿಸಿದರೆ ಮೊದಲಿನವನು 'ಕೃತಿಸ್ವಾಮ್ಯ' ತನ್ನದೆಂದು ವಾದಿಸಲಾರ. ಒಂದು ಮೂಲ ಗ್ರಂಥಕ್ಕೆ ಕೃತಿಸ್ವಾಮ್ಯವಿಲ್ಲದಾಗ ಅದನ್ನು ಒಬ್ಬಾತ ಭಾಷಾಂತರಿಸಿದರೆ ಆ ಭಾಷಾಂತರದಲ್ಲಿ ಅವನಿಗೆ ಕೃತಿಸ್ವಾಮ್ಯವಿದೆ. ಭಾಷಾಂತರ ಮಾಡಲು ಹಕ್ಕಿಲ್ಲದಿದ್ದರೆ ಭಾಷಾಂತರ ಮಾಡಿದವನ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವ ಹಕ್ಕು ಮೂಲ ಲೇಖಕನದು. ಅಂಥ ಭಾಷಾಂತರವನ್ನು ಹಕ್ಕಿಲ್ಲದೆ ಮಾಡಲಾದ ಮಾತ್ರಕ್ಕೆ ಇನ್ನೊಬ್ಬನ 'ಕೃತಿಸ್ವಾಮ್ಯ'ಕ್ಕೆ ಚ್ಯುತಿಬರುವ ವರ್ತನೆ ಕೈಗೊಳ್ಳಲು ಸಾಧ್ಯವಿಲ್ಲ. ಸ್ವಾಮ್ಯವಿಲ್ಲದ ಮೂಲಕೃತಿಯಿಂದ ಇಬ್ಬರು ಬೇರೆ ಬೇರೆಯಾಗಿ ಭಾಷಾಂತರ ಮಾಡಿ ಎರಡು ಭಾಷಾಂತರಗಳಿಗೂ ಯಾವ ಸಂಬಂಧವೂ ಇಲ್ಲದಿದ್ದರೆ ಇಬ್ಬರಿಗೂ ಅವರವರ ಭಾಷಾಂತರಗಳಲ್ಲಿ ಹಕ್ಕಿರುತ್ತದೆ. ಒಂದು ಕೃತಿಯಲ್ಲಿ ಸ್ವಾಮ್ಯ ಬರಬೇಕಾದರೆ ಅದು ಸಂಪೂರ್ಣ ಮೂಲಭೂತವಾಗಿರಬೇಕಿಲ್ಲ. ಅದು ಹೊಚ್ಚ ಹೊಸದು (Novel) ಆಗಿರಬೇಕೆಂದಿಲ್ಲ. ಒಬ್ಬ ನಮ್ಮ ಪುರಾಣಗಳಲ್ಲಿ ಬಾಲಸುಬ್ರಹ್ಮಣ್ಯನಿಗೆ ಹೇಳಿದ ಗುಣ, ರೂಪ, ವಾಹನ ಇತ್ಯಾದಿಗಳನ್ನು ತನ್ನ ಚಿತ್ರದಲ್ಲಿ ಅಳವಡಿಸಿ ತನ್ನ ಜಾಣ್ಮೆಯನ್ನು ನೀಡಿದಲ್ಲಿ ಅವನು ಬಿಡಿಸಿದ ಚಿತ್ರದಲ್ಲಿ ಅವನಿಗೆ ಕೃತಿಸ್ವಾಮ್ಯವಿದೆ. ಅಲ್ಲಿ ಇಷ್ಟು ಇಲ್ಲಿ ಇಷ್ಟು ಕತ್ತರಿಸಿ ಮೂಲದ ಭಾಷೆ, ಮೂಲದ ಕ್ರಮ, ಮೂಲ ನಿರೂಪಣೆಯನ್ನು ಯಥಾವತ್ತಾಗಿಟ್ಟು 'ದಿ ಸ್ಟೋರೀಸ್ ಫ್ರಾಮ ಟಾಗೋರ್' ಎಂಬ

ಪುಸ್ತಕದಿಂದ ಆಯ್ದ ಸಂಕ್ಷಿಪ್ತ ರೂಪದ ಪುಸ್ತಕವನ್ನು ಒಬ್ಬ ಪ್ರಕಟಿಸಿದಲ್ಲಿ ಅದು ಕೃತಿ ಸ್ವಾಮ್ಯದ ಚ್ಯುತಿಗೆ ಎಡೆಕೊಡುತ್ತದೆ. ಸಂಕ್ಷಿಪ್ತ ರೂಪದ ಪುಸ್ತಕದಲ್ಲಿ ಇರುವ ಶಬ್ದಗಳ ಸಂಖ್ಯೆಗಳಿಗೂ ಮೂಲದಲ್ಲಿ ಇರುವ ಶಬ್ದಗಳ ಸಂಖ್ಯೆಗಳಿಗೂ ಹೋಲಿಕೆ, ಸಂಕ್ಷಿಪ್ತ ರೂಪದ ಪುಸ್ತಕದಿಂದ ಒದಗಬಹುದಾದ ಹಣ ಇತ್ಯಾದಿಗಳು ಕೃತಿಸ್ವಾಮ್ಯದ ಚ್ಯುತಿಯನ್ನು ನಿರ್ಧರಿಸುವಲ್ಲಿ ಪ್ರಯೋಜನಕ್ಕೆ ಬಾರದ ಸಂಗತಿಗಳು. ಕೃತಿಸ್ವಾಮ್ಯದ ಚ್ಯುತಿಯ ಪ್ರಶ್ನೆ ಬಂದಾಗ ನಿರ್ಧರಿಸಬೇಕಾದ್ದು ಮತ್ತಿನ ಕೃತಿಕಾರ ಮೊದಲಿನ ಕೃತಿ ಕಾರನ ಕ್ರಮ, ವಿನ್ಯಾಸ, ಶಬ್ದ ಸಡಗರಗಳನ್ನು ಬಳಸಿದನೇ ಎಂಬುದು. ಹಿಂದಿನ ಗ್ರಂಥಗಳನ್ನು ಆಧರಿಸಿ ಬರೆದರೂ ಬಳಿಕ ಬರೆದವನು ತನ್ನದೇ ಆದ ರೀತಿ, ತನ್ನ ಬುದ್ಧಿ ಶಕ್ತಿ, ತನ್ನದೇ ಶ್ರಮವನ್ನು ಉಪಯೋಗಿಸಿದಲ್ಲಿ ಮತ್ತಿನ ಗ್ರಂಥದಲ್ಲಿ ಮೂಲಭೂತತೆ (ಒರಿಜಿನಾಲಿಟಿ) ಎಷ್ಟು ಕಡಿಮೆಯಿದ್ದರೂ ಮತ್ತಿನ ಗ್ರಂಥವೂ ಬರೆದವನದಾಗುತ್ತದೆ. ಹಿಂದಿನ ಗ್ರಂಥಗಳಲ್ಲಿ ಬರೆದದ್ದನ್ನು ಅರಗಿಸಿಕೊಂಡು ಪರಿಪಕ್ವ ಪಡೆದ ಫಲವಾಗಿ ವಿಶಿಷ್ಟ ಪ್ರತಿಭೆಯಿಂದ ಇನ್ನೊಂದು ಗ್ರಂಥ ಆವಿರ್ಭವಿಸಿದಲ್ಲಿ ಅದು ಮೊದಲು ಬರೆದ ಕೃತಿಗಳ ಗ್ರಂಥಸ್ವಾಮ್ಯದ ಚ್ಯುತಿಯೆನಿಸಲಾರದು. ಈ ದೃಷ್ಟಿಯಿಂದ ಕೃತಿಗಳನ್ನು ಪರೀಕ್ಷಿಸಿ ದಾಗ, ನಿಘಂಟುಗಳು, ಗೆಜೆಟಿಯರುಗಳು, ಪ್ರಶ್ನೆಪತ್ರಿಕೆಗಳು, ಸಂಗ್ರಹಗಳು ಇತ್ಯಾದಿಗಳೆಲ್ಲ 'ಕೃತಿಸ್ವಾಮ್ಯ' ಇರುವ ಕೃತಿಗಳು. (ಮೇಲೆ ಬರೆದದ್ದನ್ನು ನಮ್ಮ ಉಚ್ಚ ನ್ಯಾಯಾಲಯಗಳ ತೀರ್ಪುಗಳನ್ನು ಆಧರಿಸಿ ಉದಾಹರಣಾ ರೂಪದಿಂದ ಕೊಡಲಾಗಿದೆ.)

ಕೃತಿಸ್ವಾಮ್ಯಕ್ಕೆ ಚ್ಯುತಿ ಯಾವಾಗ ತಪ್ಪೆನಿಸುತ್ತದೆಂಬುದನ್ನು ಐವತ್ತೊಂದನೆಯ ಕಲಮು ನಿರ್ಧರಿಸುತ್ತದೆ. ಇದರ ಪ್ರಕಾರ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೃತಿಸ್ವಾಮ್ಯ ಚ್ಯುತಿ ಮಾಡಿದರೆ ಅದು ತಪ್ಪಾಗುತ್ತದೆ. ಕೃತಿಸ್ವಾಮ್ಯವುಳ್ಳ ಕೃತಿಯ ಅನುಕರಣೆ ಯನ್ನು ಇನ್ನೊಬ್ಬ ಮಾಡಿದ್ದಾದರೆ ಅದು ಸ್ವಾಮ್ಯದ ಚ್ಯುತಿ ತರುತ್ತದೆ ಎಂದು ಹಾಲಬರಿ ಹೇಳುತ್ತಾನೆ. ತಾನು ಅದನ್ನು ಅರಿಯದೆ ಮಾಡಿದೆನೆಂದು ಚ್ಯುತಿತಂದವ ಹೇಳಲು ಸಾಧ್ಯವಿಲ್ಲ. ಕೃತಿಸ್ವಾಮ್ಯ ಒಡೆತನದ (ಪ್ರೊಪ್ರೈಟರಿ) ಹಕ್ಕು. ಇದನ್ನು ನಿರ್ಧರಿಸು ವಲ್ಲಿ ಚ್ಯುತಿಮಾಡಿದವನ ಉದ್ದೇಶವನ್ನು ಗಮನಿಸುವುದು ಅನವಶ್ಯ. ಕೃತಿಸ್ವಾಮ್ಯ ವಿರುವವನು ಅದರ ಮಹತ್ತರವಾದ ಭಾಗವನ್ನು ಇನ್ನೊಬ್ಬನು ಎತ್ತುವುದನ್ನು ತಡೆಯ ಬಹುದು. ಮಹತ್ತರಭಾಗ (Substantial) ಎಂಬುದು ವಿಸ್ತಾರ ಮತ್ತು ಮಹತ್ವ ಎರಡನ್ನೂ ಕೂಡಿಕೊಂಡಿದೆ. ಎರಡು ಪುಸ್ತಕಗಳೂ ಒಂದೇ ಮೂಲ ಗ್ರಂಥದಿಂದ ಉತ್ಪತ್ತಿ ಹೊಂದಿದರೆ ಅವುಗಳಲ್ಲಿ ಸಾಮ್ಯತೆ ಇದ್ದರೂ ಸ್ವಾಮ್ಯಚ್ಯುತಿ ಬರಲಾರದು. ಉಚ್ಚ ನ್ಯಾಯಾಸ್ಥಾನಗಳಲ್ಲಿ ನಡೆದ ಮೊಕದ್ದಮೆಗಳ ತೀರ್ಪುಗಳು ಎಲ್ಲರಿಗೂ ಮೂಲ. ಅವುಗಳನ್ನು ಬಳಸಿಕೊಂಡು ನ್ಯಾಯಶಾಸ್ತ್ರದ ವಿಚಾರದಲ್ಲಿ ಬರೆಯುವಾಗ ಯಾರೂ ಬರೆಯಬಹುದಾಗಿದೆ. ನಿಘಂಟುಗಳು ವ್ಯಾಕರಣ ಪುಸ್ತಕಗಳು, ಪಂಚಾಂಗಗಳು ಕಾನೂನಿನ ಪುಸ್ತಕಗಳು ಇತ್ಯಾದಿ ಪುಸ್ತಕಗಳಲ್ಲಿ ಆ ವಿಚಾರಗಳಲ್ಲಿ ಇನ್ನೊಂದು

ಪುಸ್ತಕದ ಸಾಮ್ಯತೆ ಇರುವುದು ಸಹಜ. ಇವೆಲ್ಲವನ್ನೂ ಮೂಲ ಗ್ರಂಥಗಳನ್ನು ಆಧರಿಸಿ ಬರೆಯಲಾಗುತ್ತದೆ. ಆದರೆ ಒಂದು ಗ್ರಂಥವನ್ನು ಇನ್ನೊಂದು ಗ್ರಂಥದ ನೆನಪಿನಿಂದ ಬರೆದರೆ ಅದು ಕೃತಿಚೌರ್ಯವಾಗದಿರದು. ಕೃತಿಚೌರ್ಯವಾಗಬೇಕಾದರೆ ಅಕ್ಷರಶಃ ಇನ್ನೊಂದು ಗ್ರಂಥದಿಂದ ಎತ್ತಬೇಕೆಂದಿಲ್ಲ. ಅದರ ಛಾಯಾನುಕರಣೆ (ಕಲರಬಲ್ ಇಮಿಟೇಷನ್) ಇದ್ದರೂ ಕೃತಿಚೌರ್ಯವಾಗುತ್ತದೆ. ಸಾಮ್ಯತೆ ಕಾಕತಾಳೀಯದಿಂದ ಬಂದರೆ ಅದು ಕೃತಿಚೌರ್ಯವಾಗದು. ಕೃತಿಸ್ವಾಮ್ಯಚ್ಯುತಿ ಯಾವ ಸಂದರ್ಭಗಳಲ್ಲಿ ಬರುವುದಿಲ್ಲವೆಂಬುದನ್ನು ೫೨ನೆಯ ಕಲಮು ವಿಶದವಾಗಿಯೂ ಸುದೀರ್ಘವಾಗಿಯೂ ಹೇಳುತ್ತದೆ. ಅದು ಕೃತಿಸ್ವಾಮ್ಯದ ಕೃತಿಗಳನ್ನು ನ್ಯಾಯವಾಗಿ ಎಷ್ಟರ ಮಟ್ಟಿಗೆ ಯಾವ ಸಂದರ್ಭಗಳಲ್ಲಿ ಬಳಸಬಹುದಾಗಿದೆ ಎಂಬುದನ್ನು ನಿರ್ಧರಿಸುತ್ತದೆ. ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಹೇಳುವುದು ಈ ಲೇಖನದ ಗುರಿಗೆ ಮೀರಿದ್ದು. ಕೃತಿಸ್ವಾಮ್ಯದ ಕಾಯಿದೆ ಬಂದಾಗಿನಿಂದಲೂ ಕೃತಿಸ್ವಾಮ್ಯ ಕೃತಿಯ ನ್ಯಾಯವಾದ ಉಪಯೋಗ ಮಾಡಲು ಬಿಡಲಾಗುತ್ತಿದೆ. ವಿಜ್ಞಾನ ಕಲೆಗಳ, ಜನಾಂಗದ ಬೆಳವಣಿಗೆಗೆ ಇಂಥ ಉಪಯೋಗ ಅಗತ್ಯ. ಹೀಗೆ ಉಪಯೋಗಿಸುವ ಹಕ್ಕನ್ನೇ 'ನ್ಯಾಯವಾದ ಉಪಯೋಗ' ಎಂದು ಕರೆಯಲಾಗುತ್ತದೆ. 'ನ್ಯಾಯವಾದ ಉಪಯೋಗ'ದ ನಿಷ್ಕರ್ಷೆ ಬಹಳ ಕಠಿಣವಾದ ಸಮಸ್ಯೆ. ಅದರ ನಿಷ್ಕರ್ಷೆ ಆಯಾಯ ಮೊಕದ್ದಮೆಯ ವಿಚಾರವನ್ನು ಹೊಂದಿಕೊಂಡಿದೆ. ನ್ಯಾಯವಾದ ಉಪಯೋಗ ಹೌದೇ ಅಲ್ಲವೇ ಎಂಬುದನ್ನು ನಿರ್ಧರಿಸುವಾಗ ಮೂರು ವಿಷಯಗಳನ್ನು ಗಮನಿಸುವ ಕ್ರಮವಿದೆ. ಮೊದಲನೆಯದಾಗಿ ಕೃತಿಗಳ ಸ್ವಭಾವ, ವ್ಯಾಪ್ತಿ, ಉದ್ದೇಶ ಇವುಗಳ ವಿಮರ್ಶೆ—ಇವು ಒಂದೇ ತೆರನಾಗಿದ್ದರೆ ಎರಡು ಕೃತಿಗಳೂ ಸ್ಪರ್ಧೆಯವು (ಕಾಂಪಿಟಿಟಿವ್). ಹೀಗಿದ್ದಲ್ಲಿ ಒಂದೇ ರೀತಿಯ ಜನ ಇವುಗಳನ್ನು ಬಳಸುತ್ತಾರೆ. ಇವುಗಳಲ್ಲಿ ಯಾವುದಾದರೂ ಸರಿಯೇ ಎಂಬ ಭಾವನೆ ಬರುವುದರಿಂದ ಇವನ್ನು ಒಂದೇ ಮಾರುಕಟ್ಟೆಯಲ್ಲಿ ಮಾರಲಾಗುತ್ತದೆ. ಗ್ರಾಹಕರು ಯಾವುದಾದರೂ ಒಂದು ಕೃತಿಯನ್ನು ತಮ್ಮ ಉಪಯೋಗಕ್ಕೆ ಬಳಸುವುದರಿಂದ ಒಂದು ಕೃತಿಯಿಂದ ಇನ್ನೊಂದು ಕೃತಿಗೆ ನಷ್ಟ ಬಂದೊದಗುತ್ತದೆ. ಆದ್ದರಿಂದ ಎರಡನೇ ಕೃತಿ ಮೊದಲನೆಯ ಕೃತಿಯ ಒಡೆಯನಿಗೆ ನಷ್ಟ ತರುತ್ತದೆ. ಇಲ್ಲಿ ಕೃತಿಸ್ವಾಮ್ಯ ಚ್ಯುತಿ ಬರುತ್ತದೆ. ಆದರೆ ಇವುಗಳ ಸ್ವಭಾವ ಇತ್ಯಾದಿಗಳು ಬೇರೆಯಾಗಿದ್ದಲ್ಲಿ ಇವೆರಡರ ಗ್ರಾಹಕರೂ ಬೇರೆ ರೀತಿಯ ಜನರಾಗಿರುತ್ತಾರೆ. ಈ ಸಂದರ್ಭದಲ್ಲಿ ಮೊದಲಿನ ಕೃತಿಯನ್ನು ಆಧರಿಸಿ ಬರೆಯಲು ಹೆಚ್ಚಿನ ಸೌಲಭ್ಯಕೊಟ್ಟಲ್ಲಿ ತೊಂದರೆಬರುವುದಿಲ್ಲ. ಎರಡು ಕೃತಿಗಳೂ ಒಂದನ್ನೊಂದು ಸ್ಪರ್ಧಿಸುವ ಪ್ರಮೇಯವಿಲ್ಲದಿದ್ದರೂ ಲಾಭದಾಯಕ ವ್ಯಾಪಾರದ ದೃಷ್ಟಿಯಿಟ್ಟು ಎರಡನೇ ಕೃತಿ ಮೊದಲನೆಯ ಕೃತಿಯಿಂದ ಎತ್ತಲಾದ ಭಾಗಗಳಿಂದ ಕೂಡಿದ್ದಾದರೆ ಆಗ ಅದು ನ್ಯಾಯವಾದ ಬಳಸುವಿಕೆ ಆಗಲಾರದು. ಆದರೆ ಎರಡನೆಯ ಕೃತಿಯನ್ನು ವೃತ್ತಿಯ ಉದ್ದೇಶದಿಂದ(ಪ್ರೊಫೆಷನಲ್ ಮೋಟಿವ್) ಮಾಡಲಾಗಿದ್ದರೆ ಆಗ ಅದನ್ನು ನ್ಯಾಯವಾದ ಬಳಸುವಿಕೆ ಎಂದು ಹೇಳಬಹುದು.

ಎರಡನೆಯದಾಗಿ, ಮೊದಲನೆಯ ಕೃತಿಯನ್ನು ಎಷ್ಟರಮಟ್ಟಿಗೆ ಎರಡನೆಯ ಕೃತಿ ತೆಗೆದುಕೊಂಡಿದೆ, ತೆಗೆದುಕೊಂಡದ್ದು ಕೃತಿಯ ಪ್ರಮುಖ ಅಂಶವೆ, ತೆಗೆದುಕೊಂಡ ಭಾಗ ಎಷ್ಟರ ಮಟ್ಟಿಗೆ ಕೃತಿಗೆ ರೂಪವನ್ನು ಕೊಟ್ಟಿದೆ—ಎಂಬುದರ ವಿಮರ್ಶೆಯನ್ನೂ ಮಾಡಬೇಕು. ಎರಡನೆಯ ಕೃತಿಯಲ್ಲಿ ಒಂದನೆಯ ಕೃತಿಯಿಂದ ತೆಗೆದುಕೊಂಡ ಭಾಗದ ವಿಸ್ತಾರ ಪ್ರಮುಖವಲ್ಲ. ವಿಸ್ತಾರ ಬಹಳ ಸ್ವಲ್ಪ ಇರಬಹುದು. ಆದರೆ ತೆಗೆದುಕೊಂಡ ಭಾಗದ ಪ್ರಾಮುಖ್ಯ ಘನವಾಗಿರಬಹುದು. ಅದು ಘನವಾಗಿದ್ದಲ್ಲಿ ಅದು ನ್ಯಾಯವಾದ ಬಳಸುವಿಕೆಯಾಗಲಾರದು. ಮೊದಲನೆಯವನು ಕೃತಿರಚನೆಗಾಗಿ ಮಾಡಿದ ಮಾನಸಿಕ ಕೆಲಸ, ದೈಹಿಕಶ್ರಮ, ಹಣದವೆಚ್ಚ, ಇವುಗಳನ್ನು ಎರಡನೆಯವನು ಅಪಹರಿಸಿದನೇ ಎಂಬುದನ್ನು ನ್ಯಾಯಾಲಯ ಕಂಡುಹಿಡಿಯಬೇಕು. ಮೂರನೆಯದಾಗಿ ಉದ್ದೇಶದ ವಿಮರ್ಶೆ. ಉದ್ದೇಶವು ಕೃತಿಸ್ವಾಮ್ಯದ ವಿಚಾರದಲ್ಲಿ ಗೌಣವಾಗಿದ್ದಿರಬಹುದು. ಆದರೂ ನ್ಯಾಯವಾದ ಬಳಸುವಿಕೆಯನ್ನೂ ವಿಮರ್ಶೆ ಮಾಡುವಾಗ ಉದ್ದೇಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಲಾಭದ ಉದ್ದೇಶವಿಲ್ಲವಾದರೆ ಬಳಸುವಿಕೆ ನ್ಯಾಯವಾದದ್ದೆಂದು ಅದನ್ನು ನ್ಯಾಯಾಲಯ ಎತ್ತಿಹಿಡಿಯಲು ಸಾಧ್ಯವಿದೆ. ನ್ಯಾಯವಾದ ಬಳಸುವಿಕೆಯ ಪ್ರಶ್ನೆ ಕೃತಿಯಿಂದ ಕೃತಿಗೆ ಬೇರೆಬೇರೆಯಾಗಿದೆ. ಉದಾಹರಣೆಗಾಗಿ ನಿಘಂಟುಗಳ ವಿಚಾರದಲ್ಲಿ ಅನ್ವಯವಾಗುವ ನ್ಯಾಯವಾದ ಬಳಸುವಿಕೆಯ ನಿಯಮಗಳು ಕಲೆ ಅಥವಾ ವೈಜ್ಞಾನಿಕ ಪುಸ್ತಕಗಳಿಗೆ ಸರಿಹೊಂದಲಾರವು. ಅದೇ ರೀತಿಯಲ್ಲಿ ಪುಸ್ತಕದ ರೂಪದಲ್ಲಿ ಕೃತಿಸ್ವಾಮ್ಯಕ್ಕೆ ಚ್ಯುತಿತಂದರೆ ಅದು ನಾಟಕವನ್ನು ಅಡಿತೋರಿಸಿ ಕೃತಿಸ್ವಾಮ್ಯಕ್ಕೆ ಚ್ಯುತಿತಂದಷ್ಟು ಪ್ರಖರವಾಗಿರದು.

ಕೃತಿಸ್ವಾಮ್ಯಕ್ಕೆ ಚ್ಯುತಿಬಂದಾಗ ನಿವೃತ್ತಿಗಳು :-ಕೃತಿಸ್ವಾಮ್ಯಕ್ಕೆ ಚ್ಯುತಿ ಬಂದಾಗ ತಡೆಯಾಜ್ಞೆ (ಇಂಜಂಕ್ಷನ್), ನಷ್ಟವನ್ನು ಕೇಳುವುದು, ಇತ್ಯಾದಿಯಾಗಿ ಕಾನೂನು ಪ್ರಕಾರ ಇರುವ ನಿವೃತ್ತಿಗಳನ್ನು ಕೇಳಬಹುದು. ಆದರೆ ಕೃತಿಸ್ವಾಮ್ಯ ಚ್ಯುತಿಯಾದ ಸಮಯದಲ್ಲಿ ಪ್ರತಿವಾದಿಗೆ ಕೃತಿಸ್ವಾಮ್ಯ ಇರುವ ವಿಚಾರ ತಿಳಿಯದಿದ್ದರೆ ವಾದಿ ತಡೆಯಾಜ್ಞೆ ಮತ್ತು ಪ್ರತಿವಾದಿ ಪಡೆದ ಲಾಭವನ್ನು ಪಡೆಯುವ ಹಕ್ಕನ್ನಲ್ಲದೆ ಬೇರೇನನ್ನೂ ಪಡೆಯಲಾರ. ವ್ಯಾಜ್ಯದ ಖರ್ಚನ್ನು ಕೊಡಿಸುವುದು ಬಿಡಿಸುವುದು ನ್ಯಾಯಾಲಯದ ಇಷ್ಟಕ್ಕೆ ಬಿಟ್ಟದ್ದು. ಕೃತಿಸ್ವಾಮ್ಯದ ವಿಚಾರದಲ್ಲಿ ಬೇರೆ ಬೇರೆಯವರಿಗೆ ಬೇರೆ ಬೇರೆ ಹಕ್ಕುಗಳಿದ್ದರೆ ಅವರವರು ತಮ್ಮ ತಮ್ಮ ಹಕ್ಕುಗಳಿಗೆ ಚ್ಯುತಿಬಂದಾಗ ಬೇರೆ ಹಕ್ಕುಳ್ಳವರನ್ನು ಸೇರಿಸದೆ ವ್ಯಾಜ್ಯತರಬಹುದು. ಯಾರಲ್ಲಿ ಕೃತಿಸ್ವಾಮ್ಯವಿದ್ದರೂ, ತನ್ನ ಕೃತಿಯನ್ನು ಇನ್ನೊಬ್ಬ ರೂಪುಗೆಡಿಸಿದರೆ, ಮೊಟಕುಮಾಡಿದರೆ (ಮ್ಯೂಟಿಲೇಷನ್) ಅಥವಾ ಅದನ್ನು ಬದಲಾಯಿಸಿದರೆ (ಮಾಡಿಫಿಕೇಷನ್) ಅಥವಾ ಲೇಖಕನ ಘನತೆಗೆ ಕುಂದುಬರುವ ಕೆಲಸಮಾಡಿದರೆ, ಕೃತಿಯಲ್ಲಿ ಕೃತಿಕಾರತ್ವ ಹಕ್ಕಿನಿಂದ ಆ ಇನ್ನೊಬ್ಬನ ಮೇಲೆ ಕೃತಿಕಾರ ತಡೆಯಾಜ್ಞೆ ತರಬಹುದು ಅಥವಾ ಅವನಿಂದ ನಷ್ಟವನ್ನು ಕೇಳಬಹುದು. ಆದರೆ ಒಂದರ ಕೃತಿಸ್ವಾಮ್ಯವನ್ನು ಚ್ಯುತಿಗೊಳಿಸುವ ರೀತಿಯಲ್ಲಿ ಒಂದು

ರಚನೆಯನ್ನಾರಂಭಿಸಿದ್ದಲ್ಲಿ ಆದಕ್ಕೆ ನಿವೃತ್ತಿಯಿಲ್ಲವೆಂದು ಈ ಕಾಯಿದೆ ಖಚಿತಗೊಳಿಸುತ್ತದೆ. ಒಬ್ಬ ಕೃತಿಸ್ವಾಮ್ಯವು ತನ್ನಲ್ಲಿದೆಯೆಂದು ವೃಥಾಕಾರಣವಾಗಿ ಆರೋಪಿಸಿ ಇನ್ನೊಬ್ಬನಿಗೆ ಯಾವುದಾದರೂ ತೆರದಲ್ಲಿ ಕಿರುಕುಳಕೊಟ್ಟರೆ ಅವನು ತನ್ನ ಹಕ್ಕನ್ನು ಸ್ಥಾಪಿಸಲು ನ್ಯಾಯಾಲಯದಲ್ಲಿ ಜಾಹೀರು ವ್ಯಾಜ್ಯ (ಡಿಕ್ಲರೇಟರಿ ಸೂಟ್) ದಾಖಲು ಮಾಡಬಹುದು. ಈ ವ್ಯಾಜ್ಯಗಳನ್ನೆಲ್ಲಾ ಜಿಲ್ಲಾ ನ್ಯಾಯಾಧೀಶರಲ್ಲೇ ಹೂಡಬೇಕು. ಈ ಕೃತಿಸ್ವಾಮ್ಯಕ್ಕೆ ಚ್ಯುತಿಬಂದಾಗ ಅದನ್ನು ಅಪರಾಧವೆಂದು ಗಣಿಸಿ ಒಂದು ವರ್ಷದ ಶಿಕ್ಷೆ ಅಥವಾ ಜುಲ್ಮಾನೆ ಅಥವಾ ಎರಡನ್ನೂ ವಿಧಿಸುವ ಹಕ್ಕನ್ನು ಈ ಕಾಯಿದೆ ನ್ಯಾಯಾಲಯಕ್ಕೆ ಕೊಟ್ಟಿದೆ. ಕಾಯಿದೆಯಲ್ಲಿ ನಿರ್ದೇಶಿಸಲಾದ ಪೋಲೀಸ್ ಅಧಿಕಾರಿಗಳಿಗೆ ಕೆಲವು ಸಂದರ್ಭಗಳಲ್ಲಿ ಕೃತಿಸ್ವಾಮ್ಯ ಚ್ಯುತಿತರುವ ಕೃತಿಗಳನ್ನು ಸ್ವಾಧೀನಪಡಿಸುವ ಹಕ್ಕನ್ನು ಕೊಡಲಾಗಿದೆ. ಸಿವಿಲ್ ಕೋರ್ಟಿನ ತೀರ್ಪಿನಿಂದ ಆದರ ಮೇಲಿನ ಕೋರ್ಟಿಗೋ, ಕಾಪಿರೈಟ್ ರಿಜಿಸ್ಟ್ರಾರರ ತೀರ್ಪಿನಿಂದ ಕಾಪಿರೈಟ್ ಬೋರ್ಡಿಗೋ ಅಪೀಲು ಮಾಡಿಕೊಳ್ಳುವ ಹಕ್ಕನ್ನು ವ್ಯಾಜ್ಯದಲ್ಲಿ ಸೋತವರಿಗೆ ಕೊಡಲಾಗಿದೆ. ಕಾಪಿರೈಟ್ ಬೋರ್ಡಿನ ತೀರ್ಪಿನಿಂದ ಉಚ್ಚನ್ಯಾಯಾಲಯಕ್ಕೆ ಅಪೀಲು ಮಾಡಬಹುದು.

ಕೃತಿಸ್ವಾಮ್ಯ ಅಧಿಕಾರಿಗಳು ಇತ್ಯಾದಿ :–ಈ ಕಾಯಿದೆಯನ್ನು ಸರಿಯಾಗಿ ವ್ಯವಸ್ಥಿತವಾಗಿ ಜಾರಿಮಾಡುವ ಬಗ್ಗೆ ಕಾಪಿರೈಟ್ ಆಫೀಸು, ಕಾಪಿರೈಟ್ ರಿಜಿಸ್ಟ್ರಾರ್ ಡೆಪ್ಯುಟಿ ರಿಜಿಸ್ಟ್ರಾರ್ ಮತ್ತು ಕಾಪಿರೈಟ್ ಬೋರ್ಡುಗಳನ್ನು ರಚಿಸಲಾಗಿದ್ದು ಈ ಅಧಿಕಾರಿಗಳ ಹಾಗೂ ಅಧಿಕರ್ತೃಗಳ ಕೆಲಸಗಳನ್ನು ಕಾಯಿದೆಯಲ್ಲಿ ನಿರೂಪಿಸಲಾಗಿದೆ. ಕಾಯಿದೆಯಲ್ಲಿ ಪ್ರದರ್ಶಕ ಹಕ್ಕುಗಳ ಸಂಘ (Performing rights Society), ಬಾನುಲಿ ಪ್ರಸಾರ ಸಂಘ (Broadcasting Society) ಇವುಗಳ ಹಕ್ಕುಬಾಧ್ಯತೆಗಳ ಬಗ್ಗೆ ಸೂಕ್ತ ಕಲಮುಗಳಿವೆ. ಅಂತರರಾಷ್ಟ್ರೀಯ ಕೃತಿಸ್ವಾಮ್ಯದ ವಿಚಾರವಾಗಿ ವಿವಿಧ ವಿಧಿಗಳಿವೆ.

ಈ ಲೇಖನ ಕೃತಿಸ್ವಾಮ್ಯದ ವಿಚಾರದ ಪಕ್ಷಿನೋಟ. ಇದರ ಬಗ್ಗೆ ಪ್ರಮುಖವಾದ ವಿಷಯಗಳನ್ನು ಮಾತ್ರ ನಿರೂಪಿಸಲಾಗಿದೆ. ಕಾನೂನಿನ ಬಹುಮುಖ ಬ್ರಹ್ಮನ ಈ ಮುಖವೂ ಸಮಾಜದ ಸ್ವಾಸ್ಥ್ಯವನ್ನು ರಕ್ಷಿಸುತ್ತದೆ.

ಪಿ. ಕೆ. ಪಾಟೀಲ್

ಭಾರತದಲ್ಲಿ ಗ್ರಂಥಸೂಚಿಗಳ ರಚನೆ ಮತ್ತು ವಿಕಾಸ

ಪಾಂಡಿತ್ಯಪೂರ್ಣ ಯತ್ನದ ಫಲವಾಗಿ ಭಾರತದಲ್ಲಿ ಗ್ರಂಥಸೂಚಿಗಳ ರಚನೆ ಇತ್ತೀಚಿಗೆ ಮಾತ್ರ ಬೆಳೆದಿದೆ. ಭಾರತ ಸ್ವತಂತ್ರವಾಗುವ ಮುನ್ನ ಹಲವೇ ಗ್ರಂಥ ಸೂಚಿ ಸಾಧನಗಳಿದ್ದುದು ಗ್ರಂಥಸೂಚಿಗಳ ಪ್ರಮಾಣ ವರ್ಷಗಳನ್ನು ನೋಡಿದರೆ ತಿಳಿಯುತ್ತದೆ. ಸಾಧಾರಣ ಮಾತುಗಳಲ್ಲಿ ಹೇಳುವುದಾದರೆ ಗ್ರಂಥಸೂಚಿಗಳೆಂದು ಕರೆಯುವ ಈ ಪುಸ್ತಕಗಳು ಪುಸ್ತಕಗಳ ಪಟ್ಟಿಗಳಾಗಿದ್ದು ಗ್ರಂಥಸೂಚಿ ಸಾಧನಗಳಾಗಿ ಹೆಚ್ಚು ಉಪಯೋಗಾರ್ಹವಾಗಿರಲಿಲ್ಲ. ಅವು ಸಮಗ್ರವಾಗಿಲ್ಲ ಮತ್ತು ಇತ್ತೀಚಿನ ಮಾಹಿತಿಗಳನ್ನು ಪಡೆದಿಲ್ಲ. ಆದರೆ ಅವು ಪೂರ್ವವ್ಯಾಪ್ತಿಯುಳ್ಳ ಗ್ರಂಥಸೂಚಿಗಳ ರಚನೆಗೆ ಮುಖ್ಯ ಆಧಾರಸಾಮಗ್ರಿಗಳಾಗಿರುತ್ತವೆ. ಗ್ರಂಥಸೂಚಿಗಳ ವ್ಯವಸ್ಥೆ ಹಾಗೂ ಹತೋಟಿಗೆ ಸರಕಾರ ನಡೆಸಿದ ಪ್ರಥಮ ವ್ಯವಸ್ಥಿತ ಯತ್ನವೆಂದರೆ ೧೯೫೭ರಲ್ಲಿ ಆರಂಭವಾದ ಭಾರತ ರಾಷ್ಟ್ರೀಯ ಗ್ರಂಥಸೂಚಿ ಎಂದು ಧಾರಾಳವಾಗಿ ಹೇಳಬಹುದು.

ಸಂಶೋಧನಕೇಂದ್ರಗಳಾಗಿರುವ ದೊಡ್ಡ ಹಾಗೂ ವ್ಯವಸ್ಥಿತ ಗ್ರಂಥಾಲಯ ಗಳಿರುವ ದೇಶಗಳಲ್ಲಿ ಗ್ರಂಥಸೂಚಿಗಳ ಪ್ರಾಮುಖ್ಯ ಮನವರಿಕೆಯಾಗಿದೆ. ಈ ಶತಮಾನದ ಆರಂಭದ ವರೆಗೆ ಭಾರತದಲ್ಲಿದ್ದ ಗ್ರಂಥಾಲಯಗಳ ಸಂಖ್ಯೆ ಕಡಿಮೆ; ಸುಮಾರಾಗಿ ದೊಡ್ಡದಾಗಿದ್ದ ಗ್ರಂಥಾಲಯಗಳ ಸಂಖ್ಯೆಯನ್ನು ಬೆರಳುಗಳಲ್ಲಿ ಎಣಿಸಬಹುದಾದಷ್ಟು ಅಲ್ಪ. ಸಾಕ್ಷರತೆ ಹಬ್ಬಿದಂತೆ, ಪ್ರಾದೇಶಿಕ ಭಾಷೆಗಳು ಅಭಿವೃದ್ಧಿ ಹೊಂದಿದಂತೆ, ಪುಸ್ತಕಗಳೂ, ವಾರ್ತಾಪತ್ರಗಳೂ ಹೆಚ್ಚಿದಂತೆ, ಗ್ರಂಥಾಲಯಗಳ ಸಂಖ್ಯೆಯೂ ಹೆಚ್ಚಿದೆ. ಗ್ರಂಥಾಲಯಗಳ ಚಳವಳಿ ಮುನ್ನಡೆದಂತೆ ಗ್ರಂಥಸೂಚಿ ರಚನಾಕಾರ್ಯಕ್ಕೆ ಪ್ರೋತ್ಸಾಹ ಸಿಕ್ಕಿದಂತಾಯಿತು. ಆಧುನಿಕ ಗ್ರಂಥಾಲಯ ಚಳವಳಿ ಆರಂಭವಾದಂದಿನಿಂದ ಈ ಕ್ಷೇತ್ರದಲ್ಲಿ ವ್ಯಕ್ತಿಗಳಿಂದಲೂ ಸಂಸ್ಥೆಗಳಿಂದಲೂ ನಡೆದಿರುವ ಕಾರ್ಯವನ್ನು ಈ ಲೇಖನ ಅವಲೋಕಿಸುತ್ತದೆ.

ಬರೋಡ ಸಂಸ್ಥಾನದಲ್ಲಿ ೧೯೧೦ರಲ್ಲಿ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ

ಶಿಕ್ಷಣವನ್ನು ಜಾರಿಗೆ ತಂದಾಗ ಭಾರತದಲ್ಲಿ ಆಧುನಿಕ ಗ್ರಂಥಾಲಯ ಚಳವಳಿ ಆರಂಭವಾಯಿತೆನ್ನಬಹುದು. ಅದಕ್ಕೆ ಹಿಂದೆ ಗ್ರಂಥಾಲಯಗಳು ಇರಲಿಲ್ಲವೆಂದಲ್ಲ. ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳು, ಕಾಲೇಜು ಗ್ರಂಥಾಲಯಗಳು, ಪೌರ ಸಭೆಗಳು ನಡೆಸುತ್ತಿದ್ದ ಗ್ರಂಥಾಲಯಗಳು ಮತ್ತು ಚಂದಾಹಣ ವಸೂಲುಮಾಡಿ ಪುಸ್ತಕ ಎರವಲುಕೊಡುತ್ತಿದ್ದ ಗ್ರಂಥಾಲಯಗಳು ಇದ್ದುವು. ಆದರೆ ಭಾರತದಲ್ಲಿ ಎಲ್ಲಿಯೂ ಗ್ರಂಥಾಲಯಗಳ ಸ್ಥಾಪನೆ ಮತ್ತು ನಿರ್ವಹಣೆಗೆ ಯೋಜಿತ ವ್ಯವಸ್ಥೆ ಇರಲಿಲ್ಲ. ಈ ರೀತಿ ಆಧುನಿಕ ಗ್ರಂಥಾಲಯ ಚಳವಳಿಯನ್ನು ಆರಂಭಿಸಿದ ಗೌರವ ಬರೋಡದ ಮಹಾರಾಜ ಸಯ್ಯಾಜಿರಾವ್ ಗಾಯಕವಾಡರಿಗೇ ಸಲ್ಲಬೇಕು. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಗ್ರಂಥಾಲಯಗಳನ್ನು ಸಂಸ್ಥಾನಾದ್ಯಂತ ಸ್ಥಾಪಿಸುವ ಯೋಜನೆಯನ್ನು ಕಾರ್ಯಗತಮಾಡಿ[1] ಜನರಿಗೆ ಉಚಿತವಾಗಿ ಗ್ರಂಥಾಲಯ ಸೇವೆಯನ್ನು ಒದಗಿಸಬೇಕೆಂಬ ಸ್ಫೂರ್ತಿ ಮಹಾರಾಜರಿಗೆ ದೊರಕಿದ್ದು ಅಮೆರಿಕದ ಸಂಯುಕ್ತಸಂಸ್ಥಾನವನ್ನು ಸಂದರ್ಶಿಸಿದಾಗ. ಆಗ ಅಲ್ಲಿಯ ವಿಲಿಯಂ ಅಲಾನ್‌ಸನ್ ಬೋರ್ಡೆನ್ ಎಂಬ ಗ್ರಂಥಾಲಯ ಪರಿಣತರನ್ನು ಭಾರತಕ್ಕೆ ಕರೆತಂದು ಬರೋಡಾ ಸಂಸ್ಥಾನದಲ್ಲಿ ಗ್ರಂಥಾಲಯ ಶಾಖೆಯನ್ನು ಸ್ಥಾಪಿಸಿ ವ್ಯವಸ್ಥಿತಗೊಳಿಸಲು ಆರಂಭಿಸಿದರು. ೧೯೧೦ರಲ್ಲಿ ಹೊಸದಾಗಿ ಸ್ಥಾಪಿತವಾದ ರಾಜ್ಯ ಗ್ರಂಥಾಲಯ ಶಾಖೆಯ ನಿರ್ದೇಶಕರಾಗಿ ಬೋರ್ಡೆನ್ ಅಧಿಕಾರ ವಹಿಸಿಕೊಂಡರು. ೧೯೧೦ರಿಂದ ೧೯೧೩ರ ವರೆಗೆ ಬೋರ್ಡೆನ್ ಕೇಂದ್ರಗ್ರಂಥಾಲಯವನ್ನು ಸ್ಥಾಪಿಸಿ ರಾಜ್ಯ ಸರ್ಕಾರದ ಧನಸಹಾಯ ಪಡೆದ ಉಚಿತ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯನ್ನು ರೂಪಿಸಿ, ಸಂಚಾರಿ ಗ್ರಂಥಾಲಯಗಳನ್ನು ಆರಂಭಿಸಿದರು. ಕೇಂದ್ರ ಗ್ರಂಥಾಲಯದ ಸಿಬ್ಬಂದಿಗೂ ಗ್ರಂಥಾಲಯ ಅಭಿವೃದ್ಧಿ ಕಾರ್ಯಕ್ರಮ ನಡೆಸುವ ಇತರರಿಗೂ ಗ್ರಂಥಾಲಯ ತರಬೇತಿ ತರಗತಿಗಳನ್ನಾರಂಭಿಸಿದರು.[2]

ಮಹಾರಾಜರು ಲಕ್ಷ್ಮೀವಿಲಾಸ ಅರಮನೆಯಲ್ಲಿ ಖಾಸಗಿಯಾಗಿ ಹೊಂದಿದ್ದ ಗ್ರಂಥಾಲಯವನ್ನು ೧೯೧೨ ರಲ್ಲಿ ಕೇಂದ್ರ ಗ್ರಂಥಾಲಯಕ್ಕೆ ಕೊಟ್ಟರು. ೧೮೭೭, ೧೮೭೭ ಮತ್ತು ೧೯೧೦ರಲ್ಲಿ ಅರಮನೆ ಗ್ರಂಥಾಲಯದ ಇಂಗ್ಲಿಷ್ ಪುಸ್ತಕ ಸೂಚಿಗಳು ಪ್ರಕಟವಾದುವು. ಈ ರಾಜ್ಯ ಗ್ರಂಥಾಲಯ ಕೇಂದ್ರ ಗ್ರಂಥಾಲಯಕ್ಕೆ ವರ್ಗಾವಣೆಯಾದ ಅನಂತರ ಕೇಂದ್ರ ಗ್ರಂಥಾಲಯ ತಾನು ಶೇಖರಿಸಿದ ಹೊಸ ಪುಸ್ತಕಗಳಿಗೆ ಸೂಚಿಗಳನ್ನು ವರ್ಗೀಕೃತ ರೀತಿಯಲ್ಲಿ ಟಿಪ್ಪಣಿಗಳೊಡನೆ ಪ್ರಕಟಿಸಿ ಇಂಗ್ಲಿಷ್ ಪುಸ್ತಕ

[1] Newton Mohan Dutt, *Baroda and its Libraries* (Baroda : Central Library, 1928), p. 2

[2] J. S. Kadulkar, *Baroda Library Movement : a short Account of the Origin and Growth of the Central Library (Baroda : Central Library, 1923)* p. 7

ಸೂಚಿಗೆ ಪುರವಣಿಗಳನ್ನು ಹೊರಡಿಸಿತು. ಇದಲ್ಲದೆ ಕೆಲವು ವಿಶಿಷ್ಟ ವಿಷಯಗಳಲ್ಲಿ ಕೇಂದ್ರ ಗ್ರಂಥಾಲಯು ನಾಲ್ಕು ಗ್ರಂಥಸೂಚಿಗಳನ್ನು ತಯಾರಿಸಿ ಪ್ರಕಟಿಸಿತು.[3]

ರಾಜ್ಯಗ್ರಂಥಾಲಯ ಶಾಖೆಯೊಡನೆ ಸಹಕರಿಸಲು ಬರೋಡಾ ರಾಜ್ಯ ಗ್ರಂಥಾಲಯ ಸಂಘ ೧೯೨೪ ರಲ್ಲಿ ಸ್ಥಾಪಿತ್ತವಾಯಿತು. ಅದು ಗ್ರಂಥಾಲಯಗಳಿಗೆ ಬೇಕಾಗುವ ಪುಸ್ತಕಗಳು, ನಿಯತ ಕಾಲಿಕಗಳು ಮತ್ತಿತರ ಸಾಧನಗಳನ್ನು ಸುಲಭ ಬೆಲೆಯಲ್ಲಿ ಒದಗಿಸಲು ಒಂದು ಸಹಕಾರ ಸಂಘವನ್ನು ಸ್ಥಾಪಿಸಿತು. ಇದಲ್ಲದೆ ಈ ಸಂಸ್ಥೆ ಪುಸ್ತಕ ಪ್ರಕಟನೆ ಆರಂಭಿಸಿ ಕೆಲವೇ ವರ್ಷಗಳಲ್ಲಿ ೮೦೦೦ ಗುಜರಾತಿ ಪುಸ್ತಕಗಳ ವರ್ಗೀಕೃತ ಸೂಚಿಯನ್ನು, ಬಹುಶಃ ಭಾರತದಲ್ಲೇ ಮೊದಲಬಾರಿಗೆ, ಪ್ರಕಟಿಸಿತು. ಇದಲ್ಲದೆ ಇದು ಗುಜರಾತಿನಲ್ಲಿರುವ ಗ್ರಂಥಾಲಯಗಳ ವಿಳಾಸಪುಸ್ತಕವನ್ನೂ ಗುಜರಾತಿ ಪುಸ್ತಕಗಳ ವರ್ಗೀಕರಣಕ್ಕೆ ಪರಿಷ್ಕೃತ ವರ್ಗೀಕರಣ ವ್ಯವಸ್ಥೆಯನ್ನೂ ಪ್ರಕಟಿಸಿತು.[4]

ಅಮೆರಿಕದ ಲೈಬ್ರರಿ ಆಫ್ ಕಾಂಗ್ರೆಸ್ಸಿನಲ್ಲಿ ನಡೆಯುವ ಗ್ರಂಥಾಲಯ ಚಟುವಟಿಕೆಗಳನ್ನು ಬರೋಡ ಗ್ರಂಥಾಲಯ ವ್ಯವಸ್ಥೆಯ ಆಡಳಿತಗಾರರು ಗಮನವಿಟ್ಟು ನೋಡುತ್ತಿದ್ದರು. ಸಣ್ಣ ಪ್ರಮಾಣದಲ್ಲಾದರೂ ಕೇಂದ್ರ ಗ್ರಂಥಾಲಯದ ಪರಾಮರ್ಶನ ಹಾಗೂ ಎರವಲುಶಾಖೆಯಲ್ಲಿನ ಮರಾಠಿ ಹಾಗೂ ಗುಜರಾತಿ ಪುಸ್ತಕಗಳ ವರ್ಗೀಕೃತ ಪುಸ್ತಕಸೂಚಿಯನ್ನು ಪ್ರಕಟಿಸಲು ಯತ್ನಮಾಡಿದರು. ಇದಲ್ಲದೆ ಆರಿಸಿದ ೮೦೦೦ ಶ್ರೇಷ್ಠ ಗುಜರಾತಿ ಪುಸ್ತಕಗಳ ಪಟ್ಟಿಯನ್ನು ಪ್ರಕಟಿಸಿ ಇವುಗಳಿಗಾಗಿ ಮುದ್ರಿತ ಪತ್ರಕಗಳನ್ನು ತಯಾರಿಸಿ, ದೊಡ್ಡ ಗ್ರಂಥಾಲಯಗಳಿಗೆ ಮಾರಿದರು.[5]

ಇನ್ನೊಂದು ಮುಖ್ಯ ಹೆಜ್ಜೆಯೆಂದರೆ ಗ್ರಂಥಸೂಚಿ ಹಾಗೂ ಗ್ರಂಥಾಲಯ ಆಡಳಿತವನ್ನು ಕುರಿತು ಗ್ರಂಥಗಳ ಶೇಖರಣೆ. ಇದರಲ್ಲಿ ಮುಖ್ಯವಾದವು ೧೮೦೧ ರಿಂದ ೧೯೧೦ರ ವರೆಗೆ ಗ್ರಂಥಾಲಯಕ್ಕೆ ಸೇರಿದ ಇಂಗ್ಲಿಷ್ ಪುಸ್ತಕಸೂಚಿ, ೧೮೭೬ ರಿಂದ ೧೯೧೦ರ ವರೆಗಿನ ಅಮೆರಿಕನ್ ಪುಸ್ತಕಸೂಚಿ, ೧೮೦೨ ರಿಂದ ೧೯೧೬ರ ವರೆಗಿನ ವಿಶ್ವ ನಿಯತಕಾಲಿಕೆಗಳ ಸೂಚಿಗಳು, ಅನೇಕ ವಿಷಯಗಳ ಗ್ರಂಥಸೂಚಿಗಳು, ೧೮೮೧ ರಿಂದ ೧೯೧೫ ರವರೆಗೆ ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯಕ್ಕೆ ಸೇರಿದ ಆಧುನಿಕ ಪುಸ್ತಕಗಳ ಪಟ್ಟಿ, ೧೦೮ ಸಂಪುಟಗಳಲ್ಲಿನ ಬ್ರಿಟಿಷ್ ಮ್ಯೂಸಿಯಂ

[3] *Ibid.*, p. 68

[4] Newton Mohan Dutt, "The Library Movement in Baroda," *Modern Libraian*, III (Janaury 1933), p. 77

[5] J. S. Kudalkur, *Baroda Library Movement : A Short Account of the Origin and Growth of the Central Library* (Baroda : Central Library, 1923), pp. 68–69

ಪುಸ್ತಕ ಸೂಚಿ. ಈ ರೀತಿಯ ಸಂಗ್ರಹ ಭಾರತದ ಇನ್ನಾವ ಗ್ರಂಥಾಲಯದಲ್ಲೂ ಆಗ ಇರಲಿಲ್ಲ.[6]

ಭಾರತದಲ್ಲಿ ಇಪ್ಪತ್ತನೆಯ ಶತಮಾನದ ಮೊದಲ ದಶಕ ನಾನಾ ಕಾರಣಗಳಿಂದ ಬಹು ಮುಖ್ಯವಾದದ್ದು. ರಾಷ್ಟ್ರೀಯ ಶಿಕ್ಷಣಕ್ಕಾಗಿ ಚಳವಳಿ ಆರಂಭವಾದುದಲ್ಲದೆ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿಯೂ ಕಡ್ಡಾಯವಾಗಿಯೂ ಮಾಡಬೇಕೆಂದು ಗೋಖಲೆಯವರ ಯತ್ನ ನಡೆದುದೂ ಆಗಲೇ. ಈ ದಶಕದಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳ ಆಯೋಗ ಹಾಗೂ ಕಲ್ಕತ್ತ ವಿಶ್ವವಿದ್ಯಾನಿಲಯದ ಆಯೋಗ ನೇಮಕವಾದುವು. ೧೯೦೪ ಹಾಗೂ ೧೯೧೩ರಲ್ಲಿ ಸರ್ಕಾರ ತನ್ನ ಶಿಕ್ಷಣನೀತಿಯನ್ನು ಬದಲಾಯಿಸಿತು. ಇದರಿಂದ ಶಿಕ್ಷಣ ಪ್ರಗತಿಹೊಂದಿತು. ಭಾರತದ ಅನೇಕ ಮೇಧಾವಿಗಳು ಜಗದ್ವಿಖ್ಯಾತರಾದರು. ದೇಶದಲ್ಲಿ ನವೋತ್ಸಾಹ ಮೂಡಿತು.

ಕಲ್ಕತ್ತ, ಮದರಾಸ್, ಬೊಂಬಾಯಿ—ಈ ಪ್ರೆಸಿಡೆನ್ಸಿ ರಾಜಧಾನಿಗಳಲ್ಲಿ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗಿ, ಪಾಶ್ಚಾತ್ಯದೇಶಗಳಲ್ಲಿ ತರಪೇತಿ ಹೊಂದಿದ ವಿದ್ವಾಂಸರು ವಿಶ್ವವಿದ್ಯಾನಿಲಯ ಗ್ರಂಥಾಲಯಗಳ ಹಾಗೂ ಸಾರ್ವಜನಿಕ ಗ್ರಂಥಾಲಯಗಳ ವ್ಯವಸ್ಥೆಗೆ ಗಮನವಿತ್ತರು. ಬ್ರಿಟಿಷ್ ಮ್ಯೂಸಿಯಂ, ಬ್ಲಾಡಿಯನ್ ಗ್ರಂಥಾಲಯ ಅವರಿಗೆ ಮಾದರಿಗಳಾಗಿದ್ದುವು. ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯದ ಮಾದರಿಯಲ್ಲಿ ೧೯೦೩ರಲ್ಲಿ ಕಲ್ಕತ್ತದಲ್ಲಿ ಇಂಪೀರಿಯಲ್ ಗ್ರಂಥಾಲಯದ ಸ್ಥಾಪನೆಗೆ ಭಾರತದ ಮಿತ್ರನೂ ಬುದ್ಧಿಶಾಲಿಯೂ ಆದ ಲಾರ್ಡ್ ಕರ್ಜನ್ ಬೆಂಬಲವಿತ್ತ. ಸರಕಾರಿ ಗೆಜೆಟ್‌ನಲ್ಲಿ ತಿಳಿಸಿರುವಂತೆ "ಈ ಗ್ರಂಥಾಲಯ ವಿದ್ಯಾರ್ಥಿಗಳಿಗೆ ಪರಾಮರ್ಶನಕ್ಕಾಗಿ ಅಭ್ಯಾಸ ಸ್ಥಳವಾಗಿರುವುದಲ್ಲದೆ, ಭಾರತದ ಮುಂದಿನ ಚರಿತ್ರಕಾರರು ವೀಕ್ಷಿಸಲು, ಓದಲು ಬೇಕಾದ ಎಲ್ಲ ಸಾಮಗ್ರಿಗಳನ್ನೂ ಒಳಗೊಂಡ ಆಕರ ಶಾಲೆಯಾಗಿರುವಂತೆ ಭಾರತವನ್ನು ಕುರಿತ ಪ್ರತಿಯೊಂದು ಕೃತಿಯನ್ನೂ ಎಲ್ಲಕಾಲದಲ್ಲೂ ಇಲ್ಲಿ ಶೇಖರಿಸಲಾಗುವುದು."[7]

ಭಾರತದಲ್ಲಿ ತಂಜಾವೂರ್ ಸರಸ್ವತಿ ಮಹಲ್ ಗ್ರಂಥಾಲಯ, ಪಾಟ್ನದ ಖುದಾಬಕ್ಸ ಗ್ರಂಥಾಲಯ, ಕಲ್ಕತ್ತದ ಏಷ್ಯಾಟಿಕ್ ಸೊಸೈಟಿ ಗ್ರಂಥಾಲಯ ಹಾಗೂ ಇಂಪೀರಿಯಲ್ ಗ್ರಂಥಾಲಯ, ಬೊಂಬಾಯಿಯಲ್ಲಿನ ರಾಯಲ್ ಏಷ್ಯಾಟಿಕ್ ಸೊಸೈಟಿ ಗ್ರಂಥಾಲಯ, ವಿಶ್ವವಿದ್ಯಾನಿಲಯಗಳು ಹಾಗೂ ಸರ್ಕಾರಿ ಗ್ರಂಥಾಲಯಗಳಲ್ಲಿ ಅಮೂಲ್ಯವಾದ ಕೈಬರಹ ಪ್ರತಿಗಳು, ಪುಸ್ತಕಗಳು ಮತ್ತಿತರ

---

[6] *Ibid.*, p. 20

[7] B. S. Kesavan, *India's National Library* (Calcutta: National Library, 1961), p. 14

ಪ್ರಕಟನೆಗಳು ಹೇರಳವಾಗಿವೆ. ದುರಾದೃಷ್ಟವಶಾತ್ ಈ ಗ್ರಂಥಾಲಯಗಳ ವಿಳಾಸ ಪುಸ್ತಕವಿಲ್ಲ, ಕೈಪಿಡಿಗಳಿಲ್ಲ, ಪುಸ್ತಕ ಸೂಚಿಗಳಿಲ್ಲ, ಸರಿಯಾದ ವ್ಯವಸ್ಥಿತ ಆಡಳಿತವಿಲ್ಲ. ಗ್ರಂಥಾಲಯಗಳ ನಡುವೆ ಸಹಕಾರವಂತೂ ಕೇಳರಿಯದ ಮಾತು. ಇದರಿಂದಾಗಿ ಸಂಶೋಧಕರು ದೇಶದ ಗ್ರಂಥಾಲಯಗಳಲ್ಲಿನ ಪುಸ್ತಕ ಮತ್ತಿತರ ಸಾಮಾಗ್ರಿಗಳ ಪೂರ್ಣ ಉಪಯೋಗ ಪಡೆಯದಂತೆ ಆಗಿದೆ. ಈ ತೊಂದರೆಗಳನ್ನು ಪರಿಹರಿಸಲು ಭಾರತ ಸರ್ಕಾರದ ಶಿಕ್ಷಣ ಕಮಿಷನರ್ ಹೆನ್ರಿ ಷಾರ್ಪ್ ಕೆಲವು ಆಸಕ್ತ ಜನರ ಸಭೆಯನ್ನು ಕರೆದರು. ಲಾಹೋರಿನಲ್ಲಿ ೧೯೧೮ರಲ್ಲಿ ನಡೆದ ಈ ಸಭೆಯಲ್ಲಿ ಖ್ಯಾತಿವೆತ್ತ ಗ್ರಂಥಪಾಲರು, ಶಿಕ್ಷಣವೇತ್ತರು ಮತ್ತು ಆಡಳಿತಗಾರರು ಭಾಗವಹಿಸಿದ್ದರು. ಗ್ರಂಥಾಲಯಗಳ ತರಬೇತು, ವಿಜ್ಞಾನದ ನಿಯತಕಾಲಿಕಗಳ ಸಂಯುಕ್ತ ಸೂಚಿಯ ರಚನೆ, ಗ್ರಂಥಾಲಯಗಳ ನಡುವಣ ಸಹಕಾರ ಇವುಗಳನ್ನು ಚರ್ಚಿಸಲಾಯಿತು. ಭಾರತದಲ್ಲಿ ಈ ರೀತಿ ಸಮ್ಮೇಳನ ನಡೆದುದು ಇದೇ ಮೊದಲು. ಇದರಿಂದ ಉಪಯುಕ್ತ ಫಲಿತಾಂಶ ಹೊರಹೊಮ್ಮಲಿಲ್ಲ. ಆದರೆ ಪ್ರಚಲಿತ ಗ್ರಂಥಾಲಯಗಳಲ್ಲಿನ ಆಕರಗಳು, ಅನುಕೂಲಗಳ ಬಗ್ಗೆ ಸಮಾಚಾರ ವಿನಿಮಯ ವಾಯಿತು.[8]

೧೯೩೦ರಲ್ಲಿ ಏಷ್ಯದ ಶಿಕ್ಷಣ ಸಮ್ಮೇಳನ ಕಾಶಿಯಲ್ಲಿ ಸೇರಿತು. ಇದರ ಅಂಗವಾಗಿ ನೆರೆದ ಗ್ರಂಥಾಲಯದ ಸೇವಾ ವಿಭಾಗ ಗ್ರಂಥಾಲಯಗಳಿಗೂ, ಗ್ರಂಥಾಲಯದ ಉಪಯೋಗಮಾಡುವವರಿಗೂ ಭಾಗವಹಿಸುವ ಅವಕಾಶವಿದ್ದಿತು. ಬರೋಡದ ಗ್ರಂಥಾಲಯಗಳ ಮುಖ್ಯಾಧಿಕಾರಿ ನೂಟಿನ್ ಮೋಹನ್‌ದತ್ ಅಧ್ಯಕ್ಷರಾಗಿದ್ದರು. ಹಾಗೂ ಮದ್ರಾಸ್ ವಿಶ್ವವಿದ್ಯಾನಿಲಯ ಗ್ರಂಥಾಲಯದ ಎಸ್. ಆರ್. ರಂಗನಾಥನ್ ಕಾರ್ಯದರ್ಶಿಯಾಗಿಯೂ, ಕಾಶಿ ಹಿಂದು ವಿಶ್ವವಿದ್ಯಾನಿಲಯ ಗ್ರಂಥಾಲಯದ ಡಿ. ಸುಬ್ರಹ್ಮಣ್ಯಂ ಸ್ಥಳೀಯ ಕಾರ್ಯದರ್ಶಿಯಾಗಿಯೂ ಆಯ್ಕೆಯಾದರು.[9]

ಅಮೆರಿಕ, ಬ್ರಿಟನ್, ಜರ್ಮನಿ, ಚೀನ, ಜಪಾನ್ ಮತ್ತು ಭಾರತ ದೇಶಗಳಿಂದ ನಾನಾ ಪ್ರತಿನಿಧಿಗಳು ಗ್ರಂಥಾಲಯ ಕಾರ್ಯದ ಮೇಲೆ ೫೭ ಪ್ರಬಂಧಗಳನ್ನು ಓದಿದರು. ಎಸ್.ಆರ್. ರಂಗನಾಥನ್ "ಭಾರತಕ್ಕೊಂದು ಮಾದರಿ ಗ್ರಂಥಾಲಯ ಕಾನೂನು" ಎಂಬ ತಮ್ಮ ಮೂಲಭೂತ ಪ್ರಬಂಧವನ್ನು ಓದಿ ಇದನ್ನು ಮಸೂದೆಯ ರೂಪದಲ್ಲಿ ಭಾರತ ಸರಕಾರಕ್ಕೆ ೧೯೩೩ರಲ್ಲಿ ಒಪ್ಪಿಸಿದರು. ಆದರೆ ಅವರ ಪ್ರಯತ್ನ ಫಲಿಸಲಿಲ್ಲ. ಗ್ರಂಥಾಲಯ ಕಾನೂನು ರೂಪಗೊಳ್ಳಲು ಅವರು

---

[8] Sant Ram Bhatia, "Library Movement–A Retrospect." *Proceedings of the fifth All—India Conference* (Calcutta : Indian. Library Associotion, 1942), p· 174

[9] *The Modern Libarian*, I (March and April, 1931), p· i–iii)

ಯತ್ನವನ್ನು ಮುಂದುವರಿಸಿದರೂ, ಭಾರತ ಸ್ವತಂತ್ರವಾಗುವ ವರೆಗೆ ಅವರ ಕನಸು ಈಡೇರಲಿಲ್ಲ. ಮದರಾಸ್ ರಾಜ್ಯದಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನು ಸ್ಥಾಪಿಸಲು ಹಾಗೂ ಸಮಗ್ರ ಗ್ರಾಮೀಣ ಹಾಗೂ ನಗರ ಗ್ರಂಥಾಲಯ ಸೇವಾ ವ್ಯವಸ್ಥೆಗಾಗಿ ಕಾನೂನು ೧೯೪೯ನೇ ಜನವರಿ ೨೭ರಂದು ಗೌರ್ನರ್ ಜನರಲರ ಒಪ್ಪಿಗೆ ಪಡೆಯಿತು.[10] ಆರು ವರ್ಷಗಳ ಅನಂತರ ಸಾರ್ವಜನಿಕ ಗ್ರಂಥಾಲಯ ಕಾನೂನನ್ನು ರೂಪಿಸಿದ ರಾಜ್ಯವೆಂದರೆ ಹೈದರಾಬಾದ್ ಒಂದೇ. ಹಲವು ಉತ್ಸಾಹಿಗಳ ಗುಂಪುಗಳ ಒತ್ತಡದ ಫಲವಾಗಿ ಈ ಕಾನೂನು ಜಾರಿಗೆ ಬಂದಿತು. ೧೯೬೫ರಲ್ಲಿ ಮೈಸೂರು ರಾಜ್ಯದಲ್ಲೂ, ೧೯೬೭ರಲ್ಲಿ ಮಹಾರಾಷ್ಟ್ರದಲ್ಲೂ ಸಾರ್ವಜನಿಕ ಗ್ರಂಥಾಲಯ ಕಾನೂನು ಜಾರಿಗೆ ಬಂದಿತು.

ರಂಗನಾಥನ್‌ರವರು "ದಕ್ಷಿಣ ಏಷ್ಯದಲ್ಲಿ ಪಾಂಡಿತ್ಯ ಪೂರ್ಣ ನಿಯತ ಕಾಲಿಕೆಗಳ ಸಂಯುಕ್ತ ಸೂಚಿ" (Union Catalouge of Learned Periodical Publications in South Asia)ಯ ಮುನ್ನುಡಿಯಲ್ಲಿ, ಆ ಸಮ್ಮೇಳನದಲ್ಲಿ ಭಾರತ ಸಂಯುಕ್ತ ಪುಸ್ತಕ ಸೂಚಿಯನ್ನು ಕುರಿತು ನಿರ್ಣಯ ಮಂಡಿಸಲು ತಮಗೆ ಅವಕಾಶ ಪೊಟ್ಟ ಮೊದಲನೇ ಬಾರಿಗೆ ಬಂದಿತೆಂದು ತಿಳಿಸಿದ್ದಾರೆ.[11]

ಇಲ್ಲಿ ಯೋಚಿಸಲಾದ ಸಂಯುಕ್ತ ಸೂಚಿ ಆಧಾರ ಸ್ವರೂಪವುಳ್ಳಂಥದು. ಅದು ರಾಷ್ಟ್ರದ ಎಲ್ಲಾ ಪುಸ್ತಕ ಸಂಪತ್ತನ್ನೂ ಒಳಗೊಂಡಿರಬೇಕು (ಪುಸ್ತಕಗಳು ನಿಯತಕಾಲಿಕೆಗಳು). ಮೊದಲನೆಯ ಅಖಿಲ ಭಾರತ ಗ್ರಂಥಾಲಯ ಸಮ್ಮೇಳನದಲ್ಲಿ ಸಹ ಇದೇ ರೀತಿಯ ನಿರ್ಣಯ ಸ್ವೀಕಾರವಾಗಿ ಪುಸ್ತಕ ಸೂಚಿಯ ವ್ಯಾಪ್ತಿಯನ್ನು ಭಾರತದ ಗ್ರಂಥಾಲಯಗಳಲ್ಲಿನ ವಿಜ್ಞಾನದ ನಿಯತಕಾಲಿಕೆಗಳು ಹಾಗೂ ವಾರ್ಷಿಕಗಳಿಗೆ ಮಾತ್ರ ಸೀಮಿತವಾಗಿರಬೇಕೆಂದು ನಿರ್ಧರಿಸಲಾಯಿತು. ಎಲ್ಲಾ ವಿಧದಲ್ಲೂ ಇದನ್ನು ಪ್ರಾಯೋಗಿಕ ದೃಷ್ಟಿಯಿಂದ ನೋಡಲಾಗಿದೆ.

ಈ ನಿರ್ಣಯದಂತೆ ಭಾರತ ಗ್ರಂಥಾಲಯ ಸಂಸ್ಥೆ ಅಂತರ ವಿಶ್ವವಿದ್ಯಾನಿಲಯ ಸಮಿತಿಯನ್ನು ಸಂಯುಕ್ತ ಪುಸ್ತಕ ಸೂಚಿಯನ್ನು ತಯಾರಿಸುವಂತೆ ಪ್ರಾರ್ಥಿಸಿತು. ಅದರಂತೆ ಆ ಸಮಿತಿ ಮಾಹಿತಿಗಳನ್ನು ಕಲೆ ಹಾಕಲು ಆರಂಭಿಸಿ, ಪುಸ್ತಕ ಸೂಚಿಯ ಸಂಕಲನಕ್ಕೆ ಮತ್ತು ಪ್ರಕಟನೆಗೆ ಹಲವು ಖ್ಯಾತ ಗ್ರಂಥಾಲಯಗಳ ಅಭಿಪ್ರಾಯವನ್ನು ಕೇಳಿತು. ಕಡೆಯದಾಗಿ ಸಮಿತಿ ಪುಸ್ತಕ ಸೂಚಿಯ ಸಂಕಲನ

---

[10] S. R. Ranganathan, *Library Development Plan : Thirty-Year Programme for India* (Delhi : University of Delhi, 1950)

[11] S. R. Ranganathan, *Union Catalogue of Learaed Periodical, Publications in South Asia,* London : Indian Library Association 1953, v. i. p. 11.

ಹಾಗೂ ಪ್ರಕಟಣೆಯನ್ನು ಭಾರತ ಗ್ರಂಥಾಲಯ ಸಂಸ್ಥೆಗೇ ವಹಿಸಿತು. ಈ ಸಂಸ್ಥೆ ಕೂಡಿಹಾಕಿದ್ದ ಮಾಹಿತಿಗಳನ್ನೆಲ್ಲ ಪಂಜಾಬ್ ವಿಶ್ವವಿದ್ಯಾನಿಲಯದ ಗ್ರಂಥಾಲಯ ಶ್ರೀ ಎಸ್. ಎಸ್. ಸೇಠ್‌ರವರಿಗೆ ವಹಿಸಿತು. ೧೯೪೭ರ ವರೆಗೆ ಏನೂ ಪ್ರಗತಿ ಸಾಧ್ಯವಾಗಲಿಲ್ಲ. ಭಾರತ ವಿಭಜನೆಯಾದಾಗ ಲಾಹೋರಿನಲ್ಲಿ ನಡೆದ ಗಲಭೆಗಳಲ್ಲಿ ಆ ಮಾಹಿತಿಗಳೆಲ್ಲಾ ಕಳೆದು ಹೋದುವೆಂದು ವರದಿಯಾಯಿತು. ಕಡೆಗೆ ೧೯೪೯ರಲ್ಲಿ ಈ ಸಂಕಲನ ಹಾಗೂ ಪ್ರಕಟನಕಾರ್ಯವನ್ನು ರಂಗನಾಥನ್‌ರವರಿಗೆ ವಹಿಸಲಾಯಿತು. ಆಗ ದೆಹಲಿಯಲ್ಲಿ ಯುನೆಸ್ಕೋ ವಿಜ್ಞಾನ ಸಹಕಾರಿ ಕಛೇರಿಯ ದೆಹಲಿ ಶಾಖೆಯ ಅಧಿಕಾರಿ ಡಾ. ವುಲ್‌ಸ್ಕಿಯವರ ಆಸಕ್ತಿಯ ಫಲವಾಗಿ ಯುನೆಸ್ಕೊದಿಂದ ಧನಸಹಾಯ ಪಡೆದು ಈ ಪುಸ್ತಕ ಸೂಚಿ ಪ್ರಕಟವಾಯಿತು. ಅನೇಕ ಸಂಯುಕ್ತ ಸೂಚಿಗಳಿಗೆ ವಿಭಾಗಿತ ಸೂಚಿಗಳಿಲ್ಲ. Union Catalogue of Learned Periodical Publications in South Asia ದಲ್ಲಿ ಲೇಖನಗಳುವರ್ಗೀಕೃತವಾಗಿ ಕೋಲನ್ ವರ್ಗೀಕರಣ ಪದ್ಧತಿಯ ರೀತಿಯಲ್ಲಿ ಜೋಡಿಸಲ್ಪಟ್ಟಿವೆ. ೧೯೫೩ರಲ್ಲಿ ಪ್ರಕಟವಾದ ಮೊದಲನೆಯ ಭಾಗ ಭೌತ ಹಾಗೂ ಜೀವವಿಜ್ಞಾನದ ನಿಯತಕಾಲಿಕೆಗಳನ್ನು ಮಾತ್ರ ಒಳಗೊಂಡು, ಭಾರತ ಹಾಗೂ ದಕ್ಷಿಣ ಏಷ್ಯದ ಗ್ರಂಥಾಲಯಗಳಲ್ಲಿ ಈ ನಿಯತಕಾಲಿಕೆಗಳ ಯಾವ ಸಂಪುಟಗಳು ದೊರೆಯುತ್ತವೆ ಎಂಬುದನ್ನು ಸೂಚಿಸುತ್ತದೆ. ಪ್ರಕೃತಿ ವಿಜ್ಞಾನದ ನಿಯತಕಾಲಿಕೆಗಳ ಸಂಯುಕ್ತ ಸೂಚಿ ಹಲವಾರು ಇದ್ದರೂ ಅವುಗಳ ವ್ಯಾಪ್ತಿ ಮತ್ತು ಅವುಗಳು ಕೊಡುವ ಮಾಹಿತಿ ಕೆಲವೇ ಭೌಗೋಳಿಕ ಪ್ರದೇಶಗಳಿಗೆ ಹಾಗೂ ವಿಷಯಕ್ಕೇ ಸೀಮಿತವಾಗಿವೆ.

ಗ್ರಂಥಾಲಯ ಸೇವೆಯಲ್ಲಿ ಆಸಕ್ತಿ ತಳೆದ ಆಂಧ್ರರು, ಜನರಲ್ಲಿ ಗ್ರಂಥಾಲಯ ಚಳವಳಿಯನ್ನು ಕುರಿತು ಪ್ರಚಾರ ಮಾಡಲು ಸೂಕ್ತ ವಾತಾವರಣವಿರುವುದನ್ನು ಕಂಡು ೧೯೧೪ರಲ್ಲಿ ಆಂಧ್ರದೇಶ ಗ್ರಂಥಾಲಯ ಸಂಘವನ್ನು ಸ್ಥಾಪಿಸಿದರು. ಬರೋಡಾ ಸಂಸ್ಥಾನದಲ್ಲಿ ಗ್ರಂಥಾಲಯಗಳ ಬೆಳವಣಿಗೆಗೆ ಸ್ಫೂರ್ತಿ ದೊರೆತಿದ್ದು ಮಹಾರಾಜರಿಂದ; ಆದರೆ ಆಂಧ್ರದಲ್ಲಿ ಗ್ರಂಥಾಲಯ ಚಳುವಳಿಗೆ ಜನಗಳ ಬೆಂಬಲವಿತ್ತು. ಆಂಧ್ರ ಗ್ರಂಥಾಲಯ ಸಂಸ್ಥೆಯೇ ಭಾರತದಲ್ಲಿ ಸ್ಥಾಪಿತವಾದ ಮೊದಲ ಗ್ರಂಥಾಲಯ ಸಂಘ. ಈ ಸಂಘ ಇದುವರೆಗೆ ೧೩ ಪುಸ್ತಕಗಳನ್ನು ಪ್ರಕಟಿಸಿದೆ; ಹಾಗೂ **ಗ್ರಂಥಾಲಯ ಸರ್ವಸ್ವಮು** ಎಂಬ ನಿಯತಕಾಲಿಕೆಯನ್ನು ಪ್ರಕಟಿಸುತ್ತಿದೆ. ೧೯೨೪ರಿಂದ ೧೯೩೦ರವರೆಗೆ ಇಂಡಿಯನ್ ಲೈಬ್ರರಿ ಜರ್ನಲ್ ಎಂಬ ನಿಯತಕಾಲಿಕೆಯನ್ನು ಅನಿಯತ ಕಾಲದ ಅಂತರದಲ್ಲಿ ಪ್ರಕಟಿಸಿತು. ಎರಡೂ ಪತ್ರಿಕೆಗಳ ಧ್ಯೇಯ ಗ್ರಂಥಾಲಯಚಳುವಳಿಗೆ ಉತ್ತೇಜನ.[12]

---

[12] G. Sarvothama Rao, "The Andhra Desu Library Association" *Granthalaya*, 1 December, 1955, p. 56

ಪ್ರಾದೇಶಿಕ ಸಂಘಗಳಲ್ಲಿ ಅತ್ಯಂತ ಚಟುವಟಿಕೆಯುದು 1928ರಲ್ಲಿ ರಂಗನಾಥನ್‌ರವರು ಸ್ಥಾಪಿಸಿದ ಮದ್ರಾಸ್ ಗ್ರಂಥಾಲಯ ಸಂಘ.[13] ಈ ಸಂಘ ನಾನಾ ಮಾಲಿಗಳನ್ನು ಆರಂಭಿಸಿ ಅನೇಕ ಪುಸ್ತಕಗಳನ್ನು ಪ್ರಕಟಿಸಿತು. ಇದಲ್ಲದೆ ಸಂಘ ವಿದ್ಯಾಭ್ಯಾಸ ಇಲಾಖೆಯ ಡೈರಕ್ಟರ್‌ರ ಸಹಕಾರದೊಂದಿಗೆ ಪುಸ್ತಕ ಪಟ್ಟಿಗಳನ್ನೂ ಶ್ರೀ ಕುಮಾರರಾಜಾ ಮುತ್ತಯ್ಯ ಚೆಟ್ಟಿಯಾರರ ನೆರವಿನಿಂದ ತಮಿಳು ಪುಸ್ತಕಗಳ ಸಮಗ್ರ ಸೂಚಿ ಯನ್ನೂ ಪ್ರಕಟಿಸಿತು.[14]

ಉಳಿದ ಪ್ರಾದೇಶಿಕ ಗ್ರಂಥಾಲಯಗಳ ಸಂಘಗಳಲ್ಲಿ ಮುಖ್ಯವಾದುದು ಬಂಗಾಳ ಗ್ರಂಥಾಲಯದ ಸಂಘ. ಬಂಗಾಳದಲ್ಲಿ ಗ್ರಂಥಾಲಯ ಚಳವಳಿಯಲ್ಲಿ ಆಸಕ್ತರಾದ ಮಣೀಂದ್ರ ದೇವ್ ರಾಯ್ ೧೯೨೭ರಲ್ಲಿ ಈ ಸಂಘವನ್ನು ಸ್ಥಾಪಿಸಿದರು.[15] ಈ ಸಂಘ ಸಾರ್ವಜನಿಕ ಹಾಗೂ ಶಾಲಾ ಗ್ರಂಥಾಲಯಗಳಿಗೆ ಕೊಳ್ಳಲು ಯೋಗ್ಯವಾದ ಪುಸ್ತಕಗಳ ಪಟ್ಟಿಯನ್ನು ಪ್ರಕಟಿಸುತ್ತಿದೆ. ೧೯೩೬ರಲ್ಲಿ ಈ ಸಂಘ ಬಂಗಾಳದ ನಾನಾ ಭಾಗಗಳಲ್ಲಿ ಗ್ರಂಥಾಲಯಗಳ ಸ್ಥಿತಿಯನ್ನು ಕುರಿತು ಸಮೀಕ್ಷೆ ನಡೆಸಿತು, ೧೯೪೨ರಲ್ಲಿ ಬಂಗಾಳ ಗ್ರಂಥಾಲಯಗಳ ವಿಳಾಸ ಪುಸ್ತಕವನ್ನು* ಪ್ರಕಟಿಸಿತು. ಈ ಪುಸ್ತಕದ ಎರಡನೆಯ ಆವೃತ್ತಿಯ ತಯಾರಿಕೆ ನಡೆದಿದೆ. ಬಂಗಾಳ ನಿಯತಕಾಲಿಕಗಳ ಲೇಖನ ಸೂಚಿಯನ್ನು 'ಗ್ರಂಥಾಗಾರ್' ಎಂಬ ನಿಯತಕಾಲಿಕೆಯ ಮೂಲಕ ನಡೆಸುತ್ತಿದೆ. ಈ ಕೆಲಸ ಮುಂದುವರಿದರೆ ಬಂಗಾಳಿ ಮಾತನಾಡುವ ಪಂಡಿತರಿಗೆ ಮಹದುಪಕಾರವಾಗುತ್ತದೆ.[16]

ಈ ಸಂಘಗಳ ಮಾಲೆಯಲ್ಲಿ ಮುಂದಿನದು ೧೯೩೩ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾನಿಲಯದ ಎಂ. ಓ. ಥಾಮಸ್ ಮತ್ತು ಕಲ್ಕತ್ತದ ಇಂಪೀರಿಯಲ್ ಲೈಬ್ರರಿಯ ಅಧಿಕಾರಿ ಖಾನ್ ಬಹದೂರ್ ಆಸಾದುಲ್ಲಾರವರ ಯತ್ನದಿಂದಾಗಿ ರೂಪಗೊಂಡ ಅಖಿಲ ಭಾರತ ಗ್ರಂಥಾಲಯ ಸಂಘ. ಮಾಡರ್ನ್ ಲೈಬ್ರೇರಿಯನ್ ಪತ್ರಿಕೆಯ ೧೯೩೩ರ ಜನವರಿಯ ಸಂಚಿಕೆಯಲ್ಲಿ ಥಾಮಸ್‌ರವರು ತೀಕ್ಷ್ಣವಾದ ಲೇಖನವೊಂದನ್ನು ಬರೆದು ಅದರಲ್ಲಿ ಬ್ರಿಟಿಷ್ ಗ್ರಂಥಾಲಯ ಸಂಘದ ಮುಖ್ಯ

---

[13] S. R. Ranganathan, *India Library Director* (Delhi : Indian Library Association, 1951), p, 86

[14] K. V. Krishnaswami Aiyar, "Ourselves, Looking Backwards and Forwards, *Memoirs of the Madras Library Association* (Madras : Madras Library Association, 1940), p. 5

[15] India : Ministry of Education, *Report of Advisory Committee for Libraries* (Delhi : Manager of Publications, 1961), p. 2

* Directory of Libraries in Bengal

[16] Pramil Chaudra Bose, "Bengal Library Association, A Short Account of its origin and activities" *Bengal Library Association Bulletin*, IX, p. 2

ಕಾರ್ಯಗಳನ್ನು ವಿವರಿಸಿ ಭಾರತ ಗ್ರಂಥಾಲಯ ಸಂಘ ಸ್ಥಾಪಿತವಾಗಬೇಕೆಂದು ಆಗ್ರಹ ಮಾಡಿದರು. ಅದರಲ್ಲಿ ಅವರು ಈ ರೀತಿ ಬರೆದರು: "ನಾವು ಒಗ್ಗಟ್ಟಾಗುವುದು ನಮ್ಮ ಕ್ಷೇಮಸಾಧನೆಗಾಗಿ ಅಲ್ಲ. ಅದೂ ಪ್ರಾಸಂಗಿಕವಾಗಿರಬಹುದು. ನಮ್ಮ ಮುಖ್ಯ ಉದ್ದೇಶ ಗ್ರಂಥಾಲಯ ಚಳವಳಿಯನ್ನು ಉತ್ತೇಜಿಸಿ ಮುಂದುವರೆಸುವುದು."[17]

೧೯೩೩ರ ಸೆಪ್ಟಂಬರ್ ೧೨ರಂದು ಕಲ್ಕತ್ತದ ಏಷ್ಯಾಟಿಕ್ ಸೊಸೈಟಿ ಹಾಲಿನಲ್ಲಿ ಅಖಿಲ ಭಾರತ ಗ್ರಂಥಾಲಯ ಸಮ್ಮೇಳನ ಮೊದಲನೆಯ ಸಾರಿ ನೆರೆಯಿತು. ಆರಂಭ ಹಾಗೂ ಮುಕ್ತಾಯ ಸಭೆಗಳ ಅಧ್ಯಕ್ಷತೆಯನ್ನು ಥಾಮಸ್‌ರವರು ವಹಿಸಿದ್ದರು. ವಿಷಯ ನಿಯಾಮಕ ಸಮಿತಿಯ ಸಭೆಗಳ ಅಧ್ಯಕ್ಷತೆ ವಹಿಸಿದ್ದವರು ಪಂಜಾಬ್ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ಎ. ಸಿ. ವುಲ್ನರ್.

ಥಾಮಸ್‌ರವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಗ್ರಂಥಾಲಯ ಸಂಘ ಯೋಚಿಸಿರುವ ಕಾರ್ಯಗಳ ಸ್ಥೂಲವಿವರಣೆಯನ್ನಿತ್ತರು. ಭಾರತದಲ್ಲಿ ಗ್ರಂಥಾಲಯ ಚಳವಳಿಯನ್ನು ಪ್ರೋತ್ಸಾಹಿಸುವುದು; ತರಬೇತಿ ಹೊಂದಿದ ಗ್ರಂಥಾಲಯಗಳಿಗೆ ಉತ್ತೇಜನ, ಗ್ರಂಥಾಲಯಶಾಸ್ತ್ರದಲ್ಲಿ ಸಂಶೋಧನೆ, ಗ್ರಂಥಾಲಯಗಳ ಸ್ಥಾನಮಾನಗಳ ಅಭಿವೃದ್ಧಿ ಇವುಗಳನ್ನು ಕುರಿತು ಸಲಹೆಮಾಡಿದರು. ಅಲ್ಲದೆ ಹಸ್ತಪ್ರತಿಗಳು, ಪುಸ್ತಕಗಳಿಗೆ ಗ್ರಂಥಸೂಚಿಗಳು, ಗ್ರಂಥಾಲಯಗಳಿಂದ ಪುಸ್ತಕಗಳನ್ನು ಎರವಲು ಪಡೆಯುವುದು, ಸಂಯುಕ್ತ ಸೂಚಿಗಳ ರಚನೆ ಮುಂತಾದ ಸಹಕಾರೀ ಚಟುವಟಿಕೆಗಳನ್ನು ಆದಷ್ಟು ಹೆಚ್ಚಿಸುವುದನ್ನೂ ಸೂಚಿಸಿದರು.[18]

ಎರಡು ವರ್ಷಗಳ ಅನಂತರ ಲಕ್ನೋದಲ್ಲಿ ಏಪ್ರಿಲ್ ೧೯–೨೧ರಲ್ಲಿ ಎರಡನೆಯ ಅಖಿಲಭಾರತ ಗ್ರಂಥಾಲಯ ಸಮ್ಮೇಳನ ಡಾ. ಸಿ. ಸಿ. ವುಲ್ನರ್ ರವರ ಅಧ್ಯಕ್ಷತೆಯಲ್ಲಿ ಸೇರಿತು. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಸಂಘದ ಕೆಲಸವನ್ನು ಒತ್ತಿಹೇಳಿ, ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ಶಿಕ್ಷಣದಲ್ಲಿ ಗ್ರಂಥಾಲಯಗಳ ಪಾತ್ರವನ್ನು ವಿವರಿಸಿದರು. ದೇಶದಲ್ಲಿ ಸಣ್ಣ ಗ್ರಂಥಾಲಯಗಳ ಜಾಲವೇ ಇರಬೇಕೆಂದೂ ರಾಜ್ಯದ ವಿಶ್ವವಿದ್ಯಾನಿಲಯಗಳು ಬೆಳೆಯಬೇಕೆಂದೂ ದೇಶದ ರಾಜಧಾನಿಯಲ್ಲಿ ಅಖಿಲಭಾರತಕ್ಕೆ ರಾಷ್ಟ್ರೀಯ ಗ್ರಂಥಾಲಯವಿರಬೇಕೆಂದೂ ಹೇಳಿ ಇವುಗಳು ಗ್ರಂಥಾಲಯ ಚಳುವಳಿಯ ಉಗಮ ಹಾಗೂ ಸ್ಫೂರ್ತಿಸ್ಥಾನಗಳಾಗಬೇಕೆಂದೂ ಪ್ರತಿ ರಾಜ್ಯದಲ್ಲೂ ಗ್ರಂಥಾಲಯದ ಅಗತ್ಯ

---

17 "An Ideal Library Association, *Modern Librarian,* III (January 1933), p. 65

18 M. O. Thomas, "Presidential Address," *Proceedings of the First All-India Library Conference* (Calcutta: Indian Library Association, 1935), p. 9

ವೆಂದೂ ಒತ್ತಿಹೇಳಿ ಗ್ರಂಥಾಲಯಗಳ ನಡುವಣ ಸಹಕಾರವನ್ನು ಹಾರೈಸಿದರು.[19]

ಇದುವರೆಗೆ ಈ ರೀತಿಯ ೧೮ ಸಮ್ಮೇಳನ ನಡೆದಿವೆ. ಕಳೆದ ವರ್ಷ (೧೯೬೯ರಲ್ಲಿ) ಇದು ತಿರುಪತಿಯಲ್ಲಿ ನಡೆಯಿತು. ಈ ಸಮ್ಮೇಳನಗಳು ದೇಶದ ಎಲ್ಲಾ ಗ್ರಂಥಾಲಯಗಳು ಒಂದೆಡೆ ಸೇರಿ ತಮ್ಮ ಸಮಸ್ಯೆಗಳನ್ನು ಚರ್ಚಿಸಲೂ ಪರಿಹಾರವನ್ನು ಹುಡುಕಲೂ ಅವಕಾಶ ಮಾಡಿಕೊಡುತ್ತವೆಯಾದರೂ, ಸಂಘ ಬಹಳ ವರ್ಷದಿಂದ ಕಾರ್ಯವಿಮುಖವಾಗಿದ್ದು ಸರಿಯಾದ ಮಾರ್ಗದರ್ಶನ ತೋರದೆ, ಆಲಸ್ಯದಿಂದ ಇದೆ. ಆಗಾಗ್ಗೆ ನಿಯತಕಾಲಿಕೆಯನ್ನು ಪ್ರಕಟಿಸುತ್ತದೆ. ಹಿಂದಿಯಲ್ಲಿ ಒಂದು, ಇಂಗ್ಲೀಷಿನಲ್ಲಿ ಒಂದು ಪುಸ್ತಕ ಪ್ರಕಟಿಸಿದೆ. ಇವು ರಂಗನಾಥನ್‌ರವರೇ ಬರೆದವು.

ಅಖಿಲ ಭಾರತ ಗ್ರಂಥಾಲಯಸಂಘ ಸ್ಥಾಪನೆಯಾದ ೨೭ ವರ್ಷಗಳ ಅನಂತರ ಭಾರತ ಸರ್ಕಾರ ನೇಮಿಸಿದ ಗ್ರಂಥಾಲಯ ಸಲಹಾ ಸಮಿತಿ ಈ ರೀತಿ ಹೇಳಿದೆ:

"ಹೆಚ್ಚು ಕಡಿಮೆ ಗ್ರಂಥಾಲಯಸಂಸ್ಥೆಗಳು ರಕ್ತಹೀನವಾಗಿ ಬಿಳಿಚಿಕೊಂಡಿವೆ. ದೇಶದಲ್ಲಿ ಗ್ರಂಥಾಲಯ ಚಳವಳಿ ಸರಿಯಾಗಿ ಬೆಳೆಯದೆ ಇರುವುದು ಇದಕ್ಕೆ ಕಾರಣ, ಹೌದು. ಈ ಪರಿಸ್ಥಿತಿ ಗ್ರಂಥಾಲಯ ಸಂಘದ ಆಲಸ್ಯ ಪ್ರವೃತ್ತಿಯ ಫಲವೂ ಹೌದು. ಗ್ರಂಥಾಲಯ ಚಳವಳಿಗೆ ಶಕ್ತಿಯುತವಾದ ಗ್ರಂಥಾಲಯಸಂಸ್ಥೆಗಳ ನೆರವು ಮುಖ್ಯ."[20]

ಭಾರತದ ಮೊದಲನೆಯ ಯೋಜನೆಯಲ್ಲಿ ಗ್ರಂಥಾಲಯಗಳಿಗೆ ಹಣವನ್ನು ಮೀಸಲಿಡದಿದ್ದರೂ ಪ್ರಾಥಮಿಕ ಶಿಕ್ಷಣ, ಅನಕ್ಷರಸ್ಥರಿಗೆ ಸಾಮಾಜಿಕ ಶಿಕ್ಷಣ ಇವುಗಳಿಗೆ ಹಣ ನೀಡಿದುದರಿಂದ ಮುಂದಿನ ವರ್ಷಗಳಲ್ಲಿ ಗ್ರಂಥಾಲಯಗಳ ಅಭಿವೃದ್ಧಿಗೆ ಅಡಿಪಾಯ ಹಾಕಿದಂತಾಯಿತು.

ಎರಡನೆಯ ಪಂಚವಾರ್ಷಿಕ ಯೋಜನೆ (೧೯೫೬–೬೧) ಇನ್ನೊಂದು ಹೆಜ್ಜೆ ಮುಂದೆ ಹೋಗಿ ರಾಷ್ಟ್ರೀಯ ಕೇಂದ್ರ ಗ್ರಂಥಾಲಯ, ಕೇಂದ್ರ ಪರಾಮರ್ಶನ ಗ್ರಂಥಾಲಯಗಳ ಸ್ಥಾಪನೆಗೂ, ರಾಷ್ಟ್ರೀಯ ಗ್ರಂಥ ಸೂಚಿಯ ಪ್ರಕಟನೆಗೂ ಹಣ ನೀಡಿತು.

---

[19] A. C. Woolner "Presidential Address," *Proceedings of the Second All-India Library Conference* (Calcutta: Indian Library Association, 1936), p. 9

[20] India, Ministry of Education, *Report of Advisory Committee for Libraries* (Delhi: Manager of Publications, 1961), p. 62

ವಿವರಗಳು ಈ ರೀತಿ ಇವೆ :

(೧) ಕಲ್ಕತ್ತದ ರಾಷ್ಟ್ರೀಯ ಗ್ರಂಥಾಲಯದ ಅಭಿವೃದ್ಧಿ : ಮುಖ್ಯ ಕಟ್ಟಡದ ಬಡಾವಣೆ, ಪುಸ್ತಕ ಸೂಚಿಯ ಪುನರ್‌ವ್ಯವಸ್ಥೆ, ಭಾರತೀಯ ಶಾಸ್ತ್ರದ ಗ್ರಂಥಸೂಚಿಯ ಸಂಕಲನ ರಟ್ಟುಕಟ್ಟುವ ವಿಭಾಗ, ಮಕ್ಕಳ ವಿಭಾಗದ ಸ್ಥಾಪನೆ **೧೦ ಲಕ್ಷ ರೂ**

(೨) ಕೇಂದ್ರ ಪರಾಮರ್ಶನ ಗ್ರಂಥಾಲಯ : ಕಟ್ಟಡ ಹಾಗೂ ರಾಷ್ಟ್ರೀಯ ಗ್ರಂಥಸೂಚಿಯ ಪ್ರಕಟನೆ **೫೦ ಲಕ್ಷ ರೂ.**

(೩) ಕೇಂದ್ರ ಶಿಕ್ಷಣ ಗ್ರಂಥಾಲಯ : ಕಟ್ಟಡ, ಲೇಖನಗಳ ಸೂಚಿಯ ಸೇವಾವಿಸ್ತರಣೆ, ಅಕಾರಾದಿ ಪುಸ್ತಕ ಸೂಚಿಯ ಪುನರ್ ವ್ಯವಸ್ಥೆ, ಅಂತರ ಗ್ರಂಥಾಲಯ ಎರವಲು ಸೇವೆ, ಸಾರ ಸಂಗ್ರಹಗಳ ವ್ಯವಸ್ಥೆ, ಸಾಮಾಜಿಕ ಶಿಕ್ಷಣ ಸಾಹಿತ್ಯದ ಸೂಚಿ **೫ ಲಕ್ಷ ೪೦ ಸಾವಿರ ರೂ.**

(೪) ಗ್ರಂಥಾಲಯಗಳ ತರಬೇತಿಗೆ ಸಂಸ್ಥೆ, ಕಟ್ಟಡ, ಸಾಮಾಜಿಕ ಶಿಕ್ಷಣ ಕಾರ್ಯಕ್ರಮಗಳಲ್ಲಿ ರಾಜ್ಯ ಜಿಲ್ಲಾ ಹಾಗೂ ತಾಲ್ಲೂಕು ಗ್ರಂಥಾಲಯಗಳ ತರಬೇತಿ, ಗ್ರಾಮಗ್ರಂಥಾಲಯ ಸೇವಾ ವ್ಯವಸ್ಥೆ **೧೦ ಲಕ್ಷ ರೂ.**

ಒಟ್ಟು ೭೫ ಲಕ್ಷ ೪೦ ಸಾವಿರ ರೂ.

ಪ್ರತಿ ಗ್ರಂಥಾಲಯ ಸಮ್ಮೇಳನದಲ್ಲೂ ಸರ್ಕಾರವನ್ನು ಕೇಳುತ್ತಿದ್ದ ಬೇಡಿಕೆಯಂತೆ ಹಿಂದಿನ ಇಂಪೀರಿಯಲ್ ಗ್ರಂಥಾಲಯವನ್ನು ರಾಷ್ಟ್ರೀಯ ಗ್ರಂಥಾಲಯವನ್ನಾಗಿ ೧೯೫೧ರಲ್ಲಿ ಸ್ಥಾಪಿಸಲಾಯಿತು. ೧೯೫೩ರಲ್ಲಿ ಚಾರಿತ್ರಿಕ ಘಟನೆಗಳ ನೆನಪುಳ್ಳ ಬೆಲ್‌ವೆಡಿಯರ್ ಕಟ್ಟಡಕ್ಕೆ ವರ್ಗಾವಣೆಯಾಯಿತು. ಅದರ ಆರಂಭೋತ್ಸವ ನಡೆಸಿದ ಆಗಿನ ಕೇಂದ್ರೀಯ ಮಂತ್ರಿ ಮೌಲಾನಾ ಅಬ್ದುಲ್ ಕಲಾಂ ಆಜಾದರು ತಮ್ಮ ಭಾಷಣದಲ್ಲಿ " ಈ ಗ್ರಂಥಾಲಯ ಅಭಿವೃದ್ಧಿಹೊಂದುತ್ತ ಕಾಲ ಕ್ರಮೇಣ ಯೂರೋಪ್ ಮತ್ತು ಅಮೆರಿಕಗಳ ಅತ್ಯುತ್ತಮ ಗ್ರಂಥಾಲಯಗಳನ್ನು ಮೀರಿಸುವಂತಾಗುವುದು ಎಂದು ಆಶಿಸುತ್ತೇನೆ. ಇದಕ್ಕಾಗಿ ಭಾರತ ಸರ್ಕಾರ ಏನನ್ನಾದರೂ ಮಾಡಲು ಸಿದ್ಧ. ಹೊಸ ಪುಸ್ತಕಗಳನ್ನು ಕೊಳ್ಳಲು ಈಗಾಗಲೇ ವಾರ್ಷಿಕ ಕೊಡುಗೆಯನ್ನು ಹೆಚ್ಚಿಸಲಾಗಿದೆ "[21] ಎಂದು ಹೇಳಿದರು.

ರಾಷ್ಟ್ರೀಯ ಗ್ರಂಥಾಲಯದ ನಾನಾ ಮುಖದ ಚಟುವಟಿಕೆ ಹೆಚ್ಚಿ ೧೯೪೭-೬೦ರಲ್ಲಿ ಅದರ ಹಣಕಾಸು ವ್ಯವಹಾರ ೧,೪೭,೩೦೦ ರೂ. ನಿಂದ ೧೨,೧೬,೨೭ಲಕ್ಕೆ

[21] B. S. Kesavan, "*India's National Library*" (Calcutta: National Library, 1961). pp. 257–7

ಏರಿತು. ಆದರ ಸಿಬ್ಬಂದಿ ೭೬ರಿಂದ ೪೨೬ಕ್ಕೆ ಏರಿತು. ಪುಸ್ತಕಗಳ ಸಂಖ್ಯೆ ೧೦ ಲಕ್ಷದ ಹತ್ತಿರಕ್ಕೆ ಬಂತು. ಇನ್ನೂ ೧೦ ಲಕ್ಷ ಪುಸ್ತಕಗಳನ್ನಿಡಲು ೩೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಡವನ್ನು ಬಡಾಯಿಸಲಾಯಿತು.[22]

೧೯೫೦ರಲ್ಲಿ ಭಾರತೀಯ ಶಾಸ್ತ್ರದ ಗ್ರಂಥಸೂಚಿಯನ್ನು ಹಿಂದಿನ ಕಾಲದ ಪುಸ್ತಕಗಳಿಂದ ಆರಂಭಗೊಳಿಸಲಾಯಿತು. ಇದು ಟಿಪ್ಪಣಿ ಸಹಿತ ಇರುವ ಗ್ರಂಥ ಸೂಚಿಯಾಗಿ ೫೬ ಸಂಪುಟಗಳಲ್ಲಿ ಬರಲಿದೆ. ಇವುಗಳಲ್ಲಿ ಮಾನವಶಾಸ್ತ್ರ, ಸಸ್ಯ ಶಾಸ್ತ್ರ, ಬಂಗಾಳಿಭಾಷೆ, ಸಾಹಿತ್ಯ ಇವುಗಳ ಸಂಪುಟ ಪ್ರಕಟವಾಗಿದೆ. ಪ್ರಾಚೀನ ಭಾರತ ಇತಿಹಾಸ, ಮಧ್ಯಕಾಲದ ಭಾರತೀಯ ಇತಿಹಾಸ, ಭಾರತೀಯ ಭಾಷಾ ಶಾಸ್ತ್ರ, ಸಂಸ್ಕೃತ ಸಾಹಿತ್ಯದ ಸಂಪುಟಗಳನ್ನು ಆರಂಭಿಸಲಾಗಿದೆ. ಈ ವಿಭಾಗ ಗಳಲ್ಲಿ ವಿಷಯ ಪರಿಣಿತರು ರಾಷ್ಟ್ರೀಯ ಗ್ರಂಥಾಲಯದ ವಿಭಾಗಗಳ ಸಹಕಾರ ದೊಂದಿಗೆ ಕೆಲಸಮಾಡುತ್ತಿದ್ದಾರೆ.[23]

ಇದಲ್ಲದೆ ವಿದ್ವಾಂಸರ ಉಪಯೋಗಕ್ಕಾಗಿ ಗ್ರಂಥಸೂಚಿಗಳನ್ನು ತಯಾರಿಸ ಲಾಗಿದೆ. ಕೈಗಾರಿಕಾ ಹಾಗೂ ವೈಜ್ಞಾನಿಕ ಸಂಶೋಧನ ಮಂಡಲಿಗಾಗಿ ಭಾರತೀಯ ವೈಜ್ಞಾನಿಕ ಪ್ರಕಟನೆಗಳ ವರ್ಗೀಕೃತ ಗ್ರಂಥಸೂಚಿಯನ್ನು ತಯಾರಿಸ ಲಾಗಿದೆ.

೧೯೫೩ರಲ್ಲಿ ಭಾರತ ಸರ್ಕಾರ ರಾಷ್ಟ್ರೀಯ ಸಂಸ್ಕೃತಿ ದತ್ತಿಯನ್ನು ನೇಮಿಸಿತು. ಆದರ ಉದ್ದೇಶಗಳು ಈಡೇರಲು ಲಲಿತಕಲಾ ಅಕಾಡೆಮಿ, ಸಂಗೀತ ನಾಟಕ ಅಕಾಡೆಮಿ, ಸಾಹಿತ್ಯ ಅಕಾಡೆಮಿ ಇವುಗಳ ಸ್ಥಾಪನೆಯಾಯಿತು. ಕಡೆಯ ಸಂಸ್ಥೆ ೧೯೫೪ರಲ್ಲಿ ಸ್ಥಾಪಿತವಾಯಿತು. ಭಾರತದ ನಾನಾ ಭಾಷೆಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸಿ ದೇಶದ ಸಂಸ್ಕೃತಿಯ ಏಕತೆಯನ್ನು ವೃದ್ಧಿಗೊಳಿಸುವುದೇ ಸಾಹಿತ್ಯ ಅಕಾಡೆಮಿಯ ಉದ್ದೇಶ. ಇದು ಹಲವು ಉತ್ತಮ ಕೆಲಸಗಳನ್ನು ಮಾಡಿದೆ.[24]

ಮೊದಲನೆಯದಾಗಿ ಭಾರತೀಯ ಸಾಹಿತ್ಯದ ರಾಷ್ಟ್ರೀಯ ಗ್ರಂಥಸೂಚಿಯ ತಯಾರಿಕೆ. ಭಾರತದ ಸಂವಿಧಾನದಲ್ಲಿ ಉಲ್ಲೇಖವಾಗಿರುವ ಹದಿನಾಲ್ಕು ಭಾಷೆ ಗಳಲ್ಲಿ ಮಾನವ ಶಾಸ್ತ್ರದಲ್ಲಿ ೨೦ನೆಯ ಶತಮಾನದ ಮುಖ್ಯ ಪ್ರಕಟನೆಗಳು, ಭಾರತ ದಲ್ಲಿ ಭಾರತೀಯರಿಂದ ಇಂಗ್ಲಿಷ್ ಭಾಷೆಯಲ್ಲಿ ಬರೆದು ಪ್ರಕಟವಾದ ಪುಸ್ತಕಗಳ

---

[22] *Ibid.*, pp. 52–53

[23] For a complete list of projected bibliographies see the Apendix to Kesavan's India's Nationl Library, p. 264

[24] India, Ministry of Information and Broadcasting; *India, A Reference Annual, 1962*. (Delhi: Publication Division, 1962), p. 93

ಗ್ರಂಥಸೂಚಿಯ ತಯಾರಿಕೆ. ೧೯೬೨ರಲ್ಲಿ ಪ್ರಕಟವಾದ ಮೊದಲನೆಯ ಸಂಪುಟದಲ್ಲಿ ಅಸ್ಸಾಮೀ, ಬಂಗಾಳೀ, ಇಂಗ್ಲಿಷ್, ಗುಜರಾತಿ ಸಾಹಿತ್ಯ ಕೃತಿಗಳ ಹೆಸರಿದೆ. ಇದು ೧೯೦೧ರಿಂದ ೧೯೫೩ರ ಕಾಲದ ಪ್ರಕಟನೆಗಳನ್ನೊಳಗೊಂಡಿದೆ. ಪುಸ್ತಕದ ಹೆಸರು ಮತ್ತಿತರ ವಿವರಗಳು ರೋಮನ್ ಲಿಪಿಯಲ್ಲಿದ್ದು ಇಂಗ್ಲಿಷಿನಲ್ಲಿ ಟಿಪ್ಪಣಿಗಳಿವೆ. ಪ್ರತಿಯೊಂದು ಭಾಷೆಯ ಪುಸ್ತಕಗಳನ್ನೂ ಈ ರೀತಿ ಗುಂಪುಗಳಾಗಿ ವಿಭಾಗಿಸಿದೆ—ಸಂಕೀರ್ಣಕೃತಿಗಳು, ತತ್ತ್ವ ಹಾಗೂ ಮತ, ಸಮಾಜವಿಜ್ಞಾನ, ಭಾಷೆ, ಕಲೆ, ಸಾಹಿತ್ಯ, ಚರಿತ್ರೆ, ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ ಮತ್ತು ಇತರ ರೀತಿಯವು. ಅಧಿಕಾರಯುಕ್ತವಾಣಿಯಿರುವ ಪರಿಣತರು ಈ ಪುಸ್ತಕಗಳನ್ನು ಆಯ್ದು ಆ ಕಾರ್ಯದಲ್ಲಿ ಭಾಗವಹಿಸಿದ್ದಾರೆ.[25]

ಇದೇ ರೀತಿ ಪ್ರಕಟವಾಗಿರುವ ಎರಡನೆಯ ಸಂಪುಟದಲ್ಲಿ ಹಿಂದಿ, ಕನ್ನಡ, ಕಾಶ್ಮೀರಿ, ಮಲಯಾಳಂ, ಸಾಹಿತ್ಯ ಪ್ರಕಟನೆಗಳೂ ಇವೆ. ಮೂರನೆಯದರಲ್ಲಿ ಮರಾಠಿ, ಒರಿಯಾ, ಪಂಜಾಬಿ, ಸಂಸ್ಕೃತ ಸಾಹಿತ್ಯ ಪ್ರಕಟನೆಗಳೂ, ನಾಲ್ಕನೆಯದರಲ್ಲಿ ಸಿಂಧಿ, ತಮಿಳು, ತೆಲುಗು, ಉರ್ದು ಸಾಹಿತ್ಯ ಪ್ರಕಟನೆಗಳೂ ಇರುತ್ತವೆ. ಇದೇ ರೀತಿ ಅಕಾಡೆಮಿ ೧೯೬೧ರಲ್ಲಿ ಬರಹಗಾರರ ಪರಿಚಯ ಕೋಶವನ್ನು ಪ್ರಕಟಿಸಿತು.

೧೯೫೫ರ ಸೆಪ್ಟೆಂಬರಿನಲ್ಲಿ ಭಾರತದ ವಯಸ್ಕ ಶಿಕ್ಷಣ ಸಂಘ ದೆಹಲಿಯಲ್ಲಿ "ಸಾಮಾಜಿಕ ಶಿಕ್ಷಣದಲ್ಲಿ ಗ್ರಂಥಾಲಯಗಳ ಪಾತ್ರ" ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಿತು. ಭಾರತದ ಗ್ರಂಥಾಲಯಗಳ ಸ್ಥಿತಿಗಳನ್ನು ಪರಿಶೀಲಿಸಲು ಒಂದು ಗ್ರಂಥಾಲಯ ಆಯೋಗವನ್ನು ರಚಿಸಬೇಕೆಂದು ಸಮ್ಮೇಳನ ಶಿಫಾರಸು ಮಾಡಿತು. ಇದನ್ನು ಈ ಸಮಸ್ಯೆಯ ಅರಿವು ಇದ್ದ ಕೇಂದ್ರ ಶಿಕ್ಷಣ ಸಚಿವ ಶಾಖೆ ಒಪ್ಪಿತು. ಅದರಂತೆ ೧೯೫೬ರಲ್ಲಿ ಬಿಹಾರದ ಶಿಕ್ಷಣ ಶಾಖೆಯ ಡೈರೆಕ್ಟರ್ ಶ್ರೀ. ಕೆ. ಪಿ. ಶುಕ್ಲಾ ಅವರ ಅಧ್ಯಕ್ಷತೆಯಲ್ಲಿ ಒಂಬತ್ತು ಜನರುಳ್ಳ ಸಮಿತಿಯನ್ನು ನೇಮಿಸಿತು.[26] ಅದರ ವಿಚಾರಣೆಗೆ ಸೇರಿದ ವಿಷಯಗಳ ಪೈಕಿ (೧) ಜನರ ಪ್ರಚಲಿತ ಓದಿಗೆ ಬೇಕಾದ ಸಾಮಗ್ರಿಗಳು (೨) ನಾನಾ ಪಂಗಡಗಳ ಜನರ ಓದಿನ ಅಭಿರುಚಿ—ಇವುಗಳೂ ಇದ್ದುವು. ಇದನ್ನು ಕಾರ್ಯಗತ ಮಾಡಲ ದೊಡ್ಡ ಸಂಶೋಧನ ಯೋಜನೆಯೇ ಬೇಕಾಗಿತ್ತು. ಅದರಿಂದ ಸಮಿತಿ ಈ ಕೆಳಗೆ ಸೂಚಿಸಿದ ವಿಷಯಗಳಿಗೆ ಮಾತ್ರ ಗಮನ ಕೊಟ್ಟಿತು :—

---

[25] *The National Bibliography of Indian Literature*, 1931–1933 New Delhi : Sahitya Akademi, 1962), p. vi

[26] India, Ministry of Education, *Advisory Committee for Libraries*. *Report* (Delhi : Manager of Publications, 1961)

(೧) ಭಾರತದಲ್ಲಿ ಮುಂದೆ ಇರಬೇಕಾದ ಗ್ರಂಥಾಲಯ ವ್ಯವಸ್ಥೆ,

(೨) ಗ್ರಂಥಾಲಯ ಹಾಗೂ ಸಾಮಾಜಿಕ ಶಿಕ್ಷಣ ಯೋಜನೆಯ ನಡುವಣ ಸಹಕಾರ ಮಾರ್ಗ,

(೩) ಗ್ರಂಥಾಲಯ ತರಬೇತಿ ಹಾಗೂ ಅದರ ಸೇವಾ ಪರಿಸ್ಥಿತಿ,

(೪) ಭಾರತದಲ್ಲಿ ಮುಂಬರುವ ಗ್ರಥಾಲಯ ವ್ಯವಸ್ಥೆಯ ಆಡಳಿತ ಮತ್ತು ಹಣಕಾಸು,

ಇದು ಭಾರತದಲ್ಲೇ ಪ್ರಥಮವಾಗಿ ಸಾರ್ವಜನಿಕ ಗ್ರಂಥಾಲಯಗಳ ಬಗ್ಗೆ ವಿಸ್ತೃತವಾಗಿ ನಡೆದ ಸರ್ವೀಕ್ಷೆ. ಈ ವಿಷಯಗಳನ್ನು ಸಮಿತಿ ಕೂಲಂಕಷವಾಗಿ ಪರಿಶೀಲಿಸಿತು. ಈ ಶಿಫಾರಸಿನಂತೆ ಭಾರತದ ಗ್ರಂಥಾಲಯ ವ್ಯವಸ್ಥೆ ಪ್ರಗತಿ ಹೊಂದುತ್ತಿದೆ. ಇದರಲ್ಲಿ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಹಲವು ಮಾರ್ಪಾಡುಗಳು ಅನಿವಾರ್ಯ.

ಈ ಸಲಹಾ ಸಮಿತಿಯ ವರದಿಯಂತೆ ಸದಸ್ಯರು ಓದುಗರಿಗೆ ಗ್ರಂಥಗಳನ್ನು ಒದಗಿಸುವ ಕಾರ್ಯಕ್ಕೆ ಮಹತ್ವನೀಡಿದರು. ಅಲ್ಲದೆ ರಾಜ್ಯಗಳ ಕೇಂದ್ರ ಗ್ರಂಥಾಲಯಗಳು ತಮ್ಮ ಇತರ ಕಾರ್ಯಗಳ ಜೊತೆಗೆ ರಾಜ್ಯದ ಎಲ್ಲ ಖಾಸಗಿ ಹಾಗೂ ಸರ್ಕಾರಿ ಪ್ರಕಟನೆಗಳ ಸಂಗ್ರಹವನ್ನು ಹೊಂದಿರಬೇಕೆಂದೂ ಗ್ರಂಥಸೂಚಿಗಳನ್ನು ಪಂಡಿತರು ಹಾಗೂ ಸಂಶೋಧಕರಿಗಾಗಿ ತಯಾರಿಸಬೇಕೆಂದೂ ರಾಜ್ಯದ ಮುಖ್ಯ ಗ್ರಂಥಾಲಯಗಳಲ್ಲಿನ ಪುಸ್ತಕ ಸಂಗ್ರಹಗಳಿಗೆ ಸಂಯುಕ್ತ ಸೂಚಿಯನ್ನು ತಯಾರಿಸಬೇಕೆಂದೂ ರಾಜ್ಯದ ಹೊರಗೂ ಒಳಗೂ ಅಂತರ ಗ್ರಂಥಾಲಯ ಎರವಲು ಸೇವೆಯ ಕೇಂದ್ರವಾಗಬೇಕೆಂದೂ ಶಿಫಾರಸು ಮಾಡಿದರು.[27]

ಅಲ್ಲದೆ ಭಾರತ ಸರ್ಕಾರ ಈ ಕೆಳಕಂಡ ನಾಲ್ಕು ಗ್ರಂಥಸೂಚಿಗಳ ತಯಾರಿಕೆಯನ್ನು ಆರಂಭಿಸಬೇಕೆಂದು ಸೂಚಿಸಲಾಯಿತು :—

(೧) ವಿಶ್ವವಿದ್ಯಾನಿಲಯ ಧನ ಆಯೋಗದ ಆಶ್ರಯದಲ್ಲಿ ದೇಶದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿನ ಪುಸ್ತಕಗಳ ಸಂಯುಕ್ತ ಸೂಚಿ,

(೨) ಭಾರತ ಸರ್ಕಾರದ ಶಿಕ್ಷಣ ಸಚಿವ ಶಾಖೆಯ ಆಶ್ರಯದಲ್ಲಿ ಸರ್ಕಾರದ ಎಲ್ಲ ಶಾಖೆಗಳಲ್ಲಿ ಹಾಗೂ ಸಂಶೋಧನ ಗ್ರಂಥಾಲಯಗಳಲ್ಲಿರುವ ಪುಸ್ತಕಗಳ ಸಂಯುಕ್ತ ಸೂಚಿ,

(೩) ರಾಷ್ಟ್ರೀಯ ಗ್ರಂಥಾಲಯದ ಆಶ್ರಯದಲ್ಲಿ ನಾನಾ ರಾಜ್ಯಗಳ ಕೇಂದ್ರ ಗ್ರಂಥಾಲಯಗಳಲ್ಲಿರುವ ಕೃತಿಸ್ವಾಮ್ಯ ಪುಸ್ತಗಳ ಸಂಯುಕ್ತ ಸೂಚಿ,

(೪) ವೈಜ್ಞಾನಿಕ ಸಂಶೋಧನೆ ಹಾಗೂ ಸಂಸ್ಕೃತಿ ವಿಚಾರ ಸಚಿವಶಾಖೆಯ ಆಶ್ರಯದಲ್ಲಿ ಎಲ್ಲ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು, ಸಂಶೋಧನ

---

[27] *Ibid.*, pp. 53–54

ಗ್ರಂಥಾಲಯಗಳಲ್ಲಿರುವ ಎಲ್ಲ ವೈಜ್ಞಾನಿಕ ಹಾಗೂ ಪಾಂಡಿತ್ಯಪೂರ್ಣ ನಿಯತ ಕಾಲಿಕೆಗಳ ಸಂಯುಕ್ತ ಸೂಚಿ.[28]

ಇಪ್ಪತ್ತನೆಯ ಶತಮಾನದ ಆರಂಭದಿಂದ ಭಾರತದಲ್ಲಿ ವೈಜ್ಞಾನಿಕ ಸಂಶೋಧನೆ ತೀವ್ರವಾಗಿ ಪ್ರಗತಿಹೊಂದಿತು. ಹಿಂದಿನ ವರ್ಷಗಳಲ್ಲಿ ವೈಜ್ಞಾನಿಕ ಸಂಶೋಧನೆ ಹಿರಿಯ ವಿಶ್ವವಿದ್ಯಾನಿಲಯಗಳಾದ ಬೊಂಬಾಯಿ ಕಲ್ಕತ್ತ ಮದರಾಸು ಗಳಲ್ಲಿ ಮಾತ್ರ ನಡೆಯುತ್ತಿತ್ತು. ಭಾರತ ಸರ್ಕಾರ ವೈಜ್ಞಾನಿಕ ಸಂಶೋಧನೆಯಲ್ಲಿ ಆಸಕ್ತಿ ವಹಿಸಿ ದೇಶದ ಆರ್ಥಿಕ ಪ್ರಗತಿಗೆ ನೆರವಾಗಲು ಅನೇಕ ಮುಖ್ಯ ಸಂಶೋಧನ ಸಂಸ್ಥೆಗಳನ್ನು ಸ್ಥಾಪಿಸಿತು. ಸಾಧಾರಣವಾಗಿ ಹೇಳುವುದಾದರೆ ಆಗ ಭಾರತದಲ್ಲಿ ವ್ಯವಸ್ಥಿತವಾದ ಕೈಗಾರಿಕೆಗಳು ಕೆಲವೇ ಇದ್ದುವು. ಕೈಗಾರಿಕಾ ವಸ್ತುಗಳಿಗೆ ಇಂಗ್ಲೆಂಡನ್ನು ಅವಲಂಬಿಸಬೇಕಾಗಿತ್ತು. ಖಾಸಗಿ ದತ್ತಿಯಿಂದ ಸ್ಥಾಪಿತ ವಾದ ಸಂಶೋಧನ ಸಂಸ್ಥೆಗಳೂ ಇದ್ದುವು. ಬೆಂಗಳೂರಿನ ತಾತಾ ವಿಜ್ಞಾನ ಮಂದಿರ ತಾತಾ ಮನೆತನದವರಿಂದ ದತ್ತಿ ಪಡೆದು ಭಾರತ ಹಾಗೂ ಮೈಸೂರು ಸರ್ಕಾರದಿಂದ ಸಹಾಯ ಪಡೆದು ಮುನ್ನಡೆಯಿತು. ಇದೇ ರೀತಿ ಸ್ನಾತಕೋತ್ತರ ಸಂಶೋಧನೆಗಾಗಿ ಸ್ಥಾಪಿತವಾದ ಮತ್ತೊಂದು ಸಂಸ್ಥೆ ಸರ್ ಜಗದೀಶಚಂದ್ರ ಬೋಸರಿಂದ ಸ್ಥಾಪಿತವಾದ ಕಲ್ಕತ್ತದ ಬೋಸ್ ಸಂಶೋಧನಾಲಯ. ವಿಶ್ವ ವಿದ್ಯಾನಿಲಯಗಳಲ್ಲಿ ಸಂಶೋಧನಕಾರ್ಯ ಬೇಗ ಮುನ್ನಡೆಯಿತು. ಸರಕಾರ ಆರಂಭಿಸಿದ ಪಂಚವಾರ್ಷಿಕ ಯೋಜನೆಯಿಂದ ದೇಶದ ವೈಜ್ಞಾನಿಕ ಹಾಗೂ ಕೈಗಾರಿಕಾ ಚಟುವಟಿಕೆಗಳು ಹೆಚ್ಚಾಗಿವೆ.[29]

ಎರಡನೆಯ ಮಹಾಯುದ್ಧದ ಕಾಲದಲ್ಲಿ ಭಾರತದಲ್ಲಿ ವೈಜ್ಞಾನಿಕ ಪ್ರಯೋಗಾ ಲಯಗಳ ಸ್ಥಾಪನೆಗೆ ಯೋಜನೆಯೊಂದನ್ನು ರೂಪಿಸಲಾಯಿತು. ಹೊಸದಾಗಿ ಸ್ಥಾಪಿಸಲ್ಪಟ್ಟ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನ ಮಂಡಲಿ ಈ ಯೋಜನೆಯನ್ನು ಹಾಕಿತು. ಈ ಮಂಡಲಿಯ ಮುಖ್ಯಕಾರ್ಯ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನೆಗಳನ್ನು ಪ್ರೋತ್ಸಾಹಿಸಿ ಸಮನ್ವಯಗೊಳಿಸುವುದು. ಈ ಮಂಡಳಿಯ ಕೆಳಗೆ ೩೮ ರಾಷ್ಟ್ರೀಯ ಪ್ರಯೋಗಾಲಯಗಳೂ ಸಂಸ್ಥೆಗಳೂ ಇವೆ. ಅಲ್ಲದೆ ಈ ಮಂಡಳಿ ವಿಜ್ಞಾನಿಗಳಿಗೆ, ಸಂಶೋಧನ ಸಂಸ್ಥೆಗಳಿಗೆ, ವಿಶ್ವವಿದ್ಯಾ ನಿಲಯಗಳಿಗೆ ಹಣ ಸಹಾಯಮಾಡುತ್ತದೆ. ವಿಜ್ಞಾನಕ್ಕೆ ಸಂಬಂಧಿಸಿದ ಸಮಾಚಾರ ವಿತರಣೆಯೂ ಇದರ ಜವಾಬ್ದಾರಿ. ೧೯೫೩ರ ವರೆಗೆ ರಾಷ್ಟ್ರೀಯ ಪ್ರಯೋಗಾಲಯ

---

[28] *Ibid.*, p. 68

[29] B. Prasad, *The Progress of Science in India During the Past Twenty-Five Years* (Calcutta: The Indian Science Congress Association, 1938), pp. xx–xxvi. Gives a detailed account of scientific progress and institutions

ಗಳಲ್ಲಿ ಮಂಡಳಿಯ ಧನಸಹಾಯದಿಂದ ನಡೆದ ಸಂಶೋಧನೆಗಳನ್ನು ವಿಮರ್ಶಿಸಿ ೧೯೫೪ರಲ್ಲಿ ಪ್ರಕಟಿಸಿತು. ಇದರ ಜೊತೆಗೆ ಅನುಬಂಧದಲ್ಲಿ ವೈಜ್ಞಾನಿಕ ಹಾಗೂ ತಾಂತ್ರಿಕ ಲೇಖನಗಳ ಗ್ರಂಥಸೂಚಿಯಿದೆ. ೧೯೫೯ರ ಅನಂತರ ಮಂಡಲಿ ರಾಷ್ಟ್ರೀಯ ಸಂಶೋಧನಾಲಯಗಳು ಹಾಗೂ ತಾನು ಸಹಾಯ ನೀಡಿದ ಸಂಶೋಧನ ಕಾರ್ಯಗಳನ್ನು ಕುರಿತ ಪ್ರಕಟಿತ ಲೇಖನಗಳ ಸಾರವನ್ನು ಪ್ರಕಟಿಸಿತು. ಈ ಲೇಖನ ಸಾರಗಳು ಮಂಡಳಿಯ ತ್ರೈಮಾಸಿಕವಾದ **ಜರ್ನಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್** ಪತ್ರಿಕೆಯಲ್ಲಿ ಪ್ರಕಟವಾಗುತ್ತವೆ.[30]

ಇನ್ಸ್‌ಡಾಕ್ ಎಂದು ಕರೆಯಲ್ಪಡುವ ಭಾರತ ರಾಷ್ಟ್ರೀಯ ವೈಜ್ಞಾನಿಕ ಪ್ರಲೇಖಗಳ ಕೇಂದ್ರ ೧೯೫೨ರಲ್ಲಿ ಸ್ಥಾಪಿತವಾಯಿತು. ಭಾರತದಲ್ಲಿ ಪ್ರಲೇಖ ಸೇವೆಯಲ್ಲಿ ಇದೊಂದು ಪ್ರೈಲಿಗಲ್ಲು. ಯುನೆಸ್ಕೋ ನೆರವಿನೊಡನೆ ಭಾರತ ಸರ್ಕಾರ ಈ ಸಂಸ್ಥೆಯನ್ನು ಸ್ಥಾಪಿಸಿತು. ಆರಂಭದಲ್ಲಿ ಯುನೆಸ್ಕೋ ಮೂರು ವರ್ಷಗಳ ಕಾಲ ವಿದೇಶೀ ತಜ್ಞರ ಸೇವೆಯನ್ನು ಕೊಟ್ಟಿದ್ದಲ್ಲದೆ ಅಧ್ಯಯನಕ್ಕಾಗಿ ೮ ಸಾವಿರ ಡಾಲರ್ ನೀಡಿತು.[31] ಇನ್ಸ್‌ಡಾಕ್ ಸಂಸ್ಥೆಯ ಚಟುವಟಿಕೆಗಳು ಏಕಪ್ರಕಾರವಾಗಿ ಹೆಚ್ಚುತ್ತಿವೆ. ಸರ್ಕಾರ ಕೊಡುವ ಸಹಾಯದ್ರವ್ಯದ ಮೊಬಲಗೂ ಏರುತ್ತಿದೆ.

ಭಾರತದಲ್ಲಿ ಉಪಯೋಗಕ್ಕೆ ಬೇಕಾಗುವ ಎಲ್ಲಾ ವಿಜ್ಞಾನ ನಿಯತಕಾಲಿಕೆಗಳನ್ನು ದೇಶವಿದೇಶಗಳಿಂದ ತರಿಸಿಟ್ಟುಕೊಳ್ಳುವುದು, ವಿಜ್ಞಾನಿಗಳಿಗೂ ಶಿಲ್ಪಶಾಸ್ತ್ರಜ್ಞರಿಗೂ ಅವಶ್ಯವಾದ ನಾನಾ ನಿಯತಕಾಲಿಕ ಲೇಖನಗಳ ಪ್ರಕಟನೆಯನ್ನು ಪ್ರತಿ ತಿಂಗಳೂ ಲೇಖನಗಳ ಸಾರಸಂಗ್ರಹ ಪತ್ರಿಕೆಯ ಮೂಲಕ ತಿಳಿಯಪಡಿಸುವುದು; ನಿರ್ದಿಷ್ಟ ಪ್ರಶ್ನೆಗಳನ್ನು ಉತ್ತರಿಸುವುದು, ನಿಯತಕಾಲಿಕೆ ಲೇಖನಗಳ ಛಾಯಾ ಪ್ರತಿಯನ್ನೊದಗಿಸುವುದು, ಲೇಖನಗಳನ್ನು ಇಂಗ್ಲಿಷೇತರ ಯೂರೋಪಿಯನ್ ಭಾಷೆಹಾಗೂ ಚೀನೀ, ಜಪಾನೀ ಭಾಷೆಗಳಿಂದ ಇಂಗ್ಲಿಷಿಗೆ ಭಾಷಾಂತರ ಮಾಡಿ ಒದಗಿಸುವುದು—ಇವೇ ಇನ್ಸ್‌ಡಾಕ್‌ನ ಮುಖ್ಯ ಕಾರ್ಯಗಳು. ಪ್ರಕಟಿತ ಹಾಗೂ ಅಪ್ರಕಟಿತ ವರದಿಗಳನ್ನು ನಿಕ್ಷೇಪವಾಗಿಟ್ಟು ಪ್ರಪಂಚದ ಇತರರಿಗೆ ತಿಳಿಯುವಂತೆ ಸಮಾಚಾರ ನೀಡುವುದೂ ಈ ಸಂಸ್ಥೆಯ ಜವಾಬ್ದಾರಿ.[32]

---

[30] T. S. Rajagopalan, "Indian Scientific Documents and their Bibliographical Organisation", *Journal of the Indian Library Association*. IV (Jan-Apr. 1962). p. 164

[31] S. R. Ranganathan, *Documentation and its Facets, Being a symposium of Seventy papers by Thirty–Two Authors*, (Bombay : Asia Publishing House, 1963), pp. 124–25

[32] INSDOC Report; 1957–58 (Delhi : Indian National Scientific Documentation Centre, 1958), pp. 1–2

೧೯೪೯ರಲ್ಲಿ ಯುನೆಸ್ಕೋ ದಕ್ಷಿಣ ಏಷ್ಯಾ ದೇಶಗಳಲ್ಲಿನ ವಿಜ್ಞಾನ ನಿಯತ ಕಾಲಿಕೆಗಳ ಸಂಯುಕ್ತ ಸೂಚಿಯನ್ನು ಸಂಕಲಿಸಲು ಆರಂಭಿಸಿತು. ಇದನ್ನು ಇನ್ಸ್‌ಡಾಕ್ ಸಂಸ್ಥೆ ವಹಿಸಿಕೊಂಡಿತು. ೧೯೬೫ರಿಂದ ವಿಜ್ಞಾನಲೇಖನಗಳ ಸಾರಸಂಗ್ರಹ ನಿಯತಕಾಲಿಕೆ 'ಭಾರತ ವಿಜ್ಞಾನ ಸಾರಸಂಗ್ರಹ' (The Indian Science Abstracts) ಆರಂಭಿಸಿದೆ. ಅದೇ ವರ್ಷದಲ್ಲಿ ಭಾರತದ ವಿಜ್ಞಾನ ನಿಯತ ಕಾಲಿಕೆಗಳ ವಿಳಾಸ ಪುಸ್ತಕ ಸಂಕಲಿಸಿ, ೧೯೬೮ ರಲ್ಲಿ ಪರಿಷ್ಕರಿಸಿತು. (Directory of Indian Scientific Periodicals) ಭಾರತದ ವಿಜ್ಞಾನಿಗಳ ಸಹಾಯಕ್ಕಾಗಿ ೧೯೫೪ ರಿಂದ ೧೯೬೫ರ ಕೊನೆಯವರೆಗೆ ಪ್ರಚಲಿತ ವಿಜ್ಞಾನ ಲೇಖನಗಳ ಪಟ್ಟಿಯನ್ನು ಪಕ್ಷಪತ್ರಿಕೆಯಾಗಿ ಪ್ರಕಟಿಸಿತು (Insdoc list of current Scientific Literature). ಇವುಗಳಲ್ಲದೆ, ಕೆಲವು ನಿರ್ದಿಷ್ಟ ವಿಷಯಗಳಲ್ಲಿ ಪ್ರಚಲಿತ ವಿಜ್ಞಾನ ಲೇಖನಗಳನ್ನು ಸಂಗ್ರಹಿಸಿ ಪ್ರದರ್ಶಿಸಿತು.

(೧) ರಾಷ್ಟ್ರೀಯ ಕಟ್ಟಡ ನಿರ್ಮಾಣ ಸಂಸ್ಥೆಯ ಚಟುವಟಿಕೆಗಳ ಸಾರ ಸಂಗ್ರಹ (೧೯೫೫—) (NBO Abstracts),

(೨) ಕೇಂದ್ರ ರಸ್ತೆ ನಿರ್ಮಾಣ ಸಂಶೋಧನೆ ಸಂಸ್ಥೆಯ ಚಟುವಟಿಕೆಗಳ ಸಾರಸಂಗ್ರಹ (CRRI Road Abstracts),

(೩) ಭಾರತದಲ್ಲಿ ಪ್ರಾಣಿಶಾಸ್ತ್ರದ ಗ್ರಂಥಸೂಚಿ (೧೯೬೪—) (Bibliography of Indian Zoology),

(೪) ನೀರಾವರಿ ಹಾಗೂ ವಿದ್ಯುಚ್ಛಕ್ತಿ ಸಾರಸಂಗ್ರಹ (೧೯೪೩) (Irrigation and Power abstracts),

(೬) ರೈಲ್ವೆ ಸಚಿವ ಶಾಖೆಯ ಅಧೀನದಲ್ಲಿರುವ ರೈಲ್ವೆಗೆ ಸಂಬಂಧಿಸಿದ ನಕ್ಷೆ ಹಾಗೂ ಮಾನಕ ಪ್ರಲೇಖಗಳ ಟಿಪ್ಪಣಿ (೧೯೫೪—) (The Documentation Notes of the Design and Standard Organisation),

(೭) ಪೊಟ್ಟಣ ಕಟ್ಟುವ ಕಾರ್ಯದ ಲೇಖನದ ಸಾರಸಂಗ್ರಹ (೧೯೬೮—) (Packaging Abstracts)

(೮) ದೇಶರಕ್ಷಣೆ, ಸಂಶೋಧನೆ ಹಾಗೂ ಅಭಿವೃದ್ಧಿ ಪ್ರಯೋಗಶಾಲೆಯ ಪ್ರಲೇಖನಗಳ ಪತ್ರಿಕೆ (೧೯೬೬—) (DRDL Documentation Bulletin)

ದುರದೃಷ್ಟವಶಾತ್ ಸಮಾಜವಿಜ್ಞಾನ ವಿಷಯಗಳ ಪ್ರಲೇಖನಕಾರ್ಯ ವಿಜ್ಞಾನ ಮತ್ತಿತರ ವಿಷಯಗಳಷ್ಟು ಗಮನಕ್ಕೆ ಬಂದಿಲ್ಲ. ಇತ್ತೀಚಿಗೆ

---

33 B. S. Kesavan, *Documentation in India* (Delhi: Indian National Scientific Documentation Centre, 1968) p. 21

ರಾಷ್ಟ್ರೀಯ ಸಮಾಜವಿಜ್ಞಾನ ಸಂಶೋಧನ ಮಂಡಲಿಯನ್ನು ನೇಮಿಸಿ, ಅದಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಸಮಾಜವಿಜ್ಞಾನ ಲೇಖನಗಳ ಪ್ರಲೇಖನ ಕಾರ್ಯದ ಜವಾಬ್ದಾರಿಯನ್ನು ವಹಿಸಿದೆ. ಸದ್ಯದಲ್ಲಿ ವಿದ್ವಾಂಸರಿಗೆ ನೆರವಾಗಲು ಈ ರೀತಿ ಪ್ರಯತ್ನ ನಡೆದಿದೆ :—

(೧) ಭಾರತ ಶಿಕ್ಷಣ ಲೇಖನಗಳ ಸಾರಸಂಗ್ರಹ (೧೯೫೫—),

(೨) ಏಷ್ಯದ ಸಮಾಜಶಾಸ್ತ್ರ ಗ್ರಂಥಸೂಚಿ (೧೯೫೨—),

(೩) ಏಷ್ಯದ ವಿಷಯಗಳ ಪ್ರಲೇಖನಗಳು (೧೯೬೦—),

(೪) ಭಾರತ ನಿಯತಕಾಲಿಕೆಗಳ ಲೇಖನಸೂಚಿ (೧೯೬೭—),

(೬) ಭಾರತ ನಿಯತಕಾಲಿಕೆ ಸಾಹಿತ್ಯ (೧೯೬೪—)[34],

ಭಾರತದಲ್ಲಿ ದೊರಕುವ ಗ್ರಂಥಸೂಚಿಗಳ ಆಕರಗಳನ್ನು ಪೂರ್ಣವಾಗಿ ತಿಳಿಸುವುದು ಈ ಸಮೀಕ್ಷೆಯಿಂದ ಸಾಧ್ಯವಾಗಿಲ್ಲ. ಆದರೆ ಅದರ ಶಕ್ತಿದೌರ್ಬಲ್ಯಗಳನ್ನು ಕುರಿತು ಹಲವು ಸಂಗತಿಗಳನ್ನು ನಿರ್ಧರಿಸಬಹುದು.

ಭಾರತದ ಭಾಷೆಗಳ ಸಾಹಿತ್ಯವನ್ನು ಕುರಿತ ಗ್ರಂಥಸೂಚಿಗಳ ರಚನೆ ಇನ್ನೂ ಬೆಳಕು ಕಂಡಿಲ್ಲ. ಹಿಂದಿನ ಕಾಲದ ಗ್ರಂಥಗಳನ್ನು ಕುರಿತ ಗ್ರಂಥಸೂಚಿಗೆ ಲಂಡನ್ನಿನ ಭಾರತ ಕಚೇರಿಯ ಗ್ರಂಥಾಲಯ ಹಾಗೂ ಬ್ರಿಟಿಷ್ ಮ್ಯೂಸಿಯಂ ಪುಸ್ತಕಸೂಚಿಗಳನ್ನು ಅವಲಂಬಿಸಬೇಕಾಗಿದೆ. ಈ ಕೊರತೆಯನ್ನು ತುಂಬಲು ಕೆಲವು ಭಾಷೆಗಳಲ್ಲಿ ಹಿಂದಿನ ಕಾಲದ ಗ್ರಂಥಗಳ ಸೂಚಿಯನ್ನು ತಯಾರಿಸುವ ಕಾರ್ಯ ಆಗೊಮ್ಮೆ ಈಗೊಮ್ಮೆ ಸಾಗಿದೆ. ಮರಾಠೀ ಭಾಷೆಯಲ್ಲಿ ಮಾತ್ರ ಈ ರೀತಿಯ ಗ್ರಂಥಸೂಚಿಗಳು ತಯಾರಾಗಿವೆ. ತಮಿಳು, ತೆಲುಗು, ಬಂಗಾಳಿ ಭಾಷೆಗಳಲ್ಲಿ ಈ ರೀತಿಯ ಯತ್ನ ನಡೆದಿದೆ. ಸ್ಥಳಾಭಾವದಿಂದ ಈ ಗ್ರಂಥಸೂಚಿಗಳ ವಿವರಗಳನ್ನು ಕೊಡುವುದು ಈ ಲೇಖನದಲ್ಲಿ ಸಾಧ್ಯವಾಗಿಲ್ಲ.

ಗ್ರಂಥಸೂಚಿಗಳ ರಚನೆ ತೃಪ್ತಿಕರವಾಗಿ ನಡೆಯಲು ಇನ್ನೂ ಬಹುದೂರವಿದೆ. ಇದರ ಮುಂದಿನ ವ್ಯವಸ್ಥೆ ಬಹಳ ಎಡರುತೊಡರುಗಳಿಂದ ಕೂಡಿದೆ. ಇವುಗಳ ಪರಿಹಾರಕ್ಕೆ ಅಗಾಧ ಹಣ, ಸಾಕಷ್ಟು ಪರಿಣತ ಸಿಬ್ಬಂದಿ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಸರಿಯಾದ ವ್ಯವಸ್ಥೆ ಅಗತ್ಯ. ಇದರ ಪ್ರಗತಿ ನಿಧಾನವಾಗಬಹುದು ; ಆದರೆ ಈ ದಿಸೆಯಲ್ಲಿ ಭಾರತ ಸರ್ಕಾರದ ಆಸಕ್ತಿ, ಇತರ ಆಸಕ್ತ ಜನರ ಸಹಕಾರದಿಂದ ಈ ಗ್ರಂಥಸೂಚಿಗಳ ವ್ಯವಸ್ಥೆಯ ಗೊಂದಲ ಮುಗಿದು ಸಂಶೋಧಕರಿಗೆ ಕ್ಷಿಪ್ರ ಸೇವೆ ಸಲ್ಲಿಸುವಂತೆ, ವಿವೇಚನಾಯುಕ್ತ ವ್ಯವಸ್ಥೆಯಿರುವ ಹೊಸಯುಗದ ಆವಿರ್ಭಾವ ಬೇಗ ಬಂದೀತೆಂದು ಆಶಿಸಬಹುದಾಗಿದೆ.

[34] Ibid., p. 26

ಡಾ. ಜೆ. ಕೆ. ಇರಾನಿ

ಮೈಸೂರು ರಾಜ್ಯದಲ್ಲಿ ನಿಯಂತ್ರಿತ ಮಾರುಕಟ್ಟೆಗಳು

ಭಾರತದಲ್ಲಿ ವ್ಯವಸಾಯೋತ್ಪನ್ನಗಳ ಮಾರಾಟಕ್ಕಾಗಿ ಕೈಗೊಂಡಿರುವ ಕ್ರಮಗಳಲ್ಲಿ ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆಯೂ ಒಂದು. ಈಗ ಸುಮಾರು ಸೇಕಡಾ ೬೦ರಷ್ಟು ವ್ಯವಸಾಯೋತ್ಪನ್ನಗಳು ಹಳ್ಳಿಗಳಲ್ಲಿಯೇ ಮಾರಾಟವಾಗುತ್ತಿವೆ. ಏಕೆಂದರೆ ಹಳ್ಳಿಗರಿಗೆ ಸಾಕಷ್ಟು ಧಾರಣಶಕ್ತಿಯಿಲ್ಲ. ಋಣಭಾರ ಒಂದು ದೊಡ್ಡ ಆತಂಕ. ಬೆಳೆದ ಉತ್ಪನ್ನಗಳಿಗೆ ಹೆಚ್ಚು ಬೆಲೆ ಬರುವ ವರೆಗೆ ಬಹಳದಿನ ಕಾಯುವಷ್ಟು ಶಕ್ತಿ ಅವರಲ್ಲಿಲ್ಲ. ಆದ್ದರಿಂದ ಅವನ್ನು ಹಳ್ಳಿಯಲ್ಲಿಯೇ ಮಾರುವುದು ಅನಿವಾರ್ಯ. ಹಳ್ಳಿಗಳಲ್ಲಿರುವ ಸಹಕಾರ ಸಂಘಗಳು ಕೂಡ ಅಷ್ಟೇನೂ ಶಕ್ತವಾಗಿರುವುದಿಲ್ಲ. ರೈತರಿಗೆ ಹೆಚ್ಚುಬೆಲೆ ದೊರಕಿಸಿಕೊಡುವ ಉದ್ದೇಶದಿಂದ ಸ್ಥಾಪಿತವಾಗಿರುವ ಸಂಸ್ಥೆಗಳೇ ನಿಯಂತ್ರಿತ ಮಾರುಕಟ್ಟೆಗಳು (Regulated Markets).

ನಿಯಂತ್ರಿತ ಮಾರುಕಟ್ಟೆಗಳಿಂದ ರೈತರಿಗೆ ಆಗುವ ಉಪಕಾರಗಳು ಅನೇಕ. ಅಧಿಕಪ್ರಮಾಣದಲ್ಲಿ ಕೊಳ್ಳುವವರಿಗೂ ರೈತರಿಗೂ ನೇರ ಸಂಪರ್ಕ ಏರ್ಪಡುತ್ತದೆ. ಬೆಲೆಯಲ್ಲಿ ಹೆಚ್ಚಿನ ಕಡಿತಕ್ಕೆ ಆಸ್ಪದವಿರುವುದಿಲ್ಲ. ವ್ಯಾಜ್ಯ ಪರಿಹಾರಕ್ಕೆ ಪಂಚಾಯತಿಯ ವ್ಯವಸ್ಥೆಯಿದೆ. ರೈತರಿಗೆ ತಕ್ಷಣ ಹಣ ದೊರೆಯುತ್ತದೆ. ಉತ್ಪನ್ನಗಳು ದರ್ಜೆಗೆ ಅನುಗುಣವಾಗಿ ವಿಂಗಡಣೆಯಾಗಿ ಅದಕ್ಕೆ ಸೂಕ್ತ ಬೆಲೆಗಳು ದೊರಕುತ್ತವೆ. ತೂಕದಲ್ಲಿ ಮೋಸವಿಲ್ಲ. ಅಂದಂದಿನ ಧಾರಣೆ, ದಾಸ್ತಾನು ಮುಂತಾದವುಗಳ ಬಗ್ಗೆ ಕರಾರು ವಾಕ್ಕಾದ ಮಾಹಿತಿ ರೈತರಿಗೆ ದೊರಕುತ್ತದೆ.

ಆದರೆ ಅನುಕೂಲಗಳೆಲ್ಲ ಸಿದ್ಧಾಂತದಲ್ಲಿ ಮಾತ್ರ. ೧೯೩೭ರಷ್ಟು ಹಿಂದೆಯೇ ಮೈಸೂರಿನಲ್ಲಿ ವ್ಯವಸಾಯೋತ್ಪನ್ನ ಮಾರುಕಟ್ಟೆ ಕಾಯಿದೆ ಜಾರಿಗೆ ಬಂದಿತ್ತು. ೧೯೬೬ ರಲ್ಲಿ ಇದಕ್ಕೆ ಪ್ರತಿಯಾಗಿ ಪರಿಷ್ಕೃತ ಕಾಯಿದೆಯೊಂದನ್ನು ತರಲಾಯಿತು.

ನಿಯಂತ್ರಿತ ಮಾರುಕಟ್ಟೆಗಳ ಸುಧಾರಣೆಯೇ ಉದ್ದೇಶವಾದ ಈ ಕಾಯಿದೆಯ ಮುಖ್ಯಾಂಶಗಳಿವು :

೧. ಮಾರುಕಟ್ಟೆ ಸಮಿತಿಯಲ್ಲಿ ಉತ್ಪಾದಕರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಲಾಗಿದೆ. ೧೫ ಜನರ ಸಮಿತಿಯಲ್ಲಿ ಅವರು ೭ ಮಂದಿ ಇರುತ್ತಾರೆ.

೨. ಈ ಸಮಿತಿಯ ಅಧ್ಯಕ್ಷ, ಉಪಾಧ್ಯಕ್ಷರು ಉತ್ಪಾದಕರೇ ಆಗಿರಬೇಕೆಂದು ನಿಯಮವಿದೆ.

೩. ಅಧ್ಯಕ್ಷರಿಗೆ ಕೊಡುವ ಗೌರವಸಂಭಾವನೆಯನ್ನು ಹಿಂದಿನ ವರ್ಷ ಮಾರುಕಟ್ಟೆಗೆ ಬಂದ ಶುಲ್ಕಗಳ ಸೇಕಡಾ ೫ ರಷ್ಟಕ್ಕೆ ಮಿತಿಗೊಳಿಸಲಾಗಿದೆ. ಈ ಸಂಭಾವನೆ ತಿಂಗಳಿಗೆ ೨೫೦ರೂಗಳಿಗಿಂತ ಹೆಚ್ಚಿರತಕ್ಕದ್ದಲ್ಲ.

೪. ನಿಯಂತ್ರಿತ ಮಾರುಕಟ್ಟೆಯ ಮುಖ್ಯ ನಿರ್ವಾಹಕರಾದ ಕಾರ್ಯದರ್ಶಿ, ಸಹಾಯಕ ಕಾರ್ಯದರ್ಶಿ, ಎಂಜಿನಿಯರಿಂಗ್ ಇಲಾಖೆಯ ಅಧಿಕಾರಿಗಳೇ ಮುಂತಾದವರು ಸರ್ಕಾರಿ ನೌಕರರಾಗಿರುತ್ತಾರೆ. ಮಾರುಕಟ್ಟೆ ಮತ್ತು ಪರವಾನೆ ಶುಲ್ಕದಿಂದ ಬಂದ ಒಟ್ಟು ವರಮಾನದಲ್ಲಿ ಒಂದು ಪ್ರಮಾಣವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಈ ಪ್ರಮಾಣವನ್ನು ಮುಖ್ಯ ಮಾರುಕಟ್ಟೆ ಅಧಿಕಾರಿ ನಿರ್ಧರಿಸಬೇಕು.

೫. ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ವ್ಯವಸಾಯೋತ್ಪನ್ನ ಮಾರುಕಟೆ ಮಂಡಲಿಯೊಂದು ಇರತಕ್ಕದ್ದು. ಇದಕ್ಕೆ ಸಂಬಂಧಪಟ್ಟ ಮಂತ್ರಿಯೇ ಅಧ್ಯಕ್ಷರಾಗಿರಬೇಕು. ಇದರಲ್ಲಿ ರಾಜ್ಯದ ಒಂದೊಂದು ಜಿಲ್ಲೆಯಿಂದ ಒಬ್ಬೊಬ್ಬ ಪ್ರತಿನಿಧಿ ಇರತಕ್ಕದ್ದು. ಈ ಜಿಲ್ಲಾ ಪ್ರತಿನಿಧಿಗಳನ್ನು ಆಯಾ ಜಿಲ್ಲೆಗಳ ಮಾರಕಟ್ಟೆ ಸಮಿತಿಗಳ ಅಧ್ಯಕ್ಷರು ಆಯ್ಕೆ ಮಾಡಬೇಕು. ರಾಜ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ಮಂಡಲಿಗೆ ಅದರ ಖರ್ಚುಗಳಿಗಾಗಿ ಪ್ರತಿಯೊಂದು ಮಾರುಕಟ್ಟೆ ಸಮಿತಿಯೂ ಮಾಹೆಯಾನ ತನ್ನ ವರಮಾನದ ಸೇಕಡಾ ೫ರಷ್ಟನ್ನು ವಂತಿಗೆ ಸಲ್ಲಿಸಬೇಕು.

೬. ರಾಜ್ಯ ಮಾರಾಟ ಸೇವಾ ವ್ಯವಸ್ಥೆ ಸ್ಥಾಪಿತವಾಗಬೇಕು.

೭. ಕಮಿಷನ್ ಏಜೆಂಟನ ಮಧ್ಯಸ್ಥಿಕೆಯಿಲ್ಲದೆ ಮಾರುಕಟ್ಟೆಯ ಆವರಣದಲ್ಲಿ ನೇರ ಬಿಕರಿ ಆಗುವಂತೆ ಪ್ರೋತ್ಸಾಹ ನೀಡಬೇಕು. ಇದಕ್ಕಾಗಿ ಸಾಕಷ್ಟು ಸ್ಥಳ ಒದಗಿಸಬೇಕಲ್ಲದೆ, ರೈತ ತನ್ನ ಬಿಕರಿಪಟ್ಟಿ ತಯಾರಿಸಲು ಅವಶ್ಯವಾದ ಎಲ್ಲ ನೆರವನ್ನೂ ನೀಡಬೇಕು.

೮. ದನ, ಕುರಿ, ಮೀನು, ಹಣ್ಣು ಮುಂತಾದ ಪದಾರ್ಥಗಳಿಗೆ ಪ್ರತ್ಯೇಕ ಮಾರುಕಟ್ಟೆಗಳ ಸ್ಥಾಪನೆ ಅವಶ್ಯವೆನಿಸಿದರೆ ಅವಕ್ಕೇ ವಿಶಿಷ್ಟವಾದ ಮಾರುಕಟ್ಟೆಗಳನು ಸ್ಥಾಪಿಸಲು ಸರ್ಕಾರಕ್ಕೆ ಕಾಯಿದೆಯಲ್ಲಿ ಅಧಿಕಾರ ನೀಡಲಾಗಿದೆ.

೯. ಮಾರುಕಟ್ಟೆ ಸಮಿತಿಯ ಕಾರ್ಯವ್ಯಾಪ್ತಿಯೊಳಗೆ ಉಪಮಾರುಕಟ್ಟೆಗಳನ್ನು ಸ್ಥಾಪಿಸಿ ಆ ಪ್ರದೇಶಕ್ಕೆ ಸಂಬಂಧಿಸಿದ ಗ್ರಾಮಪಂಚಾಯತಿಯನ್ನು ಅಲ್ಲಿ ತನ್ನ ಪ್ರತಿನಿಧಿಯಾಗಿ ನಿಯಮಿಸಲು ಈ ಕಾಯಿದೆಯಲ್ಲಿ ಅವಕಾಶವಿದೆ. ಅಲ್ಲಿ ವಸೂಲಾದ ಮಾರುಕಟ್ಟೆ ಶುಲ್ಕದಲ್ಲಿ ಸೇಕಡಾ ೭೫ಕ್ಕೆ ಹೆಚ್ಚಿಲ್ಲದಷ್ಟು ಧನವನ್ನು ಪಂಚಾಯತಿಯೇ ಇಟ್ಟುಕೊಂಡು ಉಳಿದದ್ದನ್ನು ಮಾರುಕಟ್ಟೆ ಸಮಿತಿಗೆ ಕೊಡುವಂತೆ ಅವಕಾಶವಿದೆ.

೧೦. ಪರವಾನಗಿ (ಲೈಸೆನ್ಸ್) ಪಡೆದ ವರ್ತಕರಿಗೆ ಉದ್ದರಿಯ ಮೇಲೆ ಮಾರಾಟಮಾಡುವ ಕಮಿಷನ್ ಏಜೆಂಟರ ಹಿತಗಳನ್ನೂ ಕಮಿಷನ್ ಏಜೆಂಟರಿಗೆ ತಮ್ಮ

ಸರಕನ್ನು ವಹಿಸಿಕೊಡುವ ಉತ್ಪಾದಕರ ಹಿತಗಳನ್ನೂ ರಕ್ಷಿಸಲಾಗಿದೆ. ನಗದು ಠೇವಣಿ ಅಥವಾ ಬ್ಯಾಂಕು ಭರವಸೆ ಕೊಡದ ವಿನಾ ಯಾವ ವರ್ತಕನೇ ಆಗಲಿ, ಕಮಿಷನ್ ಏಜೆಂಟನಿಂದ ಸರಕನ್ನು ಉದ್ದರಿಯಾಗಿ ಕೊಳ್ಳುವಂತಿಲ್ಲ. ಕನಿಷ್ಠ ಪಕ್ಷ ೫೦೦ ರೂ.ಗಳ ನಗದು ಠೇವಣಿ ಅಥವಾ ಬ್ಯಾಂಕು ಭರವಸೆಯನ್ನು ಮಾರುಕಟ್ಟೆಸಮಿತಿಗೆ ಕೊಡದ ವಿನಾ ಯಾವ ಕಮಿಷನ್ ಏಜೆಂಟನಿಗೂ ಪರವಾನಗಿ ಲಭಿಸುವುದಿಲ್ಲ. ಪ್ರತಿಯೊಂದು ಸಂದರ್ಭಕ್ಕೂ ಸಂಬಂಧಿಸಿದಂತೆ ಋಣದ ಮಿತಿಯನ್ನು ಗೊತ್ತುಪಡಿಸಲಾಗಿದೆ. ಸಟ್ಟಾ ವ್ಯಾಪಾರಕ್ಕೆಡೆಯಾಗದಂತೆ ಮಾರುಕಟ್ಟೆಯ ಭದ್ರತೆಯನ್ನು ಕಾಯ್ದುಕೊಳ್ಳುವುದೂ ಈ ಸಮಿತಿಯ ಹೊಣೆ. ಘೋಷಿತ ವ್ಯವಸಾಯೋತ್ಪನ್ನದ ಮಾರಾಟ–ಕೊಳ್ಳಿಕೆಗಳ ವ್ಯವಹಾರ ಸಂಬಂಧವಾಗಿ ನಷ್ಟ ಸಂಭವವನ್ನು ಕಡಿಮೆ ಮಾಡುವುದು ಇದರ ಉದ್ದೇಶ.

೧೧. ಲೆಕ್ಕಗಳ ತಪಾಸಣೆ, ಪುಸ್ತಕ, ದಸ್ತಾವೇಜು ಮುಂತಾದವುಗಳ ಜಪ್ತಿ ಮಾಡುವ, ನಿಯತಕಾಲಿಕ ವಿವರಣೆ ಮುಂತಾದವುಗಳನ್ನು ಕೇಳಿ ಪಡೆಯುವ ಅಧಿಕಾರ ಸಮಿತಿಗಿದೆ.

೧೨. ಮಾರುಕಟ್ಟೆ ಸಮಿತಿಯ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಅದು ಸರ್ಕಾರದಿಂದ ಸಾಲ ಪಡೆಯಬಹುದು. ಅಥವಾ ಸರ್ಕಾರದ ಪೂರ್ವ ಭಾವಿ ಅನುಮತಿ ಪಡೆದು ಸ್ವತ್ತು, ಶುಲ್ಕಗಳ ಆಧಾರದ ಮೇಲೆ ಡಿಬೆಂಚರಗಳನ್ನು ನೀಡಬಹುದು.

ಹಿಂದಿನ ಕಾಯಿದೆಗಿಂತ ಈ ಕಾಯಿದೆ ಹೆಚ್ಚು ಸಮರ್ಪಕವಾಗಿದೆಯೆಂಬುದೂ ಇತರ ಅನೇಕ ರಾಜ್ಯಗಳಲ್ಲಿ ಜಾರಿಯಲ್ಲಿರುವ ಕಾಯಿದೆಗಳಿಗಿಂತಲೂ ಇದು ಉತ್ತಮವಾದ ದ್ದೆಂಬುದೂ ನಿಜ. ಆದರೆ ವ್ಯವಸಾಯೋತ್ಪನ್ನ ಮಾರುಕಟ್ಟೆ ವ್ಯವಸ್ಥೆ ಯಶಸ್ವಿ ಯಾಗುವುದು ಕೇವಲ ಉದ್ದೇಶಗಳಿಂದಲ್ಲ; ಅದರ ಅನುಷ್ಠಾನದಿಂದ. ಈ ಕಾಯಿದೆಯ ಉದ್ದೇಶಗಳು ಸಫಲವಾಗಿವೆಯೇ ಇಲ್ಲವೇ ಎಂಬುದನ್ನು ಈ ದೃಷ್ಟಿಯಿಂದ ಪರಿಶೀಲಿಸ ಬೇಕು. ಮೈಸೂರು ರಾಜ್ಯದ ನಿಯಂತ್ರಿತ ಮಾರುಕಟ್ಟೆಗಳನ್ನು ಕುರಿತ ಕೆಳಗಿನ ಪಟ್ಟಿಯನ್ನು ನೋಡಿದಾಗ ಈ ಮಾತು ಸ್ಪಷ್ಟವಾಗುತ್ತದೆ :

ವರ್ಷ/ಜಿಲ್ಲೆ	ನಿಯಂತ್ರಿತ ಮಾರುಕಟ್ಟೆಗಳ ಸಂಖ್ಯೆ	ಒಟ್ಟು ವಹಿವಾಟಿನ ಮೌಲ್ಯ (ಸಾವಿರ ರೂ.ಗಳಲ್ಲಿ)
೧೯೬೦–೬೧	೧೩೯	೯,೫೩,೨೨೬
೧೯೬೧–೬೨	೧೪೩	೧೦,೧೨,೧೩೩
೧೯೬೨–೬೩	೧೪೫	೧೧,೩೮,೩೮೬
೧೯೬೩–೬೪	೧೫೨	೯,೮೧,೮೮೮
೧೯೬೪–೬೫	೧೫೪	೧೩,೮೯,೨೭೬

ವರ್ಷ/ಜಿಲ್ಲೆ	ನಿಯಂತ್ರಿತ ಮಾರುಕಟ್ಟೆಗಳ ಸಂಖ್ಯೆ	ಒಟ್ಟು ವಹಿವಾಟಿನ ಮೌಲ್ಯ (ಸಾವಿರ ರೂ.ಗಳಲ್ಲಿ)
೧೯೬೫–೬೬	೧೫೫	೧೭,೫೫,೮೪೦
೧೯೬೬–೬೭	೧೫೫	೨೪,೫೨,೦೦೭
೧೯೬೭–೬೮	೧೫೫	೧೯,೮೩,೨೩೫
೧೯೬೭–೬೮ :		
ಬೆಂಗಳೂರು	೩	೨,೫೨,೦೩೮
ಬೆಳಗಾಂ	೨೪	೧,೩೩,೬೧೨
ಬಳ್ಳಾರಿ	೧೦	೪೭,೭೦೩
ಬಿದರೆ	೫	೨೫,೨೧೧
ಬಿಜಾಪುರ	೧೫	೧,೩೫,೩೨೬
ಚಿಕ್ಕಮಗಳೂರು	೨	೧೨,೬೪೨
ಚಿತ್ರದುರ್ಗ	೬	೨,೦೭,೨೭೯
ಕೊಡಗು	—	—
ಧಾರವಾಡ	೩೪	೬,೦೦,೬೨೯
ಗುಲ್ಬರ್ಗ	೧೧	೯೪,೯೪೭
ಹಾಸನ	೫	೭೯,೨೫೩
ಕೋಲಾರ	೪	೨೬,೯೨೩
ಮಂಡ್ಯ	೧	೧೪,೩೪೫
ಮೈಸೂರು	೫	೪೯,೫೭೩
ಉತ್ತರ ಕನ್ನಡ	೭	೭೨,೪೯೦
ರಾಯಚೂರು	೯	೧,೨೦,೨೯೬
ಶಿವಮೊಗ್ಗ	೪	೧,೪೬,೦೪೬
ದಕ್ಷಿಣ ಕನ್ನಡ	೧	೧,೨೫,೯೪೯
ತುಮಕೂರು	೯	೧,೩೮,೯೭೩

ನಿಯಂತ್ರಿತ ಮಾರುಕಟ್ಟೆಗಳ ಸಂಖ್ಯೆ ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸವಾಗುತ್ತದೆ ಯೆಂಬುದು ಗಮನಿಸಬೇಕಾದ ಅಂಶ. ಇವು ಹಿಂದಿನ ಅಖಂಡ ಬೊಂಬಾಯಿ ರಾಜ್ಯದ ಧಾರವಾಡ, ಬೆಳಗಾಂಗಳಂಥ ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲೂ ದಕ್ಷಿಣ ಕನ್ನಡ, ಮಂಡ್ಯ, ಚಿಕ್ಕಮಗಳೂರು, ಬೆಂಗಳೂರು ಜಿಲ್ಲೆಗಳಲ್ಲಿ ಕಡಿಮೆ ಸಂಖ್ಯೆಯಲ್ಲೂ ಇವೆ. ಕೊಡಗು ತೋಟಗಳ ಜಿಲ್ಲೆಯಾದ್ದರಿಂದ ಅಲ್ಲಿ ನಿಯಂತ್ರಿತ ಮಾರುಕಟ್ಟೆಗಳ ಆವಶ್ಯಕತೆ ಅಷ್ಟೇನೂ ಕಾಣಿಸುವುದಿಲ್ಲ.

ನಿಯಂತ್ರಿತ ಮಾರುಕಟ್ಟೆಗಳ ಸಂಖ್ಯೆಯಿಂದಾಗಲಿ ಇವುಗಳ ವಹಿವಾಟಿನ ಒಟ್ಟು ಮೌಲ್ಯದಿಂದಾಗಲಿ ಮೈಸೂರು ರಾಜ್ಯದಲ್ಲಿ ಇವುಗಳ ನಿಜಚಿತ್ರದ ಅರಿವುಂಟಾಗುವುದಿಲ್ಲ. ಅತಿ ಹೆಚ್ಚಿನ ವಹಿವಾಟಿರುವ ಜಿಲ್ಲೆಯಲ್ಲಿ ಕೂಡ ಯಾವುದೋ ಒಂದೇ ಒಂದು ದೊಡ್ಡ ಪಟ್ಟಣದ ಮಾರುಕಟ್ಟೆಯೇ ಪ್ರಭಾವಶಾಲಿಯಾಗಿರುತ್ತದೆ. ಉದಾಹರಣೆಗೆ, ಧಾರವಾಡ ಜಿಲ್ಲೆಯಲ್ಲಿ ೩೪ ನಿಯಂತ್ರಿತ ಮಾರುಕಟ್ಟೆಗಳಿರುವುವಾದರೂ ಅವುಗಳ ಪೈಕಿ ಹುಬ್ಬಳ್ಳಿ ಮತ್ತು ಗದಗುಗಳ ಮಾರುಕಟ್ಟೆಗಳು ಮಾತ್ರ ಚೆನ್ನಾಗಿ ಬೆಳೆದಿವೆ. ಬೆಂಗಳೂರು ಜಿಲ್ಲೆಯಲ್ಲಿನ ಮಾರುಕಟ್ಟೆಗಳು ಮೂರು. ಇವುಗಳಲ್ಲಿ ಬೆಂಗಳೂರು ನಗರದ್ದೇ ಪ್ರಧಾನಪಾತ್ರ. ಚಿತ್ರದುರ್ಗ ಜಿಲ್ಲೆಯಲ್ಲಿರುವ ಆರು ಮಾರುಕಟ್ಟೆಗಳಲ್ಲಿ ದಾವಣಗೆರೆಯ ಕಟ್ಟೆಯೇ ಸುವ್ಯವಸ್ಥಿತ. ಹಿಂದುಳಿದ ಜಿಲ್ಲೆಗಳಲ್ಲಿನ ಅನೇಕ ನಿಯಂತ್ರಿತ ಮಾರುಕಟ್ಟೆಗಳು ದ್ವೈವಾರ್ಷಿಕ. ಇವುಗಳ ಪೈಕಿ ಕೆಲವು ಕಟ್ಟೆಗಳಲ್ಲಿ ಸಗಟು ಕ್ರಯದಾರರಿಲ್ಲದ್ದರಿಂದ ಕೆಲವು ಉತ್ಪನ್ನಗಳನ್ನು ನಿಯಂತ್ರಿಸುವ ಗೋಜಿಗೂ ಹೋಗದೆ ತಂದಂತೆಯೇ ಚಿಲ್ಲರೆಯಾಗಿ ಮಾರುವುದುಂಟು. ನೆರೆಯ ಹಳ್ಳಿಗಳ ಉತ್ಪಾದಕರು ಈ ಮಾರುಕಟ್ಟೆಗಳಿಗೆ ಬರುವುದಿಲ್ಲ. ಅನೇಕ ಪದಾರ್ಥಗಳ ಒಟ್ಟು ಜಿಲ್ಲೆಯ ಉತ್ಪನ್ನದಲ್ಲಿ ಮಾರುಕಟ್ಟೆಗಳಿಗೆ ಬರುವ ಪ್ರಮಾಣ ಬಲು ಕಡಿಮೆ.

ಉತ್ಪಾದಕರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗಳಿಗೆ ತರಬೇಕಾದರೆ ಎರಡು ಮುಖ್ಯ ಅಂಶಗಳಿರಬೇಕು. ಒಂದನೆಯದು, ತಂದ ಸರಕುಗಳನ್ನು ಜೋಪಾನವಾಗಿಡಲು ದಾಸ್ತಾನು ಮಳಿಗೆಗಳನ್ನು ನಿರ್ಮಿಸಬೇಕು. ಬಂದ ರೈತರು ತಂಗಲು ತಕ್ಕ ವಿಶ್ರಾಂತಿ ಗೃಹಗಳನ್ನು ಕಟ್ಟಬೇಕು. ಈ ಅನುಕೂಲಗಳು ಇಲ್ಲದಿರುವುದರಿಂದ ಮಾರುಕಟ್ಟೆಗಳು ಮುಂದಕ್ಕೆ ಬರಲು ಆಸ್ಪದವಿಲ್ಲವಾಗಿದೆ. ಇದನ್ನು ಸರಿಪಡಿಸಲು ರಾಜ್ಯ ವ್ಯಾಪಾರ ಕಾರ್ಪೋರೇಷನ್ ಆಗಲಿ, ಭಾರತದ ಆಹಾರ ಕಾರ್ಪೋರೇಷನ್ ಆಗಲಿ ರಾಜ್ಯ ದಾಸ್ತಾನು ಮಳಿಗೆ ಕಾರ್ಪೋರೇಷನ್ ಆಗಲಿ ಶ್ರದ್ಧೆ ವಹಿಸಿಲ್ಲ. ಇರತಕ್ಕ ಕೆಲವು ಮಳಿಗೆಗಳು ಸ್ವಂತ ವ್ಯಾಪಾರಸ್ಥರಿಗೆ ಸೇರಿದವು. ಸರ್ಕಾರದ ಕೆಲವು ಮಳಿಗೆಗಳನ್ನು ಕಮಿಷನ್ ಏಜೆಂಟರಿಗೆ ಅಥವಾ ವ್ಯಾಪಾರಸ್ಥರಿಗೆ ಬಾಡಿಗೆಗೆ ಕೊಟ್ಟಿರುವುದುಂಟು. ಬಹು ಸಂಖ್ಯೆಯ ನಿಯಂತ್ರಿತ ಮಾರುಕಟ್ಟೆಗಳು ರೈತರಿಗೆ ವಿಶ್ರಾಂತಿಗೃಹಗಳನ್ನಾಗಲಿ, ದನಕರುಗಳಿಗೆ ಕೊಟ್ಟಿಗೆಗಳನ್ನಾಗಲಿ ಕಟ್ಟಿಸಿಲ್ಲ. ಹಳ್ಳಿಯಿಂದ ಬರುವ ರೈತರಿಗೆ ಅಗತ್ಯವಾದ ಇಂಥ ಹಲವು ಅನುಕೂಲಗಳಿಲ್ಲ. ಆದ್ದರಿಂದ ಹಳ್ಳಿಗಳಿಂದ ಬರುವ ಅನೇಕ ರೈತರು ಕಮಿಷನ್ ಏಜೆಂಟರ ಆಶ್ರಯ ಪಡೆಯುತ್ತಾರೆ.

ಅನೇಕ ನಿಯಂತ್ರಿತ ಮಾರುಕಟ್ಟೆಗಳ ಹಣಕಾಸು ಪರಿಸ್ಥಿತಿ ತೃಪ್ತಿಕರ; ಹೆಚ್ಚುವರಿಯುಳ್ಳದ್ದು ಲಾಭದಾಯಕ. ಆದರೆ ಅಭಿವೃದ್ಧಿ ಕಾರ್ಯಗಳಿಗೆ ತೀವ್ರ ಗಮನ ಕೊಟ್ಟರೆ ಈ ಹೆಚ್ಚುವರಿ ಮಾಯವಾಗುತ್ತದೆ. ಸರ್ಕಾರ ಕೊಡುವ ಹಣವನ್ನು ಮುಖ್ಯವಾಗಿ ಮಾರುಕಟ್ಟೆಯ ಆವರಣದಲ್ಲಿ ರಸ್ತೆಯ ನಿರ್ಮಾಣಕ್ಕೂ ಚೆಕ್ಪುರಾಣ್ಯ ಕಟ್ಟಿಸುವುದಕ್ಕೂ ನೆಲವನ್ನು ಸಮಪಡಿಸುವುದಕ್ಕೂ ಆಫೀಸು ಕಟ್ಟಡ, ಹರಾಜುಕಟ್ಟೆ

ಮುಂತಾದವುಗಳ ನಿರ್ಮಾಣಕ್ಕೂ ಉಪಯೋಗಿಸಲಾಗುತ್ತಿದೆ. ಆದರೆ ಮಳಿಗೆ ಮತ್ತು ವಿಶ್ರಾಂತಿಗೃಹಗಳ ನಿರ್ಮಾಣಕ್ಕೆ ಗಮನಕೊಡುತ್ತಿಲ್ಲ. ಇದಕ್ಕೆ ಅವಶ್ಯವಾದ ಹಣದ ಮೊತ್ತ ಹೆಚ್ಚು. ಇದಕ್ಕಾಗಿ ಮಾರುಕಟ್ಟೆ ಸಮಿತಿಗಳು ನೀಡಬಹುದಾದ ಡಿಬೆಂಚರುಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳು ಹಣ ಸಲ್ಲಿಸುವುದರ ಮೂಲಕ ಇವಕ್ಕೆ ನೆರವು ನೀಡಬಹುದು.

ಸುಭದ್ರ ವ್ಯವಹಾರ ಪದ್ಧತಿಯನ್ನು ಬೆಳೆಸಬೇಕಾದ್ದು ಬಲು ಜರೂರು. ದರ್ಜೆ ನಿಷ್ಕರ್ಷಿಸುವ (ಗ್ರೇಡಿಂಗ್) ವ್ಯಾವಹಾರಿಕ ವಿಧಾನಗಳ ಬದಲು ವೈಜ್ಞಾನಿಕ ವಿಧಾನಗಳನ್ನು ಅನುಸರಿಸಬೇಕು. ಸರಕು ನೋಡಿ ಗುಣ ನಿಷ್ಕರ್ಷೆಮಾಡುವ ವಿಧಾನ ಅವೈಜ್ಞಾನಿಕ. ಬಹಿರಂಗ ಹರಾಜಿನ ಬದಲು ಟೆಂಡರು ಪಡೆದು ಮಾರಾಟ ಮಾಡುವ ಪದ್ಧತಿಯನ್ನು ಜಾರಿಗೆ ತರಬೇಕೆಂಬುದು ಮೈಸೂರಿನ ಹೊಸ ಕಾಯಿದೆಯ ಉದ್ದೇಶವಾಗಿದೆ. ಕೆಲವು ಮಾರುಕಟ್ಟೆಗಳಲ್ಲಿ ಕೆಲವು ಪದಾರ್ಥಗಳಿಗೆ ಸಂಬಂಧಿಸಿದಂತೆ ಹರಾಜು ಪದ್ಧತಿಯ ಬದಲು ಟೆಂಡರು ಪದ್ಧತಿಯನ್ನು ಜಾರಿಗೆ ತಂದಿರುವುದರಿಂದ ಅವುಗಳ ಆಗಮನದ ಪ್ರಮಾಣ ಹೆಚ್ಚಿತಲ್ಲದೆ, ದೂರದ ಊರುಗಳ ರೈತರೂ ಮಾರುಕಟ್ಟೆಗಳಿಗೆ ಬರಲಾರಂಭಿಸಿದರು.

ಕೆಲವೇ ಮಂದಿ ಕೊಳ್ಳುವವರು ಇರುವಡೆಗಳಲ್ಲಿ ಅವರು ಒಟ್ಟಿಗೆ ಸೇರಿ ಪರಸ್ಪರ ಹಿತಸಾಧನೆ ಮಾಡಿಕೊಳ್ಳಬಹುದೆಂಬುದೇ ಹರಾಜು ಪದ್ಧತಿಯ ಮುಖ್ಯ ಅಪಾಯ. ಹರಾಜು ಪದ್ಧತಿ ತಪ್ಪಿಸಿ ಟೆಂಡರು ಪದ್ಧತಿಗೆ ಮಾಡಲಾಗಿರುವ ಬದಲಾವಣೆಯನ್ನು ಪಟ್ಟಭದ್ರ ಹಿತಾಸಕ್ತರು ಇಚ್ಛಿಸುವುದಿಲ್ಲ. ಸಣ್ಣ ನಿಯಂತ್ರಿತ ಮಾರುಕಟ್ಟೆಯಲ್ಲಿ ಈ ಸುಧಾರಣೆ ಅತ್ಯಂತ ಜರೂರು. ಏಕೆಂದರೆ ಅಲ್ಲಿನ ಕಾರ್ಯದರ್ಶಿಗೆ ಬಲಿಷ್ಠ ವರ್ತಕರಿಂದ ರಕ್ಷಣೆ ದೊರಕಿಸಿಕೊಡುವುದು ಆಗತ್ಯ. ಮುಖ್ಯ ಉತ್ಪನ್ನಗಳನ್ನು ತಮ್ಮ ಆವರಣದೊಳಕ್ಕೆ ತರುವುದು ಸಾಧ್ಯವಾಗುವಂತೆ ಕೆಲವು ಮಾರುಕಟ್ಟೆಗಳು ವಿಶೇಷ ಸೌಲಭ್ಯಗಳನ್ನು ಒದಗಿಸಿವೆ. ಉದಾಹರಣೆಗೆ, ಹಾಸನದ ಮಾರುಕಟ್ಟೆ. ಅಲ್ಲಿ ಆಲೂಗೆಡ್ಡೆ ಇಡಲು ಶೀತಕ ಉಗ್ರಾಣ ಕಟ್ಟಿಸಿರುತ್ತಾರೆ. ರಾಜ್ಯದ ನಿಯಂತ್ರಿತ ಮಾರುಕಟ್ಟೆಗಳ ಪೈಕಿ ಹುಬ್ಬಳ್ಳಿಯದೊಂದು ವೈಶಿಷ್ಟ್ಯವುಂಟು. ಅದು ದನಕರುಗಳ ಮಾರುಕಟ್ಟೆಯನ್ನೂ ನಡೆಸುತ್ತಿದೆ; ಮತ್ತು ಹತ್ತಿ ಮತ್ತು ಶೇಂಗಾದ ವೈಜ್ಞಾನಿಕ ಗ್ರೇಡಿಂಗ್ ಏರ್ಪಡಿಸಿದೆ. ಹುಬ್ಬಳ್ಳಿಯ ನಿಯಂತ್ರಿತ ಮಾರುಕಟ್ಟೆಯಲ್ಲಿ ಧಾರವಾಡ ಜಿಲ್ಲಾ ಸಹಕಾರ ಮಾರುಕಟ್ಟೆ ಫೆಡರೇಷನ್ನಿನ ಪರವಾಗಿ ಒಬ್ಬ ಪ್ರತಿನಿಧಿ ಹರಾಜಿನ ಸಮಯದಲ್ಲಿ ಸಾಮಾನ್ಯವಾಗಿ ಇರುತ್ತಾನೆ. ಈ ಅಧಿಕಾರಿ ಇರುವುದರಿಂದ ಪರಸ್ಪರ ಹಿತದೃಷ್ಟಿಯಿಂದ ವರ್ತಕರು ಅನೈತಿಕವಾಗಿ ಒಟ್ಟಾಗಲು ಅವಕಾಶವಿರುವುದಿಲ್ಲ. ಮಾರುಕಟ್ಟೆಗೆ ಬರುವ ಸರಕುಗಳಿಗೆ ನುಸಿ ಹಿಡಿಯದಂತೆಮಾಡಲು "ಪೆಸ್ಟ್ ಪ್ರೂಫಿಂಗ್" ಯಂತ್ರವನ್ನು ಇಲ್ಲಿ ಇಡಲಾಗಿದೆ. ರೈತರ ವಸತಿಗೃಹ ನಿರ್ಮಾಣ ಕೈಗೊಳ್ಳಲಾಗಿದೆ. ಒಟ್ಟಿನಲ್ಲಿ ಬಹುತೇಕ ಮಾರುಕಟ್ಟೆಗಳು ರೈತರಿಗೆ ಅಗತ್ಯವಾದ ಅನುಕೂಲಗಳನ್ನು ಪೂರೈಸಿಲ್ಲ. ಅನೇಕ

ಮಾರುಕಟ್ಟೆಗಳ ಈ ಅವ್ಯವಸ್ಥೆಗಳ ದೃಷ್ಟಿಯಲ್ಲಿ ಮೈಸೂರಿನ ಈ ಹೊಸ ಕಾಯಿದೆಯಿಂದ ಪರಿಸ್ಥಿತಿ ನಿಜವಾಗಿಯೂ ಸುಧಾರಿಸೀತೇ—ಎಂಬ ಶಂಕೆ ಉದ್ಭವಿಸುವಂತಾಗಿದೆ. ನಿಯಂತ್ರಿತ ಮಾರುಕಟ್ಟೆಗಳ ಬೆಳವಣಿಗೆಯಲ್ಲಿ ಕಾರ್ಯದರ್ಶಿಯದು ಅತ್ಯಂತ ಪ್ರಮುಖ ಪಾತ್ರ. ಹೊಸ ಕಾಯಿದೆಯಲ್ಲಿ ಮಾರುಕಟ್ಟೆಗಳ ಮುಖ್ಯ ಅಧಿಕಾರಿಗಳು ಸರ್ಕಾರದ ನೌಕರರು. ಮಾರುಕಟ್ಟೆಗಳ ಆದಾಯಗಳಿಗೆ ಅನುಸಾರವಾಗಿ ಅವರ ದರ್ಜೆಯ ನಿರ್ಣಯವಾಗುತ್ತದೆ. ಮೊದಲನೆಯ ದರ್ಜೆಯ ನಿಯಂತ್ರಿತ ಮಾರುಕಟ್ಟೆಯ ಕಾರ್ಯದರ್ಶಿಯ ಸಂಬಳದ ಶ್ರೇಣಿ ತಿಂಗಳಿಗೆ ರೂ. ೬೦೦–೧೦೦೦. ಆದರೆ ಐದನೆಯ ದರ್ಜೆಯ ಮಾರುಕಟ್ಟೆಯ ಕಾರ್ಯದರ್ಶಿಯ ಮಾಸಿಕ ಸಂಬಳದ ಶ್ರೇಣಿ ರೂ. ೧೨೦-೨೪೦. ಸಣ್ಣ ಮಾರುಕಟ್ಟೆಗಳ ಕಾರ್ಯದರ್ಶಿಗಳ ಸಂಬಳ ಶ್ರೇಣಿಗಳು ನ್ಯಾಯವಲ್ಲ. ಇವರಿಗೆ ನೀಡಿರುವ ಸಿಬ್ಬಂದಿಯ ಸಹಾಯವೂ ಅಲ್ಪ. ಇವರು ಪ್ರಬಲ ವರ್ತಕರನ್ನು ಎದುರಿಸಬೇಕು ಮತ್ತು ಜವಾಬ್ದಾರಿಯ ಕರ್ತವ್ಯಗಳನ್ನೂ ನಿರ್ವಹಿಸಬೇಕು. ಇವರ ಕೆಲಸ ಮತ್ತು ವಿದ್ಯಾರ್ಹತೆಗಳ ಆಧಾರದ ಮೇಲೆ ಇವರ ಸಂಬಳದ ನಿರ್ಣಯವಾಗಬೇಕು. ಸಣ್ಣ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸುವ ದೊಡ್ಡ ಹೊಣೆ ಹೊರಬೇಕಾದ ಈ ಕಾರ್ಯದರ್ಶಿಗಳ ಹುದ್ದೆಯಲ್ಲಿ ಸಂತೃಪ್ತಮನೋಭಾವ ತರುವುದರ ಕಡೆಗೆ ಹೊಸ ಕಾಯಿದೆ ಗಮನ ನೀಡಿಲ್ಲ.

ಲೈಸೆನ್ಸ್ ಶುಲ್ಕ ಮತ್ತು ಭರವಸೆ ಠೇವಣಿ (ಸೆಕ್ಯೂರಿಟಿ ಡಿಪಾಸಿಟ್) ಹೆಚ್ಚಿಸಲು ವರ್ತಕರು ಮೊದಮೊದಲು ಅಸಮ್ಮತಿ ಸೂಚಿಸುತ್ತಿದ್ದರು. ಅವರು ಉಚ್ಚ ನ್ಯಾಯಾಲಯಕ್ಕೂ ಅಪೀಲು ಹೋಗುತ್ತಿದ್ದರು. ಆದರೆ ಅವರ ಆಕ್ಷೇಪಗಳು ಫಲಕಾರಿಯಾಗಲಿಲ್ಲ. ಆದ್ದರಿಂದ ವರ್ತಕರು ಕ್ರಮೇಣ ಈ ಪರಿಸ್ಥಿತಿಗೆ ಹೊಂದಿಕೊಂಡಿದ್ದಾರೆ.

ಹೊಸ ಕಾಯಿದೆ ಸಾಧಿಸಿದ ಒಂದೇ ಒಂದು ಸುಧಾರಣೆ ಎಂದರೆ ಪ್ರಸಕ್ತ ಮಾರುಕಟ್ಟೆ ಸಮಿತಿಗಳನ್ನು ಜುಲೈ ೧೯೬೯ರಂದು ಹೊರಡಿಸಿದ ಸುಗ್ರೀವಾಜ್ಞೆಯ ಮೂಲಕ ರದ್ದುಪಡಿಸಿ, ಪ್ರತಿಯೊಂದು ಮಾರುಕಟ್ಟೆಗೂ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಿದ್ದು. ಚುನಾವಣೆಗಳ ಮೂಲಕ ಹೊಸ ಮಾರುಕಟ್ಟೆ ಸಮಿತಿಗಳನ್ನು ಒಂದು ವರ್ಷದೊಳಗೆ ರಚಿಸಬೇಕೆಂದು ಅವರಿಗೆ ಆದೇಶ ನೀಡಲಾಗಿದೆ. ಈ ಸುಗ್ರೀವಾಜ್ಞೆಯ ಪ್ರಶ್ನೆಯನ್ನು ಉಚ್ಚನ್ಯಾಯಾಲಯಕ್ಕೆ ಕೊಂಡೊಯ್ಯಲಾಗಿದೆ. ಹೊಸ ಸಮಿತಿಗಳನ್ನು ರಚಿಸಿ, ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವ ತನಕ ಮಾರುಕಟ್ಟೆಗಳ ಅಭಿವೃದ್ಧಿ ಕುಂಠಿತಗೊಳ್ಳುವುದೆಂಬುದು ಸ್ವತಃಸಿದ್ಧ. ಪಂಚಾಯತಿಗಳನ್ನು ಮಾರುಕಟ್ಟೆ ಸಮಿತಿಗಳ ಪ್ರತಿನಿಧಿಗಳಾಗಿ ನೇಮಿಸಿ ಅದರಂತೆ ಅವು ಕರ್ತವ್ಯನಿರ್ವಹಿಸುವಂತೆ ಮಾಡುವುದೂ ಸಾಧ್ಯವಿಲ್ಲ. ಅಂತೆಯೇ ರಾಜ್ಯ ವ್ಯವಸಾಯೋತ್ಪನ್ನ ಮಾರಾಟ ಬೋರ್ಡನ್ನೂ ರಾಜ್ಯಮಾರಾಟ ಸೇವಾವ್ಯವಸ್ಥೆಯನ್ನೂ ಸ್ಥಾಪಿಸುವ ಬಗ್ಗೆಯೂ ಏನೂ ಪ್ರಗತಿಯಾಗಿಲ್ಲ. ಮಾರಾಟ ಸುವ್ಯವಸ್ಥೆಯ ರಚನೆಯ ಬಗ್ಗೆ ಯೋಚನೆ ಹರಿಸುವುದೂ ಈ ಪ್ರಾಥಮಿಕ ಅಡಚಣೆಗಳಿಂದಾಗಿ ಅಸಾಧ್ಯವಾಗಿದೆ.

ಹೊಸ ಕಾಯಿದೆ ವಿಧಾನಮಂಡಲದ ಒಪ್ಪಿಗೆ ಪಡೆದದ್ದು ೧೯೭೩ರಲ್ಲಿ. ಇದು ೧೯೭೪ರ ಮೇ ಒಂದರಂದು ಜಾರಿಗೆ ಬಂತು. ಇದಾಗಿ ನಾಲ್ಕು ವರ್ಷಗಳು ಕಳೆದರೂ ಗ್ರಾಮ ಆರ್ಥಿಕ ವ್ಯವಸ್ಥೆಯ ಮೇಲೆ—ಮುಖ್ಯವಾಗಿ ಸಣ್ಣ ರೈತರ ಮೇಲೆ—ಈ ಹೊಸ ಕಾಯಿದೆಯ ಸತ್ಪರಿಣಾಮವುಂಟಾಗಿಲ್ಲ. ಆದ್ದರಿಂದ ಸರ್ಕಾರದವರು ಜಾಗ್ರತೆಯಾಗಿ ಎಲ್ಲ ಮುಖ್ಯ ಸುಧಾರಣೆಗಳನ್ನೂ ಜಾರಿಗೆ ತರಲು ಪ್ರಯತ್ನಿಸಬೇಕು. ನಮ್ಮ ಸದುದ್ದೇಶಪೂರಿತ ಕಾಯಿದೆಗಳನ್ನು ಶೀಘ್ರ ಜಾರಿಗೆ ತಾರದಿರುವುದೂ ಪಟ್ಟಭದ್ರ ಹಿತಗಳ ವಿರೋಧವೂ ಮಹಾಪ್ರಮಾದಗಳಾಗಿ ಪರಿಣಮಿಸಿರುವುದು ದುರ್ದೈವದ ಸಂಗತಿ.

ಅ. ಸುಂದರ

ಬ್ರಹ್ಮಗಿರಿಯ ಎರಡು ತಾಮ್ರದ ವಸ್ತುಗಳು[1]

ಸಿದ್ಧಾಪುರದ ಬ್ರಹ್ಮಗಿರಿ (ಮೊಳಕಾಲ್ಮುರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ) ಮೌರ್ಯ ಚಕ್ರವರ್ತಿ ಅಶೋಕನ ಕಲ್ಲು ಬಂಡೆ ಶಾಸನಗಳಿಗೂ ಡಾ. ಎಂ. ಎಚ್. ಕೃಷ್ಣ ಇವರ ಶೋಧನೆ ಹಾಗೂ ಅಗೆತದಿಂದ ಬೆಳಕಿಗೆ ಬಂದ ಅಶೋಕನ ಶಾಸನದ "ಇಸಿಲಾ" ಪಟ್ಟಣದ ಬೃಹತ್ ಶಿಲಾಯುಗದ ಗೋರಿಗಳಿಗೂ (Megalithic burials) ಶಿಲಾತಾಮ್ರಯುಗದ (Chalcolithic) ಭಗ್ನಾವಶೇಷಗಳಿಗೂ ಸಾಕಷ್ಟು ಪ್ರಸಿದ್ಧವಾಗಿತ್ತು.[2] ಈ ಮಹತ್ವದ ಶೋಧನೆಗಳ ಆಧಾರದ ಮೇಲೆ ವೀಲರ್‌ರವರು ವೈಜ್ಞಾನಿಕ ಪದ್ಧತಿಯಿಂದ ಪುನಃ ಉತ್ಖನನಮಾಡಿ ಡಾ. ಕೃಷ್ಣರವರು ಶೋಧಿಸಿದ ಪ್ರತಿಯೊಂದು ಸಂಸ್ಕೃತಿಯ ವಿಶಿಷ್ಟ ಲಕ್ಷಣವನ್ನೂ ಸ್ಪಷ್ಟಮಾಡಿದುದೇ ಅಲ್ಲದೆ ಈ ಸಂಸ್ಕೃತಿಗಳ ಅನುಕ್ರಮವನ್ನು ಮತ್ತು ಒಂದಕ್ಕೊಂದು ಕೆಲಮಟ್ಟಿಗೆ ವ್ಯಾಪಿಸಿಕೊಂಡಿರುವುದನ್ನು ಸೂಕ್ಷ್ಮವಾಗಿ ಗುರುತಿಸಿದರು.[3] ಇದರಿಂದ ಸ್ಥೂಲವಾಗಿ ಇವುಗಳ ಕಾಲಮಾನವನ್ನು ಗೊತ್ತುಮಾಡಿದರು. ಅಲ್ಲದೆ ಬೃಹತ್ ಶಿಲಾಯುಗದ ಜನರ ವಾಸಸ್ಥಾನಕ್ಕೂ ಮತ್ತು ಗೋರಿಗಳಿಗೂ ಇರುವ ಸಂಬಂಧವನ್ನು ಎತ್ತಿ ತೋರಿಸಿದರು. ಈ ಸಂಶೋಧನೆಗಳ ಪರಿಣಾಮಗಳು ದಕ್ಷಿಣ ಭಾರತದಲ್ಲಿ ಮುಂದಿನ ಪ್ರಾಗೈತಿಹಾಸಿಕ ಶೋಧನೆಗಳಿಗೆ ದೃಢವಾದ ಆಧಾರಗಳಾದುವು. ಅಂದಿನಿಂದ ಪ್ರಾಗೈತಿಹಾಸಿಕ ಸಂಶೋಧನೆಯಲ್ಲಿ ಬ್ರಹ್ಮಗಿರಿ ಒಂದು ಮಹತ್ವ ಸ್ಥಾನ ಪಡೆದಿದೆ.

---

[1] ಬ್ರಹ್ಮಗಿರಿಯ ಪ್ರಾಗೈತಿಹಾಸಿಕ ಮಹತ್ವದ ಅವಶೇಷಗಳನ್ನು ಅಭ್ಯಾಸಮಾಡಲು ಪ್ರವಾಸಕ್ಕೆ ಡಾ. ಸಾಂಕಳಿಯ ಅವರು ಮತ್ತು ಡೆಕ್ಕನ್ ಕಾಲೇಜ್ ಪೋಸ್ಟ್‌ಗ್ರಾಜುಯೇಟ್ ಅಂಡ್ ರಿಸರ್ಚ್ ಸಂಸ್ಥೆ, ಪೂನಾ ಇವರು ಸಹಾಯಮಾಡಿದುದೇ ಅಲ್ಲದೆ ಇಲ್ಲಿ ದೊರಕಿರುವ ವಸ್ತುಗಳನ್ನು ಪ್ರಸಿದ್ಧಪಡಿಸಲು ಅನುಮತಿಯನ್ನು ದಯಪಾಲಿಸಿದ್ದಾರೆ. ನಾನು ಇವರಿಗೆ ಬಹಳ ಋಣಿಯಾಗಿದ್ದೇನೆ. ರೇಖಾಚಿತ್ರವನ್ನು ಬರೆದುಕೊಟ್ಟ ಸಿ. ಜಿ. ಪಡುವಳ್ ಅವರಿಗೆ ಕೃತಜ್ಞತೆಗಳು.

[2] M.A.R., 1940

[3] Wheeler, R.E.M ; Ancient India, Vol. 4, pp. 180–310


ಉತ್ತರ ಕರ್ನಾಟಕದಲ್ಲಿನ ಬೃಹತ್ ಶಿಲಾಯುಗದ ರುದ್ರಭೂಮಿಗಳನ್ನು ಮತ್ತು ವಾಸಸ್ಥಾನಗಳನ್ನು ನಾನು ಅಭ್ಯಾಸ ಮಾಡುತ್ತಿದ್ದಾಗ ಬ್ರಹ್ಮಗಿರಿಯನ್ನು ಫೆಬ್ರವರಿ ೧೯೬೬ ರಲ್ಲಿ ಸಂದರ್ಶಿಸಿದೆ. ಅಲ್ಲಿಯ ಭಗ್ನಾವಶೇಷಗಳನ್ನು ಪರೀಕ್ಷಿಸುತ್ತಿದ್ದಾಗ ಬ್ರಹ್ಮಗಿರಿ—೧೭ (ಬ್ರ—೧೭) ಎಂಬ ಭಾಗದಲ್ಲಿ[4] ವೀಲರ್‌ರವರು ಅಗೆಸಿದ ಗುಂಡಿಗಳ ನೈಋತ್ಯದಿಕ್ಕಿಗೆ, ಸುಮಾರು ೮–೧೦ ಮೀ. ಅಂತರದ (ಛಾಯಾಚಿತ್ರ ೧.) ಹಾಳು ಮಣ್ಣಿನಲ್ಲಿ ಎರಡು ಸಣ್ಣ ತಾಮ್ರದ ವಸ್ತುಗಳು ದೊರೆತುವು. ಇವುಗಳ ಮಾಟ ಅಪರೂಪವಾಗಿದ್ದು, ಬಹುಮಟ್ಟಿಗೆ ಪ್ರಾಗೈತಿಹಾಸಿಕ ಮಹತ್ವದ್ದಾಗಿ ಕಾಣುತ್ತದೆ. ಆದ್ದರಿಂದ ಇವುಗಳ ವಿವರಣೆ ಅವಶ್ಯ. ಇವುಗಳ ವಿವರಣೆಗೆ ಪೂರ್ವಭಾವಿಯಾಗಿ ಬ್ರಹ್ಮಗಿರಿಯ ಉತ್ಖನನದ ಸಾಂಸ್ಕೃತಿಕ ಹಿನ್ನೆಲೆಯನ್ನು ಗಮನಿಸಬಹುದು.

ವೀಲರ್‌ರವರು ಇಲ್ಲಿ ೧೯೪೭ರಲ್ಲಿ ಉತ್ಖನನ ನಡೆಸಿದಾಗ ಬೆಳಕಿಗೆ ಮಾಹಿತಿಗಳು ಈ ರೀತಿ ಇವೆ. ಮೇಲಿನ ಪದರಗಳಲ್ಲಿ ಕಂಡುಬಂದ ಮೂರು ಮುಖ್ಯ ಸಂಸ್ಕೃತಿಗಳಲ್ಲಿ ಕೊನೆಯದಾದ ಚಾರಿತ್ರಿಕ ಪ್ರಾರಂಭಕಾಲದ ಸಂಸ್ಕೃತಿ. ಇದರ ಮುಖ್ಯ ಲಕ್ಷಣವೆಂದರೆ, ಕ್ರಿ.ಶ. ಮೊದಲ ಶತಮಾನಕ್ಕೆ ಸೇರುವ, ರೋಮನ್ನರ ಪ್ರಭಾವವನ್ನು ತೋರುವ ರೌಲೆಟೆಡ್ ಮತ್ತು ರಸೆಟ್ ಕೋಟೆಡ್ 'ಆಂಧ್ರ' ರೀತಿಯ ಮಡಕೆಗಳು. ಇದಕ್ಕೂ ಮೊದಲು ಮತ್ತು ಕೆಲಕಾಲ ಇದರೊಂದಿಗೆ ಸಹಬಾಳ್ವೆ ನಡೆಸಿದ ಬೃಹತ್ ಶಿಲಾಸಮಾಧಿ ಸಂಸ್ಕೃತಿಯಿದ್ದಿತು. ಇದರ ಮುಖ್ಯ ಲಕ್ಷಣಗಳೆಂದರೆ, ಆಯುಧೋಪಕರಣಗಳಿಗೆ ಕಬ್ಬಿಣದ ಉಪಯೋಗ, ಕಪ್ಪು–ಕೆಂಪು ಮಡಕೆಯ ಬಳಕೆ ಮತ್ತು ಸತ್ತವರ ಮೂಳೆಗಳನ್ನು ಕಲ್ಲುಗಳಿಂದ ನಿರ್ಮಿಸಲಾದ ಶಿಲಾತೊಟ್ಟಿ, ಶಿಲಾವೃತ್ತ ಅಥವ ಸಮಾಧಿ ಗುಂಡಿಗಳಲ್ಲಿ ಹೂಳುವುದು. ಈ ಸಂಸ್ಕೃತಿಯ ಕಾಲದಲ್ಲಿ ಕೆರೆ ನೀರಾವರಿ ಪದ್ಧತಿಯ ಮೇಲೆ ಆಧಾರಿತವಾದ ವ್ಯವಸಾಯ ಪದ್ಧತಿ ರೂಢಿಯಲ್ಲಿದ್ದಿತು. ಬೃಹತ್ ಶಿಲಾಸಮಾಧಿ ಸಂಸ್ಕೃತಿಗಿಂತ ಮೊದಲಿನ ಮತ್ತು ಕೆಲಕಾಲ ಇದರೊಂದಿಗೆ ರೂಢಿಯಲ್ಲಿದ್ದ ನವಶಿಲಾಯುಗ ಸಂಸ್ಕೃತಿಯೇ ಇಲ್ಲಿ ಅತ್ಯಂತ ಪ್ರಾಚೀನವಾದುದು. ಇದನ್ನು ಎರಡು ಹಂತಗಳನ್ನಾಗಿ ವಿಭಾಗಿಸಲಾಗಿದೆ (I A ಮತ್ತು I B). ಇದರ ಮೊದಲ ಹಂತದ ಸಂಸ್ಕೃತಿಯಲ್ಲಿ ಲೋಹಬಳಕೆ ಗೊತ್ತಿರಲಿಲ್ಲ. ಎರಡನೆಯ ಹಂತದ ಸಂಸ್ಕೃತಿಯಲ್ಲಿ ತಾಮ್ರದ ವಿರಳ ಉಪಯೋಗವಿದ್ದಿತು. ಈ ಜನರ ಮುಖ್ಯವೃತ್ತಿ ಬೇಟೆ ಮತ್ತು ಪಶುಪಾಲನೆ. ವ್ಯವಸಾಯ ಆರಂಭಾವಸ್ಥೆಯಲ್ಲಿದ್ದಿತು ಇವಿಷ್ಟೂ ಬ್ರಹ್ಮಗಿರಿಯ ವಿವಿಧ ಸಾಂಸ್ಕೃತಿಕ ಲಕ್ಷಣಗಳು. ಈಗ ಪ್ರಸ್ತುತ ತಾಮ್ರದ ವಸ್ತುಗಳನ್ನು ಪರಿಶೀಲಿಸೋಣ.


ಈ ಎರಡು ವಸ್ತುಗಳು ಒಂದಕ್ಕೊಂದು ಸುಮಾರು ೫೦ ಸೆಂ. ಮೀ. ಅಂತರದಲ್ಲಿದ್ದುವು. ಈ ಸ್ಥಳದ ೫೦ ಸೆಂ. ಮೀ.–ಪಶ್ಚಿಮಕ್ಕೆ ಮತ್ತು ಮಟ್ಟದಿಂದ ೧ ಮೀ. ಈಶಾನ್ಯಕ್ಕೆ ಬ್ರ—೧೭ರ ಗುಂಡಿಯಿಂದ ತೆಗೆದು ಜರಡಿಯಾಡಿದ ಮಣ್ಣಿನ ಸಣ್ಣ ಉಬ್ಬು ಇದೆ.

---


[4] Ibid. Plate LXXIII



ಛಾಯಾ ಚಿತ್ರ ೧.
ತಾಮ್ರದ ವಸ್ತುಗಳು ಸಿಕ್ಕಿದ ಸ್ಥಳವನ್ನು ತೋರಿಸುತ್ತಿರುವುದು.
ಹಿನ್ನೆಲೆಯಲ್ಲಿ ಬೇಲಿಯಿರುವ ಎಡೆಯೇ ಉತ್ಖನನದ ಸ್ಥಳ.




ಛಾಯಾ ಚಿತ್ರ ೨. ಎರಡು ತಾಮ್ರದ ವಸ್ತುಗಳು.



ಅ

ರೇಖಾ ಚಿತ್ರ ೧ (ಅ)



ಬ

ರೇಖಾ ಚಿತ್ರ ೨ (ಬ)

ಈ ತಾಮ್ರ ವಸ್ತುಗಳಿಗೆ (ಛಾಯಾಚಿತ್ರ ೨ ರೇಖಾ ಚಿತ್ರ ೧) ಹಸಿರು ಬಣ್ಣದ ತುಕ್ಕು ಹಿಡಿದಿದೆ. ಇವುಗಳ ಕೆಲವು ಭಾಗ ಮುರಿದುಹೋಗಿವೆ. ಇವುಗಳಲ್ಲಿ ಒಂದು ೭ ಮಿ.ಮೀ. ವ್ಯಾಸವುಳ್ಳ ಐದು ಸುತ್ತಿನ, ದುಂಡು ಮೂಲೆಯುಳ್ಳ ಚೌಕೋನದ (೨ X ೨ ೩/೪ ಮಿ.ಮೀ.) ದಪ್ಪ ತಂತಿಯ ಸುರಳಿ (ಛಾಯಾಚಿತ್ರ ೨ ಬ, ೧; ರೇಖಾ ಚಿತ್ರ ೧ ಬ). ಇದರ ಒಂದು ತುದಿ ೨ ಸೆಂ.ಮೀ. ಉದ್ದದಷ್ಟು ನೆಟ್ಟಗೆ ಇದ್ದು ತುದಿಯ ಕಡೆ ಕ್ರಮೇಣ ದಪ್ಪವಾಗುತ್ತಾ ಹೋಗಿದೆ. ಮತ್ತೊಂದು ತುದಿಯೂ ಹಾಗೆಯೇ ಇದ್ದಿರಬೇಕು. ಆದರೆ ಅದು ತುಂಡಾಗಿ ಹೋಗಿವೆ. ತಂತಿಯ ಒಟ್ಟು ಉದ್ದ ೨.೩ ಸೆಂ.ಮೀ. ತುದಿಯ ಹತ್ತಿರ ಸುಮಾರು ೫ X ೪ ಮಿ.ಮೀ. ದಷ್ಟು ದಪ್ಪವಿದೆ. ತೂಕ : ೧೦ ಗ್ರಾಮ್‌ಗಳು. ಇದು ಪ್ರಾಯಶಃ ಒಂದು ವಿಧವಾದ ಕಿವಿಯ ಓಲೆ ಯಿರಬಹುದು. ಇನ್ನೊಂದು ಸಮದ್ವಿಬಾಹು ತ್ರಿಭುಜಾಕೃತಿಯ, ತೆಳುವಾದ ತಗಡಿನ ಸಣ್ಣ ವಸ್ತು (ಛಾಯಾಚಿತ್ರ ೨ ಬ; ರೇಖಾಚಿತ್ರ ೧ ಅ). ಇದರ ಅಗಲವಾದ ಬಾಯಿ ಹರಿತವಾಗಿ ಇದ್ದು ಸ್ವಲ್ಪ ಹೊರಬಾಗಿದೆ. ತುದಿ ೨ ಮಿ.ಮೀ. ವ್ಯಾಸದ ದುಂಡುತಂತಿಯಂತೆ ೪ ಮಿ.ಮೀ. ನಷ್ಟು ಚಾಚಿದೆ. ಇದರ ಬಾಯಿ ಅಗಲ ೧೮ ೧/೨ ಮಿ.ಮೀ. ಪಾರ್ಶ್ವ ೧೪ ಮಿ.ಮೀ., ದಪ್ಪ ೧/೪ ಮಿ.ಮೀ. ಮತ್ತು ತೂಕ ೧.ಗ್ರಾಮ್. ರೇಖಾಚಿತ್ರದಲ್ಲಿ ತೋರಿಸಿದ ಪುನರ್ರಚನೆಯ ಹಾಗೆ ಇದರ ಮೊದಲಿನ ಆಕಾರ ಇದ್ದಿರಬಹುದು. ಇದು ಪ್ರಾಯಶಃ ಅಗಲವಾದ ಎರಡು ಬಾಯಿಯುಳ್ಳ ತಂತಿಯ ಹಾಗೆ ಸಣ್ಣ ನಡುವುಳ್ಳ ಕೊಡಲಿಯೋಪಾದಿಯ (ಮರದಲ್ಲಿ ಸಣ್ಣ ಕೆತ್ತನೆ ಕೆಲಸದಲ್ಲಿ ಅಥವಾ ಧಾರ್ಮಿಕ ಕೆಲಸದಲ್ಲಿ ಉಪಯೋಗಿಸುತ್ತಿದ್ದ ಒಂದು ಸಂಕೇತ) ಸಲಕರಣೆಯೋ ಅಥವಾ ಸರದ ಮಧ್ಯದ ಪದಕವೋ ನಿರ್ದಿಷ್ಟವಾಗಿ ತಿಳಿಯದಾಗಿದೆ.

ಇವು ಸಿಕ್ಕಿರುವ ಸ್ಥಳ ನಿರ್ದೇಶನದಿಂದ ಮತ್ತು ಬೇರೆಡೆಯಲ್ಲಿ ಶಿಲಾ–ತಾಮ್ರ ಸಂಸ್ಕೃತಿಯ ಅವಶೇಷಗಳೊಡನೆ ಸಿಕ್ಕಿರುವ ಇವುಗಳನ್ನು ಹೋಲುವ ವಸ್ತುಗಳ ಆಧಾರದ ಮೇಲೆ ಈ ವಸ್ತುಗಳು ಶಿಲಾ–ತಾಮ್ರಯುಗದವೆಂದು ಹೇಳಬಹುದು. ಮೇಲೆ ಹೇಳಿದ ಹಾಗೆ ಬ್ರ–೧೭ ಗುಂಡಿಯಲ್ಲಿ ಕೆಲವೊಂದು ಬೃಹತ್ ಶಿಲಾಯುಗ ಮಡಕೆ ಚೂರುಗಳನ್ನು ಬಿಟ್ಟರೆ ಶಿಲಾ–ತಾಮ್ರಯುಗದ (Stone-Axe Culture ವೀಲರ ಪ್ರಕಾರ) ಅವಶೇಷಗಳೇ ಕಂಡುಬಂದುವು. (ವೀಲರ್, ಪು ೩೦೪). ಅಲ್ಲಿಂದ,

೧.೭೦ ಮೀ. ಆಳದ ೧೧ನೇ ಪದರದಲ್ಲಿ ಶಿಲಾ–ತಾಮ್ರ ಯುಗದ ಉತ್ತರ ಭಾಗದ ಕಾಲಕ್ಕೆ (Stone Axe Culture I B) ಸೇರಿದ ಒಂದು ತಾಮ್ರದ ತಂತಿ ಸಿಕ್ಕಿತು (ಪು ೩೦೪). ಇವೆಲ್ಲವನ್ನೂ ಒಟ್ಟಾಗಿ ಪರಿಶೀಲಿಸಿದಾಗ ಈ ವಸ್ತುಗಳು ಬ್ರ–೧೭ ಗುಂಡಿಯಿಂದ ತೆಗೆದು ಹಾಕಿದ ಮಣ್ಣಿನೊಡನೆ ಇದ್ದು ಜರಡೆಯಾಡಲು ಒಯ್ಯುವಾಗ ಅಕಸ್ಮಾತ್ತಾಗಿ ಆ ಸ್ಥಳದಲ್ಲಿ ಬಿದ್ದುಹೋಗಿರಬಹುದು. ಆದರೆ ಸಿಕ್ಕಿದ ಸ್ಥಳ, ಜರಡೆಯಾಡಿದ ಮಣ್ಣಿನ ರಾಶಿ ಇರುವ ಜಾಗ ಮತ್ತು ಬ್ರ–೧೭ ಗುಂಡಿ, ಇವುಗಳ ಪರಸ್ಪರ ದಿಕ್ಸಂಬಂಧವನ್ನು ಗಣನೆಗೆ ತಗೆದುಕೊಂಡಾಗ ಇದು ಸ್ವಲ್ಪ ಅಸಂಭವವೆಂದು ಕಾಣುವುದು. ಅಥವಾ ಅವುಗಳು ಶೋಧವಾದ ಕಾಲದಲ್ಲಿ ಇದ್ದ ಸ್ಥಳದಲ್ಲಿಯೇ ಮೊದಲಿನಿಂದಲೂ ಇದ್ದಿರಬಹುದು. ಇವು ದೊರೆತ ಮಟ್ಟದಲ್ಲಿ ಹೆಚ್ಚಾಗಿ ಶಿಲಾ–ತಾಮ್ರ ಯುಗ ಮತ್ತು ಆಗ ತಾನೇ ಬೃಹತ್‌ಶಿಲಾಯುಗ ವ್ಯಾಪಿಸಿಕೊಂಡ ಕಾಲದ ಸ್ವಲ್ಪ ಅವಶೇಷಗಳೇ ಕಂಡುಬರುವುವು. ತಾಮ್ರದ ಇಂಥ ವಸ್ತುಗಳು ಬೃಹತ್ ಶಿಲಾಯುಗ ಮತ್ತು ಮೌರ್ಯ—ಶಾತವಾಹನರ ಕಾಲದ ವಸತಿ ಸ್ಥಳಗಳ ಅಗೆತಗಳಲ್ಲಿ ಇದುವರೆಗೂ ಕಂಡುಬಂದಿಲ್ಲ. ಕೇವಲ ಶಿಲಾ–ತಾಮ್ರ ಸಂಸ್ಕೃತಿಯ ಅವಶೇಷಗಳನ್ನುಳ್ಳ ತೆಕ್ಕಲಿಕೋಟೆಯ ಅಗೆತದಲ್ಲಿ ಬ್ರಹ್ಮಗಿರಿಯಲ್ಲಿ ದೊರೆತ ತಾಮ್ರ ಸುತ್ತು ಆಭರಣದಂತೆಯೇ ಇರುವ ಚಿನ್ನದ ಆಭರಣಗಳು (ಪು. ೭೫, ಚಿತ್ರ ೨೦, ೮ : ಪ್ಲೇಟ್ ೧–೮) ಸಿಕ್ಕಿವೆ.[5] ಇವೆರಡೂ ಅಲ್ಲಿಯ ಶಿಲಾ–ತಾಮ್ರ ಸಂಸ್ಕೃತಿಯ ಆದಿಭಾಗಕ್ಕೆ ಸೇರಿದವು (ಪು. ೭೫). ಅಳತೆಯೊಂದನ್ನು ಬಿಟ್ಟರೆ, ಬ್ರಹ್ಮಗಿರಿಯ ತಾಮ್ರದ ಮತ್ತು ತೆಕ್ಕಲಕೋಟೆಯ ಚಿನ್ನದ ಆಭರಣಗಳನ್ನು ಒಂದೇ ಅಚ್ಚಿನಲ್ಲಿ ಮಾಡಿದ್ದಾರೋ ಎನ್ನುವಷ್ಟು ಹೋಲಿಕೆಯಿರುವುದು ತುಂಬ ಗಮನಾರ್ಹ. ಬ್ರಹ್ಮಗಿರಿಯ ಇನ್ನೊಂದು ವಸ್ತುವಿನಂತಹುದೆ ಒಂದು ತಾಮ್ರದ ವಸ್ತು[6] ಹಳ್ಳೂರು ಅಗೆತದಲ್ಲಿ ಶಿಲಾ—ತಾಮ್ರಯುಗದ ಹಾಳು ಮಣ್ಣಿನ ಪದರಿನಲ್ಲಿ ಸಿಕ್ಕಿದೆ. ಅಳತೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಆಗಿದ್ದರೂ ಮಾಟದಲ್ಲಿ ಸ್ವಲ್ಪವೇ ವ್ಯತ್ಯಾಸ. ಅದರ ಬಾಯಿಗಳು ಚಂದ್ರಾಕೃತಿಯಂತೆ ತುಂಬ ಹೊರಬಾಗಿವೆ.

ಮೇಲಿನ ವಿಮರ್ಶೆಯಿಂದ ಒಟ್ಟು ಮೂರು ಮುಖ್ಯಾಂಶಗಳು ಗಮನಾರ್ಹ :

೧. ಬ್ರಹ್ಮಗಿರಿಯ ೧೯೪೭ರ ಅಗೆತದಲ್ಲಿ ಶಿಲಾ–ತಾಮ್ರಯುಗದ ಒಂದೊಂದು ತಾಮ್ರದ ತಂತಿ, ಕೊಡಲಿ ಮತ್ತು ಕಂಚಿನ ಸಳಿ, ಉಂಗುರ ಸಿಕ್ಕಿವೆ. ಈಗ ಸಿಕ್ಕಿದ

---

[5] NagarajaRao and others ; The stoneage Hill Dwellers of Tekkalakota, p. 75, ಚಿತ್ರ ೨೦

[6] Indian Archaeology—A Review ; 1964–65.
ಈ ವಸ್ತು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ರೀಸರ್ಚ್ ಇನ್‌ಸ್ಟಿಟ್ಯೂಟ್ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲ್ಪಟ್ಟಿದೆ.

ವಸ್ತುಗಳು ಶಿಲಾ–ತಾಮ್ರಯುಗಕ್ಕೆ ಬಹುಶಃ ಸೇರಿರುವುದರಿಂದ, ಆ ಕಾಲದ ತಾಮ್ರ ವಸ್ತುಗಳ ವೈವಿಧ್ಯವನ್ನು ವಿಶಿಷ್ಟವಾಗಿ ಹೆಚ್ಚಿಸುತ್ತವೆ. ತಾಮ್ರದ ಬಳಕೆ ಈ ಹಿಂದೆ ತಜ್ಞರು ಅಭಿಪ್ರಾಯ ಪಟ್ಟಿರುವುದಕ್ಕಿಂತಲೂ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿರಬಹುದೇ ಎಂಬ ವಿಚಾರಕ್ಕೆ ಎಡೆಮಾಡಿಕೊಡುತ್ತದೆ.

೨. ಈ ವಸ್ತುಗಳಿಗೂ ತೆಕ್ಕಲಕೋಟೆ ಮತ್ತು ಹಳ್ಳೂರಿನಲ್ಲಿ ದೊರೆತ ವಸ್ತುಗಳಿಗೂ ತುಂಬಾ ಹೋಲಿಕೆಯಿದ್ದು ಈ ಎಲ್ಲ ಸ್ಥಳಗಳ ಪರಸ್ಪರ ಸಾಂಸ್ಕೃತಿಕ ಸಂಬಂಧವನ್ನು ಇನ್ನೂ ಹೆಚ್ಚು ಖಚಿತಮಾಡುವುವು. ಈ ತರಹದ ವಸ್ತುಗಳ ಪ್ರಾದೇಶಿಕ ಪ್ರಸಾರವನ್ನು ಸೂಚಿಸುವುವು.

೩. ವೈಶಿಷ್ಟ್ಯಪೂರಿತವಾದ ಸುತ್ತುಆಭರಣ ತೆಕ್ಕಲಕೋಟೆಯಲ್ಲಿ ಚಿನ್ನದ್ದು ಆದರೆ ಬ್ರಹ್ಮಗಿರಿಯಲ್ಲಿ ತಾಮ್ರದ್ದಾಗಿರುವುದು ಗಮನಾರ್ಹ. ಇದುವರೆಗೂ ದೊರೆತ ಪ್ರಮಾಣಗಳಿಂದ ತೋರಿಬಂದ ಹಾಗೆ ತಾಮ್ರ ಚಿನ್ನಕ್ಕಿಂತ ಹೆಚ್ಚು ಬಳಕೆಯಲ್ಲಿದ್ದು ಆದರಲ್ಲಿ ಈ ವಿಶಿಷ್ಟ ರೀತಿಯ ಆಭರಣ ಮಾಡಿರುವುದನ್ನು ನೋಡಿದರೆ, ಇಂಥ ಆಭರಗಳನ್ನು ಸ್ಥಳೀಯವಾಗಿಯೇ ಮಾಡುತ್ತಿದ್ದರೆ, ಎಂಬುದನ್ನು ವಿಚಾರ ಮಾಡಬೇಕಾಗುವುದು.

ವಿಶ್ವರಾಷ್ಟ್ರಗಳ ಹಣದುಬ್ಬರ

ಈಚಿನ ವರ್ಷಗಳ ವಿಶ್ವವೈಶಿಷ್ಟ್ಯವೆಂದರೆ ಬಹುತೇಕ ಎಲ್ಲ ರಾಷ್ಟ್ರ ಗಳಲ್ಲೂ ಉಲ್ಬಣವಾಗುತ್ತಿರುವ ಹಣದುಬ್ಬರ. ಕೆಲವು ದೇಶಗಳಲ್ಲಿ ಇದು ಮೆತ್ತಗೆ ನುಸುಳುತ್ತಿದೆ; ಇನ್ನು ಕೆಲವು ದೇಶಗಳಲ್ಲಿ ಇದರ ವೇಗ ಭಯಂಕರ. ತತ್ಫಲವಾಗಿ ಎಲ್ಲ ದೇಶಗಳಲ್ಲೂ ಅವುಗಳ ನಾಣ್ಯಗಳ ಕೊಳ್ಳುವ ಶಕ್ತಿ ಕೊಚ್ಚಿಹೋಗುತ್ತಿದೆ.

ಬೊಂಬಾಯಿಯ ‘ಎಕನಾಮಿಕ್ ಟೈಮ್ಸ್’ ಪತ್ರಿಕೆಯ ಸಂಶೋಧನ ವಿಭಾಗದವರು ನಡಸಿರುವ ಒಂದು ಪರಿಶೀಲನೆಯಿಂದ (ಜುಲೈ ೨೮, ೧೯೭೦) ಈ ವಿಚಾರ ವೇದ್ಯವಾಗುತ್ತದೆ.

ಪರಿಶೀಲನೆಗೆ ಒಳಗಾದ ದೇಶಗಳ ಪೈಕಿ ಮಲೇಷಿಯದ ನಾಣ್ಯದ ಸ್ಥೈರ್ಯ ಅಷ್ಟಾಗಿ ಕುಂದಿಲ್ಲವೆನ್ನಬಹುದು. ಅದರ ಆಂತರಿಕ ಕೊಳ್ಳುವ ಶಕ್ತಿ ೧೯೬೧–೬೯ರ ಅವಧಿಯಲ್ಲಿ ಸೇಕಡಾ ೭ರಷ್ಟು ಕುಗ್ಗಿತು. ಅತ್ಯಂತ ಹೆಚ್ಚಿನ ಆಘಾತಕ್ಕೆ ಒಳಗಾದ ನಾಣ್ಯವೆಂದರೆ ಬ್ರೆಜಿಲಿನದು. ಈ ಅವಧಿಯಲ್ಲಿ ಅದರ ಇಳಿತ ಸೇಕಡಾ ೯೬.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪೈಕಿ ಅಮೆರಿಕನ್ ಡಾಲರ್ ಹೆಚ್ಚು ಸ್ಥಿರ. ಅದರ ಇಳಿತ ಸೇಕಡಾ ೧೮. ಪಶ್ಚಿಮ ಜರ್ಮನಿಯ ನಾಣ್ಯದ್ದು ಡಾಲರಿನದಕ್ಕಿಂತ ಸೇಕಡಾ ೧ ರಷ್ಟು ಹೆಚ್ಚು. ಕೆನಡದ ನಾಣ್ಯದ ವಾರ್ಷಿಕ ಇಳಿತ ಸೇಕಡಾ ೨ ಅಥವಾ ೩.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಪೈಕಿ ಥೈಲೆಂಡ್, ಮೆಕ್ಸಿಕೋ, ಸಿಂಹಳ ಮತ್ತು ಪಾಕಿಸ್ತಾನದ ನಾಣ್ಯಗಳು ಹೆಚ್ಚು ಸ್ಥಿರವೆನ್ನಬಹುದು. ಇವುಗಳ ಕೊಳ್ಳುವ ಶಕ್ತಿಯ ಇಳಿತ ಕ್ರಮವಾಗಿ ಸೇಕಡಾ ೧೭, ೧೬, ೨೦ ಮತ್ತು ೨೪. ಆದರೆ ಭಾರತದಲ್ಲಿ ಜೀವನವೆಚ್ಚ ಈ ಅವಧಿಯಲ್ಲಿ ಬಲು ವೇಗವಾಗಿ ಏರಿತು (ವರ್ಷಕ್ಕೆ ಸುಮಾರು ೯%). ೧೯೬೮–೬೯ರಲ್ಲಿ ಮಾತ್ರ ಈ ಪ್ರವೃತ್ತಿಗೆ ಸ್ವಲ್ಪ ತಡೆಯಾಯಿತೆನ್ನಬಹುದು. ಅಂತೂ ೧೯೬೧–೬೯ರಲ್ಲಿ ರೂಪಾಯಿಯ ಕೊಳ್ಳುವ ಶಕ್ತಿ ಸೇಕಡಾ ೪೧ ರಷ್ಟು ಇಳಿಯಿತು. ಅನೇಕ ದೇಶಗಳಲ್ಲಿ ೧೯೬೯ರಲ್ಲಿ ಸಂಭವಿಸಿದ ಇಳಿತ ಅಗಾಧ. ೧೯೬೧–೬೯ರಲ್ಲಿ ಅಮೆರಿಕದಲ್ಲಿನ ಬೆಲೆಗಳ ವಾರ್ಷಿಕ ಸರಾಸರಿ ಏರಿಕೆ ೨.೭%. ಆದರೆ ೧೯೬೯ನ್ನು ಮಾತ್ರ ಅವಲೋಕಿಸಿದರೆ ಅದರ ಪ್ರಮಾಣ ೫.೨%. ಫ್ರಾನ್ಸಿನಲ್ಲಿ ನಾಣ್ಯದ ಮೌಲ್ಯಛೇದನವಾದರೂ (ಡೀವ್ಯಾಲ್ಯುಯೇಷನ್) ಬೆಲೆಗಳು ೪.೬%ರಷ್ಟು ಏರಿದುವು. ಬ್ರಿಟನ್ನಿನ ಕತೆಯೂ ಭಿನ್ನವಲ್ಲ. ಈ ಪರಿಶೀಲನೆಯ ಕೊನೆಯ

ವರ್ಷದಲ್ಲಿ ಪೌಂಡ್ ಸ್ಟರ್ಲಿಂಗಿನ ಉಬ್ಬರದ ಪ್ರಮಾಣ ೪.೭%. ಅಭಿವೃದ್ಧಿ ಹೊಂದುತ್ತಿರುವ ಅನೇಕ ರಾಷ್ಟ್ರಗಳ ಅನುಭವ ಬಲು ತೀವ್ರ. ಇವುಗಳ ಪೈಕಿ ಭಾರತದಲ್ಲಿ ಬೆಲೆಗಳು ಸರಾಸರಿಯಲ್ಲಿ ವರ್ಷಕ್ಕೆ ಸೇಕಡಾ ೯ರಂತೆ ಏರಿದರೂ ಕೊನೆಯ ವರ್ಷದಲ್ಲಿ ಸ್ವಲ್ಪ ಹತೋಟಿಗೆ ಬಂದುವು.

ಆದರೂ ಭಾರತದ ಪರಿಸ್ಥಿತಿ ಆತಂಕಕಾರಿ. ೧೯೬೧-೧೯೭೦ರ ಕಾಲದಲ್ಲಿ ರೂಪಾಯಿಯ ಬೆಲೆ ೫೮ ಪೈಸೆಗೆ ಕುಗ್ಗಿದೆ. ಒಟ್ಟು ಬೆಲೆಗಳು ಈ ಅವಧಿಯಲ್ಲಿ ೭೧.೫%ರಷ್ಟು ಹೆಚ್ಚಿದುವು. ಚಿಲ್ಲರೆ ಬೆಲೆಗಳ ಮತ್ತು ಗ್ರಾಮಾಂತರ ಬೆಲೆಗಳ ಸೂಚ್ಯಂಕ ನಮ್ಮಲ್ಲಿ ಇಲ್ಲದಿರುವುದು ಒಂದು ಕೊರತೆ. ಆದ್ದರಿಂದ ಜನತೆಯ ನಾನಾ ಸ್ತರಗಳ ದೃಷ್ಟಿಯಲ್ಲಿ ರೂಪಾಯಿಯ ಮೌಲ್ಯದ ಇಳಿತದ ಅಳತೆ ಸಾಧ್ಯವಿಲ್ಲ. ಅನುಭೋಗ ಬೆಲೆಗಳ ಸೂಚ್ಯಂಕ ೧೯೬೧-೭೦ರಲ್ಲಿ ೬೯.೨ರಷ್ಟು ಹೆಚ್ಚಿತು.

ವಿಶ್ವಮಾರುಕಟ್ಟೆಗಳಲ್ಲಿ ಖಾಸಗಿ ಲೆಕ್ಕದಲ್ಲಿ ಚಿನ್ನ ಕೊಳ್ಳುವ ಪ್ರವೃತ್ತಿ ಸ್ಫೋಟಕ ಪ್ರಮಾಣದಲ್ಲಿ ಹೆಚ್ಚಿರುವುದರಿಂದ ನಾನಾ ರಾಷ್ಟ್ರಗಳ ನಾಣ್ಯಗಳಲ್ಲಿ ನಂಬಿಕೆ ಕಡಿಮೆಯಾಗುತ್ತಿದೆಯೆಂಬುದು ವ್ಯಕ್ತವಾಗಿದೆ ಎಂದು 'ಎಕನಾಮಿಕ್ ಟೈಮ್ಸ್' ಪತ್ರಿಕೆ ತಿಳಿಸುತ್ತದೆ. ಹಣದುಬ್ಬರದ ಪರಿಣಾಮಗಳು ವರ್ಷೇ ವರ್ಷೇ ಸಂಚಿತವಾಗುತ್ತಿವೆ. ಜೀವನ ವೆಚ್ಚದ ಏರಿಕೆಯಿಂದ ಆರ್ಥಿಕ ಅಸ್ಥಿರತೆ ಏರ್ಪಟ್ಟಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಬೆಳವಣಿಗೆಯ ಗತಿ ಕುಂಠಿತವಾಗಿರುವುದು ಇದರ ಪರಿಣಾಮ.

ಹಣದುಬ್ಬರವನ್ನು ತಡೆಗಟ್ಟಬೇಕು; ಇಲ್ಲವೇ ಇದರ ವೇಗವನ್ನು ಇಳಿಸಬೇಕು. ಹೇಗೆ? ಎಷ್ಟು ಬೇಗ? ಇದಕ್ಕೆ ಅಗತ್ಯವಾದ ತ್ಯಾಗವೆಷ್ಟು? ಇದು ಮುಖ್ಯ ಪ್ರಶ್ನೆ.

ದ್ವಿತೀಯ ಭಾಷೆಯ ಕಲಿಕೆಯಲ್ಲಿ ವ್ಯಕ್ತಿತ್ವದ ಪಾತ್ರ

ದ್ವಿತೀಯ ಭಾಷೆಯ ಕಲಿಕೆಯಲ್ಲಿ ಭಿನ್ನವ್ಯಕ್ತಿತ್ವದ ಪಾತ್ರದ ಬಗ್ಗೆ ಈಗಾಗಲೇ ಸಾಕಷ್ಟು ವಿವೇಚನೆ ನಡೆದಿದೆ. ಡಾ. ಸುರಿಂದರ್ ಸೋಧಿ ಅವರು ಬರೋಡ ವಿಶ್ವವಿದ್ಯಾನಿಲಯದ ಎಜುಕೇಷನ್ ಅಂಡ್ ಸೈಕಾಲಜಿ ರಿವ್ಯೂ ಪತ್ರಿಕೆಯಲ್ಲಿ (ಏಪ್ರಿಲ್, ೧೯೭೦) ಈ ಬಗ್ಗೆ ಬರೆದಿರುವ ಲೇಖನದಲ್ಲಿ ಹೇಳಿರುವಂತೆ ಪೋಲಿಟ್ಜರ್ (೧೯೫೩), ನೈಟ್ ಮತ್ತು ಹೋಂಬರ್ಗ್ (೧೯೫೬), ನಿಡ (೧೯೫೬), ಗಾರ್ಡ್ನರ್ (೧೯೬೦), ಪಿಂಸ್ಲ್ಯೂರ್ (೧೯೬೧), ಲ್ಯಾಂಬರ್ಟ್ (೧೯೬೩, ೧೯೬೭) ಮತ್ತು ಸೋಧಿ (೧೯೬೮) ಅವರು ತೋರಿಸಿರುವಂತೆ ಒಂದು ಹೊಸ ಭಾಷೆಯ ಕಲಿಕೆಯಲ್ಲಿ ಯಶಸ್ಸು ಗಳಿಸಲು ಅವಶ್ಯವಾದ ಮುಖ್ಯಾಂಶಗಳು ಮೂರು: ದ್ವಿತೀಯ ಭಾಷೆಗೆ ಅಭ್ಯಾಸಿಯ ಹೊಂದಿಕೆ, ಆ ಗುಂಪಿನ ಬಗ್ಗೆ ಆತನ ಮನೋಭಾವ ಮತ್ತು ಕುಲಾಭಿಮಾನ. ದ್ವಿಭಾಷಾ ವೈದುಷ್ಯವನ್ನು ಪಡೆಯಲು ವಿಶಿಷ್ಟ ಸಾಮರ್ಥ್ಯ ಇದ್ದರೆ

ಮಾತ್ರವೇ ಸಾಲದು. ಒಂದು ವಿದೇಶೀ ಭಾಷೆಯನ್ನು ಕಲಿಯುವಲ್ಲಿ ಅನೇಕ ಸಾಮಾಜಿಕ ಧೋರಣೆಗಳೂ ಉದ್ದೇಶಗಳೂ ಬಲು ನಿಕಟವಾಗಿ ಸಂಬಂಧ ಹೊಂದಿವೆ.

ಉಜ್ನಾಡ್ಜೆ ಸಂಪ್ರದಾಯದ ಮನಶ್ಶಾಸ್ತ್ರಜ್ಞರ ಪ್ರಕಾರ ಇನ್ನೊಂದು ಭಾಷೆಯ ಕಲಿಕೆಯಿಂದ ಒಂದು ನಿರ್ದಿಷ್ಟ ರೀತಿಯ ವರ್ತನೆಗೆ ಅವಕಾಶವಿರುತ್ತದೆ. ಇತರ ರೊಂದಿಗೆ ವಿಚಾರ ವಿನಿಮಯಮಾಡಿಕೊಳ್ಳುವ ಅಗತ್ಯ, ಭಾಷಾಮಾಧ್ಯಮದ ಮೂಲಕ ಈ ಅಗತ್ಯದ ಪೂರೈಕೆ—ಇವು ಇದ್ದಾಗಲೇ ಭಾಷಾ ಚಟುವಟಿಕೆ ಸಂಭವಿಸುವುದು ಸಾಧ್ಯವೆಂದು ಇಮೆಡಾಡ್ಜೆಯ ಮತ. ದ್ವಿಭಾಷಾ ಶಿಶುವಿನ ಮಾತಿನ ಬೆಳವಣಿಗೆಯ ಘಟ್ಟದಲ್ಲಿ ಅದು ಒಂದಾದ ಮೇಲೊಂದರಂತೆ ಎರಡು ವಿಭಿನ್ನ ಭಾಷಾ ಪದ್ಧತಿಗಳನ್ನು ಸ್ವಾಭಾವಿಕವಾಗಿ ತನ್ನಲ್ಲಿ ಅಳವಡಿಸಿಕೊಂಡಾಗಲೇ ಎರಡು ಭಾಷಾ ಪದ್ಧತಿಗಳ ಕಾರ್ಯಶೀಲ ಚಿತ್ತಸ್ವಾತಂತ್ರ್ಯದ ನಿರ್ಧಾರವಾಗುತ್ತದೆ ಯೆಂಬ ಇಮೆಡಾಡ್ಜೆಯ ಮಾತನ್ನು ಡಾ. ಸುರಿಂದರ್ ಸೋಧಿ ತಮ್ಮ ಲೇಖನದಲ್ಲಿ ಉದ್ಧರಿಸಿದ್ದಾರೆ. ಸಾಮಾಜಿಕವಾಗಿ ಬಲು ಸೆಟೆದುಕೊಳ್ಳುವ ಸ್ವಭಾವವುಳ್ಳ ವ್ಯಕ್ತಿ ಎರಡು ವಿಭಿನ್ನ ಭಾಷಾ ಪದ್ಧತಿಗಳನ್ನು ಸ್ವಂತದವನ್ನಾಗಿ ಮಾಡಿಕೊಳ್ಳಲು ಸಾಧ್ಯವಾಗದುದಕ್ಕೆ ಒಂದೇ ಅರ್ಥವಿರುವ ಎರಡು ಸಂಕೇತಗಳನ್ನು ಸಂಪಾದಿಸಿ ಕೊಳ್ಳಲಾಗದ್ದೇ ಕಾರಣವೆಂದು ಡಾ. ಸೋಧಿಯವರ ಅಭಿಪ್ರಾಯ.

ದ್ವಿತೀಯ ಭಾಷೆಯನ್ನು ಯಾರು ಎಷ್ಟರ ಮಟ್ಟಿಗೆ ಚೆನ್ನಾಗಿ ಕಲಿಯಬಹುದು ಎಂಬುದನ್ನು ಮುನ್ನರಿಯಲು ಸಾಧ್ಯವಾಗುವಂತೆ ವ್ಯಕ್ತಿತ್ವ ಪರೀಕ್ಷಣ ಮಾಡುವ ಉದ್ದೇಶದಿಂದ ಆಲ್ಬರ್ಟ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮನಶ್ಶಾಸ್ತ್ರ ವಿಭಾಗ ದಲ್ಲಿನ ನೂರರುವತ್ತು ವಿದ್ಯಾರ್ಥಿಗಳ ಮೇಲೆ ನಡೆಸಿದ ಪ್ರಯೋಗವನ್ನು ಡಾ. ಸೋಧಿಯವರು ಈ ಲೇಖನದಲ್ಲಿ ವಿವರಿಸಿದ್ದಾರೆ. ಭಾರತದ ಭಾಷಾ ಸಮಸ್ಯೆಯ ದೃಷ್ಟಿಯಿಂದ ಈ ಬಗೆಯ ಪ್ರಯೋಗಪರೀಕ್ಷೆಗಳನ್ನು ಇಲ್ಲಿಯೂ ನಡೆಸುವುದರಿಂದ ಲಾಭವಾದೀತು.

ಭಾರತೀಯ ನ್ಯಾಯವ್ಯವಸ್ಥೆಯಲ್ಲಿ ಕಂಪನಿಗಳ ಅಪರಾಧದ ಹೊಣೆ

ಭಾರತದಲ್ಲಿ ಕೂಡುಬಂಡವಾಳ ಕಂಪನಿಗಳ ಸಂಖ್ಯೆ ಅಗಾಧವಾಗಿ ಬೆಳೆಯುತ್ತಿದೆ. ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಇದು ಸಹಜ. ಈ ಶತಮಾನದ ಆದಿಯಲ್ಲಿದ್ದ ಮಿತಹೊಣೆಯ ಕೂಡುಬಂಡವಾಳ ಕಂಪನಿಗಳ ಸಂಖ್ಯೆ ೧೩೪೦. ಸುಮಾರು ಎಪ್ಪತ್ತು ವರ್ಷಗಳಲ್ಲಿ ಇದು ಹತ್ತು ಮಡಿ ಆಗಿದೆ. ಈ ಕಂಪನಿಗಳಲ್ಲಿ ಆರ್ಥಿಕ ಶಕ್ತಿ ಕೇಂದ್ರೀಕೃತವಾಗಿದೆ. ಇವುಗಳು ಅನೇಕ ಅನರ್ಥ ಕಾರಿ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿವೆ. ಏಕಸ್ವಾಮ್ಯಗಳ ಬೆಳವಣಿಗೆ ಇನ್ನೊಂದು ಅಪಾಯ. ಇವುಗಳನ್ನು ಹತೋಟಿಗೆ ಒಳಪಡಿಸಲು ಭಾರತದ

ಸಂಸತ್ತು ಅನೇಕ ಕ್ರಮಗಳನ್ನು ಕೈಗೊಂಡಿದೆಯಾದರೂ ಸಂಪೂರ್ಣವಾಗಿ ಅನರ್ಥದ ನಿವಾರಣೆಯಾಗಿಲ್ಲ.

ಔತಾರ್ ಕೃಷನ್ ಕೌಲ್ ಅವರು 'ಕಂಪನಿ ಲಾ ಜರ್ನಲಿ'ನಲ್ಲಿ ಬರೆದಿರುವ ಲೇಖನವೊಂದರಲ್ಲಿ (ಸೆಪ್ಟೆಂಬರ್ ೨೦, ೧೯೭೦) ಈ ಸಮಸ್ಯೆಯ ಇನ್ನೊಂದು ಮುಖವನ್ನು ಕುರಿತು ವಿವೇಚನೆ ನಡೆಸಿದ್ದಾರೆ. ಕ್ರಿಮಿನಲ್ ನ್ಯಾಯ ರೀತ್ಯಾ ಕಂಪನಿಗಳನ್ನು ಎಷ್ಟರ ಮಟ್ಟಿಗೆ ಹೊಣೆಗೆ ಒಳಪಡಿಸಬಹುದು:-ಎಂಬುದು ಪ್ರಶ್ನೆ. ಕಂಪನಿ ಒಂದು ಕೃತಕ ವ್ಯಕ್ತಿ. ಇದರ ಸದಸ್ಯರದಕ್ಕಿಂತ ಇದರ ವ್ಯಕ್ತಿತ್ವ ಭಿನ್ನ ವಾದದ್ದು. ಇದು ನ್ಯಾಯದ ಸೃಷ್ಟಿ. ಇದಕ್ಕೆ ಪ್ರತ್ಯೇಕ ಅಸ್ತಿತ್ವವುಂಟು. ಆದರೆ ಇದು ಸ್ವತಃ ಕಾರ್ಯಪ್ರವೃತ್ತವಾಗಲಾರದು. ಪ್ರತಿನಿಧಿಗಳ ಮೂಲಕವೇ ಕಂಪನಿಯ ಕಾರ್ಯಗಳ ನಿರ್ವಹಣೆ ಸಾಧ್ಯ.

ಒಂದು ವೇಳೆ ಕಂಪನಿಯ ಅಧಿಕಾರಿಗಳು ಅಥವಾ ಪ್ರತಿನಿಧಿಗಳು ದಂಡನಾರ್ಹ ಕೃತ್ಯ ಮಾಡಿದರೆ ಆಗ ಸಂಬಂಧಿಸಿದ ವ್ಯಕ್ತಿಗಳು ಎಷ್ಟರಮಟ್ಟಿಗೆ ಶಿಕ್ಷಾರ್ಹ? ಇದರಲ್ಲಿ ಕಂಪನಿಯ ಬಾಧ್ಯತೆಯೆಷ್ಟು ?—ಎಂಬ ವಿಚಾರವನ್ನು ಕೌಲ್ ವಿಶ್ಲೇಷಿಸಿದ್ದಾರೆ. ಕಂಪನಿಗಳ ಜವಾಬ್ದಾರಿ 'ಮೇಲ್ಪಟ್ಟ ಉತ್ತರವಾದಿ' (Respondent Superior) ಮತ್ತು ಆತ್ಮ ಸಮ(Alter-ego) ತತ್ತ್ವದ ಮೇಲೆ ನಿಂತಿದೆ. ವ್ಯಕ್ತಿಯ ಅಪರಾಧದಲ್ಲಿ ಉದ್ದೇಶವೇ ಪ್ರಧಾನ ಅಂಶವಾಗಿರುವ ಯಾವ ಕೃತ್ಯದಲ್ಲೇ ಆಗಲಿ ಒಬ್ಬನನ್ನು ಅಪರಾಧಿ ಎಂದು ಪರಿಗಣಿಸಬೇಕಾದರೆ ಆತನಲ್ಲಿ ಆ ಉದ್ದೇಶ ಇತ್ತೆಂಬುದನ್ನು ಮೊದಲು ಸಿದ್ಧಪಡಿಸಬೇಕು. ಒಂದು ಕಂಪನಿಯ ಪ್ರತಿನಿಧಿಗಳು ಅಪರಾಧ ಮಾಡಿದ್ದೇ ಆದರೆ ಅವರನ್ನು ನೇಮಿಸಿದ ಕಂಪನಿ—ಅದರ ಷೇರುದಾರರು—ಎಷ್ಟರ ಮಟ್ಟಿಗೆ ಹೊಣೆ? ಎಂಬುದು ವಿವೇಚನಾರ್ಹ. ಸೇವಕನ ಅಥವಾ ಪ್ರತಿನಿಧಿಯ ಮಾನಸಿಕ ಸ್ಥಿತಿಯನ್ನೇ ಆತನನ್ನು ನೇಮಿಸಿದವನಿಗೂ ಆರೋಪಿಸಿ ಆತನನ್ನು ಶಿಕ್ಷಿಸುವುದು ಸರಿಯಲ್ಲ ಎಂಬುದು ಒಂದು ವಾದ. ಆದರೆ ಆತನನ್ನು ನೇಮಿಸಿದವನು ಅವನ ಕೃತ್ಯದ ಹೊಣೆ ಅರಿತವನಾದ್ದರಿಂದ ದಂಡಾರ್ಹ ಎಂಬುದು ಇನ್ನೊಂದು ವಾದ. ಇದನ್ನು ಸಮರ್ಥಿಸಲು ಪ್ರಾತಿನಿಧಿಕ ಜವಾಬ್ದಾರಿಯ ಸಿದ್ಧಾಂತವನ್ನು (the doctrine of vicarious liability) ಉಲ್ಲೇಖಿಸಬಹುದಾಗಿದೆ. ಸೇವಕನ ಕೃತ್ಯಗಳಿಗೆ ಯಜಮಾನ ದಂಡಾರ್ಹ ಎಂಬ ತತ್ತ್ವವನ್ನು ಒಪ್ಪುವಂಥ ಕಂಪನಿಯ ಸೇವಕನ ಅಥವಾ ಪ್ರತಿನಿಧಿಗಳ ಕೃತ್ಯಗಳಿಗೆ ಕಂಪನಿ ಹೊಣೆ ಎಂಬುದನ್ನು ಒಪ್ಪಬೇಕಾದರೆ ಕಂಪನಿಯನ್ನು ನಡಸುವವರೂ ಕಂಪನಿಯೂ ಒಂದು ಎಂದು ಭಾವಿಸಬೇಕಾಗುತ್ತದೆ. ಇದು ಆತ್ಮ ಸಮ (Alter-ego) ಸಿದ್ಧಾಂತ. ಕಂಪನಿಯೆಂಬುದು ನಿರಾಕಾರ. ಅದರದೇ ಆದ ಮನಸ್ಸೆಂಬುದಿಲ್ಲ. ಅದರ ಮನಸ್ಸನ್ನೂ ಉದ್ದೇಶಗಳನ್ನೂ ಅದನ್ನು ನಡೆಸುವವರಲ್ಲಿ ಕಾಣಬೇಕು—ಎಂಬ ಸಿದ್ಧಾಂತ ಅನೇಕ ಮೊಕದ್ದಮೆಗಳಲ್ಲಿ ವ್ಯಕ್ತಪಟ್ಟಿದೆ.

ಕಂಪನಿಗಳ ಅಪರಾಧಗಳ ಬಗ್ಗೆ ಇನ್ನೂ ಹೆಚ್ಚಿನ ಪರಿಶೀಲನೆ ನಡೆಸಿ ಈ ವಿಚಾರವಾಗಿ ಖಚಿತವಾದ ನ್ಯಾಯ ನಿಷ್ಕರ್ಷೆ ಮಾಡಬೇಕು—ಎಂಬ ಲೇಖಕರ ಸಲಹೆ ಪರಿಶೀಲನಾರ್ಹ.

ಮೈಸೂರಿನಲ್ಲಿ ಗ್ರಾಮ ರಾಜಕೀಯ

ಭಾರತದ ಗ್ರಾಮಗಳಲ್ಲಿ ಇಂದು ಎರಡು ಬಗೆಯ ರಾಜಕೀಯ ವ್ಯವಸ್ಥೆಗಳು ಸಹ ಬಾಳ್ವೆ ನಡೆಸುತ್ತಿವೆ. ಅನೂಚಾನವಾಗಿ ಬಂದ ಗ್ರಾಮಪಂಚಾಯತಿಗಳ ಜೊತೆಗೆ ಆಧುನಿಕ ಪಂಚಾಯತ್ ರಾಜ್ಯವ್ಯವಸ್ಥೆಯೂ ನೆಲೆಗೊಂಡಿದೆ. ಹಳೆಯ ಗ್ರಾಮ ಪಂಚಾಯತಿಗಳಲ್ಲಿ ಕುಟುಂಬಗಳ ಯಜಮಾನರದು ಪ್ರಧಾನ ಪಾತ್ರ. ಅಂತರ್ಜಾತೀಯ ಕಟ್ಟಳೆ, ಗ್ರಾಮೀಣ ಚಟುವಟಿಕೆಗಳ ಸಂಘಟನೆ, ವ್ಯಕ್ತಿಗಳ ವರ್ತನೆಯ ನಿರ್ದೇಶನ—ಇವೆಲ್ಲ ಯಜಮಾನರ ಹೊಣೆ. ಪಂಚಾಯತ್ ರಾಜ್ಯವ್ಯವಸ್ಥೆಯ ಅಡಿಯಲ್ಲಿ ಗ್ರಾಮಗಳ ಮಟ್ಟದಲ್ಲಿ ಚುನಾವಣೆ ನಡೆದು ಅಧಿಕಾರ ನಡಸುತ್ತಿರುವವರಿಗೂ ಪರಂಪರಾಗತವಾಗಿ ಬಂದ ಪಂಚಾಯತಿಗಳಿಗೂ ಯಾವ ಬಗೆಯ ಸಂಬಂಧ ಇದೆಯೆಂಬುದನ್ನು ಕುರಿತು ಅಮೆರಿಕದ ಇಲಿನಾಯ್ ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ನಡಸುತ್ತಿರುವ ಜಿ. ಎನ್. ರಾಮು ಅವರೂ ಉಪಪ್ರಾಧ್ಯಾಪಕರಾದ ಪಾಲ್ ಡಿ ವೈಟ್ ಅವರೂ ಸಂಶೋಧನೆ ನಡೆಸಿದ್ದಾರೆ. (ದಿ ಈಸ್ಟರ್ನ್ ಆಂಥ್ರಪಾಲಜಿಸ್ಟ್, ಮೇ–ಆಗಸ್ಟ್ ೧೯೭೦)

ಸಾಂಪ್ರದಾಯಿಕ ಹಾಗೂ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಗಳೆರಡೂ ಒಟ್ಟಿಗೆ ಇರುವುದರಿಂದ ಗ್ರಾಮಭಾರತದ ರಾಜಕೀಯ ಪರಿಸ್ಥಿತಿ ತೊಡಕಿನದು—ಎಂಬುದು ಅವರ ಅಭಿಮತ. ಪ್ರಜಾಸತ್ತಾತ್ಮಕ ವಿಧಾನಗಳು ವ್ಯಾಪಕವಾದಂತೆಲ್ಲ ಸಾಂಪ್ರದಾಯಿಕ ರಾಜಕೀಯ ವ್ಯವಸ್ಥೆ ನಶಿಸುವುದೆಂಬುದು ಸೆನ್ ಮತ್ತು ರಾಮ್ ಅವರ ಅಭಿಪ್ರಾಯ. ಆಧುನಿಕ ರಾಜಕೀಯ ವ್ಯವಸ್ಥೆಗಳು ಸಾಂಪ್ರದಾಯಿಕ ಸ್ಥಳೀಯ ವಿಧಾನಗಳ ಪರಿಧಿಯಲ್ಲಿ ಬಹು ದೀರ್ಘಕಾಲ ಉಳಿಯುವುವೆಂಬುದು ಶ್ರೀನಿವಾಸನರ ಮತ. ಆದರೆ ಇವೆರಡು ವ್ಯವಸ್ಥೆಗಳೂ ಪರಿಣಾಮಕಾರಿಯಾಗಿ ಪರಸ್ಪರ ಪೂರಕವಾಗಿ ಬಾಳ್ವೆ ನಡೆಸುವುವೆಂಬುದಾಗಿ ಗೌಲ್ಡ್, ವೈಟ್ ಮತ್ತು ರಾಮು ಹೇಳುತ್ತಾರೆ.

ರಾಮು ಮತ್ತು ವೈಟ್ ಅವರು ಕೋಲಾರ ಜಿಲ್ಲೆಯ ಎಂಟು ಹಳ್ಳಿಗಳಲ್ಲಿ ಸಂಗ್ರಹಿಸಿದ ಸಾಮಗ್ರಿಯ ಆಧಾರದ ಮೇಲೆ ಕೆಲವು ಮುಖ್ಯ ತೀರ್ಮಾನಗಳಿಗೆ ಬಂದಿದ್ದಾರೆ. ಪ್ರಜಾಸತ್ತಾತ್ಮಕ ಪಂಚಾಯತಿಗಳು ಒಂದೊಂದು ಗ್ರಾಮಕ್ಕೂ ಪ್ರತ್ಯೇಕವಾಗಿಲ್ಲ. ೧೫೦೦ ವಯಸ್ಕರಿಗೆ ಒಂದರಂತೆ ಇವು ಇರಬೇಕಾದ್ದರಿಂದ ಇವುಗಳ ಚಟುವಟಿಕೆ ಒಂದೊಂದು ಗ್ರಾಮಕ್ಕೇ ಸೀಮಿತವಲ್ಲ. ಇವು ಅಂತರ್ ಗ್ರಾಮೀಯ. ಸಾಂಪ್ರದಾಯಿಕ ಗ್ರಾಮಪಂಚಾಯತಿಗಳು ಆಯಾ ಗ್ರಾಮಗಳಿಗೇ

ವಿಶಿಷ್ಟವಾದವು. ಸಾರ್ವಜನಿಕ ಶಿಕ್ಷಣ, ದೀಪವ್ಯವಸ್ಥೆ, ಸ್ಥಳೀಯ ರಸ್ತೆಗಳ ನಿರ್ಮಾಣ ಮುಂತಾದವು ಆಧುನಿಕ ಗ್ರಾಮಪಂಚಾಯತಿಗಳ ಕಾರ್ಯಭಾರ. ಅಂತರ್ಜಾತೀಯ ವಿಚಾರ, ಸಂಸಾರ ಸಮಸ್ಯೆ, ಮತೀಯ ಕಲಹ ಮುಂತಾದವುಗಳ ಬಗ್ಗೆ ಸಾಂಪ್ರದಾಯಿಕ ಗ್ರಾಮಪಂಚಾಯತಿ ಕಾರ್ಯನಿರತವಾಗುತ್ತದೆ. ಚುನಾವಣೆಗಳಲ್ಲಿ ಜಾತಿ ಮತ್ತು ಕುಟುಂಬ ಪ್ರಧಾನ ಪಾತ್ರ ವಹಿಸುವುವಾದರೂ ಜಾತಿಯ ಆಧಾರದ ಮೇಲೆಯೇ ಚುನಾವಣೆ ನಡೆಯುವುದಿಲ್ಲವೆಂಬುದನ್ನು ಇವರು ಗಮನಿಸಿದ್ದಾರೆ. ಸಾಮಾನ್ಯವಾಗಿ ಯಾವುದಾದರೂ ಒಂದು ಜಾತಿ ಬಲಿಷ್ಠವಾಗಿರುತ್ತದೆ. ಆ ಜಾತಿಯ ಅಭ್ಯರ್ಥಿಗಳಲ್ಲೇ ಸ್ಪರ್ಧೆ ಇರುತ್ತದೆ. ಇದು ಇಲ್ಲಿ ಕಾಣಬರುವ ಸ್ಥೂಲ ವಿನ್ಯಾಸ.

ರಾಮು ಮತ್ತು ವೈಟ್ ಪ್ರತಿಪಾದಿಸಿರುವ ಮುಖ್ಯ ವಿಚಾರವಿದು: ಭಾರತದ ಗ್ರಾಮಗಳಲ್ಲಿ ಸಂಪ್ರದಾಯವೂ ಆಧುನಿಕತೆಯೂ ಮುಂದೆಯೂ ಬಹುಕಾಲ ಸಹವರ್ತಿಸುತ್ತವೆ. ಇವು ಸದ್ಯಕ್ಕಂತೂ ಪರಸ್ಪರ ಪೂರಕ.

ಭಾರತದಲ್ಲಿ ವ್ಯವಸ್ಥಾಪಕ ಶಿಕ್ಷಣ

ಅಕ್ಟೋಬರ್ ೭, ೧೯೭೦ರ ಎಕನಾಮಿಕ್ ಟೈಮ್ಸ್ ಪತ್ರಿಕೆಯಲ್ಲಿ ಎಂ. ಜೆಡ್. ಮೋಗ್ರಿಯವರು ಭಾರತದಲ್ಲಿ ವ್ಯವಸ್ಥಾಪಕ ಶಿಕ್ಷಣದ ಬಗ್ಗೆ ಬರೆದಿರುವ ಲೇಖನದಿಂದ ಹಲವು ಸ್ವಾರಸ್ಯಕರ ಅಂಕಿ ಅಂಶಗಳು ಹೊರಬಿದ್ದಿವೆ. ಕಳೆದ ಎರಡು ದಶಕಗಳಲ್ಲಿ ದೇಶದ ಕೈಗಾರಿಕಾ ಅಸ್ತಿಭಾರ ಶೀಘ್ರವಾಗಿ ವಿಸ್ತರಿಸುತ್ತಿದೆ. ಆದರೆ ಇದಕ್ಕೆ ಅನುಗುಣವಾಗಿ ನುರಿತ ವ್ಯವಸ್ಥಾಪಕರ ಸರಬರಾಯಿ ಆಗುತ್ತಿಲ್ಲ. ಒಳ್ಳೆಯ ವ್ಯವಸ್ಥಾಪಕತ್ವದ ಅಭಾವದಿಂದಾಗಿ ಅನೇಕ ಸಣ್ಣ ಕೈಗಾರಿಕೆಗಳು ಬಾಲಮರಣಕ್ಕೆ ತುತ್ತಾಗುತ್ತಿವೆ. ಅಷ್ಟೇ ಅಲ್ಲ; ತರಬೇತಾದ ಅನೇಕರು ಉನ್ನತ ಸ್ಥಾನಕ್ಕೇರಿ ನಷ್ಟಕಾರಕವಾಗಿ ಪರಿಣಮಿಸಿದ್ದಾರೆ.

ವ್ಯವಸ್ಥಾಪಕ ಸಿಬ್ಬಂದಿಯ ಸಂಖ್ಯೆ ೧೯೭೫–೭೬ರ ವೇಳೆಗೆ ೧೯೬೦–೬೧ರಲ್ಲಿದ್ದದ್ದರ ಐದರಷ್ಟು ಹೆಚ್ಚುವುದೆಂದು ಮುದಲಿಯಾರ್ ಸಮಿತಿಯ ವರದಿಯಿಂದ (೧೯೬೪) ವೇದ್ಯವಾಗುತ್ತದೆ. ಈ ಅವಧಿಯಲ್ಲಿ ಕಾರ್ಮಿಕರ ಸಂಖ್ಯೆ ೪೦%ರಷ್ಟು ಮಾತ್ರ ವೃದ್ಧಿಯಾಗಿರುತ್ತದೆ. ವ್ಯವಸ್ಥಿತ ಕೈಗಾರಿಕಾಕ್ಷೇತ್ರವನ್ನಷ್ಟೇ ಪರಿಗಣನೆಗೆ ತೆಗೆದುಕೊಂಡರೂ ೧೯೬೬–೭೬ರ ಹತ್ತು ವರ್ಷಗಳಲ್ಲಿ ಎರಡೂವರೆ ಲಕ್ಷದಷ್ಟು ಹೆಚ್ಚು ಸಂಖ್ಯೆಯಲ್ಲಿ ವ್ಯವಸ್ಥಾಪಕರು ಬೇಕಾಗುತ್ತಾರೆ.

ಪರಿಮಾಣದೃಷ್ಟಿಯಿಂದ ನಮಗೆ ವ್ಯವಸ್ಥಾಪಕ ಸಿಬ್ಬಂದಿಯ ಕೊರತೆಯೇನೂ ಇಲ್ಲ. ತರಬೇತಾಗದ, ಆದರೆ ಶಿಕ್ಷಿತರಾದ, ಸಿಬ್ಬಂದಿ ದೊರಕುವುದು ಆರ್ಟ್ಸ್ ಮತ್ತು ಕಾಮರ್ಸ್ ಪದವೀಧರರ ಕ್ಷೇತ್ರದಿಂದ. ೧೯೫೧ರಲ್ಲಿ ಇವರ ಸಂಖ್ಯೆ ೨೪,೦೦೦ ಇದ್ದದ್ದು ೧೯೫೬ರಲ್ಲಿ ೪೪,೦೦೦ಕ್ಕೂ ೧೯೬೬ರಲ್ಲಿ ೧,೧೨,೦೦೦ಕ್ಕೂ

ಏರಿತು. ಎಂದರೆ ಇವರ ಸಂಖ್ಯೆಯ ಏರಿಕೆಯ ಪ್ರಮಾಣ ವರ್ಷಕ್ಕೆ ೧೦%. ಈ ಏರಿಕೆ ಇದೇ ಗತಿಯಲ್ಲಿ ಮುಂದುವರಿದರೆ ೧೯೭೬ರ ವೇಳೆಗೆ ಇವರ ಸಂಖ್ಯೆ ೨,೨೪,೦೦೦ ಆಗುತ್ತದೆ. ಇವರಲ್ಲಿ ವಾಣಿಜ್ಯೇತರ ಕ್ಷೇತ್ರಗಳಿಗೆ ಹೋಗುವವರನ್ನೂ ವಾಣಿಜ್ಯ ಸಂಸ್ಥೆಗಳಲ್ಲಿ ಗುಮಾಸ್ತರಾಗಿ ಸೇರುವವರನ್ನೂ ಲೆಕ್ಕಬರಹ, ವಿಮೆ, ಬ್ಯಾಂಕಿಂಗ್ ಮುಂತಾದ ವಿಶೇಷ ಕ್ಷೇತ್ರಗಳಲ್ಲಿ ಪರಿಣತಿ ಪಡೆಯುವವರನ್ನೂ ಕಳೆದರೂ ನಾಲ್ಕು ಲಕ್ಷ ಮಂದಿ ಒದಗಿಬರುತ್ತಾರೆ. ಇವರ ಪರಿಮಾಣ ಅಗತ್ಯಕ್ಕಿಂತ ಹೆಚ್ಚೇ ಎನ್ನಬಹುದು.

ಆದರೆ ಗುಣದೃಷ್ಟಿಯಿಂದ ನೋಡಿದರೆ ತರಬೇತಾದ ಸಿಬ್ಬಂದಿಯ ಅಭಾವ ವ್ಯಕ್ತವಾಗುತ್ತದೆ. ವ್ಯವಸ್ಥಾಪಕತ್ವ ಶಿಕ್ಷಣಕ್ಕಾಗಿ ಮೀಸಲಾದ ಶಿಕ್ಷಣಸಂಸ್ಥೆಗಳ ಹಾಗೂ ವಿಶ್ವವಿದ್ಯಾನಿಲಯಗಳು ತೆರೆದಿರುವ ವ್ಯಾಸಂಗಕ್ರಮಗಳ ಪ್ರಾಮುಖ್ಯವನ್ನು ಮೋಗ್ರಿಯವರು ತಮ್ಮ ಲೇಖನದಲ್ಲಿ ವಿವೇಚಿಸಿದ್ದಾರೆ.

ಉತ್ಸವಾಚರಣೆ ಏತಕ್ಕಾಗಿ?

ಹೀಗೆಂದು ಆರಂಭವಾಗುತ್ತದೆ—ನವದೆಹಲಿಯ ಪಾರ್ಲಿಮೆಂಟರಿ ಸ್ಟಡೀಸ್ ಪತ್ರಿಕೆಯ ಅಕ್ಟೋಬರ್ ಸಂಚಿಕೆಯಲ್ಲಿನ ಒಂದು ಸಂಪಾದಕೀಯ. ವಿಶ್ವಸಂಸ್ಥೆ ಒಂದು ನನಸಾಗದ ಆದರ್ಶ. ದ್ವಿತೀಯ ಯುದ್ಧಾನಂತರದ ಇಪ್ಪತ್ತೈದು ವರ್ಷಗಳಲ್ಲಿ ವಿಶ್ವಮೇಧವೇನೂ ನಡೆದಿಲ್ಲ ನಿಜ. ಆದರೆ ವಿಶ್ವವ್ಯಾಪಿ ಪರಿಣಾಮವುಳ್ಳ ಸ್ಥಳೀಯ ಯುದ್ಧಗಳು ಸಾಗಿವೆ—ಭಾರತೀಯ ಉಪಖಂಡದಲ್ಲಿ ಎರಡುಸಾರಿ; ಮತ್ತೆ ಪಶ್ಚಿಮ ಏಷ್ಯದಲ್ಲಿ, ವಿಯೆಟ್ನಾಂ ಕೊರಿಯಗಳಲ್ಲಿ. ಕ್ಯೂಬದಲ್ಲೂ ಯುದ್ಧ ಸಂಭವಿಸಬಹುದಾಗಿತ್ತು. ವಿಶ್ವಯುದ್ಧ ನಿವಾರಣೆಯಾಗಲಿ ಸ್ಥಳೀಯ ಯುದ್ಧ ನಿಲುಗಡೆಯಾಗಲಿ ಸಾಧ್ಯವಾಗಿರುವುದು ವಿಶ್ವಸಂಸ್ಥೆಯಿಂದಲ್ಲ. ಪರಮಾಣು ಭಯವೇ ಮೊದಲನೆಯದಕ್ಕೆ ಕಾರಣ, ಬೃಹದ್ರಾಷ್ಟ್ರಗಳ ಹಿತಾಸಕ್ತಿಗಳೇ ಎರಡನೆಯದಕ್ಕೆ ಕಾರಣ.

ಶಿಕ್ಷಣ, ಆರೋಗ್ಯ, ನಿರಾಶ್ರಿತರಿಗೆ ವಸತಿಕಲ್ಪನೆ, ಆರ್ಥಿಕ ಅಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ವಿಶ್ವಸಂಸ್ಥೆಯ ವಿಶೇಷ ಸಂಸ್ಥೆಗಳ ಪಾತ್ರ ಗಮನಾರ್ಹ. ಆದರೆ ಶಾಂತಿಕಾಲದಲ್ಲೇ ಆಗಲಿ, ಯುದ್ಧಕಾಲದಲ್ಲೇ ಆಗಲಿ ವಿಶ್ವಸಂಸ್ಥೆಯ ಕಾರ್ಯಾಚರಣೆಗಳಿಗಾಗಿ ಸದಸ್ಯರಾಷ್ಟ್ರಗಳು ವಹಿಸಬೇಕಾದ ವೆಚ್ಚವಂತೂ ಅಗಾಧ. ಅನಿಶ್ಚಿತತೆಯ ವಿಶ್ವದಲ್ಲಿ ಬದುಕಿ ಉಳಿಯುವ ಶಕ್ತಿ ಹೊಂದಿದೆಯೆಂಬುದೊಂದೇ ವಿಶ್ವಸಂಸ್ಥೆಯ ಮಹಾಸಾಧನೆ. ಆದರೆ ಎಷ್ಟು ಕಾಲ ಹೀಗೆ ಇರುವುದು ಸಾಧ್ಯ ಎಂಬುದು ಸಂದೇಹಾಸ್ಪದ.

ಬೃಹದ್‌ರಾಷ್ಟ್ರಗಳಲ್ಲಿ ಒಮ್ಮತವಿದ್ದಾಗ ಮಾತ್ರವೇ ವಿಶ್ವಸಂಸ್ಥೆ ಯಶಸ್ವಿಯಾಗಬಲ್ಲುದು. ಅಂಥ ಸಂದರ್ಭದಲ್ಲಿ ವಿಶ್ವಸಂಸ್ಥೆ ಇಲ್ಲದಿದ್ದರೂ ನಷ್ಟವೇನಿಲ್ಲ. ವಿಶ್ವಸಂಸ್ಥೆಯಿನ್ನೂ ವಿಶ್ವದ ಅಭಿಪ್ರಾಯದ ವೇದಿಕೆಯಾಗಿಲ್ಲ. ರಾಷ್ಟ್ರೀಯ ಹಿತ

ಅಭಿಪ್ರಾಯಗಳ ಘರ್ಷಣೆಯ ಫಲವಾಗಿ ವಿಶ್ವಸಂಸ್ಥೆಯ ವೇದಿಕೆಯ ಮೇಲೆ ಹೊರ ಬೀಳುತ್ತಿರುವುದು ಕೇವಲ ಅರೆಸತ್ಯ. ಮಾನವತೆಯ ಅಂತಃಕರಣದ ಪ್ರಾತಿನಿಧಿಕ ವಾದ ಪೂರ್ಣಸತ್ಯದ ವಾಣಿಯಾದಾಗ ಮಾತ್ರ ವಿಶ್ವಸಂಸ್ಥೆಯ ಬದುಕು ಸಾರ್ಥಕ ವಾದೀತು—ಎಂಬುದಾಗಿ ಈ ಪತ್ರಿಕೆ ಬರೆದಿದೆ.

ಕರ್ಣಾಟಕ ಇತಿಹಾಸದ ಮೇಲೆ ಹೊಸ ಬೆಳಕು

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ದವರು ೧೯೭೦ನೆಯ ಮಾರ್ಚ್ ತಿಂಗಳಲ್ಲಿ ಕರ್ಣಾಟಕದ ಅತ್ಯಂತ ಪ್ರಾಚೀನ ರಾಜ ಧಾನಿಗಳಲ್ಲಿ ಒಂದಾದ ಉತ್ತರ ಕನ್ನಡಜಿಲ್ಲೆಯಲ್ಲಿರುವ ಬನವಾಸಿಯಲ್ಲಿ ನಡೆಸಿದ ಉತ್ಖನನಗಳಿಂದ ಕರ್ಣಾಟಕದ ಪ್ರಾಚೀನ ಇತಿಹಾಸದ ಮೇಲೆ ಹೊಸ ಬೆಳಕು ಬಿದ್ದಿದೆ.

ಪ್ರಾಯೋಗಿಕವಾಗಿ ಕೇವಲ ಎರಡು ವಾರಗಳ ಕಾಲ ನಡೆದ ಈ ಸಂಶೋಧನೆ ಗಳಲ್ಲಿ ಬನವಾಸಿ ಕ್ರಿಸ್ತಶಕೆಯ ಆರಂಭಕಾಲದಲ್ಲಿ ರೋಮನರೊಂದಿಗೆ ಹೊಂದಿದ್ದ ವ್ಯಾಪಾರ ಸಂಬಂಧವನ್ನು ಸೂಚಿಸುವ ರೋಮನರಿಂದ ತಯಾರಿಸಲ್ಪಟ್ಟ ಮಡಕೆ ಚೂರುಗಳೂ, ಆ ಸುಮಾರಿಗೆ ಸೇರಿದ ಶಾತವಾಹನರ ಕೆಲವು ನಾಣ್ಯಗಳೂ ದೊರಕಿದುವು. ಶಾತವಾಹನರ ಕಾಲಕ್ಕೆ ಸೇರಬಹುದಾದ ದೊಡ್ಡ ಇಟ್ಟಿಗೆಗಳಿಂದ ಕಟ್ಟಲಾದ ಒಂದು ಗಜಪೃಷ್ಠಾಕೃತಿಯ ಕಟ್ಟಡದ ಅವಶೇಷಗಳು ಕಂಡುಬಂದು, ಅದೊಂದು ಬೌದ್ಧವಿಹಾರವೋ ಹಿಂದೂ ದೇವಾಲಯವೋ ಆಗಿರಬಹುದೆಂದು ತಿಳಿದು ಬರುತ್ತದೆ. ಕದಂಬರ ರಾಜಧಾನಿಯಾಗಿದ್ದ ಬನವಾಸಿಯಲ್ಲಿ ಈವರೆಗೂ ಅವರ ಶಾಸನಗಳಾವುವೂ ದೊರಕಿರಲಿಲ್ಲ. ಈ ಸಂಶೋಧನೆಗಳಲ್ಲಿ ಸುಂದರವಾದ ಚೌಕತಲೆಕಟ್ಟಿನ ಕದಂಬ ಲಿಪಿಯಲ್ಲಿ ಕೆತ್ತಲಾದ ಸಂಸ್ಕೃತ ಶಾಸನದ ಭಾಗವೊಂದು ಸಿಕ್ಕಿದೆ. ಇದು ಕದಂಬ ಚಕ್ರವರ್ತಿ ಮೃಗೇಶವರ್ಮನ ಕಾಲಕ್ಕೆ ಸೇರಿದುದಾಗಿದೆ. ಸಂಶೋಧನೆಗಳನ್ನು ಈ ವರ್ಷವೂ ಮುಂದುವರಿಸುವ ನಿರೀಕ್ಷೆಯಿದೆ. ಮೌರ್ಯ ಸಮ್ರಾಟ ಅಶೋಕನ ಕಾಲದಲ್ಲಿ ಅನೇಕ ಬೌದ್ಧ ಸ್ತೂಪಗಳಿದ್ದುದು ಹ್ಯುಯೆನ್ ತ್ಸಾಂಗ್ ಮುಂತಾದವರ ಬರವಣಿಗೆಗಳಿಂದ ತಿಳಿದು ಬರುತ್ತದೆ. ಈ ಸ್ತೂಪಗಳ ಅವಶೇಷಗಳು ದೊರಕಿದಲ್ಲಿ, ಭಾರತದ ಪ್ರಾಚೀನ ಇತಿಹಾಸದಲ್ಲೇ ಇಂದೊಂದು ಪ್ರಮುಖ ಸಂಶೋಧನೆಯಾಗುತ್ತದೆಯೆಂಬುದರಲ್ಲಿ ಸಂಶಯವಿಲ್ಲ.

ಭಾರತದ ಕೈಗಾರಿಕೆಗಳ ಉತ್ಪಾದನೆ

೧೯೬೬–೬೭ರಲ್ಲಿ ಕೈಗಾರಿಕೋತ್ಪಾದನೆಯಲ್ಲಿ ಸಂಭವಿಸಿದ್ದ ತೀವ್ರ ಹಿಂಜರಿತಕ್ಕೆ ತಡೆಯುಂಟಾಗಿ, ೧೯೬೯ರಿಂದೀಚೆಗೆ ಅದು ಚೇತರಿಸಿಕೊಳ್ಳುತ್ತಿರುವುದು ಸಮಾ ಧಾನಕರ. ೧೯೬೮–೬೯ರಲ್ಲಿ ಕೈಗಾರಿಕೋತ್ಪಾದನೆ ೬.೨%ರಷ್ಟು ಅಧಿಕಗೊಂಡಿತು.

೧೯೬೯-೭೦ರ ಹೆಚ್ಚಳ ೭%. ಕಚ್ಚಾ ಸಾಮಗ್ರಿಯ ಸರಬರಾಯಿ, ಆಮದು ನೀತಿಯ ಸಡಿಲಿಕೆ, ಆಂತರಿಕ ವರಮಾನಗಳ ಹೆಚ್ಚಳದ ಫಲವಾಗಿ ಸರಕುಗಳಿಗೆ ಒದಗಿದ ಹೆಚ್ಚಿನ ಬೇಡಿಕೆ, ರಫ್ತಿಗೆ ಉತ್ತೇಜನ, ಉದ್ದರಿಸೌಲಭ್ಯ ವಿಸ್ತರಣೆ—ಇವು ಈ ಪ್ರವೃತ್ತಿಗೆ ಕಾರಣ. ೧೯೭೦-೭೧ರಲ್ಲಿ ವ್ಯವಸಾಯ ವರಮಾನ ಗಮನಾರ್ಹವಾಗಿ ಹೆಚ್ಚಿದೆ. ಕೈಗಾರಿಕಾ ಲೈಸೆನ್ಸ್ ವಿನಾಯಿತಿ ಮಿತಿಯನ್ನು ಸಾಮಾನ್ಯವಾಗಿ ಒಂದು ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದ್ದರಿಂದ ಕೈಗಾರಿಕಾ ಕ್ಷೇತ್ರದಲ್ಲಿ ಚಟುವಟಿಕೆ ಹೆಚ್ಚಿದೆ.

ಅನುಭೋಗವಸ್ತು ಕೈಗಾರಿಕೆ ಮತ್ತು ಬಂಡವಾಳವಸ್ತು ಕೈಗಾರಿಕೆಗಳಲ್ಲೂ ಮಧ್ಯಮಟ್ಟದ ಕೈಗಾರಿಕೆಗಳಲ್ಲೂ ಚಟುವಟಿಕೆ ಹೆಚ್ಚಿದೆ. ಅನುಭೋಗವಸ್ತು ಕೈಗಾರಿಕಾಕ್ಷೇತ್ರದಲ್ಲಿ ಸಂಭವಿಸಿರುವ ಪ್ರಗತಿ ಗಮನಾರ್ಹ. ಮೋಟಾರ್ ಸೈಕಲ್ ಉತ್ಪಾದನೆಯ ಹೆಚ್ಚಳ ೫೨.೧%. ಆದರೂ ಅಭಾವ ನಿವಾರಣೆಯಾಗಿಲ್ಲ. ಮೋಟಾರುಕಾರು ಉತ್ಪಾದನೆಯಲ್ಲಿ ಮಾತ್ರ ೦.೫% ಇಳಿತಾಯ: ವಾಣಿಜ್ಯ ವಾಹನಗಳ ಉತ್ಪಾದನೆ ೨.೭% ತಗ್ಗು. ಮಧ್ಯಮಟ್ಟದ ಕೈಗಾರಿಕೆಗಳಲ್ಲಿ ಉತ್ಪಾದನೆ ಸಾಮಾನ್ಯವಾಗಿ ಹೆಚ್ಚಾಗಿದೆ. ಅಲ್ಯೂಮಿನಿಯಂ ಗಟ್ಟಿಯ ಉತ್ಪಾದನೆ ೧೦.೬% ಅಧಿಕ; ಕಾಸ್ಟಿಕ್ ಸೋಡ ೧೪.೧%; ಮೋಟಾರು ವಾಹನಗಳ ಟೈರು, ಟ್ಯೂಬು ೭%.

ಬಂಡವಾಳ ಕೈಗಾರಿಕೆಗಳಲ್ಲಿ ಡೀಸೆಲ್ ಎಂಜಿನುಗಳ ಉತ್ಪಾದನೆ ೧೬.೧% ಅಧಿಕಗೊಂಡಿದೆ; ಟ್ರಾಕ್ಟರುಗಳು ೧೧.೩%; ಬೀಸುವ ಯಂತ್ರ ೭೧.೮% ಹತ್ತಿ ಜವಳಿ ಸಣಬು ಕೈಗಾರಿಕೆಗಳ ಉತ್ಪಾದನ ಪ್ರಗತಿಯೂ ಸಮರ್ಪಕ.

ಆದರೆ ಬ್ಲೀಚಿಂಗ್ ಪುಡಿ, ಆಂಟಿಮನಿ, ಸತುವು, ಉಕ್ಕೆರಕ ಮುಂತಾದ ಕ್ಷೇತ್ರಗಳಲ್ಲಿನ ಉತ್ಪಾದನೆ ಅಸಮರ್ಪಕ.

ಎಂಜಿನಿಯರಿಂಗ್ ವಸ್ತುಗಳ ರಫ್ತಿನಲ್ಲಿ ವರ್ಷದ ಪ್ರಥಮಾರ್ಧದಲ್ಲಿ ಸಾಧ್ಯವಾಗಿರುವ ಹೆಚ್ಚಳ ೨೭.೯%. ಕಳೆದ ದರ್ಷದ ಇದೇ ಅವಧಿಯಲ್ಲಿ ಸಾಧಿಸಿದ್ದ ಪ್ರಗತಿ ೩೪%. ಈ ವರ್ಷದ ಏಪ್ರಿಲ್-ಜೂನ್ ತಿಂಗಳುಗಳಲ್ಲಿ ಕಳೆದ ವರ್ಷದ ಇದೇ ತಿಂಗಳುಗಳ ರಫ್ತಿನ ೧೦%ರಷ್ಟು ತಗ್ಗಿರುವುದು ಆತಂಕಕಾರಿ.

ರಫ್ತಿನಲ್ಲಿ ಇಳಿಮುಖ ಪ್ರವೃತ್ತಿಯಿದ್ದರೂ ಆಮದು ಹೆಚ್ಚುವ ಪ್ರವೃತ್ತಿ ತೋರುತ್ತಿದೆ. (ಜೂನ್ ೧೯೬೯ : ೧೧೪.೯೦ ಕೋಟಿ ರೂ.; ಜೂನ್ ೧೯೭೦ : ೧೩೨.೬೪ ಕೋಟಿ ರೂ.)

ನಾಲ್ಕನೆಯ ಯೋಜನೆಯಲ್ಲಿ ನಿರೀಕ್ಷಿಸಲಾಗಿರುವಂತೆ ಬೆಳೆವಣಿಗೆಯ ವಾರ್ಷಿಕ ಪ್ರಮಾಣವಾದ ೮%ನ್ನು ಸಾಧಿಸಲಾಗುವುದೇ ಎಂಬುದು ಪರಿಶೀಲಿ ಬೇಕಾದ ವಿಚಾರ. ಅನೇಕ ರಾಜ್ಯಗಳಲ್ಲಿ ಕಂಡುಬಂದಿರುವ ರಾಜಕೀಯ ಅಸ್ಥಿರತೆಯೂ ಸರ್ಕಾರಿ ಉಕ್ಕಿನ ಕಾರ್ಖಾನೆಗಳು ಗರಿಷ್ಠ ಸಾಮರ್ಥ್ಯದ ೬೫%

13

ರಷ್ಟು ಮಟ್ಟವನ್ನು ಮಾತ್ರ ಮುಟ್ಟಲು ಸಾಧ್ಯವಾಗಿರುವುದೂ ದುರ್ಗಾಪುರ ಮುಂತಾದ ಕಾರ್ಖಾನೆಗಳಲ್ಲಿನ ಕಾರ್ಮಿಕ ಅಶಾಂತಿಯು ಯೋಜಿತ ಗುರಿ ನಿಲುಕಲು ಅಡ್ಡವಾಗಿರುವ ಮುಖ್ಯ ಕಾರಣಗಳು.

ಆರ್ಥಿಕಾಭಿವೃದ್ಧಿಯಲ್ಲಿ ಗ್ರಾಮವಲಯದ ಪಾತ್ರ

ದೇಶದ ಆರ್ಥಿಕಾಭಿವೃದ್ಧಿಯ ಬಗ್ಗೆ ಯೋಜಕರು ಹೊಂದಿರುವ ಕೆಲವು ನಂಬಿಕೆಗಳು ಎಷ್ಟರಮಟ್ಟಿಗೆ ವಾಸ್ತವಿಕವಾದವು—ಎಂಬ ವಿಚಾರವಾಗಿ ಎಂ. ಪಿ. ಶ್ರೀವಾಸ್ತವ ಅವರು ಎಕನಾಮಿಕ್ ಟೈಮ್ಸ್ ಪತ್ರಿಕೆಯಲ್ಲಿ (ಜುಲೈ ೨೨, ೧೯೭೦)ಬರೆದಿರುವ ಲೇಖನ ಉಲ್ಲೇಖಾರ್ಹವಾದದ್ದು. ಅಭಿವೃದ್ಧಿ ಕಾರ್ಯದಲ್ಲಿ ಗ್ರಾಮಪ್ರದೇಶದಿಂದ ನಗರಪ್ರದೇಶಕ್ಕೆ ಕೆಲವು ವ್ಯಾವಸಾಯಿಕ ಹೆಚ್ಚುವರಿಗಳನ್ನು ವರ್ಗಾಯಿಸುವುದು ಸಾಧ್ಯವೆಂಬುದು ಇಂಥ ನಂಬಿಕೆಗಳಲ್ಲೊಂದು. ಇವರ ಭಾವನೆಯಲ್ಲಿ ಹೀಗೆ ವರ್ಗ ಮಾಡಬಹುದಾದ ಸಾಧನಗಳು ಮೂರು: ಶ್ರಮ, ಆಹಾರಪದಾರ್ಥ ಮತ್ತು ಬಂಡ ವಾಳ. ಹಳ್ಳಿಯಲ್ಲಿರುವ ವ್ಯವಸಾಯಕಾರ್ಮಿಕನ ಅಂಚಿನ ಉತ್ಪಾದಕತೆ ಸೊನ್ನೆ ಎಂದು ಇವರ ಭಾವನೆ. ಆದ್ದರಿಂದ ಕಾರ್ಮಿಕರನ್ನು ಗ್ರಾಮವಲಯದಿಂದ ನಗರ ವಲಯಕ್ಕೆ ವರ್ಗಾಯಿಸಿದರೆ ವ್ಯವಸಾಯಕ್ಕೆ ನಷ್ಟವೇನೂ ಇಲ್ಲ. ನಗರದ ಕೈಗಾರಿಕೆ ಗಳಲ್ಲಿ ನಿಯೋಜಿತರಾದ ಇವರಿಗೆ ಕಡಿಮೆ ವೇತನ ಕೊಡುವುದರಿಂದ ಉತ್ಪಾದನೆಯ ವೆಚ್ಚ ತಗ್ಗುತ್ತದೆಯೆಂಬುದು ಇವರ ತರ್ಕಸರಣಿ. ನಗರಗಳಿಗೆ ಪೂರಾಟಮಾಡುವ ಆಹಾರದ ಹೆಚ್ಚುವರಿಯೂ ಅದಷ್ಟು ಶೀಘ್ರವಾಗಿ ಬೆಳೆಯಬೇಕೆಂದು ಇವರ ಆಶಯ. ಇದರಿಂದ ಹಣರೂಪೀವೇತನವನ್ನು ಕನಿಷ್ಠಮಟ್ಟದಲ್ಲಿರಿಸುವುದು ಸಾಧ್ಯವೆಂದು ಇವರು ಭಾವಿಸುತ್ತಾರೆ. ಮೂರನೆಯದಾಗಿ, ಗ್ರಾಮಾಂತರ ಉಳಿತಾಯವನ್ನು ನಗರವಲಯಕ್ಕೆ ವರ್ಗಾಯಿಸುವುದರಿಂದ ಅದು ಹೆಚ್ಚು ಲಾಭ ವಾಗುತ್ತದೆಯೆಂದು ಇವರ ವಾದ. ಅಭಿವೃದ್ಧಿಹೊಂದುತ್ತಿರುವ ಎಲ್ಲ ದೇಶಗಳಲ್ಲೂ ಈ ಮೂರು ಬಗೆಯ ವರ್ಗಾವಣೆಗಳೂ ಸಂಭವಿಸಿವೆ.

ಆದರೆ ಶ್ರೀವಾಸ್ತವ ಅವರು ಹೇಳುವಂತೆ ಈ ವಾದವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇದರ ಹಿಂದಿರುವ ಕೆಲವು ನ್ಯೂನತೆಗಳು ವ್ಯಕ್ತವಾಗುತ್ತವೆ. ತಾತ್ತ್ವಿಕವಾಗಿ ಕಾರ್ಮಿಕನನ್ನು ಬೇಸಾಯದ ನೆಲದ ಮೇಲೆ ತೊಡಗಿಸುವುದರಿಂದ ಲಭಿಸುವ ಉತ್ಪತ್ತಿಗಿಂತ ಕಾರ್ಖಾನೆಯಲ್ಲಿ ತೊಡಗಿಸಿದರೆ ದೊರಕುವ ಉತ್ಪತ್ತಿ ಹೆಚ್ಚಾಗಿರುತ್ತದೆ. ಆದರೆ ಬಹುಸಂಖ್ಯಾತ ಹಳ್ಳಿಗರು ನುರಿತವರಲ್ಲ; ಅವರು ಅನಕ್ಷರಸ್ಥರು. ಅವರಲ್ಲಿ ಶಿಸ್ತಿರುವುದಿಲ್ಲ. ವ್ಯವಸಾಯಕಾರ್ಯ ಕೆಲವು ಋತು ಗಳಲ್ಲಿ ಪರಮಾವಧಿ ಮುಟ್ಟುತ್ತದೆ. ಆಗ ಇವರು ಕಾರ್ಖಾನೆಗಳಲ್ಲಿ ಕೆಲಸಮಾಡದಿರ ಬಹುದು. ಹೆಚ್ಚುವರಿ ಕಾರ್ಮಿಕರನ್ನು ಶೀಘ್ರವಾಗಿ ವರ್ಗಾಯಿಸಬೇಕಾದ ಪಕ್ಷದಲ್ಲಿ ಕೈಗಾರಿಕೆಗಳನ್ನು ಜನಸಿಬಿಡ ನಗರಗಳಿಂದ ತೆಗೆದು ಗ್ರಾಮಾಂತರ ಪ್ರದೇಶ

ಗಳ ಬಳಿಯ ಸಣ್ಣ ಪಟ್ಟಣಗಳಲ್ಲಿ ಹರಡುವುದು ಅವಶ್ಯ. ಇಷ್ಟೇ ಅಲ್ಲದೆ ಕಾರ್ಮಿಕರನ್ನು ನಗರಗಳಲ್ಲಿ ತುಂಬುವುದರಿಂದ ಅಲ್ಲಿ ಸ್ತ್ರೀ-ಪುರುಷ ಸಂಖ್ಯಾಪ್ರಮಾಣದಲ್ಲಿ ಏರುಪೇರಾಗುತ್ತದೆ. ಇದೊಂದು ಸಾಮಾಜಿಕ ಸಮಸ್ಯೆ. ಹಳ್ಳಿಗಳಲ್ಲಿ ಕಾರ್ಮಿಕರ ಮುತ್ತು ಸತ್ತ್ವಶಾಲಿ ನಾಯಕತ್ವದ ಅಭಾವ ತಲೆದೋರಬಹುದಾದ್ದು ಇನ್ನೊಂದು ಅಪಾಯ.

ಆಹಾರ ಮತ್ತು ಬಂಡವಾಳಗಳ ವರ್ಗಾವಣೆಯಿಂದಲೂ ಸಮಸ್ಯೆಗಳು ಉದ್ಭವಿಸುತ್ತವೆ. ಇದರಿಂದ ರೈತನ ವ್ಯಾಪಾರಸ್ವಾತಂತ್ರ್ಯಕ್ಕೂ ಬಂಡವಾಳ ನಿಯೋಜನೆಗೂ ಧಕ್ಕೆ ಒದಗಬಹುದು. ಹೆಚ್ಚು ಲಾಭಬರುವಲ್ಲಿಗೆ ಬಂಡವಾಳ ಹರಿಯಬೇಕಾದ್ದು ಸಹಜ. ಅಲ್ಲದೆ ಹಳ್ಳಿಯಿಂದ ನಗರಮುಖವಾಗಿ ವ್ಯಾಪರದ ಹರಿವು ಸರಳವಾಗ ಬೇಕಾದರೆ ರಸ್ತೆ ವ್ಯವಸ್ಥೆ ಸುಧಾರಿಸಬೇಕು. ಆಹಾರ ಹಾಗು ಕಚ್ಚಾ ಸಾಮುಗ್ರಿಯ ಉತ್ಪಾದನೆ ಹೆಚ್ಚಲು ಹಳ್ಳಿಗಳಲ್ಲೇ ತೀವ್ರವಾಗಿ ಅಭಿವೃದ್ಧಿಕಾರ್ಯ ಕೈಕೊಳ್ಳ ಬೇಕಾಗುತ್ತದೆ. ಇದಕ್ಕೆಲ್ಲ ಬೇಕಾಗುವ ಬಂಡವಾಳದ ಗಾತ್ರ ಹೆಚ್ಚಿನದು. ಇದನ್ನೆಲ್ಲ ಪಟಣಕ್ಕೆ ಕೊಂಡೊಯ್ದರೆ ಹಳ್ಳಿಯ ಪಾಡೇನು?

ಗ್ರಾಮ ವಲಯಕ್ಕೆ ಸಂಬಂಧಿಸಿದಂತೆ ಇಂಥ ನಾನಾ ಸಮಸ್ಯೆಗಳನ್ನು ತಮ್ಮ ಲೇಖನದಲ್ಲಿ ಸ್ಥೂಲವಾಗಿ ವಿವೇಚಿಸಿರುವ ಶ್ರೀವಾಸ್ತವರ ವಿಚಾರಧಾಟಿ ಪ್ರಚೋದಕವಾದದ್ದು.

ಪುಸ್ತಕ ಲೋಕ

ವ್ಯಾವಹಾರಿಕ ಮಾನವಶಾಸ್ತ್ರ : ಗುರುಮೂರ್ತಿ. ಕೆ. ಗೌಡರ. ಪ್ರಕಾಶಕರು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಬೆಲೆ, ೦.೨೫ ಪೈಸೆ.

ಇಂದು ವಿಶ್ವದ ಎಲ್ಲೆಡೆಗಳಲ್ಲಿಯೂ ಅಶಾಂತಿ, ಅತೃಪ್ತಿ, ಮಾನಸಿಕ ಅನಾರೋಗ್ಯ, ಭಯ, ಅಸೂಯೆ, ಇತ್ಯಾದಿಗಳು ಯಥೇಚ್ಛವಾಗಿ ಕಂಡು ಬರುತ್ತಿವೆ. ಆಧುನಿಕ ಮಾನವ ನಾಗರಿಕತೆಯ ಶಿಖರದ ತುತ್ತತುದಿಯಲ್ಲಿ ವಿರಾಜಿಸುತ್ತಿದ್ದಾನೆ. ಮೀನಿನಂತೆ ನೀರಿನಲ್ಲಿ ಈಜ ಬಲ್ಲ; ಪಕ್ಷಿಯಂತೆ ಗಗನದಲ್ಲಿ ಹಾರ ಬಲ್ಲ; ಆದರೆ ಮಾನವನಂತೆ ಬಾಳುವುದನ್ನು ಮಾತ್ರ ಕಲಿತಿಲ್ಲ. ತನ್ನನ್ನು ತಾನು ಅರಿತುಕೊಂಡು, ತನ್ನಂತೆಯೇ ಪರರು ಎಂಬುದನ್ನು ಮನಗಾಣಬೇಕಾದರೆ ಮಾನವ ಶಾಸ್ತ್ರದ ಅಧ್ಯಯನ ಅನಿವಾರ್ಯ ವಾಗುತ್ತದೆ. ಮಾನವ ಶಾಸ್ತ್ರದ ಮುಖ್ಯ ವಿಷಯ—ನಾಗರಿಕ—ಅನಾಗರಿಕ ಪ್ರಾಚೀನ–ನವೀನ, ಮೇಲು—ಕೀಳು ಎಂಬ ಭೇದ ಭಾವಗಳಿಲ್ಲದೆ ಮಾನವ ಹಾಗೂ ಸಮಾಜದ ಅಧ್ಯಯನ. ಇಂದಿನ ಸಮಾಜದ ಮೂಲ ಪ್ರಾಚೀನ ಸಮಾಜದಲ್ಲಿ ಅಡಗಿದೆ. ಇಂದು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತಿರುವ ಹಲವಾರು ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಅವುಗಳಿಗೆ ಕಾರಣಗಳನ್ನು ಕಂಡುಹಿಡಿಯಬೇಕು. ಅದಕ್ಕಾಗಿ ಪ್ರಾಚೀನ ಸಮಾಜವನ್ನು ಅಧ್ಯಯನ ಮಾಡುವ ಅಗತ್ಯವಿದೆ. ಇದರ ಅಧ್ಯಯನ ಜೀವನದ ಎಲ್ಲ ಕ್ಷೇತ್ರಗಳಿಗೂ ಪ್ರಯೋಜನ ಕಾರಿಯಾಗಿದೆ. ಜನಾಂಗಗಳಲ್ಲಿ ದೈಹಿಕ ಲಕ್ಷಣಗಳು, ಭಾಷೆ, ಸಂಸ್ಕೃತಿ ನಾಗರಿಕತೆ, ಜೀವನದ ಮೌಲ್ಯಗಳಲ್ಲಿ ವೈವಿಧ್ಯ ಗಳಿವೆಯೆಂಬುದು ನಿರ್ವಿವಾದವಾದ ವಿಷಯ. ವೈವಿಧ್ಯತೆಯಲ್ಲಿ ಏಕತೆಯನ್ನು ಸ್ಥಾಪಿಸುವ ಕಾರ್ಯದಲ್ಲಿ ಮಾನವಶಾಸ್ತ್ರ ನೆರವಾಗಬಲ್ಲುದು. ಬಾಹ್ಯ ಜೀವನದಲ್ಲಿ ಅನೇಕ ವ್ಯತ್ಯಾಸ ಗಳಿದ್ದರೂ, ಮಾನವ ಕುಲದ ಮೂಲತತ್ವವನ್ನು ಇಡೀ ಜನತೆಗೆ ಸಾರಬಲ್ಲುದು. ಶಿಕ್ಷಣ ಕ್ಷೇತ್ರದಲ್ಲಿ ಕ್ಷುಲಕ ವಿಷಯಗಳನ್ನು ಟೀಕಿಸಿ, ಸತ್ಯಾಂಶಗಳನ್ನು ಜನರ ಮುಂದಿಟ್ಟು ಅವರನ್ನು ವಿಚಾರ ಪರರನ್ನಾಗಿ ಮಾಡಬಲ್ಲುದು. ಒಂದು ಜನಾಂಗಕ್ಕೆ ಮತ್ತೊಂದು ಜನಾಂಗದ ಸಂಸ್ಕೃತಿ ನಾಗರಿಕತೆಗಳನ್ನು ಪರಿಚಯ ಮಾಡಿಕೊಟ್ಟು ಪರಿಣತರ ತರಪೇತಿಗೆ ಸಹಾಯ ವೆಸಗಬಲ್ಲುದು. ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸಬಲ್ಲುದು. ಜಾಗೃತಿಕ ಸಂಸ್ಕೃತಿಗಳನ್ನು ತುಲನಾತ್ಮಕ ವಿಧಾನದಿಂದ ಅಧ್ಯಯನ ಮಾಡಿ ತನ್ಮೂಲಕ ವಿವಿಧರಾಷ್ಟ್ರಗಳ ಸಾಂಸ್ಕೃತಿಕ ಮೌಲ್ಯಗಳನ್ನು ಅರ್ಥ ಮಾಡಿಕೊಂಡು ತನ್ನ ಓರೆಕೋರೆಗಳನ್ನು ತಿದ್ದಿಕೊಳ್ಳಲು ಸಹಾಯ ಮಾಡಬಲ್ಲುದು. ಕೇವಲ ಗ್ರಂಥಾವಲೋಕನದಿಂದ ಪರಿಪೂರ್ಣ ಜ್ಞಾನ

ದೊರೆಯುವುದಿಲ್ಲ. ಆದರಿಂದ ಲಭ್ಯವಾದ ಜ್ಞಾನವನ್ನು ಅನುಷ್ಠಾನಕ್ಕೆ ತಂದಾಗ ಯಾವ ಶಾಸ್ತ್ರದಲ್ಲಿ ಅಧ್ಯಯನವೇ ಆಗಲಿ ಸಾರ್ಥಕವಾಗುತ್ತದೆ.

ಉಪನ್ಯಾಸ ಗ್ರಂಥಮಾಲೆಯಲ್ಲಿ ಪ್ರಕಟವಾಗುತ್ತಿರುವ ಶ್ರೀಮಾನ್ ಗುರುಮೂರ್ತಿ ಕೆ. ಗೌಡರ ಅವರ ಕೃತಿ ನಿಜಕ್ಕೂ ಸ್ವಾಗತಾರ್ಹ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಇಡೀ ಸಮಾಜದ ಬಗ್ಗೆ ತಿಳಿದುಕೊಳ್ಳಬೇಕೆಂಬ ಆಸಕ್ತಿಯಿರುವ ಜನ ಸಾಮಾನ್ಯರಿಗೂ ಈ ಕೃತಿ ಉಪಯುಕ್ತವಾಗಬಲ್ಲುದು ಎಂಬುದರಲ್ಲಿ ಸಂದೇಹವೇ ಇಲ್ಲ.

ಗ್ರಂಥಕರ್ತರು ಸಮಾಜ ವಿಜ್ಞಾನಗಳಲ್ಲಿ ಮುಖ್ಯವಾದ ಮಾನವಶಾಸ್ತ್ರದ ಸ್ಥಾನ, ಅದರ ಶಾಖೆಗಳಾದ ಶಾರೀರಿಕ, ಸಾಂಸ್ಕೃತಿಕ, ಸಾಮಾಜಿಕ, ಪುರಾತತ್ವ, ಮಾನವ ಕುಲಶಾಸ್ತ್ರ, ಮಾನವಕುಲ ವಿಸ್ತರಣಾಶಾಸ್ತ್ರ, ಮಾನಸಿಕ ಮಾನವಶಾಸ್ತ್ರ ಹಾಗೂ ವ್ಯಾವಹಾರಿಕ ಮಾನವಶಾಸ್ತ್ರಗಳ ಗೊತ್ತು, ಗುರಿ, ವ್ಯಾಪ್ತಿಗಳ ಬಗ್ಗೆ ಸ್ಪಷ್ಟವಾಗಿ, ಸರಳವಾಗಿ ನಿರೂಪಿಸಿದ್ದಾರೆ. ಮಾನವಶಾಸ್ತ್ರದ ಅಧ್ಯಯನದಿಂದ ಲಭ್ಯವಾದ ಜ್ಞಾನವನ್ನು ಮಾನವ ಕಲ್ಯಾಣಕ್ಕಾಗಿ ಹೇಗೆ ಉಪಯೋಗಿಸಬೇಕೆಂಬುದರ ಬಗ್ಗೆ ಸೂಕ್ತ ಸಲಹೆಗಳನ್ನು ನೀಡಿದ್ದಾರೆ. ವ್ಯಾವಹಾರಿಕ ದೃಷ್ಟಿಯಿಂದ ಮಾನವಶಾಸ್ತ್ರದ ಅಧ್ಯಯನ ಆಡಳಿತ ಕ್ಷೇತ್ರದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ, ವೈದ್ಯಕೀಯ ಕ್ಷೇತ್ರದಲ್ಲಿ, ಅಭಿವೃದ್ಧಿ ಔದ್ಯೋಗಿಕ ಕ್ಷೇತ್ರದಲ್ಲಿ ಉಪಯುಕ್ತವಾಗಬಲ್ಲುದು ಎಂಬುದರ ಬಗ್ಗೆ ಆಳವಾಗಿ ಆಲೋಚಿಸಿ, ಅಭ್ಯಾಸಮಾಡಿ, ಕೆಲವು ಸಮಯೋಚಿತ ಸಲಹೆಗಳನ್ನು ನೀಡಿದ್ದಾರೆ.

ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಗ್ರಾಮೀಣ ಜನತೆಯ ಹಾಗೂ ಆದಿವಾಸಿಗಳ ಕಲ್ಯಾಣಕ್ಕಾಗಿ ಕೋಟ್ಯಂತರ ರೂಪಾಯಿಗಳನ್ನು ವೆಚ್ಚಮಾಡುತ್ತಿದೆ. ಆದರೆ ಫಲಿತಾಂಶಗಳು ಮಾತ್ರ ನಿರೀಕ್ಷಿಸಿದಷ್ಟು ಆಶಾದಾಯಕವಾಗಿಲ್ಲ. ಕಾರಣ, ಕಾರ್ಯಕರ್ತರಿಗೆ ಗ್ರಾಮೀಣ ಸಮಾಜದ ಹಾಗೂ ಆದಿವಾಸಿ ಸಮಾಜದ ಬಗ್ಗೆ, ಅವರ ಸಮಸ್ಯೆಗಳಿಗೆ ಕಾರಣಗಳಿವೆಯೆಂಬುದರ ಬಗ್ಗೆ ತಿಳಿವಳಿಕೆಯಿರುವುದಿಲ್ಲ. ಅವರ ಸಾಂಸ್ಕೃತಿಕ ಹಿನ್ನೆಲೆಯನ್ನು ಅರಿತುಕೊಳ್ಳದೆ ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹೋದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಮೇಲೆ ನಿರೂಪಿಸಿದ ಕಾರ್ಯಗಳನ್ನು ಒಂದು ನಿಯೋಜಿತ ರೀತಿಯಲ್ಲಿ ನೆರವೇರಿಸಲು, ಯೋಜನೆಗಳ ಮುಖ್ಯಗುರಿಗಳನ್ನು ಸಾಧಿಸಲು ಮಾನವಶಾಸ್ತ್ರದ ಅಧ್ಯಯನ ಅತ್ಯಾವಶ್ಯಕವೆಂದು ಹೇಳಬೇಕಾಗಿಲ್ಲ.

—ಎಂ. ನಂಜಮ್ಮಣ್ಣಿ

ಬ್ಯಾಂಕುಗಳ ರಾಷ್ಟ್ರೀಕರಣ: ಎಸ್. ಜಿ. ಕರಭಂಟನಾಳ. ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಜನವರಿ ೧೯೭೦. ಪುಟ. vii + ೬೨. ಬೆಲೆ: ೦.೨೫ ಪೈಸೆ.

ಬ್ಯಾಂಕುಗಳ ರಾಷ್ಟ್ರೀಕರಣ ಇತ್ತೀಚಿಗೆ ಎಲ್ಲರ ಕುತೂಹಲವನ್ನೂ ಕೆರಳಿಸಿರುವ ವಿಷಯ. ಪ್ರಸ್ತುತ ಗ್ರಂಥ ಈ ವಿಷಯದ ಸರಳ ನಿರೂಪಣೆಯ ಕೈ ಹೊತ್ತಗೆ. ಇದು ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯ ೮೨ನೆಯ ಕುಸುಮ.

ಲೇಖಕರು ವಾಣಿಜ್ಯಬ್ಯಾಂಕುಗಳ ರಾಷ್ಟ್ರೀಕರಣದ ಹಿನ್ನೆಲೆ, ರಾಷ್ಟ್ರೀಕೃತವಾಗಿರುವ ಬ್ಯಾಂಕುಗಳು, ಆರ್ಥಿಕ ಅಭಿವೃದ್ಧಿ, ಕೃಷಿ ಅಭಿವೃದ್ಧಿ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ, ನಿರ್ಯಾತ ವ್ಯಾಪಾರದಲ್ಲಿ ವಹಿಸಬಹುದಾದ ಪಾತ್ರ ಇವನ್ನು ಕುರಿತು ನಿಷ್ಕೃಷ್ಟವಾದ ಚರ್ಚೆ ನಡೆಸಿದ್ದಾರೆ.

ಬ್ಯಾಂಕುರಾಷ್ಟ್ರೀಕರಣ ಮುಖ್ಯವಾಗಿ 'ಸಾಮಾಜಿಕ ಪ್ರಗತಿಪರ ಮೌಲ್ಯಗಳ' ಸಾಧನೆಗಾಗಿ ಇಡಲಾಗಿರುವ 'ದಿಟ್ಟ ಹೆಜ್ಜೆ'. ರಾಷ್ಟ್ರೀಕರಣವೇ ಏಕೆ? ಸಾಮಾಜಿಕ ನಿಯಂತ್ರಣ ಇದನ್ನು ಸಾಧಿಸುವುದಕ್ಕಾಗುತ್ತಿರಲಿಲ್ಲವೆ? ಎಂಬ ಸಮಸ್ಯೆಯನ್ನು ಕೂಡ ಚರ್ಚಿಸಿರುವ ಲೇಖಕರು "ದೇಶ ಎದುರಿಸಬೇಕಾದ ಬೃಹತ್ ಆರ್ಥಿಕ ಸಮಸ್ಯೆಗಳನ್ನು ಕೂಲಂಕಷವಾಗಿ ವಿಚಾರಿಸಿದಾಗ ಬ್ಯಾಂಕುಗಳ ರಾಷ್ಟ್ರೀಕರಣ ಅನಿವಾರ್ಯವೆಂದು ಕಾಣುತ್ತದೆ" ಎಂಬ ನಿಲವನ್ನು ತಾಳುತ್ತಾರೆ. ವಿದೇಶೀ ಬ್ಯಾಂಕುಗಳನ್ನು ರಾಷ್ಟ್ರೀಕರಿಸದೆ ಬಿಟ್ಟದ್ದೇಕೆ? ಎಂಬುದಕ್ಕೆ ಅವರ ಉತ್ತರ "ವಿದೇಶೀ ಬ್ಯಾಂಕುಗಳನ್ನು ಸರಕಾರ ರಾಷ್ಟ್ರೀಕರಿಸಿದ್ದಾದರೆ ಅನೇಕ ತೊಂದರೆಗಳನ್ನು ರಾಷ್ಟ್ರ ಎದುರಿಸಬೇಕಾಗುವುದು. ರಾಜಕೀಯ ಪಕ್ಷಗಳು ಈ ವಿಷಯವನ್ನು ಮುಂದೆ ಮಾಡಿ ಬಂಡೆಬ್ಬಿಸಬಹುದು. ಕೂಲಂಕಷವಾಗಿ ವಿಚಾರಿಸಲಾಗಿ ಈ ಬ್ಯಾಂಕುಗಳನ್ನು ರಾಷ್ಟ್ರೀಕರಿಸದೆ ಇದ್ದುದು ಸೂಕ್ತವಾಗಿದೆ" ಎಂಬ ವಾದ ಅಷ್ಟು ಸಮಂಜಸವಾದುದಲ್ಲ.

'ಬ್ಯಾಂಕುಗಳ ರಾಷ್ಟ್ರೀಕರಣದ ಉಪಯುಕ್ತತೆಗಳು' ಎಂಬ ಅಧ್ಯಾಯ ಬಹಳ ಉಪಯುಕ್ತವಾದುದು. ಲೇಖಕರು ರಾಷ್ಟ್ರೀಕರಣಕ್ಕೆ ಸಂಬಂಧಿಸಿದಂತೆ "ಒಕ್ಕಲುತನಕ್ಕೆ ಸಾಲದ ಸೌಕರ್ಯಗಳನ್ನು ಒದಗಿಸುವಾಗ ರಾಷ್ಟ್ರೀಕೃತ ಬ್ಯಾಂಕುಗಳು ಸಣ್ಣ ಒಕ್ಕಲಿಗರ ಹಿತಾಸಕ್ತಿಗಳ ಬಗ್ಗೆ ಅಧಿಕವಾಗಿ ಲಕ್ಷ್ಯ ವಹಿಸಬೇಕು. ದೊಡ್ಡ ಹಿಡುವಳಿದಾರರ ಹಿತಾಸಕ್ತಿಗಳಿಗೆ ಲಕ್ಷ್ಯ ಕೊಟ್ಟಲ್ಲಿ ರಾಷ್ಟ್ರೀಕರಣದ ಉದ್ದೇಶ ಸಾರ್ಥಕವಾಗದು" ಎಂದು ಹೇಳುವುದರ ಮೂಲಕ ಸಣ್ಣ ಹಿಡುವಳಿದಾರರ ಪ್ರಮುಖ ಪಾತ್ರವನ್ನು ಎತ್ತಿಹಿಡಿದಿರುವುದು ಶ್ಲಾಘನೀಯ.

ಪಾರಿಭಾಷಿಕ ಪದಗಳ ಬಗ್ಗೆ ಒಂದು ಮಾತು ಹೇಳಬೇಕಾದುದು ಅಗತ್ಯ. ಮೂರು ವಿಶ್ವವಿದ್ಯಾನಿಲಯಗಳ ಕನ್ನಡ ಲೇಖಕರು ಅತ್ಯಗತ್ಯವಾಗಿ ಗಮನವಿಡಬೇಕಾದ ಅಂಶವೆಂದರೆ, ಎಲ್ಲರೂ ಸಮಾನವಾದ ಪಾರಿಭಾಷಿಕಪದಗಳನ್ನು ಉಪಯೋಗಿಸಬೇಕೆನ್ನುವುದು. ಪ್ರಸ್ತುತ ಗ್ರಂಥದಲ್ಲಿ ಕೃಷಿಕ, ಬೇಸಾಯಗಾರ, ರೈತ ಎಂಬ ಪದಕ್ಕೆ 'ಒಕ್ಕಲಿಗ' ಎಂದು ಬಳಸಲಾಗಿದೆ. ಇದು ನಮ್ಮಲ್ಲಿ ಒಂದು ಕೋಮಿಗೆ ಸಂಬಂಧಿಸಿದ ಪದವಾಗುತ್ತದೆ. ಹಾಗೆಯೇ 'ಠೇವಣಿ'ಗೆ ಬದಲಾಗಿ ಠೇವು (ಪುಟ ೪), ಸೆಂಟ್ರಲ್ ಬ್ಯಾಂಕಿಗೆ "ಮಧ್ಯವರ್ತಿಬ್ಯಾಂಕು" ಎಂದು ಪದಗಳನ್ನು ಸರಿಪಡಿಸಬೇಕಾಗಿರುವುದು ಅಗತ್ಯ.

ಪ್ರಸ್ತುತ ಗ್ರಂಥ ಸಾಮಾನ್ಯ ಓದುಗರಿಗಾಗಿ ಬರೆಯಲಾಗಿದೆ. ಈ ದೃಷ್ಟಿಯಿಂದ ಲೇಖಕರು ಸ್ತುತ್ಯಾರ್ಹರು. ಸರಳವಾದ ಶೈಲಿ, ನೇರ ನಿರೂಪಣೆ ಇವು ಗ್ರಂಥದ ಕಳೆಯನ್ನು ಹೆಚ್ಚಿಸಿವೆ.

ಯೋಜನೆಗಳೇಕೆ ಬೇಕು ? : ಲೇಖಕರು : ಎಸ್. ಎಸ್. ಎಮ್ಮಿ, ಎಂ.ಎ. ಪ್ರಕಾಶಕರು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ನವೆಂಬರ್ ೧೯೬೭. ಪುಟ vi + ೫೦. ಬೆಲೆ : ೦-೨೫ ಪೈಸೆ.

ನಾವು ಯೋಜನೆಗಳ ಯುಗದಲ್ಲಿ ಬದುಕುತ್ತಿದ್ದೇವೆ. ಯೋಜನೆಗಳು ಎಂದರೇನು ? ಅವು ಏಕೆ ಬೇಕು ? ಎನ್ನುವುದು ಬಹಳ ಸಹಜವಾಗಿ ಎಲ್ಲರ ಮನಸ್ಸಿನಲ್ಲಿ ಮೂಡುವ ಪ್ರಶ್ನೆ. ನಮ್ಮ ರಾಷ್ಟ್ರದಲ್ಲಂತೂ ಯೋಜನೆಗಳ ಬಗ್ಗೆ ಸಾಮಾನ್ಯ ಜನರಿಗಿರುವ ತಿಳಿವಳಿಕೆ ಕಡಿಮೆ. ಪ್ರಸ್ತುತ ಗ್ರಂಥ ಈ ವಿಷಯವನ್ನು ನಿರೂಪಿಸುವ ಕೈಹೊತ್ತಿಗೆ. ಇದು ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯ ೬೮ನೆಯ ಕುಸುಮ.

ಈ ಗ್ರಂಥದಲ್ಲಿ ಮಾರುಕಟ್ಟೆಯ ಮುಖಾಂತರ ನಡೆಯುವ ಅರ್ಥವ್ಯವಸ್ಥೆ ಆರ್ಥಿಕ ಬೆಳವಣಿಗೆಯಲ್ಲಿ ಬಹಳ ಮುಖ್ಯ ಪಾತ್ರವಹಿಸುತ್ತದೆ ಎಂಬ ವಾದವನ್ನು ಮಂಡಿಸಲಾಗಿದೆ. "ಸಾಧ್ಯವಿದ್ದಲ್ಲೆಲ್ಲ ನಾವು ಸ್ವತಂತ್ರ ಮಾರುಕಟ್ಟೆಗೆ ಅವಕಾಶ ಕೊಡಬೇಕು. ಖಾಸಗಿ ಅಥವಾ ಸಾರ್ವಜನಿಕ ರಂಗದಲ್ಲಿ ಕಾರ್ಯಮಾಡುವ ಉತ್ಪಾದಕರಿಗೆ ತಮ್ಮ ತಮ್ಮ ವಸ್ತುಗಳ ಮಾರುಕಟ್ಟೆಯ ಪರಿಸ್ಥಿತಿಗೆ ಹೊಂದುವ ಕಾರ್ಯ ಕೈಗೊಳ್ಳುವ ಸ್ವಾತಂತ್ರ್ಯವಿರಬೇಕು" ಎಂದು ವಾದಿಸುವ ಲೇಖಕರು ಒತ್ತಾಯದ ಯೋಜನೆಯ ಮಾರ್ಗವನ್ನು ಖಂಡಿಸುತ್ತಾರೆ. ಮಾರುಕಟ್ಟೆಯ ಮೂಲಕ ಕಾರ್ಯಮಾಡುವ ಕಾರ್ಯಯೋಜನೆ ಮಹತ್ವವಾದುದು. ಸರ್ಕಾರ ಅದಕ್ಕೆ ಪೂರಕವಾಗುವಂಥ ಕಾರ್ಯಗಳನ್ನು ನೆರವೇರಿಸಬೇಕು ಎನ್ನುವುದರ ಮೂಲಕ, ಮಾರುಕಟ್ಟೆಯ ಸ್ವತಂತ್ರ ಪ್ರವೃತ್ತಿಗಳು ಹೇಗೆ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಬಲ್ಲವು ಎಂಬುದನ್ನು ಸೂಚಿಸಲು ಯತ್ನಿಸುತ್ತಾರೆ. ಕೊನೆಯ ಅಧ್ಯಾಯದಲ್ಲಿ ಹಿಂದುಳಿದ ರಾಷ್ಟ್ರಗಳ ಯೋಜನೆಗಳ ಬಗ್ಗೆ ಕೆಲವು ತಾತ್ವಿಕಾಂಶಗಳನ್ನು ಚರ್ಚಿಸುತ್ತಾರೆ.

ಪ್ರಸ್ತುತಗ್ರಂಥ ತಾತ್ವಿಕ ವಿಷಯಗಳಿಗೆ ಹೆಚ್ಚಿನ ಮಹತ್ವ ನೀಡಿದೆ. ಸರಳ ಓದುಗರನ್ನು ಅನೇಕ ಬಾರಿ ಕಷ್ಟಕ್ಕೆ ಸಿಕ್ಕಿಸುವ ಲೇಖನಿಯ ಧಾಟಿ ಅನೇಕಬಾರಿ ಕಂಡು ಬರುತ್ತದೆ. ಉದಾಹರಣೆಗೆ ಈ ನಿರೂಪಣೆಗಳನ್ನು ನೋಡಿ : "ಉತ್ಪಾದಕರಲ್ಲಿಯ ಸ್ಪರ್ಧೆಯಿಂದ ಬೆಲೆಗಳು, ವಸ್ತುಗಳ ಖರ್ಚಿನ ಪಾತಳಿಗೆ ಹೊಂದಿಕೊಳ್ಳುತ್ತವೆ ಮತ್ತು ಉತ್ಪಾದಕರು ತಮ್ಮ ಉತ್ಪಾದಕ ಶಕ್ತಿಯನ್ನು ಸುಧಾರಿಸುವಂತೆ ಮಾಡುತ್ತವೆ. ಬೇಡಿಕೆಯಿಂದ ಉತ್ಪಾದನೆಯನ್ನು ನಿರ್ದಿಷ್ಟಪಡಿಸಿ, ಉತ್ಪಾದನೆಯನ್ನು ಹೆಚ್ಚಿಸಲು ಪ್ರೋತ್ಸಾಹವನ್ನು ನೀಡಿ, ಹೆಚ್ಚಿನ ಆದಾಯವನ್ನು ತೊಡೆದುಹಾಕುವ ಅನಿರ್ಬಂಧ ಪೇಟೆಯು, ಪ್ರಬಲವಾದ ಸಮಾಜ ನಿರ್ಬಂಧನೆಯ ಶಕ್ತಿಯಾಗಿದೆ." (ಪು. ೨) ಹಾಗೆಯೇ "ಮಾರುಕಟ್ಟೆಯನ್ನು ನಡೆಯಿಸುವ ಸೂತ್ರವಾದ ಬೇಡಿಕೆಯು ಅವಲಂಬನಾರ್ಹವಾದುದಲ್ಲ. ಆದರೆ ಬೇಡಿಕೆಯನ್ನು ಸರಕಾರವು ತನ್ನ ಇಷ್ಟಬಂದಂತೆ ಮಾರ್ಪಡಿಸಬಲ್ಲುದು." (ಪು. ೨೪)

ಸರ್ಕಾರ ಹೇಗೆ ಬೇಡಿಕೆಯನ್ನು ಮಾರ್ಪಡಿಸಬಲ್ಲುದು? ಎಂಬುದಕ್ಕೆ ವಿವರಣೆ ತೀರ ಅಗತ್ಯ. ಅರ್ಥಶಾಸ್ತ್ರದ ಮೂಲತತ್ವಕ್ಕೆ ಸಂಬಂಧಿಸಿದ ಈ ವಿಷಯುವನ್ನು ಸಾಮಾನ್ಯ ಓದುಗರು ಗ್ರಹಿಸುವುದು ಕಷ್ಟ. ಸರಕಾರ ಪರಿಣಾಮಕಾರಿ ಬೇಡಿಕೆ (ಎಫೆಕ್ಟಿವ್ ಡಿಮಾಂಡ್) ಯನ್ನು ನಿಯಂತ್ರಿಸುವುದರ ಮೂಲಕ ಬೇಡಿಕೆಯನ್ನು ಮಾರ್ಪಡಿಸಬಲ್ಲುದು ಎಂಬುದನ್ನು ವಿವರಿಸಿದ್ದರೆ ಹೆಚ್ಚು ಉಚಿತವಾಗುತ್ತಿತ್ತು.

ಯೋಜನೆಯ ಮೂಲತತ್ವಕ್ಕೆ ಸಂಬಂಧಿಸಿದ ಈ ಪುಟ್ಟ ಕೃತಿ ಬಹಳ ಉಪಯುಕ್ತವಾದುದು ಎಂಬುದರಲ್ಲಿ ಸಂಶಯವಿಲ್ಲ.

—ರೇಣುಕಾರ್ಯ

ಗಣನ ಶಾಸ್ತ್ರ ಪರಿಚಯು: ಬರೆದವರು: ಸಿ. ಸಿ. ಪಟ್ಟಣಶೆಟ್ಟಿ. ಪ್ರಕಾಶನ: ಕರ್ನಾಟಕ ವಿಶ್ವವಿದ್ಯಾಲಯು, ಧಾರವಾಡ. ಬೆಲೆ: ರೂ. ೫.೦೦. ಪುಟಗಳು: ೩೭೨.

ಇದು ಕರ್ನಾಟಕ ವಿಶ್ವವಿದ್ಯಾಲಯುದ ಪಿ.ಯು.ಸಿ. ತರಗತಿಯ ಲೆಕ್ಕಾಚಾರ ಶಾಸ್ತ್ರದ ಪಠ್ಯಪುಸ್ತಕ. ಪುಸ್ತಕ ೧೧ ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳ ವಿವರ ಈರೀತಿ ಇದೆ: ಪೀಠಿಕೆ, ದಿನವಹಿ ಬರೆಯುವುದು, ಖಾತೆ ಪುಸ್ತಕ, ಸಹಾಯಕ ಪುಸ್ತಕಗಳು, ಬ್ಯಾಂಕ್ ವೇಳಾ ಪತ್ರಿಕೆ, ಹುಂಡಿಯ ವ್ಯವಹಾರಗಳು, ಜಮಾ ಖರ್ಚು ವೇಳಾ ಪತ್ರಿಕೆ, ದಿನವಹಿ, ಅಂತಿಮ ಜಮಾ ಖರ್ಚು ಮತ್ತು ವ್ಯಾಪಾರಮಾಡುವ ಸಂಸ್ಥೆಗಳ ಲೆಕ್ಕ ಪತ್ರಗಳು.

ಪೀಠಿಕೆಯನ್ನು ಸಾಕಷ್ಟು ವಿಸ್ತಾರವಾಗಿ ಬರೆಯಲಾಗಿದೆ. ಅದರಲ್ಲಿ ಲೆಕ್ಕಾಚಾರ ಶಾಸ್ತ್ರದ ಪ್ರಾಮುಖ್ಯ ಮತ್ತು ಬರುವ ಅನೇಕ ಶಬ್ದಗಳ ಅರ್ಥ ಮತ್ತು ಪರಿಮಿತಿಯನ್ನು ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ ಉಪಯೋಗಿಸಿರುವ "ದುಯ್ಯಮ" ಪದ್ಧತಿ ಎಂಬ ಪಾರಿಭಾಷಿಕ ಪದ ಬಹುಶಃ ಉತ್ತರ ಮೈಸೂರಿನಲ್ಲಿ ಹೆಚ್ಚು ಬಳಕೆಯಲ್ಲಿರಬಹುದೇನೋ. ಇದಕ್ಕೆ ಬದಲಾಗಿ ಹೆಚ್ಚು ಬಳಕೆಯಲ್ಲಿರುವ "ದ್ವಿಮುಖ" ಅಥವಾ ಜೋಡಿ ಲೆಕ್ಕ ಪದ್ಧತಿ ಎಂದಿದ್ದರೆ, ಪಿ.ಯು.ಸಿ. ತರಗತಿಯ ವಿದ್ಯಾರ್ಥಿಗಳಿಗೆ ಹೆಚ್ಚು ಅರ್ಥವಾಗುತ್ತಿತ್ತು.

ಮುಂದಿನ ಮೂರು ಅಧ್ಯಾಯಗಳಲ್ಲಿ ದಿನವಹಿ ಬರೆಯುವ ರೀತಿ, ಖಾತೆ ಪುಸ್ತಕಗಳ ಉಪಯೋಗ ಮತ್ತು ನಗದು ಲೆಕ್ಕ ಬರೆಯುವ ರೀತಿ, ಅವುಗಳ ಪ್ರಾಮುಖ್ಯ ಮತ್ತು ಉಪಯೋಗವನ್ನು ವಿವರಿಸಲಾಗಿದೆ. ಈ ಅಧ್ಯಾಯಗಳ ಕಡೆಯಲ್ಲಿ ಕೆಲವು ಅಭ್ಯಾಸಗಳನ್ನೂ ಕೊಡಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ ಈ ಪುಸ್ತಕವನ್ನು ನೋಡಿದಲ್ಲಿ, ಅಲ್ಲಿಯ ಪಠ್ಯ ಕ್ರಮ (Syllabus) ನಮ್ಮ ರಾಜ್ಯದ ಇತರ ವಿಶ್ವವಿದ್ಯಾನಿಲಯಗಳ ಪಠ್ಯಕ್ರಮಕ್ಕಿಂತ ಕಡಿಮೆ ಇರುವಂತೆ ಕಾಣಬರುತ್ತದೆ.

ಈ ಪುಸ್ತಕದಲ್ಲಿ ಉಪಯೋಗಿಸಿರುವ ಪಾರಿಭಾಷಿಕ ಪದಗಳು ಬಹುಶಃ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಪ್ರದೇಶಗಳಲ್ಲಿ ಹೆಚ್ಚು ಬಳಕೆಯಲ್ಲಿರುವಂತೆ ಕಾಣಬರುತ್ತದೆ. ಈ ಪುಸ್ತಕ ಚೆನ್ನಾಗಿದ್ದರೂ ಇತರ ಪ್ರದೇಶಗಳ ವಿದ್ಯಾರ್ಥಿಗಳು ಅದರ ಪೂರ್ಣ ಪ್ರಯೋಜನ ಪಡೆಯಲು ಸಾಧ್ಯವಾಗದಾಗಿದೆ. ಈ ದಿಸೆಯಲ್ಲಿ ರಾಜ್ಯದ ಮೂರು ವಿಶ್ವವಿದ್ಯಾನಿಲಯುಗಳೂ ಒಂದಾಗಿ ಹೆಚ್ಚು ಬಳಕೆಯಲ್ಲಿರುವ ಪಾರಿಭಾಷಿಕ ಶಬ್ದಕೋಶವೊಂದನ್ನು ಪ್ರಕಟಿಸಬೇಕಾಗಿದೆ. ಕನ್ನಡದಲ್ಲಿ ಪಠ್ಯ ಪುಸ್ತಕ ಬರೆಯುವರೆಲ್ಲರೂ ಅಂತಹ ಒಂದು ಸಂಗ್ರಹದಿಂದ ಪದಗಳನ್ನು ಆಯ್ದುಕೊಂಡಲ್ಲಿ ಪುಸ್ತಕಗಳ ಉಪಯೋಗವನ್ನು ಮತ್ತಷ್ಟು ಹೆಚ್ಚಿಸಬಹುದು.

ಈ ಪುಸ್ತಕವನ್ನು ಪಾರಿಭಾಷಿಕ ಪದಗಳ ದೃಷ್ಟಿಯಿಂದ ನೋಡಿದಲ್ಲಿ ಸುಲಭ ಸಾಮಾನ್ಯವಾದ ಮತ್ತು ಬಳಕೆಯಲ್ಲಿರುವ ಪದಗಳ ಪ್ರಯೋಗದಿಂದ ಪುಸ್ತಕದ ಉಪಯೋಗವನ್ನು ಹೆಚ್ಚಿಸಬಹುದಾಗಿತ್ತು. ಉದಾಹರಣೆಗೆ, "ಅಢಾವೆ ಪತ್ರಿಕೆ" (Balance Sheet)ಎನ್ನುವ ಬದಲು ಆಸ್ತಿ ಜವಾಬ್ದಾರಿ ಪಟ್ಟಿ ಎಂಬ ಪದ ಹೆಚ್ಚು ಬಳಕೆಯಲ್ಲಿರುವ ಮತ್ತು ಸುಲಭವಾಗಿ ಅರ್ಥವಾಗುವ ಶಬ್ದ. ಈಗಾಗಲೇ ಕನ್ನಡ ಭಾಷೆಯಲ್ಲಿ ಬಂದಿರುವ ಲೆಕ್ಕಾಚಾರ ಶಾಸ್ತ್ರದ ಪುಸ್ತಕಗಳ ಪಂಕ್ತಿಗೆ ಮತ್ತೊಂದು ಜೋಡಣೆ ಎಂದರೆ ತಪ್ಪಾಗಲಾರದು.

—ಕೆ. ಜಿ. ರಾಮಕೃಷ್ಣ

ಪ್ರಾಚೀನ ಗ್ರೀಕರ ಅಮರ ಕೊಡುಗೆಗಳು: ಲೇ. ಡಿ. ಟಿ. ಜೋಶಿ, ಎಂ. ಎ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ೧೯೭೦. ಪುಟಗಳು : ೬೦. ಬೆಲೆ : ೨೫ ಪೈಸೆ.

ಪ್ರಾಚೀನ ವಿಶ್ವದಲ್ಲಿ ಬಹು ಉನ್ನತಮಟ್ಟದ ಸಂಸ್ಕೃತಿಯನ್ನು ಸಾಧಿಸಿದ ಜನಾಂಗಗಳಲ್ಲಿ ವಿಶಿಷ್ಟಸ್ಥಾನ ಪಡೆದವರು ಗ್ರೀಕರು. ಕ್ರಿ.ಪೂ. ಮೊದಲ ಸಹಸ್ರಮಾನದ ಉತ್ತರಾರ್ಧದಲ್ಲಿ ನಾಗರಿಕ ಜಗತ್ತಿನ ನೇತಾರರಾಗಿ ಬಾಳಿದುದಲ್ಲದೆ ಸಮಕಾಲೀನ ಮತ್ತು ಅನಂತರಕಾಲದ ಎಲ್ಲ ರಾಷ್ಟ್ರಗಳ, ಜನಾಂಗಗಳ ಮೇಲೂ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ತಮ್ಮ ಸಂಸ್ಕೃತಿಯ ಪ್ರಭಾವವನ್ನು ಪ್ರಾಚೀನ ಗ್ರೀಕರು ಬೀರಿದ್ದರು. ಪಾಶ್ಚಾತ್ಯ ನಾಗರಿಕತೆಯ ಆಧಾರ ಸ್ತಂಭವಾಗಿದ್ದು ಅದರ ಬೆಳವಣಿಗೆಗೆ ಕಾರಣವಾಯಿತು ಅವರ ಸಂಸ್ಕೃತಿ. ಮಧ್ಯಯುಗದಲ್ಲಿ ಕೆಲವುಕಾಲ ಇದರ ಪ್ರಭಾವ ಕಣ್ಮರೆಯಾಗುತ್ತಿದ್ದಂತೆ ಕಂಡುಬಂದರೂ ಕ್ರಿ.ಶ. ೧೬ನೆಯ ಶತಮಾನದಲ್ಲಿ ನಡೆದ ಬೌದ್ಧಿಕ ಕ್ರಾಂತಿಯ ತರುವಾಯ ಈ ಸಂಸ್ಕೃತಿಯ ಪ್ರಭಾವ ಮರುಕಳಿಸಿತು. ಮತ್ತು ಯೂರೋಪಿನ ಪ್ರಭಾವ ಆಧುನಿಕ ಜಗತ್ತಿನ ಮೇಲೆ ಬೆಳೆದಂತೆಲ್ಲ ಅಪರೋಕ್ಷವಾಗಿ ಗ್ರೀಕರ ಸಾಂಸ್ಕೃತಿಕಾಂಶಗಳು ವಿಶ್ವದ ಮೂಲೆ ಮೂಲೆಗಳಲ್ಲೂ ಪ್ರಸಾರಿತವಾದುವೆಂದರೆ ತಪ್ಪಾಗಲಾರದು.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಯೋಜನೆಯ ಆಶ್ರಯದಲ್ಲಿ ಶ್ರೀಮಾನ್ ಜೋಶಿಯವರು ಬರೆದು ಪ್ರಕಟಿಸಿರುವ ಈ ಕೈಹೊತ್ತಗೆಯಲ್ಲಿ ಇಷ್ಟು ಉನ್ನತವೂ ವ್ಯಾಪ್ತವೂ ಆದ ವಿಷಯುವನ್ನು ವಿಶದವಾಗಿಯೂ ಅಡಕವಾಗಿಯೂ

ಪರಿಶೀಲಿಸಲಾಗಿದೆ. ಗ್ರೀಕ್ ಜನಾಂಗದ ಉಗಮ, ಸಂಕ್ಷಿಪ್ತ ಇತಿಹಾಸಗಳ ಹಿನ್ನೆಲೆಯನ್ನೊದಗಿಸಿದ ಅನಂತರ ಅವರ ಸಂಸ್ಕೃತಿಯನ್ನು ಜೀವನದೃಷ್ಟಿ, ರಾಜಕಾರಣ, ಸಾಹಿತ್ಯ, ಅದರಲ್ಲೂ ನಾಟಕಕಲೆ, ಇತಿಹಾಸರಚನೆ, ಕಲೆ, ತತ್ವಜ್ಞಾನ, ವಿಜ್ಞಾನ ಮುಂತಾದ ವಿವಿಧ ಕೋನಗಳಿಂದ ಅವಲೋಕಿಸಿದ್ದಾರೆ. ಉಪಸಂಹಾರದಲ್ಲಿ ಮ್ಯಾಸಿಡೋನಿಯದ ದೊರೆ ಅಲೆಕ್ಸಾಂಡರ್ ಈ ಸಂಸ್ಕೃತಿಯ ಪ್ರಸಾರಕ್ಕೆ ಶ್ರಮಿಸಿದ ವಿಷಯ ಮತ್ತು ರೋಮನರ ಮೇಲೆ ಗ್ರೀಕರ ಪ್ರಭಾವಗಳನ್ನು ಪರಿಶೀಲಿಸಿದ್ದಾರೆ, ಅನುಬಂಧವೊಂದರಲ್ಲಿ ಗ್ರೀಕರ ಪ್ರಮುಖರಾಜ್ಯಗಳಾದ ಅಥೆನ್ಸ್ ಮತ್ತು ಸ್ಪಾರ್ಟಾಗಳ ಪರಸ್ಪರ ವಿರೋಧಾತ್ಮಕ ಲಕ್ಷಣಗಳ ವಿಹಂಗಮ ನೋಟವನ್ನು ಒದಗಿಸಿದ್ದಾರೆ.

ಬಹುಮಟ್ಟಿಗೆ ಲೇಖಕರು ತಮ್ಮ ಉದ್ದೇಶವನ್ನು ತೃಪ್ತಿಕರವಾಗಿ ನೆರವೇರಿಸಿದ್ದಾರೆ. ಆದರೆ ಕೆಲವು ವಾಸ್ತವಿಕ ತಪ್ಪುಗಳು ತಲೆದೋರಿವೆ. ಉದಾ : ೩೩ನೆಯ ಪುಟದ ಮೊದಲ ಪ್ಯಾರಾದಲ್ಲಿ ಗ್ರೀಕರೇ "ಪ್ರಥಮ ಪ್ರಜಾಪ್ರಭುತ್ವವಾದಿಗಳು" ಎಂದು ಹೇಳಿರುವುದೂ, ಅದೇ ಪುಟದ ಎರಡನೆಯ ಪ್ಯಾರಾದಲ್ಲಿ "ಅಥೆನ್ಸಿನ ಡ್ರೆಕೊ ಎಂಬುವನು ಪ್ರಥಮ ಕಾನೂನು ನಿರ್ಮಾಪಕನು" ಎಂದು ಹೇಳಿರುವುದೂ ಪ್ರಾಚೀನ ಮೆಸಪೊಟೋಮಿಯದ ಇತಿಹಾಸ ಪರಿಚಯವಿದ್ದವರಿಗೆ ಸತ್ಯದೂರವೆಂಬುದು ತಿಳಿದ ಸಂಗತಿ. ಹಲವುಕಡೆ ಮೂಲಗ್ರೀಕ್ ಪದಗಳ ಉಚ್ಚಾರಣೆಯಲ್ಲೂ ತಪ್ಪುಗಳಾಗಿವೆ. ಉದಾ : ಪುಟ ೩೪-೩೫ರಲ್ಲಿ ಪ್ರೊಮಿಥಿಯಿಸ್ ಎಂದಿರುವುದು ಪ್ರೊಮಿಥಿಯಸ್ ಎಂದೂ ೩೫ನೆಯ ಪುಟದಲ್ಲಿರುವ ಆ್ಯಂಟಿಗಾನ್ ಎಂಬುದು ಆ್ಯಂಟಿಗೊನಿ ಎಂದೂ, ಇತಿಹಾಸದ ಜನಕ ಹಿರೋಡೆಟಸ್ ಎಂಬುದು(ಪುಟ ೩೨) ಹಿರಾಡಟಸ್ ಎಂದೂ ಇರಬೇಕು. ಓಲಿಂಪಿಕ್ (ಪುಟ ೮) ಗಿಂತ ಒಲಿಂಪಿಕ್ ಹೆಚ್ಚು ಸೂಕ್ತವಾಗಿರುತ್ತದೆ. ಈಜಿಪ್ಷಿಯನ್ನರು (ಪುಟ-೬), ಸ್ಪಾರ್ಟನ್ನರು, (ಪುಟ-೪೯) ರೋಮನ್ನರು (ಪುಟ-೫೫) ಮುಂತಾದ ಪ್ರಯೋಗಗಳ ನಡುವೆ ಅಥೆನ್ಸಿನವರೆಂಬುದಕ್ಕಿಂತ (ಪುಟ ೫೮-೯) ಅಥೆನಿಯನ್ನರೆಂದಿದ್ದರೆ ಹೆಚ್ಚು ಸ್ವಾಭಾವಿಕವಾಗಿರುತ್ತಿತ್ತೇನೋ! ಮುದ್ರಾರಾಕ್ಷಸನ ಹಾವಳಿಯಂತೂ ಅಸದಳವಾಗಿದ್ದು ಅವುಗಳನ್ನೆಲ್ಲಾ ಪಟ್ಟಿಮಾಡಿ ಹೇಳಲು ಸ್ಥಳಾವಕಾಶವಿಲ್ಲ. ಕೆಲವು ಕಡೆ ವಾಕ್ಯಗಳೇ ಅಪೂರ್ಣವಾದರೆ (ಉದಾ : ೫೦ನೆಯ ಪುಟದ ಮೊದಲ ಪ್ಯಾರಾದ ಕಡೆಯ ವಾಕ್ಯ "........ಸುಧಾರಿ" ಎಂದು ನಿಂತಿದೆ. ಇನ್ನು ಕೆಲವೆಡೆ ಅರ್ಥವನ್ನೇ ಬದಲಾಯಿಸುವಂಥ ದೋಷಗಳಾಗಿವೆ. (ಉದಾ : ೫೮ನೆಯ ಪುಟದ ೭-೮ನೆಯ ಸಾಲುಗಳಲ್ಲಿ 'ಮೆರೆಯುವ' ಎಂದಿರಬೇಕಾದುದು 'ಮರೆಯುವ' ಎಂದಾಗಿದೆ. ಗಣಿತ "ಗಣೀತ"ವಾಗಿದೆ (ಪುಟ ೪೯, ಸಾಲು ೧೪). 'ಸಂಸ್ಕೃತಿ' ಸಂಸ್ಯತಿ ಆಗಿದೆ (ಪುಟ ೫೪, ಸಾಲು ೨).

ಇಂಥ ಹಲವು ದೋಷಗಳು ಕಂಡುಬಂದರೂ ಪ್ರಾಚೀನ ಗ್ರೀಕರ ನಾಗರಿಕತೆಯ ವಿಶಾಲವಾದ ವಿಷಯವನ್ನು ಜನಸಾಮಾನ್ಯರಿಗೆ ಅರ್ಥವಾಗುವ ಸರಳಭಾಷೆಯಲ್ಲಿ ದೊರಕಿಸಿರುವುದಕ್ಕೆ ಲೇಖಕರು ಸ್ತುತ್ಯರ್ಹರು.

—ಬಿ. ಕೆ. ಗುರುರಾಜರಾವ್

ಸಂಪಾದಕೀಯ

ಪ್ರಬುದ್ಧ ಕರ್ಣಾಟಕದ ಚಿನ್ನದ ಹಬ್ಬದ ಸವಿನೆನಪಾಗಿ ವಿಜ್ಞಾನ ಕರ್ಣಾಟಕ ಜನ್ಮ ತಳೆದು ಎರಡು ವರ್ಷಗಳು ತುಂಬುವ ಮೊದಲೇ ಮಾನವಿಕ ಕರ್ಣಾಟಕದ ಉದಯವಾಗುತ್ತಿದೆ. ಮುಖ್ಯವಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಪ್ರಸಾರಕ್ಕಾಗೆಂದು ಪ್ರಾರಂಭವಾದ ಪ್ರಬುದ್ಧ ಕರ್ಣಾಟಕದಲ್ಲಿ ಸಾಹಿತ್ಯ, ವಿಜ್ಞಾನ, ಸಮಾಜಶಾಸ್ತ್ರ, ಲಲಿತಕಲೆಗಳಿಗೆ ಸಂಬಂಧಿಸಿದ ಹಲವು ಉತ್ತಮ ಲೇಖನಗಳು ಪ್ರಕಟವಾಗಿವೆ. ಅದು ಅನೇಕ ಹಿರಿಕಿರಿಯ ಸಾಹಿತಿಗಳಿಗೂ ವಿದ್ವಾಂಸರಿಗೂ ವಿದ್ಯಾರ್ಥಿಗಳಿಗೂ ಅವಶ್ಯ ಮಾಧ್ಯಮವಾಗಿದೆ. ಇಂದು ಕನ್ನಡದಲ್ಲಿ ಖ್ಯಾತನಾಮರಾಗಿರುವ ಅನೇಕ ಲೇಖಕರೂ ವಿದ್ವಾಂಸರೂ ಪ್ರಬುದ್ಧ ಕರ್ಣಾಟಕದ ಮೂಲಕ ತಮ್ಮ ವಿಚಾರಶಕ್ತಿಯನ್ನು ರೂಪಿಸಿಕೊಂಡಿದ್ದಾರೆ, ಲೇಖನಿಯನ್ನು ಪಳಗಿಸಿಕೊಂಡಿದ್ದಾರೆ. ಇದೊಂದು ಹೆಮ್ಮೆಯ ಸಂಗತಿ.

ಕನ್ನಡದಲ್ಲಿ ಆಲೋಚಿಸುವುದೂ ಬರೆಯುವುದೂ ಹೆಚ್ಚಾದಂತೆಲ್ಲ ಪ್ರಬುದ್ಧ ಕರ್ಣಾಟಕ ಒಂದೇ ಸಾಲದಾಗಿ, ವಿಜ್ಞಾನ ಲೇಖನಗಳಿಗಾಗಿ ವಿಶೇಷಾಂಕಗಳನ್ನು ಹೊರಡಿಸಲಾಗುತ್ತಿತ್ತು. ಪ್ರಬುದ್ಧ ಕರ್ಣಾಟಕದ ಚಿನ್ನದ ಹಬ್ಬದ ಸಂದರ್ಭದಲ್ಲಿ ವಿಜ್ಞಾನಕ್ಕೇ ಮೀಸಲಾದ ಪ್ರತ್ಯೇಕ ಪತ್ರಿಕೆಯೊಂದನ್ನು ಹೊರಡಿಸಬೇಕೆಂದು ತೀರ್ಮಾನವಾಯಿತು. ಅಂತೆಯೇ ೧೯೬೯ರ ಜನವರಿಯಲ್ಲಿ ವಿಜ್ಞಾನ ಕರ್ಣಾಟಕದ ಉದಯವಾಯಿತು. ಅರ್ಧವಾರ್ಷಿಕವಾಗಿ ಆರಂಭವಾದ ಈ ಪತ್ರಿಕೆ ತ್ರೈಮಾಸಿಕವಾಗಿ ಪರಿವರ್ತನೆಹೊಂದಿ ವಿಜ್ಞಾನಕ್ಷೇತ್ರದಲ್ಲಿ ಜ್ಞಾನಪ್ರಸಾರ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ.

ವಿಜ್ಞಾನದಂತೆಯೇ ಮಾನವಿಕ ವಿಷಯಗಳಿಗೂ ಸ್ವತಂತ್ರವಾದ ಪತ್ರಿಕೆಯೊಂದು ಇರಬೇಕೆಂಬ ಆಶಯ ಕೂಡ ಹಳೆಯದೇ. ವಿಜ್ಞಾನ ಕರ್ಣಾಟಕದ ಪ್ರಥಮ ಸಂಚಿಕೆಯ ಬಿಡುಗಡೆಯ ಸಮಯದಲ್ಲಿ ಆಗಿನ ಪ್ರಧಾನ ಸಂಪಾದಕರಾದ ಕುಲಪತಿ ಪ್ರೊ. ದೇ. ಜವರೇಗೌಡ ಅವರು ‘ನಾಂದಿ’ಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತ, ‘ಸಮಾಜಶಾಸ್ತ್ರಗಳಿಗೆ ಮುಡಿಪಾದ ಮತ್ತೊಂದು ತ್ರೈಮಾಸಿಕ ಮಾನವಿಕ ಕರ್ಣಾಟಕವೆಂಬ ಹೆಸರಿನಲ್ಲಿ ಆದಷ್ಟು ಬೇಗನೆ ರೂಹುಗೊಳ್ಳಲೆಂದು ಕನ್ನಡದ ಕುಲದೈವಕ್ಕೆ, ವಿಶ್ವವಿದ್ಯಾನಿಲಯದ ಭಗವತಿಗೆ ಕೈಮುಗಿದು’ ಮಾಡಿಕೊಂಡ ಪ್ರಾರ್ಥನೆ ಈಗ ಫಲಿಸಿದೆ. ಇಂಥ ಹಿರಿಯರ, ಸಹೃದಯರ, ವಿದ್ಯೈಕ ಪಕ್ಷಪಾತಿಗಳ ಹರಕೆ, ಹಾರೈಕೆ, ಆರೈಕೆಗಳಿಂದ ಈ ಪತ್ರಿಕೆ ಇಷ್ಟು ಬೇಗ ಮೈತಳೆಯಲು ಸಾಧ್ಯವಾಯಿತು.

ಮಾನವಿಕ ಕರ್ಣಾಟಕಕ್ಕೆ ಮೀಸಲಾದ ವಿಷಯಗಳ ಬಗ್ಗೆ ಕೆಲವು ಮಾತುಗಳನ್ನು ಇಲ್ಲಿ ಬರೆಯುವುದು ಅಪ್ರಕೃತವಾಗಲಾರದು. ಈ ಪತ್ರಿಕೆಯ ವ್ಯಾಪ್ತಿ ವಿಶಾಲ ವಾದದ್ದು. ವಿಜ್ಞಾನ ಸಾಹಿತ್ಯಗಳನ್ನುಳಿದು ಎಲ್ಲ ವಿಷಯಗಳೂ ಇದರ ಸೀಮೆಗೆ ಒಳಪಟ್ಟಿರುತ್ತವೆ. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತತ್ತ್ವಶಾಸ್ತ್ರ, ತರ್ಕಶಾಸ್ತ್ರ, ಮನಶ್ಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರ, ಭಾರತಶಾಸ್ತ್ರ, ಇತಿಹಾಸ, ಪುರಾತತ್ತ್ವ, ಪತ್ರಿಕೋದ್ಯಮ, ಭೂಗೋಳಶಾಸ್ತ್ರ, ನ್ಯಾಯಶಾಸ್ತ್ರ, ಅಪರಾಧಶಾಸ್ತ್ರ, ಗ್ರಂಥಾಲಯಶಾಸ್ತ್ರ, ಶಿಕ್ಷಣಶಾಸ್ತ್ರ, ವಾಣಿಜ್ಯ, ಸಂಗೀತ, ನೃತ್ಯ, ಚಿತ್ರಕಲೆ, ವಾಸ್ತುಶಿಲ್ಪ ಮುಂತಾದ ಕ್ಷೇತ್ರಗಳಲ್ಲಿ ಉಪಯುಕ್ತವೂ ವಿಚಾರಪೂರ್ಣವೂ ಸಂಶೋಧನಾತ್ಮಕವೂ ಆದ ಲೇಖನ ವಿಮರ್ಶೆ ಪ್ರಬಂಧಗಳೇ ಮುಂತಾದವನ್ನು ಪ್ರಕಟಿಸುವುದು ಪತ್ರಿಕೆಯ ಉದ್ದೇಶ. ಎಂಥ ವಿಷಯವನ್ನೇ ಆದರೂ ಕನ್ನಡದಲ್ಲಿ ಸಮರ್ಥವಾದ ರೀತಿಯಲ್ಲಿ ಹೇಳಬಹುದು ಎಂದು ವಾದಿಸಬೇಕಾದ ಕಾಲವೀಗ ಮುಗಿದಿದೆ. ಈ ಕಾರ್ಯದಲ್ಲಿ ಪ್ರವೃತ್ತರಾಗಿರುವ ಎಲ್ಲರಿಗೂ ಸೂಕ್ತ ಮಾಧ್ಯಮವಾಗಿ ವರ್ತಿಸುವಂಥ ಪತ್ರಿಕೆಯ ಆವಶ್ಯಕತೆಯನ್ನು ಮಾನವಿಕ ಕರ್ಣಾಟಕ ಪೂರೈಸಲು ಶ್ರಮಿಸುತ್ತದೆ. ಇದನ್ನು ಬೆಳಸಿ ಸಾರ್ಥಕಗೊಳಿಸುವುದು ಕನ್ನಡಕುಲದ ಎಲ್ಲ ವಿದ್ವಾಂಸರ, ಜಿಜ್ಞಾಸುಗಳ, ಭಾಷಾಪ್ರೇಮಿಗಳ ಹೊಣೆ.

WO 7889—MUPM—2000+25—31-10-70

ಮಾನವಿಕ ಕರ್ಣಾಟಕ

ವಾರ್ಷಿಕ ಚಂದಾ

(ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	೪ ರೂ.
ಸಾಮಾನ್ಯ ಚಂದಾದಾರರಿಗೆ	೬ ರೂ.
ಸಂಸ್ಥೆಗಳಿಗೆ	೮ ರೂ.
ಆಜೀವ ಸದಸ್ಯತ್ವ	೧೦೦ ರೂ.

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ
ಮೈಸೂರು–೬